


ಕರ್ನಾಟಕ ಸರ್ಕಾರ

ನೆಂಪುಗಳ ರಂಗೋಲಿ

[ನಿಜ ಜೀವನ ಅನುಭವಗಳು]

ಎಂ.ಜಿ. ಕಾವೇರಮ್ಮ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಮಡಿಕೇರಿ

ನೆಂಪುಗಳ ರಂಗೋಲಿ

(ನಿಜ ಜೀವನ ಅನುಭವಗಳು)

ಎಂ.ಜಿ.ಕಾವೇರಮ್ಮ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಮಡಿಕೇರಿ, ಕೊಡಗು ಜಿಲ್ಲೆ – 571 201

ನೆಂಪುಗಳ ರಂಗೋಲಿ

'NEMPUGALA RANGOLI' a collection of Real stories of life in Arebhase language written by M.G. Kaveramma, 'Nisarga, Mavaji, Sulia, D.K., Published by 'Karnataka Arebhase Samskrithi Mathu Sahitya Academy.

ಪ್ರಕಟಣೆ : **2016**

ಪ್ರತಿಗಳು : **500**

ಬೆಲೆ : ರೂ. 90/- Price : Rs. 90/-

ಪುಟಗಳು : viii + 120

ಸಲಹ ಸಮಿತಿ :

ಶ್ರೀ ಕೊಲ್ಯದ ಗಿರೀಶ್
ಡಾ. ಪೂವಪ್ಪ ಕಣಿಯೂರು
ಡಾ. ಕೋರನ ಸರಸ್ವತಿ ಪ್ರಕಾಶ್
ಶ್ರೀ ಮೋಹನ ಸೋನ
ಶ್ರೀಮತಿ ಸಂಗೀತ ರವಿರಾಜ್

ಪ್ರಕಾಶಕರು : **ರಿಜಿಸ್ಟ್ರಾರ್**
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

ಪುಸ್ತಕ ದೊರೆಯುವ ಸ್ಥಳ :

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ,
ಕಾಫಿ ಕೃಪ ಬಿಲ್ಡಿಂಗ್, ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.
ದೂ. : 08272–223055

ಮುದ್ರಣ :
ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್,
ಮಡಿಕೇರಿ, ಕೊಡಗು
Ph : 08272-224919, 9448135592

ಅಧ್ಯಕ್ಷರ ಮಾತ್

ಅರೆಬಾಸೆಲಿ ಬರೆಯ

ಕೊಲ್ಯದ ಗಿರೀಶ್
ಅಧ್ಯಕ್ಷರ್

ನನ್ನೆರ್ಡ್ ಮಾತ್‌ಗ

ಮೂವತ್ತೇಳ್ ನೆಂಪುಗಳ ಚುಕ್ಕೆ ಇಸಿ ಈ ನನ್ನ ನೆಂಪುಗಳ ರಂಗೋಲಿನ ಮುಗಿಸ್ಯಳೆ. ಈ ನೆಂಪುಗಳೇ ಹೀಂಗೆ. ಒಂದರ ಹಿಂದೆ ಒಂದ್ ಬಂದ್‌ಕಂಡ್ ಇದ್ದದೆ. ಸಮುದ್ರದ ತೆರೆಗಳ ಹಾಂಗೆ. ಅದಕ್ಕೆ ಕಡೆ ಉಟ್ಟೋ? ಆದರ್‌ಂದ ನಾ ನನ್ನ ಈ ನೆಂಪುಗಳ ರಂಗೋಲಿನ ಬಾಳ ಎಚ್ಚರ್ಕೆಂದ ನೆಂಪುಮಾಡಿ, ಮಾಡಿ ಬರ್ದಳೆ. ಓದೋವ್ಕೆ ಇದ್ ಹಿಡ್ಸರೆ ಅದೇ ನಂಗೆ ಉಡ್ಗೊರೆ. 2004ರ್ಲಿ ನಾ ಇದರ ಕನ್ನಡಲಿ ಬರ್ದೆ. ಕಳ್ದ ವೊರ್ಸ ಇದರ ನಾ ಶ್ರೀಮತಿ ಸಂಗೀತ ರವಿರಾಜ್‌ಯವ್ಕೆ ತೋರ್ಸಿದೆ. ಆಗ ಅವು ಇದರ ಅರೆಭಾಷೆಲಿ ಬರ್‍ಯೆನೀಂತ ಹೇಳ್ದೊ. ಅವರ ಪ್ರೇರಣೆಂದ ನಾ ಇದರ ಅರೆಭಾಷೆಲಿ ಬರ್‍ಯಕೆ ಸುರು ಮಾಡ್ದೆ. ಸುರುಗೆ ಅವ್ಕೆ ನಾ ನನ್ನ ಕೃತಜ್ಞತೆನ ಅರ್ಪಿಸಿನೆ. ಇದರ D.T.P ಮಾಡ್ಸಿಕೆ ವಿನೂ ಎಂಟರ್‌ಪ್ರೈಸ್‌ಗೆ ಕಳ್ಸಿದೆ. ಅದರ ಮಾಲಿಕರ್ ವಿನೋದಿನಿರ್‍ಯೆ ಮತ್ತೆ ನಾಗೇಶರ್‍ಯೆಗ ಇದರ ಓದಿ ಬಾಳ ಲಾಯ್ಕುಟ್ಟು ಅಚ್ಚ ಅರೆಭಾಷೆಲಿ ಬರ್ದಳೆರಿ. ಇದರ ಓದಿಕಾಕನ ನನ್ನ ಬಾಲ್ಯದ ಘಟನೆಗ ನೆನಪಾದೇಂತ ನಾಗೇಶರ್‍ಯೆಗ ಹೇಳ್ದೊ. ಅವ್ಕೆ ನಾ ನನ್ನ ಕೃತಜ್ಞತೆನ ಅರ್ಪಿಸಿದೆ.

ಇದಕ್ಕೆ ಮುನ್ನುಡಿ ಬರ್‍ಯಕೆ ಶ್ರೀಮತಿ ಲೀಲಾ ದಾಮೋದರ ಕುಂದಲ್ಪಾಡಿ ಕೊಟ್ಟೆ. ಅವು ಕವನ ಸಂಕಲನ, ಕಥಾಸಂಕಲನ, ವಿದೇಶ ಪ್ರವಾಸ ಕಥನಗಳ ಬರ್ದ್ ಹೆಸ್ರ್ ಪಡ್ದ ಸಾಹಿತಿಗ. ಅದಲ್ಲದೆ ಅಧ್ಯಾಪಕಿ ಆಗಿದ್ದೊವು. ಅವು ಕೂಡಾ ಇದರ ಓದಿ ಮೆಚ್ಚಿಗೆನ ಮಾತ್‌ನ ಹೇಳ್ದೊ. ನೆಂಪುಗಳ ಚುಕ್ಕೆಗಳ ಒಂದೊಂದಾಗಿ ಬರ್ದದಕ್ಕೆ ಕುಸಿ ಪಟ್ಟೊ. ಹಾಂಗೆ ಪೊರ್ಲುನ ಮುನ್ನುಡಿನ ಬರ್ದ್ ಕೊಟ್ಟೊ. ನೆಂಪುಗಳ ರಂಗೋಲಿನ ಸಮಗ್ರ ಚಿತ್ರಗಳ ಸಂಕ್ಷಿಪ್ತ ರೂಪಲಿ, ವಿಮರ್ಶಾತ್ಮಕವಾಗಿ ಬರ್ದ ಅವರ ಮುನ್ನುಡಿನ ಓದಿಕಾಕನನೇ ನಂಗೆ ಬಾಳ ಕುಸಿ ಆತ್. ಅವ್ಕೆ ಕೃತಜ್ಞತೆನ ಈ ಮೂಲಕ ಒಪ್ಪಿಸಿನೆ. ಇದರ ಓದಿಕೆ ನಾ ಡಾ.ಪೂವಪ್ಪ ಕಣಿಯೂರು ಅವ್ಕೆ ಕೊಟ್ಟೆ ಇದರ ಓದಿ ನನ್ನ ಪ್ರೋತ್ಸಾಹಿಸಿದಕ್ಕೆ ಅವ್ಕನೂ ನನ್ನ ಮನದಾಳದ ಕೃತಜ್ಞತೆಗ. ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿನ ಅಧ್ಯಕ್ಷರಾದ ಕೊಲ್ಯದ ಗಿರೀಶ್ ಮತ್ತೆ ಸದಸ್ಯರಿಗೂ ಸಂಪಾದಕ ಮಂಡಳಿಯವ್ಕೂ, ಪ್ರಕಾಶರಿಗೆ ನಾ ಆಭಾರಿಯೊಗೊಳೆ. ಅವ್ಕೆಲ್ಲಾ ನನ್ನ ಕೃತಜ್ಞತೆಗ.

ಅರೆಭಾಷೆಲಿ ಬೆಳ್ಯಲ: ಉಳ್ಯಲಿ.

ದಿನಾಂಕ : 10\9\2016

ಸ್ಥಳ : ಸುಳ್ಯ

ಎಂ.ಜಿ. ಕಾವೇರಮ್ಮ

ಮುನ್ನುಡಿ

ಶ್ರೀಮತಿ ಎಂ.ಜಿ. ಕಾವೇರಮ್ಮನವು ಅರೆಭಾಷೆಲಿ ಬರ್ದ "ನೆಂಪುಗಳ ರಂಗೋಲಿ"ಗೆ ಮುನ್ನುಡಿ ಬರಿಯೊಕುತ ಕೇಳಿಕಂಬಕನ ಹಂಞ ಸಂಕೋಚ ಕಾಡಿರೂ ಅವರ ಸರಳತೆ. ಸಾಮಾಜಿಕ ಕಳಕಳಿ, ಸಾಹಿತ್ಯ ಪ್ರೀತಿ ಹಾಂಗೂ ಅವು ನನ್ನ ಮೇಲೆ ಇಸಿದ ಪ್ರೀತಿ ವಿಶ್ವಾಸಗ ನನ್ನ ಮುನ್ನುಡಿ ಬರಿಯಕೆ ಪ್ರೇರೇಪಿಸಿದೊ. ಕುತೂಹಲಂದ ಸುರುಂದ ಕಡೆವರೆಗೂ ಮೊಗ್ಚಿ ಹಾಕಿದೆ. ಪ್ರತಿ ಆಧ್ಯಾಯನೂ ರಂಗೋಲಿನ ಒಂದೊಂದು ಚುಕ್ಕಿಗತೇಳಿ ಪರಿಭಾವಿಸಿಕಂಡ್ ಪೊರ್ಲುನರಂಗೋಲಿ ಬುಡ್ಸಿದಾಂಗೆ ಬಾಳ್‌ನ ನೆನ್ಪುಗಳ ಕಲಾತ್ಮಕ ಆಗಿ ಬುಡ್ಸಿ ಇಸಿಯೊಳೊ. ವ್ಯವಸ್ಥಿತ ಆಗಿ ಅಧ್ಯಾಯಗಳ ವಿಂಗಡಿಸಿದ, ಚಿತ್ತು ಇಲ್ಲದ, ತಪ್ಪು ಇಲ್ಲದ ಲಾಯ್ಕನ ಕೈ ಬರೊಣ್ಕೆನ 'ಹಸ್ತ ಪ್ರತಿ' ನೋಡ್ಕನೇ ಗಮನ ಸೆಳ್ತ್. ಓದಿಕಂಡ್ ಹೋದಾಂಗೆ ಅರ್ಧ ಶತಮಾನಕ್ಕೂ ಹಿಂದೆನ ಸಾಂಸ್ಕೃತಿಕ ಲೋಕ ಒಂದು ಕಂಡ್ ಬಂದದೆ.

ಸಾವ್ಕಾರ ಸೂಂತೋಡು ಅಪ್ಪಣ್ಣ ಗೌಡ್ರ ಸಾಕಷ್ಟ್ ಅನುಕೂಲಸ್ತ ಕುಟುಂಬದ ಮಕ್ಕ, ಅವರ ಸಾಂಕಣೆ, ವಿದ್ಯಾಭ್ಯಾಸ, ನಂಟ್ರ್‌ಗ, ಬಂಧು ಬಳಗಗ, ನೆರೆಕರೆ– ಈ ವಿವರಗಳ್‌ಂದ ಕೂಡ್ದ 'ನೆಂಪುಗಳ ರಂಗೋಲಿ' ಅಂದ್‌ನ ಕಾಲದ ಜನಂಗಳ ಜೀವನ, ಹಬ್ಬ ಹರಿದಿನಗ, ನಾಟಕ ಯಕ್ಷಗಾನ, ಕೃಷಿ ಯಾಪಾರ– ಇಂತ ಸಂಗ್‌ತಿಗಂಳ್ದ ಕೂಡಿ ಓದೊವುಕೆ ಅಂದ್‌ನ ಕಾಲದ ಸಮಾಜದ ಒಂದು ಸ್ಥೂಲ ಚಿತ್ರಣನ ಒದ್‌ಗಿಸಿದೆ. ಲೇಖಕಿ ಅವು ಸಣ್ಣದಿರ್ಕನ ಕಂಡದರ, ಮಗು ಮನ್ಸ್ ಅರ್ಥ ಮಾಡಿಕಂಡದರ ಯಾದೇ ಬದಲಾವಣೆ ಇಲ್ಲದೆ ಆಪ್ತ ರೀತಿಲಿ, ನಿರ್ಲಿಪ್ತ ಆಗಿ ನಮೂದಿಸಿಯೊಳೊ. ಅವು ಕೊಟ್ಟ ಸೂಕ್ಷ್ಮ ವಿವರಗ, ಅವರ ನೆನ್ಪುನ ಶಕ್ತಿ ಅಶ್ಚರ್ಯ ಹುಟ್ಟಿಸಿದೆ.

ಸುರೂನ ಚುಕ್ಕಿಲೇ ತಾನ್ ಕತೆ ಓದಿಕೆ ಕಲ್ತ ಸಂದರ್ಭನ ಬಾರೀ ಸ್ವಾರಸ್ಯಕರ ರೀತಿಲಿ ಹೇಳ್ಯೊಳೊ. ಅವರ ಅಕ್ಕ 'ಅಡವಿಯ ಹುಡುಗಿ' ಕತೆನ ಹೇಳಿ ಅರ್ಧಕ್ಕೆ ನಿಲ್ಸಿದೊಗಡ. ಆಗ ತುಂಬಾ ಬೇಜಾರಾಗಿ ಈ ಪುಟ್ಟ ಗೂಡೆ ಹಠಬಿದ್ದ್ ಓದಿಕೆ ಕಲ್ತದೆ. ಪತ್ತೇದಾರಿ ಕತೆಗಂಳ್ದ ಸುರು ಆದ ಓದಟ ರಾಮಾಯಣ, ಮಹಾಭಾರತ ಅಲ್ಲದೆ ಶಿವರಾಮ ಕಾರಂತರ, ಕುವೆಂಪು ಅವು ಬೃಹತ್ಕಾರದಂಬರಿಗಳಿಗೆ ಮುಟ್ಟ ವಿಸ್ತರಿಸಿಕಂಡದ್ ಅವರ ವ್ಯಕ್ತಿತ್ವ ಬೆಳ್ದ ರೀತಿನ ಸೂಚಿಸಿದೆ.

ಮೂರು ಜನ ಗಂಡ್ ಮಕ್ಕಳ ಕಳ್ಕಂಡ್ ಆಮೇಲೆ ಹುಟ್ಟಿದ ಕಾವೇರಮ್ಮನವ್‌ಕೆ ಕೂಸು ಆಗಿರ್ಕನ ಸಿಕ್ಕಕಾಗಿದ್ದ ಪ್ರೀತಿ, ಸಾಂಕಣೆ ಸಿಕ್ಕಿತ್‌ಲೆತೇಳ್ದು ಆಶ್ಚರ್ಯ ಹುಟ್ಟಿಸಿದೆ. ಮೂರು ಜನಗಂಡ್ ಮಕ್ಕ ತೀರಿ ಹೋದಂರ್ದಾಂಗಿ ಈ ಕೂಸುನೂ ಒಲೀಯಕಿಲಿತೇಳ್ವ ನಿರಾಸೆನ ಭಾವನೆ ಅವ್ವನ ಕಾಡಿರೊಕು. ಕೂಸುನ ಹುಕ್ಕವ ಬಂದನಾರ್ ಕಸಾಯ ಮಾಡಿ

ಕುಡ್ಸಿ ಕೂಸುನ ಬೊದ್ಕಿಸಿದ್, ದೊಡ್ಡಕ್ಕನೇ ಅವ್ವ ಆಗಿ ಕೂಸುನ ಸಾಂಕಿದ್, ಸುಮಾರ್ ವೊರ್ಸ ಮುಟ್ಟ ಅವ್ವ ಯಾರ್‌ತೇ ಗೊತ್ತಿಲ್ಲದೆ ಇದ್ದದ್ ಮನ್ಸ್‌ನ ಕಲ್ಕುವ ಸಂಗತಿಗ.

ಕೃತಿನ ಆರಂಭಲೇ ಅಕ್ಕ, ಆಮೇಲೆ ಅಣ್ಣನ ಮೊದುವೆನ ವಿವರಗ ಬಂದವೆ. ಆಗನ ಕಾಲದ ಮೊದುವೆನ ವೈಭವನ ನೋಡೊ ಕೊರೆ ಕಾವೇರಮ್ಮನೊವು ಚಿತ್ರಿಸಿದ ಈ ಮೊದುವೆಗಳ ವಿವರಗಳ ಓದೊಕು. ಅಕ್ಕನ ಮೊದುವೆದ್ದ್ ಮಸುಕು ನೆನ್ಪು ಆದರೆ ಎರಡ್ನೆ ಕ್ಲಾಸ್‌ಲಿ ಓದ್‌ಕನ ನಡ್ದ ಅಣ್ಣನ ಮೊದುವೆನ ನೆನ್ಪು ಲೇಖಕಿನ ಮನ್ಸ್‌ಲಿ ಹಸ್‌ರ್ ಆಗಿ ಒಳ್ದುಟು. ಮೊದುವೆ ನಿಶ್ಚಯ ಆಗಿ ಜಾಲ್‌ನ ಬೊಡ್ಡ್ ಅರ್ದ್ ನೊಣ್ಣನೆ ಮಾಡಿ ಚಪ್ಪರ ಹಾಕುವೊಲ್ಲಿಂದ ಹಿಡ್ದ್ ಮೊರಿ ದಿಬ್ಬಣ ಬಂದ್ ಹೈದನ ಮನೆಲಿ ಪಚರ ಆಕನ ಮುಟ್ಟ ಬೇರೆ ಬೇರೆ ಕಾರ್ಯಕ್ರಮಗಳ, ಶಾಸ್ತ್ರಗಳ ಬಾರೀ ಲಾಯ್ಕ್‌ಲಿ ವಿವರ್ಸ್ಯೊಳೊ. ಆ ಮೂಲಕ ಆಗನ ಕಾಲದ ಗೌಡರ ಮೊದುವೆನ ಸಮೃದ್ಧ ನೋಟ ಒಂದರ ಒದ್ಗಿಸಿಕೊಟ್ಟೊಳೊ.

ಮೊದುವೆ ಒಂದೇ ಅಲ್ಲ ಕೆಡಾಸದ ಆಚರಣೆ, ಬಿಸು ಹಬ್ಬ, ನಾಗರ ಪಂಚಮಿ, ಅಷ್ಟಮಿ, ಚೌತಿ ಆಚರಣೆ, ಹೊಸ್ತೂಟ, ದೀಪಾವಳಿ, ಅಂಗಡಿ ಪೂಜೆ, ಮನೆ ತುಂಬುಸುದು, ಗುಳ್‌ಜ್ಯನ ಹರ್ಕೆ, ಹರ್ಸಾಯ– ಈ ಎಲ್ಲ ವಿವರಗ ಕ್ರಮಬದ್ಧ ಆಗಿ ಇದ್ದ್ ಇಂದ್ ಅದರ ಎಲ್ಲ ಆಚರ್ಸಿಕೆ ಗೊತ್ತಾಗದವುಕೆ ಈ ಪುಸ್ತಕ ಒಂದು ಕೈ ಪಿಡಿತಳೇ ಹೇಳಕ್. ಸಾಂಪ್ರಾದಾಯಕ ರೀತಿಲಿ ಕಣ್ಣ್ ಕಪ್ಪು ತಯಾರ್ ಮಾಡ್ದು, ಕಲ್ಲೊತ್ತುಗೆ ಮೊದ್ದು ಮಾಡ್ವ ರೀತಿ, ಮಾಂಬಳ ಮಾಡ್ವ ವಿಧಾನ, ಕೋಳಿನ ಹಜಿರು ಮಾಡ್ವಕ್ರಮ – ಹೀಂಗೆ ಪ್ರತಿ ಒಂದರ ವಿವರಣೆ ಕೂಡಾ ಬೆರಗುಗೊಳ್ಳುವಷ್ಟ್ ಪರಿಪೂರ್ಣ ಆಗಿ ಉಟ್ಟು.

ಅಂದ್‌ನ ಕೂಡು ಕುಟುಂಬ, ತಿಂಗಗಟ್ಲೆ ಒಳ್ಕಂಬ ನಂಟ್ರ್‌ಗ ಆಗನ 'ಹೊಕ್ಕು ಬಳಕೆ'ನ ನಿರೂಪಿಸಿರೆ ಊಟ ತಿಂಡಿನ ಗೌಜಿಯೇ ಬೇರೆ. ದಪ್ಪಕ್ಕೆ ಹೊಯ್ದ ದೋಸೆನ ಅಟ್ಟಿ, ಹೆಡೆಗೆ ತುಂಬಾ ತುಂಬುಸಿ ಇಸಿದ ಅಪ್ಪದಿಟ್ಟ್ ಮನೆವ್ಕು, ಬಂದ ನಂಟ್ರ್‌ಗೆ, ಯಾಗೊಳುನ ಕೆಲ್ಸದವ್ಕೆ ತಯಾರ್ ಅಗಿ ಇರ್ತಿತ್ತ್. ಗದ್ದೆಲಿ ನೆಟ್ಟಿಕಾಯಿ ಗೈಪು ಮಾಡ್ದೊದರ ಲೇಖಕಿ ಬಾಯ್‌ಲಿ ನೀರೂರುವಾಂಗೆ ಬರ್ದೊಳೊ. ದೊಡ್ಡದ್ ಸಣ್ಣದ್ ಎರ್ಡ್ ಮೊಣ್ಣುನ ಗುಂಬಗಳ ತಕಂಡ್ ಕಾಯಿ ಹೂ, ಬೆಣ್ಣೆ ಮುದ್ದೆನ್ನೂ ಬಾಡ್ಸಿದ ಬಾಳೆಲಿ ಮೊಡ್ಚಿ ಹಿಡ್ಕಂಡ್ ಒಗಿಯಕೆ ಬಟ್ಟೆನೂ ತಕಂಡ್ ಅವ್ವ ಮಕ್ಕ ನೆಟ್ಟಿಗದ್ದೆ ಕರೆಲಿ ಇರುವ ಚೋಡಿಗೆ ಒಗಿಯಕೆ ಹೋತಿದ್ದೊ. ನೆಟ್ಟಿಗದ್ದೆಲಿ ತೋಂಡಿದ ಒಲೆಲಿ ಕಿಚ್ಚಿಮೊಟ್ಟ್ ದೊಡ್ಡ ಗುಂಬಲಿ ಕಾಯಿ ಹೂ, ಬೆಣ್ಣೆ ಮುದ್ದೆ, ಎಳೆ ನೆಟ್ಟಿಕಾಯಿಗಳ ಹಾಕಿ, ಉಪ್ಪು, ಹಸಿಮೆಣ್ಸ್ ಸೇರ್ಸಿ, ಸಣ್ಣ ಗುಂಬನ ಅದರ ಮೇಲೆ ಮುಚ್ಚಿ ನೀರ್ ಹಾಕದೆ ಪಸೆಲೇ ಬೇಯ್ವ ಗೈಪುನ ಪರಿಮಳ ಮೂಕುಗೆ ಬಡ್ದ್ ಹಾಂಗೆ ಆದ್ದೆ.

ಅಪ್ಪ ದಿನಾ ಹಳ್ಳಲಿ ಮೀಯುದು, ಅವು ಮಾಡುವ ಪೂಜೆ ಪುರಸ್ಕಾರಗ, ಅಂಗಡಿ ವ್ಯಾಪಾರ; ಅವ್ವನ ದುಡಿಮೆ, ಅವರ ಖಜಾನೆ, ಚಿನ್ನ ತುಂಬಿಸಿ ಇಸುವ ಕರಡಿಗೆಗ,

ತಾಮ್ರದ ಸೇರ್‌ನ ತುಂಬಾ ಬೆಳ್ಳಿನ ನಾಣ್ಯಗ– ಅವ್ವದುಡ್ಡು ಗಳ್ಸಿದ ಸಂಪತ್ತುನ ವಿವರಗಳ ಎಲ್ಲ ಓದುದು ಒಂದು ಲಾಯ್ಕ್‌ನ ಅನುಭವ.

ಕೃತಿ ಉದ್ದಕ್ಕೂ ಲೇಖಕಿನ ಭಾವಲೋಕ ಅನಾವರಣ ಆಗುಟು. ಅವರ ಕುಟುಂಬ ಪ್ರೀತಿ, ಶಾಲಾ ಜೀವನ, ಪಾಠ ಕಲ್ಸಿದ ಗುರುಗಳ ಮೇಲೆ ಇರ್‍ವ ಗೌರವ, ಜೋಸ್ತಿಗಳ ಮೇಲೆ ಇರುವ ಪ್ರೀತಿ, ಕಾಲೇಜು ಜೀವನ, ಪ್ರವಾಸದ ಅನುಭವ, ವಿವಾಹ ಪ್ರಕರಣ ಎಷ್ಟೋ ನೆನ್ಪುಗಳ ನಿಖರ ಆಗಿ ದಾಕಲ್ಸಿಯೊಳೊ. ಹುಟ್ಟುಕನ ಅವ್ವ ತೋರ್ಸಿದ ಅವಜ್ಞೆ, ಹೈದಂಗಳಿಗೆ ಕೊಡ್ತಿದ್ದ ವಿಶೇಷ ಸೌಲಭ್ಯಗ, ಡಾಕ್ಟ್ರ ಆಕುತೇಳ್ವ ಹಂಬಲ ಕನ್ಸ್ ಆಗಿ ಒಳ್ದ ವಿಷಾದ ಎಳ್ತ್ ಮನ್ಸ್‌ನ ಘಾಸಿ ಮಾಡಿರೂ, ಇಂದ್‌ನ ಈ ಪ್ರಬುದ್ಧ ವಯಸ್ಸ್‌ಲಿ ಅದರ ಎಲ್ಲ ನಿರ್ಲಿಪ್ತ ಆಗಿ ನೋಡುವ ಸ್ಥಿತಿಪ್ರಜ್ಞೆ ಸಾತ್ವಿಕ, ಸುಸಂಸ್ಕೃತ ಮನಸ್ಥಿತಿನ ಕಾವೇರಮ್ಮನವುಕೆ ಸಿದ್ಧಿಸಿಟು.

ಕತೆ ಓದಿಕೆ ಕಲ್ತ ಸಂಭ್ರಮಂದ ಸುರು ಆದ ನೆನ್ಪುನ ಸರಮಾಲೆ ಅಪ್ಪ ಅವ್ವನ ಸಾವುನವರೆಗೆ ಮುಂದುವರ್ದ್ ತಟ್ಟನೆ ನಿತ್ತ್‌ಬುಟ್ಟದೆ. ಇದ್ ಒಂದು ಅನಿರೀಕ್ಷಿತ ಮುಕ್ತಾಯ. ಮತ್ತೂ ಮುಂದುವರ್ಸ‌ಕಾಗಿತ್ತ್‌ತ ಅನ್ಸಿದೆ. ಆದ್ರೆ ಇದ್ ಪರಿಪೂರ್ಣ ಜೀವನ ಚರಿತ್ರೆ ಅಲ್ಲ. ಇದೊಂದು ನೆನ್ಪುಗಳ ದಾಖಲೆ. ಹಾಂಗಾಗಿ ಜೀವನ ಚರಿತ್ರೆನ ಸಮಗ್ರತೆನ ಇಲ್ಲ ನಿರೀಕ್ಷೆ ಮಾಡಿಕೆ ಆದ್‌ಲೆ.

ಸುಂದರ ಅರೆಭಾಷೆಲಿ ಬರ್ದ ಈ ಕೃತಿನ ಸೊಗಸುನ ಓದಿದ್ದೇ ಅನುಭವಿಸೊಕು. ಸಮುದ್ರ ಸ್ನಾನಕ್ಕೆ ಅಣ್ಣ ಅತ್ತಿಗೆ ಅವ್ವ ಹೊರ್‍ಡ್‌ಕನ ಆಗ ಎಂಟ್ ವರ್ಷದ ಈ ಲೇಖಕಿ ಕೂಡಾ ಹೊರ್‍ಟ್ ಕಾಸರಗೋಡು ಮಂಗಳೂರು ಸುತ್ತಿದ ಪ್ರಸಂಗ ನೆಗೆ ಉಕ್ಕಿಸಿದೆ. ಸಣ್ಣಕ್ಕಂಗೆ ಅಣ್ಣನವರೊಟ್ಟಿಗೆ ಹೋಕೆ ಆಸೆ ಇತ್ತ್. ಆದ್ರೆ ಅದರ ಅವು ಕರ್ಕಂಡತ್‌ಲೆ. ಆ ಕೋಪಕ್ಕೆ ತಂಗೆನ ಬಸ್ಸಿಗೆ ದೂಡಿ ಬುಟ್ಟತ್. ಅವ್ವ ನೀ ಎಲ್ಲಿಗೆತೇಳೀ ಜೋರ್ ಮಾಡ್ದೊ. ಮನೆಗೆ ಹೋದರೆ ಅಕ್ಕ ಬೊಯ್ದದೆ, ಇಲ್ಲಿ ಅವ್ವ ಬೊಯ್ದವೆ. ಗೂಡೆ ಬಿಕ್ಡ್ಸಿ ಬಿಕ್ಡ್ಸಿ ಮರ್ಡಿಕೆ ಸುರು ಮಾಡ್ತ್. ಅಷ್ಟ್ ಮಾತರ ಅಲ್ಲ. ಗೂಡೆ ಬರೀ ಒಳ ಅಂಗಿಲೇ ಇತ್ತ್. ಆ ಚಿಮ್ಮಿಸ್‌ಲೇ ಕಾಸರಗೋಡು ಮುಟ್ಟ ಹೋಗಿ ಹೊಸ ಲಂಗ ರವಕೆ ಹೊಲಿಯಕೆ ಹಾಕಿ ಮತ್ತೆ ಅದರ ಹಾಕಂಡ್ ಊರ್ ಸುತ್ತಿದ ಪ್ರಸಂಗ ಮೆಲುಕು ಹಾಕುವಾಂಗೆ ಉಟ್ಟು. ಇದ್ ಮಾತರ ಅಲ್ಲ ಮನೆಲಿ ಹೇಳದೆ ಜೋಸ್ತಿ ಗೂಡೆನೊಟ್ಟಿಗೆ ತೋಟಕ್ಕೆ ಪಿಕ್‌ನಿಕ್ ಹೋದ್ದ್, ಅಪ್ಪ ಬಸ್ ಸ್ಟ್ಯಾಂಡ್‌ಲಿ ಸಾಯಕೆ ಬಿದ್ದವನ ಉಪಚಾರ ಮಾಡಿ ಬೊದ್ಕಿಸಿದ್, ಮನೆ ಕೊಟಗೆಲಿ ಗಂಡ ಹೆಣ್ಣ್‌ನ ಜಗಳ ಬಗೆಹರ್ಸಿದ್, ತಮ್ಮ ಒಬ್ಬನೇ ಬೊಂಬಾಯಿಗೆ ಹೋದ್ದ್ ಹೀಂಗೆ ಹಲವಾರ್ ಮಾನವೀಯ ಮಿಡಿತದ ಸಂಗ್‌ತಿಗಳ ಲೇಖಕಿ ಅಚ್ಚುಕಟ್ಟಾಗಿ ನಿರೂಪಿಸಿಯೊಳೊ. ಹಾಂಗಾಂಗಿ ಈ ಕೃತಿ ಸೊಗಸಾಗಿ ಓದ್ಸಿಕಂಡ್ ಹೋದ್ದೆ. ಸೋದರ ಮಾಂವನ ಮನೆವು ತುಳು ಮಾತಾಡೊವು ಆದ್ದಂರ್ದಳೋ ಏನೋ ಧಾರಾಳ ತುಳು

ಶಬ್ದಗ ಸೇರಿ ಕಂಡೊಳೊ. ಅದರೆ ಆ ಪದಗ ಸೆರ್ದ್ ಕಾಣ್ಸದೆ ಅರೆಭಾಷೆನ ಲಯಕ್ಕೆ ಪೂರಕ ಆಗಿಯೇ ಒಳೊ. ಅರೆಭಾಷೆ ಅಕಾಡೆಮಿ ಸ್ಥಾಪನೆ ಆದ ಹೊಸ್ತುಲಿ ಕಾಲೇಜು ಸಮಾರಂಭಕೆ ಬಂದ ಅತಿಥಿಗ ಒಬ್ಬ ಅರೆಭಾಷೆಗೆ ಪ್ರತ್ಯೇಕ ಅಕಾಡೆಮಿ ಯಾಕೆಮತ ಹೇಳಿದ್ದೊ. ಆ ಬಗ್ಗೆ ಸ್ಪಷ್ಟ ತಿಳುವಳಿಕೆ ಇಲ್ಲದ ನಂಗೆ ಏನೂ ಹೇಳಿಕೆ ಆಗಿತ್ತ್‌ಲೆ. ಆದರೆ ಈಗ ಆ ಪ್ರಶ್ನೆಗೆ ಉತ್ತರ ಡಾ। ಕುಶಾಲಪ್ಪ ಗೌಡ್ರ 'ಮಾನಸ ಭಾರತ', ಕಾವೇರಮ್ಮನವರ 'ನೆಂಪುಗಳ ರಂಗೋಲಿ' ಹಾಂಗೂ ಕೆ.ವಿ.ದಾಮೋದರನವು ಅನುವಾದ ಮಾಡ್ದ ಡಾ। ಪ್ರಭಾಕರ ಶಿಶಿಲರ 'ಇರುದರನೆಲ್ಲ ಬುಟ್ಟ್' ಕೃತಿಗಂಳ್ದ ಸಿಕ್ಕಿಟು.

ಅರೆಭಾಷಿಕರ್ಗೆ ಅಷ್ಟೇ ಅಲ್ಲದೆ ಕನ್ನಡ ತಿಳ್ದ ಎಲ್ಲೊವ್ಕು ಓದಿಕೆ ಆವ ಈ ಕೃತಿ ಅರ್ಧ ಶತಮಾನಕ್ಕೂ ಹಿಂದೆನ ಸುಳ್ಯ ಪರಿಸರದ ಜನಜೀವನಕ್ಕೆ ಹಿಡ್ದಕನ್ನೆಡಿ ಕಾವೇರಮ್ಮನವರ ಈ ಗ್ರಂಥ ಅರೆಭಾಷಾ ಸಾಹಿತ್ಯಕ್ಕೆ ಒಂದು ಒಳ್ಳೆ ಕೊಡುಗೆ.

ಈಗಾಗಲೇ 'ಒಳ ಹರಿವು'ಂತೇಳುವ ಕವನ ಸಂಕಲನ ಸಾರಸ್ವತ ಲೋಕಕ್ಕೆ ಕೊಟ್ಟೊಳೊ. ಅವರ ಹಲವಾರ್ ಕನ್ನಡ ಅರೆಭಾಷೆ ಕವನ ಲೇಖನಗ ಆಗಾಗ ಪತ್ರಿಕೆಲಿ ಪ್ರಕಟ ಆಕಂಡ್ ಒಳೊ. ಎರ್ಡ್ ಅರೆಭಾಷೆ ಪುಸ್ತಕಗ ಪ್ರಕಟಣೆ ಹಂತಲಿ ಒಳೊ.

ಕಾವೇರಮ್ಮನವರ ಸಾಹಿತ್ಯ ಸೇವೆ ಹೀಂಗೇ ಮುಂದುವರಿಯಲಿ ಅವರ ಲೇಖನಿಂದ ಇನ್ನಷ್ಟ್ ಕೃತಿಗ ಮೂಡಿ ಬರ್ಲಿಂತೇಳೀ ಮನದುಂಬಿ ಹಾರೈಸಿನೆ.

ದಿನಾಂಕ : 15–9–2016

ಸುಳ್ಯ **ಲೀಲಾ ದಾಮೋದರ**

ಒಳ ಪುಟಲಿ

ನೆಂಪುಗಳ ರಂಗೋಲಿ

ಚುಕ್ಕಿ–1

"ನಾನೂ ಕತೆಪುಸ್ತಕ ಓದಿಕೆ ಕಲ್ತೆ"

'ಬಾನೆ ಅಕ್ಕಾ, ನಂಗೆ ಕತೆಹೇಳ್ನೇ' – ನಾ ಸಣ್ಣಕ್ಕನ ಕೈಹಿಡ್ದ್ ಎಳ್ದ್ ಕರ್ೈತಿದ್ದೆ.

'ಏನ್ ನನ್ನ ಬಾನೆ ಹೋಗುನೇಂತ ಕರ್ದಿಯಾ? ನಾ ಏನ್ ನಿನ್ನ ಮೂಂಕುನ ಒಟ್ಟೆಂದ ಉದುರ್ೈಳೆನೋ'ಂತ ಅಕ್ಕ ನಂಗೆ ಬೊಯ್ಯತಿತ್ತ್. ಅದ್ ಬೊಯ್ದರೂ, ಹೊಡ್ದರೂ ನಂಗೆ ಕ್ಯಾರೇ ಇಲ್ಲೆ. ಏಕೇಂತೇಳ್ರೆ ನಂಗೆ ಅದ್ ಇತ್ಲರೆ ಆಗ್ತಿಲ್ಲೆ. ಅದ್ ಯಾಗೋಳು ಕಟ್ಟೆ ಮೇಲೆ ಕುದ್ದ್‌ಕಂಡ್ ಲೇಸ್, ಬನೀನ್ ಹೊಲಿತಿತ್ತ್. ಅದರ ಕೈಲಿ ಕೊಕ್ಕೆ ಸೂಜಿತಪ್ಪ್‌ತಿತ್ಲೆ. ಕೈ ಚೌಕ, ತಲೆಮೊಟ್ಟೆನ ಹೊದಿಕೆಗಳಿಗೆ ಭಾರೀ ಪೊರ್ಲು, ಪೊರ್ಲುನ ಚಿತ್ರ ಬುಡ್ಸಿ, ಬಣ್ಣದ ನೂಲ್‌ಂದ ಸೂಜಿಲಿ ಹೊಲ್ಯತಿತ್ತ್. ಹೊಲ್ಯೋದರ ಅರ್ಧಲಿ ಬುಟ್ಟ್ ಬಾಕೆ ಅದ್ಕೆ ಮನ್ಸ್ ಇರ್ತಿತ್ಲೆ. ನಾ ಎರ್ಡ್ ಕೈಯಿಂದ ಅದ್ಕೆ ಬೊಡ್ದ್‌ಕಂಡ್, ಕಾಲ್ನ ಕುಣ್ಸಿಕಂಡ್ ರಂಪ ಮಾಡ್ತಿದ್ದೆ, ಕತೆ ಹೇಳೂಂತ. ನನ್ನ ಉಪದ್ರ ತಡ್ಯಕಾಗದೆ ಅದ್‌ತೋರ್ ಬೆರ್ಳಿಗೆ ಸುತ್ತಿದ ನೂಲುನ ಬುಡ್ಸಿ ನೂಲುಂಡೆಗೆ ಸುತ್ತಿ, ಕೊಕ್ಕೆ ಸೂಜಿನ ಅದ್ಕೆ ತುರ್ಕಿಸಿ, ರಟ್ಟ್‌ನ ಪೆಟ್ಟಿಗೆಲಿ ಅದರ ಇಸಿ, ನಂಗೆ ಎರ್ಡ್ ಬೊಡ್ದ್, ಬಾಂತ ಬಾಮಿಕಟ್ಟೆ ಹಕ್ಕಲೆ ಇದ್ದ ತಿಂಟೆಗೆ ಎಳ್ಕಂಡ್ ಹೋಗ್ತಿತ್ತ್. ಅಲ್ಲಿ ಕುದ್ರಿಸಿಕಂಡ್ ಕತೆ ಹೇಳ್ತಿತ್ತ್. ಅದ್ ತುಂಬಾ ಕತೆ ಪುಸ್ತಕ ಓದ್ತಿತ್ತ್. ಕತೆ ಕೇಳುದೂಂತ ಹೇಳ್ರೆ ನಂಗೆ ಪ್ರಾಣ.

ನೆಂಪುಗಳ ರಂಗೋಲಿ

ನನ್ನ ಅಜ್ಜಪ್ಪ ನನ್ನನೂ, ನನ್ನ ತಮ್ಮಂದ್ರನೂ ಕುದ್ರಿಸಿಕಂಡ್ ದಿನಾ ಕತೆ ಹೇಳ್ತಿದ್ದೊ. ಕಾಗಕ್ಕ-ಗುಬ್ಬಕ್ಕನ ಕತೆ, ಬುರ್ಡ ಬುರ್ಡಿ ಕತೆ, ರಾಜಕುಮಾರನ ಕತೆ, ರಕ್ಕಸಿ ಕತೆಗ, ಒಗಟ್‌ಗ-ಇದೆಲ್ಲಾ ಅಜ್ಜಪ್ಪನ ಕತೆಗಳ ಭಂಡಾರಲಿ ತುಂಬಾ ಇದ್ದೊ. ಕೇಳಿ, ಕೇಳಿ ನಂಗೆ ಬಾಯಿಗೆ ಎಲ್ಲಾ ಬಾತಿತ್ತ್. ಕಡೆ ಕಡೆಗೆ ಅಜ್ಜಪ್ಪ ಯಾವ ಕತೆ ಹೇಳಿರುನೂ ಅದ್ ಬೇಡ, ಬೇರೆ ಹೇಳಿ ಅಜ್ಜಪ್ಪಾ'ಂತ ಹೇಳ್ತಿದ್ದೆ. ಅಕೆರಿಗೆ ಅಜ್ಜಪ್ಪಂಗೂ ಸಿಟ್ಟ್ ಬಾತಿತ್ತ್. 'ನಿಂಗೆ ಎಲ್ಲಾ ಕತೆನೂ ಗೊತ್ತುಟ್ಟು. ಬೇರೆ ಯಾವ್ದು ಹೇಳೋಕು' ಎಂದ್ ಹೇಳಿ ನಂಗೆ ಬೊಯ್ಯುತಿದ್ದೊ. ನನ್ನ ಅಕ್ಕಂಗೆ ದಿನಾ ಲೈಬ್ರರಿಂದ ಪುಸ್ತಕ ತಂದ್‌ಕೊಡಿಕೆ ನಾನೇ ಬೇಕು. ನಮ್ಮ ಮನೆ ಪಕ್ಕಲಿ ಪಂಚ್ಯಾತ್‌ನೋವು ನಡ್ಸ್‌ತಿದ್ದ ಗ್ರಂಥಾಲಯ ಇತ್ತ್. ನಾ ಅಲ್ಲಿ ಮುಖ ಪುಟಲಿ ಇದ್ದ ಚಿತ್ರಗಳ ನೋಡಿ, ಇದ್ ಲಾಯ್ಕ್ ಇರ್ದೂಂತ ಅದರನೇ ತಾತಿದ್ದೆ. ನಾ ಯಾವ ಪುಸ್ತಕ ತಂದರೂ, ಅಕ್ಕ ಅದರ ಪುಟಗಳ ಮೊಗ್ಚಿ ನೋಡಿ, 'ಇದ್ ನಾ ಓದ್ಯಳೆ' ಬೇರೆ ತಾಂತ ನನ್ನ ಕಳ್ಸ್‌ತಿತ್ತ್. ನಂಗೆ ಅಕ್ಕ ಓದಿದ ಪುಸ್ತಕ ಯಾವುದು ಓದದ ಪುಸ್ತಕ ಯಾವ್ದೂಂತ ಗೊತ್ತಾಗ್ತಿತ್ಲೆ.

ಲೈಬ್ರರಿಲಿ ಪುಸ್ತಕಗಳ ಹೆಸ್ರ್‌ನ ಬರ್ದ, ದೊಡ್ಡ ಪುಸ್ತಕ ಇತ್ತ್. ಅದರ ನಾವ್ಗೆ ಕೊಡ್ತಿದ್ದೊ. ಅದರ್ಲಿ ಯಾವ ಪುಸ್ತಕ ನಾವ್ಗೆ ಬೇಕೋ ಅದ್ರ ನಂಬ್ರನ ನೋಡಿ ಅವ್ಕೆ ಹೇಳೋಕು. ನಂಬ್ರ ಪ್ರಕಾರ ಜೋಡ್ಸಿ ಇಸಿದ ಪುಸ್ತಕಗಳ ಅವೇ ನೋಡಿ ತೆಗ್ದ್‌ಕೊಡ್ತಿದ್ದೊ. ನಮ್ಮ ಪುಸ್ತಕಗಳ ಮುಟ್ಟಿಕೆ ಬುಡ್‌ತಿತ್ಲೆ. ನಾವು ಹಿಂದೆ, ಮುಂದೆ ಮಾಡಿ, ಎಳ್ದ್ ಹಾಕಿ ಹಾಳ್ ಮಾಡುವೇಂತ. ಅಕೆರಿಗೆ ನಾ ಒಂದು ಉಪಾಯ ಮಾಡ್ದೆ. ನಂಬ್ರ ಒಂದರ್‌ಂದ ಪುಸ್ತಕ ತಾಕೆ ಸುರು ಮಾಡ್ದೆ. ದಿನಕ್ಕೆ ಎರ್ಡ್ ಪುಸ್ತಕ ಅಕ್ಕಂಗೆ ತಂದ್‌ಕೊಡ್ತಿದ್ದೆ. ಅದರ ಅದ್ ಒಂದೇ ದಿನಲಿ ಓದಿ ಮುಗ್ಸ್‌ತಿತ್ತ್. ಅದ್ಕೆ ಮಾಡಿಕೆ ಬೇರೇನ್ ಕೆಲ್ಸ ಇರ್ತಿತ್ಲೆ. ನಮ್ಮ ಅಪ್ಪಂಗೆ ಭಾರಿ ದೊಡ್ಡ ಜೀನಸ್-ಜವುಳಿ ವ್ಯಾಪಾರದ ಅಂಗ್ಡಿ ಇತ್ತ್. ಒಂದೇ ಕಟ್ಟೋಣಲಿ ಹಿಂದೆ ಮನೆ, ಮುಂದೆ ಅಂಗ್ಡಿ ಇತ್ತ್. ಅಡ್ಗೆ ಮಾಡಿಕೆ ಅವ್ವ-ಅತ್ತಿಗೆ ಇದ್ದೊ. ಹೊರಗೆನ ಕೆಲ್ಸಕ್ಕೆ ಚೆನ್ನು ದಿನಾ ಬಾತಿತ್ತ್. ನಾವು ಮಕ್ಕ ಆರಾಮಲಿ ತಿಂದ್‌ಕಂಡ್, ಉಂಡ್‌ಕಂಡ್ ಸಾಲೆಗೆ ಹೋಗ್ತಿದ್ದೊ. ನಮ್ಮ ಅಪ್ಪಂಗೆ ನಾವು ಆರ್‌ಜನ ಮಕ್ಕ. ಮೂರ್‌ಗಂಡ್, ಮೂರ್ ಹೆಣ್ಣ್ ಮಕ್ಕ. ಅಣ್ಣಂಗೆ ಮೊದ್ವೆ ಆಗುಟ್ಟು. ಅಣ್ಣಂದ ಮೇಲೆ ದೊಡ್ಡ ಅಕ್ಕ ಸರಸ್ವತಿ. ಅದರ ಹದಿಮೂರು ವರ್ಸಲೇ ಅವ್ವನ ಅಣ್ಣನ ಮಂಜಂಗೆ ಮೊದ್ವೆ ಮಾಡಿ ಕೊಟ್ಟೋಳೊ. ಅಪ್ಪನ ಅಪ್ಪ-ಅವ್ವ ಇದ್ದೊ. ಅವರ ನಾವು 'ಅಜ್ಜಪ್ಪ'- 'ಉಗ್ಗವಾ'ಂತ ಕರ್ರ್ಯೋತಿದ್ದೊ. ನಾ ಕತೆ ಪುಸ್ತಕ ತಂದ್‌ಕೊಡ್ತಿದ್ದದ್ ನನ್ನ ಎರಡ್ನೇ ಅಕ್ಕ, ದಮಯಂತಿಗೆ. ನಾ ಅದರ ಸಣ್ಣಕ್ಕಾಂತ ಕರ್ರ್ಯೆತಿದ್ದೆ.

ಅಜ್ಜಪ್ಪನ ಕತೆಗಳ ಭಂಡಾರಂದ ಕತೆಗಳ ನಾವ್ಗೆ ಹೇಳಿ, ಅದ್ ಮುಗ್ಯಕಾಕನ ನಾವ್ಗೆ ಕೇಳ್ದ ಕತೆಗಳನೇ ಕೇಳಿ ಕೇಳಿ ಬೇಜಾರಾಗ್ತಿತ್ತ್. ಆಗ ನಾ ಸಣ್ಣಕ್ಕಂಗೆ ಗಂಟ್ ಬಿದ್ದೆ. 'ನೀ ನಂಗೆ ಕತೆ ಹೇಳ್ರೆ ಮಾತ್ರ ನಾ ನಿಂಗೆ ಕತೆ ಪುಸ್ತಕ ತಂದ್‌ಕೊಡ್ದೂಂತ'

ಅದ್ಕೆ ಹೇಳ್ದೆ. ನೆರ್ದ ಗೂಡೇಂತ ಅದರ ಮನೆಂದ ಹೊರಗೆ ಹೋಕೆ ಅಪ್ಪ, ಅವ್ವ ಬುಡ್ತಿತ್ಲೆ. ಅದ್ಕೆ ನನ್ನ ಬುಟ್ರೆ ಬೇರೆಗತಿ ಇಲ್ಲೆ. ತಮ್ಮಂದರ್ ಸಣ್ಣೊವು. ನಂಗಾಗ ಏಳೆಂಟ್ ವರ್ಸ. ಸಣ್ಣಕ್ಕ ಅಕೆರಿಗೂ ನನ್ನ ಶರ್ತಕ್ಕೆ ಒಪ್ಪಿತ್. ದಿನಾ ನಂಗೆ ಕತೆ ಹೇಳ್ತಿತ್ತ್. ಕಡೆ ಕಡೆಗೆ ಅದ್ಕೂ ಬೇಜಾರ ಆತ್. ನಂಗೆ ಕತೆ ಹೇಳಿಕಂಡ್ ಕುದ್ದರೆ, ಅದ್ಕೆ ಕತೆ ಓದಿಕೆ, ಹೊಲಿಗೆ ಮಾಡಿಕೆ ಸಮಯ ಸಿಕ್ಕುದುಲೇಂತ ಅದ್ ನಂಗೆ ಬೊಯ್ತ್. 'ಕತ್ತೆ, ನಿಂಗೆ ಕತೆಪುಸ್ತಕ ಓದಿಕೆ ಆದುಲ್ಲೆನೋ, ನಿಂಗೆ ಕತೆ ಹೇಳಿಕೆ ನಂಗೆ ಆಕಿಲ್ಲೆ. ಪುಸ್ತಕ ನಾನೇ ತನ್ನೇಂತ ಹೇಳಿ, ಅವ್ವಂಗೆ ದಮ್ಮಯ್ಯ ದಕ್ಕಯ್ಯ ಹಾಕಿ ಕತೆ ಪುಸ್ತಕ ತಾಕೆ ಮನೆನ ಪಕ್ಕಲಿರುವ ಪಂಚ್ಯಾತ್ ಗ್ರಂಥಾಲಯಕ್ಕೆ ಹೋತ್.

ನಂಗೆ ಮೊರ್ಡ್ಡಿಕೆ ಬಂದ ಹಾಂಗೆ ಆತ್. ಅದ್ ನಂಗೆ "ಅಡವಿಯ ಹುಡುಗಿ" ಪತ್ತೆದಾರಿ ಕತೆನ ಅರ್ಧಲಿ ಹೇಳಿ ನಿಲ್ಲಿಸಿತ್ತ್. ಅದರ ಮುಂದೆನ ಕತೆ ಏನೂಂತ ನಂಗೆ ತಿಳ್ಯೊಕೂಂತ ಭಾರಿ ಆಸೆ. ಕಡೆಗೆ ನಾ ಕಷ್ಟ ಪಟ್ಟ್ ಓದಿಕೆ ಸುರು ಮಾಡ್ದೆ. ನಾ ಆಗ ಮೂರ್ನೇ ಕ್ಲಾಸ್‌ಲಿ ಓದ್ತಿದ್ದೆ. ಹಟಂದ ಒಂದು ವಾರ ಕಷ್ಟ ಪಟ್ಟ್ ಓದಿ ಪುಸ್ತಕ ಮುಗ್ಸಿದೆ. ಆ ಮೇಲೆ ನಂಗೆ ಕತೆ ಓದುವ ರುಚಿ ಸಿಕ್ಕಿತ್. ಆಗ ನಂಗೆ ಪತ್ತೇದಾರಿ ಕತೆಗಾಂತೇಳ್ರೆ ಭಾರೀ ಕುಸಿಲಿ ಓದಿಕೆ ಆಗ್ತಿತ್ತ್. ದಿನಾ ಒಂದೊಂದು ಪತ್ತೆದಾರಿ ಕತೆ ಪುಸ್ತಕ ನಂಗಾಗಿ ಓದಿಕೆ ತಾತಿದ್ದೆ. ಆಗ ಎನ್. ನರಸಿಂಹಯ್ಯರ ಪತ್ತೆದಾರಿ ಕತೆ ಪುಸ್ತಕ ಭಾರಿ ಹೆಸ್ರ್ ವಾಸಿ ಆಗಿತ್ತ್. ಪತ್ತೆದಾರಿ ಪುರುಶೋತ್ತಮ ಎಂದರೆ ನಂಗೂ ನನ್ನ ತಮ್ಮಂದರಿಗೂ ಈಗಿನ ಮಕ್ಕಳ 'ಸ್ಪೈಡರ್‌ಮೇನ್' ಇದ್ದ ಹಾಂಗೆ. ನನ್ನೊಟ್ಟಿಗೆ ಸೇರಿ ತಮ್ಮಂದರ್‌ನೂ ಕತೆ ಪುಸ್ತಕ ಓದಿಕೆ ಕಲ್ತೊ. ಹೈಸ್ಕೂಲಿಗೆ ಬಾಕನ ಮುಟ್ಟ ನಾ ಪತ್ತೆದಾರಿ ಕತೆ ಪುಸ್ತಕನ ಓದುದರ್ಲೇ ದಿನ ಕಳ್ದೆ. ಹೈಸ್ಕೂಲ್ಗೆ ಬಂದ ಮೇಲೆ ನಾವ್ಗೆ ಕನ್ನಡಕ್ಕೆ ವಿದ್ವಾನ್ ಕೊಳಂಬೆ ಪುಟ್ಟಣ್ಣಗೌಡ್ರ್ ಮಾಸ್ಟ್ರ ಆಗಿದ್ದೊ. ಅವು ಪಾಠ ಮಾಡಿಕನ ನಾವು ಮಂತ್ರಕ್ಕೆ ಸಿಕ್ಕಿದ ಹಾವುಗಳಾಂಗೆ ತಲೆ ಅಲ್ಲಾಡ್ಸಿ ಕಂಡ್ ಕೆಬಿಕೊಟ್ಟ್ ಕುದ್ರ್ತಿದ್ದೊ. ಅವು ರನ್ನನ ಗದಾಯುದ್ಧ ಪಾಠನ ವರ್ಣನೆ ಮಾಡಿಕಾಕನ ನಾವೆಲ್ಲಾ ಮಹಾಭಾರತದ ಕಾಲಲಿ ಇದ್ದವರಾಂಗೆ, ನಾವ್ಗೆ ಆಗ್ತಿತ್ತ್. ಅವರ ಪಾಠ ಕೇಳಿ ನಾ ಲೈಬ್ರರಿಂದ ಮತ್ತೊಮ್ಮೆ ಮಹಾಭಾರತ, ರಾಮಾಯಣ ಪುಸ್ತಕ ತಂದ್‌ದ್ ಓದಿದೆ. ದೊಡ್ಡ ದೊಡ್ಡ ಮೊನ್ಸರ ಜೀವನ ಚರಿತ್ರೆ ಕತೆಗಳ ಓದಿದೆ. ಶಿವರಾಮ ಕಾರಂತರ ಚೋಮನ ದುಡಿ, ಹುಚ್ಚು ಮನಸ್ಸಿನ ಹತ್ತು ಮುಖ, ಬೆಟ್ಟದ ಜೀವ–ಮುಂತಾದ ಕತೆಗಳ ಓದಿಕೆ ಸುರುಮಾಡ್ದೆ. ನಾ ಥರ್ಡ್ ಫಾರ್ಮ್‌ಲಿ ಇರಿಕಾಕನನೇ ಕುವೆಂಪುರವರ ಮಲೆಗಳಲ್ಲಿ ಮದುಮಗಳು, ಕಾನೂರು ಸುಬ್ಬಮ್ಮ ಹೆಗ್ಗಡಿತಿನ ಓದಿದೆ. ಕುವೆಂಪು ಬರ್ದ ಅಮರ ಕೃತಿಗಳ ಹುಡ್ಕಿ ಓದಿದರನೇ ಐದಾರ್ ಸಲ ಓದ್ತಿದ್ದೆ. ಅಂತೂ ಇಂತೂ ನಾನೂ ಕತೆ ಪುಸ್ತಕ ಓದಿಕೆ ಕಲ್ತೆ.

* * * * *

ಚುಕ್ಕೆ – 2

"ನಮ್ಮ ಕುಟುಂಬದ ಹಿರಿಯೋವು"

ನನ್ನ ಅಪ್ಪ ಸೂಂತೋಡು ಅಪ್ಪಣ್ಣ ಗೌಡರ್, ದಕ್ಷಿಣ ಕನ್ನಡ ಜಿಲ್ಲೆನ ಸುಳ್ಯ ತಾಲೂಕ್‌ನ, ಉಬರಡ್ಕ ಮಿತ್ತೂರು ಗ್ರಾಮದ ಸೂಂತೋಡು ಎಂಬಲ್ಲಿ ಹುಟ್ಟಿದೊ. ನನ್ನ ಅಜ್ಜನ ಕಾಲಂದಳೂ ಒಬ್ಬ ಅಪ್ಪಂಗೆ ಒಬ್ಬನೇ ಮಂಜಗಡ. ನನ್ನ ಅಪ್ಪ ಅವರ ಅಪ್ಪಂಗೆ ಒಬ್ಬನೇ ಮಂಜ. ಹಿಂದೆ ಇಲ್ಲೆ, ಮುಂದೆ ಇಲ್ಲೆ. ನನ್ನ ಅಜ್ಜಪ್ಪನೂ ಅವರ ಅಪ್ಪಂಗೆ ಒಬ್ಬನೇ ಮಂಜಗಡ. ಅಜ್ಜಪ್ಪನ ಕುಟುಂಬಲಿ ಅವರ ತಮ್ಮನ ಮಕ್ಕ ಒಂಭತ್ತ್ ಜನ ಇದ್ದೊಗಡ. ಅವರ್‍ನೇ ನಮ್ಮ ಅಪ್ಪ ಸ್ವಂತ ಅಣ್ಣ, ತಮ್ಮಂದರ ಹಾಂಗೆ ಕಾಂಬತಿದ್ದೊ. ನಮ್ಮ ಅಪ್ಪಂಗೆ ತಾಳ ಮದ್ದಳೆ ಹುಚ್ಚಿ ಇತ್ತ್‌ಗಡ. ಅದರ್‌ಂದಾಗಿ ಬೆನ್ನಿ ಬೇಸಾಯ ಮಾಡ್ತಿದ್ದ ನಮ್ಮ ಅಪ್ಪ ಸಾಲಗಾರ ಆದೊಗಡ. ಸೊಸ್ಯಾಟಿನ ಸಾಲ ತೀರ್‍ಸಿಕೆ ಬೊತ್ತದೆ ಅಪ್ಪನ ಪಿತ್ರಾರ್ಜಿತ ಆಸ್ತಿನ ಏಲಂಗೆ ಇಸಿಕನ ನಮ್ಮ ಅವ್ವನ ಎರಡ್ನೇ ಅಣ್ಣ ಮಳಿ ಎಲ್ಯಂಣ ಗೌಡರ್ ಹಣಕಟ್ಟಿ ಅದರ ಬುಡ್ಸಿ, ನಮ್ಮ ಅವ್ವನ ಹೆಸ್ರ್‌ಗೆ ಆ ಆಸ್ತಿನ ಬರ್‍ಸಿದೊಗಡ. ಅಕೆರಿಗೆ ಅಪ್ಪ ಆ ಆಸ್ತಿನ ಮಾರಿ, ಸುಳ್ಯಕ್ಕೆ ಬಂದದ್ 'ಗುರುಂಪು' ಎಂಬಲ್ಲಿ ಮನೆ ಮಾಡಿ ಒಂದು ಅಂಗ್ಡಿ ಇಸಿದೊ ಗಡ. ಆ ಸಮಯಲಿ ಅಂದರೆ ಸಾವಿರದೊಂಬೈನೂರ ಮೂವತ್ತೊಂಭತ್ತನೇ ಇಸ್ವಿಲಿ ನಾ ಹುಟ್ಟಿದೆ ಗಡ. ನನ್ನಂದ ಮುಂದೆ ಅವ್ವಂಗೆ ಮೂರ್ ಜನಗಂಡ್ ಮಕ್ಕ ಹುಟ್ಟಿದ್ದೊ. ಆದರೆ ನಾಕೈದ್ ವರ್ಸಲಿ ಆ ಮಕ್ಕ ತೀರಿ ಹೋದೊ. ಆ ಮೇಲೆ ನಾ ಹೆಣ್ಣ್‌ಕೂಸ್ ಹುಟ್ಟಿದೆ. ಈ ಕೂಸುನೂ ಬೊದ್ಕಿಕಿಲ್ಲೇಂತ ನನ್ನ ಅವ್ವ ಅವರ ತಂಗೆಗೆ, 'ಇದರ ನೀ ಸಾಂಕ್‌ಂ'ತ ಹೇಳ್ದೊ ಗಡ. ಆದರೆ ಆ ತಂಗೆ ಒಪ್ಪಿತಿಲ್ಲೆ. ನನ್ನ ಚಿಕ್ಕವಂಗೆ ಆಗಳೇ ಒಂದು ಗಂಡ್ ಕೂಸು ಇತ್ತ್. ನನ್ನ ಅವ್ವ ನನ್ನ ಗೋಸ್ವಾರಿಲೇ ನೋಡ್ದೊ. ನಂಗೆ ತೊಟ್ಲ್ ಕಟ್ಟಿತಿಲ್ಲೆ, ಮೊಲೆ ಹಾಲ್ ಕುಡ್ಸಿತಿಲ್ಲೆ. ನನ್ನ ಉಗ್ಗವ್ವ (ಅಪ್ಪನ ಅವ್ವ) ನಂಗೆ ಬಂದನಾರ್ ಕಸಾಯ ಮಾಡಿ ಕುಡ್ಸಿ ಬೊದ್ಕಿಸಿದೊ ಗಡ. ನನ್ನ ದೊಡ್ಡಕ್ಕನೇ ನನ್ನ ಎಲ್ಲಾ ಚಾಕ್ರಿ ಮಾಡ್ತಿತ್ತ್ ಗಡ. ನಂಗೆ ಬುದ್ದಿ ಬಾಕಾಕನ ನಾ ನನ್ನ ದೊಡ್ಡಕ್ಕನನೇ ಅವ್ವಾಂತ ಗುರ್ತಿಸ್‌ತಿದ್ದೆ. ಅವ್ಯ ನಾ ಸಣ್ಣಂವ ಇರಿಕನ 'ತಾಯಿ' ಎಂತ ಕರ್‍ಯೆತಿದ್ದೆ. ಅದ್ ತುಂಬಾ ಸಾದ್ ಸ್ವಭಾವದ ಗೂಡೆ. ನನ್ನ ಸೊಂಟಂದ ಕೆಳಗೆ ಇಳ್ಸ್‌ತಿತ್ತೆ. ಒಮ್ಮೆ ಅದ್ ನೆಂಟ್ರ ಮನೆಗೆ ಹೋಕಾಕನ ನಾ ಕಾಲ್ಗಳ ನೆಲಕ್ಕೆ ಬೊಡ್ದ್ ಉರ್‍ಳಾಡಿಕಂಡ್ ತುಂಬಾ ಮೊರ್‍ಟೆ. ಮೂರ್ ದಿನ ಉಂಡತ್ಲೆ. ಕಾಲ್ಗಳ ನೆಲಕ್ಕೆ ಉಜ್ಜಿ, ಉಜ್ಜಿ ಮುಡುಲಿ ಗುಳ್ಳೆಗ ಬಂದಿದ್ದೊ. ದೊಡ್ಡಕ್ಕ ಬಂದ್ ನನ್ನ ಎತ್ತಿಕಂಡ್ ಮುದ್ದಾಡಿ, ನನ್ನ ಪಾದದ ಮುಡುಲಿ ಎದ್ದ ಗುಳ್ಳೆಗಳಿಗೆ ಮೊದ್ದ್ ಅರ್‍ದ್ದ್ ಪೂಜಿಗುಣ ಮಾಡ್ತ್. ಅದರ್‌ಂದ ನಾ ಹತ್ತ್ ವರ್ಸ ಸಣ್ಣವ್ಳು. ಅದ್ಕೆ ಮೊದ್ವೆ ಆಕನ ನಂಗೆ ಮೂರ್‍ನಾಕ್ ವರ್ಸಆಗಿತ್ತ್. ಸುಳ್ಯಂದ ಕನಕಮಜಲಿಗೆ ನಡ್ಕಂಡೇ ದಿಬ್ಬಣ ಹೋದ್ ನಂಗೆ ನೆಂಪುಟ್ಟು. ನನ್ನ ಯಾರೋ ಹೆಗ್ಲ್ ಮೇಲೆ ಕುದ್ರಿಸಿಕಂಡ್ ಹೋದ್ರೋ. ಆಗ ತಮ್ಮಂದರ್ ಹುಟ್ಟಿತಿಲ್ಲೆ.

* * * * * *

ಚುಕ್ಕೆ – 3

“ದೊಡ್ಡಕ್ಕನ ಮೊದ್ವೆ ನೆಂಪು”

ದೊಡ್ಡಕ್ಕ ಸರಸ್ವತಿ ನಮ್ಮ ಮನೆಲಿ ಲಂಗ, ರವ್ಕೆ ಹಾಕಂಡ್ ಓಡಾಡ್ತಿತ್ತ್. ಸಣ್ಣಕಲ್ ಶರೀರ. ಬಣ್ಣ, ಬಂಗಾರದ ಬಣ್ಣ. ಉಬ್ಬು ಹಲ್ಲ್. ಅದ್ ನನ್ನ ಉಗ್ಗವಂದ ನಮ್ಮ ಅಪ್ಪಂಗೆ ಬಂದ ಬಳುವಳಿ. ನಮ್ಮ ಅಪ್ಪಂಗೂ ಸೊಲ್ಪ ಉಬ್ಬು ಹಲ್ಲ್. ಆದರೆ ಒಳ್ಳೆ ಚಿನ್ನದ ಬಣ್ಣದ ಹಾಂಗೆ ಇದ್ದ್, ಮೈ ಕೈ ತುಂಬಿಕಂಡಿದ್ದೊ. ಹಾಂಗಾಗಿ ಹಲ್ಲ್ ಮೋರೆಲಿ ಎದ್ದ್ ಕಾಂಬತಿತ್ಲೆ. ಅಪ್ಪನ ಹಾಂಗೆ ನಾವ್ಗೆಲ್ಲಾ ಉಬ್ಬು ಹಲ್ಲ್ ಇದ್ದರೂ, ನಾವ್ ಯಾರೂ ಕುರೂಪಿಗ ಅಲ್ಲ. ಎಲ್ಲೋವು ಬೆಳ್ಳಂಗೆ ಬೆಳ್ಳಂಗೆ ಇದ್ದ್, ಪೊರ್ಲುನ ಮಕ್ಕ ಆಗಿದ್ದೊ.

ನಮ್ಮ ಅವ್ವಂಗೆ ಇಬ್ಬೊರು ಅಣ್ಣಂದರ್, ಒಬ್ಬ ತಮ್ಮ, ಇಬ್ಬೊರು ಅಕ್ಕಂದರ್, ಮೂರ್ ಜನ ತಂಗೆಕ್ಕ, ಒಟ್ಟು ಅವು ಒಂಭತ್ತ್ ಜನ ಮಕ್ಕ. ಸುಳ್ಯ ತಾಲೂಕ್‌ನ ಕನಕಮಜಲ್ ಗ್ರಾಮದ ಮಳಿ ಎಂಬಲ್ಲಿ ಅವರ ತವರು ಮನೆ. ಅವ್ವನ ದೊಡ್ಡಂಣಂಗೆ ಒಬ್ಬನೇ ಮಂಜ. ಮೂರು ಜನ ಹೆಣ್ಣ್ ಮಕ್ಕ. ಅವೆಲ್ಲಾ ಹುಟ್ಟ್‌ಕಾಕನನೇ ಕೃಷಿನ ನಂಬಿ ಬೊದ್ಕಿದೊವು. ಮಾಂವನ ಮಂಜಂಗೆ ದೇವರ ಗುಂಡಂದ ಹೆಣ್ಣ್ ನಿಶ್ಚಯ ಆತ್. ಲಗ್ನ ಪತ್ರಿಕೆನೂ ಆತ್. ಆದ್ರೆ ಆ ಮೊದ್ವೆ ಅರ್ಧಕ್ಕೆ ನಿತ್ತತ್. ಗೂಡೆನ ಕಡೆವು ಹೆಣ್ಣ್‌ನ ಬೇರೆ ಕಡೆಕೊಟ್ಟೊ, ಮಾಂವಂಗೆ ಬಾರೀ ಬೇಜಾರ್ ಆತ್. ಅವು ನಮ್ಮ ಮನೆಗೆ ಬಂದ್‌ದ್ ಅವ್ವನ ಹಕ್ಕಲೆ ನಮ್ಮ ದೊಡ್ಡಕ್ಕನ

ಅವರ ಮಂಜಂಗೆ ಮೊದ್ವೆ ಮಾಡಿ ಕೊಡೊಕೂಂತ ಕೇಳ್ದೊ. ಭಾವಂಗೆ ಆಗ ಇಪ್ಪತ್ತೈದು ವರ್ಸ. ಅಕ್ಕಂಗೆ ಬರೇ ಹದಿಮೂರು ವರ್ಸ. ಅಪ್ಪ ಒಪ್ಪಿತ್ಲೆ. ನಮ್ಮ ಅಪ್ಪ ಆಗ ಗುರುಂಪುಂದ ಬಂದ್‌ದ್ ಸುಳ್ಯ ಪೋಲೀಸ್ ಸ್ಟೇಶನ್‌ನ ಎದರ‍್ಗಡೆ ಇದ್ದ, ನಾರಾಯಣ ನ್ಯಾಕರ ಹೋಟ್ಲ್‌ಂದ ಕೆಳಗೆ ಇದ್ದ, ಪಂಚ್ಯಾತ್ ಕಟ್ಟಡ ಇದ್ದ, ಕ್ಲಬ್ ಕಟ್ಟಡದ ಪಕ್ಕಲಿ, ಕೆಳಗಡೆ ಧರ್ಮಸ್ಥಳ ಜಾಗೆಲಿ ಹೊಸ ಭಂಡಸಾಲೆ ಮತ್ತೆ ಮನೆ ಕಟ್ಟಿಸಿದ್ದೊ. ವ್ಯಾಪಾರಲಿ ತುಂಬಾ ಹೆಸ್ರ್ ಗಳಿಸಿದ್ದೊ. ಆಗ ಅವರ ಎಲ್ಲೋವು ಸಾಹುಕಾರ್ ಅಪ್ಪಣ್ಣ ಗೌಡರೆಂದೇ ಕರ್ಯೋತಿದ್ದೊ. ನನ್ನ ದೊಡ್ಡಕ್ಕ ಎಂಟ್ನೇ ಕ್ಲಾಸ್ ಪಾಸಾಗಿತ್ತ್. ನಾ ಹೇಳ್ವ ಈಕತೆ 1942ನೇ ಇಸ್ವಿನ ಕತೆ. ಆಗ ಸುಳ್ಯಲಿ ಇದ್ದದ್ ಹಾಯರ್ ಎಲಿಮೆಂಟರಿ ಶಾಲೆ. ಅದೇ ದೊಡ್ಡ ಕ್ಲಾಸ್. ಅಕ್ಕ ಇಂಗ್ಲಿಷ್ ಅಕ್ಷರಗಳ ಕೂಡಿಸಿ ಲಾಯ್ಕ್‌ಲಿ ಓದ್‌ತಿತ್ತ್. ಮುತ್ತುನಂಥಾ ಅಕ್ಷರಲಿ ಬರ‍್ಯತಿತ್ತ್. ನಮ್ಮ ಅಪ್ಪಂಗೆ ಅವಳ ಒಬ್ಬ ಸರ್ಕಾರಿ ಉದ್ಯೋಗಸ್ಥಂಗೆ ಮೊದ್ವೆ ಮಾಡಿ ಕೊಡೊಕೂಂತ ಭಾರೀ ಆಸೆ ಇತ್ತ್. ನಮ್ಮ ಅಪ್ಪನ ಸಂಬಂಧ ಬೆಳ್ಸೊಕೂಂತ ನಮ್ಮ ಜಾತಿನ ಅನೇಕ ಬಂಧುಗಳ್ಗೆ ಆಸೆ ಇತ್ತ್. ಆದ್ರೆ ನಮ್ಮ ಅವ್ವ ಹಟ ಹಿಡ್ದೊ. ಅವರ ಅಣ್ಣನ ಮಂಜಂಗೇ ಅಕ್ಕನ ಕೊಡೊಕೂಂತ. ಅಪ್ಪಂಗೆ ಇಷ್ಟ ಇತ್ಲರೂ ಅವ್ವನ ಮಾತಿಗೆ ಒಪ್ಪದೆ ಉಪಾಯ ಇತ್ಲೆ. ಅಕೆರಿಗೆ ಅದೇ ಲಗ್ನಲಿ ನನ್ನ ದೊಡ್ಡಕ್ಕನ ಸೋದರ ಮಾಂವನ ಮನೆಗೆ ತಕೊಂಡೋಗಿ ಕೊಡ್ದೂಂತ ಮಾತ್ ಕೊಟ್ಟೊ. ಅದ್ಕೂನೂ ಒಂದ್ ಕಾರ‍್ಣ ಉಟ್ಟು. ಏನ್‌ಂತೇಳ್ರೆ ನಮ್ಮ ಭಾವನ ತಂಗೆ ತಿಮ್ಮಕ್ಕನ ಅದೇ ಲಗ್ನಲಿ ಮೊದ್ವೆ ಮಾಡ್ವ ಕಾರ್ಣ ಅವರ ಮನೆಲೇ ಅಣ್ಣ–ತಂಗೆನ ಮೊದ್ವೆನ ಒಟ್ಟಿಗೆ ಮಾಡ್ದೂಂತ ತೀರ್ಮಾನ ಮಾಡ್ದೊ. ನಂಗಾಗ ಮೂರೋ ನಾಕೊ ವರ್ಸ. ಹಂಞ ಹಂಞ ನೆಂಪುಟ್ಟು.

ನಮ್ಮ ಭಾವ ಮತ್ತೆ ಅವರ ತಂಗೆ ಗುಂಡು ಗುಂಡಾಗಿ ನೋಡಿಕೆ ತುಂಬಾ ಪೊರ‍್ಲು ಇದ್ದೊ. ಅವರ ತಂಗೆನ ಆಗನ ಕಾಲಲಿ ಶ್ರೀಮಂತ ಮನೆತನಕ್ಕೆ ಕೊಡ್ದು. ಅಲ್ಲಿಂದ ಗಡ್ದ್‌ಲಿ ದಿಬ್ಬಣ ಬಂದಿದ್ದೊ. ಇರ‍್ಳ್ ಧಾರೆ ಎರ್ದ್ ಕೊಡ್ದು. ಇಬ್ಬೊರು ಮೊದೊಳ್ಗೆಗಳ್ಗೆ ಅರಶಿನ ಎಂಣೆ ಶಾಸ್ತ್ರ ಮಾಡಿ, ಮಿಾಸಿ, ಮೊದ್ರಂಗಿ ಶಾಸ್ತ್ರ ಮಾಡಿ, ನಡುಕೋಣೆಲಿ ಮುತ್ತೈದ್‌ಗ ಅಕ್ಕಿ ಚೆಲ್ಲಿ, ಹಸೆ ಹಾಸಿ ಕುದ್ರಿಸಿದೊ. ಚಪ್ಪರದ ಮೇಲ್ಕಟ್ಟ್ ಅಡಿಲಿ ಕುದ್ದ ಗಂಡ್‌ನ ಕಡೆನ ಎಜಮಾನ್ರ್‌ಗ ಹೆಣ್ಣ್‌ನ ಕಡೆವ್ಕೆ ಕೊಟ್ಟ, ಮುತ್ತೈದೆಗಳ ಕೈಲಿ ಇಸಿದ, ಬಣ್ಣ ಬಂಗಾರದ ಹರಿವಾಣನ ಒಳಗೆ ತಂದ್ ಮೊದೊಳ್ಗೆಗಳ ಎದ್ರ್‌ಗೆ ಇಸಿದ ಮಣೆ ಮೇಲೆ ಇಸಿದ್, ಇಬ್ಬೊರು ಮೊದೊಳ್ಗೆಗಳಿಗೆ ಅವರವರ ಕಡೆನ ಹೆಣ್ಣ್‌ಗ ತಲೆ ಬಾಚಿ, ಹೂ ಮುಡ್ಸಿ, ಸಿಂಗಾರ ಮಾಡಿ ಪಿಂಗಾರ ಮುಡ್ಸಿ, ಧಾರೆ ಸೀರೆ ಉಡ್ಸಿ, ತಲೆಗೆ ಮುಸ್ಕ್‌ನ ಎಲಸ್ತ್ರ ಹೊದಿಸಿದ್ ನಂಗೆ ಲಾಯ್ಕ್‌ಲಿ ನೆಂಪುಟ್ಟು. ನಾ ಕೊತ್ತಿನ ಹಾಂಗೆ ಕುದ್‌ಕಂಡ್ ಇದರೆಲ್ಲಾ ಹಕ್ಕಲೆಂದ ನೋಡ್ಯಳೆ. ತೌರ್ ಮನೆಂದ ಕರ‍್ಕಂಡ್ ಹೋಕನ ಅಕ್ಕಂಗೆ ಹೊಸ ಸೀರೆ ಉಡ್ಸಿ ಮೂರ‍್ನಾಕ್ ಚಿನ್ನದ ಸರ ಹಾಕಿ, ಲೋಲಾಕ್ ಹಾಕಿ ಕೈ ತುಂಬಾ ಬಳೆ ಇಸಿ ಕಳ್ಸಿದ್ದೊ. ಆದರೆ

ಬಣ್ಣ ಬಂಗಾರ ಇಸಿಕನ ಹೆಣ್ಣ್‌ನ ತೌರ್‍ನ್ ನಗಗಳ ಎಲ್ಲಾ ತೆಗ್ದ್‌ದ್, ಗಂಡನ ಕಡೆನ ಸೀರೆ, ನಗಗಳ ಹಾಕೊಕು ಗಡ. ನನ್ನ ಅಕ್ಕಂಗೆ ಸುಮಾರ್‍ನ ಸೀರೆ, ಕಮ್ಮಿ ಚಿನ್ನ. ಆದರೆ ಅತ್ತಿಗೆಗೆ ಕುತ್ತಿಗೆ ತುಂಬಾ ಚಿನ್ನದ ಸರಗ, ತಲೆ ತುಂಬಾ ಬಂಗಾರದ ಮಲ್ಲಿಗೆ ಮೊಗ್ಗು, ಗುಲಾಬಿ ಸೇವಂತಿಗೆ, ಕೊಪ್ಪು ಸೊರ್ಪುಳಿ, ಜಡೆ ತುಂಬಾ ಚಿನ್ನದ ತಿರುಪುನ ಹೂಗ, ಬೆಳ್ಳಿ ಡಾಬು, ಕೈ ತುಂಬಾ ಬಳೆಗಳ್‌ಂದ ಅಲಂಕಾರ ಮಾಡ್ದರ ಬೆರ್‍ಗ್‌ಂದ ನೋಡ್ತಿದ್ದೆ. ಅತ್ತಿಗೆನ ಗಂಡನ ಮನೆವು ಒಂದು ತಾಮ್ರದ ಕರ್ಡಿಗೆ ತುಂಬಾ ಚಿನ್ನ ತಂದಿದ್ದೊ. ಧಾರೆ ಹೊಯ್ಯಕನ ಎಲ್ಲೋವು ಬೋರ್‍ರೋಂತ ಮೊರ್‍ದ್ರೋ. ಅದರ ನೋಡಿದ್ ನಂಗೆ ತುಂಬಾ ಹೆದ್ರಿಕೆ ಆತ್. ಇವೆಲ್ಲಾ ಏಕೆ ಮೊರ್‍ಟವೇಂತ ಎಲ್ಲರ ಮೋರೆನ ಪಿಳಿ ಪಿಳಿ ಕಣ್ಣ್ ಬುಟ್ಟ್‌ಕಂಡ್ ನಾ ಒಬ್ಬೊಬ್ಬರನೇ ಜನಂಗಳ ಕಾಲ್‌ಸಂದ್‌ಲಿ ನಿಂತ್‌ಕಂಡ್, ಸಣ್ಣಕ್ಕನ ಲಂಗನ ಗಟ್ಟಿ ಹಿಡ್ಕಂಡ್ ನೋಡ್ತಿದ್ದೆ. ಮೆಲ್ಲನೆ ಸಣ್ಣಕ್ಕನ ಲಂಗನ ಎಳ್ದೆ. ಅಕ್ಕ ಬೊಗ್ಗಿದ್ 'ಏಕೆ ಲಂಗ ಎಳ್ದೇಂತ' ಕೇಳ್ತ್. ಅವೆಲ್ಲಾ ಏಕೆ ಮೊರ್‍ಟವೇಂತ ಕೇಳ್ದೆ. 'ಈಗ ನೀ ಸುಮ್ಮನಿರ್. ಮನೆಗೆ ಹೋದ ಮೇಲೆ ಮತಾಡೊಮೋಂತ', ಅಕ್ಕ ನನ್ನ ಬೆನ್ನಿಗೆ ಮೆಲ್ಲಂಗೆ ಒಂದು ಗುದ್ದು ಗುದ್ದಿಹೇಳ್ತ್. ನಾ ಸುಮ್ಮನಾದೆ.

ಮಾರ್‍ಣೆ ದಿನ ಪಚಾರ. ಪಚಾರ ಆದ ಮೇಲೆ ಊಟ. 'ಉಂಬಕೆ ಎಲ್ಲೋವೂ ಎದ್ರಿನೀಂತ' ಮಾವ ಚೆಂಬುಲಿ ನೀರ್ ತಕಂಡ್ ಎಡ ಕೈ ಅಂಗೈಲಿ ನೀರ್‍ನ ಚೆಂಬು ಹಿಡ್ಕಂಡ್ ಬಲ ಕೈ ಅಂಗೈಂದ ಚೊಂಬುನ ಬಾಯಿ ಮುಚ್ಚಿ, ತುಳುಲಿ ಸಭೆಗೆ ಹೇಳ್ದೊ. ನನ್ನ ಅವ್ವನ ತೌರು ಮನೆವು ತುಳು ಮಾತಾಡ್ತಿದ್ದೊ. ಅವ್ವ ನಮ್ಮ ಹಕ್ಕಲೆ ಅರೆ ಬಾಸೆಲೇ ಮಾತಾಡ್ತಿದ್ದೊ. ಜಾಲ್‌ಲಿ ಕಮ್ಮುನ ಎರ್‍ಡ್ ಭಾಗ ಮಾಡಿ ಸಾಲ್‌ಲಿ ಇಸಿದ್ದೊ. ಅದರ ಮೇಲೆ ನಾವೆಲ್ಲಾ ಉಂಬಕೆ ಕುದ್ದೊ. ಸುರುಗೆ ಮಾಯ್ನ ಮಿಡಿ ಉಪ್ಪಿನ ಕ್ಯಾ ಹುಗ್ಗೆ ಇಕ್ಕಿದೊ. ಎಳ್ತ್ ಸೋಂತೆ ಕ್ಯಾ ಗೈಪುನ ಅದರ ಮೇಲೆ ಹಾಕಿದೊ. ಎಲ್ಲೋವು ಅದರ ಕಲ್ಸಿಕಂಡ್ ಬೊರ್‌ಂಬಿ ಬೊರ್‌ಂಬಿ ಉಂಡೊ. ಆ ಮೇಲೆ ಅವ್ಲಕ್ಕಿ ಇಕ್ಕಿದೊ. ಎಲ್ಲೋವು ಅವ್ಲಕ್ಕಿನ ನಡುಂದ ಕೈಲಿ ಅಗಲ ಮಾಡಿ ಕಟ್ಟೆನ ಹಾಂಗೆ ಮಾಡ್ದೋ. ನಾನೂ ಅವರ್‍ನ ನೋಡಿ ಹಾಂಗೇ ಮಾಡ್ದೆ. ಅದರ ನಡುಲಿ ಪದಂಜಿ ಪ್ಯಾಸನ ಗೋಂಚಿ ಇಕ್ಕಿದೋ. ಪದಂಜಿ ಪ್ಯಾಸ ಅವ್ಲಕ್ಕಿ ಕಟ್ಟೆನ ಒಳಗೇ ನಿಂತತ್. ಬಾಳೆಲೆಂದ ಹೊರಗೆ ಹರ್‍ದತಿಲ್ಲೆ. ನಮ್ಮ ಹಿರ್‍ಯೋವು ಎಷ್ಟ್ ಉಪಾಯ ಕಲ್ತೊಳೋಂತ ನಂಗೆ ಕುಸಿ ಆತ್. ನಾವೆಲ್ಲಾ ಸೊರೋ ಸೊರೋಂತ ಪ್ಯಾಸನ ಸುರ್‍ದೊ. ಅವ್ಲಕ್ಕಿನ ಪ್ಯಾಸಲಿ ಕಲ್ಸಿಕಂಡ್ ಉಂಡೋ. ಎರ್‍ಡ್ ಮೂರ್ ಸಲ ಪ್ಯಾಸ ಇಕ್ಕಿಕಂಡ್ ಬಂದೋ. ಕೆಲವು ಜನ ಎಷ್ಟ್ ಇಕ್ಕಿರೂ ಇಕ್ಕಿಸಿಕಂಡ್ ಉಂಬತಿದ್ದೊ. ತೊಂಡೆಕ್ಯಾ, ಬೀಜದ ಬೆಂಡ್, ಹಾಕಿ ಆರ್‍ಸಿದ ಗೈಪು, ಮೂಂಡಿ-ಚಿಬೆರಿ ಗಸಿ, ಅಲ್ಸಂಡೆ ಪಲ್ಯ ಎಲ್ಲಾ ಇಕ್ಕಿಕಂಡ್ ಬಂದೊ. ಅಕೆರಿಗೆ ಬೇಕಾದಸ್ಟ್ ಹುಗ್ಗೆನೂ, ಸೋಂತೆಕ್ಯಾ ಗೈಪುನೂ, ಇಕ್ಕಿಕಂಡ್ ಬಂದೊ. ಬಂದವೆಲ್ಲಾ ಹೊಟ್ಟೆ ತುಂಬಾ

ಉಂಡು ಎದ್ದೊ. ಎಲಾಡ್ಕೆ ಬಾಯ್ತುಂಬಾ ತಿಂದೋ. ಆ ಮೇಲೆ ಗಂಡ್‌ನ ಕಡೆವು, ಹೆಣ್ಣ್‌ನ ಕರ್ಕಂಡ್ ದಿಬ್ಬಣ ಹೊರ್‍ಟೊ. ಹೊರ್‍ಡಿಕೆ ಮುಂದೆ ಹೆಣ್ಣ್‌ನ ಹೆಣ್ಣ್ ಇಳ್ಸಿ ಕೊಟ್ಟೊ. ಹೆಣ್ಣ್‌ನ ಕಡೆಂದ ಒಬ್ಬ ಹೆಣ್ಣ್ ಇಳ್ಸಿ ಕೊಡುವ ಬಿನ್ನ ಹೇಳ್ದೊ. ಅವು ಹೇಳ್ದಕ್ಕೆಲ್ಲಾ ಗಂಡ್‌ನ ಕಡೆಂದ ಒಬ್ಬ ಯಜಮಾನ ಉತ್ತರ ಕೊಟ್ಟೊ. ಕಡೆಗೆ ಇಬ್ಬರು ಹೆಣ್ಮಕ ಹೆಣ್ಣ್ ಇಳ್ಸಿ ಕೊಡುವ ಸೋಬಾನೆ ಹಾಡಿದೊ. ಗೂಡೆ ಮೊರ್‍ಟ್‌ಕಂಡ್ ಗಂಡನೊಟ್ಟಿಗೆ ಗಂಡನ ಮನೆಗೆ ಹೋತ್. ಹೆಣ್ಣ್‌ನ ಕಡೆವೂ ಗೂಡೆನೊಟ್ಟಿಗೆ ಮೊರ್‍ಟ್‌ಕಂಡ್ ಸೀರೆ ಸೆರ್‌ಂಗ್‌ಲಿ ಕಣ್ಣ್, ಮೂಂಕು ಒರ್‍ಸಿಕಂಡ್ ಮುಳಿ ಪಡ್ಪು ಮುಟ್ಟ ಹೋಗಿ ಹೆಣ್ಣ್‌ನ ಗಂಡ್‌ನ ಮನೆಗೆ ಕಳ್ಸಿದ್ ಹಿಂದೆ ಬಂದೊ.

ಅದರ ಮೊರ್‍ದಿನ ಮರಿ ದಿಬ್ಬಣಾಂತ ಭಾವನ ಮನೆಂದ ಅತ್ತಿಗೆನ ಗಂಡನ ಮನೆ ಪೆರ್ಲಂಪಾಡಿಗೆ, ಅಕ್ಕ, ಭಾವನೊಟ್ಟಿಗೆ ಹತ್ತಿಪ್ಪತ್ತ್ ಜನಂಗ ಹೋದೋ. ಅವರೊಟ್ಟಿಗೆ ಸಣ್ಣಕ್ಕನೂ ಹೋತ್. ದೊಡ್ಡಕ್ಕ, ಸಣ್ಣಕ್ಕ ಇಬ್ಬೊರೂ ಹೋಕಾಕನ ನಾನೂ ಅವರೊಟ್ಟಿಗೆ ಹೋನೇಂತ ಮೊರ್‍ಟೆ. ನಾ ಸಣ್ಣಂವಾಂತ, ಅಕ್ಕಂದರಿಗೆ ಕಾಲ್ಕಟ್ಟ್‌ಂತ ನನ್ನ ಕಳ್ಸಿತ್ಲೆ. ನಾ ಅವ್ವನೊಟ್ಟಿಗೆ ಅಕ್ಕನ ಮನೆಲಿ ನಿತ್ತೆ. ನಾ ಇಡೀ ದಿನ ಮೊರ್‍ಟ್ ಕಂಡೇ ಇದ್ದೆ. ಅಲ್ಲಿಂದ ಅವೆಲ್ಲಾ ಮಾರ್‍ಣೆ ದಿನ ಬಂದೊ. ಎಲ್ಲೋವು ಅತ್ತಿಗೆನ ಮನೆನ ಹೊಗ್ಳೋವೆ. ಮಾಳಿಗೆ ಮನೆ, ತುಂಬಾ ಶ್ರೀಮಂತರ್, ಅತ್ತಿಗೆನ ಭಾಗ್ಯಾಂತ ಎಲ್ಲೋವು ಮಾತಾಡಿಕಂಬೊತಿದ್ದೊ. ಎಂಟ್ ದಿನ ಕಳ್ದ ಮೇಲೆ ತುಪ್ಪದ ಶಾಸ್ತ್ರಕ್ಕೆ ಅಕ್ಕನೊಟ್ಟಿಗೆ ಸುಳ್ಯಕ್ಕೆ ನಾನೂ ಬಂದೆ.

* * * * *

ಚುಕ್ಕೆ – 4

“ನನ್ನ ಸಣ್ಣ ಪ್ರಾಯದ ನೆಂಪುಗ ”

ನಾ ಸಣ್ಣಂವ ಇರಿಕನ ನನ್ನ ದೊಡ್ಡ ಅಕ್ಕನೇ ನನ್ನ ಅವ್ವಾಂತ ನಂಗೆ ಗೊತ್ತ್. ಆಗ ನಾ ಅದರ ‘ತಾಯೀ’ಂತ ಕರಿತಿದ್ದೆ. ಅದ್ ನನ್ನ ಕೊಂಡಾಟಂದ ‘ಮೋಳೂ’ಂತ ಕರೀತಿತ್ತ್. ಅದರನೋಡಿ ಮನೆವೂ, ನನ್ನ ಆಗಾಗ ಮೋಳೂಂತ ಕರ್‍ಯತಿದ್ದೊ. ಅದ್ ಮೊದ್ವೆ ಆಗಿ ಹೋದ ಮೇಲೆ ನಾ ತುಂಬಾ ಮಂಕಾದೆ. ಒಬ್ಬನೇ ಚಕ್ಕಳ–ಬಕ್ಕಳ ಕುದ್ದ್‌ಕಂಡ್ ಅಕ್ಕನ ನೆನ್ಸಿಕಂಡ್ ಮೊರ್ಡ್‌ತಿದ್ದೆ. ಕುಸಿ ಆದರೆ ಎರ್ಡ್ ಕಾಲ್ನ ನೀಂಡಿಕಂಡ್ ಬಾಯಿಗೆ ಬಂದ ಹಾಂಗೆ ಪದ ಹಾಡ್ತಿದ್ದೆ. ‘ಅಂಗಯ ದಂಗಯ ಬಂಗಯ ಈಯಂಗ, ಓ.........ಓ’ಂತ ಜೋರಾಗಿ ಹಾಡ್ತಿದ್ದೆ. ಆಗ ನನ್ನ ಸಣ್ಣ ಅಕ್ಕ ಬಂದ್ ನನ್ನ ನೋಡಿ, ಹಾಂಗೇ ಹೇಳಿ ಹಂಗ್ಸ್‌ತಿತ್ತ್. ಆಗನಾ ಕಾಲ್ಗಳ ನೆಲಕ್ಕೆ ಬೊಡ್ಕಂಡ್ ಮೊರ್ಡ್‌ತಿದ್ದೆ. ಆಗ ಉಗ್ಗವ ಬಂದ್ ಅಕ್ಕಂಗೆ, ‘ನಿನ್ನ ಕೊರ್ಸಂಡಿ ಬುದ್ಧಿ ಬುಡಿಕಿಲ್ಲೆ. ಪಾಪ ಕೂಸುಗೆ ಏಕೆ ಹಂಗ್‌ಸಿಯಾಂತ’ ಬೊಯ್ಯತಿತ್ತ್. ಅಕ್ಕ, ಉಗ್ಗವಂಗೆ ಮೊರೆ ಒರ್‌ಂಗ್‌ಸಿಕಂಡ್ ಹೋಗ್‌ತಿತ್ತ್. ನಂಗೆ ಉಗ್ಗವ ಸಮಧಾನ ಮಾಡ್ತಿತ್ತ್. ಅದ್ ನನ್ನ ತುಂಬಾ ಪ್ರೀತಿಂದ ಸಾಕ್‌ತಿತ್ತ್. ನನ್ನ ಅವ್ವನ ನೋಡ್ರೆ ನಾ ಹೆದ್ರ್‌ತಿದ್ದೆ. ಅವು ದರ್ಪದ ಹೆಂಗ್ಸ್. ಮಕ್ಕಳ ಬೆತ್ತ ತೋರ್ಸಿಯೇ ಬೆಳ್ಸ್‌ತಿದ್ದೊ. ಅದರ ಹಕ್ಕಲೆ ನಾ ಹೋಗ್‌ತಿಲ್ಲೆ. ಅವ್ಕನೂ ಕೈ ತುಂಬಾ ಕೆಲ್ಸ. ಮನೆ ತುಂಬಾ

ಜನಂಗ. ಆಳ್ ಕಾಳ್‌ಗ ದಿನಾ ನೆಂಟ್ರ್‌ಗ. ಬಂದವರ ಹೋದವರ ಸುಧಾರ್ಸುದರ್ಲೇ ಅವರ ದಿನ ಕಳ್ಯತಿತ್ತ್. ನಂಗೆ ಅವು ನನ್ನ ಹೆತ್ತ ತಾಯೀಂತ ಗೊತ್ತೇ ಇತ್ಲೆ.

ನಮ್ಮ ಮನೆಲಿ ಒಂದು ಕೊತ್ತಿ ಇತ್ತ್. ನಾ ಆ ಕೊತ್ತಿನ ತುಂಬಾ ಮುದ್ದು ಮಾಡ್ತಿದ್ದೆ. ಎರ್ಡ್ ಕಾಲ್ನ ನೀಂಡಿ, ಅದರ್ಲಿ ಕೊತ್ತಿನ ಮೊಲ್ಗಿಸಿ ಅದರ ಮೈ ಕೈ ಪೂಜ್‌ತಿದ್ದೆ. ಅದ್ ನಾ ಹೇಳ್ದಂಗೆ ಕೇಳ್ತಿತ್ತ್. ಅದರ ತಲೆಗೆ ಎಣ್ಣೆ ಹಾಕುದು, ತಲೆ ಬಾಚುದು, ಹಣೆಗೆ ಕುಂಕುಮದ ಬೊಟ್ಟು ಇಸುದು, ಹೂ ಮಾಲೆ ಮಾಡಿ ಅದರ ಕುತ್ತಿಗೆಗೆ ಹಾಕುದು– ಎಲ್ಲಾ ಮಾಡ್ತಿದ್ದೆ. ಅದ್ ನನ್ನೊಟ್ಟಿಗೇ ಇರ್ತಿತ್ತ್. ನನ್ನೊಟ್ಟಿಗೇ ಮೊಲ್ಗ್‌ತಿತ್ತ್. ಊಟ ಮಾಡಿಕನನೂ ನಾ ಒಂದು ಪುಂಡಿ ಉಂಬಕನ ಅದ್ಕೆ ಒಂದು ಪುಂಡಿ ಕೊಡ್ತಿದ್ದೆ. ಒಂದ್ ದಿನ ಅದ್ ಸತ್ತ್ ಹೋತ್. ಸಣ್ಣಕ್ಕ ಅದರ ಹಿತ್ಲ್‌ಲಿ ಗುಂಡಿ ತೆಗ್ದ್‌ದ್ ಹೂತ್ ಹಾಕ್ತ್. ನಾ ಬೇರೇಂತ ಮೊರ್ತೆ. ತುಂಬಾ ದಿನ ಅದರ ಕಳ್ಕಂಡ ದುಃಖಲೇ ಇದ್ದೆ.

ನಮ್ಮ ಹಟ್ಟಿಲಿ ತುಂಬಾ ದನಕರ್‌ಗ ಇದ್ದೊ. ಸಣ್ಣ ಸಣ್ಣ ಕರ್‌ಗಳ 'ಕಂಚಿಳ್'ಲಿ ಕಟ್ಟಿದ್ದೊ. ಕಂಚಿಳ್ನ ಗುಡ್ಸುದು, ಕರ್‌ಗಳ ಕಟ್ಟಿ ಹಾಕುದು, ಕರ್‌ಬುಡಿಕನ ಕರ್ಗಳ ಬುಡ್ದು, ನಂಗೆ ತುಂಬಾ ಇಷ್ಟದ ಕೆಲ್ಸಗ. ನಮ್ಮಲ್ಲಿ ಮನೆ ಕೆಲ್ಸಕ್ಕೆ 'ಚೆನ್ನು' ಇತ್ತ್. ಅದ್ ಎಲ್ಲಾ ಕೆಲ್ಸಮಾಡ್ತಿತ್ತ್. ಅವ್ವ ಮಕ್ಕಳ ಹಕ್ಕಲೆ ಕೆಲ್ಸ ಮಾಡ್ಸ್‌ತಿತ್ಲೆ. ಆದರೆನಾ ಇದರ ಎಲ್ಲಾ ಬೇಕಂತೇಳೇ ಪ್ರೀತಿಂದ ಆಗಾಗ ಮಾಡ್ತಿದ್ದೆ. ಏಕೇಂತೇಳ್ರೆ ಸಣ್ಣಂವ ಇರಿಕನನಾ ಹೆಚ್ಚ್‌ಹೊತ್ತ್ ಕಂಚಿಳ್‌ಲಿ, ಕರ್‌ಗಳ ಒಟ್ಟಿಗೇ ಇರ್ತಿದ್ದೆ. ನನ್ನ ಸಾಲೆಗೆ ಸೇರ್ಸಿಕನ ನಂಗೆ 6 ವರ್ಷ ಆಗುಟ್ಟು. ಅಷ್ಟೊತ್ತಿಗೆ ಮುಟ್ಟ ಕರ್‌ಗಳೇ ನನ್ನ ದೋಸ್ತಿಗ. ಕಂಚಿಳ್‌ಲಿ ಕಸ ಕಡ್ಡಿ ಇದ್ದರೆ ನಂಗೆ ಕುದ್ರಿಕೆ ಕಷ್ಟ ಆಗ್ತಿತ್ತ್. ನೀರೆಡಿ ಕೊಟಗೆ ಹಕ್ಕಲೆ ಮಾಡ್ ಇಳ್ಸಿ ಕಂಚಿಳ್ ಮಾಡಿದ್ದೊ. ಏಳೆಂಟ್ ಕರ್‌ಗಳ ಕಟ್ಟುವಸ್ಟ್ ಜಾಗೆ ಇತ್ತ್. ನಾ ಕರ್‌ಗಳ ತುಂಬಾ ಮುದ್ದು ಮಾಡ್ತಿದ್ದೆ. ಅಜ್ಜಪ್ಪ ಕರ್ಗಳ ಕಟ್ಟಿಕೇಂತ ನಮ್ಮ ಅಂಗ್ಡಿಂದ ಹುರಿ ಹಗ್ಗ ತಂದ್‌ದ್, ಅದರ ಕುತ್ತಿಗೆ ಭಾಗಕ್ಕೆ ತೆಳುನ ಸೀರೆ ತುಂಡುನ ಹರ್ದ್‌ದ್ ಸುತ್ತಿ, ಕುತ್ತಿಗೆಗೆ ಹುರಿ ಹಗ್ಗದ ಭಾಗ ತಾಂಗದಾಂಗೆ ಮೆತ್ತನೆ ಮಾಡ್ತಿದ್ದೊ. ಅದರ ಕುಣಿಕೆ ಗಂಟ್ ಹಾಕಿ, ಗಂಟ್ ಬಿಗ್ದ್ ಕುತ್ತಿಗೆ ಕಾಯದಾಂಗೆ ಒಂದು ಸಣ್ಣ ಗಂಟ್ ಹಾಕಿ ಕುಣಿಕೆ ಮಾಡ್ತಿದ್ದೊ. ಇದರೆಲ್ಲಾ ನೋಡಿ ನೊಡಿ ನಾನೇ ಕಲ್ತ್‌ಕಂಡ್, ದನಂಗ ಕರ್ ಹಾಕ್ದ ಕೂಡ್ಲೇ ಅಂಗ್ಡಿಗೆ ಓಡಿ ಹೋಗಿ ಬೊಳ್ಳಿ ತಂದ್, ಸೀರೆ ಹರ್ದ್ ಕುಣ್ಕೆ ರೆಡಿ ಮಾಡ್ತಿದ್ದೆ. ಕರ್ ಹಾಕಿದ ಮೇಲೆ ಕರ್ಗಳ ನಾಲ್ಕೈದು ದಿನ ಹೆಡಗೆಲಿ ಹಳೆ ಬಟ್ಟೆನೋ, ಗೋಣಿ ತುಂಡೋ ಹಾಕಿ ಅದರ್ಲಿ ಕರ್‌ನ ಮೊಲ್ಗಿಸ್‌ತಿದ್ದೊ. ಅದ್ ಚುಳ್ಳಿಕಂಡ್ ಓಡಿಕಾಕನ ಅದರ ಕುತ್ತಿಗೆಗೆ ಬೊಳ್ಳಿ ಹಾಕಿ ಕಟ್ಟಿದ್ದೊ. ಅವ್ವ ಕರ್ ಬುಟ್ಟ ಮೇಲೆ, ಹಟ್ಟಿ ಹಕ್ಕಲೆ ಇದ್ದ ಸರಳಿ ಮರಂದ ಸರ್ಳಿ ಸೊಪ್ಪು ತಕಂಡ್ ಅದರ ಸೆರ್ಗ್‌ಲಿ ಪೂಜಿ, ಹಾಲ್‌ನ ಚೊಂಬುಗೆ ಅದರ ಕೊಡಿನ ಮುಳ್ಗಿಸಿ ಹಟ್ಟಿ ತಿಂಟೆಲಿ ಇದ್ದ ಅಂಗಾರನ ಕಲ್ಲ್ ಮೇಲೆ ಇಸ್ತಿದ್ದೊ. ಅವ್ವ ಹಾಲ್ ತಕಂಡ್ ಒಳಗೆ ಹೋಗ್ತಿದ್ದೊ.

ಆಗ ಕರ್‌ಗ ದನದ ಮೊಲೆಲಿ ಉಳ್ದ ಹಾಲ್ನ ಕುಡ್ಕಂಡ್, ಹಾಲ್ ಬಾತ್ಲರೆ ಕೆಚ್ಚಲಿಗೆ ಮುಸುಂಡ್‌ನ ಗುದ್ದಿ ಗುದ್ದಿ ಹಾಲ್ ಕುಡ್ಯೊವ ಪೊರ್ಲುನ ಹಕ್ಕಲೆ ನಿಂತ್‌ಕಂಡ್ ನೋಡ್ತಿದ್ದೆ. ಅವ್ವ ಯಾಗೋಳು ಮೂರು ಮೊಲೆಗಳ್‌ಂದ ಮಾತ್ರ ಹಾಲ್ನ ಕರ್‍ಯೋತಿದ್ದೊ. ಒಂದು ಮೊಲೆನ ಕರಗೇಂತ ಬುಡ್ತಿದ್ದೊ. ಕರ್‌ಗ ಹೊಟ್ಟೆ ತುಂಬಿದ ಮೇಲೆ ಜಾಲ್ ಇಡೀ ನಾಲ್ಕ್ ಕಾಲ್‌ಲಿ ಚುಳ್ಳಿಕಂಡ್, ಚುಳ್ಳಿಕಂಡ್ ಓಡ್‌ತಿದ್ದೊ. ಓಡಿ ಓಡಿ ಸುಮಾರ್ ಹೊತ್ತಾಕನ ಅದ್ಕೆ ಸಾಕಾಗ್ತಿತ್ತ್. ಆಗ ನಾ ಅದರ ಹಿಡ್ದ್, ಕುತ್ತಿಗೆಗೆ ಬೊಳ್ಳಿ ಹಾಕಿ, ಕಂಚ್‌ಳ್‌ಲಿ ಕಟ್ಟಿ ಒಳಗೆ ಬಾತಿದ್ದೆ. ಕರ್ಗಳ ಈ ಬಾಲಲೀಲೆನ ಕಣ್ತುಂಬಾ ನೊಡಿ ಸಂತೋಷ ಪಡ್ತಿದ್ದೆ. ಹಟ್ಟಿಲಿ ಒಮ್ಮೊಮ್ಮೆ ಹೋರಿಗ ದನಂಗಳ ಮೇಲೆ ಹತ್ತಿ ಉಪದ್ರ ಕೊಡ್ದರ ನೋಡಿ, ನಾ ಓಡಿ ಹೋಗಿ ಅಜ್ಜಪ್ಪನ ಕರ್ಕಂಡ್ ಆ ಹೋರಿ, ದನಕ್ಕೆ ಉಪದ್ರ ಕೊಟ್ಟದೆ ಕಟ್ಟಿ ಹಾಕೀಂತ ಹೇಳ್ತಿದ್ದೆ. ಆಗ ಅಜ್ಜಪ್ಪ 'ಅದ್ ದನಂಗ ಆಟ ಆಡ್ದು. ಅದಕ್ಕೆ ಹರ್‌ಂಬುಳಿ ಹತ್ತುದೂಂತ ಹೇಳ್ವೆ.' ಎಂತ ಹೇಳಿ ನಂಗೆ ಸಮಾಧಾನ ಮಾಡ್ತಿದ್ದೊ. ದನಂಗ ಕರ್ ಹಾಕುದರ ನಾ ಎಷ್ಟೋ ಸರ್ತಿ ಸಣ್ಣದಿರಿಕನ ನೋಡ್ಯಳೆ. ಕರ್ ಹಾಕಿದ ಮೇಲೆ ಅದರ ಕಸ ಬೀಳಿಕನ ಮುಟ್ಟ, ನನ್ನ ಅಲ್ಲಿ ಅವ್ವ ಪಾರ ಕುದ್ರ್‌ಸ್‌ತಿದ್ದೊ. ಕಸ ಬಿದ್ದ ಕೂಡ್ಲೆ ಅವ್ಕೆ ತಿಳ್ಸೋಕೂಂತ. ದನಂಗ ಕಸ ತಿಂದರೆ ಹಾಲ್ ಕಮ್ಮಿ ಆದೆ ಗಡ. ನಾ ಪಾರ ಕುದ್ದ್, ಕಸ ಬಿದ್ದ ಕೂಡ್ಲೇ ಅವ್ವಂಗೆ ಓಡಿ ಹೋಗಿ ಹೇಳ್ತಿದ್ದೆ. ಅಜ್ಜಪ್ಪ ಹಟ್ಟಿಂದ ದನಂಗಳ ಬುಟ್ಟ್, ಉರ್ಗೆಲ್ ತೆಗ್ದ್‌ದ್ ಹಿತ್ಲ್‌ಂದ ಹೊರಗೆ ಬುಟ್ಟ್ ಧರ್ಮಸ್ಥಳ ಬಂಗ್ಲೆವರೆಗೆ ಹೊಡ್ಕಂಡ್ ಹೋಗ್ತಿದ್ದೊ. ಆಗ ನಮ್ಮ ಮನೆ ಹಿಂದೆ ಎಲ್ಲಾ ಕಾಡ್, ಬಲ್ಲೆಗ ಇದ್ದೊ. ಆಗ ದನಗಳೊಟ್ಟಿಗೆ ನಾನೂ ಒಂದು ಕೋಲ್ ಹಿಡ್ಕಂಡ್ ಅಜ್ಜಪ್ಪನೊಟ್ಟಿಗೆ ಹೋಗ್ತಿದ್ದೆ.

ನಮ್ಮ ಮನೆ ಹಕ್ಕಲೆ ಕೊಟಗೆ ಇತ್ತ್. ಅದರ ಒಂದು ಪುಡೆಲಿ ಕೋಳಿ ಗೂಡು ಇತ್ತ್. ಅದರ್ಲಿ ಹತ್ತಿಪ್ಪತ್ತ್ ಕೋಳಿಗಳ ಕೂಡ್‌ತಿದ್ದೊ. ಮೊರಿ ಇದ್ದ ಹೇಂಟೆಗಳ ಬೇರೆ ಬೇರೆ ಕೂಂಟಗೇಲಿ [ಕೂಟಂಗೆ= ಕೋಳಿ ಮುಚ್ಚುವ ಬೆದ್ರ್‌ಂದ ಮಾಡಿದ ಮುಚ್ಚುಳ] ಮುಚ್ಚಿ ಹಾಕ್ತಿದ್ದೊ. ಬೊಳ್ಪುಗೆ ಕೋಳಿ ಗೂಡ್‌ಂದ ಗೂಡ್‌ನ ಬಾಗ್ಲ್ ತೆಗ್ದ್ ಕೋಳಿಗಳ ಹೊರಗೆ ಬುಡ್ದು ನನ್ನ ಕೆಲ್ಸ. ಅಂಗಳ ತುಂಬಾ ಭತ್ತ ಮತ್ತೆ ಕಡ್ಯಕ್ಕಿ ಹಾಕಿಕನ ಕೋಳಿಗ ಎಲ್ಲಾ ಬೇರೆ ಬೇರೆ ಸೊರಲಿ ಕ್ಕೊ, ಕ್ಕೊ, ಕ್ಕೊ ಎಂತ ಹೇಳಿಕಂಡ್ ಒಂದರ ಮೇಲೆ ಒಂದ್ ಬಿದ್ದ್‌ಕಂಡ್ ಅಂಬೆರ್ಪು, ಅಂಬೆರ್ಪುಲಿ ತಿನ್ಸ್‌ನ ತಿಂಬೋದರ ನೋಡ್ದೇ ಒಂದು ಕುಸಿನ ಕೆಲ್ಸ. ಅದರೆಲ್ಲಾ ನೋಡಿಕನ ನಂಗೆ ತುಂಬಾ ಕುಸಿ ಆಗ್ತಿಗ್ತ್. ಮೊಟ್ಟೆ ಇಸುವ ಹೇಂಟೆಗಳಿಗೆ ಕೊಟೆಗೆಲಿ ನಾಕಾರ್ ಕಡೆ ಹೆಡಿಗೆಲಿ ಬೈ ಹುಲ್ಲು ಹಾಸಿ, ಮಾಡಿಗೆ ತೂಗಿಸಿ ಹಾಕ್ತಿದ್ದೊ. ಹೇಂಟೆಗ ಮೊಟ್ಟೆ ಇಸಿಕೆ, ಕಾಂಕ್ರ್‌ಸಿಕಂಡ್ ಜಾಗೆ ಹುಡ್ಕಿಕಂಡ್ ಅತ್ತ ಇತ್ತ ತಿರ್ಗಿಕನ ಕೋಳಿನ ಹಿಡ್ದ್‌ದ್, ಒಂದು ದಿನ ತೂಗಿ ಹಾಕಿದ ಹೆಡಗೆಲಿ ಕುದ್ರಿಸಿರೆ ಸಾಕ್, ಆ ಮೇಲೆ ಅದ್ ದಿನಾ ಅಲ್ಲಿಗೇ ಬಂದ್‌ದ್ ಮೊಟ್ಟೆ ಇಸಿದೆ. ಎಲ್ಲಾ ಮೊಟ್ಟೆ ಇಸಿ ಆದ ಮೇಲೆ, ಕಾಪುಗೆ

ಅದರ ಮೇಲೆ ಕುದ್ದದೆ. ಆಗ ಹೇಂಟೆಗಳ ಮೈ ಬಾಳ ಬಿಸಿ ಇದ್ದದೆ. ದಿನಕ್ಕೊಮ್ಮೆ ಅದ್ ಕಾಂಕ್ರ್‌ಸಿಕಂಡ್ ಕೆಳಗೆ ಇಳ್ದದೆ. ಅದರ ನೋಡಿ ನಾವು ಆಗ ಅದ್ಕೆ ತಿಂಬಕೆ ಕಡ್ಯಕ್ಕಿ ಹಾಕಿರೆ ಹೊಟ್ಟೆ ತುಂಬಾ ತಿಂದದ್ ತಿರ್ಗಿ ಹೆಡಗೆ ಹತ್ತಿ ಕಾಪುಗೆ ಕುದ್ದದೆ. ಕುಡ್ಯಕೆ ಒಂದು ಚಿಪ್ಪಿಲಿ ನೀರ್ನ, ಹೆಡಗೆಲಿ ಇಸಿರೆ ಆತ್. ಕಾಪು ಕುದ್ದ್ ಇಪ್ಪತ್ತೊಂದ್ ದಿನ ಆಕಾಕನ ಕೋಳಿ ಮೊರಿಗ ಮೊಟ್ಟೆ ಒಡ್ದ್‌ದ್ ಹೊರಗೆ ಬಂದವೆ. ಆಗ ಮೊರಿಗ ಮೊರ್ದುವ ಚೀಂವ್ ಚೀಂವ್ ಸದ್ದ್‌ಂದ ನಾವ್ಗೆ ಗೊತ್ತಾದೆ. ಒಂದೆರ್ಡ್ ದಿನಲಿ ಎಲ್ಲಾ ಮೊಟ್ಟೆಗ ಒಡ್ದ್‌ದ್ ಮೊರಿಗ ಆದವೆ. ಆಗ ಅವ್ವ ಕಾಪುನ ಹೆಡಗೆನ ಬೊಳ್ಳಿನ ಕೊಯ್ದ್‌ದ್ ಮಾಡ್‌ನ ಅಡಿಂದ ಮೆಲ್ಲಂಗೆ ಕೆಳಗೆ ಇಳ್ಸುವೆ. ಆ ಸಮಯಲಿ ಹೆಡಗೆ ಇಳ್ಸಿಕೆ ಸಾಯ ಮಾಡಿಕೆ, ಅತ್ತಿಗೆ– ಅಕ್ಕ ತಯಾರಿದ್ದವೆ. ನಾವು ಮಕ್ಕ, ಕಾಪು ಇಳ್ಸಿದ ಕೂಡ್ಲೇ ಮೊರಿಗಳ ನೋಡಿಕೆ ಓಡೋಡಿ ಬಂದವೆ. ಹೇಂಟೆನ ಎರ್ಡ್ ರೆಂಕೆಲಿ ಮೇಲೆ ಎತ್ತಿ, ಅವ್ವ ಅದರ ಇಜ್ಜೆಲಿಲಿ ಕುದ್ರುಸುವೆ. ಆಗ ಹೇಂಟೆ ಮೊರಿಗಳ ಹಕ್ಕಲೆ ಓಡಿಕಂಡ್ ಬಂದದೆ. ಅದರ ಹಿಡ್ಯಕೆ ಹೋದರೆ ಕೊಡ್ಪಿಕೆ ಬಂದದೆ. ಆಗ ಯಾರಾದರೊಬ್ಬ ಹೇಂಟೆನ ಹಿಡ್ಕಂಡವೆ. ಆಗ ಹೇಂಟೆನ ಮೈ ಮೇಲಿದ್ದ ಕೋಳಿ ಹೇನ್‌ಗ ನಮ್ಮ ಕೈ ಮೈ, ಮೋರೆಗೆಲ್ಲಾ ಹತ್ತಿವೆ. ಆಗ ಹೇಂಟೆನ ಹಿಡ್ದವು 'ನೀಹಿಡ್ಕ, ನೀಹಿಡ್ಕಾ'ಂತ ಒಬ್ಬರ ಕೈಗೆ ಒಬ್ಬದಾಟ್ಸ್‌ತಿದ್ದೊ. ಕೈಮೈಲಿಹರ್ದ ಕೋಳಿಹೇನ್‌ಗ ಕಣ್ಣಿಗೆ ಕಾಂಬತಿತ್ಲೆ. ಆಗ ನಾವು ಕೈಮೈ ತೊರ್ಸಿಕಂಡ್, ಮೊರಿಗಳ ನೋಡುವ ಆಸೆಂದ ಅಲ್ಲೆ ನಿಲ್ತಿದ್ದೊ. ಹೆಡಗೆಲಿ ನೋಡಿಕನ ಹತ್ತಿನ ಉಂಡೆನ ಹಾಂಗೆ ಕೋಳಿ ಮೊರಿಗ ಬಣ್ಣ ಬಣ್ಣಲಿ ಕಂಡವೆ. ಕೆಲವು ಮೊಟ್ಟೆಗ ಇಡಿ ಇದ್ದವೆ. ಕೆಲವು ಮೊಟ್ಟೆಗ ಹಾಳಾಗಿದ್ದವೆ. ಹಾಳಾಗಿದ್ದ ಮೊಟ್ಟೆನ ಹಂದಾಡ್ಸಿಕನ ಅದ್ ಗೊಳೊಗೊಳೊ ಹೇಳ್ದೆ. ಅದರ ಅವ್ವ ಹೆರ್ಕಿ ಇಟ್ಟವೆ. ಗಟ್ಟಿ ಇದ್ದ ಮೊಟ್ಟೆನ ಮೆಲ್ಲಂಗೆ ಒಡ್ದರೆ ಒಳಗೆ ಮೊರಿಗ ಇದ್ದವೆ. ನಿತ್ರಾಣಲಿ ಇದ್ದ ಮೊರಿಗಳ ತೆಗ್ದ್‌ದ್, ಇಜ್ಜೆಲಿಲಿ ಇದ್ದ ಭತ್ತ ಮಿಜುವ ಗುಂಡಿಲಿ ಇಸಿ, ಮೇಲೆ ತಡ್ಪೆನ ಕಂಕಣೆ ಹಾಕಿ, ಒಂದು ಚಿಪ್ಪಿನ ತಡ್ಪೆ ಮೇಲೆ ಕಂಕಣೆ ಹಾಕಿ ಕೈಲಿ ಸುತ್ತು ಉಜ್ಜ್‌ತಿದ್ದೊ. ಹಂಞ ಹೊತ್ತಾಕನ ತಡ್ಪೆನ ತೆಗ್ದ್‌ದ್ ನೋಡಿರೆ ಕೋಳಿ ಮೊರಿ ಉಸಾರಾಗ್ತಿತ್ತ್. ಅದರ ಜಾಲ್‌ಲಿ ಬುಟ್ಟರೆ ಅದ್ಕೆ ನಡ್ಯಕಾಗ್ತಿತ್ತ್. ನಾವೆಲ್ಲಾ ಈ ಚೋದ್ಯನ ಬೆರ್ಗ್‌ಲಿ ನೋಡ್ತಿದ್ದೊ. ಕೋಳಿ ಹೇಂಟೆ ಮತ್ತೆ ಅದರ ಮೊರಿಗಳ, ಬೇರೆ ಹೆಡಗೆಲಿ ಬೈ ಹುಲ್ಲು ಹಾಕಿ ಕುದ್ರಿಸಿ ಕೂಂಟಗೆ ಮುಚ್ಚುತಿದ್ದೊ. ಕಾಪುನ ಹೆಡಗೆನ ದೂರಲಿ ತೆಕೊಂಡೋಗಿ ಕಂಕಣೆ ಹಾಕ್ತಿದ್ದೊ. ಆ ಸಮಯಲಿ ಕಾಪುನ ಹೆಡಗೆಲಿ ತುಂಬಾ ಕೋಳಿಹೇನ್‌ಗ ತುಂಬಿರ್ತಿದ್ದೊ. ಆಗ ಅದರ ಸುಟ್ಟು ಹಾಕ್ತಿದ್ದೊ. ಕೋಳಿ ಹೇನ್‌ಗ ನಮ್ಮ ಮೈ ಮೇಲೆಲ್ಲಾ ಹರ್ಯತ್ತಿತ್ತ್. ಅದರ ತಡ್ಯಕಾಗದೆ ನಾವು ನೀರೆಡಿಗೆ ಓಡಿ ಹೋಗಿ, ಮೈಗೆ ಬಿಸಿ ಬಿಸಿ ನೀರ್ ಹ್ಯೊಕೊಂಬೊತಿದ್ದೊ. ಒಂದೆರ್ಡ್ ದಿನಲಿ ಕೋಳಿ ಮೊರಿಗ ನುಚ್ಚು ಅಕ್ಕಿನ ಕುಕ್ಕಿ ಕುಕ್ಕಿ ತಿಂಬಕೆ ಸುರು ಮಾಡ್ತಿದ್ದೊ. ಹೇಂಟೆ ಮೊರಿಗಳ ಬಾಳ ಜಾಗ್ರತೆಲಿ ಸಾಕ್‌ತಿತ್ತ್. ಕಕ್ಕೆಗ ಮೊರಿಗಳ ಕುಕ್ಕಿಗೆ ಬಾಕನ ಹೇಂಟೆ

ಕರ್ಕಶ ಶಬ್ದಲಿ ಅರ್ಚಿಕಂಡ್ ಮೊರಿಗಳಿಗೆ ಸೂಚನೆ ಕೊಡ್ತಿತ್ತ್. ಆಗ ಮೊರಿಗ ಸಿಕ್ಕಿದಲ್ಲಿ ಅಡ್ಗ್‌ತಿದ್ದೊ. ಮತ್ತೆ ಕೋಳಿ ಕರ್ಯಕಾಕನ ಹೊರಗೆ ಬಾತಿದ್ದೊ. ಸಣ್ಣದಿರಿಕನ ಇದರೆಲ್ಲಾ ನಾ ನೋಡ್ತಿದ್ದೆ. ಅದ್ ಮೊರಿಗಳ ಸಾಂಕುದರ ನೋಡಿ ಸೋಜಿಗ ಪಡ್ತಿದ್ದೆ.

ಒಂದು ದಿನ ಬೊಳ್ಳುಗೆ ಕೋಳಿಗಳ ಗೂಡ್‌ಂದ ಕ್ಕೊ, ಕ್ಕೊ, ಕ್ಕೋಂತ ಕೋಳಿಗ ಎಲ್ಲಾ ಬೊಬ್ಬೆ ಹೊಡ್ದ್ ಅರಿಂಚುವ ಸದ್ದ್ ಕೇಳಿಸ್ತ್. ಅವ್ವ ಓಡಿ ಹೋಗಿ ಕೋಳಿ ಗೂಡ್‌ನ ಬಾಕಿಲ್ ತೆಗ್ದೊ. ಕೋಳಿಗ ಎಲ್ಲಾ ಅಂಬೆರ್ಪುಲಿ ಹಾರಿ ಕಂಡ್, ಅವ್ವನ ಮೈ ಮೇಲೆ, ಹೊರಗೆ ಬಿದ್ದೊ. ಅವ್ವ ಪೆರ್ಚಿ ಬಿದ್ದ್‌ದ್ ಹಿಂದಕ್ಕೆ ಹಾರ್‍ದೊ. ನೋಡಿರೆ ಕೋಳಿಗ ಜಾಲಲಿ ಸಿಕ್ಕಿದಲ್ಲೆಲ್ಲಾ ಗಾಬೆರಿಲಿ ಅತ್ತಿತ್ತ ಓಡ್ತಿದ್ದೊ. ಅವ್ವನ ಪ್ರೀತಿನ ಹೇಂಟೆ ಕರ್ಬೊಳ್ಳೆ, ಮತ್ತೊಂದು ಕೆಂದ ಗಿಡಿಯ ಹುಂಜ ಲಾಖಿ ಅವ್ವನ ಕಣ್ಣಿಗೆ ಬೀತಿಲ್ಲೆ. ಈ ಗದ್ದಳನ ಕೇಳಿ ನಾವೆಲ್ಲಾ ಹೊರಗೆ ಓಡಿ ಬಂದ್ ಕೋಳಿ ಗೂಡ್‌ನ ಹಕ್ಕಲೆ ನಿಂತೊ. ಅವ್ವ ಒಳಗೆ ಓಡಿ ಹೋಗಿ ಬೆಟ್ರಿನ ಲೈಟ್ ತಂದೊ. ಗೂಡ್‌ನ ಒಳಗೆ ಲೈಟ್ ಹಾಕಿ ಬೊಗ್ಗಿ ನೋಡ್ದೊ. ಕತ್ತಲೆಲಿ ಸುರುಗೆ ಅವ್ವಂಗೆ ಏನೂ ಕಾಂಬತಿಲ್ಲೆ. ಮತ್ತೆ ಲೈಟ್‌ನ ಗೂಡ್‌ನ ಒಳಗೆ ಸುತ್ತೂ ಓಡ್ಸಿ ನೋಡ್ದೊ. ಅಷ್ಟಾಕನ ಗೂಡ್‌ನ ಒಳಗೆ 'ಬುಸ್‌ಬುಸ್ಸ್'ಂತ ಸದ್ದ್ ಕೇಳ್ತ್. ಅವ್ವ ಹೆದ್ರಿದ್ 'ಹಾವು ಹಾವೂ'ಂತ ಹೇಳಿ ಓಡಿ ಬಂದೊ. ಇದರ ಕೇಳಿ ಅಪ್ಪ, ಅಜ್ಜಪ್ಪ, ಅಣ್ಣ □ ಎಲ್ಲಾ ಓಡಿ ಬಂದೊ. ಅಪ್ಪ ಅವರ ಉದ್ದದ ಆರ್ ಬೆಟ್ರಿ ಇದ್ದ ಲೈಟ್‌ನ ಹಾಕಿ ನೋಡ್ದೊ. ಒಂದು ನಾಗರ ಹಾವು ಗೂಡ್‌ನೊಳಗೆ ಹೆಡೆ ಎತ್ತಿಕಂಡ್ ಇತ್ತ್. ಅದರ ಸುತ್ತ ನಾಕಾರ್ ಕೋಳಿಗ ಸತ್ತ್‌ದ್ ಬಿದ್ದೊಳೊ. ಎಲೌವ್ಕು ಏನ್ ಮಾಡ್ದೂಂತ ಗೊತ್ತಾತ್ಲೆ. ಅಪ್ಪ ಒಂದು ಉದ್ದದ ಗಳೆನ ಮೆಲ್ಲಂಗೆ ಒಳಗೆ ಹಾಕಿ ಹಾವುಗೆ ಮುಟ್ಟಿಸಿದೊ. ಅದ್ ತಲೆನ ನೆಲಕ್ಕೆ ಆಗಾಗ ಬೊಡ್ಡ್‌ಕಂಡ್ ಅಲ್ಲೆ ಕುದ್ದತ್. ಇದೊಳ್ಳೆ ಗ್ರಾಚಾರ ಏನ್ ಮಾಡ್ದು? ನಾಗರ ಹಾವ್ನ ಬೊಡ್ಯಕೆ ಬೊತ್ತ್. ಅದ್ ದೇವ್ರ ಹಾವು. ಅಪ್ಪಂಗೆ ಹಾವ್ನ ದಿಗ್ಬಂಧ ಮಾಡುವ ಮೊಂತ್ರ ಗೊತ್ತಿತ್ತ್. ಅವು ಅವ್ವನ ಹಕ್ಕಲೆ ಬೆಳ್ತಕ್ಕಿನ ಒಂದು ಪುಂಡಿ ತಾಕೆ ಹೇಳ್ದೊ. ಅವ್ವ ತಂದ್ ಕೊಟ್ಟೊ. ಅದರ ಮೊಂತ್ರಿಸಿ ಗೂಡ್‌ನ ಎದ್ರ್‌ಗೆ ಹರ್‌ಂಡಿದೊ. 'ಮಕ್ಕಳೇ, ಎಲ್ಲಾ ಒಳಗೆಹೋಗಿ. ಅದ್ ಅದರಷ್ಟಕ್ಕೆ ಹೊರ್ಟ್ ಹೋದೇ'ಂತ ಹೇಳ್ದೊ. ನಾವೆಲ್ಲಾ ಹೆದ್ರಿಕಂಡ್ ಮನೆ ಒಳಗೆ ಹೋದೊ. ನಾವು ಆಗಾಗ ಹೊರಗೆ ಬಂದ್‌ದ್ ನೋಡ್ತಿದ್ದೊ. ನಾವುಗೆ ಎಂತದ್ ಕಾಂಬತಿಲ್ಲೆ ಸುಮಾರು 11 ಗಂಟೆಗೆ ನೊಡಿಕನ ಹಾವು ಮೆಲ್ಲಂಗೆ ಗೂಡ್‌ಂದ ಹರ್ದ್‌ಕಂಡ್ ಬಂದ್ ಹರ್‌ಂಡಿದ ಅಕ್ಕಿ ಇಲ್ಲದ ಕಡೆ ಹರ್ದ್ ಕಂಡ್ ಜಾಲ್‌ಲಿ ಹೋಗ್ತಿತ್ತ್. ಆಗ ಎಲೌವ್ಕೆ ಸಮಾಧಾನ ಆತ್. ಹಾವು ಹೊರಗೆ ಹೋದ ಮೇಲೆ ಗೂಡ್‌ನ ಒಳಗೆ ಲೈಟ್ ಹಾಕಿ ನೋಡಿಕಾಕನ ಐದಾರ್ ಕೋಳಿಗ ಸತ್ತ್ ಬಿದ್ದೊಳೊ. ಅದರ ನೊಡಿ ಅವ್ವ ಒಂದು ಉದ್ದ ಕೈನ ದೊಡ್ಡ ಗೋಂಕ್ರ್ ಚಿಪ್ಪಿಂದ ಮಾಡ್ದ ಸೆಡೆನ ಒಂದು ಕೋಲ್‌ಗೆ ಕಟ್ಟಿ, ಗೂಡ್‌ನೊಳಗೆ ಹಾಕಿ ಆ ಸತ್ತ ಕೋಳಿಗಳ ಎಳ್ದ್‌ದ್ ಹೊರಗೆ ಹಾಕಿದೊ. ಹಿತ್ಲ್‌ಲಿ ದೊಡ್ಡ ಗುಂಡಿ

ತೆಗ್ದ್, ಅದರೊಳಗೆ ಹಾಕಿ ಮುಚ್ಚಿದೊ.

ಒಂದ್ ದಿನ ಬೊಳ್ಪುಗೆ ಉಗ್ಗವ ನನ್ನ ಮೈ ಹಂದಾಡ್ಸಿ ಎದ್ರಿಸಿದೆ. ನಾ ಸಣ್ಣಂವ ಇರಿಕನ ಉಗ್ಗವನೊಟ್ಟಿಗೆ ಮೊಲ್ಗ್ತಿದ್ದೆ, 'ನೋಡು ಮೋಳು, ನಿಂಗೆ ಒಬ್ಬ ತಮ್ಮ ಬಂದುಟ್ಟು, ಎದ್ರ್‌ಂತ ಉಗ್ಗವ ಕರ್ದದೆ. ಅದ್ ನನ್ನ ಎದ್ರಿಸಿಕಂಡ್ ಕೈ ಹಿಡ್ದ್ ಕಂಡ್ ಕರ್ಕಂಡ್ ಹೋತ್. ನಾ ಎದ್ದ್‌ದ್ ಎರ್ಡ್ ಕೈಯಿಂದ ಕಣ್ಣ್ ಉಜ್ಜಿಕಂಡ್ ಉಗ್ಗವನ ಹಿಂದೆ ಹೋದೆ. ಕೋಣೆಲಿ ಅವ್ವ ಮೊಲ್ಗ್ಯೊಳೊ. ಅವ್ವನ ಹಕ್ಕಲೆ ಒಂದು ಬೊಂಬೆ ಹಾಂಗೆ ಇದ್ದ ಕೂಸು ಮೊಲ್ಗಿಟ್ಟು. ಅದರ ನೋಡಿ ಹೆದ್ರಿ ನಾ ಹಿಂದೆ ಹೋದೆ. ಅವ್ವ ಹೇಳ್ವೆ, 'ಹೋಗು, ಹೋಗು, ಕೈ ಮೋರೆ ತೊಳ್ಕಂಡ್ ಬಾ. ಈಗ ಮುಟ್ಟಬಾಡ'ಂತ. ಉಗ್ಗವ ನನ್ನ ನೀರೆಡಿ ಕೊಟಗೆಗೆ ಕರ್ಕೊಂಡ್ ಹೋದೆ. ಉಪ್ಪುಹಾಕಿ ಗುದ್ದಿ ಇಸಿದ ಉಮಿಕೆರಿ ಮೊಸಿನ ಮಡ್ಕೆಂದ ತೆಗ್ದ್‌ದ್, ಹಲ್ಲ್ ಉಜ್ಜಿಸಿದೆ. ಕೈ ಕಾಲ್, ಮೋರೆ ತೊಳ್ಸಿ, ಅವ್ವನಹಕ್ಕಲೆ ಕಳ್ಸಿದೆ. ನಾ ಹೆದ್ರಿಕಂಡ್ ಅವ್ವನ ಹಕ್ಕಲೆ ಹೋನೆ.

'ಇಂದಾ, ನೋಡು. ಇಂವ ನಿನ್ನ ತಮ್ಮ ಬಲಾ. ಇಂವನ ಮೆಲ್ಲಂಗೆ ಮುಟ್ಟೊಕು. ಗಟ್ಟಿ ಹಿಡ್ಯಕೆ ಬೊತ್ತು. ದೂರಂದಳೇ ನೋಡೂಂತ' ಹೇಳ್ದೊ. ನಾನೋಡಿಕನ ಕಣ್ಣ್‌ಮುಚ್ಚಿಕಂಡ್, ಕೈನ ಮುಷ್ಟಿ ಹಿಡ್ಕಂಡ್, ಒಂದು ಮೊರಲಿ ಬಟ್ಟೆ ಹಾಸಿ, ಅದರ್ಲಿ ಮಲ್ಕಂಡಿತ್ತ್. ನಾ ದೂರಂದ ನೋಡಿ ಹೊರಗೆ ಓಡಿ ಬಂದೆ.

ಹಂಞ ಹೊತ್ತ್‌ಲಿ ಮನೆನ ಹಿಂದೆಂದ ಕೂಸ್ ಮೊರ್ಡುವ ಸದ್ದ್ ಕೇಳಿಸ್ತ್. ನಾ ಅಲ್ಲಿಗೆ ಓಡಿದೆ. ಮಡ್ಲ್ ಮತ್ತೆ ತಟ್ಟಿಂದ ಮನೆ ಹಿಂದೆ ಒಂದು ಸಣ್ಣ ಕೋಣೆ ಹಂಗೆ ಮಾಡಿದ್ದೊ. ಅದರ ಬಾಕಿಲಿಗೆ ಕಾಸರಕದ ಎರ್ಡ್ ಗೆಲ್ಲ್‌ಗಳ ಸಿಕ್ಕಿಸಿದ್ದೊ. ನೆಲಲಿ ಎರ್ಡ್ ಸಣ್ಣ ಗೂಂಟಗಳ ಹಾಕಿ ಅದಕ್ಕೆ ಒಂದು ಅಡ್ಡ ಇಸಿ, ಹಿಂದೆ ಒಂದು ಮಣೆನ ಮೇಲೆ ಉಗ್ಗವ ಕುದ್ದಿತ್ತ್. ಅದ್ ಎರ್ಡ್ ಕಾಲ್‌ಗಳ ಗೂಟಗಳಿಗೆ ಹಾಕಿದ ಅಡ್ಡದ ಮೇಲೆ ನೀಂಡಿ ಇಟ್ಟಿತ್ತ್. ಉಗ್ಗವನ ನೀಂಡಿದ ಕಾಲ್‌ಗಳ ಮೇಲೆ ಕೆಂಪು ಕೆಂಪಾಗಿ ಮಾಸದ ಮುದ್ದೆ ಹಾಂಗಿದ್ದ ಕೂಸು ಮೊಲ್ಗಿತ್ತ್. ಹೊರಗೆನ ಚಳಿಗೆ ಕೂಸು ಮೊರ್ಡ್‌ತಿತ್ತ್. ಉಗ್ಗವನ ಹಕ್ಕಲೆ ಒಂದು ಮೊಣ್ಣ್‌ನ ಮೊಡ್ಕೆ ಇತ್ತ್. ಅದರ್ಲಿ ಬಿಸಿ ಬಿಸಿ ಕಸಾಯದ ಬಿಸ್ನೀರ್ ಇತ್ತ್. ಆ ನೀರ್ನ ಒಟ್ಟೆ ಚಿಪ್ಪಿಲಿ ತೆಗ್ದ್‌ದ್, ತೆಗ್ದ್‌ದ್ ಉಗ್ಗವ ಕೂಸ್‌ನ ಮೈಗೆ ಹಾಕ್‌ತಿತ್ತ್. ಒಟ್ಟೆ ಚಿಪ್ಪಿನ ಒಟ್ಟೆಗೆ ಒಂದು ಕೈ ಬೆರ್ಳ್‌ನ ಅಡ್ಡ ಇಸಿ, ನೀರ್ನ ತೆಗಿತಿತ್ತ್. ಕೂಸ್ನ ಮೈಗೆ ನೀರ್ ಹಾಕಿಕನ ಚಿಪ್ಪಿನ ಒಟ್ಟೆಂದ ಕೈ ಬೆರಳ್‌ನ ತೆಗಿತಿತ್ತ್. ಆಗ ನೀರ್ ಧಾರೆನ ಹಾಂಗೆ ಒಂದೇ ಕಡೆಗೆ ಬೀಳ್ತಿತ್ತ್. ಕೂಸುನ ಪ್ರತಿ ಒಂದು ಅಂಗಗಳ ಒಂದು ಕೈ ಬೆರ್ಳ್‌ಲಿ ಒತ್ತಿ ಹಿಡ್ದ್, ಮೂರ್ ಮೂರ್ ಚಿಪ್ಪಿ ನೀರ್ನ ಗೋಂಚಿ, ಗೋಂಚಿ ಹೊಯ್ಯತಿತ್ತ್. ಚಳಿಗೆ ಮೊರ್ಡ್‌ತಿದ್ದ ಕೂಸು, ಬಿಸ್ನೀರ್ ಮೈಗೆ ಬಿದ್ದ ಹಾಂಗೆ, ಮೊರ್ಡುದರ ನಿಲ್ಸಿ ಮೆಲ್ಲಂಗೆ ನಿದ್ದೆ ಮಾಡಿಕೆ ಸುರು ಮಾಡ್ತ್. ನಾ ಉಗ್ಗವ ಮಿಾಸುದರನೇ ನೋಡಿಕಂಡ್ ನಿಲ್ತಿದ್ದೆ. ಅದ್ ಮಿಾಸುವ ಕೈ ಚಳಕ ನೋಡಿ ನಂಗೆ ಸೋಜಿಗ ಆಗ್ತಿತ್ತ್. ನಂಗೆ ಕೂಸುನ ಮುಟ್ಟೊಕೂಂತ ಆಸೆ ಆತ್. ನಾ ಮೆಲ್ಲನೆ

ಉಗ್ಗವನ ಹಕ್ಕಲೆ,

'ಉಗ್ಗವಾ, ಕೂಸುನ ನಾ ಮುಟ್ಟಿನೆ ಆಗದೋ'ಂತ ಕೇಳ್ದೆ. ಅದ್ಕೆ ಉಗ್ಗವ, ಮುಟ್ಟು, ಮುಟ್ಟು. ಇಂವ ನಿನ್ನ ತಮ್ಮ ಅಲ್ಲನೋ ಮೆಲ್ಲಂಗೆ ಮುಟ್ಟು ಬಲಾ. ಅದ್ ಹೂ ಕೂಸು. ಅದ್ಕೆ ಬೇನೆ ಆದೂಂತ' ಹೇಳ್ತ್.

ನಾ ಮೆಲ್ಲಂಗೆ, ಮೆತ್ತಂಗೆ ಅದರ ಕೈ ಹಿಡ್ದೆ. ಹೂನ ಮುಟ್ಟಿದಾಂಗೆ ಆತ್. ನಂಗೆ ಬಾಳ ಕುಸಿ ಆತ್. ಅದರ್ಂದ ಮೇಲೆ ದಿನಾ ನಾ ಕೂಸುನ ಮಿಾಸಿಕನ ಅಲ್ಲಿ ಹಾಜಿರ್. ಎರ್ಡ್ ಹೊತ್ತು ಕೂಸ್ನ ಮಿಾಸ್‌ತಿದ್ದೊ.

ಮಾರ್ಣೆ ದಿನ ಪೆದ್ದೊೞ್ತಿ ನೋಡಿಕೇಂತ ಅಣ್ಣ, ಅಕ್ಕನ ಗಂಡನ ಮನೆಗೆ ಹೋಗಿ, ಅಕ್ಕನ ಕರ್ಕಂಡ್ ಬಾತ್. ಹದ್ನಾಕ್ ವರ್ಸದ ಅಕ್ಕ, ಪೆದ್ದೊೞ್ತಿ (ಬಾಣಂತಿ) ಅವ್ವನ ಮಿಾಸ್‌ತಿತ್ತ್. ಕೆಲ್ಸದೊವು ಇದ್ದರೂ ಅವು ಸರಿ ಮಾಡಿಕಿಲ್ಲೇಂತ ಅವ್ವಂಗೆ. ಕೆಲ್ಸದವರ ಸಾಯಂದ, ಉಗ್ಗವ ಪೆದ್ದೊೞ್ತಿಗೆ ಹೊಲ ಮೊದ್ದ್, ಓಮ ಮೆಣ್ಸ್, ಕಸಾಯ, ಲೇಹ ಎಲ್ಲಾ ಮಾಡಿ ಕೊಡ್ತಿತ್ತ್. 1943ರ್ಲಿ ನನ್ನ ದೊಡ್ಡ ತಮ್ಮ ನಾರಾಯಣ ಹುಟ್ಟಿತ್. 1945ರ್ಲಿ ಸಣ್ಣ ತಮ್ಮ ಚಂದ್ರಶೇಖರ ಹುಟ್ಟಿತ್. 1947ರ್ಲಿ ನನ್ನ ಅಣ್ಣಂಗೆ ಬಳ್ಳಡ್ಕ ಕುಂಞಪ್ಪ ಗೌಡರ ಮಗಳ್ ಸುಶೀಲೆನ ಮೊದ್ವೆ ಮಾಡ್ಸಿದೊ. ಅತ್ತಿಗೆನ ಅಪ್ಪ ಮನೆ ಅಳಿಯ ಆಗಿ ಹೆಣ್ಣ್‌ನ ಮನೆಲೇ ಇದ್ದೊ. ಅತ್ತಿಗೆನ ಸೋದರ ಮಾಂವಂದರೆ ಮೊದ್ವೆ ಮಾಡಿ ಕೊಟ್ಟೊ.

* * * * *

ಚುಕ್ಕೆ – 5

"ಅಣ್ಣನ ಮೊದ್ವೆ"

ಆಗ ನಾ ಎರಡ್ನೇ ಕ್ಲಾಸ್‌ಲಿ ಓದ್‌ತಿದ್ದೆ. ಲಲಿತ ನನ್ನ ದೊಡ್ಡ ಜೋಸ್ತಿ ಗೂಡೆ. ಜೀವಕ್ಕೆ ಜೀವ ಕೊಡ್ತಿತ್ತ್. ಅಸ್ಟ್ ನಾವ್ಗೆ ಇಬ್ಬೊರಿಗೆ ಸ್ನೇಹ. ಒಂದ್ ದಿನ ಲಲಿತ ಹೇಳ್ತ್,

'ಕಾವ್ರಮ್ಮ, ನಿನ್ನ ಅಣ್ಣಂಗೆ ನನ್ನ ಅತ್ತೆನ ಮಗಳ ಹೆಣ್ಣ್ ನೋಡ್ಯೋಳೋ. ನಿಂಗೆ ಗೊತ್ತುಟ್ಟೋ'ಂತ ಕೇಳ್ತ್. 'ನಿಂಗೆ ಗೂಡೆನ ನೋಡೋಕೂಂತ ಮನ್ಸ್ ಇದ್ದರೆ ನನ್ನೊಟ್ಟಿಗೆ ಬಾ. ಇಂದ್ ಅತ್ತೆ ಮತ್ತೆ ಸಿಸ್ಲಕ್ಕ (ಲಲಿತ ಅತ್ತಿಗೆನ ಹಾಂಗೆ ಕರ್‍ಯತಿತ್ತ್. ಅವರ ಹೆಸ್ರ್ ಸುಶೀಲೆ) ಬಳೆ ಇಸಿಕೆ ಬಳೆಗಾರ್ತಿ ಕಮಲನ ಅಂಗ್ಡಿಗೆ ಬಂದೊಳೊ. ನಾ ತೋರ್ಸಿನೇ'ಂತ ಹೇಳ್ತ್.

ಶಾಲೆಲಿ ಮಧ್ಯಾಹ್ನ ಊಟದ ಹೊತ್ತಿಗೆ ನನ್ನ ಅದ್ ಕರ್ಕಂಡ್ ಪೇಟೆನ ನಡುಲಿ ಇದ್ದ ಬಳೆಗಾರ್ತಿನ ಅಂಗ್ಡಿಗೆ ಹೋತ್. ಅಲ್ಲಿ ಹೋಗಿ ನೋಡಿಕನ ಅವು ಬಳೆ ಇಸಿದ್ ಅಲ್ಲಿಂದ ಹೋಗ್ಯೋಳೋಂತ ಗೊತ್ತಾತ್. ನಂಗೆ ತುಂಬಾ ಬೇಜಾರ್ ಆತ್. ಇದಾದ ಒಂದ್ ತಿಂಗಳ್‌ಲಿ ಅಣ್ಣನ ಮೊದ್ವೆ ನಿಶ್ಚಯ ಆತ್. ಮನೆಗೆಲ್ಲಾ ಸುಣ್ಣ, ಬಣ್ಣ ಬೊಳ್ದೊ. ಇಜ್ಜೆಲಿನ ನಾಕೈದ್ ಜನಂಗ ಮೊಣ್ಣ್ ಹಾಕಿ ಗುದ್ದಿ ಸಮತಟ್ಟ್ ಮಾಡ್ದೊ. ದಿನ ಬುಟ್ಟ್ ದಿನ ಜಾಲ್‌ಗೆ ಸೆಗ್ಣಿ ಗುಡ್ಸಿ ಪೊರ್ದ್ಲು ಮಾಡ್ದೊ. ಜಾಲ್ ತುಂಬಾ ದೊಡ್ಡ ಚಪ್ಪರ ಹಾಕಿದೊ. ನಮ್ಮ ಮನೆ ಎದ್ರ್ ಮೇಲ್ನ ತಟ್ಟ್‌ಲಿ ಒಂದು ಜಾಲ್,

ಕೆಳಗೆ ಒಂದು ಜಾಲ್ ಇತ್ತ್. ಎರ್ಡಕ್ಕೂ ಚಪ್ಪರ ಹಾಕಿದೊ. ಮೊಡ್ಯಾಳ ಬಾಬು ಬಾತ್. ಮೇಲ್ಕಟ್ಟ್ ಕಟ್ಟಿತ್. ಬೊಳ್ಪುಗೆ ಅಣ್ಣಂಗೆ ಚೌರಿಜ ಬಂದ್‌ದ್ ಮುಖ ಚೌರ ಮಾಡ್ತ್. ಊರ್ ಗೌಡ್ರ್ ಕಾಸ್ತಾಳಿ ಕಟ್ಟಿದೊ. ಅರ್ನಿಣ ಎಂಣೆ ಶಾಸ್ತ್ರ ಮಾಡ್ದೊ. ಬಾವ, ಮೈದಂಗ ಮಿಾಸಿದ್ ಎಂಟ್ ಮೊಳ್‌ದ ಬಿಳಿ ವೇಸ್ಟಿಲಿ ಕಚ್ಚೆ ಕಟ್ಟಿ ಉದ್ದ ಕೈನ ಬಿಳಿ ಅಂಗಿ ಹಾಕಿ, ತಲೆಗೆ ಮುಂಡಾಸ್ ಕಟ್ಟಿ, ಹಣೆಗೆ ಗಂಧ, ಕುಂಕುಮದ ಬೊಟ್ಟು ಇಸಿ, ಕುತ್ತಿಗೆಗೆ ಚಕ್ರ ಸರ ಹಾಕಿ ಸಿಂಗಾರ ಮಾಡ್ದೊ. ನನ್ನ ದೊಡ್ಡಕ್ಕ, ಸೋದರ ಅತ್ತಿಗೆಕ ಸೋಬಾನೆ ಹಾಡ್ದೊ. ಅರ್ದ ಮೊದ್ರಂಗಿನ ಕೊಡಿ ಬಾಳೆಲಿ ಇಸಿ, ಮೊಡ್ಯಾಳ ಕಟ್ಟಿದ ಮೇಲ್ಕಟ್ಟ್ ಅಡಿಲಿ, ಊರ ಗೌಡ್ರ್ ಶಾಸ್ತ್ರ ಹೇಳಿ ಕುದ್ರಿಸಿ, ಬಲಗೈಗೆ ಸೂರ್ಯ, ಎಡಗೈಗೆ ಚಂದ್ರನ ಮೊದ್ರಂಗಿಲಿ ಇಸಿದೊ. ಸೂರ್ಯನ ಹಾಂಗೆ ಉರುಂಟು ಬಾಕೆ, ಅಕ್ಕ ಅಣ್ಣನ ಬಲ ಅಂಗೈಲಿ ಒಂದು ಬೆಳ್ಳಿನ ಉಂಗ್ರ ಇಸಿ, ಅದರ ಸುತ್ತೊಲು, ಗೀಸಿದ ಚಾಳೆ ಕಡ್ಡಿಲಿ, ಗಂಧದ ಹಾಂಗೆ ಅರ್ದ ಮೊದ್ರಂಗಿನ ತೆಗ್ದ್‌ದ್ ಇಸಿತ್. ಸೂರ್ಯನ ಚಿತ್ರ ಬುಡ್ಸಿತ್. ಮತ್ತೊಂದು ಕೈಗೆ ಕನಕಮಜಲಿನ ಅಕ್ಕಯ್ಯ ಅತ್ತಿಗೆ, ಮೊದ್ರಂಗಿ ಇಸಿದೊ. ಮೊದ್ರಂಗಿ ಶಾಸ್ತ್ರ ಮುಗ್ದ ಮೇಲೆ ಮೊದುಮಂಜನ, ಕನ್ನೆ ಕಂಭದ ಹಕ್ಕಲೆ ಹಸೆ ಚಿತ್ರ ಬುಡ್ಸಿದ ಗೋಡೆ ಬದಿಲಿ, ಮುತ್ತೈದೆಗ ಸೋಬಾನೆ ಹೇಳಿ ಹಸೆ ಮೊಂಂದ್ರಿ ಹಾಕಿ, ಅದರ್ಲಿ ಕುದ್ರಿಸಿದೊ. ಆ ಮೇಲೆ ಹಾಲುತ್ಪ್ಪ ಕುಡ್ಸುವ ಶಾಸ್ತ್ರ ಮಾಡ್ದೊ. ಇದರೆಡೆಲಿ ಜಾಲ್‌ಲಿ ಎಲ್ಲೋವ್ಕೆ, ಮೊದ್ರಂಗಿ ಊಟನ ಕೊಟ್ಟೊ. ಮೊದುಮಂಜಂಗೆ ಊಟ ಇಲ್ಲೆ. ಅಂವಂಗೆ ಪಳಾರ. ಅಂದರೆ ಹಾಲ್ ಮತ್ತೆ ಬಾಳೆಹಣ್ಣ್. ಧಾರೆ ಆಗದೆ ಅಂವ ಉಂಬಕೆ ಆಗದ್ ಗಡ. ನನ್ನ ಸೋದರ ಮಾವ ಸಬ್ಬಣ್ಣ ಗೌಡ್ರ್ ತಿರುಪತಿ ತಿಮ್ಮಪ್ಪ ದೇವ್ರ ಹೆಸ್ರ್ ಹೇಳಿ, ಎರ್ಡ್ ಬೆದ್ರ್ ಗುತ್ತಿಲಿ, ಐದೆಲೆ, ಒಂದಡ್ಕೆ, ಐದ್ ಒಳ್ಳೆಮೆಣ್ಸ್ ಕಾಳ್‌ಗ, ನಾಕಾಣೆ ಪಾವೆಲಿ, ಬೆಳ್ತಿಗೆ ಅಕ್ಕಿ, ಮೊದ್ಮಂಜನ ಕೈಲಿ ಹಾಕ್ಸಿ, ಅದರ ಅಟ್ಟಲಿ ಇಸಿದೊ. ಮೊದ್ಮಂಜನ ಮುಸ್ಕುನ ಎಲಸ್ತ್ರದ ಒಂದ್ ಮೂಲೆಲಿ (11/4)ಒಂದೂ ಕಾಲ್ ರೂಪ್ಯಾ ಹರ್ಕೆ ಹಣ ಕಟ್ಟಿ ದಿಬ್ಬಣ ಹೊರ್ಡಿಸಿದೊ.

ಎಲ್ಲಾ ಕಾರ್ಯಕ್ರಮ ಮುಗ್ದ್, ದಿಬ್ಬಣ ಹಿಂಬೊತ್ತ್ ಆಕನ ಹೊರ್ಟತ್. 1947ನೇ ಇಸ್ವಿಲಿ ನಡ್ದ ಮೊದ್ವೆ. ಕಂಟ್ರೋಲ್ ಸಮಯ. ಊರಿಗೆ ಊರೇ ಬರಗಾಲ ಬಂದ ಹಾಂಗೆ. ಜನಂಗಳ ಹಕ್ಕಲೆ ಉಂಬಕೆ, ತಿಂಬಕೆ ಇರ್ತಿತ್ಲೆ. ಆದರೆ ನಮ್ಮ ಅಪ್ಪ ಸಾವ್ಕಾರ ಆಗಿದ್ದ ಕಾರ್ಣ, ನಾವು ಆಗ ಊರಿಗೇ ಶ್ರೀಮಂತರ್ ಆಗಿದ್ದ ಕಾರಣ, ನಾವ್ಗೆ ಊಟ, ತಿಂಡಿ, ಬಟ್ಟೆ, ಬರೆ, ಹಣ, ಕಾಸ್ ಯಾವ್ದಕ್ಕೂ ಕೊರ್ತೆ ಇತ್ಲೆ. ಆಗಿನ ಕಾಲಲಿ ಮೊದ್ವೆಗೆ ಬ್ಯಾಂಡ್ ಸೆಟ್ಟ್ ತರ್ಸಿದ್ದೊ. ನಡ್ಕಂಡೇ ರಾಜರಸ್ತೆಲಿ ದಿಬ್ಬಣ ಮಂಗ್ಳೂರ್ ಕಡೆ ಮೋರೆ ಮಾಡಿಕಂಡ್ ಹೊರ್ಟತ್. ಕತ್ತಲೆ ಆಕಾಕನ ಗ್ಯಾಸ್ ಲೈಟ್ ಹೊತ್ತಿಸಿದೊ. ಐದಾರ್ ಜನ ಹಿಂದೆ ಮುಂದೆ ಗೇಸ್ ಲೈಟ್ ಹಿಡ್ಕಂಡ್ ದಿಬ್ಬಣದವ್ಕೆ ದಾರಿ ತೋರ್ಸಿದೊ. ದಾರಿ ಉದ್ದಕ್ಕೆ ಗರ್ನಾಲ್, ನೆಲ ಗರ್ನಾಲ್, ಹಗಲ್ ಬತ್ತಿ, ದುರ್ಸು ಬಾಣ – ಉರ್ಸಿಕಂಡ್‌ದ್ ದಿಬ್ಬಣ ಗೌಜಿಲಿ ಸಾಗಿತ್. ಮೊಗರ್ಪಣೆ ಸಂಕದ

ಹಕ್ಕಲೆ ಹೋಕನ ನೆಲ ಗರ್ನಾಲ್ ಒಂದೆರ್ಡ್ ಹೊಡ್ಸಿದೊ. ಅದರ ಸದ್ದಿಗೆ ನಾ ಎರ್ಡ್ ಕೆಬಿಗಳಿಗೆ ಕೈ ಹಿಡ್ದ್‌ಕಂಡೆ. ಹೆದ್ರಿ ಹೋಗಿ ಸಣ್ಣಕ್ಕನ ಕೈ ಗಟ್ಟಿ ಹಿಡ್ಕಂಡೆ. ನಾ ಯಾಗ ಮೊದ್ವೆ ಮನೆಗೆ ಮುಟ್ಟಿನೆ, ನನ್ನ ಜೋಸ್ತಿ ಲಲಿತನ ಯಾಗ ನೋಡ್ನೇಂತ ಕಾಯ್‌ತಿದ್ದೆ. ದಿಬ್ಬಣ ಹಳೆಗೇಟ್‌ನ ಹಕ್ಕಲೆ ತಿರ್ಗಿ ಕೊಡಿಯಾಲ ಬೈಲ್ ದಾರಿಗಾಗಿ ಮುಂದೆ ಹೋತ್. ಕೊಡಿಯಾಲ ಬೈಲ್‌ಲಿ ಅಪ್ಪನ ಜೋಸ್ತಿ ಕೊಡಿಯಾಲ ಬೈಲ್ ಶೇಷಪ್ಪಯ್ಯ ಶರ್ಮ ಎಂಬೊವು ದಿಬ್ಬಣದವ್ಕೆ, ಹೊಸ ಮೊಂದ್ರಿ ಹಾಸಿ ಕುದ್ರಿಸಿ ಕುಡ್ಯಕೆ ಪಾನಕ, ತಿಂಬಕೆ ಬಾಳೆಹಣ್ಣ್ ಕೊಟ್ಟೊ. ಮೊದುಮಂಜ ಅಣ್ಣಂಗೆ ಮತ್ತೆ ಅಪ್ಪಂಗೆ ಕುದ್ರಿಕೆ ಎರ್ಡ್ ಕುರ್ಚಿ ಇಸಿದ್, ಅದರ್ಲಿ ಕುದ್ರಿಸಿ, ಕುಡ್ಯಕೆ ಬೆಂಡ ಕೊಟ್ಟೊ. ಅವರ ಉಪಚಾರ ಮುಗ್ದ ಮೇಲೆ ದಿಬ್ಬಣ ಅಲ್ಲಿಂದ ಮಾಣಿಬೆಟ್ಟ್ ಕಡೆಗೆ ಹೊರ್ಟತ್. ಅತ್ತಿಗೆನ ಸೋದರ ಮಾವನ ಮನೆ ಮಾಣಿಬೆಟ್ಟ್. ನನ್ನ ಜೋಸ್ತಿ ಲಲಿತ, ಅತ್ತಿಗೆನ ಸಣ್ಣ ಸೋದರ ಮಾವ, ಮಾಣಿಬೆಟ್ಟ್ ವೆಂಕಪ್ಪ ಮಾಸ್ಟ್ರ ಹಿರಿ ಮಗಳ್. ಇರ್ಳ್ ಸುಮಾರ್ 8 ಗಂಟೆ ಆಕನ ಹೆಣ್ಣ್‌ನ ಮನೆ ಮಾಣಿಬೆಟ್ಟ್‌ಗೆ ಮುಟ್ಟಿದೊ. ಅತ್ತಿಗೆನ ಸೋದರ ಮಾವಂದರ್, ಅವರ ಹೆಣ್ಮಕ್ಕ, ಅತ್ತಿಗೆನ ಅವ್ವ, ಎಲ್ಲೋವು ಅಂಬೆರ್ಪುಂದ ಕೈಲಿ ನೀರ್ನ ಚೊಂಬುಗಳ ಹಿಡ್ಕಂಡ್ ಓಡೋಡಿ ಬಂದ್‌ದ್, 'ಏನಣ್ಣಾ, ಏನಕ್ಕಾಂತ ಕೇಳಿದ್, ಪ್ರೀತಿಂದ ಮಾತಾಡ್ಸಿ, ಬರಮಾಡಿಕೊಂಡೊ. ದಿಬ್ಬಣದೊವ್ಕೆ ಬೊಂಡ, ಪಾನಕ ಕೊಟ್ಟೊ. ಲಲಿತ ಓಡೋಡಿ ಬಂದ್‌ದ್, ನನ್ನ ಕೈ ಹಿಡ್ಕಂಡ್ ನೆಗಾಡ್ತ್. ನಾವಿಬ್ಬೊರು ಕಣ್ಣ್‌ನ್ಲೇ ಮಾತಾಡಿಕೊಂಡೊ. ನಾ, ಮೆಲ್ಲಂಗೆ ಅದರ ಕೈಲಿ 'ನಂಗೆ ಅತ್ತಿಗೆನ ನೋಡೋಕೂಂತ ಹೇಳ್ದೆ. ಆಗ ಅದ್, 'ಈಗ ಬೇಡ, ಮೊದ್ರಂಗಿ ಶಾಸ್ತ್ರಕ್ಕೆ ಕುದ್ರಿಸಿಕನ ನಿನ್ನ ಕರ್ಕಂಡ್ ಹೋನೆ'ಂತ ಹೇಳ್ದ್. ನಾವಿಬ್ಬರೂ ಗುಟ್ಟ್ ಗುಟ್ಟ್‌ಲಿ ಪಿಸಪಿಸನೆ ಮಾತಾಡಿಕೊಂಡೊ. ನಾವು ದಿಬ್ಬಣದೊವು ಕುದ್ದ ಜಾಗೆಗೆ ಮನೆ ಕಾಂಬತಿತ್ತ್. ನಾವು ಕುದ್ದ ಜಾಗೆಗೂ, ಅವರ ಮನೆ ಅಂಗಳಕ್ಕೂ ನಡುಲಿ ಸ್ವಲ್ಪ ತಗ್ಗ್‌ನ ಜಾಗೆ ಇತ್ತ್. ಅಲ್ಲಿಗೆ ಇಳ್ಯಕೆ ನಾಲ್ಕೈದ್ ಮೆಟ್ಲ್‌ಗ ಇದ್ದೊ. ಅಲ್ಲಿ ನೀರಡಿ ಕೊಟಗೆ, ಬಾಮಿ, ಹೂನ ದೈಗ ಇದ್ದೊ. ಹಂಞ ಹೊತ್ತಾಕನ ಅದ್ ನನ್ನ ಅದರ ಮನೆಗೆ ಕರ್ಕಂಡ್ ಹೋತ್. ಅವರ ಮನೆ ಎದ್ರ್‌ನ ಜಾಲ್‌ಲಿ ಹಾಕಿದ ಚಪ್ಪರದೊಳಗೆ ಮೊದ್ರಂಗಿ ಶಾಸ್ತ್ರ ನಡ್ಯತಿತ್ತ್. ಮೊದೊಳ್ಗ್ ಗೂಡೆ ಮಣೆ ಮೇಲೆ ಕುದ್ದ್‌ಕಂಡ್ ತಲೆ ಬೊಗ್ಗಿಸಿ ಕಂಡಿತ್. ಕೆಂಪು ಬಣ್ಣದ ಚೌಕುಳಿ ಇದ್ದ ದೊಡ್ಡ ಎಲಸ್ತ್ರನ ಗುಡಿ ಹಾಕಿದ್ದೊ. ಮುಸ್ಕುನ ಬಟ್ಟೆಲಿ ಅದರ ಮೋರೆ ಕಾಂಬತಿತ್ಲೆ. ಎರ್ಡ್ ಬೆಳ್ಳಂಗೆನ ಕೈಗಳ ಅತ್ತ ಇತ್ತ ಕುದ್ಕಂಡಿದ್ದ ಗೂಡೆಗ ಹಿಡ್ಕಂಡ್ ಮೊದ್ರಂಗಿ ಹಾಕ್ತಿದ್ದೊ. ನಂಗೆ ಅತ್ತಿಗೆನ ಮೋರೆ ನೋಡೋಕೂಂತ ಭಾರೀ ಆಸೆ ಇತ್ತ್. ಆದರೆ ನೋಡಿಕೆ ಆತಿಲ್ಲೆ. ಮೊದ್ರಂಗಿ ಶಾಸ್ತ್ರ ಮುಗ್ದ ಮೇಲೆ ಆರತಿ ಎತ್ತಿ ಸೋಬಾನೆ ಹಾಡ್ದೊ. ಮೊದೊಳ್ಗ್ ಗೂಡೆನ ಮನೆ ಒಳಗೆ ಕರ್ಕೊಂಡೋಗಿ ಹಸೆ ಮಣೆಲಿ ಕುದ್ರಿಸಿ ಹಾಲುತ್ತುಪ್ಪ ಕುಡ್ಸಿದೊ.

ಮೇಲ್ಕಟ್ ಅಡಿಲಿ ಗಂಡ್‌ನ ಕಡೆವು ಕೊಟ್ಟ ಬಣ್ಣ ಬಂಗಾರದ ತಟ್ಟೆನ ನಮ್ಮ ಕಡೆನ ಹೆಣ್ಮಕ್ಕ, ಅವರ ಕಡೆನ ಹೆಣ್ಣ್‌ಗಳಿಗೆ ಕೊಟ್ಟ್‌ದ್ ಮೊದೊಳ್ಗ್ ಗೂಡೆನ ಸಿಂಗಾರ ಮಾಡಿಕೆ ಹೇಳ್ದೊ. ಮೊದೊಳ್ಗ್‌ನ ತಲೆ ಬಾಚಿಕನ, ಹೂ ಮುಡ್ಸಿಕನ, ಬಣ್ಣ ಬಂಗಾರ

ಇಸಿಕಾಕನ, ಸೀರೆ ಉಡ್ಸಿಕಾಕನ ನಂಗೆ, ಅಲ್ಲಿದ್ದ ಹೆಣ್ಮಕ್ಕಳ ಗುಂಪುಲಿ ಅತ್ತಿಗೆನ ಮೋರೆನ ಸರಿಯಾಗಿ ನೋಡಿಕೆ ಆತಿಲ್ಲೆ. ಅಷ್ಟಾಕನ ಯಾರೋ ಬಂದ್, ನನ್ನ ಕೆಬಿಲಿ, 'ಅಣ್ಣ ನನ್ನ ಕರ್ದದೇ'ಂತ ಹೇಳ್ದೊ. ನಾ ಚಪ್ಪರ ದಾಟಿ, ಮೆಟ್ಲ್ ಇಳ್ದ್, ಆಚೆ ಬದಿನ ದಿಣ್ಣೆಗೆ ಮೆಟ್ಲ್ ಹತ್ತಿ ಗಂಡ್‌ನ ಕಡೆನ ಜನಂಗ ಇದ್ದಲ್ಲಿಗೆ ಹೋದೆ. ಅಣ್ಣನ ನೋಡ್ದೆ. ಅಣ್ಣನ, ನನ್ನ ಭಾವ ಮತ್ತೆ ಮಾವನ ಮಕ್ಕ, ಸಿಂಗಾರ ಮಾಡ್ತಿದ್ದೊ. ಬಿಳಿ ಬಣ್ಣದ ಜರಿ ಇದ್ದ, ರೇಷ್ಮೆ ಪಂಚೆನ ಕಚ್ಚೆ ಹಾಕಿ ಉಡ್ಸಿ, ಬಿಳಿನ ಉದ್ದ ಕೈನ ಸಿಲ್ಕ್ ಶರ್ಟ್, ಜರಿ ಶಾಲ್, ಜರಿ ಇದ್ದ ಮುಂಡಾಸ್ ಕಟ್ಟಿ, ಕುತ್ತಿಗೆ ತುಂಬಾ ಏಳ್ ಎಳೆನ ಚಕ್ರ ಸರ, ಕಾಸ್ತಾಳಿ, ಬೆರ್ಳ್‌ಗೆ ಉಂಗುರಗ, ಕಣ್ಣಿಗೆ ಕಣ್ಣ್ ಕಪ್ಪು, ಹಣೆಗೆ ಗಂಧದ ಬೊಟ್ಟು ಅದರ ಮೇಲೆ ಕುಂಕುಮದ ಬೊಟ್ಟು ಇಸಿ ಸಿಂಗಾರ ಮಾಡ್ತಿದ್ದೊ. ಅಣ್ಣ ತುಂಬಾ ಪೊರ್ಲು ಕಾಂಬತಿತ್ತ್.

ಅಣ್ಣ ಗುಟ್ಟ್‌ಲಿ ನನ್ನ ಕೈಲಿ ಒಂದು ಸಣ್ಣ ಸೆಂಟ್‌ನ ಕುಪ್ಪಿ ಇಸಿ "ಮೋಳು ಇದರ ತಕೊಂಡೋಗಿ ನಿನ್ನ ಅತ್ತಿಗೆನ ಬಟ್ಟೆಗೆ ಮುಟ್ಟುಸೋಕು ಬಲಾ"ಂತ ಹೇಳ್ತ್. 21 ವರ್ಸದ ಅಣ್ಣಂಗೆ 16 ವರ್ಸದ ಅತ್ತಿಗೆನ ಮೊದ್ವೆ ಮಾಡ್ಸ್‌ತಿದ್ದೊ. ಅಣ್ಣಂಗೆ ತುಂಬಾ ನಾಚಿಕೆ. ನನ್ನ ಹಕ್ಕಲಿ ಅಂವ ಗುಟ್ಟ್‌ಲಿ, ' ಅತ್ತಿಗೆ ಹೇಂಗುಟ್ಟೊ'ಂತ ಕೇಳ್ತ್. ನಾ ಹೇಳ್ದೆ ' ಮೋರೆ ಸರೀಲಿ ನೋಡಿಕೆ ಆತ್ಲೆ ಅಣ್ಣಾ'ಂತ. ಆ ಮೇಲೆ ನಾ ನನ್ನ ಮುಷ್ಟಿಲಿ ಆ ಸೆಂಟ್‌ನ ಕುಪ್ಪಿನ ಗಟ್ಟಿಲಿ ಮುಚ್ಚಿಕಂಡ್ ಓಡೋಡಿ ದಿಣ್ಣೆನ ಮೆಟ್ಲ್‌ನ ಇಳ್ದ್‌ದ್, ಜಾಲ್ನ ಮೆಟ್ಲನ ಹತ್ತಿ, ಚಪ್ಪರ ದಾಟಿ ಮನೆ ಒಳಗೆ ಸೇಂಕಿಕಂಡ್ ಬಂದ್, ಹಸೆ ಮಣೆ ಹಕ್ಕಲೆ ಮೊದೊಳ್ಗೆ ಗೂಡೆನ ಪಕ್ಕಲಿ ಇದ್ದ, ಸಣ್ಣಕ್ಕನ ಹಕ್ಕಲೆ ಗುಟ್ಟ್‌ಲಿ, 'ಇಂದಾ ಇದರ ಅಣ್ಣ ಕೊಟ್ಟುಟ್ಟು. ಅತ್ತಿಗೆನ ಸೀರೆಗೆ ಮುಟ್ಟುಸೋಕು ಗಡಾ'ಂತ ಹೇಳಿ, ಅಕ್ಕನ ಕೈಲಿ ಸೆಂಟ್ ಕುಪ್ಪಿನ ಕೊಟ್ಟೆ. 'ಅಬ್ಬ, ಅಣ್ಣ ಒಪ್ಪಿಸಿದ ಕೆಲ್ಸನ ಮುಗ್ಸಿದೇ'ಂತ ಮನ್ಸಿಲೇ ಗ್ರೇಸಿಕಂಡೆ. ಆ ಕಾಲಲಿ ಸೆಂಟ್ ಕುಪ್ಪಿಂತೇಳ್ರೆ ಯಾರಿಗೂ ಗೊತ್ತಿತ್ಲೆ. ಸಣ್ಣಕ್ಕ ಸೆಂಟ್ ಕುಪ್ಪಿನ ಬೂಚು ತೆಗ್ದ್‌ದ್, ಅದರ ಕೈ ಚೀಲಂದ ಒಂದು ಸಣ್ಣ ಹತ್ತಿತುಂಡ್ ತೆಗ್ದ್, ಕುಪ್ಪಿನ ಬಾಯಿಗೆ ಇಸಿ, ಬೊಗ್ಗಿಸಿ, ಅಂಬೆರ್ಪ್‌ಲಿ ಕುಪ್ಪಿಗೆ ಬೂಚ್ ಹಾಕಿತ್. ಹಾಕಿತ್ಲರೆ ಸೆಂಟ್‌ನ ಪೊರ್ಮ್ಮಳ ಕುಪ್ಪಿಂದ ಹೊರಗೆ ಹೋದೂಂತ. ಆ ಹತ್ತಿ ತುಂಡುನ ಮೊದ್ಮಗಳ ಕಂಕುಳ್ ಸೆರೆಗೆ ಮುಟ್ಟಿಸಿಕನ ಎಲ್ಲೋವು ಅದ್ ಎಂತದ್‌ಂತ ನೋಡಿವೆ. ಅಕ್ಕನ ಕೈಯಿಂದ ಕುಪ್ಪಿನ ತೆಗ್ದ್ ಎಲ್ಲೋವು ಮೂಸಿ, ಮೂಸಿ ನೋಡಿ, ಹಾ! ಎಂತಾ ಗಮಲು'ಂತ ಒಬ್ಬರ ಕೈಯಿಂದ ಇನ್ನೊಬ್ಬ ತಕಂಬತಿದ್ದೊ. ಕಡೆಗೆ ಅಕ್ಕ ಅದ್ ಕೈ ತೊಪ್ಪಿ ಹೋದೂಂತ ಅವರ ಕೈಯಿಂದ ತಕಂಡ್ ಸೆರ್ಗ್‌ಲಿ ಗಂಟ್ ಕಟ್ಟಿ, ಸೊಂಟಕ್ಕೆ ಸಿಕ್ಕಿಸಿ ಕಂಡತ್ತ್. ಬಿಳಿ ಧಾರೆ ಸೀರೆ ಉಟ್ಟ್, ತಲೆ ತುಂಬಾ ಮಲ್ಲಿಗೆ, ಸುರಗಿ ಮಾಲೆ, ಪಿಂಗಾರ, ಕೇದಗೆ ಮುಡ್ದ್, ಜಡೆ ತುಂಬಾ ಚಿನ್ನದ ತಿರ್ಪುನ ಹೂಗಳ, ಜಡೆ ಗೊಂಡೆ, ರಾಕುಟಿ ಇಸಿದ, ಕೈ ತುಂಬಾ ಬಳೆಗ, ಬೆಳ್ಳಿ ಕಡಗ, ಸೊಂಟಕ್ಕೆ ಬೆಳ್ಳಿ ಡಾಬು, ಕಾಲ್ಗೆ ಕಾಲ್ ಚೈನ್, ಹಾಕಿದ, ತಲೆ ಬೊಗ್ಗಿಸಿ ಮುಸ್ಕುನ ಬಟ್ಟೆನ ಮೋರೆಗೆ ಅಡ್ಡ ಹಿಡ್ದ ಅತ್ತಿಗೆನ ಮೋರೆನ ನಂಗೆ ಸರಿಯಾಗಿ ನೋಡಿಕೆ ಆತೇ ಇಲ್ಲೆ. ಧಾರೆ ಆಕನ ನಡಿರ್ಳ್ ಒಂದ್ ಗಂಟೆ.

ಅತ್ತಿಗೆನ ಸೋದರ ಮಾಂವ ಹರ್ಕೆ ಹಣ ಕಟ್ಟಿ, ಮೊದೊಳ್ಗೆ ಗೂಡೆನ ಎತ್ತಿಕಂಡ್ ಹೋಗಿ ಮೇಲ್ಕಟ್ ಅಡಿಲಿ, ಮೊದ್ಮಂಜನ ಎದ್ರ್‌ಗೆ ನಿಲ್ಸಿದೊ. ಅವರಿಬ್ಬರ ನಡುಲಿ ಎರ್ಡ್ ಜನ ಅತ್ತ ಇತ್ತ ನಿಂತ್ ಬಿಳಿ ಬಟ್ಟೆಲಿ ತೆರೆ ಹಿಡ್ದೊ. ಮುತ್ತೈದೆಗ ಐದ್ ಜನ ಕಳಸ ಕನ್ನಡಿಗೆ ಅಕ್ಕಿ ಹಾಕಿ ಕೈ ಮುಗ್ದ್ (ಗೂಡೆನ ಕಳಸಕ್ಕೆ ಗಂಡ್‌ನ ಕಡೆವು, ಗಂಡ್‌ನ ಕಳಸಕ್ಕೆ ಹೆಣ್ಣ್‌ನ ಕಡೆವು) ಎರ್ಡ್ ಕಡೆನ ಊರ್ ಗೌಡ್ರ್‌ಗ ಶಾಸ್ತ್ರ ಹೇಳಿ, 'ಬಳ್ಳಡ್ಕ ಮನೆನ ಕುಂಞಪ್ಪ ಗೌಡ್ರ ಮಗಳ್ ಸುಶೀಲ ಎಂಬ ಗೂಡೆನ, ಸೂಂತೋಡು ಮನೆನ ಅಪ್ಪಣ್ಣ ಗೌಡ್ರ ಮಂಜ ರಾಮಣ್ಣ ಎಂಬ ಹೈದಂಗೆ ಧಾರೆ ಎರ್ದ್ ಕೊಟ್ಟವೇಂತ' ಹತ್ತ್ ಕುಟುಂಬ, ಹದ್ನೆಂಟ್ ಗೋತ್ರದ ಜಾತಿ ಮಕ್ಕಳ್‌ಲಿ ಕೇಳಿಕಂಡ್ ಮೂರ್ ಮೂರ್ ಸರ್ತಿ ಹೇಳಿವೆ. ಆಗ ಎಲ್ಲೋವು ' ಒಳ್ಳೆದೂಂತ ಹೇಳ್ವೆ' ಎಂತ ಹೇಳ್ದೊ. ಎರ್ಡ್ ಕಡೆನ ವಾಲಗ, ಬ್ಯಾಂಡ್ ಸೆಟ್ಟ್‌ನ ಅಬ್ಬರಲಿ, ಗರ್ನಾಲ್ ಸುಡು ಮೊದ್ದ್‌ಗಳ ಗೌಜಿಲಿ [ಒಟ್ಟಿಗೆ ನಾಯಿಗಳೂ ಬೊಬ್ಬೆ ಹಾಕ್ತಿದ್ದೊ.] ಒಬ್ಬರ ಮಾತ್ ಇನ್ನೊಬ್ಬಂಗೆ ಕೇಳ್‌ತಿತ್ಲೆ. ಮೊದ್ಮಂಜ ಮೊದೊಳ್ಗೆ ಗೂಡೆನ ಬೊಗಸೆ ಕೈಲಿ ಐದೆಲೆ, ಒಂದಡ್ಕೆ ನಾಕಾಣೆನ ಪಾವೆಲಿನ ಕೊಟ್ಟ್ ಮೂರು ಸಲ ಒಬ್ಬರ ಕೈ ಮೇಲೆ ಒಬ್ಬರ ಕೈ ಇಸಿ, ಅದ್ಕೆ ಅತ್ತಿಗೆನ ಅಪ್ಪ ಅವ್ವ ಕಳಸಧಾರೆ ಎರ್ದೊ. ಗೂಡೆನೂ ಹೈದನೂ ಪಿಂಗಾರದ ಮಾಲೆಗಳ ಒಬ್ಬಂದೊಬ್ಬ ಹಾಕಿಕೊಂಡೊ ಆ ಮೇಲೆ ಗಂಡ್ ಹೆಣ್ಣಿಗೆ ತಾಳಿ ಕಟ್ಟಿತ್. ಅಂತೂ ಇಂತೂ ಅಣ್ಣನ ಮೊದ್ವೆ ಆತ್. ಅತ್ತಿಗೆ ನಾವುಗೆ ಸಿಕ್ಕಿದೊ. ಗೂಡೆನನೂ, ಹೈದನನೂ ಮನೆ ಒಳಗೆ ಕನ್ನೆ ಕಂಭದ ಪಕ್ಕಲಿ ಗೋಡೆ ಮೇಲೆ ಬರ್ದ ಹಸೆಗೆ ಕರ್ಕಂಡೋಗಿ, ಹಸೆ ಮೊಂದ್ರಿಲಿ ಕುದ್ರಿಸಿದೊ. ಹಾಲ್ತುಪ್ಪ ಕುಡ್ಸಿದೊ. ಹಾಲ್ ತುಪ್ಪ ಕುಡ್ಸುವ ಶಾಸ್ತ್ರಂತೇಳಿರೆ, ಗೂಡೆನ ಹೈದನ ಎದ್ರ್ ಎರ್ಡ್ ಮಣೆಗಳ ಇಸಿವೆ. ಒಂದು ಮಣೆ ಮೇಲೆ ಒಂದು ಕಂಚಿನ ಹರಿವಾಣಲಿ ಒಂದ್ ಗಿಂಡಿಲಿ ಹಾಲ್, ಇನ್ನೊಂದು ಗಿಂಡಿಲಿ ನೀರ್ ಇಸಿವೆ. ಮತ್ತೊಂದ್ ಮಣೆ ಮೇಲೆ ಹರಿವಾಣಲಿ ಕುಚ್ಚಲಕ್ಕಿ, ಐದೆಲೆ ಒಂದಡ್ಕೆ ಇಸಿವೆ. ಸುರುಗೆ ಮೊದೊಳ್ಗೆ ಗೂಡೆನ ಅಯ್ಯೆ ಮೊದು ಮಕ್ಕಳಿಗೆ ಒಂದೊಂದ್ ಲೋಟ ಹಾಲ್ನ ಕುಡ್ಯಕೆ ಕೊಟ್ಟದೆ. ಆ ಮೇಲೆ ಕನ್ನೆ ಕಂಭದ ಪಕ್ಕ ಹೊತ್ತಿಸಿ ಇಸಿದ ಕಾಲ್ದೀಪಕ್ಕೆ ಅಕ್ಕಿ ಹಾಕಿ ಕೈ ಮುಗ್ದ್, ಐದೆಲೆ ಒಂದು ಅಡ್ಕೆನ ಮೊದು ಮಂಜನ ಬೊಗಸೆಲಿ ಇಸಿ ಕೈ ಮುಗ್ದವೆ. ಎರ್ಡ್ ಕೈಲಿ ಅಕ್ಕಿ ತಕಂಡ್ ಹೆಗಲ್, ತಲೆ ಮುಟ್ಟಿ ಅಕ್ಕಿ ಕಾಳ್‌ನ ಸೇಸೆ ಹಾಕಿವೆ. ಆ ಮೇಲೆ ಬೊಗಸೆಲಿ ಇದ್ದ ಎಲೆ ಅಡ್ಕೆನ ತೆಗ್ದ್‌ದ್ ಹರಿವಾಣಲಿ ಇಸಿವೆ. ಮೊದುಮಂಜನ ಬಲ್ದ ಕೈನ ಹಿಡ್ದ್, ಒಮ್ಮೆ ನೀರಿನ ಗಿಂಡಿಗೆ, ಒಮ್ಮೆ ಹಾಲ್ನ ಗಿಂಡಿಗೆ ಕೈ ಬೆರಳ್‌ನ ಮುಳ್‌ಗಿಸಿ, ಮೂರು ಸಲ ಶಾಸ್ತ್ರ ಮಾಡಿವೆ. ಇದರ ಹಾಲ್ ತುಪ್ಪ ಕುಡ್ಸುದೂಂತ ಹೇಳ್ವೆ. ಅದೇ ರೀತಿಲಿ ಮೊದೊಳ್ಗೆ ಗೂಡೆಗೂ ಮಾಡಿವೆ. ದಕ್ಷಿಣ ಕನ್ನಡ ಮತ್ತೆ ಕೊಡ್ಗ್‌ನ ಹತ್ತ್ ಕುಟುಂಬ ಹದ್ನೆಂಟ್ ಗೋತ್ರದ ಜನರ್ ಈ ಪದ್ಧತಿನ ಆಚರ್ಸುವೆ. ಈ ಶಾಸ್ತ್ರ ಮಾಡಿದ ಮೇಲೆ ಮೊದು ಮಕ್ಕಳ ಹಸೆಂದ ಊರ್ ಗೌಡ್ರ್ ಶಾಸ್ತ್ರ ಹೇಳಿ ಎದ್ರಿಸಿವೆ. ಮೊದುಮಕ್ಕ ಬಾಗಿಲ್‌ನ ಹಕ್ಕಲೆ ಬಾಕಾಕನ ಮೊದ್‌ಮಂಜನ ಅಕ್ಕ, ತಂಗೆಕ ಬಾಕಿಲ್ ತಡ್ದವೆ. ಆಗ ಸೇರಿದ ಹೆಣ್ಮಕ್ಕ ಬಾಕಿಲ್ ತಡೆವ ಸೋಬಾನೆ ಹಾಡಿವೆ. ಹೈದನ ಕೈಲಿ ಅಂವನ

ಹೆಣ್ಣ್‌ನ ಹೆಸ್ರ್, ಗೂಡೆನ ಕೈಲಿ ಅದರ ಗಂಡನ ಹೆಸ್ರ್ ಹೇಳ್ಸುವೆ. ಕೆಲವು ಗೂಡೆಗ ಗಂಡನ ಹೆಸ್ರ್ ಹೇಳಿಕೆ ನಾಚಿಕೆ ಆಗಿ, ಒಗಟ್ ರೂಪಲಿ ಹೇಳಿವೆ. ನನ್ನ ಅಕ್ಕಂದರ್ ಇಬ್ರೊಬ್ರು ಅಣ್ಣನ ಮತ್ತೆ ಅತ್ತಿಗೆನ ಹೆಸ್ರ್ ಹೇಳದೆ ಬುಟ್ಟತ್ತಿಲ್ಲೆ. ಅವಿಬ್ಬರೂ ನಾಚಿಕೆಂದ ಹೆಸ್ರ್ ಹೇಳ್ದೊ. ಆಗ ಎಲ್ಲೋವು ನೆಗಾಡ್ದೊ. ಹುಟ್ಟುವ ಕೂಸು ಗಂಡಾದರೆ, ನನ್ನ ಮಗಳ್ನೇ ಸೊಸೆ ಆಗಿ ತಕೊಂಡೋಕು, ಹೆಣ್ಣಾದರೆ ನನ್ನ ಮಂಙಂಗೆ ಕೊಡೊಕು ಎಂತ ಕೆಲವು ಕಡೆ, ಅಕ್ಕ – ತಂಗೆಕ ಬಾಕಿಲ್ ತಡ್ಯಕನ ಹೇಳಿ ಮಾತ್ ತಕಂಡವೆ. ಆದರೆ ನನ್ನ ದೊಡ್ಡಕ್ಕಂಗೆ ಆಗ ಮಕ್ಕ ಇತ್ಲೆ. ಸಣ್ಣಕ್ಕಂಗೆ ಮೊದ್ವೆ ಆತಿಲ್ಲೆ. ಹಾಗಾಗಿ ಕೊಡುವ, ತಾವ ಮಾತ್ ಅಲ್ಲಿ ಬಾತ್ಲೆ.

ಇದಾದ ಮೇಲೆ ಅಣ್ಣ ಮತ್ತ್ ಅತ್ತಿಗೆಗೆ ಪಚಾರಕ್ಕೆ ಕುದ್ರಿಸಿಕೆ ಬೇರೆ ಬಟ್ಟೆನ ಬದಲಾಯ್ಸಿದೊ. ಅತ್ತಿಗೆಗೆ ನಮ್ಮ ಅಪ್ಪ ಬೆಳ್ಳಿ ಜರಿ ಇದ್ದ, ಆಕಾಶ ಬಣ್ಣದ ಬನಾರಸ್ ಸೀರೆ ತೆಗ್ದಿದ್ದೊ. ಸೀರೆನ ಸೆರ್‌ಂಗ್‌ಲಿ ತುಂಬಾ ಜರಿನ ಕೆಲ್ಸ ಇದ್ದ್ ಪೊರ್ಲು ಇತ್ತ್. ಅದರ ಉಡ್ಸಿಕನ ನಾ ಅತ್ತಿಗೆನ ಹಕ್ಕಲೆಂದ ನೋಡ್ದೆ. ನನ್ನ ಅತ್ತಿಗೆ ಬಾಳ ಪೊರ್ಲು ಇದ್ದೊ. ಉರುಂಟು ಮೋರೆ, ತುಟಿ ತೊಂಡೆ ಹಣ್ಣ್‌ನ ಹಾಂಗೆ ಇತ್ತ್. ಸ್ವಲ್ಪ ಕುಳ್ಳ ಶರೀರ, ಬೆಳ್ಳಂಗೆ ಬೆಳ್ಳಂಗೆ ಹಾಲ್‌ನ ಹಾಂಗೆ ಬಣ್ಣ ಇತ್ತ್. ಅವರ ಕೂದೊಲು ಸೊಂಟಂದ ಕೆಳಗೆ ಇಳ್ದ್ ಇತ್ತ್. ಕೆಬಿಗೆ ಲೋಲಾಕ್ ಹಾಕಿದ್ದೊ. ಪಚಾರದ ಸೀರೆ ಉಡ್ಸಿದ ಮೇಲೆ, ಚಪ್ಪರದಡಿಲಿ ಕಟ್ಟಿದ, ಮೇಲ್ಕಟ್ಟ್‌ನ ಅಡಿಲಿ ಬೆಂಚ್ ಇಸಿ, ಅದರ ಮೇಲೆ ಮೊಡ್ಯಾಳ ಮಡಿ ಬಟ್ಟೆ ಹಾಸಿ, ಮೊದುಮಕ್ಕಳ ಕುದ್ರಿಸಿದೊ. ಎಲ್ಲೋವು ಮೊದು ಮಕ್ಕಳಿಗೆ ಉಡ್ಗೊರೆ ಕೊಟ್ಟೊ. ಕೆಲವು ಜನಂಗ ಹರಿವಾಣಕ್ಕೆ ಹಣ ಹಾಕಿ, ಎರ್ಡ್ ಕೈ ತುಂಬಾ ಪುಂಡಿ ಅಕ್ಕಿ ತೆಗ್ದ್, ಸೇಸೆ ಹಾಕಿದೊ. ಬಾವ ಸೇಸೆ ಹಾಕಿಕನ ಹಂಞ ಅಕ್ಕಿನ ಅಣ್ಣನ ಬಾಯಿಗೆ ತಿನ್ಸಿದೊ. ಅಕ್ಕ ಸೇಸೆ ಹಾಕಿಕನ ಅತ್ತಿಗೆನ ಬಾಯಿಗೆ ಅಕ್ಕಿ ತಿನ್ಸಿತ್. ಮೊದು ಮಕ್ಕಳ ಭಾವ ಮ್ಯೊದನಂಗ, ಅತ್ತಿಗೆ, ನಾದ್ನಿಕ, ಮೊದು ಮಕ್ಕಳಿಗೆ ಅಕ್ಕಿ ತಿನ್ಸಿ ಬೆಳ್ಚಲ್ ಮಾಡಿವೆ. ಮೊದು ಮಕ್ಕ, ಅವು ಸೇಸೆ ಹಾಕಿಕೆ ಬಾಕನ ಬಾಯಿಗೆ ಕೈನ ಅಡ್ಡ ಹಿಡ್ಕಂಡವೆ. ಮೊದು ಮಕ್ಕಳ ಎದ್ರಿಗೆ, ಚಪ್ಪರಲಿ ಸರಮಾಲೆ ದೀಪ ತೂಗಿ ಹಾಕಿದ್ದೊ. ಎದ್ರಿಗೆ ಕೆಳಗೆ ಮೊಂದ್ರಿ ಹಾಸಿ, ಇಬ್ರೊಬ್ರು ಊರ್ ಗೌಡ್ರ್‌ಗ ಕುದ್‌ಕೊಂಡಿದ್ದೊ. ಅವರ ಎದ್ರಿಗೆ, ಒಂದು ಮಣೆ ಮೇಲೆ ಹರಿವಾಣಲಿ ಕುಚ್ಚಲಕ್ಕಿ ಹಾಕಿ ಇಸಿದ್ದೊ. ಇನ್ನೊಂದು ಮಣೆ ಮೇಲೆ ಖಾಲಿ ಹರಿವಾಣ ಇಸಿದ್ದೊ. ಊರೋವೆಲ್ಲಾ ದೀಪಕ್ಕೆ ಅಕ್ಕಿ ಕಾಳ್ ಹಾಕಿದ್, ಕೈ ಮುಗ್ದ್‌ದ್, ಅಲ್ಲಿ ಇಸಿದ್ದ ಖಾಲಿ ಹರಿವಾಣಕ್ಕೆ ಹಣ ಹಾಕಿ, ಎರ್ಡ್ ಕೈಲಿ ಪುಂಡಿ ತುಂಬಾ ಅಕ್ಕಿ ತೆಗ್ದ್‌ದ್ ಸುರುಗೆ ಮೊದ್ಮಂಙಂಗೆ, ಮತ್ತೆ ಮೊದೋಳ್ತಿಗೆಗೆ ಸೇಸೆ ಹಾಕಿದೊ. ಹರಿವಾಣಲಿ ಊರ್‌ನ ಬಂಧು, ಬಳಗ ಹಣ ಹಾಕಿಕನ ಎದ್ರ್ ಕುದ್ದವರಲ್ಲಿ ಒಬ್ಬ ಹಣ ಹಾಕಿದವರ ಹೆಸ್ರ್‌ನ ಹೇಳಿ, ಅವು ಹಾಕಿದ ಹಣನ ಸಾ ಕರ್ದ್ ಹೇಳ್ತಿದ್ದೊ. ಹೇಂಗೇತೇಳ್ರೆ, 'ಮಳಿ ಸುಬ್ಬಣ್ಣ ಗೌಡ್ರ್ ರೂಪ್ಯಾ ಐದೂ'ಂತ ಕರ್ದ್ ಹೇಳ್ತಿದ್ದೊ. ಆಗನ ಕಾಲಲಿ ಐದು ರೂಪ್ಯಾ ಹಾಕಿದೊವು ದೊಡ್ಡವು. ಜನ ನಾಕಾಣೆ, ಎಂಟಾಣೆ ಒಂದು ರೂಪಾಯಿ ಹಾಕ್ತಿದ್ದೊ. ಆಗ ನಾಕಾಣೆಗೆ 1 ಸೇರ್ ಅಕ್ಕಿ ಸಿಕ್ತಿತ್ತ್. ಹಾಂಗೆ ಕರ್ದ್‌ದ್ ಹೇಳಿಕನ

ಪಕ್ಕಲಿ ಕುದ್ದೋವು ಇನ್ನೊಬ್ಬರ್ ಅದರ ಒಂದ್ ಕಾಗ್ದಲಿ ಬರ್ಕಂಬತಿದ್ದೊ.

ಶೇಷೋಪಚಾರ ಆದ ಮೇಲೆ ಊಟೋಪಚಾರ ಆತ್. ಆಗ ಬೆಳ್ಗಾರ್ ನಾಕ್ ಗಂಟೆ ಹಕ್ಕಲೆ ಹಕ್ಕಲೆ ಆತ್. ಊಟ ಆದ ಮೇಲೆ ಗೂಡೆನ ಹೆಣ್ಣ್ ಇಳ್ಸಿ ಕೊಟ್ಟೊ. ಆಗ ಎಲ್ಲೋವು ಮೊರ್‍ದೊವೆ. ಗೂಡೆನ ಕಡೆವು ಮೊರ್‍ದಿಕನ ಅವರೊಟ್ಟಿಗೆ ಗಂಡ್‌ನ ಕಡೆನ ಹೆಣ್ಮಕ್ಕ ಕೆಲವು ಜನ ಮೊರ್‍ದೊ. ಅತ್ತಿಗೆ ಮೊರ್‍ದಿಕನ ನಮ್ಮ ಅಣ್ಣನೂ ಒಟ್ಟಿಗೆ ಮೊರ್‍ಟತ್. ಆ ಮೇಲೆ ದಿಬ್ಬಣ ಸುಳ್ಯಕೆ ಹೊರ್‍ಟತ್. ಹೋಕನ ಇದ್ದ ಕುಸಿ ಬಾಕನ ನಂಗೆ ಆತ್ಲೆ. ಆದ್ರೆ ಅತ್ತಿಗೆ ನಮ್ಮೊಟ್ಟಿಗೆ ಬಂದ ಕಾರ್‍ಣ ಸಂತೋಷ ಇತ್ತ್. ಸುಳ್ಯಕ್ಕೆ ನಮ್ಮ ಮನೆಗೆ ಬಂದ್ ಮುಟ್ಟಿಕನ ಗಂಟೆ ಎಂಟಾಗಿತ್ತ್.

ನಮ್ಮ ಸೋದರತ್ತಿಗೆಕ, ಅಕ್ಕಂದರ್ ಆರತಿ ಎತ್ತಿ, ಮೊದು ಮಕ್ಕಳ ಮನೆ ಹತ್ತಿಸಿಕೊಂಡೊ. ಅತ್ತಿಗೆನ ಕೈಲಿ ಅಣ್ಣಂಗೆ ಆರತಿ ಎತ್ತಿಸಿ ಸೋಬಾನೆ ಹಾಡಿಕೆ ಹೇಳ್ದೊ. ಸುರುಗೆ ನಾಚಿಕೆಂದ ಅತ್ತಿಗೆ ಮಿಸ್ಕ್‌ತಿಲ್ಲೆ. ಎಲ್ಲೋವು ಒತ್ತಾಯ ಮಾಡ್ದ ಮೇಲೆ ಮೆಲ್ಲಂಗೆ, ತಲೆನ ಬೊಗ್ಗಿಸಿಕಂಡ್, ಆರತಿ ತಟ್ಟೆನ ಹಿಡ್ಕಂಡ್ ಸೋಬಾನೆ ಹೇಳ್ದೊ. ಅವರ ದನಿ ಬಾರೀ ಪೊರ್‍ಲು ಇತ್ತ್. ಈಗೊಳು ನಂಗೆ ನೆಂಪುಟ್ಟು, 'ಅತ್ತೆಯ ಮಗನಿಗೆ ಮುತ್ತಿನಾರತಿ ಎತ್ತುವೆ' ಈ ಸಾಲ್ ನಂಗೆ ಆಗಾಗ ನೆಂಪಾಗ್‌ತಿತ್ತ್. ಅಕ್ಕಂದರ್ ಅತ್ತಿಗೆಗೆ ಈ ಸಾಲ್ನ ಹೇಳಿಕಂಡ್ ಆಗಾಗ ಕುಸಾಲ್ ಮಾಡ್ತಿದ್ದೊ. ಅತ್ತಿಗೆ ನಾಚಿಕಂಡ್ ಮೋರೆ ಕೆಂಪು ಮಾಡ್ತಿದ್ದೊ. ಅವು ಸೋಬಾನೆ ಹಾಡ್ದಕ್ಕೆ ಹರಿವಾಣಕ್ಕೆ ಹಣ ಹಾಕಿಕೆ ಅಕ್ಕಂದರ್ ಅಣ್ಣಂಗೆ ಹೇಳ್ದೊ. ಅಣ್ಣ ಹತ್ತ್ ರೂಪ್ಯಾನ ತಟ್ಟೆಗೆ ಹಾಕಿತ್. ಅದರ ತೆಗ್‌ದ್ ಅಕ್ಕಂದರ್ ಅತ್ತಿಗೆನ ಮುಸ್ಕುನ ಎಲಸ್ತ್ರದ ಕೊಡಿಗೆ ಕಟ್ಟಿದೊ. ಮೊದುಮಕ್ಕಳ ಮನೆ ತುಂಬಿಸಿದ ಮೇಲೆ ಹಾಲುತ್ಪ ಕುಡ್ಸಿದೊ. ಅದೇ ದಿನ ಮಧ್ಯಾಹ್ನ, ನಮ್ಮ ಮನೆಲಿ ಪಚಾರ ಕಾರ್ಯಕ್ರಮ ಗಡ್ದ್‌ಲಿ ನಡ್ತ್. ಹನ್ನೆರ್‍ಡ್ ಗಂಟೆ ಆಕಾಕನ ಮಾಣಿಬೆಟ್ಟ್‌ಂದ ಹದ್ನೈಯ್ದ್, ಇಪ್ಪತ್ತ್ ಜನ ಮೊರಿ ದಿಬ್ಬಣ ಬಂದೊ. ನಮ್ಮ ಅಪ್ಪ ಊರೊವ್ಕೆ ನೆಂಟ್ರಿಗೆ ಗಡ್ದ್‌ನ ಪಚಾರದ ಊಟ ಹಾಕ್ಸಿದೊ. ಲಾಡ್ ಹೋಳಿಗೆ ಮಾಡಿಸಿದ್ದೊ. ಸಕ್ಕರೆ ಹಾಕಿ ಪಾಯಸ ಮಾಡಿಸಿದ್ದೊ. ಆಗನ ಕಾಲಲಿ ಅದ್ ದೊಡ್ಡ ಗಡ್ದ್‌ನ ಊಟ ಆಗಿತ್ತ್. ಕಂಟ್ರೋಲ್ ಸಮಯ ಸಕ್ಕರೆ, ಅಕ್ಕಿ ಸಿಕ್ಕ್‌ತಿತ್ಲೆ. ಬಂದೊವೆಲ್ಲಾ ಅಣ್ಣನ ಮೊದ್ವೆನ ಹೊಗೊಳೋವೇ.

* * * * *

ಚುಕ್ಕೆ–6

"ಹೂವುನ ದೈಯಿಗ ಮತ್ತೆ ಭಜನೆನ ಗಮ್ಮತ್ತ್"

ಅವ್ವ ಯಾಗೊಳು ಹೇಳ್ತಿದ್ದೊ, 'ನೀ ಬಳೆ, ಸೀರೆ, ಹೂವೂಂತ ಯಾವುದಕ್ಕೂ ಆಸೆ ಮಾಡಿಕೆ ಆಗದ್. ತುಂಬಾ ಓದೊಕುಬಲಾ. ನಿನ್ನ ಕಾಲ್ ಮೇಲೆ ನೀ ನಿಲ್ಲೋಕು. ತುಂಬಾ ಓದಿದೊವು ಚಿನ್ನ ಹಾಕುವೆನೋ?– ಎಂತ. ಆ ಕಾರ್ಣಂದಳೋ ಏನೋ ನಾ ಸಂಣಂವ ಇರಿಕನ ಕೈ, ಕುತ್ತಿಗೆ, ಕೆಬಿಗಳಿಗೆ ಏನೂ ಹಾಕದೆ ಬೋಳು, ಬೋಳಾಗಿದ್ದೆ. ಆದರೆ ನಾ ಥರ್ಡ್ ಪೋರ್ಮ್ಲಿ ಇರಿಕನ ಒಮ್ಮೆ ನನ್ನ ಲೆಕ್ಕದ ಮಾಸ್ಟ್ರ, ಸಿ.ಆರ್. ಭಟ್‌ಂತ ಅವರ ಹೆಸ್ರ್, ಅವು ನನ್ನ ಕರ್ದ್‌ದ್, "ಏನ್‌ನೆ ಗೂಡೆ, ಏನ್‌ನಿನ್ನ ಅವತಾರ? ನೀ ಇಸ್ಟ್ ದೊಡ್ಡ ಸಾವ್ಕಾರ್‌ರ ಮಗಳಾಗಿ ಕೈ, ಮೈ, ಬೋಳಾಗಿ ಸಾಲೆಗೆ ಬಂದಳ. ನಿಂಗೆ ಕೆಬಿಗೆ ಆದರೂ ಒಂದು ಟಿಕ್ಕಿ ಇಸಿಕಂಡ್ ಬಾಕೆ ಆದುಲ್ಲೆನೋ? ನಿನ್ನ ಅಪ್ಪಂಗೆ, ನಾ ಹೇಳ್ದ್‌ಂತ ಹೇಳ್, ನಾಳೆಂದ ಕೆಬಿಗೆ ಒಂದು ಚಿನ್ನದ ಟಿಕ್ಕಿ ಇಸಿಕಂಡ್ ಬಾ'ಂತಹೇಳ್ದೊ.

ಆಗ ನನ್ನ ಮನ್ಸ್‌ಗೆ ಆತ್, ಹೌದಲ್ಲಾ, ಎಲ್ಲೋವು ಕೈ ತುಂಬಾ ಬಳೆ, ಕುತ್ತಿಗೆಗೆ ಸರ, ಕೆಬಿಗೆ ಲೋಲಾಕ್, ಹಾಕಿಕಂಡ್ ಬಂದವೆ. ನಾ ಮಾತ್ರ ಯಾಕೆ ಹೀಂಗೇ'ಂತ. ಅಂದೇ ಮನೆಗೆ ಹೋಗಿ, ಸಿ. ಆರ್. ಭಟ್ರ್ ಮಾಸ್ಟ್ರ

ಹೇಳ್ದರ ಅವ್ವನೊಟ್ಟಿಗೆ ಹೇಳ್ದೆ. ಅವ್ವ ನಂಗೆ ಕೆಬಿಗೆ ಒಂದು ಕೆಂಪು ಕಲ್ಲ್‌ನ ಟಿಕ್ಕಿಹಾಕಿ ಸಾಲೆಗೆ ಕಳ್ಸಿದೊ. ಅವ್ವನ ಹಕ್ಕಲೆ ತುಂಬಾ ಚಿನ್ನದ ನಗಗ ಇದ್ದೊ. ಸಾಲೆಗೆ ಹೋಗುವ ಮಕ್ಕಳಿಗೆ ಚಿನ್ನ ಯಾಕೆ? ಅದರ ಎಲ್ಯಾದರ್ ಇಟ್ಟರೇಂತ್ ಅವರ ಗ್ರೆಯಿಕೆ.

ನಂಗೆ ಹೂವುಂತೇಳ್ರೆ! ಭಾರೀ ಪ್ರೀತಿ. ಮುಡ್ಯಕಲ್ಲ. ನಾ ಹೂವುನ ಮುಡ್ಯತಿಲ್ಲೆ. ದೈಯಿಲಿ ಇದ್ದ ಹೂಗಳ ನೋಡ್ದೂಂತೇಳ್ರೆ ನಂಗೆ ತುಂಬಾ ಪ್ರೀತಿ. ಎಷ್ಟ್ ಹೊತ್ತ್ ಬೇಕರೂ ದೈಯಿಲಿದ್ದ ಹೂಗಳ ನೋಡಿಕಂಡ್ ಕುದ್ರ್ತಿದ್ದೆ. ನಾ ಎಲ್ಲೆಲ್ಲಿಂದಳೋ ಗೋರಟೆ, ಮಂದಾರೆ, ಜಾಜಿ ಹೂವುನ ದೆಯಿಗಳ ತಂದ್‌ದ್ ಹಿತ್ಲ್‌ಲಿ ನೆಡ್ತಿದ್ದೆ. ನಮ್ಮ ಮನೆನ ಬಾಮಿನ ಹಕ್ಕಲೆ ಒಂದು ಸಣ್ಣ ಹೂವುನ ತೋಟ ಉಟ್ಟು. ಅದ್ ನನ್ನ ಸಣ್ಣಕ್ಕನ ಸೊತ್ತ್. ಅದರ ಹೂಗಳ ಮುಟ್ಟಿಕೆ ಅಕ್ಕ ಯಾರಿಗೂ ಬುಡ್‌ತಿಲ್ಲೆ. ದಿನಾ ಅದ್ಕೆ ಬಾಮಿಂದ ನೀರ್ನ ಎಳ್‌ದ್ದ್ ಹಾಕ್ತಿತ್ತ್. ನಾಕಾರ್ ಸಾಲ್‌ನ ಅರಶಿಣ, ಕೆಂಪು ಬಣ್ಣದ ಅಬ್ಬಂತಿಕೆ ದೆಯಿಗ, ಒಂದ್ ಗಟ್ಟದ ಹರ್ಕ್ಳ ದೆಯಿ, ಅದರ ಬುಡಲಿ ಮೂರ್ನಾಕ್ ಇರ್‌ವಂತಿಗೆ ಬೊಳ್ಳಿನ ನೆಟ್ಟ್, ದಿನಾ ನೀರ್ ಹಾಕಿ ಸಾಂಕ್‌ತಿತ್ತ್. ಬೊಳ್ಳಿ ಹರ್ಕ್ಳನ ದೈ ತುಂಬಾ ಹಬ್ಬಿಕಂಡ್ ಬಂದ್, ಮಳೆ ಬೀಳಿಕಾಕನ ಚಿರಿ, ಮುಗುರುಗ ಒಟ್ಟಿಗೆ ಬುಡ್‌ತಿತ್ತ್. ಪಗ್ಗು, ಬೇಶ ತಿಂಗಳ್‌ಲಿ ತುಂಬಾ ಹೂ ಬುಡ್ತಿತ್ತ್. ಕುಕ್ಕೆ ತುಂಬಾ ಹೂವುನ ಕೊಯ್‌ದ್ ನಾನೂ ಅಕ್ಕನೂ ಮಾಲೆ ಕಟ್ಟಿದ್ದೊ. ಮೂರು ಎಳೆ ಬೊಳ್ಳಿಲಿ ಹೂನ ನೆಯಿದೂಂತೇಳ್ರೆ ನಂಗೆ ಬಾಳ ಕುಸಿ. ಅದರ ಹೇಳಿಕೊಟ್ಟದ್ ಸಣ್ಣಕ್ಕನೇ. ಅದ್ ಬಾಳ ಪೊರ್ಲುಲಿ ಮಾಲೆ ಕಟ್ಟಿತ್ತ್. ಅದ್ಕೆ ಬೇರೆ ಬೇರೆ ತರಲಿ ಮಾಲೆ ಕಟ್ಟಿಕೆ ಗೊತ್ತಿತ್ತ್. ಸಣ್ಣಕ್ಕನ ಹೂತೋಟಲಿ ನಾ ಮಾಣಿ ಬೆಟ್ಟ್‌ಂದ ತಂದ್ ಕೊಟ್ಟ ಸೂರ್ಯಕಾಂತಿ ದೈಲಿ ತುಂಬಾ ಹೂವು ಬುಡ್ತಿತ್ತ್. ಕೆಲವು ಜನ ಅದರ ಬೆಟ್ಟ ತಾವರೇಂತ ಹೇಳ್ವೆ. ಬೊಳ್ಪುಗೆ ಅರ್ಳಿಕನ ಬಿಳಿ ಬಣ್ಣ ಇದ್ದ ಅದ್, ಸೂರ್ಯ ನೆತ್ತಿಗೇರ್ದಾಂಗೇ ಕೆಂಪು ಕೆಂಪಾದೆ. ದಿನಕ್ಕೆ ನಾಲ್ವತ್, ಐವತ್ತ್ ಹೂ ಬುಡ್ತಿತ್ತ್. ಆಗ ಅದರ ನೋಡ್ದೇ ಒಂದು ಪೊರ್ಲು. ದಾಸಾಳ ದೈ, ಮೊಸೆ ಹೂನ ದೈಗ ಅಕ್ಕನ ತೋಟಲಿ ಇತ್ತ್. ನಾವು ಅದರ ಕೊಯ್ದ್‌ದ್ ದೇವ್ರಿಗೆ ಇಡ್ತಿದ್ದೊ. ನಮ್ಮ ದೇವ್ರ ಪಟಗ ಹೂಗಳ್‌ಂದ ತುಂಬಿ ಹೋಗ್ತಿತ್ತ್. ದಿನಾ ಹಿಂಬೊತ್ತ್ ಮೈ, ಕೈ ಮಿಂದ್‌ದ್, ದೇವ್ರಿಗೆ ದೀಪ ಹೋಸಿ, ನಾನೂ, ಅಕ್ಕನೂ ತಾಳ ಹಾಕಂಡ್ ಭಜನೆ ಪದಗಳ ಹೇಳ್ತಿದ್ದೊ. ದೇವ್ರಿಗೆ ಹೂವುಂದ ಅಲಂಕಾರ ಮಾಡ್ದು, ದೇವ್ರ ತಟ್ಟೆ, ದೀಪ, ತೊಳ್ಯೊದು ನನ್ನ ಕೆಲ್ಸ. ಅದ್ ನಂಗೆ ತುಂಬಾ ಪ್ರೀತಿನ ಕೆಲ್ಸನೂ ಹೌದು. ಉಗ್ಗವ ಉಮಿರಾಶಿಗೆ ಕಿಚ್ಚಿ ಹಾಕಿ, ಉಮಿಕೆರಿ ಮಾಡ್ತಿತ್ತ್. ಆ ಉಮಿಕೆರಿನ ಹಾಕಿ, ತಿಕ್ಕಿ, ತಿಕ್ಕಿ ದೇವ್ರ ಪಾತ್ರಗಳ ಪಳಪಳಾಂತ ಹೊಳೆವ ಹಾಂಗೆ ತೊಳ್ಯತಿದ್ದೆ. ಸುರುಸುರುಗೆ ಹುಣ್ಸೆ ಹುಳಿ ಹಾಕಿ ತೊಳ್ಯ್‌ತಿದ್ದೆ. ಅದ್ ಹಂಞ ಹೊತ್ತ್‌ಲಿ ಕಪ್ಪಾಗ್ತಿತ್ತ್. ಆಗ ಅವ್ವ ಹೇಳ್ದೊ, 'ಹುಣ್ಸೆಹುಳಿ ಹಾಕಿ ತೊಳಿಬೇಡ. ಪಾತ್ರಬೇಗ ಕಪ್ಪಾದೆ. ಬರೇ ಉಮಿಕೆರಿಲಿ ತಿಕ್ಕಿ,

ತಿಕ್ಕಿ ತೊಳೀಂತ'. ಅದರ್‌ಂದ ಮೇಲೆ ಅವ್ವ ಹೇಳ್ದಾಂಗೇ ಮಾಡ್ದೆ.

ಹೊಸ ವೊರ್ಸ ಬಾಕಾಕನ, ಜನವರಿ ತಿಂಗಳ್‌ಲಿ ನಾವ್ಗೆ ತುಂಬಾ ಕೆಲೆಂಡರ್‌ಗ ಸಿಕ್ಕ್‌ತಿದ್ದೊ. ನಮ್ಮ ಅಪ್ಪ ವ್ಯಾಪಾರಸ್ಥ ಆದ ಕಾರ್ಣ, ಮಂಗ್ಳೂರ್ ಸೇಠ್‌ಗ, ಸಾವ್ಕಾರ್‌ಗ, ಪೊರ್ಲ್, ಪೊರ್ಲುನ ಕೆಲಂಡರ್‌ಗಳ ಕಳ್ಸ್‌ತಿದ್ದೊ. ಬೊಂಬಾಯಿಂದಳೂ ಅಪ್ಪಂಗೆ ಕೆಲೆಂಡರ್‌ಗ ಬಾತಿದ್ದೊ. ಆಗನ ಕಾಲಲಿ ಅದರ್ಲಿ ಹೆಚ್ಚಿನೊವು ದೇವರ ಪಟಗಳೇ ಆಗಿದ್ದೊ. ಅದರ್ಲಿ ಲಾಯ್ಕ್, ಲಾಯ್ಕ್‌ನ ದೇವರ ಪಟಗಳ ಹುಡ್ಕಿ, ಅದರ ಕತ್ರಿಸಿ, ಅದ್ಕೆ ಜರಿ ಹೊಡಿಗಳ ಅಂಟಿಸಿ, ಕನ್ನಡಿ ಹಾಕಿ, ಕಟ್ಟ ಹಾಕ್ಸಿ, ದೇವರ ಜಾಗೆಲಿ, ಗೋಡೆಲಿ ಆಣಿ ಹೊಡ್ಡ್‌ದ್, ನೇತಾಡ್ಸ್‌ತಿದ್ದೊ. ಆಗ ದೇವರ ಕೋಣೇಂತ ನಮ್ಮ ಮನೆಲಿ ಬೇರೆ ಇತ್ತಿಲ್ಲೆ. ಅಟ್ಟಕೆ ಹತ್ತಿಕೆ ಆಚಾರಿ ಮಾಡ್ದ ಮರದ ಕೇರ್ಪುನ ಗೋಡೆ ಹಕ್ಕಲೆ ನಿಲ್ಲಿಸಿದ್ದೊ. ಅದರ ಹತ್ತುವ ಮೆಟ್ಲ್ ಅಗಲ ಇತ್ತ್. ಕೇರ್ಪುನ ಎದ್ರಿಗೆ ಗೋಡೆಲಿ ಆಣಿ ಹೊಡ್ಡ್‌ದ್ ತುಂಬಾ ದೇವ್ರ ಪಟಗಳ ತೂಗಿ ಹಾಕಿ, ಕೇರ್ಪುನ ಮೆಟ್ಲ್ ಮೇಲೆ ಕುದ್ದ್‌ದ್ ಭಜನೆ ಮಾಡ್ತಿದ್ದೊ. ಕಡೆ ಕಡೆಗೆ ನಮ್ಮ ದೇವ್ರ್‌ಗ ಜಾಸ್ತಿ ಆಕನ, ಅಲ್ಲಿ ಜಾಗೆ ಸಾಕಾಗದೆ, ಅದರ ಅಲ್ಲಿಂದ ನಡುಕೋಣೆಗೆ ಬದ್ಲಾಯಿಸಿಕೆ ಅಪ್ಪ ಹೇಳ್ದೊ. ನಡ್‌ಕೋಣೆನ ಮೂರ್ ಮಡೆನ ಗೋಡೆಲೂ ಎಲ್ಲಾ ದೇವ್ರ್‌ಗ ತುಂಬಿ ಹೋದೊ. ಗಣಪತಿ, ಸತ್ಯನಾರಾಯಣ, ಶಿವ ಪಾರ್ವತಿ, ರಾಮ, ಕೃಷ್ಣ, ಲಕ್ಷ್ಮಿ, ಸರಸ್ವತಿ, ಕಾಳಿಯ ಮರ್ಧನ, ನರಸಿಂಹ ಅವತಾರ, ತಿರ್ಪತಿ ತಿಮ್ಮಪ್ಪಾಂತ, ಹೀಂಗೆ 30–40 ದೇವ್ರ ಪಟಗ ಇದ್ದೊ. ಆಗ ನಮ್ಮ ಭಜನೆ ಬಾಳ ಗೌಜಿಲಿ ನಡ್ಯತ್ತಿತ್ತ್. ಗಂಟೆ, ಜಾಗಟೆ, ತಾಳಗ ಇದ್ದೊ. ನಾ, ಅಕ್ಕ, ತಮ್ಮಂದರ್, ಅಣ್ಣನ ಮಕ್ಕ, ಕೆಲ್ಸದ ಹೈದಂಗ ಎಲ್ಲ ಸೇರಿ ಹಿಂಬೊತ್ತ್ 6 ಗಂಟೆಂದ ಇರ್ಳ್ 8 ಗಂಟೆ ಮುಟ್ಟ ಭಜನೆ ಮಾಡ್ತಿದ್ದೊ. ಭಜನೆ ಮುಗ್ಯಕಾಕನ ಒಮ್ಮೊಮ್ಮೆ ಅವ್ವಂಗೆ ಬಾಳ ಕುಸಿ ಆಗಿ, ಬೆಲ್ಲ, ಕಾಯಿ ಹೂ, ಏಲಕ್ಕಿ, ತುಪ್ಪ ಹಾಕಿ ಅವ್ಲಕ್ಕಿ ಕಲ್ಸಿ ನಾವ್ಗೆ ಕೊಡ್ತಿದ್ದೊ.

ನಮ್ಮ ಅಪ್ಪ ದೊಡ್ಡ, ದೇವ್ರ ಭಕ್ತರ್. ನಾವು ಸಣ್ಣದಿರಿಕನ ಅಪ್ಪ ಮಾಸ ತಿಂಬತಿತ್ಲೆ. ನಾನೂ ಸಣ್ಣಕ್ಕನೂ ಅಪ್ಪನ ಹಾಂಗೆ ಪೂರಾ ಕಾಯಿಪಲ್ಲೇನೇ ತಿಂದ್‌ದ್ ಸಸ್ಯಹಾರಿ ಆಗಿದ್ದೊ. ಆದ ಕಾರಣ ನಮ್ಮ ಮನೆ ಒಳಗೆನ ಅಡ್ಗೆ ಕೋಣೆಲಿ ಮಾಸದ ಅಡಿಗೆ ಮಾಡ್‌ತಿತ್ಲೆ. ಅಜ್ಜಪ್ಪ, ಉಗ್ಗವ, ಅವ್ವ, ಅಣ್ಣ, ಅತ್ತಿಗೆ, ಮಕ್ಕ ಮಾಸ ತಿಂಬತಿದ್ದೊ. ಅದ್ಕಾಗಿ ಕೊಟಗೆಲಿ ಒಲೆ ಹಾಕಿ, ಮಾಸದ ಅಡ್ಗೆ ಮಾಡ್ತಿದ್ದೊ. ಮಾಸದ ಊಟ ಮಾಡೋವ್ಕೆ ಕೊಟಗೆಲಿ ಒಂದು ಉದ್ದದ ಮೇಜ್ ಮತ್ತೆ ಒಂದ್ ಉದ್ದದ ಬೆಂಚ್ ಇತ್ತ್. ಆಗನ ಕಾಲಲೇ ನಮ್ಮ ಮನೆಲಿ ನೆಲಲಿ ಕುದ್ದ್‌ದ್ ಉಂಬತಿತ್ಲೆ. ಅಪ್ಪ ಮಂಗ್ಳೂರಿಗೆ ಸಾಮಾನ್ ತಾಕೆ ಹೋಕಾಕನ ದೊಡ್ಡ ದೊಡ್ಡ ಸಾವ್ಕಾರರ ಸ್ನೇಹ ಅವ್ಕಿತ್ತ್. ಅವು ಒಮ್ಮೊಮ್ಮೆ ಅಪ್ಪನ ಊಟಕ್ಕೆ ಅವರ ಮನೆಗೆ ಕರ್ಯೋತಿದ್ದೊ. ಅಲ್ಲಿನ ಆಡಂಭರ ನೋಡಿ, ಅಪ್ಪನೂ ಮನೆಲಿ ಮೇಲೆ ಕುದ್ದ್ ಉಂಬಕೆ ಉದ್ದದ ಮೇಜ್, ಬೆಂಚ್ ಮಾಡ್ಸಿದೊ. ಮಕ್ಕ ಮಾತ್ರ ನೆಲಲಿ ಕುದ್ರ್‌ತಿದ್ದೊ. ಒಮ್ಮೆ ನಮ್ಮ ಅತ್ತಿಗೆ

ಮಾಸದ ಗೈಪುಗೆ ಹಾಕಿದ ಸೆಡೆಲಿ, ನೆಟ್ಟಿ ಕ್ಯಾ ಗೈಪು ತಂದ್‌ದ್ ಇಕ್ಕಿದೋಂತ ಸಣ್ಣಕ್ಕ ಇಜ್ಜೆಲಿಗೆ ಹೋಗಿ ಬಸ ಬಸಂತ ತಿಂದದರ ಕಕ್ಕಿತ್. ಅತ್ತಿಗೆಗೆ ತುಂಬಾ ಬೊಯ್ತ್. ಪಾಪ, ಅತ್ತಿಗೆ ಎದ್ರ್ ಉತ್ತರ ಕೊಡದೆ ಸಣ್ಣಕ್ಕನ ಹಕ್ಕಲೆ, 'ನಂಗೆ ಅಂಬ್ಲೆರ್ಪುಲಿ ಗೊತ್ತಾತ್ಲೆ. ಬೇಜಾರ ಮಾಡ್ಬಾಡಾಂತ ಸಮಾಧಾನ ಮಾಡ್ದೊ. ಅಕ್ಕ ಮತ್ತೆ ಅತ್ತಿಗೆ ಬಾಳ ಹೊಂದಿಕೊಂಡಿದ್ದೊ. ಅತ್ತಿಗೆಗೆ ಅವ್ವ ಏನಾದರ್ ಬೊಯ್ದರೆ ಸಣ್ಣಕ್ಕ ಅತ್ತಿಗೆನ ಕಡೆ ನಿಂತ್, ಅವ್ವನ ಹಕ್ಕಲೆ ಜಗಳ ಮಾಡ್ತಿತ್. ಅದ್ಕೆ ಅತ್ತಿಗೆ ಮೇಲೆ ಭಾಳ ಪ್ರೀತಿ ಇತ್ತ್.

ಅಪ್ಪ ಬೊಳ್ಪುಗೆ 5 ಗಂಟೆಗೆ ಎದ್ದ್ ನಮ್ಮ ಮನೆಂದ 3/4 ಮೈಲ್ ದೂರ ಇದ್ದ ಹಳ್ಳಕ್ಕೆ ಹೋಗಿ ಮಿಾಂದ್, ಅವು ಹಾಕಿದ ಬಟ್ಟೆನ ಅವೇ ಒಗ್ದ್‌ದ್, ಅದರ ಹೆಗ್ಲ್‌ಗೆ ಹಾಕಂಡ್, ಮರಂದ ಮಾಡ್ದ ಮೆಟ್ಟ್‌ನ ಮೆಟ್ಟಿಕಂಡ್, ಮನೆಗೆ ಬಂದ್, ತಿರ್ಪತಿಂದ ತಂದ ಭಸ್ಮದ ಉಂಡೆಂದ ಮೂರು ನಾಮ ಹಣೆಗೆ ಎಳ್ದ್‌ದ್, ಅದರ ನಡುಲಿ ಒಂದು ಕುಂಕುಮದ ಬೊಟ್ಟುನ ಎರ್ಡ್ ಹುಬ್ಬು ಕೂಡುವಲ್ಲಿ ಇಸ್ತಿದ್ದೊ. ಆ ಮೇಲೆ 'ಏಳು ನಾರಾಯಣ ಏಳು ಲಕ್ಷ್ಮೀ ರಮಣ, ಏಳಯ್ಯ ಬೆಳಗಾಯಿತು' – ಎಂತ ಉದಯರಾಗ ಹಾಡ್ತಿದ್ದೊ. ಆಗ ಸುಮಾರ್ 6 ಗಂಟೆ ಆಗ್ತಿತ್. ಅವು ಹೇಳುವ ಉದಯರಾಗ ಕೇಳಿಕಾಕನ ನನ್ನ ದೊಡ್ಡ ತಮ್ಮ ನಾರಾಯಣ ಧಡಕ್ಕನೆ ಎದ್ದ್ ಕುದ್ದ್, ಧಡಕ್ಕನೆ ಮೊಲ್ಲಿ ಒಲ್ಲಿನ ಹೊದ್ದ್‌ಕಂಬತಿತ್. ಅದರ ನೋಡಿ ಅಪ್ಪ ನೆಗಾಡ್‌ತಿದ್ದೊ. ಒಮ್ಮೊಮ್ಮೆ ಅವು ಅವನ ಮುಸ್ಕುನ ಎಳ್ದ್, 'ಎದ್ರ್ ಎದ್ರ್ ಪಳ್ಳಂಗೆ ಬೊಳ್ಪಾತ್. ಹಕ್ಕಿಗ ಸಾ ಎದ್ದೊ. ನೀ ನರ ಮೊಂಯಿಂಸ, ನಿಂಗೆ ಎದ್ರಿಕೆ ಆದುಲ್ಲೆನೋಂತ' ಹೇಳಿ । ಅವನೊಟ್ಟಿಗೆ ನಮ್ಮನೂ ಎದ್ರ್‌ಸ್‌ತಿದ್ದೊ. ಆ ಮೇಲೆ ದೇವ್ರಿಗೆ ದೀಪ ಹೋಸಿ, ಐದ್ ಊದುಬತ್ತಿ ಹೊತ್ತಿಸಿ, ಗಣ ಗಣ ಗಂಟೆ ಬಾರ್ಸಿ, ದೇವರ ನಾಮ ಹಾಡಿಕಂಡ್ ಆರತಿ ಎತ್ತ್‌ತಿದ್ದೊ. ಅವರ ಎತ್ತರದ ದನಿ ಮಾರ್ಗಲಿ ಹೋಗೋವ್ಕೂ ಕೇಳ್ಸ್‌ತಿತ್. ಅವು ಒಮ್ಮೆ ನಿಂತ್ ಬೊಗ್ಗಿ ನೋಡಿ ಹೋತಿದ್ದೊ.

* * * * *

ಚುಕ್ಕೆ–7

"ನಮ್ಮ ಅಜ್ಜಪ್ಪ"

ನಮ್ಮ ಅಜ್ಜಪ್ಪ ತುಂಬಾ ಸಾಧು ಮ್ಯೊಂಸ. ಗಟ್ಟಿ ಮುಟ್ಟಾದ ಸಪೂರ ಶರೀರ. ನೂರ ಆರ್ ವೊರ್ಸ ಬೊದ್ಕಿದ್ದೊ. ಒಂದುನೂ ಹಲ್ಲ್ ಉದ್ರ್‌ತಿಲ್ಲೆ. ಹಲ್ಲ್‌ನ ಎಡೆಲಿ ಸರಿಗೆನ ಹಾಂಗೆ ಪಳ ಪಳಾಂತ ಹೊಳೆವ ಹಲ್ಲ್ ಒಂದ್ ಬಂದಿತ್ತ್. ಎಲ್ಲೋವು ಅದರ ಕೊತ್ತಿಹಲ್ಲ್‌ಂತ ಹೇಳ್ತಿದ್ದೊ. ಪರ್ಸಂಗ ಹೇಳ್ದರ್ಲಿ ಎತ್ತಿದ ಕೈ. ಮಳೆ ಬಾಕನ ಅವು ಅವರ ಕಂಬೊಳಿ ಒಳಗೆ ಪುಳ್ಳಿಕಳ ಕುದ್ರಿಸಿಕಂಡ್ ರಾಜಕುಮಾರರ ಕತೆ ಹೇಳ್ತಿದ್ದೊ. ಕಲ್ಯಾಣಪ್ಪನ ಕಾಟ ಕಾಯಿ ಕತೆನ ಕಣ್ಣಿಗೆ ಕಟ್ಟುವ ಹಾಂಗೆ ಹೇಳ್ತಿದ್ದೊ. ದಂಡ್ ಬಾಕನ ನಮ್ಮ ಅಜ್ಜಪ್ಪನ ಅಪ್ಪ ಸಣ್ಣೋವು ಗಡ. ಮನೆಗೊಂದು ಗಂಡಾಳ್ನ ದಂಡ್‌ಗೆ ಕಳ್ಸೊಕೂಂತ ಕೆದ್‌ಂಬಾಡಿ ರಾಮೇ ಗೌಡ್ರ್ ಹೇಳಿಕಾಕನ ನಮ್ಮ ಅಜ್ಜಪ್ಪನ ಅಪ್ಪನೂ ಹೋಗಿದ್ದೊ ಗಡ. ಸೂಂತೋಡು ಮತ್ತೆ ಕೆದಂಬಾಡಿ ಅಕ್ಕ ಪಕ್ಕದ ಊರ್‌ಗ. ಉಳುವಾರ್‌ಲಿ ದಂಡ್ ಬಾಕಾಕನ ಹೆಣ್ಮಕ್ಕ ಎಲ್ಲಾ ಹೆದ್ರಿದ್ ಮಕ್ಕಳ ತೊಟ್ಲ್‌ಲೇ ಮೊಲ್ಗಿಸಿ, ಕಾಡಿಗೆ ಓಡಿ ಹೋಗಿ ಅಡಿಂಗಿ ಕುದ್ದೊಗಡ. ದಂಡ್‌ಲಿ ಇದ್ದ ಜನಂಗ ತೊಟ್ಲ್‌ಲಿ ಮೊಲ್ಗಿದ ಮಕ್ಕಳ ನೋಡಿ, ಹಾಂಗೇ ಬುಟ್ಟ್ ಹೋದೋಗಡ. ಇಲ್ಲರೆ ಹೆಣ್ಮಕ್ಕಳ ಕೆಬಿ ಮೂಂಕುಂದ ಬಲತ್ಕಾರಲಿ ಚಿನ್ನನ ಎಳ್ದ್

ತಕೊಂಡೋಗ್ತಿದ್ದೊಗಡ. ಕೊಟ್ಟತ್ಲರೆ ಕೆಬಿನನೇ ಕತ್ರ್‌ಸ್‌ತಿದ್ದೊಗಡ. ಮನೇಲಿದ್ದ ಸಾಮಾನಿನ ಗೋಂಚಿಕಂಡ್ ಹೋಗ್ತಿದ್ದೊಗಡ. ನಾನೂ, ತಮ್ಮಂದರೂ ಈ ಕತೆನೆಲ್ಲಾ ಕೇಳಿ, ದಂಡಿನೋವು ಎಲ್ಲಿ ನಮ್ಮ ಮನೆಗೆ ಬಂದವೆನೋಂತ ಹೆದ್ರಿ ಬಾಯ್ ಬುಟ್ಟ್ ಕಣ್ಣ ದೊಡ್ಡದ್ ಮಾಡಿಕಂಡ್, 'ಅಜ್ಜಪ್ಪಾ, ದಂಡ್‌ನೋವು ನಮ್ಮ ಮನೆಗೂನೂ ಬಾವೋನೋ'ಂತ ಕೇಳ್ತಿದ್ದೊ. 'ಈಗ ಎಲ್ಲಿದಂಡ್ ? ಅದ್ ಎಲ್ಲಾ ಮುಗ್ದ್ ಹೋದ ಕತೆ. ನೂರಿನ್ನೂರು ವೊರ್ಸದ ಹಿಂದೆನ ಕತೆ. ಈಗ ನಮ್ಮ ಆಳೋವು ಕಂಪೆನಿ ಸರ್ಕಾರದೋವು ಅಲ್ಲನೋ'ಂತ ಹೇಳ್ತಿದ್ದೊ. ನಾವ್ಗೆ ಕಂಪೆನಿ ಸರ್ಕಾರಾಂತೇಳ್ರೆ ಏನಂತ ಗೊತ್ತಿತ್ಲೆ. ನಾವು ಸಣ್ಣೋವು ಇರಕನ ಇಂಗ್ಲೀಷ್ ನೋವು ನಮ್ಮ ದೇಶನ ಆಳ್ತಿದ್ದೊ. ಅದರ ಅಜ್ಜಪ್ಪ ಕಂಪೆನಿ ಸರ್ಕಾರಾಂತ ಹೇಳ್ತಿದ್ದೊ.

ಅಜ್ಜಪ್ಪ ಜೊರ ಬಂದವ್ಕೆ ಮೊಂತ್ರಿಸಿ ನೂಲು ಕಟ್ತದ್ದೊ. ಕೊದಿ ತೆಗ್ಯೊದು, ಕಣ್ಣಾಸ ತೆಗ್ಯೊದು, ದನಂಗಳಿಗೆ ಮೊಂತ್ರಿಸಿ ನೂಲು ಕಟ್ಟುದು ಮಾಡ್ತಿದ್ದೊ. ಅವು ಅದಕ್ಕೆಲ್ಲಾ ದುಡ್ಡು ತಕಂಬತಿತ್ಲೆ. ಧರ್ಮದ ಮೊದ್ದು ಕೊಡ್ತಿದ್ದೊ. ತುಂಬಾ ಜನಂಗ ಅವರ್ನ ಹುಡಿಕಂಡ್ ಬಂದ್ ಅವರ್‌ಂದ ನೂಲ್ ಮೊಂತ್ರಿಸಿ ತಕೋಂಡೋಗ್ತಿದ್ದೊ. ಅವರ್ನ ಕರ್ಕೊಂಡೋಗಿ ದನಂಗಳಿಗೆ ಮೊದ್ದ್ ಮಾಡ್‌ಸ್‌ತಿದ್ದೊ. ದುಡ್ಡುನ ಪಗರಕ್ಕೆ ಅವ್ಕೆ ದೊಡ್ಡ ದೊಡ್ಡ ಹುಂಜಗಳ, ಕೋಳಿ ಲಾಕಿಗಳ ತಂದ್ ಕೊಡ್ತಿದ್ದೊ. ಪುಳ್ಳಿಕ, ಪುಳ್ಳಿನ ಮಕ್ಕಳ ಕಂಡರೆ ಅವ್ಕೆ ಬಾಳ ಪ್ರೀತಿ. ಅವು ಇರಿಕಾಕನ ಅಣ್ಣಂಗೆ ನಾಕ್ ಮಕ್ಕ ಹುಟ್ಟಿದ್ದೊ. ಅಣ್ಣನ ದೊಡ್ಡ ಮಂಜ ಹೂವಯ್ಯಂಗೆ ದಿನಾ ಏನಾರ್ ತಿನ್ಸ್ ತಂದ್ ಕೊಡ್ತಿದ್ದೊ. ಅವರ ಕಂಡರೆ ಅವ್ಕೆ ಬಾಳ ಪ್ರೀತಿ. ಕೊಂಡಾಟಂದ ಹೂವಯ್ಯನ ಅವು 'ಅಣ್ಣ ಕೂಸೂ'ಂತ ಕರ್ಯೊತಿದ್ದೊ. ಅಜ್ಜಪ್ಪಂಗೆ ಅಕ್ಕ ತಂಗೆಕ ಇತ್ಲೆ. ಅವರ ಅಪ್ಪಂಗೆ ಅವು ಒಬ್ಬನೇ ಮಂಜಗಡ. ಅವ್ಕೆ ನಮ್ಮ ಅಪ್ಪ ಒಬ್ಬನೇ ಮಂಜ. ಹಾಂಗಾಗಿ ಅಪ್ಪಂಗೂ, ಅಜ್ಜಪ್ಪಂಗೂ ಕುಟುಂಬದೊವುಂತೇಳ್ರೆ ಬಾಳಪ್ರೀತಿ.

ಸೂಂತೋಡುಲಿ ನಮ್ಮ ಮನೆತನದ ದೈವಂಗಳ ಚಾವಡಿ ಇತ್ತ್. ಅದರ ಪೂಜಾರ್ಕೆ ನಮ್ಮ ಅಜ್ಜಪ್ಪಂದ್. ಕುಟುಂಬಲಿ ಅವೇ ಹಿರ್ಯೊವು. ಆದರ್‌ಂದ ಅವೇ ಎಜಮಾನ ಆಗಿದ್ದೊ. ನಾವು ಸುಳ್ಯಲಿದ್ದ ಕಾರ್ಣ, ಚಾವಡಿಲಿ ದೀಪ ಹೋಸುವ ಕೆಲ್ಸ ನಮ್ಮ ಕುಟುಂಬಲಿ ತಿಮ್ಮಯ್ಯ ಸಣಪಾಂತ ಇದ್ದೊ. ಅವೇ ಮಾಡ್ತಿದ್ದೊ. ಆ ಸಣಪನ ಮೇಲೆ ಅಜ್ಜಪ್ಪಂಗೆ ಬಾಳ ಪ್ರೀತಿ. ಸೂಂತೋಡಿಗೆ ಹೋದರೆ ಅವರ ಮನೆಲೇ ನಿಲ್ತಿದ್ದೊ. ಹಬ್ಬಗಳ ಸಮಯಲಿ ದೈವಂಗಳಿಗೆ ತಂಬಿಲ ಕೊಡಿಕಾಕನ ಅಜ್ಜಪ್ಪನೊಟ್ಟಿಗೆ ಸೂಂತೋಡಿಗೆ ನಾನು ತಮ್ಮಂದರೂ ಹೋಗ್ತಿದ್ದೊ. ಮೈ ನೆರ್ದ ಗೂಡೆಗ ಚಾವಡಿ ಒಳಗೆ ಹೋಕೆ ಆಗದ್‌ಗಡ. ನಾ ಸಣ್ಣಂವಾಂತ ನನ್ನ ಕರ್ಕಂಡ್ ಹೋಗ್ತಿದ್ದೊ. ಅದಲ್ಲದೆ ನಂಗೆ ಕೂಡಾ ಅದರೆಲ್ಲಾ ನೋಡಿಕೆ ಆಸೆ. ಚಾವಡಿ ಒಳಗೆ ಕಡ್ತಲೆಗ, ದೈವದ ಮುಖವಾಡ, ಚೌರಿ, ಗಂಟೆ, ಮಣಿ, ದೀಪಗ, ಕಾಣಿಕೆ ಡಬ್ಬಿ ಇದ್ದೊ. ಅಜ್ಜಪ್ಪ ತಲೆ ಮೈ ಮಿಂದ್, ಹಣೆಗೆ ಭಸ್ಮಲಿ ನಾಮ ಎಳ್ದ್, ದೈವಕ್ಕೆ ದೀಪ ಹೋಸಿ,

ಕೈಲಿ ಕಡ್ತಲೆ ಹಿಡ್ದ್‌ದ್, ಥರ ಥರಾಂತ ನಡ್ಗಿಕಂಡ್ ಕುಣ್ಯೊತಿದ್ದೊ. ಇದರೆಲ್ಲಾ ನಾ ಸಣ್ಣಂವ ಇರಿಕನ ಅವರೊಟ್ಟಿಗೆ ಹೋಗಿ ನೋಡ್ಯಳೆ.

ಒಮ್ಮೆ ಗುಳಿಗನ ಹರ್ಕೆಗೆ ಸುಳ್ಯಂದ ಕೋಳಿ ತಕಂಡ್ ನಾನೂ, ದೊಡ್ಡ ತಮ್ಮನೂ ಅಜ್ಜಪ್ಪನೊಟ್ಟಿಗೆ ಸೂಂತೋಡಿಗೆ ಹೋದೋ. ಅಲ್ಲಿ ಚೋಡ್‌ನ ಹಕ್ಕಲೆ ಕೋಳಿನ ಕೊಂದ್‌ದ್ ಸಜ್ಜಿ ಮಾಡಿ, ಮಾಸನ ಹಾಳೆಲಿ ಹಾಕಿ, ರಾಮಪ್ಪ ಸಣ್ಣಪ್ಪನ ಮನೆಲಿ ಕಾಯೆ ಹಾಕಿದ ಹುಳಿಮೆಣ್ಸ್‌ನ ಅರ್ದ್‌ದ್, ಅರೆಪ್ಪುನ ತಕಂಡ್ ಮನೆ ಹಕ್ಕಲೆ ಇದ್ದ ಗುಡ್ಡೆಗೆ ಹೋದೋ. ಅರೆಪ್ಪುಗೆ ನೀರುಳ್ಳಿ, ಬೆಳ್ಳುಳ್ಳಿ, ಸಂಬಾರ ಹಾಕಿಕೆ ಬೊತ್ತ್‌ಗಡ. ಅಜ್ಜಪ್ಪ ಮಿಂದ್‌ದ್ ಮಡಿಲಿ ಎಲ್ಲಾ ಕೈ ಕೆಲ್ಸನ ಮಾಡ್ದೊ, ಗುಡ್ಡೆಲಿ ಮೂರು ಕಲ್ಲ್ ಇಸಿ ಒಲೆ ಮಾಡಿ ಕಿಚ್ಚಿಮೊಟ್ಟೊ. ಒಂದು ಮೊಣ್ಣ್‌ನ ಅಳೆಗೆಲಿ ಮಾಸನನೂ ಅರ್ಪುನನೂ ಒಟ್ಟಿಗೆ ಹಾಕಿ ಕೊದ್ಯಕ ಇಸಿದೊ. ಮತ್ತೊಂದು ಒಲೆಲಿ ಹುಗ್ಗೆ ಮಾಡ್ದೊ. ಗೈಪು ಕೊದಿ ಬಂದ್‌ದ್, ಬೆಂದ್ ಒರ್ಪು ಆಕಾಕನ ಅದರ ಇಳ್ಸಿ, ಒಂದು ಮರದ ಕೆಳಗೆ ಇದ್ದ ಗುಳಿಗನ ಕಲ್ಲ್‌ನ ಹಕ್ಕಲೆ ಇಸಿದೋ. ಗುಳಿಗನ ಕಲ್ಲ್‌ನ ಎದ್ರ್ ಅಗಳ್ ಹಾಕಿ [ಬಾಳೆ ಎಲೆ ಹಾಕಿ] ಅದರ್ಲಿ ಹುಗ್ಗೆನೂ ಗೈಪುನೂ ಇಕ್ಕಿದೊ. ಆ ಮೇಲೆ ಅದ್ಕೆ ಅಕ್ಕಿ ಹಾಕಿ ಕೈಮುಗ್ದ್, ಕಣ್ಣ್ ಮುಚ್ಚಿ ಪ್ರಾರ್ಥನೆ ಮಾಡ್ದೊ. ನಮ್ಮ ತಿರ್ಗಿ ನಿಲ್ಲಿಕೆ ಹೇಳ್ದೊ. ಹಂಞ ಹೊತ್ತ್‌ಲಿ, ಆ ಇಕ್ಕಿದ ಎಡೆನ ತೆಗ್ದ್‌ದ್ ಅಲ್ಲೇ ಉಂಡೋ, ತಮ್ಮನೂ ಅವರೊಟ್ಟಿಗೆ ಉಂಡತ್. ನಾ ಮಾತ್ರಾ ಉಂಡತಿಲ್ಲೆ. ಏಕೆಂತೇಳ್ರೆ ನಾ ಆಗ ಮಾಸ ತಿಂಬತಿತ್ಲೆ. ನಾ ಬಂದ್ ರಾಂಪ ಸಣಪನಲ್ಲಿ ಉಂಡೆ.

* * * * *

ಚುಕ್ಕೆ – 8

"ಅಜ್ಜಪ್ಪನ ನೆಟ್ಟಿ ಬೆಳೆ"

ಕೆರೆಮೂಲೆ ಸುಳ್ಯ ಪೇಟೆ ಹಕ್ಕಲೆ ಇರುವ ಒಂದ್ ಹಳ್ಳಿ. ಅಲ್ಲಿ ಮೂರ್‍ನಾಕ್ ತಂಡ ನಮ್ಮ ಜಾತಿನ ಜನಂಗ ಗದ್ದೆ ಬೇಸಾಯ ಮಾಡ್ತಿದ್ದೊ. ಏಣೆಲ್ ಬೆಳೆ ತೆಗ್ದೊವು. ಗದ್ದೆಕ್ಕೊದ ಮೇಲೆ ಸುಗ್ಗಿ ಬೇಸಾಯ ಮಾಡಿಕೆ ನೀರ್ ಸಾಕಾಗದೊವು, ಗದ್ದೆನ ಹಡಿಲು ಬುಡ್ತಿದ್ದೊ. ಆಗ ಅಜ್ಜಪ್ಪ ಅಲ್ಲಿ ನೆಟ್ಟಿ ಬೆಳ್‌ಸ್ತಿದ್ದೊ. ನೆಟ್ಟಿಕ್ಯಾ ಮಾಡ್ದರ‍್ಲಿ ನಮ್ಮ ಅಜ್ಜಪ್ಪ ಭಾರೀ ಬಿರ್ಸ. ಚಿಮಿ ಚಿಮಿ ಬೊಳ್ಪುಗೇ ಎದ್ದ್ ನೆಟ್ಟಿಗೆ ನೀರ್ ಹೊಯ್ಯಕೆ ಅವು ಹೋಗ್‌ತಿದ್ದೊ. ವಾರಲಿ ಒಂದೆರ್ಡ್ ದಿನ ಅವ್ವನೂ ನಮ್ಮ ಕರ್ಕಂಡ್ ಸೀರೆ ಒಗ್ಯಕೆ ಕೆರೆಮೂಲೆಗೆ ಹೋಗ್ತಿದ್ದೊ. ಆಗ ಅಜ್ಜಪ್ಪ ಎರ್ಡ್ ಕೈಲಿ ಕಂದಲ್‌ಲಿ ನೀರ್ ತಕಂಡ್ ನೆಟ್ಟಿಗೆ ಹೊಯ್ಯುದರ ನಾವು ನೋಡ್ತಿದ್ದೊ. ನೆಟ್ಟಿಗದ್ದೆ ಪಕ್ಕಲಿ ನೀರ್ ಹರಿವ ಚೋಡು ಉಟ್ಟು. ಚೋಡಿಲಿ ಒಂದು ಗುಂಡಿ ಮಾಡಿ, ಅಲ್ಲಿ ನಿಂತ ನೀರ್‌ಲಿ ಕಂದಲ್‌ನ ಕಂತಿಸಿ, ಎರ್ಡ್ ಕೈಲಿ ಎರ್ಡ್ ಕಂದಲ್ ಹಿಡ್ದ್, ಅವು ನೆಟ್ಟಿ ಸಾಲ್‌ಗೆ ತಕಂಡ್ ಹೋಗ್ತಿದ್ದೊ. ಅಲ್ಲಿ ಒಂದ್ ಕಂದಲ್‌ನ ನೆಟ್ಟಿ ಸಾಲ್‌ಲಿ ಇಸಿ, ಒಂದು ಕಂದಲ್‌ನ ಎತ್ತಿ, ಅದರ ಅಡಿಗೆ ಒಂದು ಕೈ ಇಸಿ, ಇನ್ನೊಂದ್ ಕೈನ ಕಂದಲ್‌ನ ಬಾಯಿಗೆ ಹಿಡ್ದ್‌ದ್, ನೀರ್ ಹಾಕುವ ಮೊರ್‍ಲನ ನಾ ಸೋಜಿಗಂದ ನೋಡ್ತಿದ್ದೆ. ಅವರ ಕೈ ಚಳಕಲಿ ಎಲ್ಲಾ

ದೈಗಳಿಗೆ ಸರಿಯಗಿ ನೀರ್ ಬೀಳ್ತಿತ್ತ್. ಕಂದಲ್ ಬಾಯಿಂದ ಬೀಳುವ ನೀರ್ನ ಚೆಪ್ಪಿಸಿಕಂಡ್ ಅವು ನೆಟ್ಟಿಸಾಲ್ ಇಡೀ ರಭಸಂದ ನಡ್ಯೋದರ ಕಣ್ಣ್ ದೊಡ್ಡದ್ ಮಾಡಿಕಂಡ್ ನಾ ನೋಡ್ತಿದ್ದೆ. ನಾನೂ ಸಣ್ಣ ಗುಂಬಲಿ ನೀರ್ ತಕಂಡ್ ಅವು ಹೊಯ್ಯುವ ಹಾಂಗೆ ಹೊಯ್ಯೊತಿದ್ದೆ. ಆದರೆ ಅವರಷ್ಟ್ ಪೊರ್ಲು ಹೊಯ್ಯಕೆ ನಂಗೆ ಆಗ್‌ತಿತ್ಲೆ. ದೆಯಿಗ ಅಡ್ಡ ಬೀಳ್ತಿದ್ದೊ. ಆಗ ಅಜ್ಜಪ್ಪ, ಬೇಡ, ಬೇಡ ನೀ ದೆಯಿಗಳ ಹಾಳ್ ಮಾಡ್ಬೇಡಾಂತ ನಂಗೆ ಬೊಯ್ಯೊತಿದ್ದೊ. ಅಕ್ಕ ಪಕ್ಕಲಿ ಇದ್ದ ರೈತರ್‌ಗ ಚೊಂಟೆ ಮೊಗ್ಚಿಕಂಡ್ ಗದ್ದೆಗೆ ನೀರ್ ಹಾಕಿತಿದ್ದೊ. ಚೊಂಟೆ ಮೇಲೆ ಕೆಳಗೆ ಹೋಕಾಕನ ಅದರ ನೋಡಿಕಂಡ್ ನಾನೂ ತಮ್ಮಂದರೂ ನಿಲ್ತಿದ್ದೊ. ನಾವೂ ಚೊಂಟೆ ಮೊಗ್ಚುವಲ್ಲಿಗೆ ಹೋಗಿ ಅದರ ಮೇಲೆ ಕೆಳಗೆ ಮಾಡಿಕೆ ನೋಡಿಕಾಕನ ಅಜ್ಜಪ್ಪ ನಮ್ಮ ಕರ್ದ್‌ದ್ ನೀರ್ನಕ್ಕಲೆ ಹೋಗ್ಬೋಡೀಂತ ಬೊಯ್ಯತಿದ್ದೊ. ಬೊಳ್ಪುಗೆ ಅಪ್ಪ ಮಿಯಕೆ ಹಳ್ಳಕ್ಕೆ ಹೋಗಿ ಬಾವ ದಾರಿ ಅದೇ ಆಗಿತ್ತ್. ಅವು ಮಿಂದ್ ಬಾಕನ ನಾವು ಅಲ್ಲಿ ಇದ್ದರೂ ನಮ್ಮ ಅವು ಮಾತಾಡ್ಸ್‌ತಿತ್ಲೆ. ಬಾಯಿಲಿ ದೇವರ ನಾಮ ಹೇಳಿಕಂಡ್ ಬಿರಬಿರನೆ ಆಚೆ ಈಚೆ ನೋಡದೆ ಮುಂದೆ ಹೋಗ್ತಿದ್ದೊ. ಆಗ ನಾವು ಅಪ್ಪನ ಭಯ –ಭಕ್ತಿಂದ ಅವು ಹೋದರನೇ ನೋಡ್ತಿದ್ದೊ.

ಒಮ್ಮೆ ಅವ್ವ ಸೀರೆ ಒಗ್ಯಕಾಕನ, ನಾ ಕೈಲಿ ಒಂದು ಕೋಲ್ನ ಹಿಡ್ಕಂಡ್, ಚೋಡ್‌ಲಿ ಓಡಾಡಿಕಂಡಿದ್ದ ಕೊಡ್ಯಕಣ್ಣ ಮೀನ್‌ನ ನೋಡಿಕಂಡ್, ಕೋಲ್‌ಲಿ ನೀರ್ನ ಹೊಡ್ಕಂಡ್ ಚೋಡ್‌ನ ಕೆಳಗೆನ ಪುಡೆಗೆ ಬಂದೆ. ಚೋಡ್‌ಲಿ ನೀರ್ ಹೆಚ್ಚ್ ಇತ್ತಿಲ್ಲೆ. ಆ ಚೋಡ್ನ್ ಇನ್ನೊಂದು ಪುಡೆಲಿ ಎತ್ತರಲಿ ಒಂದು ಮುಳಿ ಹುಲ್ಲುನ ಮನೆ ಇತ್ತ್. ಅಲ್ಲಿಂದ ಒಂದು ಹೆಂಗ್‌ಸ್ ನನ್ನ ನೋಡಿ ಇಳ್ಕಂಡ್ ಬಾತ್. ಅವ್ವಂಗೆ ಅದರ ಗುರ್ತ ಇತ್ತ್. ಅದ್ ಬಂದ್ ನನ್ನ ಕೈ ಹಿಡ್ದ್, ಕೊಂಡಾಟಲಿ ಮಾತಾಡ್ಸಿತ್. ಆಗ ನಂಗೆ ನಾಕೈದ್ ವೊರ್ಷ ಆಗಿರ್ದು. ಮಾತಾಡಿ, ಮಾತಾಡಿ ನನ್ನ ಕೆಬಿಗೆ ಕೈ ಹಾಕಿ, 'ನಿನ್ನ ಟಿಕ್ಕಿ ಬಾಳಪೊರ್ಲು ಉಟ್ಟೊ'ಂತ ಮೆಲ್ಲಂಗೆ ಅದರ ತಿರುಪುನ ತಿರ್ಗಿಸಿ ಕೆಬಿಂದ ತೆಗ್ತ್. ಅದ್ ಅದರ ಕೈಯಿಂದ ಕೆಳಗೆ ಬೀತ್. ಅದೇ ಬೀಳ್ಸಿತೋ ನಂಗೆ ಗೊತ್ತಾತ್ಲೆ. ಅದರ ಹುಡ್ಕುವ ಹಾಂಗೆ ಬೊಗ್ಗಿ ಹುಡ್ಕಿತ್. ಇದರ ನೋಡಿ ನಂಗೆ ಏನ್ ಮಾಡೋಕೂಂತ ಗೊತ್ತಾತ್ಲೆ. ಅದ್ ಅತ್ತ ಇತ್ತ ನೋಡಿ ನನ್ನ ಇನ್ನೊಂದ್ ಕೆಬಿಗೆ ಕೈ ಹಾಕಿ, ಅದರ ಬಿಚ್ಚಿಕೆ ನೋಡ್ತ್. ಆಗ ನಾ ಹೆದ್ರಿ ಬೊಬ್ಬೆ ಹೊಡ್ದ್ ಕಿರ್ಚಿದೆ. ಮೇಲಿನ ಪುಡೆಲಿ ಸೀರೆ ಒಗ್ಯತಿದ್ದ ಅವ್ವ ನನ್ನ ಬೊಬ್ಬೆ ಕೇಳಿ ಓಡಿ ಬಂದೊ. ಅಜ್ಜಪ್ಪನೂ ನೆಟ್ಟಿ ಹಿತ್ಲಂದ ಓಡಿ ಬಂದೊ. ಅವ್ವ ಬಂದದೇ ಆ ಹೆಂಗ್ಸ್‌ನ ರಟ್ಟೆ ಹಿಡ್ದ್, 'ಪೂವಮ್ಮ ಕೂಸ್‌ಗೆ ಏನ್‌ಮಾಡ್ದಾ'ಂತ ಕೇಳ್ದೊ. ಆಗ ಅದ್, 'ಇಲ್ಲೆ ಎಜಮಾನ್ತಿ. ನಾ ಏನ್ ಮಾಡ್ತಿಲ್ಲೇಂ'ತ ಹೇಳ್ತ್. ನಾಮೊರ್ಟ್ ಕಂಡ್ ಕೆಬಿ ತೋರ್ಸಿದೆ. ಆಗ ಅವ್ವಂಗೆ ಎಲ್ಲಾ ಗೊತ್ತಾತ್. ಅವು ಅದ್ಕೆ ಜೋರ್ ಮಾಡಿ, ಅದರ ಕೈಲಿದ್ದ ನನ್ನ ಚಿನ್ನದ ಟಿಕ್ಕಿನ ಎಳ್ಕಂಡ್, ನನ್ನ ಬೆನ್ನಿಗೆರ್ಡ್ ಗುದ್ದಿ, ಕೈ ಹಿಡ್ದ್ ದರದರನೆ

ಎಳ್ಕೊಂಡೋಗಿ, ಬಟ್ಟೆ ಒಗೆದ ಕಲ್ಲ್‌ನ ಹಕ್ಕಲೆ ಕುದ್ರಿಸಿದೊ. ನೀ ಏಕೆ ಅಲ್ಲಿಗೆ ಒಬ್ಬನೇ ಹೋದ, ಅಲ್ಲಿ ಹಾವು ಗೀವು ಇರ್ತಿದ್ದರೇಂತ ಹೇಳಿ ನನ್ನ ಇನ್ನೊಂದು ಕೆಬಿಂದ ಟಿಕ್ಕಿನ ತೆಗ್ದ್‌ದ್. ಅವರ ಸೆರ್‌ಂಗ್‌ನ ಕೊಡಿಲಿ ಎರಡರ್ನ ಸೇರ್ಸಿ ಭದ್ರಲಿ ಗಂಟ್ ಹಾಕಿ ಸೊಂಟಲಿ ಸಿಕ್ಕಿಸಿಕೊಂಡೊ. ಅದರ ಮೇಲೆ ಅವು ನಂಗೆ ಕೆಬಿಗೆ ಹಾಕ್‌ತಿತ್ಲೆ.

ಅಜ್ಜಪ್ಪ ನೆಟ್ಟಿ ಮಜಲಲಿ ಅಲ್ಸಂಡೆ, ಬೆಂಡೆ, ಬದನೆ ಸೋಂತೆಕ್ಕಾ, ಹೀರೆಕಾಕೈ, ಕೆಂಬುಡೆ ತುಂಬಾ ಬೆಳ್ಸ್‌ತಿದ್ದೊ. ಹಸಿ ಮೆಣ್ಸ್ ಸಾಲ್‌ನ ಎಡೆಲಿ ಜೋಳದ ಗಿಡಗಳ ಬೆಳ್ಸ್‌ತಿದ್ದೊ. ಎಳ್ತ್ ಜೋಳದ ಪೂಂಬೆಲಿದ್ದ ಹಾಲ್ ತುಂಬಿದ ಜೋಳದ ಬಿತ್ತ್‌ನ್ ನಾವು ತಿಂಬೊತಿದ್ದೊ. ಜೋಳದ ಪೂಂಬೆನ ಕೊಡಿಲಿ ಇದ್ದ ಕೂದೊಲು ಜೊಂಪೆನಾಂಗೆ ಇಳ್ಕಂಡ್ ಇದ್ದದರ ಪೊರ್ರಿ ತೆಗ್ದ್ ಮೀಸೆ–ಗಡ್ಡೆದಾಂಗೆ ಮೋರೆಗೆ ಇಸಿಕಂಡ್ ಒಬ್ಬನ ನೋಡಿ ಇನ್ನೊಬ್ಬ ನೆಗಾಡ್‌ತಿದ್ದೊ. ನೆಟ್ಟಿಹಿತ್ಲ್‌ಲಿ ಅವ್ವ ಎರ್ಡ್ ಗುಂಭಗಳ [ಬಾಯಿ ಸಣ್ಣದಿದ್ದ ಮೊಣ್ಣ್‌ನ ಮಡ್ಕೆ] ಯಾಗೊಳು ಕಂಕಣೆ ಹಾಕಿ ಇಸ್ತಿದ್ದೊ. ಮನೆಂದ ಬಾಕಾಕನ ಬಾಳೆ ಎಲೆನ ಬಾಡ್ಸಿ, ಅದರ್ಲಿ ಹೆರ್ದ ಕಾಯೆ ಹೂ ಮತ್ತೆ ಒಂದು ಮುದ್ದೆ ಬೆಣ್ಣೆ ತಾತಿದ್ದೊ. ಅದರ ಗುಂಭದೊಳಗ ಹಾಕಿ, ಎಳ್ತ್ ನೆಟ್ಟಿಕಾಯಿಗಳ ಎಲ್ಲಾ ಕೊಯ್ದ್, ಸಣ್ಣಂಗೆ ಮುರ್ದ್, ಗುಂಬದೊಳಗೆ ಹಾಕ್ತಿದ್ದೊ. ಅದ್ಕೆ ಒಂದೆರ್ಡ್ ಹಸಿ ಮೆಣ್ಸ್ ಮತ್ತೆ ಉಪ್ಪು ಹಾಕಿ ಬೇಯಕೆ ಇಸ್ತಿದ್ದೊ. ಗದ್ದೆನ ಮೊಣ್ಣ್‌ನ ಕತ್ತಿನ ಮುಂಡಂದ ಕೊಡ್ಪಿ, ಕೊಡ್ಪಿ ಗುಂಡಿ ತೋಂಡಿ, ಒಲೆನ ಹಾಂಗೆ ಮಾಡಿ, ಅದರ ಮೇಲೆ ಈ ನೆಟ್ಟಿಕ್ಕಾ ಹಾಕಿದ ಗುಂಭನ ಇಸ್ತಿದ್ದೊ. ಗುಂಬನ ಬಾಯಿ ಮುಚ್ಚಿಕೆ ಇನ್ನೊಂದು ಸಣ್ಣ ಗುಂಭ ಇತ್ತ್. ನಾವು ಮಕ್ಕ ಅಲ್ಲಿ ಹಕ್ಕಲೆ ಬಿದ್ದ್ ಕಂಡಿದ್ದ ಸಣ್ಣ ಸಣ್ಣ ಸೊಯಿದೆ ತುಂಡುಗಳ, ಕೋಲು ಕಡ್ಡಿಗಳ ಹೆರ್ಕಿದ್ ಅವ್ವಂಗೆ ಕೊಡ್ತಿದ್ದೊ. ಅದರ ಒಲೆಗೆ ಇಸಿ ಕಿಚ್ಚಿ ಮೊಟ್ಟ್, ಅದಕೆಡದಾಂಗೆ ನೋಡಿಕಂಬಕೆ ನಮ್ಮೊಟ್ಟಿಗೆ ಹೇಳಿ, ಅವ್ವ ಸೀರೆ ಒಗ್ಯಕೆ ಹೋಗ್ತಿದ್ದೊ. ನಾವು ಆಗಾಗ ಸಣ್ಣ ಗುಂಭನ ತೆಗ್ದ್ ದೊಡ್ಡ ಗುಂಭದೊಳಗೆ ಬೇಯ್ತಿದ್ದ ನೆಟ್ಟಿಕಾಯಿನ ನೋಡ್ತಿದ್ದೊ. ನೀರ್ ಹಾಕದೆ ನೆಟ್ಟಿಕ್ಕಾಲಿ ಇದ್ದ ನೀರ್ನ ಪಸೆಲಿ, ಬೆಣ್ಣೆ ಮತ್ತೆ ಕಾಯೆನ ಹೂವುನ ಪಸೆಲೇ ಬೇಯಕಾಕನ ಅದರ್‌ಂದ ಹೊರ್ಡುವ ಗಮಲ್‌ಗೆ ನಮ್ಮ ಬಾಯ್‌ಂದ ನೀರ್ ಬಾತಿತ್ತ್. ಇದ್ ಯಾಗ ಬೆಂದದೆ, ಯಾಗ ಇದರ ತಿಂಬೊದೂಂತ ನಾವು ಪಾರ ಕುದ್ರ್‌ತಿದ್ದೊ. ಅದ್ ನಿದಾನಲಿ ಬೆಂದ್‌ದ್, ಒಂದು ಹದಕ್ಕೆ ಬಾಕಾಕನ ಅವ್ವಂಗೆ ಸೀರೆ ಒಗ್ಯೊವ ಕೆಲ್ಸನೂ ಮುಗ್ಯತಿತ್ತ್. ಅವ್ವ ಅಲ್ಲೇ ಚೋಡ್‌ನ ಕರೆಲಿ ಇದ್ದ ಕಮ್ಮುಂದ, ಅಂದೇ ಬಿದ್ದ ಹೊಸ ಹಾಳೆನ ಬಟ್ಲ್‌ನಾಂಗೆ ಕೊಯ್ದ್‌ದ್ ತಂದ್ ನಮ್ಮ ಎದ್ರ್ ಇಸ್ತಿದ್ದೊ. ಅದ್ಕೆ ಬೆಂದ ನೆಟ್ಟಿಕಾಯಿ ಗ್ರೈಪುನ ತೋಂಡಿ ಇಕ್ಕ್‌ತಿದ್ದೊ. ಅದರ ತೋಂಡಿಕೆ ಅವ್ವನ ಸೀರೆ ಮಾರಾಪುಲಿ ಮನೆಂದಳೇ ತಂದ ಒಂದು ಸೆಡೆ ಇರ್ತಿತ್ತ್. ಕಾಯೆನ ಹೆರ್ಡ ಚಿಪ್ಪಿನ ಗಡಿನ ನುಣ್ಣಂಗೆ ಗೀಸಿ, ಎರ್ಡ್ ಒಟ್ಟೆ ಮಾಡಿ, ಗೀಸಿದ ಬೆದ್ರ್‌ನ ತಟ್ಟೆನ

ಅದ್ಕೆ ನುಗ್ಗಿಸಿ, ಅಜ್ಜಪ್ಪ ಸೆಡೆಗಳ ಮಾಡ್ತಿದ್ದೊ. ಬೂದಿ ತೆಗ್ಯೆವ ದೊಡ್ಡ ಸೆಡೆ, ಹುಗ್ಗೆ ತೋಂಡುವ ಕಣ್ಣ್ , ಕಣ್ಣ್ ಇದ್ದ ಸೆಡೆಗಳ, ದೊಡ್ಡ ದೊಡ್ಡ ಗೋಂಕ್ರ್ ಚಿಪ್ಪಿಂದ ಅಜ್ಜಪ್ಪ ಮಾಡ್ತಿದ್ದೊ. ಅವ್ವ ತಂದ ಸೆಡೆಲಿ ನಮ್ಮ ಎದ್ರಿಗೆ ಇಸಿದ ಹಾಳೆ ಬಟ್ಲ್ ತುಂಬಾ ಬೆಂದನೆಟ್ಟಿ ಕ್ಯಾ ಗೈಪುನ ನಾವ್ಗೆ ಇಕ್ಕಿಕಾಕನ, ನಾವ್ ಅಂಬೆರ್ಪ್ಲಲಿ ಅದ್ಕೆ ಕೈ ಹಾಕಿ ಕೈ ಸುಡಿಕನ, ಒಬ್ಬರ ಮೋರೆ ಒಬ್ಬ ನೋಡಿ ನೆಗಾಡ್ತಿದ್ದೊ. ಬಿಸಿ ಬಿಸಿ ಇದ್ದ ಹೊಗೆ ಎದ್ರ್‌ತಿದ್ದ, ದೈಗಳಿಂದ ಕೊಯ್ದ ಹೊಸ ನೆಟ್ಟಿಕ್ಯಾ ಗೈಪು, ಹೊಸ ಬೆಣ್ಣೆ, ಹಸಿ ಕ್ಯಾ ಹೂನ ಒಟ್ಟಿಗೆ ಬೆಂದಾಕನ ಅದರ ರುಚಿನೇ ಬೇರೆ. ಮೂಂಕಿಗೆ ಅದರ್‌ಂದ ಬಾವ ಪೊರ್ಮಳ, ತಿಂಬಕನ ನಾಲಗೆಗೆ ಸಿಕ್ಕವ ರುಚಿ ಅದ್ ತಿಂದವ್ಕೇ ಗೊತ್ತು. ನಾವು ಜೊಲ್ಲು ಸುರ್ಸಿಕಂಡ್ ತಿಂಬೊತಿದ್ದೊ.

ಉಮಿಕರಿಗೆ ಉಪ್ಪು ಹಾಕಿ ಗುದ್ದಿ ಹೊಡಿ ಮಾಡಿ, ಡೊಬ್ಬಲಿ ತುಂಬಿಸಿದ ಹಲ್ಲ್ ಉಜ್ಜುವ ಹೊಡಿಂದ ಒಂದೆರ್ಡ್ ಚಮ್ಚೆ ತಕಂಡ್ ಮನೆಂದ ಬಾಕಾಕನನೇ ತಾತಿದ್ದೊ. ಅದರ್ಲಿ ಹಲ್ಲುಜ್ಜಿ ಚೋಡ್‌ನ ನೀರ್‌ಲಿ ಮೊರೆ ತೊಳ್ದ್, ತಿಂಬಕೆ ಕುದ್ರ್‌ತಿದ್ದೊ. ಸುತ್ತೊಳು ನೆಟ್ಟಿಕಾಯಿ ಗಿಡಗಳ ಸಾಲ್‌ಗ, ಒಂದು ಕಡೆ ಹರಿವ ನೀರ್, ಇನ್ನೊಂದ್ ಕಡೆ ಚಾಳೆ, ಬಾಳೆ, ಕಮ್ಮುಗ, ನೆಲಲಿ ಹಾಸಿದ ಹಾಳೆನ ಮೇಲೆ ಕುದ್ದ್ ಕಂಡ್, ಹಾಳೆನ ತಟ್ಟೆಲಿ ಆಗ ತಾನೇ ಬೆಂದ ಹೊಸ ನೆಟ್ಟಿಕ್ಯಾ ಗೈಪು, ಅದರ ತಿಂಬಕನ ನಾವುಗೆ ಮೃಷ್ಟಾನ್ನ ಉಂಡಸ್ಟ್ ಕುಸಿ ಆಗ್ತಿತ್ತ್. ಆಗ ನಾವುಗೆ ಪ್ರಕೃತಿ ಸೌಂದರ್ಯನ ಅನುಭವಿಸುವ ಪ್ರಾಯ ಅಲ್ಲರೂ, ಏನೋ ನಾವ್ಗೇ ಹೇಳಿಕೆ ಆಗದ ಒಂದು ಸಂತೋಷ, ಕುಸಿ ನಾವ್ಗಾತಿತ್ತ್. ಅದರ ತಿಂದ್ ಸಣ್ಣ ಸಣ್ಣ ಬಟ್ಟೆ ಗಂಟ್‌ಗಳ ಹೊತ್ತ್‌ಕಂಡ್ ನಾವು ಮುಂದೆ ಹೋಗ್ತಿದ್ದೊ. ದೊಡ್ಡ ಗಂಟ್‌ನ ಹೊತ್ತ್, ಸಣ್ಣ ತಮ್ಮನ ಸೊಂಟಲಿ ಚೆಚ್ಚಿಕಂಡ್ ಹಿಂದೆ ಅವ್ವ ಬಾತಿದ್ದೊ. ಮನೆಗೆ ಸೇರಿಕಾಕನ ಗಂಟೆ ಒಂಭತ್ತ್, ಹತ್ತ್ ಆಗ್ತಿತ್ತ್.

ಮನೆಲಿ ಉಗ್ಗವ, ಅತ್ತಿಗೆ, ಅಕ್ಕನ ಬೊಳ್ಪುನ ಕಾಫಿನ ಸಡ್ಗರ ನಡ್ಯೆತಿತ್ತ್. ನಾವ್ಗೆ ನಡ್ಕಂಡ್ ಬಂದಾಕನ ತಿಂದದೆಲ್ಲ ಕರ್ಗ್‌ತಿತ್ತ್. ನಾವು ಸೀರೆ ಮಾರಾಪುನ ಉಂಬ ಮೇಜಿನ ಮೇಲೆ ಕುಕ್ಕಿ, ಬಟ್ಲ್ ತಕಂಡ್ ಅಡ್ಗೆ ಕೋಣೆಗೆ ಓಡ್ತಿದ್ದೊ.

* * * * *

ಚುಕ್ಕೆ–9

“ಅವ್ವನ ಎಜಮಾನಿಕೆ”

ನಮ್ಮ ಮನೆಲೆ ಆಳ್–ಕಾಳ್‌ಗ, ನೆಂಟ್ರ್‌ಗ, ಮನೆವು ಎಲ್ಲಾ ಸೇರಿ 20–25 ಜನಂಗ ಮಧ್ಯಾಹ್ನದ ಊಟಕ್ಕೆ ಇರ್ತಿದ್ದೊ. ದೊಡ್ಡ ದೊಡ್ಡ ಮೊಣ್ಣ್‌ನ ಮಡ್ಕೆಲಿ ಗಂಜಿ ಬೇಸಿ, ದೊಡ್ಡ ದೊಡ್ಡ ಹೆಡಗೆಲಿ ಹುಗ್ಗೆ ತೋಂಡಿಕಾಕನ ಅವ್ವನ ಮೈಲಿ ಥರಥರ ಬೆಗರ್ ಇಳ್ಯತಿತ್ತ್. ದೊಡ್ಡ ದೊಡ್ಡ ಅಳಗೆ ತುಂಬಾ ಗೈಪು, ಎರ್ಡ್ ಬಗೆ ಆರ್ಸಿದ ಗೈಪು ದಿನಾ ಇರ್ತಿತ್ತ್. ಊಟದ ಹೊತ್ತಿಗೆ ಯಾರ್ ಬಂದರೂ ಅವ್ಕೆ ಹೊಟ್ಟೆ ತುಂಬಾ ಊಟ ಸಿಕ್ಕ್‌ತಿತ್ತ್. ಬೊಳ್ಪುನ ಕಾಫಿನೂ ಅಷ್ಟೆ. ಬಂದೌವ್ಕೆ ಎಲ್ಲಾ ಸಮಾರಾಧನೆ ಆಗ್ತಿತ್ತ್. ಅಡ್ಗೆ ಕೋಣೆಲಿ ಎರ್ಡ್ ಒಲೆಗೆ ಕಿಚ್ಚಿ ಹೊತ್ತಿಸಿ ಇಬ್ಬೊರಿಗೆ ದೋಸೆ ಹೊಯ್ಯೋದೇ ಕೆಲ್ಸ. ಒಲೆನ ಪುಡೆಲಿದ್ದ ಕೋಡೊಲೆಲಿ ಇಸಿದ ಮಡ್ಕೆಲಿ ಬೆಲ್ಲದ ಕಾಪಿ ಕೊದ್‌ಕಂಡೇ ಇರ್ತಿತ್ತ್. ದೋಸೆನ ಅಟ್ಟಿ, ಅಪ್ಪದ ಹಿಟ್ಟ್‌ನ ಹೆಡಗೆನ ನೋಡಿನೇ ನಮ್ಮ ಹೊಟ್ಟೆ ತುಂಬ್‌ತಿತ್ತ್. ನಾ ಸಣ್ಣಂವ ಇರಿಕಾಕನ ತಿಂಬೋದರ್ಲಿ ಬಾಳ ಹಿಂದೆ. ಒಂದ್ ದೋಸೆ ತಿಂದರೆ ಹೆಚ್ಚ್. ಆಗ ದೋಸೆನೂ ಹಾಂಗೇ ಇರ್ತಿತ್ತ್. ದೊಡ್ಡದಾಗಿ ದಪ್ಪ ಆಗಿ ಇರ್ತಿತ್ತ್. ಇಷ್ಟ್ ಜನಕ್ಕೆ ಅಂಗೈ ಅಗಲದ ದೋಸೆನ ತೆಳುಲಿ ಯಾರ್ ಹ್ಯೊಯ್ಯೋದೂಂತ, ದೊಡ್ಡ ದೊಡ್ಡ ಚೆಪ್ಪಿ ಸೆಡೆಲಿ ದೊಡ್ಡ ದೊಡ್ಡ ದೋಸೆ ಹ್ಯೊಯ್ಯೊತಿದ್ದೊ, ನನ್ನ ಸಮಯ ಎಲ್ಲಾ ಆಟಲೇ ಕಳ್ಯತಿತ್ತ್. ಊಟದ ನೆಂಪೇ

ನಂಗೆ ಇರ್ತಿತ್ಲೆ. ನಾವು ಮಕ್ಕ ನಾವ್ಗೆ ಹೊಟ್ಟೆ ಇಸಿಕನ ಹೋಗಿ ಹಾಕಿ ತಿಂಬತಿದ್ದೊ. ಮನೆ ತುಂಬಾ ಜನಂಗ ಇದ್ದ ಕಾರಣ, ಯಾರ್ ಉಂಡೋ, ಯಾರ್ ಬುಟ್ಟೋಂತ ಅವ್ವಂಗೆ ಗೊತ್ತಾಗ್‌ತಿತ್ಲೆ. ಉಗ್ಗವ, ಅವ್ವ, ಅತ್ತಿಗೆ – ಇವರ್ಲಿ ಯಾರಾದರೊಬ್ಬ ಸಣ್ಣವ್ಕೆ ಇಕ್ಕಿ ಕೊಡ್ತಿದ್ದೊ. ಅವು ಕೊಟ್ಟೋಂತ ಇವು, ಇವು ಕೊಟ್ಟರ್‌ವೊಂತ ಅವು ಸುಮ್ಮನಿರ್‌ತಿದ್ದೊ.

ನಮ್ಮ ಅವ್ವನ ಅಡ್ಗೆ ಬಾಳ ಪಸಂದ ಇರ್ತಿತ್. ಅವು ಗೈಪುನ ರುಚಿ ನೋಡ್ತಿತ್ಲೆ. ಅಂದಾಜಿಗೆ ಹಾಕಿದ ಉಪ್ಪು, ಹುಳಿ, ಕಾರ ಉಂಬಕಾಕನ ಸರಿಯಾಗಿರ್ತಿತ್. ಅವ್ವ ಮಾಯ್ನ ಮಿಡಿ ಉಪ್ಪನ ಕ್ಯಾ ಹಾಕುದರ್ಲಿ ಎತ್ತಿದ ಕೈ. ಭಾರಿ ಲಾಯ್ಕ್‌ಲಿ ಹಾಕ್ತಿದ್ದೊ. ವರ್ಸಕ್ಕೊಮ್ಮೆ ನಾಕೈದ್ ಸಾವ್ರ ಮಾಯ್ನ ಮಿಡಿ ಉಪ್ಪನಕ್ಯಾ ಹಾಕ್ತಿದ್ದೊ. ಅವು ಹಾಕಿದ ಉಪ್ಪನ ಕ್ಯಾ ನಾಕೈದ್ ವೊರ್ಸ ಹಾಳಾಗದೆ ಇರ್ತಿತ್. ಈ ವೊರ್ಸ ಹಾಕಿದ ಉಪ್ಪನ ಕ್ಯಾನ ಬರ್ವ ವೊರ್ಸ ತೆಗ್ಯೋತಿದ್ದೊ. ನೆರೆಕರೆಯವ್ಕೆ, ಬಂಧು ಬಳಗಕ್ಕೆಲ್ಲಾ ಕೊಡ್ತಿದ್ದೊ. ಇರ್ಳ್ ಎಲ್ಲೋವು ಮೊಲ್ಗಿದ ಮೇಲೆ ಅವು ಉಪ್ಪನ ಕ್ಯಾಗೆ ಖಾರ ಬೆರ್ಸಿ ಭರಣಿಗಳಿಗೆ ತುಂಬಿಸಿ, ಗಟ್ಟಿಲಿ ಬಾಯ್ಕಟ್ಟಿ ಇಸಿ ಮೊಲ್ಗ್‌ತಿದ್ದೊ. ಅವರ ಮಾಯ್ನ ಮಿಡಿನ ಉಪ್ಪನ ಕ್ಯಾನ ವಿಶೇಷ ಏನೂಂತೇಳ್ರೆ, ಅವು 1000 ಮಾವಿನ ಮಿಡಿಗೆ 1 ಪಾವುನಸ್ಟ್ ಸುಟ್ಟ ಗೇರ್ ಬೀಜದ ಬೊಂಡ್‌ನ ಹೊಡಿ ಹಾಕ್‌ತಿದ್ದೊ. ಹಪ್ಪಳ, ಸಂಡಿಗೆ, ಬಾಳಗ ನಮ್ಮ ಮನೆಲಿ ದಿನಾ ಇರ್ತಿತ್. ಹಲ್ಸಿನ ಕಾಯಿ ಹಪ್ಪಳ, ಮರಗೆಣ್ಸ್, ಗೆಣ್ಸ್, ಗೋಧಿ, ರಾಗಿ ಹಪ್ಪಳನ ಅವು ಹೆಚ್ಚಾಗಿ ಮಾಡ್ತಿದ್ದೊ. ಸಂಡೆಗೆಲಿ ಗೋಧಿ ಸಂಡಿಗೆ, ರಾಗಿ ಸಂಡಿಗೆ ನಮ್ಮಲ್ಲಿ ಮಾಮೂಲು ಇರ್ತಿತ್. ಸಿಹಿಗೆಣ್ಸ್‌ನ ತುಂಡುನ ಬೇಸಿ ಒಣ್ಗ್‌ತಿದ್ದೊ. ಹಲ್ಸ್‌ನ ಬೀಜನ ಬೇಸಿ ಒಣ್ಗ್‌ಸ್‌ತಿದ್ದೊ. ಇದರ 'ಸಾಂತಾಣಿ'ಂತ ಕರ್ದವೆ. ಸಣ್ಣಕ್ಕಂಗೆ ಕಾಡ್ ಮಾಯ್ನ ಹಣ್ಣ್‌ನ ಮಾಂಬಳ ಮಾಡ್ದೂಂತೇಳ್ರೆ ಬಾಳ ಕುಸಿನ ಕೆಲ್ಸ. ನಮ್ಮ ಮನೆ ಹಕ್ಕಲೆ ಶೆಟ್ರ ಮನೆ, ಹಿತ್ಲ್ ಉಟ್ಟು. ಅದರ ಪಕ್ಕ ಸಣ್ಣಕ್ಕನ ಜೋಸ್ತಿ ಗೂಡೆ ಭಾಗೀರತಿನ ಹಿತ್ಲ್ ಮನೆ. ಅವರ ಮನೆ ಹಕ್ಕಲೆ ಒಂದು ಮಾಪುಳ್ಳಿನ ಮನೆ ಇತ್ತ್. ಅದರ ಮನೆ ಎದ್ರ್ ಮೂರ್‍ನಾಕ್ ದೊಡ್ಡ ದೊಡ್ಡ ಕಾಡ್ ಮಾಯ್ನ ಮರಂಗ ಇದ್ದೊ. ಬೇಶ ತಿಂಗಲ್ಲಿ ಅದರ್ಲಿ ತುಂಬಾ ಕಾಡ್ ಮಾಯ್ನ ಹಣ್ಣ್‌ಗ ಸಿಕ್ಕ್‌ತಿತ್. ನಾವು ಮಕ್ಕ ನೆರೆಮನೆ ಮಕ್ಕಳೊಟ್ಟಿಗೆ ಸೇರಿಕಂಡ್ ಚಿಮಿ ಚಿಮಿ ಬೊಳ್ಪುಗೆ ಎದ್ದ್ ಮಾಯ್ನ ಹಣ್ಣ್ ಹೆರ್ಕಿಕೆ ಪಂಚ್ ಕುಕ್ಕೆ ತಕಂಡ್ ಹೋಗ್ತಿದ್ದೊ. ನಾವ್ಗೆ ಹೊರುವಸ್ಟ್ ಮಾಯ್ನ ಹಣ್ಣ್ ಸಿಕ್ಕ್‌ತಿತ್. ದಿನಾ ನಾವು ಹೆಕ್ಕಿ ತಂದ ಮಾಯ್ನ ಹಣ್ಣ್‌ನ ಸಣ್ಣಕ್ಕ ತೊಳ್ದ್ ಸೀರೆ ಅರ್ವೆಲಿ ಒರ್ಸಿದ್ ಕಡ್ಕಲ್‌ಗೆ ಹಾಕಿ, ಮರದ ಒಣ್ಕೆಲಿ ಗುದ್ದಿ ರಸ್ ತೆಗ್ಯತಿತ್. ಅದರ ಅಟ್ಟಲಿದ್ದ ಹೊಸ್ತ್ ಮೊಂದ್ರಿನ ತೆಗ್ದ್ ಇಜ್ಜೆಲಿಲಿ ಬಿಸಿಲಿಗೆ ಹಾಕಿ, ಅದರ್ಲಿ ಹೊಯ್ಯತಿತ್. ಮೊರ್ದಿನ ಅದರ ಮೇಲೆ ಒಳ್ಳೆ ಮೆಣ್ಸ್, ಉಪ್ಪು, ಮತ್ತೆ ಅರ್ಸಿಣನ ಹೊಡಿಮಾಡಿ ತೆಳ್ಳಂಗೆ ಹರ್‌ಂಡ್‌ತಿತ್. ಅದರ ಮೇಲೆ ಅಂದ್ ಕುಟ್ಟಿ ರಸ ತೆಗ್ದ. ಮಾಯ್ನ ಹಣ್ಣ್‌ನ ರಸನ ಹೊಯ್ಯತಿತ್. ಹೀಂಗೆ ಒಂದ್

ಹತ್ತ್ ದಿನ ಮಾಡಿ ಅದರ ದಿನಾ ಬಿಸ್ಲ್‌ಲಿ ಒಣ್ಗಿಸ್‌ತಿತ್ತ್. ಅದ್ ಪೊರ್ಲ್ಲು ಒಣ್ಗಿದ ಮೇಲೆ ಅದರ ಮೊಗ್ಚಿ ಹಾಕಿ, ಒಂದು ವಾರ ಒಣ್ಗಿಸ್‌ತಿತ್ತ್. ಹಿಂಗೆ ಮಾಡ್ದ ಮಾಂಬಳನ ಮೊಂದ್ರಿ ಮೊಡ್ಚಿದ ಹಾಂಗೆ ಸುರುಳಿ ಸುತ್ತಿ. ಹಾಳೆಲಿ ಕಟ್ಟಿ, ಅಡ್ಗೆ ಕೋಣೆಲಿ ಬೆಸಗೆನ ಅಡಿಲಿ ಬೆಚ್ಚಂಗೆ ಇಸ್‌ತಿತ್ತ್. ಮಳೆಗಾಲ ಇಡೀ ನಾವ್ಗೆ ಪೊಜ್ಜಿ ಮಾಡಿಕೆ, ಸಾರ್ ಮಾಡಿಕೆ ಆಗ್ತಿತ್ತ್. ಮಾಂಬಳಂದ ಮಾಡ್ದ ಪೊಜ್ಜಿಲಿ ಒಂದು ಬಟ್ಲ್ ಉಣಕ್. ಅಷ್ಟ್ ಲಾಯ್ಕ್ ಆಗ್ತಿತ್ತ್. ನಮ್ಮ ಅಪ್ಪಂಗೆ ದಿನಾ ತರತರದ ಗೈಪು ಮಾಡೊಕು. ದಿನಾ ಉಂಬಕೆ ಗೈಪುನೊಟ್ಟಿಗೆ ಆರ್ಸಿದ ನೆಟ್ಟಿಕಾಯ್ನ ಉಪ್ಪುಕರಿ, ನಂಜಿಕೊಂಬಕೆ, ಹಪ್ಪಳ, ಸಂಡಿಗೆ, ಉಪ್ಪಿನ ಕ್ಯಾ ಬೇಕೇ ಬೇಕ್. ಮನೆಗೆ ನೆಂಟ್ರ್‌ನೂ ತುಂಬಾ ಬಾತಿದ್ದೊ. ಕೆಲವು ಜನ ದೂರದ ನೆಂಟ್ರ್‌ಗ ತಿಂಗ, ತಿಂಗ ನಿಲ್ತಿದ್ದೊ. ನಮ್ಮ ಮನೆಲಿ ತಿಂಬೋದರ್ಲಿ, ಉಂಬೊದರ್ಲಿ ಎಲ್ಲೌಕೆ ಬಾಯಿ ಸೊಗಸ್ ಜಾಸ್ತಿ ಇತ್ತ್. ನಾವುಗೆ ಸಣ್ಣದಿರಿಕನ ಕಷ್ಟನೇ ಗೊತ್ತಿತ್ಲೆ.

ನಮ್ಮ ಅಪ್ಪಂಗೆ ಕೋವಿ ಮೊದ್ದ್ ವ್ಯಾಪಾರ ಇತ್ತ್. ಬೇಟೆ ಮಾಡೊವು ಅಪ್ಪನಕ್ಕಲೆಂದ, ತೋಟೆ, ಚಿಲ್ಲು, ಗನ್ ಪೌಡರ್ ತಕಂಡ್ ಹೋಗ್ತಿದ್ದೊ. ಕೆಲವು ಜನಂಗ ಬೇಟೆ ಆಡ್ದ ಮಾಸಲಿ ಒಂದು ಪಾಲ್ನ ಅಪ್ಪಂಗೆ ತಂದ್ ಕೊಡ್ತಿದ್ದೊ. ಪಾಂಜ, ಚಣಿಲ್, ಮೊಲ– ಇದರ ಇಡಿ ಇಡೀ ತಂದ್ ಕೊಡ್ತಿದ್ದೊ. ಅಜ್ಜಪ್ಪ ಅದರ ಮೈಗೆ ಬೂದಿ ಉಜ್ಜಿದ್ ಅದರ ರೋಮನ ಕೀಳ್ತಿದ್ದೊ. ಅರ್ಸಿಣ ಹೊಡಿ, ಎಂಣ್ಣೆ ಅದರ ಮೈಗೆ ಉಜ್ಜಿದ್ ಬೀಸ್ಕತ್ತಿಂದ ಪೊರ್ಲ್ಲಲಿ ಗೀಸಿ, ಗೀಸಿ, ಸಪಾಯಿ ಮಾಡಿ ಮಾಸನ ಹಜಿರ್ ಮಾಡ್ತಿದ್ದೊ. ಅಜ್ಜಪ್ಪ ಇದರ್ನೆಲ್ಲಾ ಮಾಡಿಕಾಕನ ನಾನೂ ನನ್ನ ತಮ್ಮಂದರೂ ಹಕ್ಕಲೆ ಕುದ್ದ್ಕಂಡ್, ಕಣ್ಣ್ ಮುಚ್ಚದೆ ನೋಡ್ತಿದ್ದೊ. ಕಾಡ್ ಕೋಳಿ, ಹೊಟ್ಟ, ಗುಳ್ಳುಗ್ಮೇಂತ ಹೇಳ್ವ ಹಕ್ಕಿಗಳ ತಂದ್ ಕೊಡ್ತಿದ್ದೊ. ಅದರ ತೊಪ್ಪು ತೆಗ್ದ್ ಕಾಸಿ, ಹಜಿರ್ ಮಾಡಿ ಕೊಡುವ ಕೆಲ್ಸ ಅಜ್ಜಪ್ಪಂದ್, ಅದರ ಕಮ್ಮಂಗೆ ಗೈಪು ಮಾಡುವ ಕೆಲ್ಸ ಅವ್ವಂದ್.

ಅಜ್ಜಪ್ಪ ಕೋಳಿ ಕೊಂದ್, ಅದರ ಸಜ್ಜ್ ಮಾಡಿಕಾಕನ ಸಾಹಯಕ್ಕೆ ನಮ್ಮ ಕರ್ರ್ಯೋತಿದ್ದೊ. ನಾವ್ಗೆ ಆಗ ಅವರಕ್ಕಲೆ ಕುದ್ದ್ಕಂಡ್ ಅವು ಮಾಡ್ವ ಕೆಲ್ಸನ ನೋಡಿಕೆ ಕುಸಿ ಆಗ್ತಿತ್ತ್. ಕೋಳಿನ ಕುತ್ತಿಗೆ ಚಿರಿಂಬಿ ಇಜ್ಜೆಲಿಗೆ ಹಾಕಿಕನ ಅದ್ ಹೊರ್ಳಿಕಂಡ್, ಹೊರ್ಳಿಕಂಡ್ ಬಡ ಬಡ ರೆಂಕೆ ಬೊಡ್ಕಂಡ್ ಸಾಯತಿತ್ತ್. ಅದರ ನೋಡಿಕೆ ನಂಗೆ ಆಗ್‌ತಿತ್ಲೆ. ಆಗ ನಾ ಕಣ್ಣ್ ಮುಚ್ಚಿ ಕಂಬತಿದ್ದೆ. ನಾವ್ ತಂದ್ ಕೊಟ್ಟ ಹೆಡಗೆಲಿ ಸತ್ತ ಕೋಳಿನ ಹಾಕಂಡ್, ನೀರಡಿ ಕೊಟಗೆನ ಹಿಂದೆ ಹೋಗಿ ಅದರ ತೊಪ್ಪ್ ತೆಗ್ಯೋತಿದ್ದೊ. ನಾವುನೂ ತೊಪ್ಪುತೆಗ್ಯಕೆ ಸೇರ್ತಿದ್ದೊ. ಸಣ್ಣ, ಸಣ್ಣ ತೊಪ್ಪು ಕೈಗೆ ಸಿಕ್ಕ್‌ತಿತ್ಲೆ. ಆಗ ಅದರ ಕಿಚ್ಚಿಲಿ ಕಾಸಿರೆ ತೊಪ್ಪುಗ ಕರಿಂಚಿ ತೆಗ್ಯಕೆ ಸುಲಭ ಆಗ್ತಿತ್ತ್. ಎರ್ಡ್ ಕಾಲ್ನ ಹಿಡ್ಕಂಡ್, ಕೋಳಿನ ಅಡಿ, ಮೇಲೆ, ಸುತ್ತ ಕಾಸ್ತಿದ್ದೊ. ಅಕೆರಿಗೆ ಎರ್ಡೂ ಕಾಲ್ನ ಸುಟ್ಟವೆ. ಆಗ ಕಾಲ್ನ ಚೋಲಿ ಬೇಗ ತೆಗ್ಯಕೆ ಆಗ್ತಿತ್ತ್. ಕೋಳಿನ ಶರೀರ

ಸುಟ್ಟಾದ ಮೇಲೆ ಉರುಂಟು ಉರುಂಟು ಉಬ್ಬಿ ತೊಪ್ಪು ತೆಗ್ಯಕೆ ಸುಲಭ ಆಗ್ತಿತ್ತ್. ಆ ಮೇಲೆ ಹರ್ತ ಮಾಡಿ ಇಸಿದ ದೊಡ್ಡ ಬೀಸ್ಕತ್ತಿಲಿ ಅದರ ಮೈನ ಪೊರ್ಲ್ಲ ಗೀಸಿ, ತೊಳ್ಯೊತಿದ್ದೊ, ಬೆಳ್ದ್ ಕೋಳಿ ಆದರೆ ಅದರ ಮೈಗೆ ಅಕ್ಕಿಹೊಡಿ ಹಾಕಿ ತಿಕ್ಕಿ ತೊಳ್ಯೊತಿದ್ದೊ. ಅಕೆರಿಗೆ ಅದರ ತಲೆನ ಹಿಡ್ಕಂಬಕೆ ನಾವ್ಗೆ ಹೇಳ್ತಿದ್ದೊ. ನಾವು ತಲೆಲಿ ಹಿಡ್ಕಂಬನಕ ಅವು ಚೂರಿಲಿ ಸುರುಗೆ ರೆಂಕೆನ ಸಂದ್‌ನ ಕೊಯ್ದ್, ರೆಂಕೆನ ಎಲುನ ತುಂಡ್ ಮಾಡಿ ಎಳ್ಯೋತಿದ್ದೊ. ಆಗ ಅದ್ ಸುಲಭಲಿ ಬಾತಿತ್ತ್. ಹಾಂಗೆ ಎರ್ಡ್ ರೆಂಕೆನ ಕೊಯ್ದ್ ನೀರಿದ್ದ ಪಾತ್ರಕ್ಕೆ ಹಾಕ್ತಿದ್ದೊ. ಆ ಮೇಲೆ ತೊಡೆಗಳ ಸಂದ್‌ನ ಚೂರಿಲಿ ಗೀರ್ ಹಾಕಿ, ಬುಡ್ಸಿ, ತೊಡೆನ ಎಲುನ ಕೊಯ್ದ್‌ದ್, ತೊಡೆನ ಎಳ್ಯೋತಿದ್ದೊ. ಆಗ ತೊಡೆಗ ಸುಲಭಲಿ ಬಾತಿತ್ತ್. ಅದರ ನೀರ್‌ಲಿ ಹಾಕಿತಿದ್ದೊ. ಆ ಮೇಲೆ ತಲೆನ ಕೊಯ್ದ್ ತೆಗ್ಯೊಕು. ಆಮೇಲೆ ಕೊಕ್ಕ್‌ನ ಕೊಯ್ದ್ ಬಿಸಾಡೊಕು. ತಲೆಲಿದ್ದ ಎರ್ಡ್ ಕಣ್ಣ್‌ಗಳ ಚೂರಿ ಮುಂಡಂದ ತೋಂಡಿ ತೆಗ್ದ್ ಇಡೋಕು. ದೊಂಡೆಲಿದ್ದ ನರನ ಎಳ್ದ್ ಇಡೋಕು. ಮತ್ತೆ ತಲೆನ ನೀರ್‌ಲಿ ಹಾಕೊಕು. ಕೋಳಿನ ಬೆನ್ನ್‌ಲಿ ಇದ್ದ ಎರ್ಡ್ ಎಲುಗಳ ಚೂರಿನ ಕೊಡಿಲಿ ಬುಡ್ಸೊಕು. ಎರ್ಡ್‌ಕೈಲಿ ಕೋಳಿನ ಕುತ್ತಿಗೆ ಬುಡಲಿ ಅಕ್ಕ ಪಕ್ಕ ಹಿಡ್ದ್, ಕೈನ ಅಗಲ ಮಾಡಿಕಾಕನ ಕೋಳಿನ ಬೆನ್ನ್ ಮತ್ತೆ ಹೊಟ್ಟೆ ಬೇರೆ ಬೇರೆ ಆಗ್ತಿತ್ತ್. ಆಗ ಕೋಳಿನ ಹೊಟ್ಟೆ ಒಳಗೆ ಇದ್ದ ಕರ್ಳ್, ಪಲ್ಲೆಕ್ಯಾ, ಕರ್ಯಟ, ಕನು, ಸೊರೆ– ಎಲ್ಲಾ ಒಂದು ಪುಡೆಲಿ ನಿಲ್ತಿತ್ತ್. ಅಂದರೆ ಒಂದೋ ಬೆನ್ನ್ ಪುಡೆಲಿ, ಇಲ್ಲದೆ ಹೊಟ್ಟೆ ಭಾಗಲಿ. ಅದರ ಬೇರೆ ಬೇರೆ ಮಾಡಿ ಕರ್ಳ್‌ನ ಬಿಸಾಡ್ತಿದ್ದೊ. ಪಲ್ಲೆಕಾಯಿನ ತೆಗ್ದ್ ಅದರ ಒಂದು ಭಾಗನ ಮೆಲ್ಲಂಗೆ ಕೊಯ್ದರೆ, ಒಳಗೆ ಇದ್ದ, ತಿನ್ಸ್ ಇದ್ದ ಚೀಲನ ಇಡೀ ಬುಡ್ಸಿಕೆ ಆಗ್ತಿತ್ತ್, ಅದರ ಹೆಕ್ಕಿ ಬಿಸಾಡೊಕು. ಪಲ್ಲೆಕಾಯಿನ ಚೂರಿಲಿ ಪೊರ್ಲ್ಲ ಒಳಗೆನ ಭಾಗನ ಗೀಸಿ, ತೊಳ್ಯೊಕು. ಕರ್ಯಟಕ್ಕೆ ಅಂಟಿಕಂಡ್ ಇದ್ದ ಕಯಿಂಪೆನ ಜೋಕೆಲಿ ತೆಗ್ದ್‌ದ್ ಬಿಸಾಡೊಕು. ಕಂಯಿಂಪೆ ಒಡ್ಡರೆ ಕರ್ಯಟ ಎಲ್ಲಾ ಕಂಯಿಂತದೆ. ಬೆನ್ನಿನ ಒಳಗೆನ ಪುಡೆಲಿ ಅಂಟಿಕಂಡಿದ್ದ ಸೊರೆನ ಅದರ್‌ಂದ ಬುಡ್ಸಿ ತೆಗ್ಯೊಕು. ಅದರೆಲ್ಲಾ ನೀರ್‌ಲಿ ಹಾಕಿ ತೊಳ್ಯೊಕು. ಆಮೇಲೆ ಮಾಸ ತೆರಿವ ಮಣೆ ಮೇಲೆ ಇಸಿ, ಕಡ್ಪತ್ತಿಂದ ಬೆನ್ನ್‌ನ ಭಾಗ ಮತ್ತೆ ಹೊಟ್ಟೆ ಭಾಗನ ಹಂಞ, ಹಂಞ ತೆರ್ದ್‌ದ್ ಇಸೊಕು. ತೊಡೆಗಳನೂ, ರೆಂಕೆಗಳನೂ ಹಂಞ ಹಂಞ ತೆರ್ದ್‌ದ್ ಇಸೊಕು. ಬೆಳ್ದ ಕೋಳಿ ಆದರೆ ತೊಡೆನ ಹಂಞ ಹೆಚ್ಚ್ ತೆರಿಯೊಕು. ಆ ಮೇಲೆ ತೆರ್‌ದದರ ಎಲ್ಲಾ ಸಣ್ಣ ಸಣ್ಣ ತುಂಡು ಮಾಡೊಕು. ಮಾಸನ ತೆರ್ಯಕೆ ಮುಂದೆ ಬೆನ್ನ್‌ನ ಭಾಗ, ಹೊಟ್ಟೆ ಭಾಗ, ರೆಂಕೆನ, ತೊಡೆಗಳ ಪೊರ್ಲ್ಲ ನೀರ್‌ಲಿ ತೊಳ್ದ್‌ದ್ ಅದರ್ಲಿ ಅಂಟಿಕಂಡಿದ್ದ ನೋಳಿನ ಎಲ್ಲಾ ತೊಳ್ದ್‌ದ್ ತೆಗ್ಯೋಕು. ಆಮೇಲೆ ತೆರಿಮಣೆ ಮೇಲೆ ಇಸಿ ತೆರ್ದ್‌ದ್ ಸಣ್ಣ ಸಣ್ಣ ತುಂಡು ಮಾಡೋಕು. ಅದರೊಟ್ಟಿಗೆ ಪೊರ್ಲ್ಲ ತೊಳ್ದ ಕನು, ಕರ್ಯಟ, ಪಲ್ಲೆಕಾಯಿ, ಸೊರೆಗಳ ಸೇರ್ಸಿ ಅಡ್ಗೆ ಮನೆಗೆ ತಕಂಡೋಕು. ಮಾಸ ತುಂಡ್ ಮಾಡ್ದ ಮೇಲೆ ತೊಳ್ಯಕೆ ಆಗದ್‌ಗಡ. ಅದರ ರುಚಿ ಹೋದೆಗಡ.

ಅಜ್ಜಪ್ಪ ಹೇಳ್ತಿದ್ದೊ. ಇದರ ಎಲ್ಲಾ ನೋಡಿ, ನೋಡಿ, ನಾ ಕೋಳಿ ಸಜ್ಜ್ ಮಾಡ್ದರ ಅಜ್ಜಪ್ಪಂದ ಕಲ್ತೆ. ಆದರೆ ಕೊಲ್ಲಿಕೆ ಮಾತ್ರಾ ನನ್ನಂದಾದ್ಲೆ. ಅದ್ ಹೊರ್ಥಿಕನ ನಂಗೆ ನೋಡಿಕೆ ಆಗ್‌ತಿತ್ಲೆ. ನಾ ದೂರ ಹೋಗ್‌ತಿದ್ದೆ. ಪ್ರತಿಯೊಬ್ಬ ಗೌಡ್ರ ಮನೆಲಿ ಮಾಸ ತೆರಿವ ಒಂದು ತೆರಿಮಣೆ ಇದ್ದೇ ಇರ್ತಿತ್ತ್.

ಸುಳ್ಯ ಜಾತ್ರೆ ಕಳ್ದ ಮೇಲೆ ಮಳೆಗಾಲಕ್ಕೆ ಬೇಕಾದ ಹಪ್ಪಳ, ಸಂಡಿಗೆ, ಉಪ್ಪಿನಕ್ಯಾನ ಮಾಡಿ, ಅವ್ವ ಇಸ್ತಿದ್ದೊ. ಇಜ್ಜೆಲಲಿ ಹಪ್ಪಳ; ಸಂಡಿಗೆ ಒಣ್ಗಿಕೆ ಇಸಿಕಾಕನ, ಅದರ ನೋಡ್ದೇ, ಒಂದ್ ಪೊರ್ಲು. ನಂಗೂ, ಉಗ್ಗವಂಗೂ ಕಕ್ಕೆಗಳಿಗೆ ಪಾರ ಕುದ್ರುವ ಕೆಲ್ಸ. ಉದ್ದದ ಗಳೆನ ಕೈಲಿ ಹಿಡ್ಕಂಡ್ ಓಡ್ಸ್‌ತಿದ್ದೊ. ಕಕ್ಕೆಗ ಬಾರದಾಂಗೆ ಸೂರ್ಯನ ಬೊಳ್ಪುಗೆ ಎದ್ರ್ ಒಂದು ಕನ್ನಡಿ ಇಸ್‌ತಿದ್ದೊ. ಅದರ್ಲಿ ಪಳಪಳ ಬೊಳ್ಪು ಹೊಳ್ಯಕಾಕನ ಕಕ್ಕೆಗ ಹೆದ್ರಿ ಬಾತಿತ್ಲೆ. ಒಣ್ಗಿದ ಕಾಯೆ ಚೊಪ್ಪುನ ಸುಟ್ಟ್‌ದ್ ಒಂದು ಗಳೆಗೆ ಕಟ್ಟಿ ಇಸ್ತಿದ್ದೊ. ಅದ್ ದೂರಕೆ ನೋಡಿಕನ ಸತ್ತ ಕಕ್ಕೆನ ಹಾಂಗೆ ಕಾಂಬತಿತ್ತ್. ಅದರ ನೋಡಿ ಕಕ್ಕೆಗ ದೂರ ಓಡ್ತಿದ್ದೊ. ಹಪ್ಪಳ –ಸಂಡಿಗೆ ಮಾಡುವ ದಿನ ನಾ ಸಾಲೆಗ ಚಕ್ಕರ್ ಹಾಕ್ತಿದ್ದೆ.

* * * * *

ಚುಕ್ಕೆ – 10

"ಅವ್ವನ ಖಜಾನೆ"

ನಮ್ಮ ಮನೆನ ಅಟ್ಟ ದೊಡ್ಡ ದೊಡ್ಡ ತಾಮ್ರದ ಮಂಡೆ, ಅಂಡೆ, ಪಾತ್ರೆ ಪಡಗಗಳಿಂದ ತುಂಬಿ ಹೋಗಿತ್ತ್. ನಮ್ಮ ಅವ್ವಂಗೆ ಮೂರ್ ಜನ ಗಂಡ್ ಮಕ್ಕ ಇದ್ದ ಕಾರಣ ಅವು ಏನೇ ತೆಗ್ದರೂ, ಮೂರ್ ಮೂರಾಗಿ ತೆಗ್ಯೋತಿದ್ದೊ. ಹಾಂಗಾಗಿ ಮೂರ್ ನೀರ್ನ ಮಂಡೆ, ಮೂರ್ ಕೊಡ್ಪಾಣ, ಗಂಜಿ ಬೇಸುವ ಮಡ್ಕೆಗ, ಅಡ್ಗೆರ, ಚೊಂಬುಗ, ಕಾವಂಗ – ಎಲ್ಲಾ ತಾಮ್ರ ಮತ್ತೆ ಹಿತ್ತಳೆನ ಪಾತ್ರೆಗ ಇದರೆಲ್ಲಾ ಮೂರ್, ಮೂರ್, ತೆಗ್ದ್‌ದ್ ಜೋಡ್ಸಿ ಇಟ್ಟಿದ್ದೊ. ವೊರ್ಸಕ್ಕೊಮ್ಮೆ ಕಲಾಯಿ ಪುರ್ಬುನ ಮನೆಗೆ ಕರ್ಸಿ, ಇಜ್ಜೆಲಿಲಿ ಕಲಾಯಿ ಹಾಕ್ಸ್‌ತಿದ್ದೊ. ಅವ್ವನ ಹಕ್ಕಲೆ ಒಂದು ಬೀಗ ಹಾಕಿದ ಕಬ್ಬಿಣದ ಪೆಟ್ಟಿಗೆ ಇತ್ತ್. ಅದರೊಳಗೆ ತಾಮ್ರದ ದೊಡ್ಡ ಕರ್ಡಿಗೆ ಇತ್ತ್. ನಮ್ಮ ಮನೆನ ಒಂದು ಕೋಣೆಲಿ ಭತ್ತ ತುಂಬುಸುವ ಒಂದು ಮರದ ಪತ್ತಾಯ ಇತ್ತ್. ವ್ಯಾಪಾರ, ವೈವಾಟ್ ಜೋರಾದಾಂಗೆ ತೆಗ್ದ ಭತ್ತ ಆ ಪತ್ತಾಯಲಿ ಹಿಡ್ಸ್‌ತಿತ್ಲೆ. ಆಗ ಅಪ್ಪ ಭತ್ತ ತುಂಬಿಸಿಡಿಕೆ ಒಂದು ದೊಡ್ಡ ಕೋಣೆ ಕಟ್ಟಿಸಿದೊ. ಆಗ ಆ ಪತ್ತಾಯ ಖಾಲಿ ಆತ್. ಅವ್ವ ಆ ಪತ್ತಾಯನ ಅವರ ಸ್ವಂತ ಸೊತ್ತುಗಳ ಇಡಿಕೆ ತಕಂಡೊ. ಅವರ ಬಟ್ಟೆಬರೆ, ಬೆಳ್ಳಿನ ಸಾಮಾನ್‌ಗ, ಚಿನ್ನದ ಕರ್ಡಿಗೆ ಇದ್ದ ಪೆಟ್ಟಿಗೆ ಎಲ್ಲಾ ಆ ಪತ್ತಾಯಲಿ ತುಂಬಿಸಿದೊ. ಅವರ ಚಿನ್ನ ತುಂಬಿಸಿಡುವ ದೊಡ್ಡ ತಾಮ್ರದ ಕರ್ಡಿಗೆಲಿ ಹತ್ತ್, ಹನ್ನೆರಡ್ ಸಣ್ಣ ಸಣ್ಣ ಕರ್ಡಿಗೆಗ ಇದ್ದೊ. ಅದರ್ಲಿ ಏಳೆಂಟ್ ಉಂಗುರಗ, ಕೆಬಿನ, ಟಿಕ್ಕಿಗ, ಲೋಲಾಕ್‌ಗ, ಸರಗ, ಮುತ್ತುಗ, ಹವಳಗ, ಕೆಂಪು ಕಲ್ಲ್, ಪಚ್ಚೆ ನೀಲ ಕಲ್ಲ್‌ಗ ಎಲ್ಲಾ ಇದ್ದೊ. ಅದರ ಮುಟ್ಟಕೆ, ನೋಡಿಕೆ ಯಾರಿಗೂ ಬುಡ್‌ತಿತ್ಲೆ. ಪತ್ತಾಯದ ಬೀಗದ ಕೈ ಅವರ ಸೊಂಟಲೇ ಇರ್ತಿತ್ತ್. ತಾಮ್ರದ ಸೇರ್‌ನ ತುಂಬಾ ಬೆಳ್ಳಿನ ನಾಣ್ಯಗ ಇದ್ದೊ. ಅವರ ಕಾಲಲಿ ಬೆಳ್ಳಿನ ನಾಣ್ಯಗ ಚಲಾವಣೆಲಿ ಇದ್ದೊಗಡ. ನಂಗೆ ಅವು ಮೂವತ್ತ್ ಬೆಳ್ಳಿನ ನಾಣ್ಯಗಳ ಕೊಟ್ಟಿದ್ದೊ. ಅವರ ಹಕ್ಕಲೆ ವಿಕ್ಟೋರಿಯಾ ರಾಣಿನ ತಲೆನ ಚಿತ್ರ ಇದ್ದ ಒಂದು ಪವನ್‌ನ ಚಿನ್ನದ ನಾಣ್ಯಗ ತುಂಬಾ ಇದ್ದೊ. ನನ್ನ ಗಂಡಂಗೆ ಅವು ಒಂದು ಚಿನ್ನದ ನಾಣ್ಯನ ಕೊಟ್ಟಿದ್ದೊ. ಉಳ್ದದ್ ಏನಾತ್‌ಂತ ನಂಗೆ ಗೊತ್ತಿಲ್ಲೆ. ಅವು ದುಡ್ಡು ಮಾಡ್ದರ್ಲಿ ಭಾರೀ ಬಿರ್ಸತಿ. ಕೋಳಿ ಗೊಬ್ಬರ, ದನದ ಗೊಬ್ಬರ ಹಾಕಿ, ಹರಿವೆ, ಬಸಳೆ, ತೊಂಡೆ, ಬಾಳೆಕ್ಕಾ, ನಾಟಿಗೆಣ್ಸ್ –ಎಲ್ಲಾ ಬೆಳ್ಸ್‌ತಿದ್ದೊ. ಅದರೆಲ್ಲಾ ನಮ್ಮ ಅಂಗ್ಡಿನ ಕೆಲ್ಸದ ಹೈದಂಗಳ ಕೈಲಿ, ಪೋಲೀಸ್ ಲೈನಿಗೆ ಕಳ್ಸಿ ಮಾರ್ಸ್‌ತಿದ್ದೊ. ಇಪ್ಪತ್, ಮೂವತ್ತ್ ಕೋಳಿಗಳ ಸಾಕ್‌ತಿದ್ದೊ. ಸುಳ್ಯ ಜಾತ್ರೆ ಕಳ್ದ ಮೇಲೆ ಕೋಳಿ ಕಟ್ಟ ಇರ್ತಿತ್ತ್. ಆಗ ಜನ ಹೇಳ್ದ ದುಡ್ಡ್ ಕೊಟ್ಟ್ ದೊಡ್ಡ ದೊಡ್ಡ ಹುಂಜಂಗಳ ತಕಂಬತಿದ್ದೊ. ಅದರ್ಲಿ ಅವ್ಕೆ ತುಂಬಾ ದುಡ್ಡು ಸಿಕ್ತಿತ್ತ್. ಕೋಳಿ

ಮೊಟ್ಟೆ ಮಾರಿ ಹಣ ಮಾಡ್ತಿದ್ದೊ. ನಮ್ಮಲ್ಲಿ ಏಳೆಂಟ್ ಕರ್‌ಬುಡ್ವ ದನಂಗ ಇದ್ದೊ. ಮನೆ ಖರ್ಚಿಗೆ ಬೇಕಾದಷ್ಟ್ ಹಾಲ್ನ ಇಸಿಕಂಡ್, ಉಳ್ದದರ ಮಾರ್ತಿದ್ದೊ. ತುಪ್ಪ ಮಾಡಿ ಮಾರ್ತಿದ್ದೊ. ಎಲ್ಲದರ್ಲಿ ದುಡ್ಡು ಮಾಡಿ, ಚಿನ್ನ ತೆಗ್ಯೊತಿದ್ದೊ. ಅಪ್ಪ ಒಮ್ಮೊಮ್ಮೆ ಮಂಗ್ಳೂರ್‌ಗೆ ಸಾಮಾನ್ ತಾಕೆ ಹೋಕಾಕನ, ದುಡ್ಡು ಎತ್ತಿತ್ಲರೆ, ಅವ್ವನ ಹಕ್ಕಲೆಂದ ಸಾಲ ತಕಂಬತಿದ್ದೊ. ನಾ ಕಾಲೇಜ್ ಕಲ್ಯಕಾಕನ ನನ್ನ ಖರ್ಚಿಗೆ ಎಲ್ಲಾ ಅವ್ವನೇ ದುಡ್ಡು ಕೊಡ್ತಿದ್ದೊ. ಹೆಣ್ಣ್ ಗೂಡೆಗ ಬೇರೆ ಮನೆಗೆ ಹೋಗೋವೂಂತ, ಅಕ್ಕನ ಅಪ್ಪ ಹೈಸ್ಕೂಲ್ಗೆ ಕಳ್ಸಿತಿಲ್ಲೆ. ನಂಗೆ ನಾ ಪರವೂರ್‌ಲಿ ಓದಿಸಿಕೆ ಖರ್ಚಾದೇಂತ. ಅಪ್ಪ ಸುರುಗೆ ಕಳ್ಸಿಕೆ ಒಪ್ಪಿತ್ಲೆ. ಅವ್ವ ಓದು ಬರ ಕಲ್ತತ್ಲರೂ, ವ್ಯವಹಾರ ಮಾಡಿಕೆ ತುಂಬಾ ಉಷಾರ್. ವಿದ್ಯೆಗೆ ಬಾಳ ಗೌರವ ಕೊಡ್ತಿದ್ದೊ. ನಾ ಕಲ್ಯೋದರ ಅರ್ಧಕ್ಕೆ ನಿಲ್ಲಿಸಿದಕ್ಕೆ ಅವ್ವಂಗೆ ಬಾಳ ಬೇಜಾರ ಆಗಿತ್ತ್.

ನಮ್ಮ ಅವ್ವ ನೋಡಿಕೆ ದಪ್ಪ ಇದ್ದ್‌ದ್, ಕುಳ್ಳ ಶರೀರದೊವು. ಬೆಳ್ಳಂಗೆ ಬೆಳ್ಳಂಗೆ ಇದ್ದ್, ಅವರ ನೋಡಿಕಾಕನನೇ ಎಲ್ಲೋವು ಅವ್ಕೆ ಗೌರವ ಕೊಡ್ತಿದ್ದೊ. ಅವು ತುಂಬಾ ಜೋರ್ನ್ ಹೆಂಗ್ಸ್. ಯಾರಿಗೂ ಹೆದ್ರ್‌ತಿತ್ಲೆ. ನಾಕ್ ಜನರ ಕೆಲ್ಸನ ಒಬ್ಬನೇ ಮಾಡ್ತಿದ್ದೊ. ಕೆಲ್ಸಕ್ಕೆ ಹಗ್ಲ್, ಇರ್ಳ್‌ಂತ ಇರ್ತಿತ್ಲೆ. ಅವು ಎಷ್ಟೊತ್ತಿಗೆ ಮೊಲ್ಗ್‌ಗಿದ್ದೊ ಅವ್ಕೇ ಗೊತ್ತ್. ಜಡೆ ಹಾಕಿ ತಲೆ ಕಟ್ಟ ಸುತ್ತಿ, ದಿನಾ ಒಂದು ಮಾಲೆ ಅಬ್ಬಂತಿಕೆ ಹೂ ಮುಡ್ಯದಿದ್ದರೆ ಅವ್ಕೆ ಆಗ್‌ತಿತ್ಲೆ. ಇರುವಂತಿಕೆ ಹೂ ಆಕಾಕನ, ಅಬ್ಬಂತಿಕೆ ಮಾಲೆನ ಮೇಲೆ ಒಂದು ಮಾಲೆ ಮಲ್ಲಿಗೆ ಅವ್ಕೆ ಬೇಕೇ ಬೇಕು. ಹಣೆಲಿ ಅಗಲದ ಕುಂಕುಮ ಬೊಟ್ಟ್ ಇಸಿ, ಎರ್ಡ್ ಹುಬ್ಬು ಕೂಡುವಲ್ಲಿ ಗಂಧದ ಬೊಟ್ಟು ದಿನಾ ಇಸ್ತಿದ್ದೊ. ಅವರ ಅಗಲದ ಮೋರೆಗೆ ಅದ್ ಲಾಯ್ಕ್ ಕಾಂಬತಿತ್ತ್. ನಾವ್ಗೆ ಅವರ ಕೆಬಿಲಿದ್ದ ಕೆಂಪು ರಂಗ್‌ನ ಏಳ್ ಕಲ್ಲ್‌ನ ಬೆಂಡೋಲೆ ಪಳ ಪಳ ಹೊಳ್ಯೊದರ ನೋಡ್ದೇ ಒಂದು ಕುಸಿ. ಮೂಂಕಿಗೆ ಕೆಂಪು ಕಲ್ಲ್ ಅದರ ಕೆಳಗೆ ಚಿನ್ನದ ಗುಂಡು ಇದ್ದ ಮೂಂಕುತಿ. ಅವರ ಉದ್ದ ಮೂಂಕಿಗೆ ಪೊರ್ಲು ಕಾಂಬತಿತ್ತ್. ಅವರ ಕುತ್ತಿಗೆಲಿ ಗೋಧಿಕಾಳ್‌ನ ಚಿನ್ನದ ಚೈನಿಗೆ ಕರಿಮಣಿ ಇದ್ದ ತಾಳಿ ಚೈನ್ ಇರ್ತಿತ್ತ್. ನೆಂಟ್ರಮನೆಗೆ ಹೋಕನ ಒಂದು ಮುತ್ತುನ ಸರ, ಮತ್ತೆ ಎರ್ಡೆಳೆ ಚಕ್ರಸರ ಹಾಕ್ತಿದ್ದೊ. ಹೊರ್ಡಿಕಾಕನ ಬಾಳ ಪೊರ್ಲು ಕಾಂಬತಿದ್ದೊ. ಎಷ್ಟೊ ಸಲ ನಾ ಬೊಳ್ಪುಗೆ ಕಣ್ಣ್ ಬುಟ್ಟ್ ನೋಡಿಕಾಕನ, ಅವ್ವ ಕಾಲ್ನ ನೀಂಡಿ, ಎರ್ಡ್ ಪಾದದ ಎಡೆಲಿ ಕನ್ನಡಿ ಇಸಿಕಂಡ್, ಬೊಗ್ತಲೆ ತೆಗ್ದ್, ತಲೆ ಬಾಚಿ ಜಡೆ ಹಾಕಿ ತಲೆ ಕಟ್ಟುದರ ನಾ ನೋಡ್ತಿದ್ದೆ. ನಮ್ಮ ಅಪ್ಪಂಗೆ ಮನೆ ಹೆಣ್ಮಕ್ಕ ತಲೆ ಹರ್‌ಂಡಿ ಕಂಡಿದ್ದರೆ ಸಿಟ್ಟ್ ಬಾತಿತ್ತ್. ಬೊಯ್ಯೊತಿದ್ದೊ. ದಿನಾ ಬೊಳ್ಪುಗೆ ಎಲ್ಲೋವು ತಲೆ ಬಾಚಿ, ಹೂ ಮುಡ್ದ್ ಕುಂಕುಮದ ಬೊಟ್ಟು ಇಸೊಕು. ಅಪ್ಪನೂ ದಿನಾ ಬೊಳ್ಪುಗೆ ಹಳ್ಳಕ್ಕೆ ಹೋಗಿ ಮಿಂದ್ ಬಾತಿದ್ದೊ. ಇರ್ಳ್ ಅಂಗ್ಡಿ ವ್ಯಾಪಾರ ಮುಗ್ಧ ಮೇಲೆ ಮನೆಲಿ ಬಿಸ್ನೀರ್ ಮೀಯತಿದ್ದೊ. ನಾವು ಹಿಂಬೊತ್ತ್ ಮಿಂದ್ ಭಜನೆ ಮಾಡ್ತಿದ್ದೊ.

ಚುಕ್ಕೆ – 11

"ನಾವ್ಗೆ ಇಬ್ಬೊರಿಗೆ ರಾಜಿ ಆತ್"

ನಮ್ಮ ಮನೆ ಪಕ್ಕಲಿ ಅಪ್ಪಣ್ಣ ಶೆಟ್ರ ಮನೆ, ಅಂಗ್ಡಿ ಇತ್ತ್. ಅದ್ಕೆ ತಾಂಗಿ ಗಣಪತಿ ನ್ಯಾಕರ ಮನೆ ಇತ್ತ್. ಅವ್ಕೆನೂ ಸಣ್ಣದೊಂದ್ ಅಂಗ್ಡಿ ಇತ್ತ್, ಕೊಡೆ ರಿಪೇರಿ ಮಾಡ್ದು ಅವರ ಕೆಲ್ಸ. ಅವರ ಮೂರ್ನೇ ಮಗಳ್ ರಮಾ ನನ್ನ ಜೋಸ್ತಿ. ನಾವಿಬ್ಬೊರು ಸಾಲೆಗೆ ಒಟ್ಟಿಗೆ ಹೋಗ್ತಿದ್ದೊ. ನಮ್ಮ ಅಂಗ್ಡಿ ಎದ್‌ರ್ ರಾಜರಸ್ತೆ. ಅದರ ಆಚೆ ಪುಡೆಲಿ, ಹತ್ತ್ ಮಾರ್ ದೂರಲಿ ಸಬ್ ರಿಜಿಸ್ಟ್ರಿ ಆಫೀಸ್ ಇತ್ತ್. ರಾಜ ರಸ್ತೆಂದ ಆಫೀಸಿಗೆ ಹೋಗುವ ದಾರಿನ ಎರ್ಡ್ ಪುಡೆ ಸಾಲಲಿ ದೇವದಾರ್ ಮರಗಳ ನೆಟ್ಟಿದ್ದೊ. ದೊಡ್ಡ ದೊಡ್ಡ ಮರಗ ಬೆಳ್ದ್ ದಾರಿಗೆ ನೆರ್ಳ್ ಕೊಡ್ತಿತ್ತ್. ದೇವದಾರ್ ಮರಲಿ ತುಂಬಾ ಗುಲಾಬಿ ಬಣ್ಣದ ಹೂಗ ಅರ್ಳಿ, ಅದರ್ಲಿ ಕಾಯಿ ಆಗ್ತಿತ್ತ್. ಸೀಗೆ ಕ್ಯಾನ ಹಾಂಗೆ ಉದ್ದದ ನೇರಳೆ ಕಪ್ಪು ಬಣ್ಣದ ಕೋಡ್‌ಗ ತಿಂಬಕನ ಸಿಂಹಿ ಇರ್ತಿತ್ತ್. ನಾವು ಮಕ್ಕ ಅದರ ಹೆರ್ಕಿ, ಅಗ್ದ್, ಅಗ್ದ್‌ದ್ ಅದರ ಸೀರಸನ ಹೀರಿ, ಕೋಡುನ ಬಿಸಾಡ್ತಿದ್ದೊ. ದನಂಗಳಿಗೆ ಅದ್ ಬಾಳ ಪ್ರೀತಿನ ತಿನ್ಸ್. ಅದರ ತಿಂದರೆ ಕರ್ ಬುಡುವ ಹಸ್‌ಗಳಿಗೆ ಹಾಲ್ ಹೆಚ್ಚ್ ಸಿಕ್ಕಿದೆ ಗಡ. ಅವ್ವ ನಮ್ಮೊಟ್ಟಿಗೆ ಅದರ ಹೆರ್ಕಿ ತಾಕೆ ಹೇಳ್ತಿದ್ದೊ. ನಾವು ಮಕ್ಕ ಅದರ ಹೆರ್ಕಿ ತಂದ್ ದನಂಗಳಿಗೆ ಕೊಡ್ತಿದ್ದೊ. ರಮನ ಮನೆಲೂ ಒಂದ್ ಕರ್

ಬುಡುವ ಹಸ್ ಇತ್ತ್. ಅದುನೂ ಸೀಕೋಡು ಹೆರ್ಕಿಕೆ ಬಾತಿತ್ತ್. ನಮ್ಮ ಮನೆನ ಇಜ್ಜೆಲಿಲಿ ನಿಂತ್ ನೋಡಿರೆ ರಮನ ಕೋಣೆನ ಕಿಡ್ಕೆ ಕಾಂಬತಿತ್ತ್. ನಾ ನಮ್ಮ ಮನೆನ ದರೆ ಹಕ್ಕಲೆ ನಿಂತ್ ಅದರ ಮನೆನ ಕಿಡ್ಕೆ ನೋಡ್ತಿದ್ದೆ. ಒಮ್ಮೊಮ್ಮೆ ಅದ್ ಕಿಡ್ಕೆಲಿ ಕಾಂಬತಿತ್ತ್. ಆಗ ನಾ ಕೈಬಾಸೆ ಮಾಡಿ ಕರ್ದ್, ಓಡಿ ಹೋಗಿ ನಮ್ಮ ಅಂಗ್ಡಿನ ಎದ್ರ್‌ನ ರಸ್ತೆ ದಾಟಿ ನಾವು ದಿನಾ ಸೇರ್ತಿದ್ದ ದೇವದಾರು ಮರದ ಹಕ್ಕಲೆ ಹೋಗ್ತಿದ್ದೆ. ಹಂಞ ಹೊತ್ತ್‌ಲಿ ರಮನೂ ಬಾತಿತ್ತ್. ನಾವು ಆಗ ಜೋಸ್ತಿಗ ಆಗಿದ್ದರೂ ಹೆಚ್ಚಿಗೆ ಮಾತಾಡ್ತಿತ್ಲೆ. ಕೈ ಬಾಯಿ ಸನ್ನೆಲಿ ಪಿಸಿ ಪಿಸಿ ಮಾತಾಡ್ತಿದ್ದೊ. ನಾ ನಮ್ಮ ಅಂಗ್ಡಿಂದ ಕಲ್ಸಕ್ರೇ, ದ್ರಾಕ್ಷಿ, ಖರ್ಜೂರನ ಯಾರಿಗೂ ಗೊತ್ತಿಲ್ಲದಾಂಗೆ ತೆಗ್ದ್ ಕಾಗ್ದಲಿ ಮುದ್ದೆ ಮಾಡಿ ತಕೊಂಡೋಗಿ ಅದ್ಕೆ ಕೊಡ್ತಿದ್ದೆ. ಅದುನೂ ನಂಗೆ ಒಮ್ಮೊಮ್ಮೆ ದಾರೆ ಹುಳಿ, ನೆಕ್ಕರೆ ಮಾಯ್ನ ಮಿಡಿ, ಸುಟ್ಟ ಹಪ್ಪಳ ತಂದ್‌ದ್ ಕೊಡ್ತಿತ್ತ್. ನಾವಿಬ್ಬೊರು ಅದರ ತಿಂದ್‌ಕಂಡ್ ಒಬ್ಬರ್‌ಂದೊಬ್ಬ ನೋಡಿಕಂಡ್ ನೆಗಾಡಿಕಂಡ್ ಗುಸು ಗುಸು ಮಾತಾಡ್ತಿದ್ದೊ. ತಿಂದಾದ ಮೇಲೆ ಉದ್ದದ ಲಂಗನ ಮೇಲೆ ಮೊಟ್ಟೆನ ಹಾಂಗೆ ಮಾಡಿ, ಲಂಗ ತುಂಬಾ ಸೀಂಕೋಡು ತುಂಬಿಸಿಕಂಡ್ ಮನೆಗೆ ತಾತಿದ್ದೊ.

ಒಂದ್ ದಿನ ರಮಾ ದೇವದಾರ್ ಮರದ ಅಡಿಲಿ ನಂಗೆ ಸಿಕ್ಕಿಕಾಕನ ನನ್ನ ಕೈಲಿ ಒಂದು ಕಾಗ್ದದ ಮುದ್ದೆ ಇಸಿತ್. ಅದರ ಬಿಚ್ಚಿ ನೋಡಿಕನ ಅದರ್ಲಿ ಬೆಳ್ಳಂಗೆನ ಹೊಡಿ ಇತ್ತ್. ಅದ್ ಎಂತದ್‌ಂತ ಅದರ ಮೂಸಿ ನೋಡಿಕನ ಪೊರ್ಮಳ ಬಾತಿತ್ತ್. ಆಗ ಅದ್ ಹೇಳ್ತ್. ‘ಇದರ ಪೌಡರ್‌ಂತ ಹೇಳ್ವೆ. ನನ್ನ ಅಕ್ಕ ಇದರ ದಿನಾ ಮೋರೆಗೆ ಹಾಕಿದೇಂತ ಹೇಳಿ, ನನ್ನ ಮೋರೆಗೆ ಅದರ ತೆಗ್ದ್‌ದ್ ಹಾಕಿತ್ತ್. ನಾನೂ ಅದರ ಮೋರೆಗೆ ಬೆರ್ಳ್‌ಲಿ ತೆಗ್ದ್ ಉಜ್ಜಿದೆ. ಅದರ ಮೋರೆ ಬೆಳ್ಳಂಗೆ ಆತ್. ಗಮ ಗಮ ಪೊರ್ಮಳನೂ ಬಾತಿತ್ತ್. ನಂಗೆ ಭಾರೀ ಕುಸಿ ಆತ್. ನಾ ಓಡಿಕಂಡ್ ಮನೆಗೆ ಬಂದ್ ಅದರ ಸಣ್ಣಕ್ಕಂಗೆ ತೋರ್ಸಿದೆ. ಅದ್ಕೆ ಅದ್ ಪೌಡರ್‌ಂತ ಗೊತ್ತಾತ್. ಅದರ ಹಕ್ಕಲೆನೂ ಪೌಡರ್ ಇತ್ತ್. ಅದ್ ಅದರ ಪೆಟ್ಟಿಗೆಂದ ಒಂದು ಡಬ್ಬಿ ತೆಗ್ದ್, ನನ್ನ ಕೈಗೆ ಹಂಞ ಹಾಕಿ ತೋರ್ಸಿತ್. ನಂಗೆ ಗೊತ್ತೇ ಇತ್ಲೆ. ಅಕ್ಕ ಪೌಡರ್ ಹಾಕಿದೇಂತ ಆಗ ನಂಗೆ ಗೊತ್ತಾತ್. ಹಾಂಗೆ ಅದ್ ಅಸ್ಟ್ ಬೆಳ್ಳ ಬೆಳ್ಳಂಗೆ ಪೊರ್ಲು ಇರ್ದೂಂತ. ಅಕ್ಕ ಅದರ ಯಾರಿಗೆ ತೊರ್ಸ್‌ತಿತ್ಲೆ. ಕದ್ದ್, ಮುಚ್ಚಿ ಹಾಕ್ತಿತ್ತ್. ಆಗನ ಕಾಲಲಿ ಗೂಡೆಗ ಎಲ್ಲಾ ಇದರ ನೋಡಿಯೇ ಇರ್‌ತಿತ್ಲೆ. ಅದರ ಮೇಲೆ ನಾ ಅಕ್ಕನ ಪೌಡರ್ ಡಬ್ಬಿಂದ ಆಗಾಗ ಕದ್ದ್ ನನ್ನ ಮೋರೆಗೆ ಮೆತ್ತಿಕಂಬತಿದ್ದೆ. ಆಗ ಸುಳ್ಯಲಿ ಇದೆಲ್ಲಾ ಸಿಕ್‌ತಿತ್ಲೆ. ಅಣ್ಣ ಅಂಗ್ಡಿಗೆ ವಾರಕ್ಕೊಮ್ಮೆ ಸಾಮಾನ್ ತಾಕೆ ಮಂಗ್ಳೂರಿಗೆ ಹೋಕಾಕನ ಅಕ್ಕ ಒಂದು ಪಟ್ಟಿ ಮಾಡಿ ಅದ್ಕೆ ಬೇಕಾದ ಸಾಮಾನ್‌ನ ಅವನಲ್ಲಿ ತರ್ಸ್‌ತಿತ್ತ್. ಹಣೆಗೆ ಬೊಟ್ಟು ಇಸಿಕೆ ಒಂದು ಸಣ್ಣ ಕುಪ್ಪಿಲಿ ಕೆಂಪು ಬಣ್ಣದ ಅಂಟ್ ಅಂಟಾದ, ದಪ್ಪ ಜೋನಿ ಬೆಲ್ಲದ ಹಾಂಗೆ ಇದ್ದ ಒಂದ್ ಸಣ್ಣ ಕುಪ್ಪಿ ಸಿಕ್ಕ್‌ತಿತ್ತ್. ಅದರ ನಾವು ಲಾಲ್‌ಗಂಧಾಂತ ಕರ್‍ಯೋತಿದ್ದೊ. ಉರುಂಟು ಬೊಟ್ಟು ಇಸಿಕೆ,

ಅದರ ಮುಚ್ಚಳಲೇ ಕಡ್ಡಿ ಇರ್ತಿತ್. ಬೊಟ್ಟ್ ಇಸಿ ಹಂಞ ಹೊತ್ತ್‌ಲಿ ಅದ್ ಒಣ್‌ಂಗ್‌ತಿತ್. ಅಕ್ಕ ಸ್ನೋ ಪೌಡರ್, ಕಣ್‌ಕಪ್ಪು, ಲಾಲ್‌ಗಂಧ, ಸೆಂಟ್ – ಎಲ್ಲಾ ಅಣ್ಣನಲ್ಲಿ ಮಂಗ್ಳೂರ್‌ಂದ ತರ್ಸ್‌ತಿತ್. ಇದರೆಲ್ಲಾ ಹಾಕಿರೆ ಅವ್ವ ಬೊಯ್ಯೊತಿದ್ದೊ. ಅಕ್ಕ ಅವ್ವನ ಕ್ಯಾರೇ ಮಾಡ್ತಿತ್ಲೆ.

ಮೊರ್ದಿನ ನಾನೂ ರಮನೂ ದೇವದಾರ ಮರದ ಅಡಿಲಿ ಕುದ್ದ್‌ಕಂಡ್ ಮಾತಾಡಿಕನ ನಾ ಹೇಳ್ದೆ, 'ನನ್ನ ಅಕ್ಕನ ಹಕ್ಕಲೆನೂ ಪೌಡರ್ ಉಟ್ಟೂ'ಂತ. ಆಗ ಅದ್ ಹೇಳ್ತ್, 'ಹೌದಾ, ಹಾಂಗಾರೆ ನಂಗುನೂ ನಾಳೆ ತಂದ್‌ಕೊಡೂ'ಂತ. ನಾ ಒಪ್ಪಿ ತಲೆ ಅಲ್ಲಾಡ್ಸಿ ಮನೆಗೆ ಬಂದೆ. ಆದರೆ ಅಕ್ಕನ ಕಣ್ಣ್ ತೊಪ್ಪಿಸಿ ಪೌಡರ್ ಕದ್ಯಕೆ ಆ ದಿನ ನಂಗೆ ಆತ್ಲೆ. ಕೇಳ್ರೆ ಅದ್ ನಂಗೆ ಹೊಡ್ದದೆ. ಸಣ್ಣಕ್ಕ ನನ್ನಂದ ಎಂಟ್ ವೊರ್ಸ ದೊಡ್ಡದ್. ನಾ ಆಗ ಮೂರ್ನೆ ಕ್ಲಾಸ್‌ಲಿ ಇದ್ದೆ. ಅದ್ ಸಾಲೆ ಬುಟ್ಟ ಮೇಲೆ ನಾ ಸಾಲೆಗೆ ಹೋಕೆ ಸುರು ಮಾಡ್ದೆ. ಆಗ ಸುಳ್ಯಲಿ ಎಲಿಮೆಂಟರಿ ಶಾಲೆಲಿ ಎಂಟ್ ಕ್ಲಾಸ್ ಮುಟ್ಟ ಕಲ್ಯಕೆ ಆಗ್ತಿತ್. ಎಂಟ್‌ನೇ ಕ್ಲಾಸ್‌ನ ಪಬ್ಲಿಕ್ ಪರೀಕ್ಷೆ ಬೆಳ್ಳಾರೆಲಿ ನಡ್ಯತಿತ್. ಆಗ ಸುಳ್ಯ, ಬೆಳ್ಳಾರೆ ಉಪ್ಪಿನಂಗಡಿ ತಾಲೂಕಿಗೆ ಸೇರಿತ್. ಪುತ್ತೂರು ತಾಲೂಕು ಮತ್ತೆ ಆದ್. ಸಣ್ಣಕ್ಕ ಎಂಟ್ನೇ ಕ್ಲಾಸ್ ಮಾತ್ರ ಕಲ್ತಿತ್. ಹೈಸ್ಕೂಲ್ ಕಲ್ಯಕ್ಕೆ ಬದಿಯಡ್ಕಕ್ಕೆ ಹೋಕಾಗಿತ್. ಇಲ್ಲಿನ ಶ್ರೀಮಂತ ಹೈದಂಗ ಬದಿಯಡ್ಕಕ್ಕೆ ಮತ್ತೆ ನೀಲೇಶ್ವರಕ್ಕೆ ಹೈಸ್ಕೂಲ್ ಕಲ್ಯಕೆ ಹೋಗ್ತಿದ್ದೊ.

ಸಣ್ಣಕ್ಕ ಹದ್ದ್‌ನ ಕಣ್ಣ್‌ಂದ ನಂಗೆ ಪಾರ ಕುದ್ರ್‌ತಿತ್. ನನ್ನ ಜೋಸ್ತಿ ಗೂಡೆಗಳಿಗೆ ಕಲ್ಲ್ ಸಕ್ಕರೆ, ಒಣದ್ರಾಕ್ಷಿ, ಖರ್ಜೂರ – ಎಲ್ಲಾ ಕದ್ದ್ ತಕೊಂಡೋಗಿ ಕೊಡ್ದು ಅಕ್ಕಂಗೆ ಗೊತ್ತುಟ್ಟು. ಆಗಾಗ ಅದ್ ಅವ್ವಂಗೆ ಹಿಡ್ಸಿಕೊಟ್ಟ್, ನಂಗೆ ಬೊಡ್ಸ್‌ತಿತ್. ಆಗ ನಾ ಎರ್ಡ್‌ದಿನ ಸುಮ್ಮನಿರ್ತಿದ್ದೆ. ಮತ್ತೆ ಮುಂದೆನಾಂಗೆ ತಕೊಂಡೋಗಿ ಕೊಡ್ತಿದ್ದೆ. ಆಗ ನಂಗೆ ಸಣ್ಣಕ್ಕ, 'ನಾಯಿಬೀಲ ಡೊಂಕೂ'ಂತ ಹಂಗ್ಸ್‌ತಿತ್. ಯಾಗ ನಂಗೆ ಅಕ್ಕನ ಪೌಡರ್ ಡಬ್ಬಿಂದ ಪೌಡರ್ ಕದ್ಯಕೆ ಆತ್ಲೆನೋ, ಆಗ ನಂಗೆ ಬಾರೀ ಮೊರ್ಡಿಕೆ ಬಾತ್. ನಾಳೆ ಹೇಂಗೆ ಬರಿ ಕೈಲಿ ಹೋಗಿ ರಮಾಂಗೆ ಮೋರೆ ತೋರ್ಸುದೂಂತ ಅತ್ತ ಇತ್ತ ಹೋಕಂಡ್ ಯೋಚನೆ ಮಾಡ್‌ತ್ತಾ ನೀರೆಡಿ ಕೊಟಗೆಗೆ ಹೋದೆ. ನೀರೆಡಿ ಕೊಟಗೆಲಿ ದೊಡ್ಡ ದೊಡ್ಡ ಮರದ ಕುಂಟೆಗಳ ಇಸಿದ್ ಒಲೆಲಿ ಕಿಚ್ಚಿ ಮಾಡ್ಯೊಳೊ. ಕೆಲವು ಕುಂಟೆಗ ಉರ್ದ್‌ದ್ ಒಲೆಂದ ಹೊರಗೆ ಬಂದ್ ಕಿಚ್ಚ್ ಕೆಟ್ಟ್ ಹೋದರ ನೋಡ್ದೆ. ಆ ಸೌದೆ ಕುಂಟೆನ ಸುತ್ತೊಳೂ, ಬೆಳ್ಳಂಗೆ ಬೂದಿ ಹರ್ಡಿಕಂಡಿತ್. ಅದರ ನೋಡಿಕಾಕನ ನನ್ನ ಮನ್ಸ್‌ಲಿ ಒಂದ್ ಆಲೋಚನೆ ಹೊಳ್ತ್. ಮನೆಗೆ ಓಡಿ ಹೋಗಿ ಒಂದ್ ತಟ್ಟೆ ತಕಂಡ್, ಸಣ್ಣ ಚಿಪ್ಪಿನ ಸೆಡೆಂದ ತುಂಬಾ ಬೆಳ್ಳಂಗೆ ಇದ್ದ ಬೂದಿನ ತೆಗ್ದ್‌ದ್ ತಟ್ಟೆಗೆ ಹಾಕಿದೆ. ಅದರ ಒಂದ್ ಪೇಪರ್‌ಲಿ ಕಟ್ಟಿ, ದರೆ ಹಕ್ಕಲೆ ಓಡಿದೆ. ರಮ ಅದರ ಮನೆನ ಕಿಡ್ಕೆ ಹಕ್ಕಲೆ ನಿಂತ್‌ಕಂಡ್ ನಮ್ಮ ಮನೆನ ನೋಡ್ತಿತ್. ನನ್ನ ನೋಡ್ದ ಕೂಡ್ಲೇ ಕಿಡ್ಕೆಂದ ಸರ್ತ್. ನಾ ಓಡಿಕಂಡ್ ರಸ್ತೆ ದಾಟಿ, ದೇವದಾರು

ಮರದ ಹಕ್ಕಲೆ ಹೋದೆ. ರಮನೂ ಓಡಿಕಂಡ್, ಸೇಂಕಿಕಂಡ್ ಬಾತ್. ನಾ ಅದರ ಕೈಲಿ ಈ ಕಾಗ್ದದ ಪೊಟ್ಣ ಇಟ್ಟ್, ಒಂದೇ ಓಟಲಿ ಮನೆಗೆ ಬಂದೆ.

ಮೊರ್ದಿನ ಎಂದ್ ನಾಂಗೆ ನಾವಿಬ್ಬರೂ ಮರದ ಕೆಳಗೆ ಸೇರ್ದೊ. ಆದರೆ ರಮಾ ಸಿಟ್ಟ್‌ಂದ ನನ್ನ ಮೋರೆನ ದುರುದುರು ನೋಡಿ, ಅದರ ಕೈಲಿದ್ದ ಕಾಗ್ದದ ಪೊಟ್ಣನ ನನ್ನ ಮೋರೆ ಮೇಲೆ ಬೀಸಿ ಇಟ್ಟ್‌ದ್, 'ಮೋಸ, ಮೋಸ ಇದ್ ಪೌಡರೋ ನೋಡ್– ಎಂತ ಹೇಳ್ತ್. ನಾ ಆಗ 'ತಪ್ಪಾತ್ ರಮಾ, ಅಕ್ಕನ ಕಣ್ಣ್ ತೊಪ್ಪಿಸಿ ಪೌಡರ್ ತಾಕೆ ಆತ್ಲೇ'ಂತ ಹೇಳ್ದೆ. ಅದ್ ಮೋರೆ ತಿರ್ಗಿಸಿಕಂಡ್ ಅದರ ಮನೆಗೆ ಹೋತ್. ಒಂದ್ ವಾರ ಅದ್ ದೇವದಾರ ಮರದ ಅಡಿಗೆ ಬಾತ್ಲೆ. ನಾ ದಿನಾ ಅದರ ಮನೆನ ಕಿಡ್ಕೆನ, ನಮ್ಮ ಮನೆ ದರೆ ಹಕ್ಕಲೆ ನಿಂತ್‌ಕಂಡ್ ನೋಡ್ತಿದ್ದೆ. ಅದ್ ಕಿಡ್ಕೆ ಹಕ್ಕಲೆ ಬಾತೇ ಇಲ್ಲೆ. ಹೀಂಗೆ ಒಂದು ವಾರ ಕಳ್ತ್. ಒಂದು ದಿನ ಅದ್ ಕಿಡ್ಕೆ ಹಕ್ಕಲೆ ಬಂದ್‌ದ್ ಅಲ್ಲೇ ನಿಂತತ್. ನಾ ಅದರ ನೋಡಿ ಬಾಳ ಕುಸಿಂದ ಒಳಗೆ ಓಡಿ ಹೋಗಿ, ಅದ್ಕಾಗಿ ತೆಗ್‌ದ್ ಇಸಿದ ತಿಂಡಿ ಪೊಟ್ಣ ಕಿಸೆಲಿ ಹಾಕಂಡ್, ನಾವು ಯಾಗೋಳು ಮಾತಾಡಿಕಂಡ್ ನಿಲ್ಲುವ ಜಾಗೆಗೆ ಓಡ್ದೆ. ರಮಾ ನನ್ನಂದಳೂ ಮುಂದೆನೇ ಅಲ್ಲಿಗೆ ಬಂದ್‌ದ್ ನಿಂತುಟ್ಟು. ನಾ ನನ್ನ ಬಲ್ದ ಕೈನ ಮುಂದೆ ಮಾಡಿ, ನಡ್ ಬೆರ್ಳ್, ಉಂಗುರ ಬೆರ್ಳ್‌ನ ಮೊಡ್ಚಿ, ಹೆಬ್ಬೆರ್ಳ್‌ಂದ ಒತ್ತಿ ಹಿಡ್ದ್, ತೋರ್ ಬೆರ್ಳ್, ಕಿರಿ ಬೆರ್ಳ್‌ನ ಮುಂದೆ ಮಾಡ್ದೆ. ಅದ್ ತೋರ್ ಬೆರ್ಳ್‌ನ ಹಿಡ್ತ್. ನಂಗೆ ಬಾಳ ಕುಸಿ ಆತ್. ತೋರ್ ಬೆರ್ಳ್ ಹಿಡ್ದರೆ ರಾಜಿ, ಕಿರಿ ಬೆರ್ಳ್ ಹಿಡ್ದರೆ ಕೋಪಾಂತ ಆಗ ನಾವು ಸಣ್ಣವಿರಿಕನ ಹೇಳ್ತಿದ್ದೊ. ನಾ ನನ್ನ ಜೋಬುಂದ ಕಲ್ಸಕ್ರೆ, ದ್ರಾಕ್ಷೆ ಇದ್ದ ಕಾಗ್ದದ ಪೊಟ್ಣ ಅದ್ಕೆ ಕೊಟ್ಟೆ. ಅದ್ ನಂಗೆ ಎರ್ಡ್ ದಾರೆ ಹುಳಿ ಕೊಟ್ಟತ್. ಅಲ್ಲಿಗೆ ನಾವ್ಗಿಬ್ರೊರಿಗೂ ರಾಜಿ ಆತ್.

* * * * *

ಚುಕ್ಕೆ–12

"ಲಲಿತ"

ಸಣ್ಣದಿರಿಕನ ನಂಗೂ ಲಲಿತಂಗೂ ಭಾರೀ ಜೋಸ್ತಿ. ಅದ್ ನೇರಲಿ ಮಾವನ ಮಗಳ್ ಅತ್ತಿಗೆ ಆಕು. ಸೂಂತೋಡು ಮತ್ತೆ ಮಾಣಿಬೆಟ್ಟು ಮನೆತನದೊವು ಹಿಂದೆನ ಕಾಲಂದಳೇ ನೆಂಟ್ರ್‌ಗಡ. ಆ ಎರ್ಡ್ ಮನೆತನಲಿ ಹೆಣ್ಣ್ ಕೊಡ್ದು ಹೆಣ್ಣ್ ತಾದು, ನಡ್ದ್‌ಕಂಡೇ ಇತ್ತ್ ಗಡ. ಲಲಿತ ಮಾಣಿಬೆಟ್ಟ್ ಮನೆತನದವ್ಳು. ಆದರೆ ಅವಳ ಅಪ್ಪನ ಅಕ್ಕನ ಮಗಳ್ ನನ್ನ ಅಣ್ಣನ ಹೆಣ್ಣ್ ಆದ ಕಾರಣ, ಆ ಮೇಲೆ ಅದ್ ನಂಗೆ ಅಕ್ಕ ಆತ್. ಅದ್ ನನ್ನ ತುಂಬಾ ಪ್ರೀತಿ ಮಾಡ್ತಿತ್ತ್. ನಾವು ಸಣ್ಣದಿರಿಕನ ಸುಳ್ಯ ಹಾಯರ್ ಎಲಿಮೆಂಟರಿ ಶಾಲೆಲಿ ಎರಡ್ನೇ ಕ್ಲಾಸ್‌ಂದ ನಾಕ್‌ನೇ ಕ್ಲಾಸ್ ಮುಟ್ಟ ಒಟ್ಟಿಗೆ, ಒಂದೇ ಬೆಂಚಿಲಿ ಅಕ್ಕ ಪಕ್ಕ ಕುದ್ದ್‌ಕಂಡ್ ಓದಿದೊ. ಅದ್ ಎರ್ಡ್ ಮೈಲ್ ನಡ್ದ್‌ದ್ ಸುಳ್ಯ ಸಾಲೆಗೆ ಬಾತಿತ್ತ್. ನಾ ಮಧ್ಯಾಹ್ನ ಊಟಕ್ಕೆ ಮನೆಗೆ ಬಾತಿದ್ದೆ. ಅದ್ ಬುತ್ತಿ ತಾತಿತ್ತ್. ದಿನಾ ಮಧ್ಯಾಹ್ನ ಸಾಲೆ ಬುಡಿಕಾಕನ ಬುತ್ತಿ ಉಣೊಮೋಂತ ನನ್ನ ಕರ್ಯತಿತ್ತ್. ಆದರೆ ನಂಗೆ ಉಂಬಕೆ ಮನೆಗೆ ಬಾತ್ಲರೆ ಅವ್ವ ಬೊಯ್ಯೊತಿದ್ದೊ. ಒಮ್ಮೊಮ್ಮೆ ನಾ ಅವ್ವನೊಟ್ಟಿಗೆ ಹಟ ಮಾಡಿ ಬುತ್ತಿ ಕಟ್ಟಿಸಿಕಂಡ್ ಹೋಗ್ತಿದ್ದೆ. ನನ್ನ ಬುತ್ತಿಲಿ ಬೊಳ್ಪುಗೆ ಮಾಡ್ದ ತಿಂಡಿ, ಅಪ್ಪದ ಹಿಟ್ಟ್, ಪುಂಡಿ, ಇಲ್ಲರೆ

ರೊಟ್ಟಿ, ಅದ್ಕೆ ಕಾಳ್, ಬಟಾಟೆ ಸಾರ್ ಇರ್ತಿತ್ತ್. ಅದರ ಬುತ್ತಿಲಿ ಹುಗ್ಗೆ, ಮೊಸ್ರ್, ಉಪ್ಪಿನ ಕ್ಯಾ ಇರ್ತಿತ್ತ್. ನಂಗೆ ಅದರ ಬುತ್ತಿ ಭಾರೀ ಇಷ್ಟ. ಬಾಡಿಸಿದ ಬಾಳೆ ಎಲೆಲಿ ಕಟ್ಟಿದ ಬುತ್ತಿ. ಎಲೆನ ಪೊರ್ಮಳಲಿ ಬಾಯಿಗೆ ತುಂಬಾ ರುಚಿ ಆಗ್ತಿತ್ತ್. ಒಮ್ಮೊಮ್ಮೆ ಪೊಂಬೆ ಚಟ್ನಿ ತಾತಿತ್ತ್. ಅದರ ಬುತ್ತಿನ ನಾ ಉಂಬತಿದ್ದೆ. ನನ್ನ ಬುತ್ತಿನ ಅದ್ ತಿಂಬತಿತ್ತ್.

ನಂಗೆ ಸಣ್ಣ ಪ್ರಾಯಲಿ ಬಟ್ಟೆಂದ ಬೊಂಬೆ ಮಾಡ್ದೂಂತೇಳ್ರೆ ಭಾರೀ ಕುಸಿ. ನಮ್ಮ ಅಪ್ಪಂಗೆ ಬಟ್ಟೆ ಅಂಗ್ಡಿ ಇತ್ತ್. ನಾಕೈದ್ ಜನ ದರ್ಜಿಗ ನಮ್ಮ ಅಂಗ್ಡಿಲಿ ಬಟ್ಟೆ ಹೊಲ್ಯೋತಿದ್ದೊ. ಕತ್ರಿಸಿ ಉಳ್ದ ಬಣ್ಣ, ಬಣ್ಣದ ಚಿಂದಿ ಬಟ್ಟೆಗ ರಾಶಿ, ರಾಶಿ ಬಿದ್ದಿರ್ತಿತ್ತ್. ನಾ ಅದರ್‌ಂದ ಒಳ್ಳೊಳ್ಳೆ ತುಂಡುಗಳ್ ಹೆರ್ಕಿದ್ ತಾತಿದ್ದೆ. ಮೊದ್ವೆ ಕಾಲಲಿ ರೇಶ್ಮೆ ಬಟ್ಟೆಗ, ಜರಿ ತುಂಡುಗ ಸಿಕ್ತಿದ್ದೊ. ಸಣ್ಣಕ್ಕ ಅದರ್‌ಂದ ಬಣ್ಣ, ಬಣ್ಣದ ಗೊದ್ದಡಿ ಮಾಡ್ತಿತ್ತ್. ನಾ ಬೊಂಬೆಗಳ ಮಾಡ್ತಿದ್ದೆ. ಅದ್ಕೆ ಜರಿ ರವ್ಕೆ, ಜರಿ ಸೀರೆ, ಲಂಗ ಎಲ್ಲಾ ಹೊಲ್ಯತಿದ್ದೆ. ಸಿಗರೇಟ್ ಪೇಕಲಿ ಇದ್ದ ಬೇಗಡೆನ ತಂದದ್ ಸಣ್ಣ ಸಣ್ಣ ಗುಂಡು ಮಾಡಿ, ಅದರ ಸುರ್ದ್‌ದ್ ಮಾಲೆ ಮಾಡ್ತಿದ್ದೆ. ಯಕ್ಷಗಾನ ಬಯಲಾಟ ಸಮಯಲಿ, ಆಟ ಮುಗ್ದ ಮೇಲೆ ನಾನೂ ನನ್ನ ಜೋಸ್ತಿ ಗೂಡೆಗಳೂ ರಂಗಸ್ಥಳಲಿ ಬಿದ್ದ ಬೇಗಡೆ ಮಣಿಗಳ ಹೆಕ್ಕಿಕಂಡ್ ಬಾತಿದ್ದೊ. ಅದರ್‌ಂದ ತರತರದ ಮಾಲೆಗಳ ಮಾಡ್ತಿದ್ದೊ. ಐದಾರ್ ಬೊಂಬೆಗ ಮಾಡಿ ನಾ ಒಂದು ಚೀಲಲಿ ತುಂಬಿಸಿ ಇಸ್ತಿದ್ದೆ. ಬೇಸಗೆಲಿ ದೊಡ್ಡ ರಜೆ ಬಾಕಾಕನ ಈ ಬೊಂಬೆಗಳ ಒಂದು ಕೈ ಚೀಲಲಿ ಹಾಕಿ, ಲಲಿತನ ಮನೆಗೆ ಅತ್ತಿಗೆನೊಟ್ಟಿಗೆ ಹೋಕನ ತಕೊಂಡೋಗ್ತಿದ್ದೆ. ಲಲಿತನ ಮನೆಲಿ ಮನೆ ತುಂಬಾ ಮಕ್ಕ. ಅದರ ತಂಗೆಕ, ದೊಡಪನ ಮಕ್ಕ, ಅತ್ತೆನ ಮಕ್ಕ ಎಲ್ಲೋವು ಒಟ್ಟಿಗೆ ಇದ್ದೊ. ನಾವೆಲ್ಲಾ ಅವರ ಮನೆಂದ ದೂರ ಇದ್ದ ಸೊಯಿದೆ ಕೊಟಗೆಲಿ ಬೊಂಬೆ ಆಟ ಆಡ್ತಿದ್ದೊ. ಮಕ್ಕಳ್‌ಲಿ ಎರ್ಡ್ ಗುಂಪು ಮಾಡಿ, ಒಂದ್ ಗಂಡ್‌ನ ಕಡೆ, ಇನ್ನೊಂದ್ ಹೆಣ್ಣ್‌ನ ಕಡೇಂತ ಮಾಡಿ ಆಟ ಆಡ್ತಿದ್ದೊ. ದಿಬ್ಬಣ ಬಾದು, ದಾರೆ, ಪಚಾರ ಎಲ್ಲಾ ಆಡ್ತಿದ್ದೊ. ಗೊಂಬೆಗಳ ಮೊದ್ವೆನ ಊಟಕ್ಕೆ ಹಳ್ಳಿಲಿ ಧಾರಾಳಾಗಿ ಸಿಕ್‌ತಿದ್ದ ಹಲ್ಸಿನ ಹಣ್ಣ್, ಬಾಳೆ ಹಣ್ಣ್, ಹಪ್ಪಳ, ಸಾಂತಾಣಿ, ಒಣ್ಗಿಲ್ ಗೇಣ್ಸ್‌ನ ತುಂಡು, ಗೇರ್ ಬೀಜದ ಬೆಂಡ್- ಎಲ್ಲಾ ಇರ್ತಿತ್ತ್. ಕೆಲವು ಮಕ್ಕ ಬಾಯಿಲಿ ಪೇ......... ಪೇಂತ ಓಲಗ ಊದಿರೆ, ಕೆಲವು ಮಕ್ಕ ಡಬ್ಬಿಗೆ ಕೋಲ್‌ಲಿ ಬೊಡ್ದ್ ಸದ್ದ್ ಮಾಡ್ತಿದ್ದೊ. ನಮ್ಮ ಗದ್ದಳ ಜಾಸ್ತಿ ಆಕಾಕನ ಮನೆಂದ ದೊಡ್ಡೊವು ಬೆತ್ತ ಹಿಡ್ಕಂಡ್ ಬಂದ್‌ದ್ ಓಡ್ಸ್‌ತಿದ್ದೊ. ಒಮ್ಮೊಮ್ಮೆ ಅವ್ಕನೂ ಕುಸಿ ಆಗಿ ನಮ್ಮೊಟ್ಟಿಗೆ ಸೇರಿಕೊಂಬೊತಿದ್ದೊ.

ಲಲಿತನ ಮನೆಂದ ಎರ್ಡ್ ಪರ್ಲಾಂಗ್ ದೂರಲಿ ಒಂದು ಕೆರೆ ಇತ್ತ್. ಅದ್ಕೆ ಕಟ್ಟ ಹಾಕಿದ್ದೊ. ಆ ಕೆರೆಗೆ ನಾವು ಬಟ್ಟೆ ಒಗ್ಯಕೆ ಹೋಗ್ತಿದ್ದೊ. ಆಗ ನೀರ್‌ಲಿ ಈಂಜಿಕಂಡ್ ಲಾಗ ಹಾಕ್ತಿದ್ದೊ. ಮನ್ಸಿಗೆ ಬಂದಸ್ಟ್ ಹೊತ್ತ್ ನೀರ್‌ಲಿ ಆಟ ಆಡಿ

ಕುಣ್ಯತಿದ್ದೊ. ಒಮ್ಮೆ ಆ ಕಟ್ಟಕ್ಕೆ ಕಡು ಹಾಕಿದೊ. ಕಡುನ ಘಾಟಿಗೆ ಮಿನ್‌ಗ ಎಲ್ಲಾ ತಲೆ ತಿರ್‌ಗಿ ಕಂಕಣೆ ಮಂಕಣೆ ತೇಲ್ತಿದ್ದೊ. ಅದರೆಲ್ಲಾ ಹಿಡ್ದ್ ಹಿಡ್ದ್ ಕುಕ್ಕೆಗೆ ತುಂಬುಸುದು ನಾವ್ಗೆ ಕುಸಿನ ಕೆಲ್ಸ ಆಗ್ತಿತ್ತ್. ಅದರ ಪುಳೆಜ್ಜಿ, ಕರ್ಳ್ ತೆಗ್ದದ್ ಪಾರೆಗೆ ಉಜ್ಜಿ, ಉಜ್ಜಿ ಬೆಳ್ಳಂಗೆ ಮಾಡಿ, ಗೈಪುಗೆ ಸಜ್ಜಿ ಮಾಡಿ, ಮನೆಗೆ ತಾತಿದ್ದೊ.

ನಾವು ಮಕ್ಕ ಎಲ್ಲಾ ಸೇರಿಕಂಡ್ ಬೀಜ ಕೊಯ್ಯಕ್ಕೆ ಹೋಗ್ತಿದ್ದೊ. ಕೆಲವು ಮರದ ಹಣ್ಣ್‌ಗ ಭಾರೀ ಸೀಂಹಿ ಆಗಿರ್ತಿತ್ತ್. ಯಾವ ಯಾವ ಮರದ ಹಣ್ಣ್ ಎಷ್ಟೆಷ್ಟ್ ಸೀಂಹಿ ಉಟ್ಟುಂತ ಲಲಿತಂಗೆ ಸರ್ರ್ಯಾಗಿ ಗೊತ್ತಿತ್ತ್. ನಾ ಸಿಕ್ಕಿದ ಬೀಜದ ಹಣ್ಣ್‌ನ ತಿಂಬಕಾಕನ ಲಲಿತ ನನ್ನ ಕೈಯಿಂದ ಅದರ ಎಳ್ದ್ ಬಿಸಾಡಿ, 'ಇಂದಾ ಇದರ ತಿನ್ನ್. ಇದ್ ತುಂಬಾ ಸೀಂಹಿ ಉಟ್ಟುಂತ' ಹೇಳ್ತಿತ್ತ್. ನಾವು ಹೊಟ್ಟೆ ತುಂಬಾ ಬೀಜದ ಹಣ್ಣ್‌ನ ತಿಂದ್‌ಕಂಡ್, ಬೀಜ ಹೆರ್ಕಿ ಕುಕ್ಕೆ ತುಂಬಿಸಿಕಂಡ್ ಬೀಜದ ಕೊಚ್ಚಿಲಿ ದೂರ ದೂರ ಹೋಗ್ತಿದ್ದೊ. ಹಸಿ ಬೀಜನ ಎರ್ಡ್ ಕಡ್ಡಿಲಿ ಅದರ ಮೂಂಕುನ ಕುತ್ತಿ ತೆಗ್ದ್, ಇಡೀ ಬೆಂಡ್‌ನ ಹೊರಗೆ ತೆಗ್ದ್ ಅದರ ಸೊನೆನ ಕಾಡ್ ಸೊಪ್ಪ್‌ಲಿ ಉಜ್ಜಿ, ಬೆಂಡ್‌ನ ಚೋಲಿ ತೆಗ್ದದ್ ನಂಗೆ ತಿಂಬಕೆ ಕೊಡ್ತಿತ್ತ್. ಹಸಿ ಬೀಜದ ಬೆಂಡ್ ತಿಂಬಕೆ ತುಂಬಾ ರುಚಿ ಆಗಿರ್ತಿತ್ತ್. ತಕೊಂಡೋದ ಕೈ ಕುಕ್ಕೆಗ ಹೆಡೆಗೆಗ ಎಲ್ಲಾ ತುಂಬಿಕಾಕನ ನಾವು ಅದರ ಹೊತ್ತ್‌ಕಂಡ್ ಮನೆಗೆ ಬಾತಿದ್ದೊ. ಆಗನ ಸಣ್ಣ ಪ್ರಾಯದ ಈ ಕೆಲ್ಸಗ ಎಲ್ಲಾ ನಾವ್ಗೆ ಆಟ ಆಗಿತ್ತ್. ನಾವ್ಗೆ ಅದರ್ಲಿ ಭಾರೀ ಕುಸಿ ಸಿಕ್ತಿತ್ತ್. ನಾಕ್ನೇ ಕ್ಲಾಸ್ ಪಾಸಾದ ಮೇಲೆ, ಲಲಿತ ಕ್ಯೊಕುಳಿ ಸಾಲೆಗೆ ಸೇರಿಕೆ ಸುಳ್ಯ ಸಾಲೆನ ಬುಟ್ಟತ್. ಆಗ ನಾವಿಬ್ಬೊರು ತುಂಬಾ ಮೊರ್ರೊ. ಲಲಿತನೊಟ್ಟಿಗೆ ನಾ ಅತ್ತಿಗೆನ ಮನೆಲಿ ವಾರ, ಹದಿನೈದ್ ದಿನ ಇದ್ದ್ ಬಾತಿದ್ದೆ.

* * * * *

ಚುಕ್ಕೆ-13

"ಸರೋಜನ ಸಾವು ಮತ್ತೆ ತಮ್ಮಂದರ ಚಾಕ್ರಿ"

ನಾ ಆಗ ಸುಳ್ಯ ಹಾಯರ್ ಎಲಿಮೆಂಟರಿ ಶಾಲೆಲಿ ಐದ್ನೇ ಕ್ಲಾಸ್ ಓದ್ತಿದ್ದೆ. ಒಂದಿನ ಕ್ಲಾಸ್‌ಲಿ ಪಾಠ ನಡ್ಯಕಾಕನ, ನನ್ನ ಉಗ್ಗವನ ತಂಗೆ ಗೋರ್ಮ್ಮಡ್ಕ ಉಗ್ಗವನ ಮಂಜ, ಮಂಜಪ್ಪ ಸಣಪ ಬಂದೊ. ಮಾಸ್ಟ್ರ ಹಕ್ಕಲೆ ಹೇಳಿ ನನ್ನ ಹೊರಗೆ ಕರ್‍ದೊ. ನಾ ಹೊರಗೆ ಬಾಕನ ಅವು, 'ಸರೋಜ ಕೂಸು ಸತ್ತ್ ಹೋತ್. ನೀ ತಮ್ಮನ ಕರ್ಕಂಡ್ ಮನೆಗೆ ಹೋಕಡಾಂತ' ಹೇಳ್ದೊ. ಸರೋಜ ನನ್ನ ತಂಗೆ. ಅಣ್ಣಂಗೆ ಮೊದ್ವೆ ಆದ ಮೇಲೆ, ಪ್ರಾಯ ಹೋದ ಕಾಲಲಿ, ಅವ್ವ ಹೆತ್ತ ಅಕೆರಿನ ಕೂಸು. ಆ ಕಾಲಲಿ ಹೆಣ್ಮಕ್ಕ ಮುಟ್ಟು ನಿಲ್ಲಿಕಾಕನ ಮುಟ್ಟ ಹೆರ್ತಿದ್ದೊ. ದೇವ್ರು ಕೊಟ್ಟದ್‌ಂತ ಹೇಳಿ ಎಷ್ಟ್ ಕಷ್ಟ ಆದ್ರೂ ಸಾಕ್ತಿದ್ದೊ. ಅದರ್‍ಲಿ ಎಷ್ಟೋ ಮಕ್ಕ ಅರ್ಧಲಿ ಸಾಯೊತಿದ್ದೊ. ನನ್ನ ಅವ್ವನೂ ಹದ್ನಾರ್ ಮಕ್ಕಳ ಹೆತ್ತೊಳೊ ಗಡ. ಅದರ್‍ಲಿ ಉಳ್ದ್‌ದ್ ನಾವು ಆರ್ ಜನ ಮಾತ್ರಾ.

ಈ ಸುದ್ದಿನ ಕೇಳಿ ನಾ ಬೆರೇಂತ ಮೊರ್ಚೆ. ನಂಗೆ ಸರೋಜಾಂತೇಳ್ರೆ ಪ್ರಾಣ. ಅಷ್ಟ್ ಪ್ರೀತಿಸ್‌ತಿದ್ದೆ. ಸಣಪ ನಂಗೆ, ಬೆನ್ನ್ ಪೂಜಿ ಸಮಾಧಾನ ಮಾಡ್ದೊ. ಮಾಸ್ಟ್ರಲ್ಲಿ ಕೇಳಿ ನನ್ನ ಕರ್ಕಂಡ್ ತಮ್ಮನ ಕ್ಲಾಸಿಗೆ ಹೋದೊ. ನನ್ನ

ದೊಡ್ಡ ತಮ್ಮ ನಾರಾಯಣ ಆಗ ಎರಡ್ನೇ ಕ್ಲಾಸ್ ಓದ್‌ತಿತ್ತ್. ಅವನ ಕರ್ಕಂಡ್ ಮನೆಗೆ ಬಂದೆ. ಮನೆಲಿ ಹೆಣ್ಮಕ್ಕ ಮಾತ್ರ ಇದ್ದೊ. ಅಜ್ಜಪ್ಪ ಮತ್ತೆ ಅಪ್ಪ ಹೆಣ ತಕಂಡ್ ಗುಡ್ಡೆಗೆ ಹೋಗಿದ್ದೊ. ಆಗ ನಮ್ಮ ಮನೆನ ಸುತ್ತು ಮುತ್ತು ಎಲ್ಲಾ ಕಾಡ್‌ಗ. ಮನೆಲಿ ಎಲ್ಲೋವು ಚಪ್ಪೆ ಇದ್ದೊ. ತಮ್ಮನ ಮತ್ತೆ ನನ್ನ ಚೀಲಗಳ ಗೋಡೆಲಿ ಹೊಡ್ದ ಆಣಿಗೆ ಸಿಕ್ಕಿಸಿ, ಅಟ್ಟಕ್ಕೆ ಹತ್ತುವ ಏಣಿನ ಮೇಲೆ ನಾನೂ, ತಮ್ಮನೂ ಸುಮ್ಮನೆ ಕುದ್ದೊ. ಅಷ್ಟರ್ಲಿ ಅಜ್ಜಪ್ಪ, ಅಪ್ಪ, ಕೆಲ್ಸದೊವು ಬಂದೊ. ಮಕ್ಕಳ ಹೆಣನ ಗುಂಡಿ ತೆಗ್ದ್ ಹಾಕುದು ಗಡ. ಕೆಲ್ಸದೊವು ಕೊಟ್ಟು, ಪಿಕಾಸ್‌ನ ಕೊಟಗೆಲಿ ಇಸಿ ಬಂದೊ. ಅವೆಲ್ಲಾ ಬಾಕಾಕನೇ ಹಳ್ಳಕ್ಕೆ ಹೋಗಿ ಮಿಂದ್ ಬಂದಿದ್ದೊ. ನಾವು ಮನೆಲಿದ್ದೊವು ನೀರಡಿಗೆ ಹೋಗಿ ತಣ್ಣೀರ್ ಹೊಯ್‌ಕಂಡ್ ಬಂದೊ.

ಮೊರ್ದಿನ ಅಪ್ಪ ಮತ್ತೆ ಅವ್ವ ಹೋಗಿ ಹೆಣ ಹುಗ್ದ್ ಹಾಕಿದ ಜಾಗೆಲಿ ಹಾಲ್ನ ಹೊಯಿದ್ ಬಂದೊ. ಅದರ ಮಾರ್ನೆ ದಿನನೂ ಹಾಲಾಕಿ ಬಂದೊ. ಐದ್ನೇ ದಿನನೋ ಏಳ್ನೇ ದಿನನೋ ನಂಗೆ ನೆಂಪಿಲ್ಲೆ ಕುಡು ಬಾಳೆ ಕ್ಯಾ ಗೈಪು, ಕುಂಬಳಕಾಯಿ ಗೈಪು, ಹುಗ್ಗಿ ಪುಂಡಿನ, ಬಾಳೆ ಎಲೆಲಿ ಹಾಕಿ ಇಸಿ ಬಂದೊ. ಮಕ್ಕಳ ಸಾವುನ ಹಾಂಗೆ ಮಾಡ್ದು ಗಡ. ಮತ್ತೆ ಮನೆಗೆಲ್ಲಾ ಪುಣ್ಯಾರ್ಚನೆ ತಂದ್ ಹಾಕಿದೊ. ನಾವು ಒಂದ್ ವಾರ ಸಾಲೆಗೆ ಹೋತಿಲ್ಲೆ. ಆಗ ಸಣ್ಣ ತಮ್ಮಂಗೆ ನಾಕ್ ವೊರ್ಸ. ತಂಗೆ ಸಾಯಕಾಕನ ಎರ್ಡ್ ವೊರ್ಸದ ಕೂಸು. ಅದ್ಕೆ ಕಾಯ್ಲೆ ಎಂತದ್‌ಂತ ನಂಗೆ ಗೊತ್ತಿಲ್ಲೆ. ಅಂತೂ ಇದ್ದ ಒಂದು ತಂಗೆನ ನಾ ಕಳ್ಕಂಡೆ.

ತಂಗೆ ಇಲ್ಲದೆ ಮನೆಲಿ ನಂಗೆ ತುಂಬಾ ಬೇಜಾರ್ ಆಗ್ತಿತ್ತ್. ದಿನಾ ಬೊಳ್ಪುಗೆ ಎದ್ದ್‌ದ್ ಅದರ ಕೊಂಡಾಟ ಮಾಡ್ತಿದ್ದೆ. ಹಿಂಬೊತ್ತ್ ಸಾಲೆ ಬುಟ್ಟ ಮೇಲೆ ಬಂದ್, ಕೈ ಕಾಲ್ ತೊಳ್ದ್ ಅದರ ಎತ್ತಿಕೊಂಬೊತಿದ್ದೆ. ಅದ್ಕೂ ನಾಂತೇಳ್ರೆ ಬಾಳ ಕುಸಿ ಆಗ್ತಿತ್ತ್. ನನ್ನ ಕಾಂಬಕನ ಕುಸಿಂದ ಕಣ್ಣ್ ಅರ್ಳಿಸಿ ನನ್ನ ಹಕ್ಕಲೆ ಬಾಕೆ ಎರ್ಡ್ ಕೈನ ನೀಂಡ್‌ತಿತ್ತ್. ಅದರ ಕುದ್ರಿಸಿಕಂಡ್ ತಲೆ ಬಾಚಿ ಎರ್ಡ್ ಸಣ್ಣ ಸಣ್ಣ ಜಡೆ ಹಾಕ್ತಿದ್ದೆ, ಹೂ ಮುಡ್ಸ್‌ತಿದ್ದೆ. ಅದ್ ನಂಗೆ ಭಾರೀ ಸಂತೋಷದ ಕೆಲ್ಸ. ನನ್ನ ತಂಗೆ ಹುಟ್ಟಿಕನ ಅಪ್ಪ ಅದ್ಕೆ ಕಾವ್ರಮ್ಮನ ತಂಗೆ ಕಮಲಾಕ್ಷೀಂತ ಹೆಸ್ರಿಟ್ಟೊ. ಸಣ್ಣಕ್ಕ ಅದರ ಸರೋಜಂತ ಕರ್‍ಯಕೆ ಸುರು ಮಾಡ್ತ್. ಅಕೆರಿಗೆ ಎಲ್ಲೋವು ಅದರ ಸರೋಜಾಂತನೇ ಕರ್‍ದೊ. ಅದೇ ಹೆಸ್ರ್ ಕಾಯಂ ಆತ್.

ನನ್ನ ತಮ್ಮಂದರ ಸಾಲೆಗೆ ಹೊರ್ಡುಸುದು ನನ್ನ ಕೆಲ್ಸ. ಅವ್ಕೆ ದೊರೆ ಮಕ್ಕಳಾಂಗೆ ಕಾಲಿಗೆ ಬೂಟು, ತಲೆಗೆ ಹೇಟ್ ಅಪ್ಪ ತಂದ್ ಕೊಟ್ಟಿದ್ದೊ. ಬೊಳ್ಪಿಗೆ ಅವರ ಕೈ ಕಾಲ್ ತೊಳ್ಸಿ, ಅಂಗಿ, ಚಡ್ಡಿ ಹಾಕಿ ಕಾಲಿಗೆ ಕಾಲ್ಚೀಲ ಬೂಟು ಸಿಕ್ಕಿಸಿ, ತಲೆಗೆ ಹೇಟ್ ಇಸಿ, ಅವರಿಬ್ಬರ ಚೀಲನ ಮತ್ತೆ ನನ್ನ ಚೀಲನ ನನ್ನ ಎಡಕೈಲಿ ತೂಗಿಸಿಕಂಡ್, ಅವರ ಕೈ ಹಿಡ್‌ಕಂಡ್, ಕರ್ಕಂಡ್ ಸಾಲೆಗೆ ಹೋದು ನನ್ನ ಕೆಲ್ಸ. ಆಗ ಈಗನ ಕಾಲದಾಂಗೆ ಹೊರೆ ಹೊರೆ ಪುಸ್ತಕ ಇರ್‍ತಿಲ್ಲೆ. ಸ್ಲೇಟ್, ಕಡ್ಡಿ, ಓದುವ ಪುಸ್ತಕ,

ಕೋಪಿ ಪುಸ್ತಕ, ಒಂದು ಮಗ್ಗಿ ಪುಸ್ತಕ ಇಷ್ಟೆ ಇರ್ತಿತ್. ಅವು ಗಂಡ್ ಮಕ್ಕ ಅಲ್ಲನೋ? ಅವರ ಚಾಕ್ರಿ ಮಾಡಿ ಚೀಲನ ಹೊರಕಾಗಿತ್. ಸಾಲೆಲಿ ಅವರವರ ಕ್ಲಾಸ್‌ಲಿ, ಅವರವರ ಕುದ್ರಿಸಿ, ಅವರ ಜಾಗೆಲಿ ಚೀಲ ಇಸಿ, ನಾ ನನ್ನ ಕ್ಲಾಸಿಗೆ ಬಾಕಾಕನ ನಂಗೆ ಸಾಕಾಗ್ತಿತ್. ಒಂದು ದಿನ ಮೂರು ಚೀಲಗಳ ಕೈಯಿಂದ ತೆಗ್ಯಕಾಕನ, ನನ್ನ ಕೈಲಿ ಬಿದ್ದ ಕಸ್ರಿಕೆನ ಕಂಡ್, ನನ್ನ ಸಣ್ಣ ತಮ್ಮ ಚಂದ್ರಂಗೆ ಬೇಜಾರ್ ಆತ್. ಅಂವ, 'ಪಾಪ ನಿಂಗೆ ತುಂಬಾ ಕಷ್ಟ ಅಲ್ಲನೋ? ನಾಳೆಂದ ನನ್ನ ಚೀಲ ನಾನೇ ತಕಂಡ್ ಹೋನೇಂತ ಹೇಳ್ತ್. ಮೊರ್ದಿನಂದ ಅವನ ಚೀಲ ಅವನೇ ಹಿಡ್ಕಂಡ್ ಹೋತ್. ದೊಡ್ಡಂವ ಮಾತ್ರಾ ಶಿಸ್ತ್‌ನ ಸಿಪಾಯಿನಂಗೆ ಎರ್ಡ್ ಕೈ ಬೀಸಿಕಂಡ್ ಮುಂದೆ ಹೋತ್. ಗಂಡ್ ಮಕ್ಕಾಂತ ಅವ್ವ ಅವರ್‍ನ ತುಂಬಾ ಮುದ್ದು ಮಾಡ್ತಿದ್ದೊ. ದಿನಾ ಅವರ ಚೀಲಲಿ 6 ಔನ್ಸ್‌ನ (1 ಕುಡ್ತೆ) ಕುಪ್ಪಿಲಿ ಕಾಸಿ ಆರಿಸಿದ ಹಾಲ್‌ನ ತುಂಬಿಸಿ ಇಸ್ತಿದ್ದೊ. ನಾ ಅದರ ಎರಡ್ನೇ ಬೆಲ್ ಹೊಡ್ಯಕಾಕನ, ಅವರ ಕ್ಲಾಸಿಗೆ ಹೋಗಿ ಅವ್ಕೆ ಅದರ ಕುಡ್ಸಿ ಬರಕಾಗಿತ್. ಮಧ್ಯಾಹ್ನ ಉಂಬಕೆ ಮನೆಗೆ ಬಾತಿದ್ದೊ. ಬಂದಾಕನ ಅವ್ಕೆ ಇಬ್ಬೊರಿಗೆ ಕಲ್ಲ್‌ಸಕ್ಕರೆ, ಒಣದ್ರಾಕ್ಷೆ ಹಾಕಿ ಕಾಸಿದ ಹಾಲ್ನ ಗಿಂಡಿಲಿ ಅವ್ವ ಇಸ್ತಿದ್ದೊ. ಅವ್ವ ಅದರ ಎರ್ಡ್ ಕಾಲ್ನ ನೀಂಡಿ, ಅದರ್‍ಲಿ ಅವರಿಬ್ಬರ ಕುದ್ರಿಸಿ, ದಿನಾ ಹಾಲ್ ಕುಡ್ಸ್‌ತಿದ್ದೊ. ಮೇಲೆನ ಹಾಲ್‌ನ ಕುಡ್ದ್‌ದ್, ಕೆಳಗೆ ಉಳ್ದ ಉಬ್ಬಿದ ದ್ರಾಕ್ಷೆಗಳ ಕೈಲಿ ಹಿಡ್ಕಂಡ್ ಅವಿಬ್ಬೊರು ತಿಂಬತಿದ್ದೊ. ನಾ ದೂರಲಿ ನಿಂತ್ ಅದರ ನೋಡಿ, ಅಲ್ಲಿಂದ ಹೋಗ್ತಿದ್ದೆ. ಆಗ ನಂಗೆ ಅದರ ಕುಡ್ಯಕಾಗಲೀ, ತಿಂಬಕಾಗಲೀ ಆಸೆ ಇರ್ತಿತ್ಲೆ. ನಂಗೆ ಅವರಿಬ್ಬರ ಅವ್ವ ಅವು, ನಾ ಯಾರೋ ಬೇರೆ ಎಂದ್ ಆಲೋಚನೆ ಮಾಡ್ತಿದ್ದೆ.

ಒಂದ್ ದಿನ ನಂಗೆ ಹಲ್ಲ್ ಬೇನೆ ಜೋರಾತ್. ನಾ ದಿನಾ ಅಂಗ್ಡಿಂದ ಬೆಲ್ಲ ತಕಂಡ್ ದವುಡೆಲಿ ಇಸಿಕಂಡ್ ಚೀಂಪಿ ಚೀಂಪಿ ತಿಂಬತಿದ್ದೆ. ಅದರ್‌ಂದಾಗಿ ಹಲ್ಲ್ ಎಲ್ಲಾ ಹುಳ ಹಿಡ್ತ್. ಹಲ್ಲ್ ಬೇನೆ ಸುರಾತ್. ಬೇನೆ ಜೋರಾಕನ ನಾ ಮೊರ್ಡೆ. ಉಗ್ಗವ ಎಷ್ಟ್ ಸಮಾಧಾನ ಮಾಡ್ರೂ ನನ್ನ ಮೊರ್ಡೆಲ್ ನಿಂತತ್ಲೆ. ನಾ ಬೊಬ್ಬೆ ಹೊಡ್ದ್ ಮೊರ್ಡಿಕಾಕನ ಅಂಗ್ಡಿಲಿ ಇದ್ದ ಅಪ್ಪಂಗೂ ಕೇಳಿಸಿತ್. ಅಪ್ಪ ಒಳಗೆ ಬಂದೊವು ಅವ್ವಂಗೆ ಬೊಯ್ದೊ. 'ನೀ ಎಂತಾ ಅಯ್ಯೆ? ಕೂಸು ಅಷ್ಟ್ ಮೊರ್ಡಿಕನ ನಿಂಗೆ ಸಮಾಧಾನ ಮಾಡಿಕೆ ಆದುಲ್ಲೆನೋ? ಎಂತ ಬೊಯ್ದೊ. ಅವ್ವ ಅಪ್ಪಂಗೆ ಹೆದ್ರಿ ನನ್ನ 'ಬಾ'ಂತ ಕರ್ದ್, ಅವರ ತೊಡೆ ಮೇಲೆ ಕುದ್ರಿಸಿ, ಬಾಯಿ ಬುಡ್ಸಿ ನೋಡಿ, 'ಮೊರ್ಡ್‌ಬಡಾ, ಅದ್ಕೆ ನಾ ಮೊದ್ದ್ ಮಾಡ್ನೇಂತೇಳಿ ನನ್ನ ತಬ್ಬಿಕಂಡ್ ತೂಗಾಡ್ಸಿದೊ. ಅವು ಅದರ ದಪ್ಪ, ದಪ್ಪ ತೋಳ್‌ಲಿ ನನ್ನ ತಬ್ಬಿ ಕಂಬಕನ ಬೆಚ್ಚಂಗೆ ಆತ್. ಮನ್ಸಿಗೆ ಭಾರೀ ಕುಸಿ ಆತ್. ನನ್ನ ಅರ್ಧ ಬೇನೆ ಮಾಯ ಆತ್. ಆದಿನ ನಂಗೆ ಗೊತ್ತಾತ್, ನನ್ನ ಹೆತ್ತ ಅವ್ವ ಅವೇಂತ. ಅವು ನಂಗೆ ಕಷಾಯ ಮಾಡಿ ಬಾಯಿ ಮುಕ್ಕುಳಿಸಿಕೆ ಕೊಟ್ಟೊ. ಅದರ ಮೇಲೆ ದಿನಾ ನಾ ಅವರ ಎದ್ರ್ ಹೋಗಿ ನಿಲ್ತಿದ್ದೆ. ಆಗ ಅವು ಪ್ರೀತಿಂದ

ನಂಗೆ ಏನಾದರ್ ತಿಂಬಕೆ ಕೈಗೆ ಇಸ್ತಿದ್ದೊ.

ತುಂಬಾ ಮಕ್ಕಳ ಹೆತ್ತ್, ಅದರ್ಲಿ ಹೆಚ್ಚಿನ ಮಕ್ಕ ಸತ್ತ್ ಹೋದ ಕಾರಣ ಅವ್ವೆ ಮಕ್ಕಳಲ್ಲಿ ಒಂದು ತರದ ಜಿಗುಪ್ಸೆ ಹುಟ್ಟಿತ್ತ್. ಹೆಣ್ಣ್ ಮಕ್ಕಳ ಬಾಳ ತಾತ್ಸಾರಂದ ನೋಡ್ತಿದ್ದೊ. ಗಂಡ್ ಮಕ್ಕ ನಮ್ಮ ಸಾಂಕಿ, ಹೊತ್ತ್ ಸುಡೋವೂಂತ ತಲೆಲಿ ಹೊರ್ತಿದ್ದೊ. ನಾ ಆರ್ನೇ ಕ್ಲಾಸಿಲಿ ಇರಿಕಾಕನ, ನಮ್ಮ ಊರ್‌ಲಿ ಹೈಸ್ಕೂಲ್ ಸುರು ಆತ್. ಅಲ್ಲಿ ಆರ್ನೇ ಕ್ಲಾಸ್‌ನ ಫಸ್ಟ್ ಫೋರ್ಮ್‌ಂತ ಹೇಳ್ತಿದ್ದೊ. ನನ್ನ ಕ್ಲಾಸ್‌ನ ಮಕ್ಕ ಎಲ್ಲಾ ಹೈಸ್ಕೂಲಿಗೆ ಹೋದೋ. ಅಪ್ಪ ನನ್ನನ್ನೂ ಫಸ್ಟ್ ಫೋರ್ಮಿಗೆ ಸೇರ್ಸಿಕೆ ಹೆಸ್ರ್ ಕೊಟ್ಟೊ. ಆಗ ಅವ್ವ, 'ಚಂದ್ರ ಈ ವೊರ್ಸಂದ ಸಾಲೆಗೆ ಹೋದೆ. ಅವನ ನೋಡಿಕೊಂಬೊವು ಯಾರ್? ಅವಳ ಬರ್‍ವ ವೊರ್ಸ ಸೇರ್ಸಿ, ಈ ವೊರ್ಸ ಮಕ್ಕಳ ಕರ್ಕಂಡ್ ಎಲಿಮೆಂಟರಿ ಸಾಲೆಗೆ ಹೋಗಲೀಚಿತ' ಹೇಳ್ದೊ.

ಅಲ್ಲಿಗೆ ನನ್ನ ಹೈಸ್ಕೂಲಿಗೆ ಸೇರುವ ಕನ್ಸ್ ಒಡ್ದ್ ಹೋತ್. ನಾ ಬೇಜಾರಂದ ದಿನಾ ತಮ್ಮಂದರ ಚಾಕ್ರಿ ಮಾಡಿಕಂಡ್, ಅವರ ಸಾಲೆಗೆ ಕರ್ಕಂಡ್ ಹೋಗ್ತಿದ್ದೆ. ಹೈಸ್ಕೂಲ್ಗೆ ಆಗ ಹೊಸ ಕಟ್ಟೋಣ ಇತ್ಲೆ. ನಮ್ಮ ಮನೆ ಹಕ್ಕಲೆ ಇದ್ದ ಕ್ಲಬ್ ಕಟ್ಟೋಣಲಿ ಆಫೀಸ್ ರೂಂ ಮತ್ತೆ ಅದರ ಹಿಂದೆ ಇದ್ದ ವಿಸ್ತಾರದ ಜಾಗೆಲಿ ಉದ್ದಕೆ ಎರ್ಡ್ ಮಾಡ್‌ನ ಒಂದು ಕಟ್ಟೋಣ ಕಟ್ಟಿ, ಅದರ ಬೆದ್ರ್‌ನ ತಟ್ಟಿ ಕಟ್ಟಿ, ನಾಲ್ಕ್ ಭಾಗ ಮಾಡಿ ಫೊರ್ತ್ ಫೋರ್ಮ್‌ದವರೆಗಿನ ಕ್ಲಾಸ್‌ನ ಸುರು ಮಾಡ್ದೊ. ನಾ ಮನೆ ಹಕ್ಕಲೆ ಇದ್ದ ಆ ಸಾಲೆನ ದಿನಾ ನೋಡಿಕಂಡ್, ನಂಗೆ ಅಲ್ಲಿ ಕಲಿವ ಭಾಗ್ಯ ಇಲ್ಲಲೇಂತ ಬೇಜಾರ ಮಾಡ್ತಿದ್ದೆ. ಒಮ್ಮೊಮ್ಮೆ ಸಣ್ಣ ತಮ್ಮನ ಮೇಲೆ ಸಿಟ್ಟ್ ಬಾತಿತ್. ಇವಂದಾಗಿ ನನ್ನ ಹೈಸ್ಕೂಲಲಿ ಕಲಿವ ಭಾಗ್ಯ ತಪ್ಪಿತ್ತ್‌ಂತ. ಆ ಸಿಟ್ಟ್ ಒಂದೇ ಕ್ಷಣ. ಏಕೇಂತೇಳ್ರೆ ನಾ ತಮ್ಮಂದರ ತುಂಬಾ ಪ್ರೀತಿಸ್‌ತಿದ್ದೆ.

* * * * *

ಚುಕ್ಕೆ – 14

"ಮಳಿ ಮನೆ ಅಬ ಮತ್ತು ಸೋದರ ಮಾವಂದರ್"

ನಾ ಸಣ್ಣದಿರಿಕನ ರಜೆ ಸಮಯನ ದೊಡ್ಡಕ್ಕನ ಮನೆಲಿ ಕಳ್ಯತಿದ್ದೆ. ಅದ್ ನನ್ನ 'ಅಬ'ನ ಮನೆನೂ ಹೌದು. ಅವ್ವನ ಅವ್ವನ ನಾ'ಅಬ'ಂತ ಕರ್ರೆತಿದ್ದೆ. ನನ್ನ ದೊಡ್ಡ ಸೋದರ ಮಾಂವ ಮಳಿ ಸಬ್ಬಣ್ಣ ಗೌಡರ ಮಂಜಂಗೆ ನನ್ನ ದೊಡ್ಡಕ್ಕನ ಕೊಟ್ಟ ಕಾರಣ, ನಂಗೆ ದೊಡ್ಡಕ್ಕನ ಮನೆಂತೇಕ್ರೆ ನಮ್ಮ ಮನೆಂದಳೂ ಹೆಚ್ಚಿನ ಪ್ರೀತಿ. ನಮ್ಮ ಮನೆಲಿ ಇದ್ದ ಶ್ರೀಮಂತಿಕೆ ಅಕ್ಕನ ಮನೆಲಿ ಆಗ ಇತ್ತಿಲ್ಲೆ. ಅಕ್ಕಂಗೆ ಮೊದುವೆ ಆದ ಸುರುಲಿ ಅದ್ ಗಂಡನ ಮನೆಲಿ ತುಂಬಾ ಕಷ್ಟಪಟ್ಟತ್. ದೊಡ್ಡ ಮಾಂವನ ಪಾಲಿಗೆ ಬಂದ ಎರ್ಡ್ ಮುಡಿ ಗದ್ದೆ ಅಲ್ಲದೆ, ಗೇಣಿಗೂ ಎರ್ಡ್ ಮುಡಿ ಗದ್ದೆನ ಅವು ಬೇಸಾಯ ಮಾಡ್ತಿದ್ದೊ. ಮಾವ ಮತ್ತೆ ಭಾವ ಹಗ್ಲ್, ಇರ್ಳ್ ದುಡ್ಯೋತಿದ್ದೊ. ಅಷ್ಟ್ ಮಾಡ್ದ ಕಾರ್ಣ ಅವು ಅಕೆರಿಗೆ ಹಂಚಿನ ಮನೆ ಕಟ್ಟಿಸಿದೊ.

ಅಕ್ಕನ ಕೊಡಿಕಾಕನ ಅವು ಮುಳಿ ಹುಲ್ಲುನ ಮನೆಲಿ ಇದ್ದೊ. ಉಂಬಕೆ ಮರ್ಚಟೆ, ಕುರ್ಚಟೆ, ಅಡ್ಗೆಗೆ ಮೊರ್ಣ್ನ ಮಡ್ಕೆಗ ನೀರ್‌ತಾಕೆ ಕಂದಲ್‌ಗ. ಅಕ್ಕಂಗೆ ಮಾತ್ರಾ ಮೊದ್ವೆ ಆಕನ ತಟ್ಟೆ, ಕಂಚಿನ ಬಟ್ಲ್, ಗ್ಲಾಸ್ ಪಾತ್ರ ಪಡಗ ಕೊಟ್ಟ ಕಾರಣ ಅದರ್ನೇ ಉಪಯೋಗಿಸ್‌ತಿತ್ತ್. ತವುರು ಮನೆಲಿ ಹಾಲ್, ತುಪ್ಪಲಿ ಕೈತೊಳ್ದ್ ಬೆಳ್ದ ಅಕ್ಕ, ಗಂಡನ ಮನೆಲಿ

ಕಣ್ಣ ಚಾ ಕುಡ್ಯಕೆ ಆಗದ್‌ಂತ ಅವ್ವ ಅಕ್ಕಂಗೆ 'ಮಂಗಳ್ಸಿ' ದನನ ಕೊಟ್ಟಿದ್ದೊ. ಮಾವನ ಹಟ್ಟಿಲಿದ್ದ ಹೂಡುವ ಕೋಣಂಗಳ, ಅವು ಮಕ್ಕಳ್‌ಂದ ಹೆಚ್ಚ್ ಪ್ರೀತಿಸಿ ಸಾಕ್‌ತಿದ್ದೊ.

ನಾ ಅಕ್ಕನ ಮನೆಗೆ ಹೋಕಾಕನ ಎಲ್ಲಾ ಅವ್ವ ನನ್ನ ಕೈಲಿ ಚಾಹೊಡಿ, ಸಕ್ಕರೆ, ಸಾಬಾನ್ ಅಕ್ಕಂಗೆ ಕಳ್ಸ್‌ತಿದ್ದೊ. ಅಲ್ಲಿ ಹಾಲ್ ಇಲ್ಲದಿರಿಕನ ಅಕ್ಕ ನಂಗೆ ಅವರ ಮನೆ ಹಕ್ಕಲೆ ಇದ್ದ ನನ್ನ ಸಣ್ಣ ಮಾಂವನ ಮನೆಂದ ದಿನಾ ಎಮ್ಮೆ ಹಾಲ್ ತಂದ್, ಅದರ ಕಾಸಿ, ಅದಕ್ಕೆ ಚಾಹೊಡಿ ಇಲ್ಲರೆ ಕಾಪಿ ಹೊಡಿ ಹಾಕಿ ಅದರ ಕೋಣೆಲಿ ಇಸಿ, 'ನಿಂಗೆ ಬೇಕಾಕನ ಹೊಯ್ಕಂಡ್ ಕುಡ್ಕಾ'ಂತ ಹೇಳಿ ಅದ್ ಕೆಲ್ಸಕ್ಕೆ ಹೋಗ್ತಿತ್ತ್. ಸುರುಸುರುಗೆ ಅಕ್ಕಂಗೆ ಯಾವ್ದೂ ಹಳ್ಳಿ ಕೆಲ್ಸ ಗೊತ್ತಿತ್ಲೆ ಗಡ. ಸೊಪ್ಪಿಗೆ ಹೋಕನ ಕೊಡೆ ತಕಂಡ್ ಹೋಗ್ತಿತ್ತ್ ಗಡ. ಅದರ ನೋಡಿ ಅತ್ತಿಗೆಕ ನೆಗಾಡ್ತಿದ್ದೊ ಗಡ. ಅವು ಕಿಡಿಂಬೋಳು ಸೂಡಿಕಂಡ್ ಹೋಗ್ತಿದ್ದೊ. ಅತ್ತಿಗೆಕ ಅಕ್ಕಂಗೆ ಸೊಪ್ಪು ಹೆರ್ದ್ ಕಟ್ಟ ಕಟ್ಟಿಕೆ ಹೇಳಿ ಕೊಟ್ಟೊ ಗಡ. ಅಕ್ಕ, ಅತ್ತಿಗೆಕ ಗುಡ್ಡೆಗೆ ಸೊಪ್ಪು ತಾಕೆ ಹೋಕನ, ಒಮ್ಮೊಮ್ಮೆ ಅವರೊಟ್ಟಿಗೆ ನಾನೂ ಹೋಗ್ತಿದ್ದೆ. ಅವು ಬೇಗ ಬೇಗ ಸೊಪ್ಪು ಹೆರ್‍ಯೋದು ನೋಡಿ ಸೋಜಿಗ ಪಡ್ತಿದ್ದೆ. ನಂಗೆ ಸೊಪ್ಪು ಹೆರ್‍ಯಕೆ ಗೊತ್ತಿತ್ಲೆ. ಸೊಪ್ಪುನ ಕಣೆಗಳ ಮುರ್ದ್, ಮುರ್ದ್ ಅವ್ಕೆ ಕೊಡ್ತಿದ್ದೆ. ಅವು ಸೊಪ್ಪುನ ಪೊದೆಂದ ಸೊಪ್ಪುನ ಹೆರ್ದ್, ಹೆರ್ದ್ ಅಟ್ಟಿ ಇಸ್ತಿದ್ದೊ. ಎಲ್ಲಾ ಹೆರ್ದಾದ ಮೇಲೆ ಅಲ್ಲೆ ಬಲ್ಲೆಲಿದ್ದ ಮಾದ್ರಿ ಬೊಳ್ಳಿನ ಕೊಯ್ದ್‌ದ್ ಎರ್ಡ್ ಸಾಲ್ ಬೊಳ್ಳಿನ ಹಾಸಿ, ಅದರ ಮೇಲೆ ಒಂದೊಂದೇ ಅಟ್ಟಿನ ಸೊಪ್ಪುನ ಇಸ್ತಿದ್ದೊ. ಹೊರಿಕೆ ಬೇಕಾದಸ್ಟ್ ಸೊಪ್ಪು ಇಸಿದ ಮೇಲೆ ಅದರ ಗಟ್ಟಿಲಿ ಅಲ್ಲಾಡ್ಸಿ, ಎರ್ಡ್ ಸಾಲ್ ಬೊಳ್ಳಿನ ಸೇರ್ಸಿದ್ ಬಿಗ್ದ್‌ದ್ ಕಟ್ತಿದ್ದೊ. ಆ ಕಟ್ಟಗ ಹೊತ್ತಾಕಿರುನೂ ಬಿಚ್ಚ್‌ತಿತ್ಲೆ. ಅದರ ಒಬ್ಬರ ತಲೆಗೆ ಮತ್ತೊಬ್ಬ ಹೊರ್ಸಿಕಂಡ್ ಬಾತಿದ್ದೊ. ಅವು ಸೊಪ್ಪು ಹೆರ್‍ಯೋದರ, ಕಟ್ಟ ಕಟ್ಟುದರ ನಾ ಮೈ ಮರ್ತ್ ನೋಡ್ತಿದ್ದೆ. ಅವರಾಂಗೆ ಹೆರ್‍ಯಕೆ ಹೋಗಿ ಕೈ ಕೊಯ್ಕಂಬತಿದ್ದೆ. ನನ್ನ ಅತ್ತಿಗೆಕ, ನೀಲಮ್ಮ ಮತ್ತೆ ಅಕ್ಕಯ್ಯ– ಅವ್ಕಿಬ್ಬೊರಿಗೂ ನಾಂತೇಳ್ರೆ ಬಾಳಕುಸಿ. ನೀಲಮ್ಮ ಅತ್ತಿಗೆ ನಾ ಸಣ್ಣದಿರಿಕನ ನನ್ನ ಸೊಂಟಲಿ ಕೋಸಿಕಂಡೇ ಇರ್ತಿದ್ದೊ. ಕೆಳಗೆ ಇಳ್ಸ್‌ತಿತ್ಲೆ. ಅವು ಸೊಪ್ಪಿಗೆ ಹೋಕನ ನಂಗೂ ಒಂದು ಕುಂಞಿಕತ್ತಿ ನನ್ನ ಕೈಲಿ ಕೊಡ್ತಿದ್ದೊ. ನಾ ಕೈಕೊಯ್ಕಂಬಕನ ಒಂದು ಮುಂಡಿ ಎಂಜಿರ್ ಸೊಪ್ಪುನ ಅಂಗೈ ನಡುಲಿಸಿ, ಎರ್ಡ್ ಅಂಗೈಲಿ ಅದರ ಪುರುಂಚಿ ರಸ ತೆಗ್ದ್ ನನ್ನ ಗಾಯಕ್ಕೆ ಬುಡ್ತಿದ್ದೊ. ಅದ್ ಉರ್‍ಯಕಾಕನ ನಾ ಕೊಣ್ಯತಿದ್ದೆ ಆಗ ಅತ್ತಿಗೆಕ ನೆಗಾಡಿಕಂಡ್ ನಂಗೆ ಡೋಂಗಿ ಮಾಡ್ತಿದ್ದೊ. ನಂಗೂ ಸೊಪ್ಪು ಹೊರ್ಸೀಂತ ನಾ ಹಟ ಮಾಡ್ತಿದ್ದೆ. ಭಾರದ ಕಟ್ಟ್‌ನ ನನ್ನ ತಲೆ ಮೇಲೆ ಇಸಿಕನ ಅದರ ಭಾರ ತಡ್ಯದೆ ಅದರ ತಲೆಂದ ಬೀಳ್ಸ್‌ತಿದ್ದೆ. ಆಗ ಅವು ಆ ಕಟ್ಟ್‌ಂದ ಹಂಞ ಸೊಪ್ಪುನ ತೆಗ್ದ್‌ದ್, ಸಣ್ಣ ಕಟ್ಟ ಮಾಡಿ ನಂಗೆ ಹೊರ್ಸ್‌ತಿದ್ದೊ. ಅವರ ತಲೆಗೆ ಮೊಡ್ಪಳೆ ಇತ್ತ್. ನಾ ಬರಿ ತಲೆಲಿ ಹೊತ್ತ್ ಕಂಡ್ ಬಾಕನ ಅದ್ ಅರ್ಧದಾರಿಲಿ

ಬೀಳ್ತಿತ್ತ್. ಆಗ ಅತ್ತಿಗೆಕ ನೆಗಾಡಿಕಂಡ್, ನೀ ಪೇಟೆ ಗೂಡೆ, ನಿಂಗೆ ಅಕಿಲ್ಲೆ. ಅದ್ ಅಲ್ಲೆ ಇರ್‍ಲಿ. ನಾ ಮತ್ತೆ ಬಂದ್ ತಕಂಡ್ ಹೋನೇಂತ ಹೇಳ್ತಿದ್ದೊ. ನಾ ಕೈ ಬೀಸಿಕಂಡ್ ಅವರ ಹಿಂದೆ ಮನೆಗೆ ಬಾತಿದ್ದೆ. ನನ್ನ ಭಾವನ ಮನೆ ಬಾಸೆ ತುಳು. ನಂಗೆ ಆಗ ತುಳು ಲಾಯ್ಕ್‌ಲಿ ಬಾತಿತ್ಲೆ. ಅವು ನನ್ನೊಟ್ಟಿಗೆ ಅರೆ ಬಾಸೆಲೇ ಮಾತಾಡ್ತಿದ್ದೊ.

ಆ ಸಮಯಲಿ ಸುಳ್ಯಲಿ ಕಾಸರಗೋಡು ಬಸ್, ಕುಂಬ್ಳೆ ಬಸ್ ಎರ್ಡ್ದೇ ಇದ್ದದ್. ಕಾಸರಗೋಡು ಬಸ್‌ಲಿ ಅಕ್ಕನ ಮನೆಗೆ ಹೋದರೆ ಅದ್ ಜಾಲ್ಸೂರ್‌ಲಿ ಕಾಸರಗೋಡಿಗೆ ಹೋಕೆ ತಿರ್‍ಗ್‌ತಿತ್ತ್. ಜಾಲ್ಸೂರ್‌ಂದ ಕನಕಮಜಲಿಗೆ ನಡ್ಯೊಕು. ನಾ ಎರ್ಡ್ ಗಂಟೆಗೆ ಹೊರ್ಡುವ ಕುಂಬ್ಳೆ ಬಸ್ಸ್‌ಲಿ ಅಕ್ಕನ ಮನೆಗೆ ಹೋಗ್ತಿದ್ದೆ. ನನ್ನ ಜೋಸ್ತಿ ಗೂಡೆ ಪ್ರೇಮಲತನ ಅಪ್ಪ, ಸುಂದರ ರಾಯರ ಮನೆ ಹಕ್ಕಲೆ ಬಸ್ ಬಂದ್ ನಿಲ್ತಿತ್ತ್. ಆ ಬಸ್ಸ್ ಕುಂಬ್ಳೆಂದ ಬಂದ್ ಪುತ್ತೂರಿಗೆ ಹೋಗ್ತಿತ್ತ್. ಸುಂದರ ರಾಯರ ಅಂಗ್ಡಿನ ಜಗಲಿಲಿ ಒಂದು ಮೇಜ್ ಇಸಿ, ಕುರ್ಚಿಲಿ ಕುದ್ದ್, ಅವು ಟಿಕೆಟ್ ಕೊಡ್ತಿದ್ದೊ. ನಾ ಅಲ್ಲಿಗೆ ಹೋಕಾಕನ ಅವ್ಕೆ ಗೊತ್ತಾಗ್ತಿತ್ತ್. ನಾ ಅಕ್ಕನ ಮನೆಗೆ ಹೊರ್ಟದ್‌ಂತ. ನನ್ನ ಹಕ್ಕಲೆ ಒಂದು ಲಂಗ, ರವ್ಕೆನ ಮಾರಾಪು ಇರ್‍ತಿತ್ತ್. ಅದರ್‍ಲಿ ಅವ್ವ ಅಕ್ಕಂಗೆ ಕೊಟ್ಟ್ ಕಳ್ಸುವ ಸಾಮಾನುನೂ ಇರ್‍ತಿತ್ತ್. ನನ್ನ ಕೈನ ಗಂಟ್ ನೋಡಿ ಅವು ನಂಗೆ ಟಿಕೆಟ್ ಹರ್ದ್ ಕೊಡ್ತಿದ್ದೊ. ನಾಕಾಣೆ ಕೊಟ್ಟ್‌ದ್ ನಾ ಟಿಕೆಟ್ ತಕಂಬತಿದ್ದೆ. ಆಗ ನಾ ಯಾರೊಟ್ಟಿಗೆನೂ ಮಾತಾಡ್‌ತಿತ್ಲೆ. ಯಾರಾದರ್ ಏನಾದರ್ ಕೇಳ್ರೆ ಮಾತ್ರ ಉತ್ತರ ಕೊಡ್ತಿದ್ದೆ. ಬಸ್ ಡ್ರೈವರ್ ಅಬ್ದುಲ್ ರಹಿಮಾನ್ ಅಪ್ಪನ ಗುರ್ತದೊವು. ಅವು ನನ್ನ ಕನಕಮಜಲು ಸಾಲೆ ಹಕ್ಕಲೆ ಇಳ್ಸ್‌ತಿದ್ದೊ. ಕುಂಬ್ಳೆ ಬಸ್ ಕಂಡೆಕ್ಟರ್ ಬಾಬು ರಾವ್. ದಿನಾ ಬೊಳ್ಪುಗೆ ನಮ್ಮ ಅಂಗ್ಡಿಗೆ ಬಂದ್ ಅಪ್ಪನ ಕೈಯಿಂದ ಒಂದು ರೂಪಾಯಿ ತಕಂಡ್ ಹೋಗ್ತಿದ್ದೊ. ಇರ್‍ಳ್ ಬಂದ್ ಆ ದುಡ್ಡುನ ಕೊಡ್ತಿದ್ದೊ. ಅದ್ 'ಬಿಡ್ಡ್'ಗೆ ಕಟ್ಟಿಕೆ ತಕಂಡ್ ಹೋದೂಂತ ಸಣ್ಣ ಅಕ್ಕ ನನ್ನಲ್ಲಿ ಹೇಳ್ತಿತ್ತ್. ಯಾವುದಾದರೊಂದು ನಂಬರಿಗೆ ಹಣ ಕಟ್ಟಿರೆ, ಆ ನಂಬ್ರ ಪೇಪರ್‍ಲಿ ಬಂದರೆ ಅರುವತ್ನಾಕ್ ಪಟ್ಟ್ ದುಡ್ಡು ಸಿಕ್ಕ್‌ತಿತ್ತ್ ಗಡ. ಬೀಡಿ ಕಟ್ಟುವ ಮಾಪ್ಳುಚ್ಚಿಗ ಒಂದು 'ಮುಕ್ಕಾಲ್' ನಾಣ್ಯನ ಕಟ್ಟಿರೆ, ಗೆದ್ದರೆ ಅವ್ಕೆ ಅರುವತ್ನಾಕ್'ಮುಕ್ಕಾಲ್'ಸಿಕ್ತಿತ್ತ್. [ಆಗ ಒಂದು ರೂಪಾಯಿಗೆ ಅರುವತ್ನಾಕ್ ಮುಕ್ಕಾಲು. ನಾಕ್ ಮುಕ್ಕಾಲಿಗೆ ಒಂದು ಆಣೆ. ಹದ್ನಾರ್ ಆಣೆಗೆ ಒಂದು ರೂಪ್ಯಾ. ಒಂದಾಣೆಗೆ ಹನ್ನೆರ್ಡ್ ಪೈ, ಒಂದು ಮುಕ್ಕಾಲಿಗೆ ಮೂರು ಪೈ. ಪೈನ ಕಾಸ್‌ಂತ ಹೇಳ್ತಿದ್ದೊ. ಆಗ ನಾವುಗೆ ದುಡ್ಡುನ ಲೆಕ್ಕ ರೂಪಾಯಿ–ಆಣೆ–ಪೈಲಿಇರ್‍ತಿತ್ತ್] ಸೋತರೆ ಒಂದು ಮುಕ್ಕಾಲು ಹೋತ್‌ಗಡ. ಅದ್ ಪರದೇಶದ ಹತ್ತಿ ಮಾರಾಟ ಮಾಡುವ ದರ ಗಡ. ನವಭಾರತ ಪೇಪರ್‌ಲಿ ಒಂದು ಮೂಲೆಲಿ ದಿನಾ ಬಾತಿತ್ತ್, ಅರಳೆ ಧಾರಣೆ –ಎಂತ, ಬರ್ದ್ ನಂಬ್ರ ಕೊಡ್ತಿದ್ದೊ. ಸಣ್ಣಕ್ಕ ಹೇಳಿಕಾಕನ ನಂಗೆ ಅದರ ತಲೆ ಬುಡ ಒಂದೂ ಅರ್ಥ ಆಗ್ತಿತ್ಲೆ.

ಕುಂಬಳೆ ಬಸ್ ಕನಕಮಜಲಿನ ಹಕ್ಕಲೆ ಬಾಕಾಕನ ಕಂಡೆಕ್ಟರ್ ಬಾಬುರಾವ್

‘ಬಿಗಿಲ್’ ಊದುತಿದ್ದೊ. ನಾನನ್ನ ಅರ್ವೆ ಗಂಟ್‌ನ ಕೈಲಿ ಹಿಡ್ಕಂಡ್ ಬಸ್ಸ್‌ಂದ ಇಳ್ಯತಿದ್ದೆ. ಆಗ ಬಸ್‌ಲಿ ಹೋಗೋವು ಬಾಳ ಕಮ್ಮಿ ಜನ. ಒಮ್ಮೊಮ್ಮೆ ನಾಕೈದ್ ಜನ ಇರ್ದು ಉಟ್ಟು. ಇಳ್ದಾದ ಮೇಲೆ ಮಂಗ್ಳೂರ್ ಕಡೆ ಮೋರೆ ಮಾಡಿಕಾಕನ ನನ್ನ ಎಡೆಪುಡೆಲಿ ಎತ್ತರಲಿ ಇದ್ದ ಹೋಟ್ಲ್‌ಗೆ ಹತ್ತಿಕೆ ಎರ್ಡ್ ಮೂರ್ ಮೆಟ್ಲ್ ಇತ್ತ್. ಆ ಹೋಟ್ಲ್ ಎಜಮಾನ ಕುತ್ಯಾಳ ಎಲ್ಯಂಣ ಗೌಡ್ರು. ಅವು ನನ್ನ ಮಳಿ ‘ಅಬ’ನ ತವುರು ಮನೆವು. ಒಮ್ಮೊಮ್ಮೆ ಅವರ ತಮ್ಮ ಅಣ್ಣಪ್ಪ ಗೌಡ್ರೂ ಹೋಟ್ಲ್‌ಲಿ ಇರ್ತಿದ್ದೊ. ಎಲ್ಲೋವು ಆ ಹೋಟ್ಲ್‌ನ ‘ಅಣ್ಣಪ್ಪಣ್ಣನ ಹೋಟ್ಲ್’ಂತ ಕರ್‍ಯೊತಿದ್ದೊ. ಅವ್ವ ನಂಗೆ ಟಿಕೆಟ್‌ನ ದುಡ್ಡು ನಾಕಾಣೆ ಪಾವೆಲಿ ಅಲ್ಲದೆ, ಒಂದಾಣೆ ಪಾವೆಲಿ ಹೆಚ್ಚಿಗೆ ಕೊಡ್ತಿದ್ದೊ. ಆ ಒಂದಾಣೆನ ಹೋಟ್ಲ್ ನವ್ಕೆ ಕೊಟ್ಟ್, ಅಲ್ಲಿದ್ದ ಬೆಂಚಿಲಿ ಕುದ್ರ್‌ತಿದ್ದೆ. ಕುದ್ರಿಕೆ ಒಂದ್ ಸಣ್ಣ ಬೆಂಚ್, ತಿಂಡಿ ತಿಂಬಕೆ ಹಂಞ ಎತ್ತರದ ಒಂದು ಬೆಂಚ್ ಅಲ್ಲಿ ಇರ್ತಿತ್ತ್. ನನ್ನ ಎದ್ರಿಗೆ, ಒಂದು ತುಂಡು ಬಾಳೆ ಎಲೆಲಿ ಕಡ್ಲೆ ಉಪ್ಕರಿ, ಅದರ ಮೇಲೆ ಒಂದು ಪುಂಡಿ ಅವ್ಲಕ್ಕಿ ಹಾಕಿ ಇಸ್ತಿದ್ದೊ. ನಾ ಅದರ ಮೆಲ್ಲಂಗೆ ತಿಂದ ಕಂಡ್ ಸುತ್ತೋಳು ನೋಡ್ತಿದ್ದೆ.

ಅಂಗ್ಡಿಲಿ ನಾಕಾರ್ ಜನ ಇರ್ತಿದ್ದೊ. ಅಲ್ಲಿದ್ದವ್ಕೆ ಎಲ್ಲಾ ನನ್ನ ಗುರ್ತ ಇರ್ತಿತ್ತ್. ‘ಇಂಬಾಳ್, ಸುಳ್ಯತ ಮುದ್ದಮ್ಮಕ್ಕನ ಮಗಳತ್ತೋ’ಂತ ಅಣ್ಣಪ್ಪಣ್ಣನಲ್ಲಿ ಕೇಳ್ತಿದ್ದೊ. ಅವರೊಟ್ಟಿಗೆ ಮಾತಾಡಿಕಂಡ್, ಅಣ್ಣಪ್ಪಣ್ಣ ಪಾಟೆಗೆ ಚಾಹೊಡಿ ಹಾಕಿ, ಒಲೆನ ಮೇಲೆ ಟಕಟಕ ಶಬ್ದ ಮಾಡಿಕಂಡ್ ಕೊದ್ಯತಿದ್ದ, ಬಿಸ್ನೀರ್‍ನ ಉದ್ದ ಕೈನ ಕೊಂಡೆಂದ ತೆಗ್ದ್, ಪಾಟೆಗೆ ಹಾಕಿ ಅದರ ಮೇಲೆ ಒಂದು ತಟ್ಟೆನ ಮುಚ್ಚುತಿದ್ದೊ. ಮತ್ತೊಂದ್ ಪಾಟೆಗೆ ಒಂದುವರೆ ಚಮ್ಚೆ ಸಕ್ಕರೆ, ಕಾಲ್‌ಕೊಂಡೆ ಬಿಸಿಹಾಲ್ನ ಹೊಯ್ದ್, ಅದರ ಮೇಲೆ ಒಂದು ಚೌಕದ ಹಾಂಗೆ ಇದ್ದ ಬಟ್ಟೆನ ಮುಚ್ಚಿ, ಮುಂದೆನ ಪಾಟೆಲಿದ್ದ ಕಣೆರ್ ಬುಟ್ಟಿ ಚಾ ನೀರ್‍ನ, ಹೊಯ್ದ್‌ದ್ ಎರ್ಡ್ ಕೈಲಿ ಬಟ್ಟೆನ ಕೊಡಿಗಳ ಹಿಡ್ದ್ ಚಾ ಹಿಂಟೆನ ಹಿಂಡ್‌ತಿದ್ದೊ. ಎರ್ಡ್ ಪಾಟೆಲಿ ನಾಕಾರ್ ಸಲ ಚಾಯನ ಮೇಲೆ ಕೆಳಗೆ ಬೊಡ್ದ್, ತಣ್ಣಂಗೆ ಮಾಡಿ ಗ್ಲಾಸಿಗೆ ಹೊಯ್ಯೊತಿದ್ದೊ. ಆಗ ಆ ಗ್ಲಾಸ್‌ಲಿ ಒಂದು ಇಂಚಿನಸ್ಟ್ ನೊರೆ ನಿಲ್ತಿತ್ತ್. ಅದರ ನನ್ನ ಎದ್ರ್‌ಗೆ ಟಕ್ಕಂತ ಶಬ್ದ ಮಾಡಿ ಇಸ್ತಿದ್ದೊ. ಅವು ಚಾನ ಪಾಟೆಲಿ ಮೇಲೆ ಕೆಳಗೆ ಹೊಯ್ಯೊದರನೇ ನೋಡಿಕಂಡಿದ್ದ ನಂಗೆ ಆ ಸದ್ದ್‌ಗೆ ಬೆಚ್ಚಿ ಬೀಳ್ತಿದ್ದೆ.

ಅಲ್ಲಿ ಚಾ ಕುಡ್ದ್, ಅಲ್ಲಿಂದ ಅದರ ಹಕ್ಕಲೆ ಇದ್ದ ಕನಕಮಜಲು ಸಾಲೆಗೆ ಹೋಗ್ತಿದ್ದೆ. ಅಲ್ಲಿ ಶೇಷಮ್ಮ ಟೀಚರ್ ಇರ್ತಿದ್ದೊ. ಅವು ಸುಳ್ಯ ಸಾಲೆಲಿ ನಂಗೆ ಒಂದ್‌ನೇ ಕ್ಲಾಸಿಗೆ ಟೀಚರಾಗಿದ್ದೊ. ಅವ್ಕೆ ನನ್ನೊಟ್ಟಿಗೆ ಬಾಳ ಪ್ರೀತಿ. ನಂಗೂನು ಅಷ್ಟೆ. ಅವರ ಗಂಡನ ಮನೆ ಕನಕಮಜಲಿನ ಬುಡ್ಲೆಗುತ್ತು. ಹಾಂಗಾಗಿ ಅವು ಸುಳ್ಯಂದ ಕನಕಮಜಲ್ ಸಾಲೆಗೆ ವರ್ಗ ಮಾಡ್ಸಿಕೊಂಡೊ. ಅವು ನನ್ನ ನೋಡ್ದ ಕೂಡ್ಲೆ, ‘ಓ ಹೋ, ಕಾವೇರಮ್ಮ , ಬಾ, ಬಾ, ರಜೆಸಿಕ್ಕಿತೋ? ಅಕ್ಕನ ಮನೆಗೆ

ಹೊರ್ಟ್ಬೊದೋ'ಂತ ಬಾಳ ಪ್ರೀತಿಂದ ಸುಖ ದುಃಖ ವಿಚಾರ್ಸಿ, ನನ್ನ ಮಕ್ಕಳ ಬೆಂಚಿಲಿ ಕುದ್ರ್‌ಸ್‌ತಿದ್ದೊ. ಅವು ಮಕ್ಕಳಿಗೆ ಪಾಠ ಮಾಡ್ದರ ನೋಡಿಕಂಡ್, ಒಂದರ್ಧ ಗಂಟೆ ಅಲ್ಲಿ ಕಳ್ಯೆತಿದ್ದೆ. ಅದ್ ಹಳ್ಳಿ ಸಾಲೆ ಆದ ಕಾರ್ನ, ಅವ್ಕೆ ನೇಜಿ ಸಮಯಕ್ಕೆ ಮಳೆಗಾಲಲಿ ರಜೆ ಕೊಡ್ತಿದ್ದೊ. ನಾವ್ಗೆ ರಜೆ ಇರಿಕನ ಅವ್ಕೆ ಸಾಲೆ ಇರ್ತಿತ್ತ್. ನಾವ್ಗೆ ಆಗ ದಸರಾ ರಜೆ ಎಂಟ್ ದಿನ ಕೊಡ್ತಿದ್ದೊ. ಕ್ರಿಸ್‌ಮಸ್ ರಜೆನ ಹದಿನೈದ್ ದಿನ ಕೊಡ್ತಿದ್ದೊ. ನಾ ಅಲ್ಲಿಂದ ಹೊರ್ಟ್ ಸಾಲೆ ಹಿಂದೆ ಇದ್ದ ಆಟದ ಮೈದಾನಲಿ ನಡ್ದ್, ಮುಂದೆ ಕಾಲ್ದಾರಿಲಿ ಹೋಕನ ಒಂದು ಪಾಲ ಸಿಕ್ಕ್‌ತಿತ್ತ್. ಅದರ ಹೆದ್ರಿಕಂಡ್ ಮೆಲ್ಲಂಗೆ ದಾಟಿ, ಮುಂದೆ ಹೋಕನ ಬಾವನವರ ಮುಳಿ ಪಡ್ಪು ಸಿಕ್ಕ್‌ತಿತ್ತ್. ಅಲ್ಲಿ ಸುತ್ತೊಳು ಇದ್ದ ಬೆದ್ರ್ ಹಿಂಡ್ಲ್‌ಗ ಪಟ ಪಟಾಂತ ಸದ್ದ್ ಮಾಡಿಕಾಕನ ನಂಗೆ ಹೆದ್ರಿಕೆ ಆಗ್ತಿತ್ತ್. ಅಲ್ಲಿಂದ ಬೇಗ ಬೇಗ ಹೆಜ್ಜೆ ಹಾಕ್ತಿದ್ದೆ. ಮುಳಿ ಪಡ್ಪು ಸಿಕ್ಕಿದ ಮೇಲೆ ನಂಗೆ ಧೈರ್ಯ ಬಾತಿತ್ತ್. ಮುಳಿ ಪಡ್ಪುಲಿ ಹೋಗಿ ಇಳ್ಯಕಾಕನ ಸಿಕ್ಕುದೇ ಭಾವನ ತೋಟ ಆ ತೋಟಲಿ ನನ್ನ ಪ್ರೀತಿನ ತಾವರೆ ಕೆರೆ ಒಂದಿತ್ತ್. ಅದರ ಅವೆಲ್ಲಾ 'ಕಟ್ಟ'ಂತ ಕರ್ರ್ಯೊತಿದ್ದೊ. ಆ ಕಟ್ಟದ ಹಕ್ಕಲೆ ಹಂಞ ಹೊತ್ತ್ ನಿಂತ್‌ಕಂಡ್, ಎಷ್ಟ್ ತಾವರೆಗ ಅರಳ್ಯೊಳೋಂತ ನೋಡ್ತಿದ್ದೆ. ಆಗ ಸುಮಾರ್ ಮೂರು ಗಂಟೆ ಹೊತ್ತ್ ಆದ ಕಾರಣ ತಾವರೆಗ ಎಲ್ಲಾ ಮುಗುರಾಗಿ ಇರ್ತಿತ್ತ್. ಒಮ್ಮೊಮ್ಮೆ ಅತ್ತಿಗೆಕ ಅಲ್ಲಿ ಸೀರೆ ಒಗ್ದ್‌ಕೊಂಡೋ ಇಲ್ಲರೆ, ಮಡ್ಕೆ ತೊಳ್ದ್‌ಕೊಂಡೋ ಇರ್ತಿದ್ದೊ. ನನ್ನ ನೋಡಿ ಅವ್ಕೆ ಬಾಳ ಕುಸಿ ಆಗ್ತಿತ್ತ್. ನಾ ತೋಟಲಿ ಬಾಕಾಕನ ಅಕ್ಕಂಗೆ ಗೊತ್ತಾಗಿ, ಅದ್ ಓಡಿ ಬಂದ್ ನನ್ನ ಕೈ ಹಿಡ್ಕಂಡ್, ಕೈಲಿದ್ದ ಮಾರಾಪುನ ಅದ್ ತಕಂಡ್ ಕರ್ರ್ಕೊಂಡೋಗ್ತಿತ್ತ್.

'ನೀ ಒಬ್ಬನೇ ಬಂದನೋ? ನಿಂಗೆ ಹೆದ್ರಿಕೆ ಆತ್ಲೆನೋ? ಪಾಲನ ಹೇಂಗೆ ದಾಟಿದ? ಅವ್ವನೊಟ್ಟಿಗೆ ಹೇಳ್ಬೊಳನೋ?'– ಎಂತ ಹತ್ತಾರ್ ಪ್ರಶ್ನೆ ಕೇಳಿಕಂಡ್, ನನ್ನ ಮನೆಗೆ ಕರ್ರ್ಕೊಂಡೋಗಿ, ಚಾಮಾಡಿ ಕೊಡ್ತಿತ್ತ್. ನಾ ಚಾ ಕುಡ್ದ್, ಅಕ್ಕನೊಟ್ಟಿಗೆ ಅದ್ ಕೇಳ್ದಕ್ಕೆಲ್ಲಾ ಉತ್ತರ ಕೊಟ್ಟ್, ಅವರ ಮನೆ ಹಿಂದೆ ಎತ್ತರಲಿ ಇದ್ದ ಕೊಟಗೆಗೆ ಓಡ್ತಿದ್ದೆ. ಅಲ್ಲಿ ಒಂದು ಪುಡೆ ಭತ್ತ ಮಿಜಿಯಕ್ಕೆ ಮಾಡ್ದ ಕೊಟಗೆ, ಇನ್ನೊಂದು ಪುಡೆಲಿ ಕೋಣಂಗಳ ಕಟ್ಟಿ ಹಾಕುವ ಹಟ್ಟಿ ಇತ್ತ್. ಅಲ್ಲಿ ಒಮ್ಮೊಮ್ಮೆ ಚೋಮಾರು ಭತ್ತ ಕುಟ್ಟಿಕಂಡ್ ಇರ್ತಿತ್ತ್. ಅದ್ ನನ್ನ ನೋಡಿ, 'ಕುಂಞಿ ಎಡ್ತೆರ್ ಬತ್ತೆರ್. ದಾನೆ ಕುಂಞಿ ಎಡ್ತೆರೆ?'ಎಂತ ನನ್ನ ಮಾತಾಡ್ಸ್‌ತಿತ್ತ್. ಅದರೊಟ್ಟಿಗೆ ಒಂದೆರ್ಡ್ ಮಾತಾಡಿ, ಹಟ್ಟಿಲಿದ್ದ ಕೋಣಂಗಳ ನೋಡಿ, ಹಿಂದೆ ಇದ್ದ ಗುಡ್ಡೆಗೆ ಓಡ್ತಿದ್ದೆ. ಗುಡ್ಡೆಲಿ ತುಂಬಾ ಪುಂಡೆಲ್ ಪುಂಡೆಲ್, ಕೇಪುಳ ದೈಗ ಇದ್ದೊ. ಅದರ್ಲಿ ಕೆಂಪು, ಕೆಂಪುನ ಜೊಂಪೆ, ಜೊಂಪೆ ಕೇಪುಳ ಹಣ್ಣ್‌ಗ ಇರ್ತಿದ್ದೊ. ಹಂಞಸೀ, ಹಂಞ ಕಣೆರ್ ಇದ್ದ ಆ ಹಣ್ಣ್‌ಗಾಂತೇಳ್ರೆ ಸಣ್ಣದಿರಿಕನ ನಂಗೆ ಬಾಳ ಪ್ರೀತಿ. ಅಲ್ಲೇ ಪೊದೆಲಿದ್ದ ಉದ್ದದ ಮುಳ್ಳುನ ಕೋಲ್‌ನ ಮುರ್ದ್‌ದ್ ಅದರ ಮುಳ್ಳುಗೆ, ಕೇಪುಳ ಹಣ್ಣ್‌ನ ಕೊಯ್ದ್‌ದ್

ಒಂದೊಂದೇ ಹಣ್ಣ್‌ನ ಅತ್ತ ಇತ್ತ ಚುರಿಯತಿದ್ದೆ. ಹಾಂಗೆ ಒಂದ್ ಮೂರ್ನಾಕ್ ಕೋಲ್‌ಲಿ ಚುರ್ದ್‌ದ್ ಮನೆಗೆ ತಾತಿದ್ದೆ. ಅದರ ನೋಡಿ ಅಕ್ಕ ನಂಗೆ ಬೊಯ್ಯತಿತ್ತ್. ಹೊಟ್ಟೆಗಿಲ್ಲದವರಾಂಗೆ ನೀ ಇದರೆಲ್ಲಾ ತಿಂದ್ಯಲೆ? ನಿಂಗೆ ಕಾಡ್ ತಿನ್ಸ್‌ಂತೇಳ್ರೆ ಅಷ್ಟ್ ಇಷ್ಟನೋ'ಂತ ಕೇಳ್ತಿತ್ತ್. ನಾ ನೆಗಾಡಿಕಂಡ್ ಒಂದೊಂದೇ ಹಣ್ಣ್‌ನ ಚೀಂಪಿ, ಚೀಂಪಿ ತಿಂಬತಿದ್ದೆ. ಭಾವ ಮತ್ತೆ ಮಾಂವ ಕೆಲ್ಸ ಮುಗ್ಸಿ, ಇರ್‍ಳ್ ಬಾತಿದ್ದೊ. ಅತ್ತೆ ಹೆಚ್ಚ್ ಮಾತಾಡ್ತಿತ್ಲೆ. ನನ್ನ ಅವ್ವನ ಅವ್ವ 'ಅಬ'ನೂ ಒಂದು ಕೋಣೆಲಿ, ಅಲ್ಲಿ ಅವರ ಗಂಡ ಸತ್ತ ಸಣ್ಣ ಮಗಳೊಟ್ಟಿಗೆ ಇರ್ತಿದ್ದೊ. ಅವು ಬೇರೆ ಅಡ್ಗೆ ಮಾಡಿಕೊಂಡಿದ್ದೊ. ಅಲ್ಲಿಗೆ ಹೋಗಿ ನಾ ಅವರ ಮಾತಾಡ್ಸ್‌ತಿದ್ದೆ. ಒಮ್ಮೊಮ್ಮೆ 'ಅಬ' ನಂಗೆ ಕಣ್ಣ ಕಾಪಿ ಮಾಡಿ, ಅದ್ಕೆ ಒಂದು ಚವುಂಟು ತುಪ್ಪ ಹಾಕಿ, ಕುಡ್ಯಕೆ ಕೊಡ್ತಿದ್ದೊ. ಅವು ನಡ್ಗಿಕಂಡ್, ನಡ್ಗಿಕಂಡ್, ಹಲಗೆ ಮೇಲೆ ಇಸಿದ, ಗುಂಭನ ಕೆಳಗೆ ಇಳ್ಸಿ, ಅದರ ಬಾಯಿಗೆ ಬಿಗ್ದ್ ಕಟ್ಟಿದ ಸೀರೆ ಅರ್‍ವೆನ ಬಿಚ್ಚಿ, ಒಂದು ಚೌಂಟುನ ಅವರ ಸೀರೆ ಸೆರ್‍ಂಗ್‌ಲಿ ಉಜ್ಜಿ, ಅದರ್ಲಿ ತುಪ್ಪ ತೆಗ್ದ್ ಕಾಪಿಗೆ ಹಾಕಿ ಕೊಡ್ತಿದ್ದೊ. ಒಮ್ಮೊಮ್ಮೆ ಆ ತುಪ್ಪ ಕಸೆಂಟ್ ಬಾತಿತ್ತ್. ಆಗ ನಾ ಅದರ ಅವ್ಕೆ ಬೇಜಾರ ಮಾಡಿಕೆ ಆಗದ್‌ಂತ ಕಣ್ಣ್ ಮುಚ್ಚಿ ಕುಡ್ದ್ ಬಾತಿದ್ದೆ. ಒಂದೆರ್ಡ್ ವೊರ್ಸಲಿ ನನ್ನ ಚಿಕವಂಗೆ ಮಾಂವ ಎರಡ್ನೇ ನೆಂಟಸ್ತಿಕೆಲಿ ಮೊದ್ವೆ ಮಾಡ್ಸಿ ಕೊಟ್ಟೊ. ಮತ್ತೆ ಒಂದೆರ್ಡ್ ವೊರ್ಸಲಿ 'ಅಬ'ಸತ್ತ್‌ಹೋದೊ.

ಒಮ್ಮೆ ನನ್ನ ಸೋಣಂಗೇರಿ ಚಿಕವನ ಮಗಳ್ ಸರೋಜಿನಿ, ಮತ್ತೆ ನಾ ರಜೆಲಿ ಒಟ್ಟಿಗೆ ಅಬನ ಮನೆಲಿ ಸೇರ್‍ದೊ. ಆಗ ಅಬ ಉಸಾರಿಲ್ಲದೆ ಮೊಲ್ಗಿದಲ್ಲೇ ಇದ್ದೊ. ನಮ್ಮೊಟ್ಟಿಗೆ ಮಿಾಯಕೂಂತ ಹೇಳ್ದೊ. ನಾವಿಬ್ಬೊರು ತಾವರೆ ಕೆರೆನ ಹಕ್ಕಲೆ ಇದ್ದ ನೀರೆಡಿ ಕೊಟಗೆಲಿ, ಹಾಳೆ ಕೊತ್ತಳಿಂಗೆ ಹಾಕಿ, ಕಿಚ್ಚಿ ಮೊಟ್ಟ್‌ದ್ ನೀರ್‌ಕಾಸಿ, ಅಬನ ಇಬ್ಬೊರು ಕೂಡಿ ಮೆಲ್ಲಂಗೆ ಕರ್ದ್‌ಕೊಂಡ್ ಹೋಗಿ, ನೀರೆಡಿಲಿ ಅವರ ಕುದ್ರಿಸಿ, ಸೀಗೆ ಹೊಡಿ ಹಾಕಿ, ತಲೆ ಮೈ ಮಿಾಸಿದೊ. ಅವರ ತಲೆ ಮೈ ಒರ್‍ಸಿ, ಸೀರೆ ಉಡ್ಸಿ ತಂದ್ ಮೊಲ್ಗಿಸಿಕಾಕನ ನಾವ್ಗೆ ಇಬ್ಬೊರಿಗೆ ಸಾಕ್ ಸಾಕಾತ್. ಅದೇ ವೊರ್ಸ ಅಬ ತೀರಿ ಹೋದೊ.

ಅಬ ತೀರಿ ಹೋದ ಮೊರ್ದ್ದಿನ ನಾ ಸುಳ್ಯಂದ ಅಕ್ಕನ ಮನೆಗೆ ಬಂದೆ. ಅಬ ತೀರಿ ಹೋದ್ ನಂಗೆ ಗೊತ್ತಿತ್ಲೆ. ನನ್ನ ಅವ್ವ ಎಂಟ್ ದಿನಕ್ಕೆ ಮುಂದೆನೇ ಬಂದ್ ಅಕ್ಕನ ಮನೆಲಿ ಇದ್ದೊ. ನಮ್ಮ ಮನೆಲಿ ದೊಡ್ಡೊವುಕ್ಕೆ ಗೊತ್ತಿರ್ದು. ಅವು ಮಕ್ಕಳೊಟ್ಟಿಗೆ ಇದರೆಲ್ಲಾ ಹೇಳ್ತಿತ್ಲೆ. ಆಗ ಮಕ್ಕ ಮಕ್ಕಳಷ್ಟಕ್ಕೆ. ದೊಡ್ಡೋವು ಅವರ್ದೇ ಲೋಕಲಿ ಇರ್ತಿದ್ದೊ. ನಾ ಬಾಕಾಕನ ಸಣ್ಣ ಮಾಂವನ ಮನೆ ಹಕ್ಕಲೆಂದ ಬಂದೆ. ಅಲ್ಲಿ ಮಜಲ್ ಗದ್ದೆಲಿ ಕಿಚ್ಚಿಂದ ಸಣ್ಣ ಹೊಗೆ ಎದ್ರ್‌ತಿತ್ತ್. ನಂಗೆ ಅದ್ ಎಂತದ್‌ಂತ ಗೊತ್ತಿತ್ಲೆ. ಚೂಟು ಮೊಣ್ಣ್‌ಗೆ ಕಿಚ್ಚಿ ಹಾಕೊಳೋಂತ ನೆನ್ಸಿದೆ. ನಾ ಅಕ್ಕನ ಮನೆಗೆ ಬಾಕನ ಅವ್ವ, 'ನೀ ಯಾಕೆ ಬಂದೆ? ಮನೆಲಿ ಯಾರೂ ಹೇಳ್ತ್‌ಲ್ಲೇನೋ? ನಿನ್ನ

ಅಬ ಸತ್ತ್ ಹೋದೊ'– ಎಂತಹೇಳ್ದೊ. ನಾ ಅವರ ಸುಟ್ಟ ದಾರಿಲೇ ಬಂದೇಂತ ಮತ್ತೆ ನಂಗೆ ಗೊತ್ತಾತ್. ಆಗ ನನ್ನ ಎದೆ ಹೊಡ್ಕಂಡ್, ಹೆದ್ರಿಕೆ ಆತ್. ಆ ಮೇಲೆನಾ ಒಂದ್ ತಿಂಗ ಅಕ್ಕನ ಮನೇಲೇ ಇದ್ದೆ. ದೊಡ್ಡ ರಜೆ ಇದ್ದ ಕಾರ್ಣ ಸಾಲೆಗೆ ತೊಂದ್ರೆ ಆತಿಲ್ಲೆ. ನಾ ಹುಟ್ಟಿದ ಮೇಲೆ ಸುರುನ ಬೊಜ್ಜದ ಊಟ ಉಂಡದ್ ಅಬನ ಬೊಜ್ಜಲಿ. ಅಬಂಗೆ ಒಂಭತ್ತ್ ಜನ ಮಕ್ಕ. ಆರ್ ಹೆಣ್ಣ್, ಮೂರ್ ಗಂಡ್. ಹೆಣ್ಣ್ ಮಕ್ಕಳ ಪೈಕಿ ನನ್ನ ಅವ್ವ ಮೂರ್ನೆವು. ಅವ್ವಂಗೆ ಮೂರು ಜನ ತಂಗೆಕ. ಕಾನತ್ತಿಲ ಚಿಕವ, ಸೋಣಂಗೇರಿ ಚಿಕವ, ಮತ್ತೆ ಲಕ್ಷ್ಮೀ ಚಿಕವ ಆಕೆರಿಯವು. ಅವ್ಕೆ ಗಂಡ ಗಡ್ಪುತಿತ್ಲೆ. ಐದಾರ್ ಮೊದ್ವೆ ಆ ಗುಟ್ಟು ಗಡ. ಸುರುಗೆ ಅವರ ಕೋಲ್ಚಾರ್‌ಗೆ ಕೊಟ್ಟಿದ್. ಅವರ ಮುಂದೆನ ಗಂಡನ ಮತ್ತೆ ಎರಡ್ನೆ ಗಂಡನ ನೋಡ್ದನೆಂಪು ನಂಗುಟ್ಟು. ಎರಡ್ನೇ ಗಂಡಲಿ ಒಬ್ಬ ಮುಂಜ ಇತ್ತ್. ಉಳ್ದೊವು ನಂಗೆ ಗೊತ್ತಿಲ್ಲೆ. ಅವ್ವನ ದೊಡ್ಡಕ್ಕನ ಕಡಮಕಲ್ಲಿಗೆ ಕೊಟ್ಟಿದ್ ಗಡ ಅವರ ಮಕ್ಕ ನಮ್ಮಲ್ಲಿಗೆ ಬಾತಿದ್ದೊ. ಎರಡ್ನೆ ಅಕ್ಕ ಕಾಪಿಲ ಮೂಲೆಲಿ ಇದ್ದೊ. ಅಬನ ತವುರು ಮನೆ ಕನಕಮಜಲಿನ ಕುತ್ಯಾಳ–ಮಳಿ ಮನೆಗೆ ಹಕ್ಕಲೆ ಇತ್ತ್. ಅಬನ ಒಬ್ಬ ತಮ್ಮ ತ್ಯಾಂಪಣ್ಣ ಗೌಡ್ರ ಮಾತ್ರ ನಂಗೆ ಗೊತ್ತು. ಅವು ಆಗನ ಕಾಲಲಿ ಸಣ್ಣ ಸಾಲೆನ ಮಾಸ್ಟ್ರ ಆಗಿದ್ದೊ. ಅವು ಐದ್ನೇ ಕ್ಲಾಸ್ ಕಲ್ತಿದ್ದೊ ಗಡ. ಆ ಕಾಲಲಿ ಐದ್ನೇ ಕ್ಲಾಸ್ ಕಲ್ತರೆ ಮಾಸ್ಟ್ರ ಕೆಲ್ಸ ಸಿಕ್ಕ್‌ತಿತ್ತ್ ಗಡ. ಆಗ ಕಲ್ತೋವು ಬಾಳ ಕಮ್ಮಿ. ಆ ಅಜ್ಜಗೆ ನನ್ನೊಟ್ಟಿಗೆ ಬಾಳ ಪ್ರೀತಿ. ಅವು ಸಾಯಕನ ಮುಟ್ಟ ನನ್ನ ಮನೆಗೆ ಬಂದ್‌ದ್ ಉಂಡ್ ಹೋಗ್ತಿದ್ದೊ. ನನ್ನ ಅಬ ಬೆಳ್ಳಂಗೆ ಬೆಳ್ಳಂಗೆ ಬಾಳ ಪೊರ್ಲುನ ಹೆಣ್ಣ್. ಅಜ್ಜಿ ಆದರೂ ಅವರ ನೋಡಿಕೆ ಬಾಳ ಕುಸಿ ಆಗ್ತಿತ್ತ್. ಅವರ ತುಟಿ ತೊಂಡೆ ಹಣ್ಣ್‌ನಾಂಗೆ ಕೆಂಪು ಕೆಂಪು ಇರ್ತಿತ್ತ್. ಈಗಳೂ ನಂಗೆ ನನ್ನ ದೊಡ್ಡಕ್ಕನ ಮಗಳ್ ಧನು [ಧನಲಕ್ಷ್ಮಿ] ನ ನೋಡಿಕಾಕನ ನನ್ನ ಅಬನ ನೆಂಪಾದೆ. ಅದ್ ಅಬನ ಹಾಂಗೆ ಉಟ್ಟು.

ನನ್ನ ಅವ್ವನ ಅಪ್ಪ ಅಜ್ಜಪ್ಪನ ನೋಡ್ದ ನೆಂಪು ನಂಗುಟ್ಟು. ಅವು ಅಬ ತೀರಿ ಹೋದಾರ್‌ಂದ ಐದಾರ್ ವೊರ್ಸ ಮುಂದೆನೇ ಸತ್ತ್ ಹೊಗೊಳೊ. ಅವರ ನಾವು 'ಅಜ್ಜಮ್ಮೆ'ಂತ ಕರ್ರ್ಯೊತಿದ್ದೊ. ತುಳುಲಿ ಅಜ್ಜಿನ 'ಉಗ್ಗಬ್ಬ', ಅಜ್ಜನ 'ಅಜ್ಜಮ್ಮೆ'ಂತ ಕರ್ರ್ಯೋತಿದ್ದೊ. ಅವ್ವನ 'ಅಬ'ಂತ, ಅಪ್ಪನ 'ಅಮ್ಮೆ'ಂತ ಹೇಳ್ತಿದ್ದೊ. ನಾ ಮಾತ್ರ 'ಉಗ್ಗಬ'ನ 'ಅಬ'ಂತ ಕರ್ರೈತಿದ್ದೆ. ಅಜ್ಜಮ್ಮೆ ಸಾಯಕೆ ಮುಂದೆ ಒಮ್ಮೆ ಸುಳ್ಯಕ್ಕೆ ಬಂದದ್ ನಂಗೆ ನೆಂಪುಟ್ಟು. ನಮ್ಮ ಮನೆಲಿ ಒಂದು ವಾರ ನಿಂತಿದ್ದೊ. ಅವು ಹೋಕಾಕನ ಅಪ್ಪ ಅವ್ಕೆ ಚಳಿಗೆ ಹಾಕಿ ಕಂಬಕೆ ಒಂದು ದಪ್ಪ ಕೋಟುನ ಹೊಲ್ಸಿ ಕೊಟ್ಟಿದ್ದೊ. ಒಂದು ಗಟ್ಟದ ಕಂಬೊಳಿ ತೆಗ್ದ್ ಕೊಟ್ಟಿದ್ದೊ. ಆಗನ ಕಾಲಲಿ ಕೈಕಾಲ್ ಮರಕಟ್ಟುವಸ್ಟ್ ಚಳಿ ಇರ್ತಿತ್ತ್. ಅವು ನಮ್ಮಲ್ಲಿಗೆ ಬಂದ್ ಹೋದ ವೊರ್ಸನೇ ಸತ್ತ್ ಹೊದೊ. ಅವು ಕಾಡಿಗೆ ಹೋಗಿ ಜೇನ್ ತೆಗ್ಯೊತಿದ್ದೊಗಡ. ಒಮ್ಮೆ ಅವು ಜೇನ್ ತೆಗ್ಯಕೆ ಹೋಕನ ಕೂಡೊಳು ಕುಟ್ಟಿ ಸತ್ತ್ ಹೋದೊ ಗಡ. ಕೂಡೊಳುಗ ಕಚ್ಚಿಕೆ

ಸುರು ಮಾಡ್ರೆ ಹಿಂಡ್ಲ್ ಹಿಂಡ್ಲಾಗಿ ಬಂದ್ ಬೆರ್ಸಿ ಬೆರ್ಸಿ ಕಚ್ಚುವೆ ಗಡ. ಎಷ್ಟ್ ದೂರ ಓಡಿರೂ ಬುಡ್ದುಲ್ಲೆ ಗಡ. ಅದರ್‌ಂದ ತೊಪ್ಪಿಸಿ ಕಂಬಕೆ ನೀರ್‌ಗೆ ಹಾರಿ ಮುಳ್ಗೊಕಡ. ಆಗ ಕೂಡೊಳುಗ ಹಿಂದೆ ಹೋದವೆ ಗಡ. 'ಅಜ್ಜಮ್ಮ' ತೀರಿ ಹೋಕನ ಅವ್ಕೆ ತೊಂಭತ್ತೈದ್‌ವೊರ್ಸ ಆಗಿದ್ದೂಂತ ಅವ್ವ ಹೇಳ್ತಿದ್ದೊ. ಅವು ಗಟ್ಟಿಮುಟ್ಟಾಗಿದ್ದ್, ಹಲ್ಲ್ ಒಂದೂ ಉದ್‌ರ್‌ತಿಲ್ಲೆ.

ನನ್ನ ದೊಡ್ಡ ಮಾಂವ ವೀಳ್ಯದೆಲೆ ತುಂಬಾ ಬೆಳ್ಸ್‌ತಿದ್ದೊ. ಏಳೆಂಟ್ ಗೂಟಗಳ ಹಾಕಿ ಅದ್ಕೆ ಎಲೆ ಬೊಳ್ಳಿನ ಹಬ್ಬಿಸಿ ದಿನಾ ನೀರ್ ಹೊಯ್ಯೊತಿದ್ದೊ. ವಾರಕ್ಕೊಮ್ಮೆ ಎಲೆಗಳ ಕೊಯ್ದ್ ರಾಶಿ ಹಾಕ್ತಿದ್ದೊ. ಅವು ಎಲೆ ಸೂಡಿ ಕಟ್ಟಿ ಕಾಕನ ನಾ ಸ ಅವ್ಕೆ ಸಾಯ ಮಾಡ್ತಿದ್ದೆ. ಇಪ್ಪತ್ತೈದ್ ಎಲೆಗೆ ಒಂದು ಕವುಳಿಗೆ. ಅಂಥಾ ನಾಕ್ ಕವುಳಿಗೆಗೆ ಒಂದು ಸೂಡಿ ಕಟ್ತಿದ್ದೊ. ಈ ಎಲ್ಲಾ ಒಂದ್ ಕವುಳಿಗೆಲಿ ಇಪ್ಪತ್ತ್ ಎಲೆ ಇರ್ದುಗಡ. ಆ ಕವುಳಿಗೆಗೆ ಎಲೆ ಜೋಡ್ಸುವ ಕೆಲ್ಸ ಮಾಂವನೊಟ್ಟಿಗೆ ಸೇರಿ ನಾನೂ ಕಲ್ತ್ ಕಂಡೆ. ನಾಕ್ ಕವುಳಿಗೆನ ನಾಜೂಕ್‌ಲಿ ಒಂದರ ಪಕ್ಕ ಒಂದು ಇಸಿ ಸೂಡಿ ಸುತ್ತಿ ಬಾಳೆ ಬೊಳ್ಳಿಲಿ ಕಟ್ಟ ಹಾಕ್ತಿದ್ದೊ. ವಾರಕ್ಕೊಮ್ಮೆ ಪುತ್ತೂರು ಸಂತೆಗೆ ಅದರ ಮಾರಿಕೆ ತಕಂಡೋಗ್ತಿದ್ದೊ. ಕಿಡಿಂಜೊಳು ಮೆಡ್ಯೊದರ್ಲಿ ಮಾಂವ ಬಾಳ ಉಸಾರ್. ಚಾಳೆನ ಹಸಿಮಡ್ಲ್ ಬಾಡಿಸಿ, ಒಂದೇ ಅಳ್ತೆಲಿ ತುಂಡು ಮಾಡಿ ಕಾಡ್‌ನ ನಾರ್ ಬೊಳ್ಳಿಲಿ ಕಿಡಂಜೊಳು ಮೆಡ್ಯೊತಿದ್ದೊ. ನಾ ಅವರ ಹಕ್ಕಲೆ ಕುದ್ದ್‌ಕಂಡ್ ರೆಪ್ಪೆ ಮುಚ್ಚದೆ ಅದರ್ನೇ ನೋಡ್ತಿದ್ದೆ.

ನನ್ನ ಭಾವಂಗೆ ಮೂರು ಜನ ತಂಗೆಕ. ದೊಡ್ಡ ತಂಗೆ ತಿಮ್ಮಕ್ಕ ಮತ್ತೆ ನನ ಭಾವಂಗೆ ಒಟ್ಟಿಗೆ ಮೊದ್ವೆ ಮಾಡ್ದೊ. ಸಣ್ಣ ತಂಗೆಕ ನೀಲಮ್ಮ ಮತ್ತೆ ಅಕ್ಕಯ್ಯ- ಅವ್ಕೆ ಒಟ್ಟಿಗೆ ಮೊದ್ವೆ ಮಾಡ್ದೊ. ಅವರ ಸಣ್ಣ ತಂಗೆಕಳ ಮೊದ್ವೆ ಕಾಲಲಿ ನಾ ಒಂದು ತಿಂಗ ಅವರ ಮನೆಲಿದ್ದೆ. ಮೊದ್ವೆನ ಸುರುನ ದಿನ ಹರ್ಸಾಯ [ಹರಿಸೇವೆ] ಮಾಡಿದ್ದೊ. ಅದರ ದಾಸಯ್ಯ ಮಾಡ್ದು. ಅದ್ಕೆ ದೇವ್ರ ಕುದ್ರಿಸಿಕೆ ಬಾಳೆ ದಂಡ್ ಮತ್ತೆ ಅದರ ರೆಂಬೆಗಳ್‌ಂದ ಮಾಡ್ದ ಗುಂಡದ ಮಾಂವನೇ ತಯಾರ್ಸಿದೊ. ಇಂಥಾ ಕೊಲ್ಲ ಕೆಲ್ಸಲಿ ಮಾಂವ ಭಾರೀ ಉಸಾರ್. ಆ ಗುಂಡಲಿ ತಿರುಪತಿ ತಿಮ್ಮಪ್ಪನ ಮುಡಿಪು ಇಸಿ ಪೂಜೆ ಮಾಡ್ವೆ. ಮಾಂವ ಗುಂಡ ಮಾಡಿ ಕಾಕನ ಅವ್ಕೆ ಕೈ ಕೆಲ್ಸಕ್ಕೆ ನಾ ಸಾಯ ಮಾಡ್ತಿದ್ದೆ. ಇಂಥಾ ಕೆಲ್ಸನ ನೋಡ್ದೂಂತೇಳ್ರೆ ನಂಗೆ ಬಾಳ ಕುಸಿ. ಬಾಳೆಂದ ನಡುನ ತೋರದ ದಂಡ್‌ನ ಕಡ್ಕಂಡ್ ಬಂದ್ ಅದರ ಬುಡ್ಸಿ ರೆಂಬೆಗಳ ಬೇರೆ ಬೇರೆ ಇಸ್ತಿದ್ದೊ. ನಡುನ ತಿರ್ಳ್ ದಂಡ್‌ನ ಕಂಭಗಳಾಂಗೆ ಮಾಡಿಕೆ ನಾಕ್ ತುಂಡ್‌ಗಳ ಬೇರೆ ಇಸಿದೊ. ಅದರ ಒಂದೇ ಅಳ್ತೆಲಿ ತುಂಡು ಮಾಡ್ವೆ. ಆ ನಾಕ್ ತುಂಡುನ ಕಂಭದ ಹಾಂಗೆ ನೆಟ್ಟಂಗೆ ನಿಲ್ಲಿಸಿ, ಕೆಳಗೆ ಸುತ್ತ ನಾಕ್ ದಂಡ್‌ಗಳ ಜೋಡ್ಸಿದೊ. ಹಾಂಗೆನೇ ಮೇಲೆನ ಪುಡೆಲೂ ನಾಕ್ ಕಂಭಗಳ ಜೋಡಿಸಿ ಪೊರ್ಲುನ ಮಂಟಪ ಮಾಡ್ದೊ. ರೆಂಬೆಗಳ ಒಂದೇ ಅಳ್ತೆಲಿ. ಕೊಯ್ದ್‌ದ್ ಅದರ ಒಂದು ಪುಡೆನ

ಹೆರ್ಮಣ್ಣೆನ ಮುಳ್ಳುನ ಹಾಂಗೆ ಚೂರಿಲಿ ಕೊಯ್ದ್‌ದ್, ಒಂದು ರೆಂಬೆನ ಮೇಲೆ ಮತ್ತೊಂದು ರೆಂಬೆನ ಮಾಡಿಗೆ ಹೆಂಚ್ ಜೋಡ್ಸಿದಾಂಗೆ ಜೋಡ್ಸಿದ್ ಪೊರ್ಲುನ ಮಂಟಪ ಮಾಡ್ದೊ. ಮಂಟಪದ ಮೇಲೆ ಗೋಪುರದಾಂಗೆ ಬಾಳೆ ರೆಂಬೆಂದಳೇ ಅಲಂಕಾರ ಮಾಡ್ದೊ. ಬಾಳೆ ರೆಂಬೆಗಳ ಜೋಡ್ಸಿಕೆ ಕಾಡಿಲಿ ಸಿಕ್ಕುವ ಮುಳ್ಕರೆಕಾಯಿ ಗೆಲ್ಲ್‌ಲಿದ್ದ ಮುಳ್ಳುಗಳ ಗೀಸಿ ಉಪಯೋಗಿಸ್‌ತಿದ್ದೊ. ಬಾಳೆ ದಂಡ್‌ಗಳ ಜೋಡ್ಸಿಕೆ ಬೆದ್ರ್‌ನ ಕಡ್ಡಿನ ನುಣ್ಣಂಗೆ ಗೀಸಿ ಆಣಿನಾಂಗೆ ಚೂಪು ಮಾಡಿ ಇಸ್ತಿದ್ದೊ. ಆ ಗುಂಡನ ನೋಡ್ದೇ ಒಂದು ಕುಸಿ. ಎಷ್ಟ್ ನೋಡ್ರೂ ಸಾಕಾಗ್‌ತಿತ್ಲೆ. ಬಿಳಿ ಬಾಳೆ ದಿಂಡ್ ತಿರ್ಳ್ ಪಳಪಳ ಹೊಳ್ದದೆ. ರೆಂಬೆಗಳೂ ಅಷ್ಟೆ ಬೆಳ್ಳಂಗೆ ಇದ್ದದರ ಮಾತ್ರಾ ಉಪಯೋಗಿಸ್ತಿದ್ದೊ.

ಆ ಸಮಯಲಿ ಅಕ್ಕನ ದೊಡ್ಡ ಮಗ ಮಹಾದೇವಿ ಒಂದುವರೆ ವೊರ್ಸದ ಕೂಸು. ಅದ್ಕೆ ಭಾವ, ಗಿಳಿ ಹಸ್ರ್ ಬಣ್ಣದ, ಜರಿ ಇದ್ದ ರೇಶ್ಮೆ ಅಂಗಿ ಹೊಲ್ಸಿದ್ದೊ. ತಿಮ್ಮಕ್ಕತ್ತಿಗೆನ ಮಗಳ್ ಸರೋಜನಿಗೆ ಆಗ ಆರ್ ವೊರ್ಸ. ಅದ್ಕುನೂ ಸೆಟಿನ್ ಬಟ್ಟೆನ ಲಂಗ ತಂದಿದ್ದೊ. ಅವು ಜವುಳಿ ತೆಗ್ಯಕೆ ಪುತ್ತೂರಿಗೆ ಹೋಗಿ, ಚಂದು ಶೆಟ್ರ ಅಂಗ್ಡಿಂದ ಅಕ್ಕಂಗೂ ಭಾವನ ಮೂರು ತಂಗೆಕಳಿಗೂ ಜರಿ ಸೀರೆನ ತೆಗ್ದಿದ್ದೊ. ಆಗ ರೇಶ್ಮೆ ಸೀರೆಗ ಇಪ್ಪತ್ತೈದ್ ರೂಪ್ಯಾಗೆ ಸಿಕ್ತಿತ್ತ್. ಅಕ್ಕ ನಂಗುನೂ ಬಟ್ಟೆ ತರಕಾಗಿತ್ತ್‌ಂತ ಭಾವನೊಟ್ಟಿಗೆ ಹೇಳ್ತ್. ಆದರೆ ತಕೊಂಡೋದ ದುಡ್ಡು ಎತ್ತಿತ್ಲೇಂತ ನಂಗೆ ತೆಗ್‌ತ್ಲೆ ಗಡ. ಆ ಮೊದ್ವೆಗೆ ಬಾಕನ ಅಣ್ಣ ಸುಳ್ಯಂದ ಮೂರು ಗೇಸ್ ಲೈಟ್, ಮತ್ತೆ ನಮ್ಮ ಮನೆಲಿದ್ದ ಗ್ರಾಂಪೋನು ಪೆಟ್ಟಿಗೆ ತಂದಿತ್ತ್. ಆಗನ ಕಾಲದ ಗ್ರಾಂಪೋನು ಪೆಟ್ಟಿಗೆ, ದೊಡ್ಡ ಜಾಯಿಕಾಯಿ ಪೆಟ್ಟಿಗೆನ ಹಾಂಗೆ ಇತ್ತ್. ಅದ್ಕೆ ನಡುಲಿ ರೆಕಾರ್ಡ್ ಪ್ಲೇಟ್ ಸಿಕ್ಕಿ ಸಿಕೆ ಸಣ್ಣ ಆಣಿ ಇತ್ತ್. ಅರ್ಧ ಅಡಿ ವ್ಯಾಸದ ಚಕ್ರದಾಂಗೆ ಇದ್ದ ಗ್ರಾಂಪೋನ್ ಪ್ಲೇಟ್, ಅದರ ನಡುಲಿದ್ದ ಒಟ್ಟೆನ ಆಣಿಗೆ ಸಿಕ್ಕಿಸಿ, ಕೈಲಿ ಗಾಳಿ ಹಾಕಿಕೆ ಒಂದು ಕೈ ಹಿಡಿ ಇತ್ತ್. ಪ್ಲೇಟ್ ಇಸಿದ ಮೇಲೆ, ಆ ಪೆಟ್ಟಿಗೆನ ಒಂದು ಪುಡೆಲಿದ್ದ ದನಿಬಾವ ಪೆಟ್ಟಿಗೆನ, ಅದಕ್ಕೆ ಸೌಂಡ್ ಬಾಕ್ಸ್‌ಂತ ಹೇಳ್ತಿದ್ದೊ, ಅದರ ಕೊಡಿಲಿ ಚೂಪುನ ಸೂಜಿ ಮೊನೆ ಹಾಂಗಿದ್ದ ಸಣ್ಣ ಆಣಿನ ಸಿಕ್ಕಿಸಿ, ಅದರ ಸ್ಕ್ರೂನ ಟೈಟ್ ಮಾಡಿ, ಪ್ಲೇಟ್‌ನ ಪುಡೆಲಿರುವ ಗೆರೆನ ಮೇಲೆ ಸೂಜಿಬಾವ ಹಾಂಗೆ ಸೌಂಡ್ ಬಾಕ್ಸ್‌ನ ಇಸಿರೆ ಗ್ರಾಂಪೋನ್ ಹಾಡ್‌ತಿತ್ತ್. ಅಣ್ಣನ ಹಕ್ಕಲೆ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು, ರಘುಪತಿ ರಾಘವ ರಾಜಾರಾಂ, ಮಾಡು ಸಿಕ್ಕದಲ್ಲಾ ಮಾಡಿನ ಗೂಡು ಸಿಕ್ಕದಲ್ಲಾ, ಸೂತ ಪುತ್ರ ಕರ್ಣ ನಾಟಕದ ಎರ್ಡ್ ಭಾಗಗ, ಬೇರೆ ಮೂರ್ನಾಕ್ ಮಳೆಯಾಳಿ ಪದಗಳ ಪ್ಲೇಟ್‌ಗ ಇದ್ದೊ. ಹಾಕಿದರನೇ ಮತ್ತೆ ಮತ್ತೆ ಹಾಕ್‌ತಿದ್ದೊ. ಗಾಳಿ ಮುಗ್ಯಕಾಕನ ದನಿನೂ ಕಮ್ಮಿ ಆಗಿ ಗೊರಗೊರ ಹೇಳ್ತಿತ್ತ್. ಆಗ ನಾವು ಅದ್ಕೆ ಮತ್ತೆ ಗಾಳಿ ಹಾಕಿ, ಹಾಡ್ ಸರಿಯಾಕೆ ಮಾಡ್ತಿದ್ದೊ. ಹಳ್ಳಿಯವ್ಕೆ ಆ ಪೆಟ್ಟಿಗೆ ಒಂದು ಸೋಜಿಗದ ಸೊತ್ತು ಆಗಿತ್ತ್. ದೊಡ್ಡ ಮಾಂವನ ಹೆಣ್ಣ್, ದೊಡ್ಡತ್ತೆ ಅದರ

ನೋಡಿ, 'ರಾಮಣ್ಣ, ಅಯಿನ ಉಳಾಯಿ ಏರ್ ಕುಳ್ಳ್‌ತೇರ್? ಎಂತ ಅಣ್ಣನ ಕೇಳಿದೊ. ಆಗ ಮಾಂವಂಗೆ ಸಿಟ್ಟ್‌ಬಂದ್, 'ಅಯಿನ ಉಳಯಿ ನಿನ್ನ ಅಮ್ಮೆ ಕುಳ್ಳ್‌ತ್ತೇರ್' ಎಂತ ಅತ್ತೆನ ಮೇಲೆ ಪಿಸ್ರ್‌ಂದ ಹೇಳಿದೊ.

ಆ ಮೊದ್ವೆಲಿ ಗಂಡನ ಕಡೆನ ಒಂದ್ ಹೆಂಗ್ಸ್‌ನ ಚಿನ್ನದ ಚಕ್ರಸರ, ಇರ್ಳ್ ಮೊಲ್ಗಿ ಬೊಳ್ಪುಗೆ ಎದ್ರಿಕನ ಕಾಣೆ ಆತ್. ಆ ಹೆಣ್ಣ್‌ನ ಮೊರ್ಡಟ ತಡ್ಯಕಾಗದೆ ಎಲ್ಲೋವು ಹುಡ್ಕಿದೊ. ಅದರ ಗಂಡ ಮೊದ್ವೆಗೆ ಬಾಕನ ಬೇರೆ ಕಡೆಂದ ಕಡತಂದ್ ಆ ಸರನ ಹೆಣ್ಣ್‌ಗೆ ಕೊಟ್ಟಿತ್ತ್. ಈ ಸಂಗತಿ ಅಂವಂಗೆ ಗೊತ್ತಾಗಿ, ಅಂವ ಅದ್ಕೆ ದನಕ್ಕೆ ಬೊಡ್ಡಾಂಗೆ ಬೊಡ್ತ್. ನಾವೆಲ್ಲಾ ಕಣ್ಣ್ ಕಣ್ಣ್ ಬುಟ್ಟ್ ನೋಡ್ದೊ. ಆಗ ಭಾವ ಮತ್ತೆ ಅಣ್ಣ ಅದರ ಬುಡ್ಸಿ, 'ಹೆಣ್ಣ್‌ನ ಕೊಲ್ಬಡಬಲ'–ಂತ ಹೇಳಿ, ಎಲ್ಲೋರ ವಿಚಾರ್ಸಿದೊ. ಗುಮಾನಿ ಮೇಲೆ ಒಂದೆರ್ಡ್ ಹೆಣ್ಣ್‌ಗಳ, ಬೇರೆ ಹೆಣ್ಮಕ್ಕಳೊಟ್ಟಿಗೆ ಹೇಳಿ, ಒಳಗೆ ಕರ್ಕೊಂಡೋಗಿ, ಅವರ ಸೀರೆ ಬಿಚ್ಚಿಸಿ, ಜಪ್ತಿ ಮಾಡ್ಸಿಕನ ಒಂದ್ ಹೆಂಗ್ಸ್‌ನ ಸೀರೆ ನೆರಿನ ಬಾಳೆಕ್ಕಾ ಒಳಗೆ ಚಕ್ರ ಸರ ಸಿಕ್ತಿತ್. ಆ ಕಾಲಲಿ ಹೆಣ್ಮಕ್ಕ ಸೀರೆನ ನೆರಿಗೆ ಹಿಡ್ದ್, ಮೇಲೆನ ಭಾಗನ ಮೊಡ್ಚಿ, ಬಾಳೆಕಾಯಿನ ಹಾಂಗೆ ಮಾಡಿ, ಸಿಕ್ಸ್‌ತಿದ್ದೊ. ಆ ಹೆಂಗ್ಸ್‌ಗೆ ಎಲ್ಲೋವು ಬೈದೊ.

ಮೊದ್ವೆಗೆ ಹದ್‌ನೈದ್ ದಿನ ಮುಂದೆನೇ, ಅತ್ತಿಗೆಕ ಕೆಮ್ಮಣ್ಣ್ ತಂದ್‌ದ್ ಗಾಳ್ಸಿ, ಇಜ್ಜೆಲಿಲಿ ರಾಸಿ ಹಾಕಿ, ಮೊಣ್ಣ್ ಹುಳಿ ಬಾಕೆ, ದಡ್ಡಾಲ ಮರದ ಕೆತ್ತೆಂದ ಮಾಡ್ದ ನೋಳಿನೀರ್ನ ಹೊಯ್ದ್‌ದ್ ಇಸ್ತಿದ್ದೊ. ಎರ್ಡ್ ದಿನ ಕಳ್ದ ಮೇಲೆ ಕೊಟ್ಟ್‌ಲಿ ಅದರ ಪೊರ್ಲ್ ಕೊಚ್ಚಿದ್ ಕಲ್ಸ್‌ತಿದ್ದೊ. ಆಗ ಆ ಮೊಣ್ಣ್ ಅಂಟ್ ಅಂಟಾಗಿ ಇರ್ತಿತ್ತ್. ಮನೆನ ಗೋಡೆಗಳಿಗೆ ಆ ಮೊಣ್ಣುನ ತೆಳ್ಳಂಗೆ ಮೆತ್ತಿ, ನುಣ್ಣಂಗಿದ್ದ ಕಲ್ಲ್‌ಲಿ ಅರ್ಯತಿದ್ದೊ. ಆಗ ಗೋಡೆ ಎಲ್ಲಾ ಫಳಪಳಾಂತ ಹೊಳ್ಯತಿತ್ತ್. ಗಟ್ಟದ ಹರ್ಳ್ ದಂಟ್‌ನ ಮುರ್ದ್ ತಕಂಡ್, ಅದರ ಎಲೆನ ಬುಡ್ಸಿತೆಗ್ದ್, ನಾರ್ ಮಾತ್ರಾ ಬುಡ್ತಿದ್ದೊ. ಆಗ ಅದ್ ಕೋಳಿ ಕಾಲ್‌ನ ಹಾಂಗೆ ಕಾಂಬತಿತ್ತ್. ಅದರ ಮಂದದ ಸುಣ್ಣಲಿ ಮುಳ್ಗಿಸಿ, ಗೋಡೆಲಿ ಸಾಲ್‌ಲಿ ಒತ್ತುತಿದ್ದೊ (????) ಆಗ ಗೋಡೆಲಿ ಪೊರ್ಲು ಚಿತ್ರ ಕಾಂಬತಿತ್ತ್. ಹೀಂಗೆ ಮನೆನ ಗೋಡೆನ ಸಿಂಗಾರ ಮಾಡಿ, ನೆಲನನೂ ಕೆಮ್ಮಣ್ಣ್ ಹಾಕಿ ಅರ್ದ್ ನುಣ್ಣನೆ ಮಾಡ್ತಿದ್ದೊ. ಕಾಯೆ ಚೊಪ್ಪುನ ಸುಟ್ಟ್‌ದ್, ಗುದ್ದಿ ಹೊಡಿ ಮಾಡಿದ ಕರಿನ ಸೆಗಿಣಿಗೆ ಬೆರ್ಸಿ ಕಲ್ಸಿ ನೆಲಕ್ಕೆ ಸೆಗಣಿ ಕೆರ್ಯೊತಿದ್ದೊ. ಅಕೆರಿಗೆ ಬೀಜದ ಎಣ್ಣೆ ಹಾಕಿ ಹಾಳೆ ತೊಟ್ಟ್‌ಲಿ ಕೆರ್ಯೊತಿದ್ದೊ. ಆಗ ನೆಲ ಸಿಮೆಂಟ್‌ನ ಹಾಂಗೆ ಪಳಪಳ ಹೊಳ್ಯತಿತ್ತ್. ಹರ್ಸಾಯ ಹಿಂದೆನ ದಿನ ಮನೆ ಸುತ್ತ ಮುತ್ತ ಇಜ್ಜೆಲಿಗೆ ಸೆಗಣಿ ಗುಡ್ಸಿ, ಮನಾರ ಮಾಡ್ದೊ. ಮನೆನ ಎದ್ರ್ ಇದ್ದ ದೊಡ್ಡ ಇಜ್ಜೆಲಿಲಿ, ಮಾಂವ, ಭಾವ, ಕಾಪಿಲ ಮೂಲೆ ದೊಡವನ ಎರ್ಡ್ ಮಂಜಂದರ್ ಸೇರಿ, ಕಮ್ಮುನ ಕಂಬಗಳ ನೆಟ್ಟ್, ಬೆದ್ರ್‌ನ ಅಡ್ಡ ಹಾಕಿ, ಮಡ್ಲ್‌ನ ತಟ್ಟಿಗಳ ಅದರ ಮೇಲೆ ಹೊದಿಸಿ, ಚಪ್ಪರ ಹಾಕಿದೊ. ಮಡ್ಲ್‌ನ ತಟ್ಟಿಗಳ ಮಾಂವನೇ ತಯಾರ್ಸಿ, ಹಟ್ಟಿ ಅಟ್ಟಲಿ ಒಟ್ಟಿದ್, ಆರ್ ತಿಂಗ

ಹಿಂದೆನೇ ಜೋಕೆ ಮಾಡಿದ್ದೊ. ಚಪ್ಪರ ಹಾಕಿದ ಮೇಲೆ ಜಾಲ್‌ನ ಮೂಡು ದಿಕ್ಕ್‌ಲಿ ಎರ್ಡ್ ಬೆದ್ರ್‌ನ ನೆಟ್ಟ್, ಗೊನೆ ಹಾಕಿದ ಇಡೀ ಬಾಳೆಗಳ ಎರ್ಡ್ ಕಡ್ಡ್‌ದ್ ತಂದ್ ಬಾಗಿಲ್ನ ಎರ್ಡ್ ಪುಡೆ ನಿಲ್ಸಿ ಕಮಾನ್‌ನ ಹಾಂಗೆ ಬಾಳೆಲೆಗಳ ಸೇರ್ಸಿ ಕಟ್ಟಿದ್ದೊ. ಅದ್ಕೆ ಮಾಯ್ನ ಸೊಪ್ಪುನ ತೋರಣ ಕಟ್ಟಿ, ತೂಗಿಸಿದ್ದೊ. ಸುಳ್ಯಂದ ಅಣ್ಣ ತಂದ ಬಣ್ಣದ ಕಾಗ್ದಂದ ನಾನೂ, ಅಣ್ಣನೂ ಸೇರಿ ಕತ್ರಿಸಿ, ಬಕ್ಕ್‌ನ ಬೊಳ್ಳಿಗೆ ಅದರ ಸಾಲಲಿ ಅಂಟಿಸಿ, ಅದರ ಚಪ್ಪರದಡಿಗೆ ಕಟ್ಟಿದೊ.

ಮಾಂವ ಮತ್ತೆ ಭಾವ ಮಜಲ್ ಗದ್ದೆಲಿ ಪದಂಜಿ ಬೆಳ್ಸ್‌ತಿದ್ದೊ. ವೊರ್ಸಕ್ಕೆ ಬೇಕಾದಸ್ಟ್ ಪದಂಜಿ, ಉದ್ದು, ಎಳ್ಳ್, ಚಿಬೆರಿ, ಬೀಜ ಬಿತ್ತಿ ಬೆಳ್ಸ್‌ತಿದ್ದೊ. ಅತ್ತೆ ದೊಡ್ಡ ಮೊಣ್ಣ್‌ನ ಮಡ್ಕೆನ ಓಡ್‌ಲಿ, ಕೊಟಗೆಲಿ ಇದ್ದ ಒಲೆಲಿ, ಪದಂಜಿನ ಹೊರ್ದ್, ಹೊಸ ಮೊಂದ್ರಿಲಿ ಹಾಕಿ, ಅದ್ಕೆ ತೆಳುಲಿ ಕಾಯೆಣ್ಣೆ, ಪೂಜ್‌ತಿದ್ದೊ. ಅದರ ರಾಗಿ ಕಲ್ಲ್‌ಲಿ ಹಾಕಿ, ರಾಗಿ ಕಲ್ಲ್‌ನ ಮೇಲೆನ ಕಲ್ಲ್‌ನ ಅರ್ಧ ಎತ್ತಿ, ಹಗುರಲಿ ಬೀಸಿಕನ, ಪದಂಜಿ ಬೇಳೆ ಆಗ್ತಿತ್ತ್. ಅದರ ತೆಗ್ದ್ ಹೊಡ್ಕಿ ಪದಂಜಿ ಬೇಳೆನ ಪ್ಯಾಸಕ್ಕೆ ಉಪಯೋಗಿಸ್ತಿದ್ದೊ. ನಡುವಣ ಮಾಂವ ಕಬ್ಬು ಬೆಳ್ಸ್‌ತಿದ್ದೊ. ವೊರ್ಸದ ಖರ್ಚಿಗೆ ಬೇಕಾದ ಬೆಲ್ಲನ ಮಾಡ್ತಿದ್ದೊ. ತೋಟದ ನಡುಲಿ ಒಲೆ ಹಾಕಿ, ಮೊದ್ವೆ ಅಡಿಗೆ ಮಾಡ್ತಿದ್ದೊ. ಕಲಾಯಿ ಹಾಕಿದ ತಾಮ್ರದ ಕಡಾಯಿಲಿ, ಪದಂಜಿ ಪಾಯ್ಸ ಮಾಡ್ತಿದ್ದೊ. ಅದ್ಕೆ ಬಣ್ಣಂಗಾಯಿ ಕಾಯೆನ ಹಾಲ್ ತೆಗ್ದ್, ಹಾಕಿ ಮನೆಲಿ ಮಾಡ್ದ ಬೆಲ್ಲ ಹಾಕಿ, ಮಾಡ್ದ ಪಾಯಿಸ ಭಾರೀ ರುಚಿ ಆಗ್ತಿತ್ತ್. ಸೋಂತೆ ಕ್ಯಾ, ಅಲ್ಸಂಡೆ, ಕೇನೆ, ತೊಂಡೆಕ್ಯಾ ಎಲ್ಲಾ ಅವೇ ಬೆಳ್ಸುನ ಕಾರ್ಣ, ನೆಟ್ಟಿಕಾಯಿ ಬೇರೆ ಕಡೆಂದ ತಾತಿತ್ಲೆ. ಸೋಂತೆ ಕ್ಯಾನ ಹುಳಿ ಗೈಪು, ತೊಂಡೆಗೆ ಬೀಜದ ಬೆಂಡ್ ಹಾಕಿದ ಆರ್ಸಿದ ಗೈಪು, ಚಿಬೆರಿ ಮೂಂಡಿ ಹಾಕಿ ಮಾಡ್ದ ಗಸಿ, ಕೇನೆ ಗಸಿ, ಇದೆಲ್ಲಾ ಮೊದ್ವೆ ಊಟಕ್ಕೆ ಮಾಡ್ತಿದ್ದೊ. ಮನೆಲೆ ಮಾಡ್ದ ನೆಕ್ಕರೆ ಮಾಯ್ನಕ್ಯಾನ ಉಪ್ಪನ ಕ್ಯಾ ಇರ್ತಿತ್ತ್. ಆಗನ ಕಾಲಲಿ ಟೊಮೆಟೊ, ಬಟಾಟೆ, ಕೆರೆಟ್‌ಂತೇಳ್ರೇ ಯಾರೂ ನೋಡೆ ಇತ್ಲೆ.

ಮಾಂವ ಮತ್ತೆ ಭಾವ ತುಂಬಾ ನೆಟ್ಟಿಕ್ಯಾ ಬೆಳ್ಸ್‌ತಿದ್ದೊ. ಮಳೆ ಬೀಳಿಕಾಕನ ಮುಳಿ ಪಡ್ಪುಲಿ ಹರ್ಗಿದ ಗೊಬ್ಬರಲಿ, ಮುಳ್ಳು ಸೋಂತೆ ಬೀಜ ಹಾಕಿ, ಚಪ್ಪರ ಹಾಕ್ತಿದ್ದೊ. ಕೆಂಬುಡೆ, ಕುಂಬಳ ಪಟ್ಲಕ್ಯಾ, ಹೀರೆ ಕ್ಯಾ–ಇದರೆಲ್ಲಾ ಬೇರೆ ಬೇರೆ ಚಪ್ಪರ ಹಾಕಿ ಬೆಳ್ಸ್‌ತಿದ್ದೊ. ಅವರ ಮನೆನ ಮೇಲಿನ ಪುಡೆಲಿ ತುಂಬಾ ಜಾಗೆ ಇತ್ತ್. ಅಲ್ಲಿ ಅವು ಬೆಂಡೆ, ಅಲ್ಸಂಡೆ, ಬದನೆ, ಹರ್ವೆ ಸೊಪ್ಪು ತುಂಬಾ ಬೆಳ್ಸ್‌ತಿದ್ದೊ. ತೋಟದೊಳಗೆ ಇದ್ದ ಕೆರೆ ನೀರ್‌ನ ಚೊಂಟೆ ಮೊಗ್ಚಿ ನೆಟ್ಟಿಕ್ಯಾ ಸಾಲ್‌ಗೆ ಬುಡ್ತಿದ್ದೊ. ಅಲ್ಲಿಂದ ಹಾಳೆಲಿ ಗೋಂಚಿ ಗೋಂಚಿ ಚೇಂಪುತಿದ್ದೊ. ಹೀಂಗೆ ಬೆಳ್ಸಿದ ನೆಟ್ಟಿಕ್ಯಾಗಳ ಗೋಣಿಲಿ ತುಂಬಿಸಿ ಪುತ್ತೂರು ಸಂತೆಗೆ ತಕೊಂಡೋಗಿ ಮಾರ್ತಿದ್ದೊ. ಕಾಪಿಲ ಮೂಲೆಲಿ ನನ್ನ ದೊಡವನ ಮನೆ ಇತ್ತ್. ಅವರ ಮಜಲ್ ಗದ್ದೆಲಿ ಬೇಸಗೆಲಿ ಹತ್ತಿಪ್ಪತ್ತ್ ಸಾಲ್ ಮೆಣ್ಸ್ ಬೆಳ್ಸ್‌ತಿದ್ದೊ. ಅದರ ಎಡೆ, ಎಡೆಲಿ ಜೋಳ ಬೆಳ್ಸ್‌ತಿದ್ದೊ.

ಮನೆ ಖರ್ಚಿಗೆ ಬೇಕಾದ ಮೆಣ್ಸ್‌ನ ಇಸಿಕಂಡ್ ಉಳ್ದದರ ಮಾರ್‌ತಿದ್ದೊ. ಮಳೆಗಾಲಕ್ಕೆ ಬೇಕಾದ ಕಳ ಸೋಂತೆನ ತುಂಬಾ ಮಾಡ್ತಿದ್ದೊ. ಅವರ ಮನೆ ಪಕ್ಕಲಿ ಉದ್ದದ ಹಜಾರ ಇದ್ದ್, ಎರ್ಡ್ ಮಾಡ್ನ ಒಂದು ಕೊಟಗೆ ಇತ್ತ್. ಅಲ್ಲಿ ಭತ್ತದ ಕಡಿಕೆ, ಅಡಿಕೆ ದಾಸ್ತಾನ್ ಮಾಡ್ತಿದ್ದೊ. ಅಲ್ಲಿ ಮಳೆಗಾಲಕ್ಕೆ ಬೇಕಾದ ಹಣ್ಣ್ ಸೋಂತೆಗಳ, ನಾಕ್ ಮೂಲೆಲಿ ಬೆದ್ರ್‌ನ ಕಂಬ ಇಸಿ, ಅದ್ಕೆ ಬಾಳೆ ನಾರ್‌ಲಿ ಕಟ್ಟಿ ಇಸ್ತಿದ್ದೊ. ಮಳೆಗಾಲ ಇಡೀ ಗೈಪುಗೆ ಈ ಸೋಂತೆಲೆ ಸುದಾರ್ಸ್‌ತಿದ್ದೊ. ಅದರೊಟ್ಟಿಗೆ ಹಲ್ಸಿನ ಬೀಜನ ಹಾಕಿ ಗೈಪು ಮಾಡ್ತಿದ್ದೊ. ಮೊಣ್ಣ್ ಮತ್ತೆ ಬೂದಿ ಬೆರ್ಸಿ ಹಲ್ಸಿನ ಬೀಜಕ್ಕೆ ಮೆತ್ತಿ ಒಣ್ಗಿಸಿ ಇಸ್ತಿದ್ದೊ. ಆಗ ಅದ್ ಹಾಳಾಗ್‌ತಿತ್ಲೆ. ಇದರೆಡೆಲಿ ಕೇನೆ, ಕೆಸನ ಓಕು, ಕೆಂಬುಡೆ, ಕುಂಬಳ ಮಳೆಗಾಲಕ್ಕೆ ಜೋಕೆ ಮಾಡ್ತಿದ್ದೊ. ಆಗ ಅವ್ಕೆ ಹೇಳಿಕೊಳ್ಳುವಸ್ಟ್ ಶ್ರೀಮಂತಿಕೆ ಇತ್ಲರೂ, ಸುಖಲಿ ಇರ್ತಿದ್ದೊ. ಉಪ್ಪು ಮಾತ್ರ ಅಂಗ್ಡಿಂದ ತಾತಿದ್ದೊ. ಉಳ್ದದರ ಅವೇ ಮಾಡ್ತಿದ್ದೊ. ಹಳ್ಳಿನ ಜೀವನ ಹೇಂಗೇಂತ ನಾ ನನ್ನ ಅಕ್ಕನ ಮನೆಲಿ ಕಲ್ತೆ. ಅದರ್ಲಿ ನಂಗೆ ಕುಸಿನೂ ಇತ್ತ್. ಇದೆಲ್ಲಾ ನನ್ನ ತಮ್ಮಂದರಿಗೆ ಗೊತ್ತಿಲ್ಲೆ.

ಅತ್ತಿಗೆಕ ಕಾಡಿಗೆ ಸೊಪ್ಪಿಗೆ ಹೋಕನ ಸಿಕ್ಕಿದ ನೋಕಟೆಕ್ಯಾಗಳ ಮೊಟ್ಟೆಲಿ ಕಟ್ಟಿಕಂಡ್ ಮನೆಗೆ ತಾತಿದ್ದೊ. ಅದರ ಮೊಣ್ಣ್‌ನ ಓಡಿಲಿ ಹೊರ್ದ್, ಗುಂಡ್ ಕಲ್ಲ್‌ಲಿ ಗುದ್ದಿ, ಅದರ ಚೋಲಿನ ಬುಡ್ಸಿ, ಒಳಗೆನ ಹೊರ್ದ ಬೆಂಡ್‌ನ ಕಡ್ಕಲ್ ಗುಂಡಿಲಿ ಹಾಕಿ, ಮರದ ಒಣ್ಕೆಲಿ ಮಿದ್ದ್, ಗೋಟ್ ಕ್ಯಾ, ಬೆಲ್ಲ ಹಾಕಿ ಗುದ್ದಿ, ಉಂಡೆ ಕಟ್ಟಿ ನಂಗೆ ತಿಂಬಕೆ ಕೊಡ್ತಿದ್ದೊ. ಮನೆನ ಹಿಂದೆ ಇದ್ದ ಸೊಪ್ಪುನ ಗುಡ್ಡೆಲಿ ಮಂಜೊಟಿ ಕ್ಯಾನ ಮರ ಇರ್ತಿತ್ತ್. ನಾ ಆ ಮಂಜೊಟಿ ಮರದಡಿಲಿ ಬಿದ್ದ ಮಂಜೊಟಿ ಕ್ಯಾನ ಹೆರ್ಕಿ, ಜೋಬುಲಿ ತುಂಬಿಸಿ, ಸುಳ್ಯಕೆ ಬಾಕನ ತಾತಿದ್ದೆ. ಗಿಣಿನ ಕೊಕ್ಕುನಾಂಗೆ ಕೆಂಪು ಇದ್ದ ಆ ಮಂಜೊಟಿಕ್ಯಾನ ಚೆನ್ನಮಣೆ ಆಟ ಆಡಿಕೆ ಉಪಯೋಗಿಸ್‌ತಿದ್ದೆ.

ಪದಂಜಿ ಕ್ಯೊದ್ ಒಣ್ಗಿಸಿಕಾಕನ ದಿನಾ ಬೊಳ್ಪುಗೆ ಪದಂಜಿ ಗಂಜಿ ಮಾಡ್ತಿದ್ದೊ. ದೊಡ್ಡ ಮೊಣ್ಣ್‌ನ ಮಡ್ಕೆಲಿ ಒಂದ್ಸೇರ್ ಪದಂಜಿನ ಬೇಯಕೆ ಹಾಕಿ, ಅದ್ಕೆ ಒಂದು ಕಾಯೆನ ಹೂಗೆ ಒಂದು ಮುಷ್ಠಿ ಬೆಳ್ತಕ್ಕಿ ಹಾಕಿ, ಕಡ್ಕಲ್‌ಲಿ ಕಡ್ದ್ ಸೇರ್ಸ್‌ತಿದ್ದೊ. ರುಚಿಗೆ ಬೇಕಸ್ಟ್ ಉಪ್ಪು ಹಾಕಿ, ಅದ್ ಬೆಂದ್ ಒರ್ವಾಕನ ಇಳ್ಗ್‌ತಿದ್ದೊ. ನಂಗೆ ಆ ಪದಂಜಿ ಗಂಜಿ ಬಾಳ ಇಷ್ಟ. ಮೂರು ಹೊತ್ತು ಅದರನೆ ತಿಂಬತಿದ್ದೆ. ತಿಂಬಕೆ ಕಮ್ಮಂಗೆ ಆಗ್ತಿತ್ತ್. ಶರೀರಕ್ಕೂ ತುಂಬಾ ತಂಪುಗಡ. ಅಕ್ಕನ ಮನೆಲಿ ದಿನಾ ಒಂದು ಮಡ್ಕೆ ತುಂಬಾ ಅಂಬೆಲಿ ಮಾಡ್ತಿದ್ದೊ. ರಾಗಿ ಹೊಡಿನ ಗಂಜಿ ತೆಳಿಲಿ ಇರ್ಸ್ ಮೊಲ್ಗಿಕಾಕನ ಕಲ್ಸಿ ಇಸ್ತಿದ್ದೊ. ಮೊರ್ದಿನ ತಣೆಣನ ಕೊದ್ಯಕಿಸಿ, ಅದ್ಕೆ ಈ ಹುಳಿ ಬಂದ ರಾಗಿ ಹೊಡಿನ ಬಂದನ ಹೊಯ್ದ್, ಸೆಡೆಲಿ ಪೊರ್ಲು ತಿರ್ಗ್ಸ್‌ತಿದ್ದೊ. ಬೇಕಷ್ಟ್ ಉಪ್ಪು ಹಾಕಿವೆ. ಆ ಅಂಬೆಲಿಗೆ ನೆಂಜಿಕಂಬಕೆ ಪೂಂಬೆ ಪೊಜ್ಜಿ, ತಿಮರೆ ಪೊಜ್ಜಿ, ಕುಡುನ ಪೊಜ್ಜಿ, ಇಲ್ಲರೆ ಬದನೆ ಬೇಸಿ ಅದರ ಪೊಜ್ಜಿ ಮಾಡ್ತಿದ್ದೊ. ಅದರೊಟ್ಟಿಗೆ ಮೊಸ್ರ್ ಇಲ್ಲರೆ ದಪ್ಪ ಮೊಜ್ಜಿಗೆ ಕೊಡ್ತಿದ್ದೊ.

ನೆಂಪುಗಳ ರಂಗೋಲಿ

ಅಕ್ಕನ ಮನೆಲಿ ಬೆದ್ರ್‌ನ ಒಂದು ಮೊಜ್ಜಿಗೆ ಗುತ್ತಿ ಇತ್ತ್. ಬೊಳ್ಪುಗೆ ಆ ಗುತ್ತಿಲಿ ಮೊಸ್ರ್ ತುಂಬಿಸಿ ಕಡ್ಯತಿದ್ದೊ. ಅದರ ಕಡ್ಯಕೆ ಕಮ್ಮುನ ತಟ್ಟೆಂದ ಮಾಡ್ದ ಮೊಂತು ಇತ್ತ್. ಕಮ್ಮುನ ತಟ್ಟೆನ ಗೀಸಿ, ಉದ್ದದ ಕೋಲುನ ಹಾಂಗೆ ಮಾಡಿ, ಅದರ ಕೊಡಿಗೆ ಅಂಗೈ ಅಗಲದ ಚಿಪ್ಪಿನ ತಕಂಡ್, ಅದ್ಕೆ ಒಂದು ಒಟ್ಟೆ ಮಾಡಿ ಕಂಕಣೆ ಸಿಕ್ಸ್‌ತಿದ್ದೊ. ಮೊಂತು ಮಜ್ಜಿಗೆ ಗುತ್ತಿಂದ ಹಂಞ ಹೆಚ್ಚ್ ಉದ್ದ ಇರೊಕು. ಅತ್ತಿಗೆಕ ಮೊಜ್ಜಿಗೆ ಕಡ್ಯಕಾಕನ ಈ ಪದ ಹೇಳ್ತಿದ್ದೊ.

ದಾರ್ ಬೋರ್ ಬೊಮ್ಮಕ್ಕ, ಮೊಸ್ರ್ ಕಡಿಯೊ ತಿಮ್ಮಕ್ಕ.
ನಾಲ್ ಕೋಲ್ ಕನ್ನೆಟಿ, ರಗರಗ ರಂಬೆ
ಬೊಗರಿತ ಬೇಳೆ, ಇಟ್ಟೆಲ್‌ತ ಮಂದೆ
ಆಯೆರೆಗ್ ಪೊನಾಗ, ಆನೆ ಬೋಡು ಪಂಡಾಳ್
ಈಯೆರೆಗ್ ಬನ್ನಾಗ, ಕುದ್ರೆ ಬೋಡು ಪಂಡಾಳ್
ಒಂಜಿ ಕೋಲು ದೆತ್ತೊಂದು ಬಲಿತ್ರಾಳ್.

ಈ ಪದದ ಅವು ಹೇಳಿಕಾಕನ ನಾನೂ ಅವರೊಟ್ಟಿಗೆ ಹಾಡ್ತಿದ್ದೆ. ಒಮ್ಮೊಮ್ಮೆ ನಾನೂ ಹಟ ಮಾಡಿ, ಮಜ್ಜಿಗೆ ಗುತ್ತಿ ತಕಂಡ್, ಅವು ಹೇಳ್ದಾಂಗೆ ಪದ ಹೇಳಿಕಂಡ್, ಮೊಜ್ಜಿಗೆ ಕಡ್ಯತಿದ್ದೆ. ಬೆಣ್ಣೆ ಬಾಕಾಕನ ಅವು ನನ್ನ ಕೈಯಿಂದ ತಕಂಡ್, ಬೆಣ್ಣೆ ಇದ್ದ ಮೊಜ್ಜಿಗೆನ ಮೊಣ್ಣ್‌ನ ಪಾತ್ರಕ್ಕೆ ಹಾಕಿ, ಮೊಜ್ಜಿಗೆಗೆ ಕೈ ಹಾಕಿ, ಮೆಲ್ಲಂಗೆ, ಬೆಣ್ಣೆನ ಪುಡೆಂದ ನಡುಗೆ ತಂದ್ ಉಂಡೆ ಮಾಡಿ, ನೀರ್‌ಗೆ ಹಾಕ್‌ತಿದ್ದೊ. ಒಂದು ತುಂಡು ಬೆಣ್ಣೆನ ನನ್ನ ಅಂಗೈಗೆ ಹಾಕಿ ತಿಂಬಕೆ ಕೊಡ್ತಿದ್ದೊ. ಒಂದ್ ಗ್ಲಾಸ್ ದಪ್ಪ ಸೀ ಮೊಜ್ಜಿಗೆನ ನಂಗೆ ಕುಡ್ಯಕೆ ಕೊಡ್ತಿದ್ದೊ. ನೆಲುಲಿ ಒಂದು ಮೊಣ್ಣ್‌ನ ಪಾತ್ರೆಲಿ ಬೆಣ್ಣೆ, ಇನ್ನೊಂದು ಮೊಣ್ಣ್‌ನ ಮಡ್ಕೆಲಿ ಮೊಜ್ಜಿಗೆ ಹ್ಯೊದ್ ತೆಗ್ದ್ ಇಸ್ತಿದ್ದೊ. ಶನಿವಾರ ದಿನ ಬೆಣ್ಣೆನ ತೊಳ್ದ್, ಕಾಸ್‌ತಿದ್ದೊ. ಅದಕಾದ್ ದೊಡ್ಡ ದೊಡ್ಡ ಗುಳ್ಳೆಗ ಬಾಕಾಕನ ಒಂದೆರ್ಡ್ ಅರ್ಸಿಣ ಸೊಪ್ಪು ಹಾಕ್ತಿದ್ದೊ. ಅದ್ ಪಟ ಪಟಾಂತ ಸಿಡ್ದ್ ಕೆಂಪಾಕನ ಇಳ್ಸ್‌ತಿದ್ದೊ. ಬೆಣ್ಣೆಕಾದ್ ತುಪ್ಪ ಆಕನ ಮನೆ ತುಂಬಾ ಘಮ ಘಮಾಂತ ಪೊರ್ಮಳ ಹರ್ದ್‌ತಿತ್ತ್.

ಮಾವ ಗದ್ದೆಲಿ ಎಳ್ಳ್ ಬೆಳ್ಸ್‌ತಿದ್ದೊ. ಎಳ್ಳ್‌ನದೈನ ಎಲೆಗಳ ಬಿಸಿಗಂಜಿ ತೆಳಿಲಿ ಪುರುಂಚಿ ಅದರ ನೆತ್ತಿಗೆ ಮೆತ್ತ್‌ತಿದ್ದೊ. ಆ ಮೇಲೆ ಸೀಗೆ ಕ್ಯಾ ಹಾಕಿ ಮಿಾಯೊತಿದ್ದೊ. ಎಳ್ಳ್‌ನ ಗಾಣಕ್ಕೆ ಕೊಟ್ಟ್ ಎಣ್ಣೆ ಮಾಡ್ಸ್‌ತಿದ್ದೊ. ಅವೆಲ್ಲಾ ತಲೆಗೆ ಎಳ್ಳೆಂಣೆನೇ ಹಾಕ್ತಿದ್ದೊ. ಬೇಸಗೆ ಕಾಲಲಿ ದಡ್ಡಾಲ ಕೆತ್ತೆನ ತಂದ್ ಅದರ ಗುದ್ದಿ ಮೊಣ್ಣ್‌ನ ಮಡಿಕೆಲಿ ಹಾಕಿ, ನೀರ್ ಹಾಕಿ ಇಸುವೆ. ಅದ್ ನೋಳಿ ನೋಳಿ ಆಗಿದ್ದದೆ, ಅದರ ಒಡ್ಯೆಂತ ಕರ್ದವೆ. ಅದರ್‌ಂದ ತಲೆ ತೊಳ್ಯತಿದ್ದೊ. ಸೀಗೆ ಹಾಕಿ ಮಿಾಂದ ಮೇಲೆ ತಲೆಗೆ ಹತ್ತಾರ್ ಒಣ್ಕೆ ಒಡ್ಯೆನ ಹ್ಯೊಕಂಬತಿದ್ದೊ. ಆಗ ಕೂದೊಲು ರೇಶ್ಮೆ ಹಾಂಗೆ ಆಗ್‌ತಿತ್ತ್. ಹಡ್ಷೆ ದೈಗಳ ಸೊಪ್ಪುಂದಳೂ ಒಡ್ಯೆ ಮಾಡ್ತಿದ್ದೊ. ಆ ದೈಲಿ ಸಣ್ಣ ಸಣ್ಣ ಅರ್ಸಿಣ ಬಣ್ಣದ

ಹೂ ಆದೆ. ಅದರ ತಂದ್ ಗುದ್ದಿ ನೋಳಿ ಮಾಡಿ ಅದರ್‍ಲ್ಲಿ ತಲೆ ತೊಳ್ದವೆ. ಕಾಡ್‌ಲಿ ಇನ್ನೊಂದು ತರದ ಸೊಪ್ಪು ಉಟ್ಟು. ಅದರ್‍ಲ್ಲಿ ಒಂದೊಂದು ಎಲೆ ಬೆಳ್ಳಂಗೆ ಇದ್ದದೆ. ಕೇಸರಿ ಬಣ್ಣದ ಸಣ್ಣ ಹೂಗ ಇದ್ದವೆ. ಅದ್ ಬೊಳ್ಳಿನಾಂಗೆ ಬೆಳ್ದದೆ. ಆ ಸೊಪ್ಪುನ ಅವು ಬೆಣ್ಣೆ ಕರ್ತೆ ಸೊಪ್ಪುಂತ ಕರ್‍ಯೊತಿದ್ದೊ. ಅದರ್‌ನೂ ಒಡ್ಯೆ ಮಾಡಿ ತಲೆ ತೊಳ್ಯತಿದ್ದೊ.

ನನ್ನ ಅವ್ವಂಗೆ ಇಬ್ಬೊರು ಅಣ್ಣಂದರ್, ಒಬ್ಬ ತಮ್ಮ. ತಮ್ಮನ ಹೆಸ್ರ್ ತ್ಯಾಂಪಣ್ಣ. ಅವರ ಮನೆ ನಮ್ಮ ಅಕ್ಕನ ಮನೆ ಹಕ್ಕಲೆನೇ ಇತ್ತ್. ಅಲ್ಲಿಗೆ ಅವು ‘ಮದಕ’ ಎಂತ ಕರ್‍ಯೊತಿದ್ದೊ. ಅಕ್ಕನ ಮನೆ ಇರುವ ಜಾಗೆಗೆ ‘ಮಳಿ’ಂತ ಹೇಳ್ತಿದ್ದೊ. ಮದಕದ ಮಂಜಕ್ಕ ಅತ್ತೆಗೆ ನಾಂತೇಳ್ರೆ ಬಾಳ ಪ್ರೀತಿ. ನಾ ಆಗಾಗ ಅಲ್ಲಿಗೆ ಹೋಗ್ತಿದ್ದೆ. ಅವರ ಮನೆನ ಹಿಂದೆ ದರೆಲಿ ದೊಡ್ಡ ದೊಡ್ಡ ಎರ್ಡ್ ಹಿಂಡ್ಲ್ ಗುಲಾಬಿ ಹೂವುನ ದೈಗ ಇದ್ದೊ. ಅದರ್‍ಲ್ಲಿ ಗೊಂಚಲ್, ಗೊಂಚಲ್, ನಸು ಗುಲಾಬಿ ಬಣ್ಣದ ಹೂಗ ತುಂಬಾ ಬುಡ್ತಿದ್ದೊ. ಅರ್ಧ ನಾ ಅದರ ನೋಡಿಕೇನೇ ಅಲ್ಲಿಗೆ ಓಡ್ತಿದ್ದೆ. ಅವು ಎಮ್ಮೆ ಸಾಕ್ತಿದ್ದೊ. ನಾ ಹೋಕಾಕನ ಹೆಚ್ಚಾಗಿ ಅವು ಕೊಟಗೆಲಿ ಭತ್ತ ಮಿದ್ದ್‌ಕಂಡ್ ಇರ್ತಿದ್ದೊ. ನನ್ನ ನೋಡ್ದ ಕೂಡ್ಲೇ ಅತ್ತೆ, ಅದರ ಅಲ್ಲೇ ಬುಟ್ಟ್, ಪಕ್ಕಲೇ ಇದ್ದ ಮನೆಗೆ ಬಂದ್ ದಪ್ಪ ಹಾಲ್ ಹಾಕಿದ ಚಾ ಮಾಡಿ, ಹಲ್ಸಿನ ಕ್ಯಾನ ಹಪ್ಪಳನ ಸುಟ್ಟ್‌ದ್, ಅದ್ಕೆ ಕಾಯೆಣ್ಣೆ ಪೂಜಿ ನಂಗೆ ತಿಂಬಕೆ, ಕುಡ್ಯಕೆ ಕೊಡ್ತಿದ್ದೊ. ಪಾಪ! ಅವು ಎರ್ಡ್ ಹೆಣ್ಣ್ ಮಕ್ಕಳ ಹೆತ್ತ್, ಮೂರ್ನೇ ಹೆರ್‍ಗೆಲಿ ಸತ್ತ್ ಹೋದೊ. ಕೂಸುನೂ ಸತ್ತ್ ಹೋತ್. ಅವರ ಎರ್ಡ್ ಹೆಣ್ಣ್ ಮಕ್ಕಳ ಹೆಸ್ರ್ ಮೋಹಿನಿ ಮತ್ತೆ ಬೆಳ್ಳಮ್ಮ. ಮದ್ಕದ ಮಾಂವ ಹೆಣ್ಣ್ ಸತ್ತ್ ಹೋಗಿ ಒಂದ್ ತಿಂಗಳ್ಲೇ ಮಕ್ಕಳ ಸಾಕಿಕೇಂತ ಎರಡ್ನೇ ಮೊದುವೆ ಆದೊ.

ನನ್ನ ಅವ್ವನ ಎರಡ್ನೇ ಅಣ್ಣ ಎಲ್ಯಂಣ. ಅಕ್ಕನ ಮನೆಂದ ಅರ್ಧ ಮೈಲ್ ದೂರಲಿ, ಕೆಳಗಿನ ಬೈಲ್‌ಲಿ ಅವರ ಮನೆ ಇತ್ತ್. ಮನೆ ಮುಂದೆ ಗದ್ದೆಗ. ಮನೆ ಹಿಂದೆ ಚೋಡುಗೆ ಕಟ್ಟ ಹಾಕಿ, ಕೆರೆ ಹಾಂಗೆ ಮಾಡಿದ್ದೊ. ಅದರ್‍ಲ್ಲಿ ಪಾತ್ರೆ ತೊಳ್ಯೊದು, ಸೀರೆ ಒಗ್ಯೊದು ಮಾಡ್ತಿದ್ದೊ. ಆ ಕೆರೆ ಪುಡೆಲಿ ಮೊಣ್ಣ್ ಹಾಕಿ ಮನೆಗೆ ಹೋಕೆ ದಾರಿ ಮಾಡಿದ್ದೊ. ಮನೆ ಎತ್ತರಲಿ ಇತ್ತ್. ಮೊಣ್ಣ್‌ನ ದಾರಿಲಿ ನಡ್ಕಂಡ್ ಹೋಗಿ ಮೇಲೆ ಹತ್ತಿಕೆ ಹತ್ತ್ ಮೆಟ್ಲ್‌ಗ ಇದ್ದೊ. ನಾ ಪ್ರತಿಸಲ ಆ ಮೆಟ್ಲ್ ಹತ್ತಿಕಾಕನ ಲೆಕ್ಕ ಮಾಡ್ತಿದ್ದೆ. ಸರಿಯಾಗಿ ಹತ್ತ್ ಮೆಟ್ಲ್ ಇರ್ತಿತ್ತ್. ಮೆಟ್ಲ್ ಹತ್ತಿ ಹೋದರೆ ಮನೆನ ಹಿಂದೆನ ಇಜ್ಜೆಲ್. ಅಲ್ಲಿಂದ ಮುಂದೆ ಜಾಲಿಲಿ ಹೋದರೆ ಮನೆನ ಮುಂದೆನ ಬಾಗಿಲ್ ಸಿಕ್ಕ್‌ತಿತ್ತ್. ಅವರ ಮನೆ ನನ್ನ ಅಕ್ಕನ ಮನೆಂದ ಲಾಯ್ಕ್ ಇತ್ತ್. ಎರ್ಡ್ ಮೂರು ಕೋಣೆಗ ಹೆಚ್ಚಿಗೆ ಇದ್ದೊ. ಎಲ್ಯಂಣ ಮಾಂವನ ದೊಡ್ಡ ಮಂಜ ಸಾಂತಪ್ಪ ಭಾವಂಗೆ ಆಚಾರಿ ಕೆಲ್ಸ ಗೊತ್ತಿತ್ತ್. ಮರದ ದಳಿಗ ಇದ್ದ ದೊಡ್ಡ ದೊಡ್ಡ ಕಿಡ್ಕೆಗ, ದಾರಂದ ಇದ್ದ ಬಾಗಿಲ್ ಇದ್ದ್ ನೋಡಿಕೆ ಕುಸಿ ಆಗ್ತಿತ್ತ್. ಮಾಡ್ ಮಾತ್ರಾ ಮುಳಿ

ಹುಲ್ಲ್‌ದ್. ಅವು ಮೇಜ್, ಕುರ್ಚಿ, ಕಿಡ್ಕೆ, ಬಾಗಿಲ್ ಎಲ್ಲಾ ಮಾಡ್ತಿದ್ದೊ. ಆಗ ಕನಕಮಜಲ್ ಸಾಲೆಲಿ ಐದ್ನೇ ಕ್ಲಾಸ್ ಮುಟ್ಟ ಓದಿಕೆ ಆಗ್ತಿತ್ತ್. ಸಾಂತಪ್ಪ ಭಾವ ಈಶ್ವರ ಮಂಗಲಕ್ಕೆ ಹೋಗಿ, ಎಂಟ್ನೇ ಕ್ಲಾಸ್ ಮುಟ್ಟ ಓದಿದ್ದೊ. ಅವರ ಮನೆಲಿ ಕುದ್ರಿಕೆ ಕುರ್ಚಿ, ಬರ್ಯಕೆ ಮೇಜ್ ಇತ್ತ್. ಆ ಮಾಂವಂಗೆ ಒಬ್ಬಳೇ ಹೆಣ್ಣ್ ಮಗಳ್. ನನ್ನ ಅಣ್ಣನ ಪ್ರಾಯದೊವು. ಅವರ್‌ಂದ ಮೇಲೆ ಮೂರು ಗಂಡ್ ಮಕ್ಕ, ಸಾಂತಪ್ಪ, ಚನಿಯಪ್ಪ, ಕೃಷ್ಣಪ್ಪಾಂತ ಅವರ ಹೆಸ್ರ್. ಅತ್ತಿಗೆ ಹೆಸ್ರ್ ತಿಮ್ಮಕ್ಕ. ಅವ್ಕೂ ನನ್ನ ಸಣ್ಣಕ್ಕಂಗೂ ಭಾರೀ ಜೋಸ್ತಿ. ಸಣ್ಣಕ್ಕ ಅಕ್ಕನ ಮನೆಗೆ ಬಂದರೆ, ಅದ್ ನಿಲ್ಲುದು ಅಲ್ಲಿಯೇ. ತಿಮ್ಮಕ್ಕತ್ತಿಗೆನ ನಮ್ಮ ಅಪ್ಪನ ಜೋಸ್ತಿ ಪಡ್ಡಂಬೈಲ್ ಐತಪ್ಪ ಗೌಡರ ಎರಡ್ನೆ ಮಂಜ ಬಾಲಕೃಷ್ಣ ಗೌಡ್ರಿಗೆ ಮೊದ್ವೆ ಮಾಡಿಕೆ ಸಂಧಾನ ಮಾಡ್ದವೇ ನಮ್ಮ ಅಪ್ಪ. ನನ್ನ ಅವ್ವಂಗೆ ಎಲ್ಯಂಣ ಮಾಂವನ ಕಂಡರೆ ತುಂಬಾ ಪ್ರೀತಿ. ಅವ್ವನ ಕಷ್ಟ–ಸುಖಕ್ಕೆ ಅವು ತಲೆ ಕೊಡ್ತಿದ್ದೊ. ಸೂಂತೋಡು ಆಸ್ತಿನ ಏಲಂಗೆ ಇಸಿಕಾಕನ ಆ ಮಾಂವನೇ ಹಣ ಕಟ್ಟಿ ಆ ಆಸ್ತಿನ ತಂಗೆನ ಹೆಸ್ರಿಗೆ ಮಾಡ್ದೊ ಗಡ. ಅವ್ಕೆ ಕೋಳಿಕಟ್ಟದ ಹುಚ್ಚು ಜಾಸ್ತಿ. ದೊಡ್ಡ ದೊಡ್ಡ ನಾಕಾರ್ ಕಟ್ಟದ ಹೂಂಜಗಳ ಅವು ಮನೆ ಒಳಗೆ ಕಟ್ಟಿ ಸಾಕ್‌ತಿದ್ದೊ. ಸುಳ್ಯ ಜಾತ್ರೆ ಸಮಯಲಿ ಜಾತ್ರೆ ಕೊಡಿ ಇಳ್ದ ಮೊರ್ದಿನ, ಬೂಡು ಗದ್ದೆಲಿ [ವಾಲಸಿರಿ ಮಜಲ್] ಮೂರು ದಿನ ಕೋಳಿಕಟ್ಟ ನಡ್ಯತಿತ್ತ್. ಆಗ ಅವು ಕಟ್ಟದ ಕೋಳಿಗಳ ತಕಂಡ್ ಬಂದ್ ಎರ್ಡ್ ಮೂರು ದಿನ ನಮ್ಮಲ್ಲಿ ನಿಲ್ತಿದ್ದೊ. ಅವರ ಹುಂಜಗ ಯಾಗೊಳೂ ಗೆಲ್ತಿತ್ತ್. ಗೆಲ್ಲಿಕಾಕನ ಸೋತ ಕೋಳಿ ಗೆದ್ದವ್ಕೆ ಸಿಕ್ಕ್‌ತಿತ್ತ್. ಆ ಕೋಳಿಗಳ ಗೈಪು ಮಾಡಿಕೆ ಅವ್ವಂಗೆ ಕೊಡ್ತಿದ್ದೊ. ಅವ್ವ ಅದರ ಗೈಪು ಮಾಡಿಕಾಕನ ಕೋಳಿನ ಕನು, ಕರ್ಯಟ, ಪಲ್ಲೆಕ್ಯಾ, ಪಿಲಿಕಂಡೆ ಮತ್ತೆ ತೊಡೆನ ಮಾಸಗಳ ಬಾಳೆ ನಾರ್‌ಲಿ ಒಟ್ಟಿಗೆ ಕಟ್ಟಿ, ಗೈಪುಗೆ ಹಾಕ್ತಿದ್ದೊ. ಇಕ್ಕಿಕಾಕನ ಅದರ ಹುಡ್ಕುವ ಕೆಲ್ಸ ನಿಲ್ತಿತ್ತ್. ಅದರೆಲ್ಲಾ ಅವರ ಪ್ರೀತಿನ ಅಣ್ಣಂಗೆ ಇಕ್ಕ್‌ತಿದ್ದೊ.

ಎಲ್ಯಂಣ ಮಾಂವನ ಮನೆನ ಮೇಲೆನ ಭಾಗಲಿ ದೊಡ್ಡ ಅಗಲದ ಇಜ್ಜೆಲ್ ಇತ್ತ್. ಹಟ್ಟಿನೂ ಅಲ್ಲೇ ಇತ್ತ್. ಕೈ ಬೊಡ್ಯೋದು, ಭತ್ತ ಹೊಡ್ಕೋದು, ಒಣ್ಗ್‌ಸೊದು, ಎಲ್ಲಾ ಅಲ್ಲೇ ಮಾಡ್ತಿದ್ದೊ. ಹಟ್ಟಿನ ಕೆಳ ಪುಡೆಲಿ ಗದ್ದೆ ಪುಣೆಲಿ, ತುಂಬಾ ಕೇದಗೆ ಮರಗ ಇದ್ದೊ. ನಾವು ಅಲ್ಲಿಗೆ ಹೋಕಾಕನ ಎಲ್ಲಾ, ಭಾವಂದರಿಗೆ ಹೇಳಿ, ಕೇದಗೆ ಗೊಂಚಲ್ ಕ್ಯೊಸಿ, ಅಕ್ಕನ ಮನೆಗೆ ತಾತಿದ್ದೊ. ಅವರ ಮನೆನ ಎದ್ರ್ ಜಾಲ್‌ಲಿ ದೊಡ್ಡ ಚಿಬರಿ ದೈ ಇತ್ತ್. ಐದಾರ್ ವೊರ್ಸದ ಆ ದೈಯಿ ಮರದಂಗೆ ಬೆಳ್ದಿತ್ತ್. ಅದರ್ಲಿ ತುಂಬಾ ಚಿಬೆರಿ ಬಾಳ್‌ಗ ಬುಡ್ತಿತ್ತ್. ನಾವು ಆ ಬಾಳ್‌ಗಳ ಕ್ಯೊದ್, ಬಣ್ಣದ ಹಸಿ ಚಿಬೆರಿ ಬೀಜಗಳ ತಿಂಬೊತಿದ್ದೊ. ಸಾಂತಪ್ಪ ಭಾವ ನಾವ್ಗೆ ಆಟ ಆಡಿಕೆ ಗದ್ದೆಲಿ ಒಂದು ಕೋಲ್ ಎತ್ತರದ ಕಂಭನ ನೆಟ್ಟ್, ತೆಂಗಿನ ಮಡ್ಲ್‌ನ ತಲೆ ಭಾಗನ ನಾಕಡಿ ಉದ್ದ ಬುಟ್ಟ್ ತುಂಡ್ ಮಾಡಿ, ತಲೆ ಭಾಗಲಿ ಒಟ್ಟೆ ಮಾಡಿ ಆ ಕಂಭಕ್ಕೆ ಸಿಕ್ಕ್‌ಸ್‌ತಿದ್ದೊ. ಅದರ್ಲಿ ನಮ್ಮ ಕುದ್ರಿಸಿ ಗಾಣದಾಂಗೆ ತಿರ್ಗ್‌ಸ್‌ತಿದ್ದೊ. ಆ ಮಾಂವ

ಅವರ ಗದ್ದೆಲಿ ತುಂಬಾ ಕಬ್ಬು ಬೆಳ್ಸ್‌ತಿದ್ದೊ. ನಾವ್ಗೆ ತಿಂಬಕೆ ಕಬ್ಬು ಕಡ್ದ್ ಕೊಡ್ತಿದ್ದೊ. ಕಬ್ಬು ಕಡ್ದ್ ಗಾಣ ಮಾಡಿ ಬೆಲ್ಲ ಮಾಡುವ ಸಮಯಲಿ ನಮ್ಮ ಬಾಕೆ ಹೇಳ್ತಿದ್ದೊ. ತಿಮ್ಮಕ್ಕತ್ತಿಗೆ ಬೆಸಗೆನ ಅಡಿಲಿ ಗುಂಭಲಿ ಕಟ್ಟಿ ಇಸಿದ ಜೋನಿ ಬೆಲ್ಲನ ಹಿಟ್ಟ್‌ಗೆ ಹಾಕಿ ತಿಂಬಕೆ ಕೊಡ್ತಿದ್ದೊ. ನಾ ಮಾತ್ರ ಆ ಮನೆಲಿ ಹೆಚ್ಚ್ ನಿಲ್ತಿತ್ಲೆ. ನಂಗೆ ಅಕ್ಕನ ಮನೆ ಮತ್ತೆ ಅಲ್ಲಿ ಇದ್ದ ಅತ್ತಿಗೆಕಳೇ ಹೆಚ್ಚ್ ಕುಸಿ. ಅಕ್ಕನ ಮನೆಗೆ ಹೋಕಾಕನ ಕಾಪಿಲ ಮೂಲೆ ದೊಡವನ ಮನೆಗೆ ಹೋಗ್ತಿದ್ದೆ. ಅವರ ಹೆಸ್ರ್ ಜಾಕಮ್ಮ. ಅವುಕೆ ಯಾಗೋಳು ಕಾಯಿಲೆ. ಕೆಲ್ಸ ಮಾಡಿಕೆ ಆಗ್‌ತಿತ್ಲೆ. ಅವ್ಕೆ ಎರ್ಡ್ ಗಂಡ್ ಮಕ್ಕ ಅವು ಯಾಗೋಳು ದೊಡ್ಡ ಮಾಂವನ ಮನೆಲೇ ಕೆಲ್ಸ ಮಾಡಿ, ಉಂಡ್‌ದ್ ಹೋಗ್ತಿದ್ದೊ.

ದೊಡ್ಡ ರಜೆಲಿ ಅಕ್ಕ, ಭಾವನೊಟ್ಟಿಗೆ ಬೀಜ ಕೊಯ್ಯಕೆ ಹೋಗ್ತಿದ್ದೆ. ಒಮ್ಮೆ ಅತ್ತಿಗೆಕ ಎರ್ಡ್ ಗಳೆ ತಕಂಡ್, ಅದರ ಸಡಿಲ ಆದ ಕೊಕ್ಕೆನ ಬಿಗ್ದ್ ಕಟ್ಟಿ, ಗಟ್ಟಿ ಮಾಡ್ತಿದ್ದೊ. ನಾ ಅವರ ಹಕ್ಕಲೆ ನಿಂತ್ ಅವು ಮಾಡುವ ಕೆಲ್ಸನ ನೋಡಿಕಂಡೇ ಇದ್ದೆ. ಆಗ ಅವು, 'ಬಾನಾವು ಬೀಜ ಕೊಯ್ಯಕೆ ಪೋಯಿ. ನಾವು ಕೊಯ್ದ್, ಕೊಯ್ದ್, ಹಾಕುವೆ. ನೀ ಹೆಕ್ಕಿ, ಹೆಕ್ಕಿ ಕುಕ್ಕೆಗೆ ಹಾಕ್‌ಂ'ತ ಹೇಳ್ದೊ. ನಂಗೆ ಭಾರೀ ಕುಸಿ ಆತ್. ಬೀಜ ಹೆಕ್ಕಿಕೆ ನಂಗೆ ಬಾಳ ಇಷ್ಟ. ನಾ ಕೊಣ್ಕಂಡ್ ಅವರೊಟ್ಟಿಗೆ ಗುಡ್ಡೆಗೆ ಹೋದೆ. ಅವು ಸುರುಗೆ ತುಂಬಾ ಹಣ್ಣ್‌ಗ ಇದ್ದ ಗೆಲ್ಲ್‌ಗೆ ಕೊಕ್ಕೆನ ಸಿಕ್ಕಿಸ್ ಕುಲ್ಗಿಸಿದೊ. ಆಗ ಹಣ್ಣ್‌ಗ ಎಲ್ಲಾ ತಟ ಪಟಾಂತ ಬಿದ್ದೊ. ನಾ ಓಡಿಕಂಡ್ ಓಡಿಕಂಡ್ ಹಣ್ಣ್‌ಗಳ ಹೆಕ್ಕಿ ಹೆಕ್ಕಿ ಕುಕ್ಕೆಗೆ ತುಂಬಿಸಿದೆ. ಅವುನೂ ಕೈ ಜೋಡಿಸಿದೊ. ಆ ಮೇಲೆ ಬೆಳ್ದ ಕಾಯ್ನ ತೊಟ್ಟು ಇದ್ದ ಬೀಜಗಳ ಹುಡ್ಕಿ ಹುಡ್ಕಿ ಕೊಯ್ದೊ. ನಾವು ತಕೊಂಡೋದ ಕೈ ಕುಕ್ಕೆಗ, ಹೆಡಗೆಗ ತುಂಬಿದ ಮೇಲೆ, 'ಇಂದ್‌ಗೆ ಸಾಕ್. ನಾಳೆ ಬರೊಮೋ'ಂತಹೇಳಿ. ಹೆಡಗೆಗಳ ತಲೆಲಿ ಹೊತ್ತ್, ಕೈಕುಕ್ಕ್‌ಗಳ ಕೈ ಹಿಡ್ಕಂಡ್, ನನ್ನ ಕರ್ಕಂಡ್ ಮನೆಗೆ ಬಂದೊ. ಹಣ್ಣ್‌ಲಿ ಇದ್ದ ಒಣ್‌ಂಗಿದ ಬೀಜನ ತಿರಿಂಟಿ, ತಿರಿಂಟಿ ತೆಗ್ದ್ ಬೇರೆ ಇಸಿದೊ. ಹಣ್ಣ್‌ನ ಕೋಣಂಗಳಿಗೆ ತಿಂಬಕೆ ಹಾಕಿದೊ. ಕಾಯಿತೊಟ್ಟುನ ತೊಟ್ಟು ಮುತ್ತಂಗೆ ಬೇರೆ ಒಣ್‌ಂಗಿಸಿದೊ. ಅದ್ ಬೀಜ ಮಡಿ ಆಕೆ ಅದರ ಮೇಲೆ ಬೂದಿ ಕೊಡ್ಕಿದೊ. ಅವವು ಕೊಯ್ದ ಬೀಜನ ಅವವೇ ಒಣ್‌ಂಗಿಸಿ ಮಾರ್ತಿದ್ದೊ. ಹಸಿ ಬೀಜನ ದಿನಾ ಕೈಲಿ ಅಡಿಮೇಲೆ ಮಾಡ್ತಿದ್ದೊ. ನಾಕೈದ್ ದಿನಲಿ ಅದ್ ಒಣ್‌ಂಗ್‌ತಿತ್ತ್. ಹಸನಾರೇಂತ ಒಬ್ಬ ಮಾಪ್ಳೆ ಕುಟ್ಟ, ಮನೆ ಮನೆ ಬೀಜ ಕೇಳಿಕಂಡ್ ಬಾತಿತ್. ಅವಂಗೆ ಬೀಜನ ಕೊಡ್ತಿದ್ದೊ. ಆಗ ಒಂದು ಸೇರ್ ಬೀಜಕ್ಕೆ ನಾಕಾಣೆ ಸಿಕ್ಕ್‌ತಿತ್ತ್. ಅಕ್ಕನ ಮನೆನ ಗುಡ್ಡೆಲಿ ಒಂದು ಹಳೆ ಭಾರೀ ದೊಡ್ಡ ಬೀಜದ ಮರ ಇತ್ತ್. ಅದರ ಹತ್ತಿಕೆ ಹೆಣ್ಮಕ್ಕಳಿಗೆ ಆಗ್‌ತಿತ್ಲೆ. ಭಾವ ಅದರ ಹತ್ತಿ ಗಳೆಲಿ ಬೀಜ ಕೊಯ್ಯೊತಿದ್ದೊ. ಅದರ್ಲಿ ಒಂದೇ ಮರಲಿ ವೊರ್ಸಕ್ಕೆ ಒಂದ್ ಮುಡಿ [42 ಸೇರ್] ಬೀಜ ಸಿಕ್ಕ್‌ತಿತ್ತ್ ಗಡ.

ಅವರ ಬೀಜದ ಕೊಚ್ಚಿಲಿ ಒಂದು ದೊಡ್ಡ ಮಂಜೋಟಿ ಮರ ಇತ್ತ್. ಅದರಡಿಲಿ

ದಿನಾ ಮಂಜೊಟಿ ಕ್ಯಾಗ ಬೀಳ್ತಿದ್ದೊ. ಒಂದು ದಿನ ನಾ ಮಂಜೊಟಿ ಹೆರ್ಕಿಕಂಡ್ ಬಾಕನ, ಅಕ್ಕ ನನ್ನ ಜೋರ್‌ಲಿ, ಮನೆಂದ ಕರ್‍ಯೋದು ಕೇಳ್ತ್. ನಾ ಬೇಗ ಬೇಗ ಓಡಿ ಕಂಡ್ ಮನೆಗೆ ಬಂದ್ ನೋಡಿಕನ, ಬಳೆಗಾರ ಬಂದಿತ್ತ್. ಎಲ್ಲೋವು ಅವನ ಸುತ್ತೊಳು ಕುದ್ದ್ ಕಂಡ್ ಅಂವ ಹರ್‍ಗಿದ ಬಣ್ಣ ಬಣ್ಣದ ಬಳೆಗಳ ನೋಡಿವೆ. ಒಳ್ಳೊಳ್ಳೆ ಬಳೆಗಳ ಹೆರ್ಕಿದ್ ಅತ್ತಿಗೆಕ ಅವನ ಕೈಲಿ ಇಸಿಸಿಕೊಂಡೊ. ನಂಗೂ ಮಾಂವ ಕೈ ತುಂಬಾ ಬಳೆ ಇಸಿ ದುಡ್ಡು ಕೊಟ್ಟೊ. ಅತ್ತಿಗೆಕ ಇಸಿದ ಬಳೆಗಳಿಗೆ ಅವೇ ಬೀಜ ಮಾರ್‍ದ ದುಡ್ಡುಂದ ದುಡ್ಡು ಕೊಟ್ಟೊ.

ಮಳೆಗಾಲಲಿ ಜೋರ್ ಮಳೆ ಬಂದ ದಿನ ಕಾಪಿಲ ಮೂಲೆ ಅಣ್ಣಂದಿರ ಕರ್‍ಕಂಡ್ ಭಾವ, ಮಡ್ಲ್‌ನ ಸೂಟೆ ಹೊತ್ತಿಸಿ ಕಂಡ್ ಕೈಲಿ ಕತ್ತಿ ಹಿಡ್ಕಂಡ್ ಹೋಗ್ತಿದ್ದೊ. ದೊಡ್ಡ ಮಳೆ ಬಾಕಾಕನ ಗದ್ದೆ, ಕೆರೆ, ಕಣಿ, ತೋಡ್‌ಲೆಲ್ಲಾ ನೀರ್ ತುಂಬಿ ಕೊಚ್ಚಿಕಂಡ್ ಹೋಕಾಕನ ದೊಡ್ಡ ದೊಡ್ಡ ಮೀನ್‌ಗ ಅದರ್‍ಲಿ ಹೋಗ್ತಿತ್ತ್‌ಗಡ. ಅದರ ಉಬರ್ ಹತ್ತುದೂಂತ ಹೇಳ್ತಿದ್ದೊ. ಅದರ ಕತ್ತಿಲಿ ಕಡ್ದ್ ಗೋಣಿ ಚೀಲಲಿ ತುಂಬಿಸಿ ಕಂಡ್ ತಾತಿದ್ದೊ. ಮಡಂಜಿ, ಮುಗುಡು, ಮೊರಂಟೆ, ಏಮೆ, ಎಸಂಡ್– ಎಲ್ಲಾ ಸಿಕ್ತಿತ್ತ್. ಮೊರ್‍ದಿನ ಎಲೌವ್ಕ ಮೀನ್ ಸಾರ್‌ನ ಗಡ್ದ್‌ನ ಊಟ.

ಅಂದ್ ಶನಿವಾರ. ಭಾವ ಬೇಗ ಕೆಲ್ಸ ಬುಟ್ಟು ಬಂದ್ ಅಕ್ಕನೊಟ್ಟಿಗೆ ಹೇಳ್ದೊ, “ಸಾಲೆಲಿ ವೀರ ರಮಣಿ ನಾಟಕ ಆಡ್ವೆಗಡ. ನಾವು ನಾಟಕಕ್ಕೆ ಪೋಯಿ”. ಅಕ್ಕಂಗೆ ಕುಸಿ ಆತ್. ಅತ್ತಿಗೆಕಳ ಕರ್‍ದ್‌ಹೇಳ್ತ್, ‘ಇಂದ್ ನಮ್ಮ ನಾಟಕಕ್ಕೆ ಕರ್ಕಂಡ್ ಹೋದವೆ ಗಡ. ನಾವು ಪೋಯಿ. ಬೇಗ ಬೇಗ ಹೊರ್‍ಡೀಂತ. ನೀಲಮ್ಮ ಅತ್ತಿಗೆ ಬಾದ್ಲೆಂತ ಹೇಳ್ದೊ. ಅವ್ಕೆ ನಿದ್ದೆ ಕೆಟ್ಟರೆ ಆದ್ಲೆ ಗಡ. ಅಕ್ಕಯ್ಯ ಅತ್ತಿಗೆ ಕುಸಿಲಿ ನನ್ನ ಕರ್ಕಂಡ್ ಮೀಯಕೆ ಹೊರ್‍ಟೊ. ತೋಟದ ನೊಡುಲ ನೀರಡಿ ಕೊಟಗೆ ಇತ್ತ್. ಹಕ್ಕಲೆ ತಾವರೆ ಹೂಗ ಇದ್ದ ಕೆರೆಂದ ನೀರ್ ತಾಕೆ ಸುಲಭ ಆಗ್ತಿತ್ತ್. ಮನೆಂದ ಮಡ್ಲ್‌ನ ಸೂಡಿಲಿ ಕಿಚ್ಚಿ ಹೊತ್ತಿಸಿಕಂಡ್, ನೀರೆಡಿಗೆ ಹೋದೊ. ಕಿಚ್ಚಿನ ಒಲೆ ಒಳಗೆ ಇಸಿ, ಹಾಳೆ, ಕೊತ್ತಳಿಂಗೆಗಳ ಒಲೆಗೆ ಒಟ್ಟಿ, ಕಿಚ್ಚಿ ಮೊಟ್ಟೊ. ದೊಡ್ಡ ಒಲೆಲಿ ಕಿಚ್ಚ್ ಧಗಧಗಾಂತ ಹೊತ್ತಿಕಂಡ್ ಉರ್‍ತ್. ಒಲೆ ಮೇಲೆ ಇದ್ದ ಮೊಣ್ಣ್‌ನ ಮೊಡ್ಕೆಲಿ ಕೈ ಹಾಕಿ ನೋಡಿವೆ, ನೀರ್ ಹಂಞನೇ ಇತ್ತ್. ಅಲ್ಲೆ ಕೆಳಗೆ ಹಾಳೆನ ಮೇಲೆ ಇಸಿದ ಎರ್‍ಡ್ ಕಂದಲ್‌ಗಳ ತಕ್ಕಂಡ್ ಕಟ್ಟಕ್ಕೆ ಹೋಗಿ [ಅವು ಕೆರೆನ ಕಟ್ಟಂತ ಕರ್‍ಯತಿದ್ದೊ] ನೀರ್‍ನ ತಂದ್ ಮಡಿಕೆಗೆ ಹೊಯ್ದ್, ಮತ್ತೊಮ್ಮೆ ಎರ್‍ಡ್ ಕಂದಲ್ ನೀರ್ ತಂದ್‌ದ್ ಹಾಳೆ ಮೇಲೆ ಇಸಿದೊ. ಆಗಾಗ ಒಲೆಗೆ ಹಾಳೆ, ಕೊತ್ತಳಿಂಗೆ ಇಸಿಕಂಡ್ ಕಿಚ್ಚಿ ಕೆಡದಾಂಗೆ ನೋಡಿಕೊಂಡೊ. ಹಂಞ ಹೊತ್ತ್‌ಲಿ ನೀರ್ ಕಾದತ್. ನನ್ನ ಅಂಗಿ ತೆಗ್ದ್ ಮೀಸಿ, ನಾ ಮೀಂದ್ ಬನ್ನೇ’ಂತ ಹೇಳ್ದೊ. ನಾ ಓಡಿಕಂಡ್ ಮನೆಗೆ ಬಂದ್, ಅಂಗಿ ಹಾಕಂಡೆ. ಅಕ್ಕ ನನ್ನ ತಲೆ ಬಾಚಿ ಹೂನ ಮುಡ್ಸಿತ್. ಅಷ್ಟಾಕನ ಅಕ್ಕಯ್ಯ ಅತ್ತಿಗೆ ಮಿಂದ್ ಬಂದ್ ತಲೆ ಬಾಚಿ ಸೀರೆ ಉಟ್ಟ್ ಹೊರ್‍ಟೊ. ಅಕ್ಕ, ಭಾವ ಮೀಯಕೆ

ಹೋದೊ. ಅತ್ತಿಗೆ ಒಂದು ಕತ್ತಿ ತಕಂಡ್, ಮನೆ ಹಕ್ಕಲೆ ಇದ್ದ, ದರೆ ಪುಡೆಲಿ ಬೆಳ್ದ ಬಂದನಾರ್ ಪುಂಡೆಲ್‌ಂದ, ಒಂದು ಗೆಲ್ಲ್ ಕಡ್ಕಂಡ್ ಬಂದೊ. ಅದರ್ಲಿ ತುಂಬಾ ಬಂದನಾರ್ ಕಾಯಿಗ ಇದ್ದೊ. ಅದರ್‌ಂದ ಏಳೆಂಟ್ ಬಿತ್ತ್‌ನ ಪೊರ್ಪಿ ತೆಗ್ದ್, ಕತ್ತಿನ ಪುಡೆಗೆ ಉಜ್ಜಿದೊ. ಆಗ ಅದರ ಸೊನೆ ಕತ್ತಿಲಿ ಅಂಟಿತ್. ಒಂದು ತುಂಡು ಮೊಸಿ ತಕಂಡ್ ಆ ಸೊನೆಲಿ ಉಜ್ಜಿದೊ. ಆಗ ಅದ್ ಕಣ್ಣ್ ಕಪ್ಪುನ ಹಾಂಗೆ ಆತ್. ಅದರ ಒಂದು ಚಾಳೆ ಕಡ್ಡಿಲಿ ತೆಗ್ದ್, ನನ್ನ ಮುಂಡಕ್ಕೆ ಒಂದು ಬೊಟ್ಟ್ ಇಸಿ, ಅವುನೂ ಬೊಟ್ಟು ಇಸಿಕೊಂಡೊ. ಅಕ್ಕ, ಭಾವ ಮಿಾಂದ್‌ದ್ ಬಂದ್ ಹೊರ್‍ಟೊ. ಎಲ್ಲೋವೂ ಬೇಗ ಬೇಗ ಉಂಡ್ ಕಂಡೊ. ಅಕ್ಕನ ಮನೆಲಿ ಕತ್ತಲೆ ಕತ್ತಲೆ ಆಕನನೇ ಎಲ್ಲೋವು ಉಂಬತಿದ್ದೊ. ಬೇಗ ಮೊಲ್ಗ್‌ತಿದ್ದೊ. ದೀಪ ಹೋಸುದು ಬಾಳ ಕಮ್ಮಿ. ಕಿಚ್ಚಿನ ಪೆಟ್ಟಿಗೆ ಇರ್ತಿತ್ಲೆ. ಒಲೆಲಿ ಯಾಗೋಳು ಗೆಂಡ ಇರ್ತಿತ್ತ್. ಅದ್ಕೆ ಮಡ್ಲ್ ಇಸಿ, ಉರ್ಗಿ ಕಿಚ್ಚಿ ಹೊತ್‌ಸ್‌ತಿದ್ದೊ. ಮೊಣ್ಣ್‌ನ ಚಿಬ್‌ಳೆಲಿ ಚೊಳ್ಗಲ್ ಎಣ್ಣೆ ಹಾಕಿ ದೀಪ ಹೊತ್ತ್‌ಸ್‌ತಿದ್ದೊ. ಒಂದು ಚಿಮಿಣಿ ದೀಪ ಇತ್ತ್.

ನಾವು ಉಂಡ್‌ದ್ ಮನೆ ಹಿಂದೆ ಇದ್ದ ಹಟ್ಟಿನ ಹಕ್ಕಲೆನ ಬಾಗಿಲ್‌ನ ಉರ್‌ಗೆಲ್ ತೆಗ್ದ್. ಗುಡ್ಡೆ ದಾರಿಲಿ ಹೋದೊ. ತೋಟದ ಒಳಗೆ ಹೋದರೆ ಮುಳಿಪಡ್ಪು ದಾಟಿ ಹೋಕುನೂ ಆದೆ. ಗುಡ್ಡೆ ದಾರಿಲಿ ಹೋಗಿ ತ್ಯಾಂಪಣ್ಣ ಮಾಂವನ ಮನೆನ ದಾಟಿ, ಅಡ್ಕಕ್ಕೆ ಬಂದ್, ಸಾಲೆ ದಾರಿ ಹಿಡ್ದೊ. ದೂರಂದಳೇ ಸಾಲೆಲಿ ನಡೆವ ಭಜನೆ ಪದಗ ಕೇಳ್ತಿದ್ದೊ. ಊರೊವೆಲ್ಲ ಸೇರಿ ಅಲ್ಲಿ ಪ್ರತಿ ಶನಿವಾರ ಭಜನೆ ಮಾಡ್ತಿದ್ದೊ. ಭಜನೆ ಮುಗ್ದ ಮೇಲೆ ನಾಟಕ ಸುರು ಆಗ್ತಿತ್ತ್. ನಾಟಕ ಮುಗ್ಯಕನ ನಡಿರ್‍ಳ್ ಆಗ್ತಿತ್ತ್. ನಂಗೆ ನಾಟಕ ಸುರು ಆಕನನೇ ನಿದ್ದೆ ತೂಂಗ್‌ತಿತ್. ಕೇದಗೆ ಅಡಿ ಗುಡ್ಡಪ್ಪ ಗೌಡ್ರು ಆಗ ಹದ್ನಾರ್, ಹದ್ನೇಳ್ ವೊರ್ಸದ ಹೈದ. ಅವು ವೀರಮಣಿ ಪಾತ್ರ ಮಾಡ್ತಿದ್ದೊ. ಅವರ ಸ್ತ್ರೀ ವೇಷ ಬಾಳ ಪೊರ್ಲು ಇತ್. ಅವು ದಕ್ಷಯಜ್ಞ ನಾಟಕಲಿ 'ಗಿರಿಜೆ'ನ ಪಾತ್ರ ಮಾಡ್ತಿದ್ದೊ ಗಡ. ಅದರ್‍ಲೂ ಅವು ಬಾಳ ಪೊರ್ಲು ಕಾಂಬತಿದ್ದೊ ಗಡ. ಭಾವಹೇಳ್ತಿದ್ದೊ. ಅರ್ಧನಾಟಕ ಆಕನ ನಂಗೆ ನಿದ್ದೆ ಬಾತ್. ಇರ್‍ಳ್ ಅತ್ತಿಗೆ ನನ್ನ ಎದ್ರಿಸಿ, ಅವರ ಸೊಂಟಲಿ ಕೋಸಿಕಂಡ್ ಬಂದೊ. ಅಕ್ಕಯ್ಯ ಅತ್ತಿಗೆ ನಮ್ಮ ಭಾವನಾಂಗೆ, ಗಟ್ಟಿ ಮುಟ್ಟಾಗಿದ್ದೊ. ನನ್ನ ಭಾರ ಅವ್ಕೆ ಲೆಕ್ಕಕೇ ಇಲ್ಲೆ. ನಾ ಅವರ ಹೆಗ್ಲ್ ಮೇಲೆ ನಿದ್ದೆ ಮಾಡಿಕಂಡ್ ಮನೆಗೆ ಬಂದೆ.

ಅಕ್ಕನ ಮನೆನ ಮುಳಿ ಪಡ್ಪು ಹಕ್ಕಲೆ ದೊಡ್ಡ ದೊಡ್ಡ ಎರ್ಡ್ ರೆಂಜೆ ಮರಗ ಇದ್ದೊ. ಅಕ್ಕಯ್ಯ ಅತ್ತಿಗೆ ಬೊಳ್ಪುಗೆ ಯಾಗೋಳು, ಆ ರೆಂಜೆ ಮರದ ಬುಡಕ್ಕೆ ಹೋಗಿ, ಅಲ್ಲಿ ರಾಶಿ ರಾಶಿ ಬಿದ್ದ ರೆಂಜೆ ಹೂಗಳ ಹೆರ್ಕಿ, ಮೊಡ್ಪಳೆಲಿ ಹಾಕಂಡ್ ಮನೆಗೆ ತಾತಿದ್ದೊ. ನಾನೂ ಒಮ್ಮೊಮ್ಮೆ ಅವರೊಟ್ಟಿಗೆ ಹೋಗಿ ಹೂ ಹೆರ್ಕಿಕೆ ಸೇರ್ತಿದ್ದೆ. ಮನೆಲಿ ಅದರ ಬಾಳೆ ಬೊಳ್ಳಿಲಿ ಚುರ್ದ್‌ದ್ ಮಾಲೆ ಮಡ್ತಿದ್ದೊ. ರೆಂಜೆ ಹೂ ಭಾರೀ ಪೊರ್ಮಳದ ಹೂ. ಅದರ ಗಮಲ್‌ಗೆ ಮನೆ ಎಲ್ಲಾ ಘಮ ಘಮಾಂತ ಹೇಳ್ತಿತ್ತ್.

ನಂಗೆ ಬುದ್ಧಿ ಬಂದ ಮೇಲ್‌ಂದ ನಾ ಅಕ್ಕನ ಮನೆಗೆ ಓಡ್ತಿದ್ದೆ. ಆಗ ಸುಳ್ಯಲಿ ಬಸ್ ಇತ್ಲೆ. ಸುಳ್ಯಂದ ಕನಕಮಜಲ್ ಮುಟ್ಟ ನಡ್ಯಕಾಗಿತ್ತ್. ಅಕ್ಕ ವೊರ್ಸಕ್ಕೆ ಎರ್ಡ್ ಸರ್ತಿ ತವರು ಮನೆಗೆ ಬಾತಿತ್ತ್. ಮಳೆಗಾಲದ ಬೇಸಾಯ ಕೆಲ್ಸ ಮುಗ್ದ ಮೇಲೆ ಒಮ್ಮೆ, ಸುಳ್ಯ ಜಾತ್ರೆ ಸಮಯಲಿ ಇನ್ನೊಮ್ಮೆ ಭಾವನೇ ಕರ್ಕಂಡ್ ಬಂದ್ ಬುಟ್ಟ್ ಹೋಗ್ತಿದ್ದೊ. ಇಲ್ಲರೆ ಅಣ್ಣ ಹೋಗಿ ಕರ್ಕಂಡ್ ಬಾತಿತ್ತ್. ಅಕ್ಕ ಬಂದರೆ ಒಂದು ತಿಂಗ ನಿಂತೇ ಹೋಗ್ತಿತ್ತ್. ಆಗ ನಾ ಅದ್ಕೆ ಅಂಟಿಕಂಡೇ ಇರ್ತಿದ್ದೆ. ಉಂಬೊದು, ತಿಂಬೊದು, ಮೊಲ್ಗುದು, ಎಲ್ಲಾ ಅದರೊಟ್ಟಿಗೇ. ಅದ್ಕೂ ನನ್ನ ಕಂಡ್ರೆ ಬಾಳಪ್ರೀತಿ. ನನ್ನ ಮಿಾಸುದು, ತಲೆ ಬಾಚುದು, ಉಣ್ಸುದು, ಮೊಲ್ಗುಸೂದೂ ಎಲ್ಲಾ ಅದೇನೆ. ಅದ್ ಗಂಡನ ಮನೆಗೆ ಹೊರ್ಡ್ಕನ ನಾ ಮೊರ್ಟ್ ರಂಪ ಮಾಡ್ತಿದ್ದೆ. ನನ್ನ ಹಟಕ್ಕೆ ಭಾವ ನನ್ನ ಕರ್ಕಂಡ್ ಹೋಗ್ತಿದ್ದೊ. ನಡ್ದ್ ನಡ್ದ್ ಸಾಕಾಕನ ಭಾವ ಅವರ ಹೆಗ್ಲ್ ಮೇಲೆ ಕುದ್ರಿ ಸಿಕಂಡ್ ಹೋಗ್ತಿದ್ದೊ. ಎಷ್ಟ್ ನಡ್ದರೂ ದಾರಿ ಸಾಗ್‌ತಿತ್ಲೆ. ಬೊಳ್ಪುಗೆ ಹೊರ್ಟರೆ ಮಧ್ಯಾಹ್ನ 3 ಗಂಟೆಗೆ ಮುಟ್ಟ್‌ತಿದ್ದೊ. ಜಾಲ್ಸೂರ್‌ಂದ ಹಂಞ ಮುಂದೆ ಹೋಕಾಕನ ಚೋಮಣ್ಣ ಗೌಡ್ರ ಅಂಗ್ಡಿ ಸಿಕ್ಕ್‌ತಿತ್ತ್. ಅವರ ಹೋಟ್ಲ್‌ಲಿ ಚಾಕುಡ್ದ್, ಕಲ್ತಪ್ಪ ತಿಂದ್ ಮುಂದೆ ಹೋಗ್ತಿದ್ದೊ. ಆ ಮೇಲೆ ಕಾಸರಗೋಡು ಬಸ್ ಸುರು ಆತ್. ಆಗ ಜಾಲ್ಸೂರು ವರೆಗೆ ಬಸ್ಸ್‌ಲಿ ಹೋಗಿ, ಎರ್ಡ್ ಮೈಲ್ ನಡ್ಯೋತಿದ್ದೊ. ಅದರ್‌ಂದ್ ಮೇಲೆ ಕುಂಬಳೆ ಬಸ್ಸ್ ಸುರಾತ್. ಅದರ್ಲಿ ಕನಕಮಜಲ್‌ವರೆಗೆ ಹೋಗಿ ಸಾಲೆ ಹಕ್ಕಲೆ ಇಳ್ಯೊತಿದ್ದೊ. ಅಕ್ಕನ ಕರ್ಕೊಂಡೋಕೆ ಭಾವ ಬಾಕಾಕನ ನಾ ನನ್ನ ಅಂಗಿನ ಗಂಟ್ ಕಟ್ಟಿ, ಹೊರ್ಟ್ ನಿಲ್ತಿದ್ದೆ. ಒಂದೆರ್ಡ್ ಸಲ ಸಣ್ಣಕ್ಕ, ನನ್ನ ಭಾಗೀರಥಿನ [ಸಣ್ಣಕ್ಕನ ಜೋಸ್ತಿ ಗೂಡೆ] ಮನೆಗೆ ಕರ್ಕಂಡ್ ಹೋಗಿ, ಅಕ್ಕ ಭಾವ ಹೋದ ಮೇಲೆ ಮನೆಗೆ ಕರ್ಕಂಡ್ ಬಾತಿತ್ತ್. ಅಕ್ಕ ಗಂಡನ ಮನೆಗೆ ಹೊರ್ಟ್ ಹೋತ್‌ಂತ ಗೊತ್ತಾಗಿ, ನಾ ಬಿಕ್ಡ್‌ಸಿ, ಬಿಕ್ಡ್‌ಸಿ ಮೊರ್ಟ್ ಕಂಡ್, ಉಣದೆ, ಮೂಲೆಲಿ ಕುದ್ದ್ ಕೈ ಕಾಲ್ ಬಡಿತಿದ್ದೆ. ನಾ ಸಾಲೆಗೆ ಸೇರ್ದ ಮೇಲೆ ರಜೆ ಸಿಕ್ಕಿಕನ, ಅಕ್ಕನ ಮನೆಗೆ ಹೋಕೂಂತ ಹಟ ಮಾಡ್ತಿದ್ದೆ. ಆಗ ಅಣ್ಣ ಕರ್ಕೊಂಡೋಗಿ ಬುಟ್ಟ್ ಬಾತಿತ್ತ್. ರಜೆ ಮುಗ್ಯಕಾಕನ ಭಾವ ತಂದ್ ಬುಡ್ತಿದ್ದೊ. ಹತ್ತ್ ಹನ್ನೆರ್ಡ್ ವೊರ್ಸ ಆದ ಮೇಲೆ ಅಣ್ಣ ಬಸ್ ಹತ್ತಿಸಿ ಬುಡ್ತಿತ್ತ್. ನಾ ಒಬ್ಬನೇ ಹೋಕೆ ಸುರು ಮಾಡ್ದೆ ನಮ್ಮ ಮನೆಲಿ ನನ್ನ ತಮ್ಮಂದರ್, ಅಕ್ಕ ಯಾರೂ ದೊಡ್ಡಕ್ಕನ ಮನೆಗೆ ನಿಲ್ಲಕೆ ಹೋಗ್‌ತಿತ್ಲೆ. ಅವರ ಮುಳಿ ಮನೆ ಸೆಗಣಿ ನೆಲ, ಅವರ ಅಂಬೆಲಿ ಊಟ ಇಲ್ಲಿಯವ್ಕೆ ಹಿಡ್ಸ್‌ತಿತ್ಲೆ. ನಂಗೆ ಮಾತ್ರಾ ನನ್ನ ದೊಡ್ಡಕ್ಕನ ಪ್ರೀತಿನ ಸೆಳ್ತಲಿ ಇದೆಲ್ಲಾ ಗೊತ್ತೇ ಆಗ್ತಿತ್ಲೆ.

ಕಾಲ ಕಳ್ದ ಹಾಂಗೆ ಮಾಂವ ಮತ್ತೆ ಭಾವ ಅವರ ಕಷ್ಟದ ದುಡಿಮೆಲಿ, ಗಟ್ಟಿ ಮುಟ್ಟಾದ ಮರ ಹಾಕಿ, ಮುರಕಲ್ಲ್‌ಂದ ಕಟ್ಟಿದ, ಹಂಚ್ ಹೊದಿಸಿದ ದೊಡ್ಡ ಮನೆನ, ಅವರ ಹಳೆ ಮನೆನ ಮೇಲೆನ ತಟ್ಟ್‌ಲಿ ಕಟ್ಟಿಸಿದೊ. ಅಕ್ಕನ ಕುತ್ತಿಗೆಲಿ ಚೆನ್ನದ ತಾಳಿಗೆ, ಬೆಳ್ಳಿ ಕಂಠಿ ಸರ ಇದ್ದದ್, ಹೋಗಿ ಚೆನ್ನದ ಎರ್ಡೆಳೆ ತಾಳಿ ಸರ

ಬಾತ್. ಸೋದರತ್ತಿಗೆಕಳ ಮೂರು ಜನರ ಮೊದ್ವೆನೂ ಹಳೆ ಮನೆಲೇ ಆಗಿತ್ತ್. ಅಕ್ಕನ ದೊಡ್ಡ ಮಗಳ್ ಮಹಾದೇವಿ ಮಾತ್ರಾ ಹಳೆ ಮನೆಲಿ ಇರಿಕಾಕನ ಹುಟ್ಟಿದ್. ಉಳ್ದೋವೆಲ್ಲಾ ಹುಟ್ಟಿಕಾಕನ ಹೊಸ ಮನೆ ಕಟ್ಟಿಸಿ ಆಗಿತ್ತ್. ಮೊದ್ವೆ ಅಗಿ ಎಂಟ್ ವೊರ್ಸ ಮುಟ್ಟ ಅಕ್ಕಂಗೆ ಮಕ್ಕ ಆತ್ಲೆ. ನಮ್ಮ ಅವ್ವ ತುಂಬಾ ಮೊದ್ದ್ ಮಾಡ್ಸಿದೊ. ಇದ್ದ ದೇವ್ರಿಗೆಲ್ಲಾ ಹರಿಕೆ ಹೊತ್ತೊ. ಅಕ್ಕಂಗೆ ಇನ್ನ್ ಮಕ್ಕ ಆಕಿಲ್ಲೇಂತ, ಭಾವಂಗೆ ಎರಡ್ನೇ ಮೊದ್ವೆ ಮಾಡಿಕೆ ಮಾಂವ ಹೆಣ್ಣ್ ಹುಡ್ಕಿಕೆ ಸುರು ಮಾಡ್ದೊ. ಖಂಡಿಗೆಮೂಲೆಲಿ ಒಂದು ಅಜ್ಜಿ, ಮಕ್ಕ ಆಗದೋವ್ಕೆ ಮೊದ್ದು ಕೊಟ್ಟವೇಂತ ಅವ್ವಂಗೆ ಗೊತ್ತಾತ್. ಅಕ್ಕನ ಅಜ್ಜಿನಲ್ಲಿಗೆ ಕರ್‍ಕೊಂಡೋಗಿ ಅವ್ವ ಮೊದ್ದ್ ಮಾಡ್ಸಿದೊ. ಅದರ್ಲಿ ಗಬ್ಬ ನಿಂತತ್. ಆ ಅಜ್ಜಿ ಎಷ್ಟೋ ಜನಕ್ಕೆ ಮಕ್ಕಳಾಕೆ ಮೊದ್ದು ಕೊಟ್ಟೊಳೊ ಗಡ. ಅಕ್ಕ ಬಸ್ರೀಂತ ಗೊತ್ತಾಕನ ಎರ್ಡ್ ಮನೇವ್ಕೂ ಬಾಳ ಕುಸಿ ಆತ್. ಏಳ್ ತಿಂಗಳ್‍ಲಿ ದೊಡ್ಡಕ್ಕಂಗೆ ಅವ್ವ ಬಾಳ ಗೌಜಿಲಿ ಬಯಿಕೆ ಮೊದ್ವೆ ಮಾಡ್ಸಿದೊ. ಭಾವನ ಕಡೆನ ಹೆಣ್ಮಕ್ಕ ಸುಳ್ಯ ಬಸ್ ಸ್ಟೇಂಡ್‍ಂದ ಮನೆಗೆ ಮುಟ್ಟ, ದೊಡ್ಡ ಕುಕ್ಕೆಲಿ ಹೊದ್ಲು, ಅವ್ಲು, ಬೆಲ್ಲ, ಕಾಯಿ ಬಾಳೆಹಣ್ಣ್, ತಿಂಡಿ ತಿನ್ಸ್‌ಗಳ, ಬಣ್ಣ ಬಂಗಾರ, ಹೂ ಪಿಂಗಾರ– ಹೊತ್ತ್ ಕಂಡ್ ಮೆರವಣಿಗೆನ ಹಾಂಗೆ ತಂದೊ. ಅವು ಬಾಕಾಕನ ಓಲಗ ಊದಿಸಿದೊ. ಖಂಡಿಗೆಮೂಲೆ ಅಜ್ಜಿನ ಕುರ್ಚಿಲಿ ಕುದ್ರಿಸಿ ಹೊಸ ಸೀರೆ, ಚಿನ್ನದ ಉಂಗುರನ ಅಕ್ಕನ ಕೈಲಿ ಉಡ್ಗೊರೆ ಕೊಡ್ಸಿದೊ. ಅಕ್ಕ, ಭಾವ ಅಜ್ಜನ ಕಾಲ್ ಹಿಡ್ದ್ ಆಶೀರ್ವದ ಪಡ್ದೊ. ಕಾಸರಗೋಡಿನ ಕೊರಕ್ಕೋಡಿ ಮಹಾದೇವಿ ದೇವಸ್ಥಾನಕ್ಕೆ ಅವ್ವ ಹರಿಕೆ ಹೊತ್ತಿದ್ದೊ. ಆ ಹರ್ಕೆನ ಹಾಂಗೆ ಅಕ್ಕನ ಸುರುನ ಕೂಸುಗೆ 'ಮಹಾದೇವಿ' ಎಂತ ಹೆಸ್ರ್ ಇಸಿದೊ. ಕೊರಕ್ಕೋಡು ದೇವಿಯ ಸನ್ನಿಧಿಗೆ ಅಕ್ಕನನೂ, ಕೂಸುನನೂ ಕರ್‍ಕೊಂಡೋಗಿ ಹರ್ಕೆ ತೀರ್ಸಿದೊ. ಆ ಸಮಯಲಿ ಅಕ್ಕ ಹಳೆ ಮನೆಲಿ ಇತ್ತ್. ಮಹಾದೇವಿ ಹುಟ್ಟಿದ ಮೇಲೆ ದೊಡ್ಡಕ್ಕನ ಭಾಗ್ಯದ ಬಾಗಿಲ್ ತೆಗ್ತ್. ಹೊಸ ಮನೆ ಆತ್. ಹಂಚ್ ಹಾಕಿದ ಹಟ್ಟಿ ಕೊಟಗೆಗ ಆದೊ. ಇಜ್ಜೆಲಿಲೇ ಕಲ್ಲ್ ಕಟ್ಟಿದ, ಸಿಮೆಂಟ್ ಹಾಕಿದ ಪೊರ್ಲುನ ಬಾಮಿನೂ ಆತ್. ಕಾಪಿಲಮೂಲೆ ದೊಡವ, ದೊಡಪ ಸತ್ತ್ ಹೋದ ಮೇಲೆ, ಅವರ ಇಬ್ಬೊರು ಗಂಡ್ ಮಕ್ಕ, ಮೈ ತುಂಬಾ ಸಾಲ ಮಾಡ್ದೊ. ಆಗ ಅವು ಆಸ್ತಿನ ಮಾರಿಕೆ ಹೊರ್‍ಟೊ. ಆ ಆಸ್ತಿನ ದೊಡ್ಡ ಮಾಂವನೇ ಎಲ್ಲೋವು ಕೊಡುವ ಹಣಂದ ಹೆಚ್ಚಿಗೆ ದುಡ್ಡು ಕೊಟ್ಟ್, ಬರ್ಸಿಕೊಂಡೊ. ಆ ಮನೆಲಿ ಅಕ್ಕಂಗೆ ಆರು ಹೆಣ್ಣ್ ಮಕ್ಕ, ಎರ್ಡ್ ಗಂಡ್ ಮಕ್ಕ ಆದೊ. ಅದರ್ಲಿ ಅಕೇರಿನ ಗೂಡೆ, ಮಂಜುಳಾಂತ ಅದರ ಹೆಸ್ರ್, ತೀರಿ ಹೋತ್. ಉಳ್ದ ಏಳ್ ಮಕ್ಕಳಿಗೆ ಎಲ್ಲೋವ್ಕೂ ಕಾಲೇಜ್ ವಿದ್ಯಾಭ್ಯಾಸ ಕೊಟ್ಟ್‌ದ್, ಮೊದ್ವೆ ಮಾಡ್ಸಿದೊ.

* * * * *

ಚುಕ್ಕೆ–15

"ಎಲಿಮೆಂಟ್ರಿ ಸಾಲೆಲಿ ಕಲ್ತ ದಿನಗ"

ನಾ ಸಾಲೆಗೆ ಹೋಕೆ ಸುರು ಮಾಡಿಕನ ಸಣ್ಣಕ್ಕ ಸಾಲೆ ಬುಟ್ಟಿತ್ತ್. ನಂಗೆ ಒಬ್ಬಂಗೇ ಸಾಲೆಗೆ ಹೋಕೆ ಹೆದ್ರಿಕೆ. ಆಗ ಸುಳ್ಯಲಿ ಹೆಚ್ಚಿನ ಅಂಗ್ಡಿಗ ಇತ್ಲೆ. ಸಣ್ಣ ಊರು ಆಗಿತ್ತ್. ಮಂಗ್ಳೂರು – ಮಡಿಕೇರಿ ರಾಜ ರಸ್ತೆನ ಐವತ್ತ ಮೂರ್ನೆ ಮೈಲ್ ಕಲ್ಲ್ ಸುಳ್ಯಲಿ ಇತ್ತ್. ಮಂಗ್ಳೂರ್‌ಂದ ಸುಳ್ಯಕ್ಕೆ ಐವತ್ತಮೂರು ಮೈಲು ದೂರ. ಸುಳ್ಯಂದ ಮಡಿಕೇರಿಗೆ ಮೂವತ್ತೆರಡ್ ಮೈಲು ದೂರ. ಮಾರ್ಗದ ಎರ್ಡ್ ಪುಡೆಗಳ್ಲಿ ಅಲ್ಲಲ್ಲಿ ಕೆಲವು ಅಂಗ್ಡಿಗ ಮಾತ್ರ ಇದ್ದೊ. ಉಳ್ದ ಕಡೆ ಕಾಡ್, ಪೊದೆ, ಗದ್ದೆಗ ಇದ್ದೊ. ಬಸ್‌ಗಳ ಓಡಾಟ ಬಾಳ ಕಮ್ಮಿ. ದೊರೆ ಮಕ್ಕ ಮಾತ್ರ ಕಾರ್‌ಲಿ ಓಡಾಡ್ತಿದ್ದೊ. ಸುರುಗೆ ಒಂದು ಕಾಸರಗೋಡು ಬಸ್ಸ್, ಇನ್ನೊಂದು ಮೋಡರ್ನ್ ಬಸ್ಸ್ ಎರ್ಡೇ ಇದ್ದದ್.

ನಮ್ಮ ಅಪ್ಪಂಗೆ ಜೀನ್ಸ್, ಜವುಳಿ, ಅಂಗ್ಡಿ ಇತ್ತ್. ನಮ್ಮ ಅಂಗ್ಡಿನ ಕೆಳ ಭಾಗಲಿ ಶೆಟ್ರ ಅಂಗ್ಡಿ, ಗಣಪತಿ ನ್ಯಾಕರ ಕೊಡೆ ರಿಪೇರಿ ಅಂಗ್ಡಿ, ಸುಂದರ ರಾಯರ್ ಮತ್ತೆ ಸುಬ್ಬಯ್ಯ ಪ್ರಭುಗಳ ಮಾಳಿಗೆ ಮನೆಗ ಇದ್ದೊ. ಅದರ ಎಲ್ಲೋವು ಭಂಡಸಾಲೇಂತ ಕರ್ಯೊತಿದ್ದೊ. ಆಗ ಸುಳ್ಯಲಿ ನಮ್ಮ ಮನೆ ಮತ್ತೆ ಪ್ರಭುಗಳ ಇಬ್ಬೊರ ಮನೆ ಮಂಗ್ಳೂರು ಹಂಚ್ ಹೊದಿಸಿದ ಕಟ್ಟೋಣ ಆಗಿತ್ತ್. ಉಳ್ದೊವೆಲ್ಲಾ ಮುಳಿ ಹುಲ್ಲುನ ಕಟ್ಟೋಣಗ. ಕೆಲ್ಸಿಕಟ್ಟೆಲಿ ಖಾದ್ರೆ ಸಾವ್ಕಾರನ

ಹಂಚಿನ ಕಟ್ಟೋಣ ಇತ್ತ್. ಮೇಲೆನ ಪೇಟೆಲಿ, ಪಳ್ಳಿ ಹಕ್ಕಲೆ ಕಂಡಕುಂಞಿ ಹೆಸ್ರ್‌ನ ಅಬ್ಕಾರಿ ಕಂಟ್ರಾಕ್ಟ್‌ದಾರರ ಮಾಳಿಗೆ ಮನೆ ಹಂಚ್ ಹೊದಿಸಿದ್ ಆಗಿತ್ತ್. ಪ್ರಭು ಅಣ್ಣ – ತಮ್ಮಂದರ ಎರ್ಡ್ ಕಟ್ಟೋಣದ ನೊಡುಲಿ ಉದ್ದದ ಮುಳಿ ಕಟ್ಟೋಣ ಇತ್ತ್. ಅಲ್ಲಿ ದೂಮಣ್ಣ ರೈಗಳ ಗೂಡಂಗಡಿ, ದೊಡ್ಡ ಸರಳಾಯ ಮತ್ತೆ ವೆಂಕಟ್ರಾಯರ ಹೋಟ್ಲ್, ಅಬ್ದುಲ್ ಖಾದರ್ ಸಾಹೇಬರ ಕಟ್ಲೇರಿ ಅಂಗಡಿ ಇದ್ದೊ. ಸುಬ್ಬಯ್ಯ ಪ್ರಭುಗಳ ಭಂಡಸಾಲೆನ ಪುಡೆಲಿ ಇಸ್ಮಾಯಿಲ್ ಸ್ಯಾಬರ ಗೂಡಂಗಡಿ ಇತ್ತ್. ಆ ಮೇಲೆ ಇದ್ದ ಕಟ್ಟೋಣ ಪೋಸ್ಟಾಫೀಸ್. ಕೆಳಗೆನ ಪೇಟೆಲಿ ಅಂಗ್ಡಿಗಳೇ ಇತ್ಲೆ. ಬಾಳೇಮಕ್ಕಿ ಗದ್ದೆ ಹಕ್ಕಲೆ ಕೆಲವು ಮಾಪ್ಳೆಗಳ ಮನೆಗ ಇದ್ದೊ. ಅಲ್ಲಿ ಗದ್ದೆ ಬೇಸಾಯ ಮಾಡ್ತಿದ್ದೊ. ಅದರ ಕೆಳಗೆ ಬಲ ಬದಿಲಿ ಬಳೆಗಾರರ ಅಂಗ್ಡಿ ಇತ್ತ್. ಕುಂಜ್ಞಿಯವರ ಕಟ್ಟೋಣ ಇದ್ದ ಜಾಗೆಲಿ ಒಂದೆರ್ಡ್ ಮುಳಿ ಮನೆಗ ಇದ್ದೊ. ಅಲ್ಲಿ ಪಕ್ಕೀರ ಸ್ಯಾಬರ ಅವ್ವನ ಮನೆ ಇತ್ತ್. ಅವು ಹುರಿಯಕ್ಕಿ ಮಾಡಿ ಮಾರ್ತಿದ್ದೊ. ನಮ್ಮ ಅಂಗ್ಡಿಗೆ ಹುರಿಯಕ್ಕಿ ತಂದ್ ಕೊಡ್ತಿದ್ದೊ. ಅದರ ಪಕ್ಕಲಿ ಶಾಂತ ನ್ಯಾಕ ಮಾಸ್ಟ್ರ ಮನೆ ಮತ್ತೆ ಮಲ್ಯರ ಮನೆ ಇತ್ತ್. ಸುಂದರ ರಾಯರ ಮಗಳ್ ಪದ್ಮಾವತಿ, ಗಣಪತಿ ನ್ಯಾಕರ ಮಗಳ್ ರಮಾಬಾಯಿ, ಮಲ್ಯರ ಮಗಳ್ ರೋಹಿಣಿ – ನಾವೆಲ್ಲಾ ಒಟ್ಟಿಗೆ ಒಂದೇ ಕ್ಲಾಸ್‌ಲಿ ಓದ್‌ತಿದ್ದೊ. ಶಾಂತ ನ್ಯಾಕ ಮಾಸ್ಟ್ರ ಮಗಳ್ ಪದ್ಮ ನಯನಿ ಮತ್ತೆ ಸಣ್ಣಕ್ಕ ದಮಯಂತಿ ಒಂದೇ ಕ್ಲಾಸ್‌ನೊವು. ಶಾಂತ ನ್ಯಾಕ ಮಾಸ್ಟ್ರ್‌ಗೆ ಪಿಂಚಿಣಿ ಆದ ಮೇಲೆ ಅವು ಅವರ ಊರಿಗೆ ಹೊರ್ಟ್ ಹೋದೊ. ಅವರ ಹೆಣ್ಣ್ ಎಳ್ಳುಂಡೆ ಮಾಡಿ ಮಾರ್ತಿದ್ದೊ. ಒಂದಾಣೆಗೆ ಆರು ಎಳ್ಳುಂಡೆ ಸಿಕ್ತಿತ್ತ್. ಸಣ್ಣಕ್ಕನೊಟ್ಟಿಗೆ ಅವರ ಮನೆಗೆ ಹೋಗಿ ಒಂದೆರಡಾಣೆನ ಎಳ್ಳುಂಡೆ ನಾವು ತಕಂಬತಿದ್ದೊ. ಮಲ್ಯರ ಮನೆ ಹಕ್ಕಲೆ ಬುಡಾನ್ ಸ್ಯಾಬರ ಮನೆ ಇತ್ತ್. ಅದರ್‌ಂದ ಮೇಲೆ ಸಿಕ್ಕುದು ಧರ್ಮಾಸ್ಪತ್ರೆ. ಆಸ್ಪತ್ರೆಂದ ಒಂದು ಇಪ್ಪತ್ತ್ ಮಾರ್ ದೂರಲಿ ನಾ ಓದಿದ ಎಲಿಮೆಂಟ್ರಿ ಸಾಲೆ ಇತ್ತ್.

ನಾ ಒಬ್ಬನೇ ಸಾಲೆಗೆ ಹೋದ್ಲೇಂತ ಮೊರ್ಡ್‌ತಿದ್ದೆ. ಸಣ್ಣ ಅಕ್ಕ ದಿನಾ ನನ್ನ ಸಾಲೆಗೆ ಕರ್ಕಂಡ್ ಹೋಗ್ತಿತ್ತ್. ಹಿಂಬೊತ್ತು ಅದ್ ಸಂಗೀತ ಕ್ಲಾಸಿಗೆ ಬಾತಿತ್ತ್. ಆಗ ಎಲಿಮೆಂಟ್ರಿ ಸಾಲೆ ಹಕ್ಕಲೆ ಇದ್ದ ಮುಳಿ ಹಾಕಿದ ಕಟ್ಟೋಣಲಿ ಸಂಗೀತ ಮಾಸ್ಟ್ರೆ ಶಿವಣ್ಣ ಗೌಡ್ರ್ ಇದ್ದೊ. ಹಿಂಬೊತ್ತು ನಾ ಅಕ್ಕನೊಟ್ಟಿಗೆ ಮನೆಗೆ ಬಾತಿದ್ದೆ. ಒಂದೆರ್ಡ್ ತಿಂಗಳ್‌ಲಿ ಅಕ್ಕ ಸಂಗೀತ ಕ್ಲಾಸಿಗೆ ಬಾವುದರ ನಿಲ್ಸಿತ್. ಅದರ್‌ಂದ ಮೇಲೆ ಸಣ್ಣಕ್ಕ ನನ್ನ ಸಾಲೆಗೆ ಕರ್ಕೊಂಡೋದ್ಲೇಂತ ಹೇಳ್ತ್. ನಂಗೆ ಒಬ್ಬಂಗೇ ಹೋಕೆ ಹೆದ್ರಿಕೆ ಆದೇಂತ ಹೇಳ್ದೆ. ಒಮ್ಮೊಮ್ಮೆ ಅಣ್ಣ ಅರ್ಧದಾರಿ ಮುಟ್ಟ ನನ್ನ ಕರ್ಕೊಂಡೋಗಿ ಬುಡ್ತಿತ್ತ್. ಅಂವ ನನ್ನೊಟ್ಟಿಗೆ, 'ನೀ ಒಬ್ಬಳೇ ರಸ್ತೆ ಕರೆಲೇ ಸಾಲೆಗೆ ಹೋಗೂಂತ ಹೇಳ್ತಿತ್ತ್. ನಾ ಒಪ್ಪ್‌ತಿತ್ಲೆ. ಆ ಸಮಯಲಿ ದಾರಿಲಿ ಜನ ಸಂಚಾರ ಇರ್ತಿತ್ಲೆ. ಮಿಲಿಟ್ರಿ ಲೋರಿಗ ಸಾಲ್ ಸಾಲ್ ಹೋಗ್ತಿದ್ದೊ. ಅವು ದಾರಿಲಿ ಸಿಕ್ಕಿದ ಮಕ್ಕಳ ಎತ್ತಿಕಂಡ್

ಹೋದವೇಂತ ಸಾಲೆಲಿ ಮಕ್ಕ ಹೆದ್ರ್‌ಸ್‌ತಿದ್ದೊ. ನಂಗೆ ಮಿಲಿಟ್ರಿ ಲೋರಿಗಾಂತೇಳ್ರೆ ಬಾಳ ಹೆದ್ರಿಕೆ. ಅದ್ ಬಾಕಾಕನ ನಾ ರಸ್ತೆ ಕರೆಲಿ ಇದ್ದ ಕಣಿಗೆ ಇಳ್ದ್ ಕಣ್ಣ್ ಮುಚ್ಚಿ ಕುದ್ರ್‌ತಿದ್ದೆ. ಅದೆಲ್ಲಾ ಹೋದ ಮೇಲೆ ಕಣಿಂದ ಮೇಲೆ ಬಾತಿದ್ದೆ. ಕನ್ಸ್‌ಲಿನೂ ನಂಗೆ ಮಿಲಿಟ್ರಿ ಲಾರಿಗ ಬಂದ್ ನನ್ನ ಎತ್ತಿಕಂಡ್ ಹೋದ ಹಾಂಗೆ ಆಗಿ ಹೆದ್ರ್‌ತಿದ್ದೆ. ಅಕೆರಿಗೆ ಪೋಲೀಸ್ ಲೈನ್‌ನ ಸುನಂದಾಂತ ಹೇಳ್ವ ಒಂದು ಗೂಡೆನೊಟ್ಟಿಗೆ ಹೋಕೆ ಅಣ್ಣ ಏರ್ಪಾಡ್ ಮಾಡ್ತ್. ಆಗ ನಂಗೆ ಧೈರ್ಯ ಬಾತ್.

ನಂಗೆ ಒಂದನೇ ಕ್ಲಾಸ್‌ಲಿ ಸುರುಗೆ ಅಮ್ಮಣ್ಣಿ ಟೀಚರ್ ಇದ್ದೊ. ಅವರ ಮನೆ ನಮ್ಮ ಸಾಲೆನ ಎದ್ರ್‌ಗಡೆ ರಸ್ತೆನ ಇನ್ನೊಂದು ಪುಡೆಲಿ ಎತ್ತರಲಿ ಇತ್ತ್. ಅದ್ ನಮ್ಮ ಸಾಲೆಗೆ ಕಾಂಬತಿತ್ತ್. ಎಷ್ಟೋ ಸಲ ಅವು ಅವರ ಮನೆಂದ ಸಾಲೆಗೆ ಹೊರ್‍ಟ್ ಬಾವುದರ ನಾವು ನೋಡಿಕಂಡ್ ಕ್ಲಾಸ್‌ನ ಬಾಗಿಲ್‌ಲಿ ನಿಲ್ತಿದ್ದೊ. ಅವು ತುಂಬಾ ಬೆಳ್ಳಂಗೆ ಇದ್ದ್ ಭಾರೀ ಪೊರ್ಲು ಇದ್ದೊ. ಅವ್ಕೆ ಪ್ರಫುಲ್ಲಚಂದ್ರಂತ ಕರೆವ ಗಂಡ್ ಕೂಸು ಇತ್ತ್. ಅಂವ ಸಾ ಪೊರ್ಲು, ಪೊರ್ಲಾಗಿ, ಗುಂಡು ಗುಂಡಾಗಿ ಅವರಾಂಗೇ ಇತ್ತ್. ಆ ಕೂಸ್‌ನನೂ ಅವು ಸಾಲೆಗೆ ಒಟ್ಟಿಗೆ ಕರ್ಕಂಡ್ ಬಾತಿದ್ದೊ. ನಾವು ಅದರ ಆಡ್ಸ್‌ತಿದ್ದೊ. ಅಮ್ಮಣ್ಣಿ ಟೀಚರ್ ಬರೇ ಪಾಪದ ಟೀಚರ್. ಮಕ್ಕಳ್ಗೆಲ್ಲಾ ಅವರ ಕಂಡರೆ ಬಾಳ ಪ್ರೀತಿ. ಅವ್ಕೆ ಯಾಗೋಳು ಸೌಖ್ಯ ಇರ್ತಿತ್ಲೆ. ಅಕೆರಿಗೆ ಅವು ಸಾಲೆಗೆ ಬಾವುದರ ನಿಲ್ಸಿದೊ. ಅವರ ಬದ್ಲಿಗೆ ಶೇಷಮ್ಮ ಟೀಚರ್ ಬಂದೊ. ಶೇಷಮ್ಮ ಟೀಚರ್ ಸಾ ಮಕ್ಕಳ ಬಾಳ ಕೊಂಡಾಟಲಿ ನೋಡ್ತಿದ್ದೊ. ಪ್ರೀತಿಂದ ಪಾಠ ಕಲ್ಸ್‌ತಿದ್ದೊ. ನಾ ದಿನಾ ಅವ್ಕೆ ನಮ್ಮ ಮನೆಂದ ಇರ್‌ವಂತಿಗೆ ಮಾಲೆ, ಅಬ್ಬಂತಿಗೆ ಮಾಲೆ ತಕೊಂಡೋಗಿ ಕೊಡ್ತಿದ್ದೆ. ಅವರ ಬಾಡಿಗೆ ಮನೆ ಸಾಲೆ ಹಕ್ಕಲೆ ಇತ್ತ್. ದಿನಾ ನಾವು ಮಕ್ಕ ಅವರ ಮನೆಗೆ ನೀರ್ ಕುಡ್ಯಕೆ ಹೋಗ್ತಿದ್ದೊ. ಅವ್ಕನೂ ಒಂದೆರ್‍ಡ್ ತಿಂಗಳ್‌ಲಿ ಅವರ ಊರ್ ಕನಕಮಜಲಿಗೆ ವರ್ಗ ಆತ್. ಅದರ ನಂತ್ರ ಬಂದವೇ ಕೊಳಂಬೆ ಪುಟ್ಟಣ್ಣ ಗೌಡ್ರ್. ಅವು ಕೂಡಾ ಒಂದೆರ್‍ಡ್ ತಿಂಗಳ್‌ಲಿ ಹೆಚ್ಚಿಗೆ ಕಲ್ಯಕೆ ಹೋದೋ. ಆ ಮೇಲೆ ಬಂದವೇ ಕಮಲ ಟೀಚರ್. ಹಾಂಗೆ ನಂಗೆ ಒಂದನೇ ಕ್ಲಾಸ್‌ಲಿ, ನಾಕ್ ಜನ ಟೀಚರ್‌ಗ ಆದೊ.

ಕೊಳಂಬೆ ಪುಟ್ಟಣ್ಣ ಗೌಡ್ರಿಗೂ ಮಕ್ಕಾಂತೇಳ್ರೆ ಬಾಳ ಪ್ರೀತಿ. ಅವು ನಮ್ಮ ನೆಗಾಡ್ಸಿಕಂಡ್, ಕತೆ ಹೇಳಿಕಂಡ್ ಪಾಠ ಮಾಡ್ತಿದ್ದೊ. ಹೀಂಗೆ, ಅಮ್ಮಣ್ಣಿ ಟೀಚರ್, ಶೇಷಮ್ಮ ಟೀಚರ್, ಕೊಳಂಬೆ ಮಾಸ್ಟ್ರ ಮೂರು ಜನ ಮಕ್ಕಳೊಟ್ಟಿಗೆ ಮಕ್ಕ ಆಗಿದ್ದೊ. ನಾವ್ಗೆ ಗುರುಗಂತೇಳ್ರೆ ಹೆದ್ರಿಕೆನೇ ಇರ್ತಿತ್ಲೆ. ಆದರೆ ಕಮಲ ಟೀಚರ್ ಬಂದ ಮೇಲೆ, ನಾವುಗೆ ಬೆತ್ತದ ರುಚಿ ಗೊತ್ತಾತ್. ಅವು ಹಂಞ ತಪ್ಪಿರೂ, ಅಂಗಿ ಎತ್ತಿ ಹೊಡ್ಯೊತಿದ್ದೊ. ಎಷ್ಟೋ ಮಕ್ಕ ಅಂಗಿಲಿ ಉಚ್ಚೆ ಹೊಯ್ದ್‌ಕೊಂಬೊತಿದ್ದೊ. ಮಕ್ಕ ಎಲ್ಲಾ ಹೆದ್ರಿಕಂಡ್ ಬೇಗ ಬೇಗ ಪಾಠ ಕಲ್ಯಕೆ ಸುರು ಮಾಡ್ದೊ.

ಹೀಂಗಿರಿಕನ ಒಂದು ದಿನ ಮಕ್ಕ, ಅಮ್ಮಣ್ಣಿ ಟೀಚರ್ ತೀರಿ ಹೋದೋಂತ

ಹೇಳ್ದೊ. ಸಾಲೆಲಿದ್ದ ಎಲ್ಲಾ ಮಾಸ್ಟ್ರ್‌ಗ ಟೀಚರ್‌ಗ, ಅವರ ಮನೆಗೆ ಹೋಗಿ ನೋಡಿ ಬಂದೊ. ಸಾಲೆಗೆ ರಜೆ ಕೊಟ್ಟೊ. ನಾವು ಮಕ್ಕ, ಅವರ ಮನೆ ಹಕ್ಕಲೆ ಹೋಗಿ, ದರೆ ಮೇಲೆ ನಿಂತ್ ನೋಡ್ದೊ. ಕೆಳಗೆ ಇಜ್ಜೆಲಿಲಿ ಅವರ ಬಿಳಿ ಸೀರೆ ಹೊದಿಸಿ ಮೊಲ್ಗಿಸಿದ್ದೊ. ನಂಗೆ ಅದರ ನೋಡಿ ಹೆದ್ರಿಕೆ ಆತ್. ನಾ ಮಕ್ಕಳೊಟ್ಟಿಗೆ ಮನೆಗೆ ಪೋಯೀಂತ ಹೇಳಿ, ಬೇಗ ಬೇಗ ಅಲ್ಲಿಂದ ಹೊರ್ಟೆ.

ನಾವುಗೆ ಒಂದನೇ ಕ್ಲಾಸ್‌ಲಿ ನೆಲಲಿ ಚೋಕು ತುಂಡುಂದ ಅಕ್ಷರ ಬರ್ದ್ ಅದರ ಮೇಲೆ ಮಂಜೊಟಿ ಕಾಯಿ, ಇಲ್ಲರೆ ಪೊಂಗಾರೆ ಬೀಜ ಇಸಿಕೆ ಹೇಳ್ತಿದ್ದೊ. ನಾವು ಒಂದೊಂದೆ ಬೀಜನ ಅಕ್ಷರದ ಮೇಲೆ ಇಸಿಕಾಕನ ನಾವುಗೆ ಅಕ್ಷರಗ ಮರ್ತ್ ಹೋಗ್ತಿತ್ಲೆ. ನಾವುಗೆ ಅದೊಂದ್ ಕುಸಿನ ಆಟ ಆಗ್ತಿತ್ತ್. ಹಾಂಗಾಗಿ ಬೇಗ ಬೇಗ ಅಕ್ಷರಗಳ ಕಲ್ತೊ. ಕತೆಗಳ ಹೇಳ್ತಿದ್ದೊ. ಅದರ ನಾಟಕದಾಂಗೆ ಒಬ್ಬೊಬ್ಬಂಗೆ ಒಂದೊಂದು ಪಾತ್ರ ಕೊಟ್ಟ್ ಆಡ್ಸ್‌ತಿದ್ದೊ. ಆಗ ನಾವುಗೆ ಆ ಕತೆ ಮರ್ತ್ ಹೋಗ್ತಿತ್ಲೆ. ಇದರೆಲ್ಲಾ ಕಮಲ ಟೀಚರ್ ಮಾಡ್ತಿದ್ದೊ. ಅವು ಮಕ್ಕಳಿಗೆ ಪಾಠ ಕಲ್ಸುದರ್ಲಿ ಬಾರೀ ಉಸಾರ್. ಅವು ಹೇಳಿ ಕೊಟ್ಟ ಪುಣ್ಯ ಕೋಟಿ ದನದ ಕತೆ ಮತ್ತೆ ಗುಡು ಗುಡು ಗುಮ್ಮಟೆ ದೇವ್ರ ಕತೆ ಬಾಳ ಪೊರ್ಲು ನೆಂಪುಟ್ಟು. ಗುಡು ಗುಡು ಗುಮ್ಮಟ ದೇವ್ರ ಕತೆಲಿ, ಆಡ್‌ನ ಮೊರಿ, ಅಜ್ಜಿ ಮನೆಂದ ಬಾಕನ ಡೋಲ್‌ನೊಳಗೆ ಕುದ್ದ್‌ಕಂಡ್, " ಆಡಿನ ಮರಿ ಅಜ್ಜಿ ಮನೆಯಲ್ಲಿ ಆಡುತ್ತದೆ. ಡೋಲು ಇಲ್ಲಿ ಓಡುತ್ತದೆ. ಗುಡುಗು ಗುಮ್ಮಟೆ ದೇವ್ರಿಗೆ ದಾರಿ ಬಿಡಿ"– ಎಂತ ಹೇಳಿಕಂಡ್ ಕಾಡ್‌ಲಿ ಇದ್ದ ಸಿಂಹ, ಕರಡಿ, ಹುಲಿ, ಕುದ್ಕಂಗಳ ಬಾಯಿಂದ ತೊಪ್ಪಿಸಿಕಂಡ್ ಬಾವ ಕತೆನ ನನ್ನ ಮಕ್ಕಳಿಗೆ, ಪುಳ್ಳಿಕಳಿಗೆ ಹೇಳಿ ಕುಸಿ ಪಟ್ಟಳೆ.

ಎರಡ್ನೇ ಕ್ಲಾಸ್‌ಲಿ ನಾವ್ಗೆ ರಾಮಕ್ಕ ಟೀಚರ್ ಇದ್ದೊ. ಅವು ಶೇಷಮ್ಮ ಟೀಚರ ತಂಗೆ. ಒಂದನೇ ಕ್ಲಾಸ್‌ಲಿ ನಾ ಎಡ ಕೈಲಿ ಬರ್‍ಯತಿದ್ದೆ. ಆದರೆ ಎರಡ್ನೇ ಕ್ಲಾಸಿಗೆ ಬಾಕಾಕನ ನಾ ಎಡ ಕೈಲಿ ಬರ್‍ಯೊದರ ನೋಡಿ, ರಾಮಕ್ಕ ಟೀಚರ್ ನನ್ನ ಎಡ ಕೈ ಗಂಟ್‌ಗೆ ಹೊಡ್ದ್‌ದ್, ಬಲ ಕೈಲಿ ಬರ್‍ಯಕೆ ಅಭ್ಯಾಸ ಮಾಡ್ಸಿದೊ. ಅವು ನಂಗೆ ಮಾಡ್ದ ಈ ಉಪಕಾರನ ನಾ ನನ್ನ ಜಲ್ಮ ಇಡೀ ಮರ್‍ಯಕಿಲ್ಲೆ. ರಾಮಕ್ಕ ಟೀಚರ್‌ಗೆ ಮಕ್ಕಾಂತೇಳ್ರೆ ಬಾಳ ಪ್ರೀತಿ. ಅವು ರಾಗಲಿ ಪದಗಳ ಹೇಳ್ತಿದ್ದೊ. ನಾವ್ಗೊ ರಾಗಲಿ ಹಾಡಿಕೆ ಕಲ್ಸ್‌ತಿದ್ದೊ. ನನ್ನ ಮಕ್ಕಳಿಗೂ ವಿದ್ಯೆ ಕಲ್ಸಿದ ಗುರುಗ. ಅವು, ಅರ್ಧಲೇ ಸಾಲೆ ಬುಟ್ಟ್ ಟೀಚರ್ ಟ್ರೈನಿಂಗ್ ಮಾಡಿಕೆ ಹೋದೊ. ನಾವ್ಗೆ ಆಗ ಮಿನಾಕ್ಷಿ ಟೀಚರ್ ಬಂದೊ. ಅವರ ಗಂಡನೂ ಮಾಸ್ಟ್ರ. ಅವು ಐದ್ನೇ ಕ್ಲಾಸ್‌ಗೆ ಕಲ್ಸ್‌ತಿದ್ದೊ. ಲಕ್ಷ್ಮಿನಾರಾಯಣ ಮಾಸ್ಟ್ರ ಮನೆ ಹಕ್ಕಲೆ ಅವು ಮನೆ ಮಾಡಿದ್ದೊ. ಅದ್ ನಮ್ಮ ಸಾಲೆ ಹಕ್ಕಲೆ ಇತ್ತ್. ಅವು ಸಾ ಮಕ್ಕಳ ಮೆಚ್ಚಿಗೆನ ಟೀಚರ್ ಆದೊ.

ನಾ ಮೂರ್ನೇ ಕ್ಲಾಸಿಗೆ ಬಾಕಾಕನ ನಾವ್ಗೆ ಮಡ್ತಿಲ ಕೃಷ್ಣಪ್ಪ ಮಾಸ್ಟ್ರ ಪಾಠಕ್ಕೆ ಬಂದೊ. ಅವರ ಮಕ್ಕ, ಮಾಚಮ್ಮ ಮತ್ತೆ ಯಶೋದ ನನ್ನ ಕ್ಲಾಸ್‌ಲಿ ಇದ್ದೊ.

ಅವರ ಕ್ಲಾಸ್‌ಲಿ ಮಕ್ಕ ತುಂಬಾ ಗಲಾಟೆ ಮಾಡ್ತಿದ್ದೊ. ಅವು ಬಾಳ ಪಾಪದ ಮಾಸ್ಟ್ರ. ಮಕ್ಕಳಿಗೆ ಹೊಡ್ಯತಿತ್ಲೆ. ಅವು ಸಾಲೆಲಿ ಯಾಗೋಳು ನಿದ್ದೆ ತೂಂಗಿಕಂಡೇ ಇರ್ತಿದ್ದೊ. ಕುರ್ಚಿಲಿ ಎರ್ಡ್ ಕಾಲ್ನ ಮೊಡ್ಚಿ, ಚುದ್ಕರ ಕುದ್‌ಕಂಡ್ ನಿದ್ದೆ ಮಾಡ್ತಿದ್ದೊ. ಆ ವೊರ್ಸ ನಾವು ಆಡಿಕಂಡೇ ಪಾಸಾದೊ.

ನಾಕ್ನೇ ಕ್ಲಾಸ್‌ಗೆ ಬಾಕಾಕನ ನಾವ್ಗೆ ಕೃಷ್ಣಯ್ಯ ಆಚಾರಿ ಮಾಸ್ಟ್ರ ಪಾಠಕ್ಕೆ ಇದ್ದೊ. ನನ್ನ ಎಲಿಮೆಂಟ್ರಿ ಸಾಲೆನ ಜೀವನಲಿ ಆ ನಾಕ್ನೇ ಕ್ಲಾಸ್‌ನ ಪಾಠ ಹೊಸ ಜೀವನನ ತೋರ್ಸಿತ್. ಹೊಸ್ತ್ ಹೊಸ್ತ್ ಪಾಠಗಳ ಕಲ್ತೆ. ಅವು ಬರೇ ಪಾಠ ಮಾಡ್ದರ್ಲಿ ಮಾತ್ರ ಅಲ್ಲ. ಉಳ್ದದರ್ಲೂ ಬಾಳ ಹೆಸ್ರ ಮಾಡ್ದೋವು. ಅವು ರಾಮಾಯಣ, ಮಹಾಭಾರತ ಕತೆಗಳ ಮಕ್ಕಳಿಗೆ ಹೇಳ್ತಿದ್ದೊ. ಅದರ ಬಣ್ಣಿಸಿಕಾಕನ, ನಾವ್ಗೂ ಆ ಕಾಲಲೇ ಇದ್ದವರಾಂಗೆ ಆಗ್ತಿತ್ತ್. ರಾಮಾಯಣದ ದಶರಥ ಮಹಾರಾಜನ ವಂಶಾವಳಿ, ಮಹಾಭಾರತದ ರಾಜರ ವಂಶಾವಳಿ ಪಟ್ಟಿನ ಬೋರ್ಡ್‌ಲಿ ಬರ್ದ್ ನಾವುಗೆ ವಿವರ್ಸ್‌ತಿದ್ದೊ. ಪುರಾಣ ಕಾಲಲಿ ಇದ್ದ ರಾಜರ್‌ಗಳ ಹೆಸ್ರ್‌ಗಳ ಬೋರ್ಡ್‌ಲಿ ಬರ್ದ್, ನಮ್ಮ ಬಾಯಿಲಿ ಹೇಳ್ಸ್‌ತಿದ್ದೊ. ಸಪ್ತ ಸಮುದ್ರ್‌ಗ, ಸಪ್ತ ಋಷಿಗ, ಸಪ್ತ ವರ್ಣಗ, ನವರತ್ನಗ, ಚಪ್ಪನ್ನಾರ್ ದೇಶಗ, ಕೃಷ್ಣನ ಅಷ್ಟಮಹಿಷಿಗ, ನೂರೊಂದು ಕೌರವರ ಹೆಸ್ರ್‌ಗ, ಇದರೆಲ್ಲಾ ಬೋರ್ಡ್‌ಲಿ ಬರ್ದ್, ನಮ್ಮೊಟ್ಟಿಗೆ ಬರ್ಕಂಬಕೆ ಹೇಳ್ತಿದ್ದೊ. ಬಾಯಿ ಪಾಠ ಮಾಡ್ಸ್‌ತಿದ್ದೊ. ಇದಲ್ಲದೆ ಕೋಲಾಟಲಿ ಅವು ಎತ್ತಿದ ಕೈ. ಅವರ್‌ಂದ ಇಡೀ ಕ್ಲಾಸ್‌ಗೆ ಕ್ಲಾಸೇ, ಬೇರೆ ಬೇರೆ ತರದ ಕೋಲಾಟಗಳ ನಾವು ಕಲ್ತೊ. ಇಪ್ಪತ್ತರ ವರೆಗೆ ಮಗ್ಗಿ ಬಾಯಿ ಪಾಠ ಎಲ್ಲೋವೂ ಕಡ್ಡಾಯ ಕಲ್ಯಕಾಗಿತ್ತ್. ಇಲ್ಲರೆ ಅವರ ಹಕ್ಕಲೆ ಇದ್ದ ನಾಗರ ಬೆತ್ತಲಿ, ಬೆನ್ನ್‌ಗೆ, ಕಾಲ್ಗಂಟ್‌ಗೆ ಚಡಿಯೇಟ್ ಬೀಳ್ತಿತ್. ಅವರ ನಾಗರ ಬೆತ್ತಾಂತೇಳ್ರೆ ನಾವ್ಗೆಲ್ಲಾ ಬಾಳ ಹೆದ್ರಿಕೆ. ತಪ್ಪು ಮಾಡ್ದೋವ್ಕೆ ನೂರೊಂದು ಸಲ ಏತ ಹಾಕ್ಸ್‌ತಿದ್ದೊ. ಏತಾಂತೇಳ್ರೆ, ಎರ್ಡ್ ಕೈಲಿ ಕೆಬಿನ ಹಿಡ್ಕಂಡ್ ಕುದ್ರುದು ಎದ್ರುದು ಮಾಡೊಕು. ಮಕ್ಕಳಿಗೆ ಬೊಚ್ಚಿ ಬೊಚ್ಚೆ ಹೋಗ್ತಿತ್ತ್. ಮತ್ತೆ ಅವು ಎಂದೂ ತಪ್ಪು ಮಾಡ್ತಿತ್ಲೆ. ಆದರೆ ಅವು ಮಕ್ಕಳ ಬಾಳ ಕೊಂಡಾಟಲಿ ಮಾತಾಡ್ಸ್‌ತಿದ್ದೊ. ನಮ್ಮ ನಮ್ಮ ಮನೆ ಭಾಷೆಲಿ ನಮ್ಮೊಟ್ಟಿಗೆ ಮಾತಾಡಿ, ನಮ್ಮ ಮನ್ಸ್‌ನ ಗೆಲ್ತಿದ್ದೊ. ಭಜನೆ ಪದಗಳ ಎಲ್ಲಾ ಬರ್ದ್, ರಟ್ಟ್‌ಗೆ ಅಂಟಿಸಿ, ಕ್ಲಾಸ್‌ಲಿ ತೂಗಾಡ್ಸ್‌ತಿದ್ದೊ. ಅದರ ನಮ್ಮ ಕೈಲಿ ಬಾಯಿ ಪಾಠ ಮಾಡ್ಸಿ ಹಾಡ್ಸ್‌ತಿದ್ದೊ. ಒಂದು ಗಳಿಗೆನ ಸಾ ಅವು ಹಾಳ್ಮಾಡ್ತಿತ್ಲೆ. ಅವು ಒಬ್ಬ ಆದರ್ಶ ಗುರುಗ. ನಾ ಮಹಿಳಾ ಸಮಾಜದ ಅಧ್ಯಕ್ಷೆ ಆಗಿರಿಕಾಕನ, ಅವ್ಕೆ ಪಿಂಚಣಿ ಸಿಗ್ತಿತ್ತ್. ಅವರ ಮನೆಗೆ ಹೇಳಿ ಕಳ್ಸಿ, ಅವರ ನಾ ನಮ್ಮ ಮಹಿಳಾ ಸಮಾಜದ ಬಾಲವಾಡಿ ಕ್ಲಾಸ್‌ಗೆ ಮಾಸ್ಟ್ರಾಗಿ ಮಾಡ್ದೆ. ಆಗ ಅವು ಮಕ್ಕಳಿಗೆ ಬಾಳ ಲಾಯ್ಕ್‌ಲಿ ಪಾಠ ಮಾಡಿ ನೋಡಿಕಂಡ್, ಮಾರ್ಗದರ್ಶನ ಮಾಡ್ದೊ. ನನ್ನ ನಾಕ್ನೇ ಕ್ಲಾಸ್‌ನ ಪಾಠನೇ, ನನ್ನ ಜೀವನಲಿ ಕಲ್ತದಿಕ್ಕೆ ಗಟ್ಟಿನ ಪಾಯಕಲ್ಲ್ ಆಗಿತ್ತ್.

ಐದ್ನೇ ಕ್ಲಾಸಿಗೆ ಬಾಕನ ನಾವ್ಗೆ ದೇಂಗೋಡಿ ಸುಬ್ಬಪ್ಪ ಮಾಸ್ಟ್ರ ಪಾಠಕ್ಕೆ ಇದ್ದೊ.

'ಎ' ಕ್ಲಾಸ್‌ಗೆ ಸುಬ್ಬಪ್ಪ ಮಾಸ್ಟ್ರ್, 'ಬಿ' ಕ್ಲಾಸ್‌ಗೆ ಮೀನಾಕ್ಷಿ ಟೀಚರ ಗಂಡ ಪಾಠ ಮಾಡ್ತಿದ್ದೊ. ನಾ 'ಎ' ಕ್ಲಾಸ್‌ಲಿ ಇದ್ದೆ. ಅವು ಸಾ ಪಾಠ ಲಾಯ್ಕ್‌ಲಿ ಮಾಡ್ತಿದ್ದೊ. ಅವರ ಮಗಳ್ ಭಾಗೀರಥಿ ನನ್ನ ಕ್ಲಾಸ್ ಮೇಟ್ ಆಗಿತ್ತ್. ಆ ಸಮಯಲಿ ಮಕ್ಕಳ ಸಂಖ್ಯೆ ಜಾಸ್ತಿ ಇದ್ದ ಕಾರಣ, ಸಾಲೆಲಿ ಜಾಗೆ ಸಾಕಾಗದೆ, ಗೌಡ ಬೋರ್ಡಿಂಗ್‌ಲಿ, ಐದ್ನೇ ಕ್ಲಾಸ್‌ನ ನಡ್ಸ್‌ತಿದ್ದೊ. ಆಗ ಎಲಿಮೆಂಟ್ರಿ ಸಾಲೆಗೆ ಮೂರು ಕಟ್ಟೋಣ ಇತ್ತ್. ಮಕ್ಕ ಹೆಚ್ಚಾಗಿ ಒಮ್ಮೊಮ್ಮೆ ಒಂದನೇ ಕ್ಲಾಸ್‌ನ ಹಕ್ಕಲೆ, ದರೆ ಮೇಲೆ ಇದ್ದ, ಚಾಕಟೆ ಮರದ ನೆರ್ಳ್‌ಲಿ, ಮಕ್ಕಳ ಕುದ್ರಿಸಿ ಪಾಠ ಮಾಡ್ದ ಗಳ್ಗೆನೂ ಇತ್ತ್. ಇದೆಲ್ಲಾ ನಂಗೆ ಪೊರ್ಲುಲಿ ನೆಂಪುಟ್ಟು.

ಆರ್ನೇ ಕ್ಲಾಸೇ ನಾ ಎಲಿಮೆಂಟ್ರಿ ಸಾಲೆಲಿ ಕಲ್ತ ಅಕೇರಿನ ಕ್ಲಾಸ್. ಅಲ್ಲಿ ನಾವ್ಗೆ ಮೇನಾಲ ರಾಮಣ್ಣ ರೈ ಮಾಸ್ಟ್ರ್ ಇಂಗ್ಲಿಷ್ ಪಾಠಕ್ಕೆ, ಶಂಕರನಾರಾಯಣ ಮಾಸ್ಟ್ರ್ ಕನ್ನಡ ಪಾಠಕ್ಕೆ ಇದ್ದೊ. ಎಲ್ಲೋವು ಶಂಕರನಾರಾಯಣ ಮಾಸ್ಟ್ರ ಹುಚ್ಚ ಮಾಸ್ಟ್ರ್‌ಂತ ಹೇಳ್ತಿದ್ದೊ. ಅವ್ಕೆ ಆಗಾಗ ಹುಚ್ಚ್ ಹಿಡ್ಯತಿತ್ತ್ ಗಡ. ಆಗ ಅವು ರಜೆ ಮಾಡ್ತಿದ್ದೊ. ಎಸ್.ಎನ್. ರಾಮಂಣ ಮಾಸ್ಟ್ರ್ ಆಗ ನಾವ್ಗೆ ಲೆಕ್ಕ ಪಾಠ ಮಾಡ್ತಿದ್ದೊ. ಮೋಂಟಡ್ಕ ಕೃಷ್ಣಪ್ಪ ಮಾಸ್ಟ್ರೂ ಪಾಠಕ್ಕಿದ್ದೊ. ಆಗ ಜನಾರ್ಧನ ನಾಯಕ್ ಮಾಸ್ಟ್ರ್ ಹೆಡ್ ಮಾಸ್ಟ್ರ್ ಆಗಿದ್ದೊ. ನಾವುಗೆ ಮಕ್ಕಳಿಗೆ ಹೆಡ್‌ಮಾಸ್ಟ್ರ್‌ಂತ ಹೇಳ್ರೆ ತುಂಬಾ ಹೆದ್ರಿಕೆ. ಆಗನ ಕಾಲಲಿ ಹೆಡ್ ಮಾಸ್ಟ್ರ ಕೋಣೆಗೆ ಹೋದೂಂತೇಳ್ರೆ, ಪೋಲೀಸ್ ಸ್ಟೇಶನ್‌ಗೆ ಹೋದಷ್ಟೆ ಹೆದ್ರಿಕೆ. ನಾ ಒಂದ್ ದಿನನೂ ಹೆಡ್‌ಮಾಸ್ಟ್ರ ಕೋಣೆಗೆ ಹೋತ್ಲೆ.

ನಾವ್ಗೆ ಪ್ರತಿ ಶನಿವಾರ ನಾಕ್ನೇ ಬೆಲ್ಲಿಗೆ ವಾರದ ಸಭೆ ನಡ್ಯತಿತ್ತ್. ಒಂದನೇ ತಾರೀಕಿನ ದಿನ ಮಧ್ಯಾಹ್ನದ ಮೇಲೆ ತಿಂಗಳ ಸಭೆ ನಡ್ಯತಿತ್ತ್. ಅದ್ಕೆ 'ಮಾಸಿಕೋತ್ಸವ'ಂತ ಹೇಳ್ತಿದ್ದೊ. ಆ ದಿನಗಳ ಸಂಭ್ರಮನ ನೆನ್ಸಿಕಾಕನ ಈಗಳೂ ಮೈ ಎಲ್ಲಾ ಕುಸಿ ಕುಸಿ ಆದೆ. ನಂಗೂ, ನನ್ನ ಕೆಲವು ಜೋಸ್ತಿ ಗೂಡೆಗಳಿಗೂ ಹಾಡ್, ಕುಣ್ತ, ನಾಟಕಾಂತೇಳ್ರೆ ಬಾಳ ಪ್ರೀತಿ.

ಕಮಲ ಟೀಚರ್ ಮತ್ತೆ ರಾಮಕ್ಕ ಟೀಚರ್ ಲೇಜಿಮ್, ಕೋಲಾಟಗಳ ಕಲ್ಸ್‌ತಿದ್ದೊ. ಲೇಜಿಮ್‌ಲಿ 'ಹಾರ ಸುಧಕರ ಸುಂದರಕೆರ', 'ಜಾಕೆ ಮಥುರಾ ನಾಥಾನಾರೇ' ಹಾಡ್‌ಗ ನಂಗೆ ನೆಂಪುಟ್ಟು. ಕೋಲಾಟಲಿ, 'ಲಂಗದ ನೆರಿಯನು ಚಿಮ್ಮುತ ಬಂದಳು ಜಾನಕಿ ತೋಟಕ್ಕೆ'– ಈ ಪದ ಬಾಳ ಇಷ್ಟ. ಈ ಪದಗಳೆಲ್ಲಾ ಹಾಡಿಕಂಡ್, ನಾವು ಗೂಡೆಗ ಗುಂಪು ಗುಂಪಾಗಿ ಲೇಜಿಮ್, ಕೋಲಾಟ ಆಡ್ತಿದ್ದೊ. ಆಗ ನಮ್ಮ ಸಾಲೆನ ಸುತ್ತು ಮುತ್ತೊಳು ಇರುವ ಮನೆವು, ದಾರಿಲಿ ಹೋಗೋವು ನಿಂತ್ ನೋಡ್ತಿದ್ದೊ.

ನಾ ಐದ್ನೇ ಕ್ಲಾಸ್‌ಲಿ ಇರಿಕಾಕನ ನಡ್ದ ಎರ್ಡ್ ಪರ್ಸಂಗಗ ನಂಗೆ ಬಾಳ ಪೊರ್ಲುಲಿ ನೆಂಪಾದೆ. ಸುರುದು, ಒಮ್ಮೆ ಆಕಾಶಲಿ ನಕ್ಷತ್ರಗಳ ನೋಡಿ, ಅದರ ಹೆಸ್ರ್‌ನ ಗುರ್ತ ಮಾಡಿಕೆ, ಸುಬ್ಬಪ್ಪ ಮಾಸ್ಟ್ರ್, ಆಚಾರಿ ಮಾಸ್ಟ್ರ್, ಎಸ್.ಎನ್. ರಾಮಣ್ಣ ಮಾಸ್ಟ್ರ್,

[ಮತ್ತೆ ಒಂದೆರ್ಡ್ ಮಾಸ್ಟ್ರ್‌ಗ ಇದ್ದೊ. ಅವು ಯಾರ್ಂತ ಈಗ ನಂಗೆ ನೆಂಪಾದ್ಲೆ.] ನಮ್ಮ ಮಕ್ಕಳ ಬಂಗ್ಲೆಗುಡ್ಡೆಗೆ ಅಮಾಸೆ ದಿನ ಕರ್ಕೊಂಡೋಗಿ, ಇರ್ಳ್ ಇಡೀ ಎಚ್ಚರಲೇ ಇದ್ದ್, ಪ್ರತಿಯೊಂದು ನಕ್ಷತ್ರಗಳ ತೋರ್ಸಿ, ಅದರ ಹೆಸ್ರ್ ಹೇಳ್ದೊ. ನಾವ್ಗೆ ಐದ್ನೇ ಕ್ಲಾಸ್‌ಲಿ, 'ಕನ್ನಡ ನೂತನ ಪಾಠ ಮಾಲೆ' ಪುಸ್ತಕ ಇತ್ತ್. ಅದರ್ಲಿ, 'ತಾರಾಮಂಡಲ'–ಎಂತ ಒಂದು ಪಾಠ ಇತ್ತ್. ಅದರ್ಲಿ ಇಪ್ಪತ್ತೇಳ್ ನಕ್ಷತ್ರಗಳ್ ಯಾವ ಯಾವ್ದೂಂತ ಗುರ್ತ ಮಾಡ್ವ ಪಾಠ ಇತ್ತ್. ಅದರ ಆಕಾಶಲೇ ನೋಡಿ. ಗುರ್ತಿಸಿ, ಕಲ್ಯಕೆ ಬೇಕಾಗಿ ನಮ್ಮ ಕ್ಲಾಸ್‌ನ ಮಕ್ಕಳ ಮಾಸ್ಟ್ರ್‌ಗ ಕರ್ಕೊಂಡೋಗಿದ್ದೊ. ಈಗಳೂ ನಾ ಬಾನಲಿ ಸಪ್ತ ಋಷಿ ಮಂಡಲ, ಕೃತಿಕಾ ನಕ್ಷತ್ರನ ಗುರ್ತಿಸಿನೆ.

ಎರಡ್ನೇ ಪರ್ಸಂಗ ನಮ್ಮ ಎಲಿಮೆಂಟ್ರಿ ಸಾಲೆಲಿ ನಡ್ದ ಸುರುನ 'ಶಾಲಾ ವರ್ಧಂತಿ ಉತ್ಸವ'. ಆ ವೊರ್ಸ ನಮ್ಮ ಸಾಲೆಗೆ 'ವೇದಾವತಿ' ಹೆಸ್ರ್‌ನ ಒಬ್ಬ ಹೊಸ ಟೀಚರ್ ಬಂದೊ. ಅವು ನೃತ್ಯ, ಸಂಗೀತ, ನಾಟಕಲಿ ಭಾರೀ ಬಿರ್ಸೆತಿ. ಆ ವೊರ್ಸ ಅವು ಮತ್ತೆ ಕೆಲವು ಮಾಸ್ಟ್ರ್‌ಗ ಸೇರಿಕಂಡ್, 'ಗಾನ ಸರಸ್ವತಿ' ಎಂಬ ಸಂಗೀತ ನಾಟಕನ ಆಡ್ಸಿದೊ. ಅದರ್ಲಿ ಸುಂದರ ರಾಯರ ಮಗಳ್ ಪ್ರೇಮಲತಾ, ಮತ್ತೆ ಮೇರ್ಕಜೆ ಚೆನ್ನಪ್ಪ ಮಾಸ್ಟ್ರ ಮಗಳ್ ಮೀನಾಕ್ಷಿ–ಎಂಬ ಗೂಡೆಗ ಮುಖ್ಯ ಪಾತ್ರ ಮಾಡಿ ಇನಾಮ್ ಪಡ್ದಿದ್ದೊ.

ನಾವು ಆರ್ನೇ ಕ್ಲಾಸ್‌ಲಿ ಇರಿಕಾಕನ ನಾವ್ಗೆ ಮಗ್ಗದ ಕ್ಲಾಸ್ ಇರ್ತಿತ್ತ್. ಮೋಟಂಡ್ಕ ಶೇಷಪ್ಪ ಗೌಡ್ರು ನಾವ್ಗೆ 'ತಕಲಿ'ಂದ ನೂಲು ತೆಗ್ಯೊದರ ಹೇಳಿ ಕೊಡ್ತಿದ್ದೊ. ಅವರ ಎಲ್ಲೋವು 'ಮಗ್ಗದ ಮಾಸ್ಟ್ರ್'ಂತ ಕರ್ಯೋತಿದ್ದೊ. ದೈಲಿ ಬೆಳ್ದ ಹತ್ತಿನ ಅವು ತಂದ್ ಕೊಡ್ತಿದ್ದೊ. ನಾವು ಅದರ ಬೀಜನ ಬುಡ್ಸಿ, ಹಿಂಜಿದ್ ಹಾಕ್ತಿದ್ದೊ. ಅದರ್ಂದ ಒಂದು ಮುಷ್ಟಿ ಹತ್ತಿ ತೆಗ್ದ್, ಮೇಜಿನ ಮೇಲೆ ಹರ್ಂಡಿ, ಅದರ ಮೇಲೆ ಒಂದು ಪೆನ್ಸಿಲ್ ಇಸಿ ಸುತ್ತುತ್ತಿದ್ದೊ. ಆಗ ಪೆನ್ಸಿಲ್‌ನಷ್ಟ್ ಉದ್ದದ ಲಡಿ ಸಿಕ್ತಿತ್ತ್. ಮತ್ತೆ ಆ ಲಡಿಂದ ಪೆನ್ಸ್‌ಲ್‌ನ ಎಳ್ದ್ ತೆಗ್ಯೊತಿದ್ದೊ. ಆ ಲಡಿನ ತೋರು ಬೆರ್ಳ್ ಮತ್ತೆ ಮಧ್ಯದ ಬೆರ್ಳ್‌ನ ಎಡೆಲಿ ಹಿಡ್ದ್ ಅದರ ಕೆಳಗೆನ ಕೊಡಿನ ತಕಲಿನ ಮೇಲೆನ ಕೊಕ್ಕೆಗೆ ಸಿಕ್ಕಿಸಿ, ನಿಧಾನಲಿ ಎಳ್ಯಕಾಕನ ಹತ್ತಿಂದ ನೂಲುನ ಎಳೆ ಸರಾಗಲಿ ಬಾತಿತ್ತ್. ಸುರು ಸುರುಗೆ ನೂಲುನ ಎಳೆ ತುಂಡಾಗ್ತಿತ್ತ್. ಅಭ್ಯಾಸ ಆದ ಹಾಂಗೆ ಸರಾಗಲಿ ನೂಲು ತೆಗ್ಯಕೆ ಬರ್ತಿತ್ತ್. ಒಂದ್ ಮಾರ್‌ನಷ್ಟ್ ಎಳೆ ಆಕಾಕನ, ಅದರ ಮೊಳಕೈಗೆ ಸುತ್ತಿ, ಪುನಃ ನೂಲುನ ಎಳ್ಯೊತಿದ್ದೊ. ಐದಾರ್ ಸುತ್ತು ಆಕಾಕನ ಅದರ ತೆಗ್ದ್, ನೂಲ್‌ನ ಲಡಿ ಮಾಡಿ ಮಾಸ್ಟ್ರಿಗೆ ಕೊಡ್ತಿದ್ದೊ. ಒಂದು ಲಡಿಗೆ ಇಂತಿಷ್ಟ್ ಸುತ್ತು ನೂಲು ಆಕೂಂತ ಅದ್ಕೆ ಲೆಕ್ಕ ಉಟ್ಟು. ಅದೆಲ್ಲಾ ಈಗ ಮರ್ತ್ ಹೋಗುಟು. ಮಗ್ಗದ ಮಾಸ್ಟ್ರ ಇದಕ್ಕೆ ಸಂಬಂಧಪಟ್ಟ ಲೆಕ್ಕನ ಇಸಿಕೆ, ಒಂದು ನೋಟು ಪುಸ್ತಕಲಿ ಬರ್ದ್‌ದ್ ಇಸಿಕೆ ಹೇಳ್ತಿದ್ದೊ. ಅದ್ಕೆ ಪರೀಕ್ಷೆ ಸಾ ಉಟ್ಟು. ಮಾರ್ಕ್ ಕೊಡ್ತಿದ್ದೊ. ತುಂಡಾದ ನೂಲ್ನ ಸೇರ್ಸುವ ರೀತಿ ಹೇಂಗೇಂತ ತೋರ್ಸಿಕೊಡ್ತಿದ್ದೊ. ತಕಲಿಂದ ನೂಲು ತೆಗ್ಯಕಾಕನ ನಾವ್ಗೆ

ಮನ್ಸ್‌ಗೆ ಭಾರೀ ಕುಸಿ ಆದೆ. ಬುಡ್ಸಿದ ಹತ್ತಿನ ಬೀಜನ ಎಲ್ಲಾ ಸಾಲೆನ ಪಕ್ಕಲಿ ಇದ್ದ ಕೈ ತೋಟಕ್ಕೆ ಬಿಸಾಡ್ತಿದ್ದೊ. ಮಳೆ ಬಾಕಾಕನ ಅಲ್ಲೆಲ್ಲಾ ಹತ್ತಿ ಬೀಜಗ ಹುಟ್ಟಿ, ದೊಡ್ಡಾದಾಗ್ತಿತ್ತ್. ನಮ್ಮ ಮಗ್ಗದ ಕ್ಲಾಸಿಗೆ ಬೇಕಾದ ಹತ್ತಿ ನಾವ್ಗೆ ಅದರ್‌ಂದ ಸಿಕ್ತಿತ್ತ್.

ಸಾಲೆನ ಕೈ ತೋಟಲಿ ಮಗ್ಗದ ಮಾಸ್ಟ್ರ್, ಸುಬ್ಬಪ್ಪ ಮಾಸ್ಟ್ರ್ ಸ್ಯಾಬ ಮಾಸ್ಟ್ರ್ ಎಲ್ಲಾ ಸೇರಿ ಮಕ್ಕಳ್‌ಂದ ನೆಟ್ಟಿಕ್ಯಾ ಬೆಳ್ಸ್‌ತಿದ್ದೊ. ತೋಟಗಾರಿಕೆಗಾಗಿಯೇ ನಾವ್ಗೆ ನಲ್ವತ್ತ್ ಪುಟದ ಒಂದ್ ಪುಸ್ತಕ ತೆಗ್ದ್, ಅದರ್ಲಿ ಬರ್ದಿಸಿಕೆ ಹೇಳಿದ್ದೊ. ಒಂದು ದಿನ ಮೊಣ್ಣ್‌ನ ಕೊಚ್ಚಿ, ಸಾಲ್‌ತೆಗ್ದ್, ಬೀಜ ಬಿತ್ತಿ, ಸೊಪ್ಪು ಇಸಿ, ಮಾರ್ಣೆ ದಿನ ಅದರ ನೊಡಿ ವಿವರಿಸಿ ಪಾಠ ಮಾಡ್ತಿದ್ದೊ. ಅದರೆಲ್ಲಾ ದಿನ ದಿನ ನಾವು ಪುಸ್ತಕಲಿ ಬರ್ದ್‌ದ್ ಇಸೊಕು. ಬೀಜಂದ ಹೊರ್ಡುವ ಮುಂಗೆನ, ಎಲೆಗ ಕಾಂಬೊದು ಎಲ್ಲದರ ಬರ್ದಿಸೊಕು. ಪ್ರಕೃತಿ ಶಾಸ್ತ್ರಂತ ನಾವುಗೆ ಒಂದು ಪುಸ್ತಕ ಇತ್ತ್. ಅದರ ಹೀಂಗೆ ಪ್ರಯೋಗ ಮಾಡಿ ಕಲ್ಸ್‌ತಿದ್ದೊ. ನಾವೆಲ್ಲಾ ಅಲ್ಲೇ ಗುಡ್ಡೆಲಿದ್ದ ಸೊಪ್ಪುನ ಮುರ್ದ್, ಕೈಲಿ ಹಿಡ್ಕಂಬಕೆ ಆಗುವಸ್ಟ್ ತಂದ್ ಕೊಡಕಾಗಿತ್ತ್. ಗುಡ್ಡೆಲಿ ಬಿದ್ದ್‌ಕಂಡಿದ್ದ ಸೆಗೆಣಿನ ಹೆಕ್ಕಿ ತಂದ್ ಕೊಡ್ತಿದ್ದೊ. ಅದೆಲ್ಲಾ ದೈಗಳಿಗೆ ಸೊಪ್ಪು ಗೊಬ್ಬರದ ಈಟ್ ಆಗ್ತಿತ್ತ್. ಈಗ ಅಮೃತ ಭವನ ಇದ್ದ ಕಟ್ಟೋಣದ ಹಿಂದೆ, ಉದ್ದಲಿ ಒಂದು ಕಟ್ಟೋಣ ಇತ್ತ್. ಆ ಕಟ್ಟೋಣಲಿ ಆಚೆ ಪುಡೆ, ಈಚೆ ಪುಡೆ ಒಂದೊಂದು ಕೋಣೆಗ ಇದ್ದೊ. ನಡುಲಿ ಉದ್ದದ ಕೋಣೆ ಇತ್ತ್. ಆ ಉದ್ದದ ಕೋಣೆನ ಮೂರು ಭಾಗ ಮಾಡಿ ಒಂದರ್ಲಿ ಆರ್ನೇ ಕ್ಲಾಸ್ ನಡ್ಯತಿತ್ತ್. ಆ ಕಟ್ಟೋಣದ ಪಕ್ಕಲಿ ಸಾಲೆನ ಕೈ ತೋಟ ಇತ್ತ್. ಆ ಕಟ್ಟೋಣದ ನೆಲಕ್ಕೆ ಸೆಗೆಣಿ ಹಾಕ್‌ತಿದ್ದೊ. ಸೆಗೆಣಿ ಹಾಕುವ ದಿನ ಮಕ್ಕ ಒಬ್ಬೊಬ್ಬ ಒಂದೊಂದು ಮುದ್ದೆ ಸೆಗೆಣಿ ತರಕಾಗಿತ್ತ್. ಕೆಸನ ಎಲೆಲಿ ಒಂದೊಂದು ಮುದ್ದೆ ಸೆಗ್ಣಿ ಹೆಕ್ಕಿ ತಾತಿದ್ದೊ. ಮಾರ್ಗಲೂ ಅಲ್ಲಲ್ಲಿ ಸೆಗೆಣಿ ಬಿದ್ದ್‌ಕಂಡ್ ಇರ್ತಿತ್ತ್. ಅದರ ಹೆಕ್ಕಿ ತಾತಿದ್ದೊ. ಆಗ ಗುಡ್ಡೆ ತುಂಬಾ ದನಂಗ ಮೇಂದ್‌ಕಂಡ್ ಇರ್ತಿದ್ದ ಕಾರಣ ನಾವ್ಗೆ ಸೆಗೆಣಿ ತಾಕೆ ಕಷ್ಟ ಆಗ್ತಿತ್ಲೆ. ಗಂಡ್ ಮಕ್ಕ ನೀರ್ ತಂದ್ ಕೊಡ್ತಿದ್ದೊ. ಸೆಗೆಣಿ ಹಾಕಿ ಅಭ್ಯಾಸ ಇದ್ದ ಹೆಣ್ಣ್ ಗೂಡೆಗ ಸೆಗೆಣಿ ಗುಡ್ಸ್‌ತಿದ್ದೊ. ಹಳ್ಳಿಂದ ಬಾವ ಮಕ್ಕ ಮ್ಯಾಪು ಸೂಡಿ ತಂದ್ ಕೊಡ್ತಿದ್ದೊ.

ಎರಡ್ನೇ ಬೆಲ್ ಹೊಡ್ಯಕಾಕನ ನಾವ್ಗೆ ಉಚ್ಚೆ ಹೊಯ್ಯಕೆ ಬುಡ್ತಿದ್ದೊ. ಅರೆಗಾಲಲಿ ನಾವ್ಗೆ ಕುಡ್ಯಕೆ ಆಕಾಕನ ಸಾಲೆನ ಹಕ್ಕಲೆ ಇದ್ದ ಲಕ್ಷ್ಮಿನಾರಾಯಣ ಮಾಸ್ಟ್ರ ಮನೆಗೆ ನೀರ್ ಕುಡ್ಯಕೆ ಹೋಗ್ತಿದ್ದೊ. ಅವರ ಹೆಣ್ಣ್ ಕಲಾವತಿ ಅಕ್ಕ, ಜಗಲಿ ತಿಂಟೆಲಿ ಕುದ್ದ್‌ಕಂಡ್ ದಿನಾ ಕೊಕ್ಕೆ ಸೂಜಿಲಿ ಲೇಸ್, ಬನಿಯನ್ ಹೊಲ್ಯತಿದ್ದೊ. ಅವರ ಹಕ್ಕಲೆಂದ ನಾ ಲೇಸ್‌ನ ಮಾದರಿನ ತಕೊಂಡೋಗಿ ಸಣ್ಣಕ್ಕಂಗೆ ಕೊಡ್ತಿದ್ದೆ. ಅವರ ಹ್ಕಕಲೆ ಕೊಕ್ಕೆ ಸೂಜಿ ಹೊಲಿಗೆಗೆ ಸಂಬಂಧಿಸಿದ ಪುಸ್ತಕಗ ಇದ್ದೊ. ಗ್ರಾಫ್ ಪುಸ್ತಕಲಿ ಹೊಲಿಗೆಗೆ ಹಾಕುವ ಹೂಗಳ ಅವು ಬುಡ್ಸಿ ಇಸ್ತಿದ್ದೊ. ಹಂಸ, ಆಟಿನ್, ಡೈಮಂಡ್, ತೊಳಸಿಕಟ್ಟೆ, ಜೇಡರ ಬಲೆ– ಎಂತ ತರ ತರದ ಚಿತ್ರಗ ಆ ಪುಸ್ತಕಲಿ ಇರ್ತಿತ್ತ್.

ಅದರ್ನ ಸಣ್ಣಕ್ಕಂಗೆ ತೋರ್ಸಿಕೆ ತಕಂಡೋಗಿ ಕೊಡ್ತಿದ್ದೆ. ಕಲಾವತಿ ಅಕ್ಕನ ಒಬ್ಬನೇ ಮಂಙ ಪುರುಶೋತ್ತಮ ನನ್ನ ಕ್ಲಾಸ್‌ಲಿ ಓದಿತ್ತ್. ಅವರ ಮನೆ ಪಕ್ಕಲಿ ಸಂಜೀವ ಮಾಸ್ಟ್ರ ಮನೆ ಇತ್ತ್. ಅವ್ಕೆ ಮಕ್ಕ ಇತ್ಲೆ. ಅವರ ಹೆಣ್ಣ್ ಲಲಿತಕ್ಕಂಗೆ ಮಕ್ಕಾಂತೇಳ್ರೆ ಬಾಳ ಪ್ರೀತಿ. ಅವು ಯಾಗೋಳು ನೆಗಾಡಿಕಂಡೇ ಮಕ್ಕಳ ಮಾತಾಡ್ಸ್‌ತಿದ್ದೊ. ಅವರ ಮನೆ ಜಗಲಿನ ತಿಂಟೆಲಿ, ದೊಡ್ಡ ಮೊಣ್ಣ್‌ನ ಮಡ್ಕೆಲಿ ನೀರ್ ಇಸಿ, ಮೇಲೆ ತಟ್ಟೆ ಮುಚ್ಚಿ, ಒಂದ್ ಗೀಜಿನ ಗ್ಲಾಸ್‌ನ ಕಂಕಣೆ ಹಾಕಿ ಇಸ್ತಿದ್ದೊ. ನಾವು ಮಕ್ಕ ಹೊಟ್ಟೆ ತುಂಬಾ ನೀರ್ ಕುಡ್ದ್, ಅವರ ಇಜ್ಜೆಲಿನ ಪುಡೆಲಿದ್ದ ದಾರೆ ಹುಳಿ ಮರಂದ ದಾರೆ ಹುಳಿ ಕೊಯ್ಕಂಡ್ ಬಾತಿದ್ದೊ. ಹಂಞ ಮಕ್ಕ ಸಾಲೆನ ಕೆಳಗೆ ಇದ್ದ 'ಮಾರ್ಸೆಲ್ ಲಸ್ರಾದೊ'– ಅವರ ಮನೆಗೆ ನೀರ್ ಕುಡ್ಯಕೆ ಹೋಗ್ತಿದ್ದೊ. ಅವು ಸಣ್ಣ ಕೊಡ್ಪಾಣ ಕೊಟ್ಟ್, ಬಾಮಿಂದ ನೀರ್ ಎಳ್ದ್ ಕುಡ್ಯಕೆ ಹೇಳ್ತಿದ್ದೊ. ಒಮ್ಮೆ ನಾವು ನೀರ್ ಕುಡ್ಯಕೆ ಅಲ್ಲಿಗೆ ಹೋಕಾಕನ, ನೀರ್ ಎಳ್ಯಕನ ಬಾಮಿಗೆ ಕೊಡ್ಪಾಣ ಬಿತ್ತ್. ನಾವ್ಗೆ ಹೆದ್ರಿಕೆಂದ ಎದೆ ಬಡ ಬಡ ಬಡ್ಕಂಡತ್, ಅಲ್ಲಿಂದ ಹೇಳದೆ ಓಡಿ ಬಂದೊ. ಮತ್ತೆ ಸುಮಾರ್ ದಿನ ಆ ಕಡೆ ಹೋತೇ ಇಲ್ಲೆ.

ನನ್ನ ಎಲಿಮೆಂಟ್ರಿ ಸಾಲೆನ ದಿನಲಿ ನಾ ನನ್ನ ಜೋಸ್ತಿ ಗೂಡೆಗ ರೋಹಿಣಿ, ಪದ್ಮ, ರಮಾ, ಲಲಿತ, ಮಾಧವಿ, ಜಲಜ, ವಿನ್ನಿ, ಸರೋಜಿನಿ– ಇವರೊಟ್ಟಿಗೆ ಸೇರಿಕಂಡ್ ನಮ್ಮ ಸಾಲೆನ ಸುತ್ತೊಳು ಇದ್ದ ಕಾಡ್‌ಲಿ ಸಿಕ್ತಿದ್ದ ಕೇಪ್ಳ ಹಣ್ಣ್, ಕುಂಟು ನೇರಳೆ ಹಣ್ಣ್, ಮಾದ್ರಿ ಹಣ್ಣ್‌ಗಳ ತಿಂದ್ ಕಂಡ್, ಜಿಬ್ಲಿ, ಹಗ್ಗದ ಆಟ, ಅಟ್ಟ– ಮುಟ್ಟ– ಆಡಿಕಂಡ್ ಇದ್ದ ಆ ಮರ್‍ಯೆಕಾಗದ ದಿನಗಳ ಆಗಾಗ ನಾ ನೆಂಪು ಮಾಡ್ನೆ. ಇನ್ನ್ ಅಂದ್‌ನ ಆ ದಿನಗಳ ಕುಸಿ ಬಾಕಿಲ್ಲೆ. ನನ್ನ ಪುಳ್ಳಿಕ ಬೆನ್ನ್ ಮೇಲೆ ಪುಸ್ತಕಗಳ ಹೊರೆನ ಹೊತ್ತ್‌ಕಂಡ್, ಸೇಂಕಿಕಂಡ್, ಸೇಂಕಿಕಂಡ್, ಸಾಲೆಂದ ಬಾವುದರ ನೋಡಿಕಾಕನ ಅಯ್ಯೋ ಪಾಪಾ'ಂತ ಆದೆ. ನಾ ಸಣ್ಣದಿರಿಕನ ಹೇಂಗೆ ಬೆಳ್ದೇಂತ ನೆಂಪಾದೆ. ನನ್ನ ಎಲಿಮೆಂಟ್ರಿ ಸಾಲೆನ ದಿನಗ ಈ ತರಲಿ ಕಳ್ತ್. ಆಗನ ಎಲಿಮೆಂಟರಿ ಸಾಲೆನ ಈಗ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮಾದರಿ ಪ್ರಾಥಮಿಕ ಶಾಲೆಂತ ಹೇಳಿವೆ.

* * * * *

ಚುಕ್ಕೆ – 16

"ಭೂಮಿ ದೇವಿನ ಕಕ್ಕೆ ಮುಟ್ಟಿತೋ?"

ಒಂದು ದಿನ ನಾ ಕೊಟಗೆಗೆ ಹೋಕಾಕನ ಅತ್ತಿಗೆ ಅಲ್ಲಿ ಹೊರ್ದ ಅಕ್ಕಿನ ಬೀಸುವ ಕಲ್ಲ್‌ಲಿ ಬೀಸ್‌ತಿದ್ದೊ. ಅದರ ನೋಡಿ ನಾ ಅತ್ತಿಗೆನ,

'ಅತ್ತಿಗೆ, ಇದ್ ಯಾಕೆ ಅಕ್ಕಿ ಹೊಡಿ?'–ಎಂತ ಕೇಳ್ದೆ. ಅದ್ಕೆ ಅವು,

'ನಾಳೆ ಕೆಡ್ಡಸ ಅಲ್ಲನೋ? ಅದ್ಕೆ 'ಎಂತ ಹೇಳ್ದೊ.

ಕ್ಯೊಸ್ಲಕ್ಕಿನ ಹೊರ್ದ್‌ದ್ ಅದರ ಹೊಡಿ ಮಾಡ್ತಿದ್ದೊ. ನಾನೂ ಬೀಸುವ ಕಲ್ಲ್‌ನ ಗೂಟಕ್ಕೆ ಕೈ ಕೊಟ್ಟ್ ಅವರೊಟ್ಟಿಗೆ ಬೀಸಿಕಂಡ್,

"ಅತ್ತಿಗೆ, ಕೆಡ್ಡಸಂತ ಹೇಳ್ರೆ ಏನ್?"–ಎಂತ ಕೇಳ್ದೆ.

"ಕೆಡ್ಡಸ ಎಂತ ಹೇಳ್ರೆ ಭೂಮಿ ದೇವಿ ಮುಟ್ಟಾದು. ಮೂರು ದಿನ ಭೂಮಿ ದೇವಿಗೆ ಕಷ್ಟ ಕೊಡಿಕೆ ಆಗದ್. ಗದ್ದೆ ಹೂಡಿಕೆ ಆಗದ್, ಕೊಟ್ಟು, ಪಿಕ್ಕಾಸ್‌ಲಿ ಭೂಮಿನ ಅಗ್ಯಕೆ ಆಗದ್. ಮರ ಕಡ್ಯಕೆ ಆಗದ್"–ಎಂತ ಅತ್ತಿಗೆ ಹೇಳ್ದೊ.

ಆಗ ನಾ ಮೂರ್ನೇ ಕ್ಲಾಸ್‌ಲಿ ಓದ್ತಿದ್ದೆ. ಮುಟ್ಟಾದೂಂತೇಳ್ರೆ ಏನ್‌ಂತ ಗೊತ್ತಿಲ್ಲೆ. ನನ್ನ ಅತ್ತಿಗೆ, ಸಣ್ಣಕ್ಕ, ತಿಂಗಳ್‌ಲಿ ಮೂರ್ ದಿನ ಕೊಟಗೆಲಿ ಮೊಲ್ಗ್‌ತಿದ್ದೊ. ಆಗ ನಾ ಅವ್ವನೊಟ್ಟಿಗೆ, "ಅವು ಯಾಕೆ ಕೊಟಗೆಲಿ ಮೊಲ್ಗುದು?" ಎಂತ ಕೇಳ್ತಿದ್ದೆ. ಅದ್ಕೆ ಅವ್ವ,

"ಅವರ ಕಕ್ಕೆ ಮುಟ್ಟಿತ್"–ಎಂತ ಹೇಳ್ತಿದ್ದೊ. ಅವು

ಯಾಕೆ ಕಕ್ಕೆನ ಹಕ್ಕಲೆ ಹೋದ್ದೋ? ಅಲ್ಲಾ ಕಕ್ಕೆನೇ ಬಂದ್‌ದ್ ಇವರ ಮುಟ್ಟಿತೋ? ನಂಗೆ ಒಂದೂ ಅರ್ಥ ಆಗ್ತಿತ್ಲೆ. ಹಾಂಗಾಗಿ ಕಕ್ಕೆನ ಕಾಂಬಕನ ನಾ ಮನೆ ಒಳಗೆ ಓಡಿ ಹೋಗ್ತಿದ್ದೆ. ಕಕ್ಕೆ ನನ್ನೂ ಓಡ್ಸಿ ಕಂಡ್ ಬಂದ್ ಮುಟ್ಟಿರೆ ನಾನೂ ಕೊಟಗೆಲಿ ಮಲ್ಗೊಕಲ್ಲಾಂತ. ನಂಗೆ ಒಬ್ಬಂಗೇ ಮೊಲ್ಗಿಕೆ ಹೆದ್ರಿಕೆ. ನಾ ಯಾಗೋಳೂ ಸಣ್ಣಕ್ಕ ಇಲ್ಲರೆ ಉಗ್ಗವನೊಟ್ಟಿಗೆ ಮೊಲ್ಗ್‌ತಿದ್ದೆ. ಅಜ್ಜಪ್ಪ ನಾವ್ಗೆ ಹೇಳ್ವ ಕತೆಗಳ್‌ಂದಾಗಿ, ನಂಗೆ ಇರ್‌ಳ್ ಕನ್ಸ್‌ಲಿ ರಕ್ಕಸ ಅಜ್ಜ, ದೆವ್ವಗ ಎಲ್ಲಾ ಬಾತಿದ್ದೊ.

ಆಗ ನಾ ಅತ್ತಿಗೆನ ಕೇಳ್ದೆ, “ ಅತ್ತಿಗೆ, ಭೂಮಿ ದೇವಿನನೂ ಕಕ್ಕೆ ಮುಟ್ಟಿತೋ”–ಎಂತ.

ಆಗ ಅತ್ತಿಗೆ ನೆಗಾಡಿಕಂಡ್, “ನಿಂಗೆ ಇದೆಲ್ಲಾ ಈಗ ಹೇಳ್ರೆ ಅರ್ಥ ಆಕಿಲ್ಲೆ. ಇನ್ನೂ ಹಂಞ ದೊಡ್ಡಂವ ಆಕಾಕನ ನಿಂಗೆ ಎಲ್ಲಾ ಅರ್ಥ ಆದು”–ಎಂತ ಹೇಳ್ದೊ. ಅದರ ಕೇಳ್ದ ಮೇಲೆ ನಾ ಹೆಚ್ಚಿಗೆ ತಲೆ ಕೆಡ್ಸಿಕಂಡತಿಲ್ಲೆ.

ಅಷ್ಟಾಕನ ಅವ್ವ ತೊಡ್ಪೆಲಿ ಹೊರ್ದ ಎಳ್ಳ್‌ನ ಹಾಕಂಡ್ ಬಂದ್ ಅತ್ತಿಗೆನ ಕೈಲಿ ಕೊಟ್ಟ್,

“ಇಂದಾ ಸಿಸ್ಲ [ಸುಶೀಲ], ಇದರ ಹಂಞ ಉಜ್ಜಿ ಕೊಡು”–ಎಂತ ಹೇಳ್ದೊ. ಆಗ ಅತ್ತಿಗೆನ ಬೀಸುವ ಕೆಲ್ಸನೂ ಮುಗ್ದ್‌ಕಂಡ್ ಬಾತ್. ಅವು ಕಲ್ಲ್‌ನ ಮೇಲ್ಪಡೆನ ಎತ್ತಿ ಕೆಳಗೆ ಇಸಿ, ತಪಲೆಗೆ ಅಕ್ಕಿ ಹೊಡಿನ ಹಾಕಿ, ಬೀಸುವ ಕಲ್ಲ್‌ನ ಒಂದು ಅರ್ವೆಲಿ ಉಜ್ಜಿ, ಕರೆಗೆ ಇಸಿದೊ. ತೊಡ್ಪೆಲಿ ಇದ್ದ ಎಳ್ಳ್‌ನ ಸೀರೆ ಅರ್ವೆಲಿ ಉಜ್ಜಿ, ಉಜ್ಜಿ, ಬೆಳ್ಳಂಗೆ ಮಾಡಿ ಹೊಡ್ಕಿ ಬೇರೊಂದು ಸಣ್ಣ ತಪಲೆಗೆ ಹಾಕಿ, ಅಕ್ಕಿ ಹೊಡಿನನೂ, ಎಳ್ಳ್‌ನನೂ ಮನೆ ಒಳಗೆ ತಕಂಡ್ ಹೋದೊ.

ಮೊರ್ದಿನ ಬೊಳ್ಪಿಗೆ ಅವ್ವ, ಒಂದ್ ದೊಡ್ಡ ಕಾಯೆನ ಒಡ್ದ್‌ದ್, ಕಾಯೆ ಗಡಿಗಳ ಹೆರ್ದ್‌ದ್, ಅದ್ಕೆ ನಾಲ್ಕೈದ್ ಬಿಳಿ ಅಚ್ಚ್ ಬೆಲ್ಲನ ಗೀಸಿ ಹಾಕಿ, ಅದರೊಟ್ಟಿಗೆ ಹೊರ್ದ ಅಕ್ಕಿ ಹೊಡಿನ ಹಾಕಿ ಕಲ್ಸಿದೊ. ಹೊರ್ದ ಎಳ್ಳ್ ಮತ್ತೆ ಸುಟ್ಟು ಬೀಜದ ಬೆಂಡ್‌ನ ಹೊಡಿ ಮಾಡಿ ಅದ್ಕೆ ಸೇರ್ಸಿದೊ. ಒಂದ್ ಸಣ್ಣ ತಪಲೆಲಿ ಅದರ್‌ಂದ ಹಂಞ ತೆಗ್ದ್ ಬೇರೆ ಇಸಿದೊ. ಅದ್ ಭೂಮಿ ದೇವಿಗೆ ಇಕ್ಕಿಕೆ ಗಡ. ಉಳ್ದದರ ಮನೆಯವ್ಕೆ ಹಂಚಿದೊ.

ಕೆಡ್ಡಸದ ಮೂರನೇ ದಿನ ಅತ್ತಿಗೆ ಮಿಂದ್ ಮಡಿ ಬಟ್ಟೆ ಉಟ್ಟ್, ಇಜ್ಜೆಲಿನ ಒಂದು ಮೂಲೆಲಿ ಸೆಗಣಿ ಸಾರ್ಸಿ, ಅದರ ಸುತ್ತೋಳೂ ಕುಮ್ಮಯ ಹೊಡಿಲಿ ಕೋಟೆನ ಹಾಂಗೆ ಗೀಟ್ ಎಳ್ದೊ. ಪಿಜಿನ್‌ಗ ಬಾಕೆ ಬೊತ್ತ್‌ಂತ. ಮತ್ತೆ ಅವು ನನ್ನ ಕರ್ದ್‌ದ್,

“ಮೋಳು ಬೇಗ ಹೋಗಿ, ಭಾಗೀರಥಿ ಮನೆನ ದರೆಲಿ ಸರಳಿ ಸೊಪ್ಪು ಉಟ್ಟು, ಅದರ ಕೇಳ್ರೆ ಅದ್ ತೆಗ್ದ್ ಕೊಟ್ಟದೆ. ತಕಂಡ್ ಬಾ. ಇಂದಾ, ಹಾಂಗೇನೇ ಅದರ ಕೇಳಿ, ಒಂದ್ ಗೆಲ್ಲ್ ಮಾಯ್ನ ಸೊಪ್ಪುನೂ ತಾ. ಹಲ್ಸಿನ ಸೊಪ್ಪು ನಮ್ಮಲ್ಲಿ ಉಟ್ಟು”– ಎಂತ ಹೇಳ್ದೊ.

ನಾ ನಮ್ಮ ಮನೆ ಹಕ್ಕಲೆ ಇದ್ದ, ಸಣ್ಣಕ್ಕನ ಜೋಸ್ತಿ ಗೂಡೆ, ಭಾಗೀರಥಿನ ಮನೆಗೆ

ಹೋಗಿ, ಅದರೊಟ್ಟಿಗೆ ಸರ್ಳಿ ಸೊಪ್ಪು, ಮಾಯ್ನ ಸೊಪ್ಪು ತೆಗ್ದ್‌ದ್ ಕೊಡಿಕೆ ಹೇಳ್ದೆ. ಅದ್ ನಂಗೆ ಒಂದೊಂದ್ ಗೆಲ್ಲ್ ಕಡ್ದ್‌ದ್ ಕೊಟ್ಟ್, ಅದರ ಮನೆಗೂ ಒಂದೊಂದು ಗೆಲ್ಲ್‌ನ ಕಡ್ದ್‌ದ್ ಇಸಿಕಂಡತ್. ನಾ ಅದರ ತಂದ್ ಅತ್ತಿಗೆಗೆ ಕೊಟ್ಟೆ. ಅತ್ತಿಗೆ ಅದರ್‌ಂದ ಒಳ್ಳೊಳ್ಳೆ ಎಲೆಗಳ ಹಂಞ ತೆಗ್ದ್‌ದ್ ಕರೆಗೆ ಇಸಿದೊ. ನಮ್ಮಲ್ಲಿದ್ದ ಹಲ್ಸಿನ ಸೊಪ್ಪುನನೂ ಅದರೊಟ್ಟಿಗೆ ಸೇರ್ಸಿಕಂಡೊ. ಸೆಗೆಣಿ ಪೂಜಿದ ಜಾಗೆಲಿ ಕೊಡಿ ಎಲೆ ಪಡು ದಿಕ್ಕಿಗೆ ಬಾವ ಹಾಂಗೆ ಸಾಲ್‌ಲಿ ಸರಳಿ ಸೊಪ್ಪು, ಮಾಯ್ನ ಸೊಪ್ಪು, ಹಲ್ಸಿನ ಸೊಪ್ಪುನ ಒಂದರ ಪುಡೆಲಿ ಒಂದು, ಒಟ್ಟು ಏಳ್ ಸೊಪ್ಪುಗಳ ಇಸಿದೊ. ಪಕ್ಕಲಿ ಒಂದು ಬಾಳೆ ಎಲೆಲಿ ಒಂದು ತುಂಡು ಮೊಸಿ, ಸೀಗೆ ಕ್ಯಾ ಹೊಡಿ, ಅರ್ಸಿಣ, ಕುಂಕುಮ, ಕಣ್ಣ್ ಕಪ್ಪು, ಒಂದು ಸಣ್ಣ ಕನ್ನಡಿ, ಬಾಚಣಿಗೆ, ಒಂದ್ ಮಿಳ್ಳಿಲಿ ಕಾಯೆಂಣೆ ಅದರ್ಲಿ ಮೂರು ಕೊಡಿ ಗರಿಕೆ ಹುಲ್ಲು ಮತ್ತೆ 'ದಳಿಯ' ಇಸಿದೊ. 'ದಳಿಯ'–ಎಂತ ಹೇಳ್ರೆ ಮೊಡ್ಯೋಳ್ತಿ ಕೊಡುವ ಮಡಿ ಬಿಳಿ ಬಣ್ಣದ ಸೀರೆ ತುಂಡು. ಇದರ್‌ಂದ ನೆಣೆ ಮಾಡಿ, ಹಬ್ಬದ ಸಮಯಲಿ ದೀಪ ಹೊತ್ತಿಸಿಕೆ ಉಪಯೋಗ ಮಾಡ್ವೆ. ಒಂದು ಪುಡೆಲಿ ಒಂದು ಚೊಂಬು ನೀರ್ನ, ಕಮ್ಮೆನ ಸೋಗೆನ ಸುಂಪೆ ಮಾಡಿ, ಅದರ ಮೇಲೆ ಇಸಿದೊ. ಅತ್ತಿಗೆ ಸೂರ್ಯ ದೇವ್ರಿಗೆ ಮೋರೆ ಮಾಡಿ ನಿಂತ್, ಎಲ್ಲಾ ಸೊಪ್ಪುಗೆ ಕಲ್ಸಿದ ಅಕ್ಕಿ ಹೊಡಿನ, ಹಂಞ, ಹಂಞ ಇಕ್ಕಿ, ನಡುನ ಸೊಪ್ಪುನ ಕೊಡಿಲಿ ಎಣ್ಣೆಲಿ ನೆನ್ಸಿದ ಎರ್ಡ್ ನೆಣೆಗಳ [ಆ ನೆಣೆಗ ದಪ್ಪ ಇದ್ದ್, 'ದಳಿಯ'ಂದ ಮಾಡಿದ್ದೊ] ಹೊತ್ತಿಸಿ ಇಸಿದೊ. ಅಕೆರಿಗೆ ಭೂಮಿ ದೇವಿಗೆ ಮೂರು ಸಲ ಮಿಳ್ಳಿಲಿದ್ದ ಕಾಯೆಣ್ಣೆನ ಗರಿಕೆ ಕೊಡಿಲಿ ತೆಗ್ದ್ ಪೂಜಿದೊ. ಚೊಂಬುಲಿ ಇದ್ದ ನೀರ್ನ ಮಾಯ್ನ ಸೊಪ್ಪುಲಿ ತೆಗ್ದ್ ಚಿಮ್ಕುಸಿದೊ. ಬಾಳೆಲೆನ ಹಕ್ಕಲೆ ಒಂದು ಕತ್ತಿನನೂ, ಏಳೆಂಟ್ ಮಾಯ್ಪುನ ಕಡ್ಡಿಗ ಕಟ್ಟಿ ಇಸಿದ್ದೊ. ಇದೆಲ್ಲಾ ಯಾಕೇಂತ ಅತ್ತಿಗೆನೊಟ್ಟಿಗೆ ಕೇಳ್ದೆ. ಅದಕ್ಕೆ ಅವು,

"ಮೊಸಿ ಭೂಮಿ ದೇವಿಗೆ ಹಲ್ಲುಜ್ಜಿಕೆ, ಸೀಗೆ ಹೊಡಿ ಹಾಕಿ, ನೀರ್‌ಲಿ ಮೈ ತೊಳ್ಯಕೆ, ಮಿಾಂದ್ ಮೇಲೆ ಭೂಮಿ ತಾಯಿ ಕನ್ನಡಿಲಿ ನೋಡಿ, ತಲೆ ಬಾಚಿ ಕೆನ್ನೆಗೆ ಅರ್ಸಿಣ, ಕಣ್ಣ್‌ಗೆ ಕಣ್ಣ್ ಕಪ್ಪು, ಹಣೆಗೆ ಕುಂಕುಮದ ಬೊಟ್ಟು ಇಸಿಕೆ ಇದೆಲ್ಲಾ ಇಸುವೆ"– ಎಂತ ಹೇಳ್ದೊ. ಅತ್ತಿಗೆ ಸೂರ್ಯನ ನೋಡಿ ಭೂಮಿ ದೇವಿಗೂ ಸೂರ್ಯಂಗೂ ಮೂರು ಸಲ ಕೈ ಮುಗ್ದ್ ಒಳಗೆ ಹೋದೊ.

ಕೆಡ್ಡಸದ ಮೂರು ದಿನನೂ ಬಂದವ್ಕೆಲ್ಲಾ ಕಲ್ಸಿದ ಅಕ್ಕಿ ಹೊಡಿನ ಕೊಡ್ತಿದ್ದೊ. ಮನೇವ್ಕೂ ಇದೇ ತಿನ್ಸ್. ತಿನದವ್ಕೆ ಬೇರೆ ಹಿಟ್ಟ್ ಮಾಡಿ ಕೊಡ್ತಿದ್ದೊ. ನಡು ಕೆಡ್ಡಸ ದಿನ ಬೇಟೆ ಆಡ್ತಿದ್ದೊ ಗಡ. ಇಲ್ಲರೆ ಮನೆಲಿದ್ದ ಕೋಳಿನ ಕೊಂದ್‌ದ್ ಪೊಕ್ಕ ರೊಟ್ಟಿ ಮಾಡಿದ್ ತಿಂಬತಿದ್ದೊ. ಕೆಡ್ಡಸದ ದಿನ ಮಾಸ ತಿಂದ್, ಎಲು ಅಗ್ಯದಿದ್ದರೆ ನರ ಮೊಂಯಿಸರ ಎಲು ಕುಂಬಾದೆ ಗಡ. ಹಿರಿಯೋವ್ರ ಗಾದೆ ಮಾತ್. ಗಾದೆ ಮಾತ್ ವೇದಕ್ಕೆ ಸಮ ಅಲ್ಲನೋ?.

* * * * *

ಚುಕ್ಕೆ –17

“ಬಿಸು ಹಬ್ಬ”

ನಾವು ಸೌರಮಾನ ಯುಗಾದಿನ ಆಚರ್ಸ್‌ತಿದ್ದೊ. ಅದರ ನಾವು “ಬಿಸು ಹಬ್ಬ”ಂತ ಕರ್ರ್ಯೋತಿದ್ದೊ. ನಮ್ಮ ಅಂಗ್ಡಿ ಕೆಲ್ಸದೊವ್ಕೆ ವೊರ್ಸಕೊಮ್ಮೆ ಸಂಬಳ ಕೊಡ್ತಿದ್ದೊ. ಆಗ ಕೆಲ್ಸದೊವ್ಕೆ ವೊರ್ಸಕ್ಕೆ ನೂರು ರೂಪ್ಯಾ ಸಂಬಳ. ಅವು ಕೆಲ್ಸ ಬುಡದಿದ್ದರೆ ಬಿಸು ದಿನ ಬುಡೊಕು. ಕೆಲ್ಸ ಮುಂದರ್ಸಿಕೆ ಇನ್ನೊಂದು ಬಿಸುಗೆ ಮುಟ್ಟ ಗಡು. ವೊರ್ಸದ ಲೆಕ್ಕ ಬಿಸುಗೆ ತೀರ್ತಿತ್ತ್. ಪ್ರತಿ ಬಿಸುಲಿ ಹತ್ತ್ ರೂಪ್ಯಾ ಸಂಬಳ ಜಾಸ್ತಿ ಮಾಡ್ತಿದ್ದೊ. ನಮ್ಮ ಅಂಗ್ಡಿಲಿ ಅಣ್ಣಯ್ಯ, ದೇರಣ್ಣ □ ಎಂಟ್ ಹತ್ತ್ ವೊರ್ಸದವರೆಗೆ ಕೆಲ್ಸ ಮಾಡಿಕೊಂಡಿದ್ದೊ. ಅಣ್ಣಯ್ಯಂಗೆ ಮೊದ್ವೆ ಆಕನ ಅಪ್ಪನೇ ನೂರು ರೂಪ್ಯಾ ಸಾಲ ಕೊಟ್ಟಿದ್ದೊ. ಆಗ ನೂರು ರೂಪ್ಯಾ ಇದ್ದರೆ ಬಡವರ ಮೊದ್ವೆ ಆಗ್ತಿತ್ತ್.

ಬಿಸುನ ದಿನ ಬೊಳ್ಪುಗೆನೇ ಅವ್ವ ಮತ್ತೆ ಅತ್ತಿಗೆನ ಅಡ್ಗೆನ ಸಡ್ಗರ ಜೋರಾಗಿತ್ತ್. ಒಂದ್ ದಿನಕ್ಕೆ ಮುಂದೆನೇ ಅಪ್ಪದ ಹಿಟ್ಟ್‌ಗೆ ಅಕ್ಕಿ ಕಡ್ದ್ ಇಸ್ತಿದ್ದೊ. ಏಳ್ ಗುಂಡಿನ ದೊಡ್ಡ ದೊಡ್ಡ ಅಪ್ಪದ ಹಿಟ್ಟ್‌ನ ಬಳಪದ ಕಾವಲಿಗ ನಮ್ಮಲ್ಲಿ ಮೂರ್ ಇತ್ತ್. ಅಂಗೈ ಅಗಲದ, ಉಬ್ಬಿಕಂಡಿದ್ದ ಅಪ್ಪದ ಹಿಟ್ಟ್ ಮಕ್ಕಳಿಗೆ ಒಂದೊಂದೇ ಸಾಕಾಗಿತ್ತ್. ಆ ದಿನ ಅಪ್ಪನ ಒಕ್ಕಲ್ ಮಕ್ಕ ಎಲ್ಲಾ ಬಿಸುಕಾಣಿಕೆ ತಕಂಡ್ ಬಂದ್ ಉಂಡದ್ ಹೋಗ್ತಿದ್ದೊ. ಹಂಞ ಜನ ನೆಟ್ಟಿಕ್ಯಾ ತಂದರೆ,

ಹಂಞ ಜನ ದೊಡ್ಡ ದೊಡ್ಡ ಕೋಳಿ ಹುಂಜಗಳ ತಂದ್‌ದ್ ಕೊಡ್ತಿದ್ದೊ. ನೆಟ್ಟಿಕ್ಕ್ಯಾಗಳ ರಾಶಿನೇ ಬಂದ್‌ದ್ ಬೀಳ್ತಿತ್ತ್. ಬಿಸುಕಣಿಗೆ ಅವ್ವ ಎಲ್ಲಾ ನೆಟ್ಟಿಕ್ಯಾಗಳ ಹಾಕಿ, ಅದರೊಟ್ಟಿಗೆ ಹಸಿ ಬೀಜದ ಬೆಂಡ್‌ಗಳ ಹಾಕಿ ಗೈಪು ಮಾಡ್ತಿದ್ದೊ. ಅಪ್ಪದ ಹಿಟ್ಟಿಗೆ ಕೋಳಿ ಸಾರ್ ಮಾಡ್ತಿದ್ದೊ. ಕಡ್ಲೆ ಬೇಳೆ ಬೇಸಿ, ಅದ್ಕೆ ಬೆಲ್ಲ, ಕಾಯೆನ ಹಾಲ್ ಹಾಕಿ, ಏಲಕ್ಕಿ ಹೊಡಿ ಮಾಡಿ ಹಾಕಿ, ಪ್ಯಾಸ ಮಾಡ್ತಿದ್ದೊ. ಬೀಜದ ಬೆಂಡ್, ಒಣ್ಗೆಲ್ ದ್ರಾಕ್ಷೆನನೂ ತುಂಬಾ ಹಾಕ್ತಿದ್ದೊ. ಅದರೆಲ್ಲಾ ಒಕ್ಕಲ್ ಮಕ್ಕಳಿಗೆ ಇಕ್ಕ್‌ತಿದ್ದೊ. ಆ ದಿನ ನಮ್ಮಲ್ಲಿ ಖಾಯಂ ಆಗಿ ಮಡ್ಯೋಳ್ತಿ ಕಾವೇರಿ ಊಟಕ್ಕೆ ಬಾತಿತ್ತ್. ಬಾಕನ ಮಡಿ ಬಟ್ಟೆನ 'ದಳಿಯ' ತಾತಿತ್ತ್. ಅದರ್‌ಂದ ನಾವು ನೆಣೆ ಮಾಡಿ, ಹಬ್ಬದ ದಿನಲಿ ದೀಪ ಹೊಸ್ತಿದ್ದೊ. ಬೊಳಿಯ ಮಜಲ್‌ನ ಕೆಲವು ಅಜಲರ್ ಮುಂಡೋವು ಒಲಿಂದ ಮಾಡ್ದ ಹೊಸ್ತ್ ಮೊಂದ್ರಿನ ಕಾಣಿಕೇಂತ ತಂದ್‌ದ್ ಕೊಡ್ತಿದ್ದೊ. ಅವ್ವ ಅವ್ಕೆ ಊಟ ಕೊಟ್ಟ್, ಒಂದ್ ಸೇರ್ ಭತ್ತ, ಒಂದ್ ಕಾಯೆ, ತಲೆಗೆ ಎಂಣೆ ನಾಕಾನೆ ದುಡ್ಡು ಎಲಾಡ್ಕೆ ಹೊಸೆಪು ಕೊಟ್ಟ್ ಕಳ್ಸ್‌ತಿದ್ದೊ. ನಮ್ಮ ಮನೆಲಿ "ಚೆನ್ನು"ಂತ ಕರೆವ ಒಂದ್ ಹೆಂಗ್ಸ್ ಹೊರಗೆನ ಕೆಲ್ಸಕ್ಕೆ ಬಾತಿತ್ತ್. ಅದ್ ಸಾಯಕನ ಮುಟ್ಟ ನಮ್ಮಲ್ಲಿನೇ ಕೆಲ್ಸ ಮಾಡ್ತಿತ್ತ್. ಒಂದು ದಿನನೂ ರಜೆ ಮಾಡ್ತಿತ್ಲೆ. ಅದ್ಕೆ ತಿಂಗಳಿಗೆ ಎರಡ್ ರೂಪ್ಯಾ ಸಂಬಳ ಕೊಡ್ತಿದ್ದೊ. ಒಮ್ಮೆ ಅದ್ಕೆ ಹುಚ್ಚುನಾಯಿ ಕಚ್ಚಿತ್. ಅಪ್ಪ ಅದ್ಕೆ ಮೊದ್ದ್ ಮಾಡ್ಸಿದೊ. ಅದ್ಕೆ ಬಾಳ ಹೆದ್ರಿಕೆ. ಹೆದ್ರಿ, ಹೆದ್ರಿನೇ ದಿನಂದ ದಿನಕ್ಕೆ ಅದ್ ಬೊಚ್ಚಿಕಂಡ್ ಬಾತ್. ಒಂದ್ ದಿನ ಸತ್ತೇ ಹೋತ್. ಸಾಯಕೆ ಮುಂದೆ ಅದ್ ಅದರ ಮಗಳ್ ಬೊಳ್ಳೆನ ನಮ್ಮಲ್ಲಿ ಕೆಲ್ಸಕೆ ಸೇರ್ಸಿತ್. ನಮ್ಮ ಅಂಗ್ಡಿ ಕೆಲ್ಸದ ಹೈದಂಗಳಿಗೂ, ಮನೆ ಕೆಲ್ಸದವ್ಳಿಗೂ ಅಪ್ಪ ವೊರ್ಸಕ್ಕೆ ಎರ್ಡ್ ಸರ್ತಿ ಹೊಸ ಬಟ್ಟೆ ಕೊಡ್ತಿದ್ದೊ. ಒಮ್ಮೆ ಬಿಸುಗೆ, ಇನ್ನೊಮ್ಮೆ ಅಂಗ್ಡಿ ಪೂಜೆಗೆ [ದೀಪಾವಳಿಗೆ].

ಬಿಸು ಹಬ್ಬದ ಮೊರ್ದಿನ ಸುಳ್ಯದ ನಾವೂರ್‌ನ ಮತ್ತೆ ಬೂಡುನ ದಿಕ್ಕಂಗ ಹಬ್ಬದ ಹಿಟ್ಟ್ ತಿಂಬಕೆ ಬಾತಿದ್ದೊ. ಅವ್ವ ಅವ್ಕಾಗಿಯೇ ಐದಾರ್ ಸೇರ್‌ನ ಅಕ್ಕಿನ ಕಡ್ದ್ ಇಸಿ, ಹುಳಿ ದೋಸೆ ಮಾಡ್ತಿದ್ದೊ. ಅದರ ಎಲ್ಲಾ ಅವ್ಕೆ ಹಂಚ್‌ತಿದ್ದೊ.

* * * * *

ಚುಕ್ಕೆ –18

"ಆಟಿ ವಿಶೇಷ"

"ನಾಳೆಂದ ಆಟಿ ಸುರು. ಮಕ್ಕಳೇ ಅಟ್ಟ ಹತ್ತಿ. ಚೆನ್ನಮಣೆ ಹುಡ್ಕಿ ಇಸಿನಿ"– ಉಗ್ಗವ ಹೇಳ್ದೊ.

ಆಟಿ ತಿಂಗಳ ಹೆಸ್ರ್ ಕೇಳಿಕಾಕನ ನಂಗೆ ತುಂಬಾ ಕುಸಿ ಆತ್. ಆಟಿಲಿ ಆಟಿ ಕಳಂಜ ಬಂದದೆ. ಅವ್ವ ಪತ್ರೊಡೆ ಮಾಡಿವೆ. ಚಗ್ತೆ ಸೊಪ್ಪುನ ಅಂಬಟೆ ಮಾಡ್ವೆ. ಕಾಡ್ ತಿನ್ಸ್ ಎಲ್ಲಾ ಆಟಿ ತಿಂಗಳ್‌ಲಿ ನಮ್ಮಲ್ಲಿ ಮಾಡ್ತಿದ್ದೊ. ನಾನೂ, ತಮ್ಮಂದರೂ ಅಟ್ಟ ಹತ್ತಿ, ಅವ್ವ ಒಟ್ಟಿ ಇಸಿದ ಮಡ್ಕೆ ಸೆರೆಲಿ ಚೆನ್ನಮಣೆನ ಹುಡ್ಕಿದೊ. ಎಲ್ಲುನೂ ಸಿಕ್ಕಿತಿಲ್ಲೆ. ಅಲ್ಲಿಂದಳೇ ಎತ್ತರದ ದನಿಲಿ ಕರ್ದ್ ಕೇಳ್ದೆ,

"ಅವ್ವಾ, ಇಲ್ಲಿ ಕಾಂಬೋದ್ಲೆ, ಎಲ್ಲಿ ಇಸ್ಯಳರಿ?" ಅಡ್ಗೆ ಕೋಣೆಂದಳೇ ಅವ್ವ ಗಟ್ಟಿಲಿ, ಬೊಬ್ಬೆ ಹೊಡ್ದ್ ಹೇಳ್ದೋ,

"ಅಲ್ಲಿ ಬಿಟ್ಟದ ಸೆರೆಲಿ ಇಸ್ಯಳೆ' ಎಂತ ನಾ ತಲೆ ಎತ್ತಿ ಬಿಟ್ಟನ ನೋಡ್ದೆ. ನೋಡಿನೆ, ಚೆನ್ನಮಣೆ ನನ್ನ ನೋಡಿ ನೆಗಾಡ್ದಾಂಗೆ ಕಾಂಬತಿತ್ತ್. ಕುಸಿಂದ ಅದರ ತೆಗ್ದ್ ತಮ್ಮನ ಕೈಲಿ ಕೊಟ್ಟೆ. ತಮ್ಮ ಚೆನ್ನಮಣೆನ ಎರ್ಡ್ ಕೈಲಿ ಹಿಡ್ಕಂಡ್, ದಡ ಬಡಾಂತ ಅಟ್ಟಂದ ಇಳ್ದ್, ಸಣ್ಣಕ್ಕನ ಕೈಲಿ ಕೊಟ್ಟತ್. ಅಕ್ಕ ಅದರ ಸೀರೆ ಒಗ್ಯೊವ ಕಲ್ಲ್‌ನ ಹಕ್ಕಲೆ ತಕಂಡೋಗಿ, ಬಾಜಿಂಜನ ಸೊಪ್ಪುಲಿ ಉಜ್ಜಿ, ತೊಳ್ದ್ ಸೀರೆ ಅರ್ವೆಲಿ ಚಂಡಿ ತೆಗ್ತ್.

ಮೊರ್ದಿನ ಹಿಂಬೊತ್ತ್ ಸಾಲೆ ಬುಟ್ಟ್ ಬಂದ್‌ದ್ ನಾವು

ಚೆನ್ನಮಣೆ ಆಡಿಕೆ ಸುರುಮಾಡ್ದೊ. ಸಣ್ಣಕ್ಕ ಚೆನ್ನಮಣೆಗೆ ಬೊಳ್ಪುಗೆನೇ ಗಂಧ, ಕುಂಕುಮ ಇಸಿ, ಪೂಜೆ ಮಾಡಿತ್ತ್. ಅಕ್ಕ ಮತ್ತೆ ಅತ್ತಿಗೆ ಆಗಳೇ ಒಂದು ಸುತ್ತು ಆಡಿ ಮುಗ್ಸಿದೊ.

ಈಗ ನಮ್ಮ ಆಟ ಸುರಾತ್. ಸಣ್ಣಕ್ಕ ರಾಜ. ನಾನೂ ದೊಡ್ಡ ತಮ್ಮ ನಾಣಿನೂ ಮಂತ್ರಿಗ. ಮಂತ್ರಿಗಳಿಗೆ ನಾಕ್ ನಾಕ್ ಗುಳಿನ ಕಾಯಿಗ. ರಾಜಂಗೆ ಆರು ಗುಳಿನ ಕಾಯಿಗ. ಒಂದೊಂದು ಆಟ ಮುಗ್ಯಕಾಕನ ರಾಜಂಗೆ ಮಂತ್ರಿಗ ಒಂದೊಂದು ಕಾಯಿ ಗೇಣಿ ಕೊಡೊಕು. ನಾವು ಚೆನ್ನೆಗುಳಿಗೆ ಮಂಜೊಟ್ಟಿ ಕಾಯ್ನ ತುಂಬಿಸಿದ್ದೊ. ದೊಡ್ಡಕ್ಕನ ಮನೆಂದ ನಾ ಪೊರ್ಸ, ಪೊರ್ಸ ಮಂಜೊಟ್ಟಿ ಕಾಯಿಗಳ ತಾತಿದ್ದೆ. ಸಣ್ಣಕ್ಕ ಚೆನ್ನೆ ಆಟಲಿ ಬಾಳ ಉಸಾರ್. ನಾಲ್ಕೇ ಆಟಲಿ ತಮ್ಮನ ಸೋಲ್ಸಿತ್. ಆ ಮೇಲೆ ಎರ್ಡ್ ಆಟಲಿ ನಾನೂ ಅದ್ಕೆ ಸೋತೆ. ಸಣ್ಣಕ್ಕ ಗೆದ್ದ ಕುಸಿಲಿ ನಮ್ಮ ಹಂಗಿಸಿತ್. ನಾವಿಬ್ಬರೂ ಬೇರೆಂತ ಮೊರ್ರೊ. ಆಗ ಅಣ್ಣ ಬಂದ್ ನಮ್ಮ ಸಮಾಧಾನ ಮಾಡ್ತ್.

ಹೀಂಗೆ ದಿನಾ ಚೆನ್ನೆ ಆಟಲಿ ಕೋಪ, ಜಗಳ ಆಗಾಗ ಆಗ್ತಿತ್ತ್. ಆದರೆ ಅದರ ನಾವು ಬೇಗ ಬೇಗ ಮರ್ರ್ಯೊತಿದ್ದೊ.

ಚೆನ್ನೆ ಆಟಲಿ ರಾಜ, ಮಂತ್ರಿ ಆಟ ಮೂರು ಜನ ಆಡುವ ಆಟ. ನಾಕ್ ಜನ ಇದ್ದರೆ 'ಕಾಶಿ' ಆಟ ಆಡಕ್. ಅದರ್ಲಿ ನೊಡುನ ಎರ್ಡ್ ಎದ್ರ್ ಬದ್ರ್ ಗುಳಿಗಳ 'ಕಾಶಿ'ಂತ ಹೇಳಿ ಅದ್ಕೆ ಗುರ್ತಿಗೆ ಉಂಗಿಲ ಹಾಕ್ತಿದ್ದೊ. ಅದರ ಯಾರೂ ಮುಟ್ಟಿಕೆ ಬೊತ್ತ್. ಆಟ ಆಡಿಕಂಡ್ ಹೋಕನ ಕಾಶಿ ಅಡ್ಡ ಬಂದರೆ ಆಟ ನಿಲ್ತಿತ್ತ್. ಆಟ ಆಡಿಕಂಡ್ ಹೋಕನ ಕಾಶಿನ ಹಕ್ಕಲೆ ಇದ್ದ ಗುಳಿ ಖಾಲಿ ಇದ್ದರೆ ಕಾಶಿ ಮಿಂದೋಂತ ಅರ್ಥ. ನೊಡುಗುಳಿಗ ಅತ್ತ ಇತ್ತ ಇದ್ದ ಮೂರು ಮೂರು ಗುಳಿನ ಇಬ್ಬೊರು, ಅದರ ಎದ್ರ್‌ನ ಮೂರು ಮೂರು ಗುಳಿನ ಇಬ್ಬೊರು- ಹೀಂಗೆ ನಾಕ್ ಜನ ಆಡ್ತಿದ್ದೊ. ಕಾಶಿ ಗುಳಿಲಿ ಒಟ್ಟು ಸೇರ್ದ ಕಾಯಿಗಳ ಕಾಶಿ ಮಿಂದೊವು ಅಕೇರಿಗೆ ಪಾಲ್ ಮಾಡಿಕೊಂಬೊತಿದ್ದೊ. ಇನ್ನೊಂದು ಆಟ ಬೆಳೆ – ಪೆರ್ಗ ಆಟ. ಮತ್ತೊಂದು ಆಟ ಮೂಲೆ ಕಟ್ಟುವ ಆಟ. ಇವೆರ್ಡ್ ಆಟ ಇಬ್ಬೊರು ಆಡುವ ಆಟಗ. ಒಬ್ಬರೇ ಚೆನ್ನಮಣೆಲಿ ಆಟ ಆಡಿಕೆ ಆದೆ. ಆ ಆಟದ ಹೆಸ್ರ್ ಸೀತೆ ಆಟ. ಎದ್ರ್ ಬದ್ರ್‌ನ ಪೆರ್ಗನ ಆಟನೂ ಉಟ್ಟು. ಈ ಚೆನ್ನಮಣೆ ಆಟನ ಕಲ್ತರೆ, ಭಾರೀ ಕುಸಿನ ಆಟಗ. ಹೊತ್ತ್ ಹೋದೆ ಗೊತ್ತಾಗ್‌ತಿತ್ಲೆ. ಈ ಆಟಗಳ ಎಲ್ಲಾ ನಾ ಅಕ್ಕ ಮತ್ತೆ ಅತ್ತಿಗೆನ ಕೈಲಿ ಕಲ್ತೆ. ಕಾಶಿ ಆಟನ ಸಣ್ಣಕ್ಕನ ಜೋಸ್ತಿ ಗೂಡೆ ಭಾಗೀರಥಿನ ಕೈಲಿ ಕಲ್ತೆ. ಒಮ್ಮೊಮ್ಮೆ ನಾನೂ ಸಣ್ಣಕ್ಕನೂ ಭಾಗೀರಥಿನ ಮನೆಗೆ ಹೋಗಿ ಆಟ ಆಡ್ತಿದ್ದೊ. ಅವರ ಮನೆಲಿ ಕೆತ್ತನೆ ಕೆಲ್ಸ ಮಾಡ್ದ ದೊಡ್ಡ ಚೆನ್ನಮಣೆ ಇತ್ತ್. ಅದರ್ಲಿ ಆಡಿಕೆ ಕುಸಿ ಆಗ್ತಿತ್ತ್. ಅಣ್ಣನೂ, ಅತ್ತಿಗೆನೂ ಆಟಕ್ಕೆ ನಮ್ಮೊಟ್ಟಿಗೆ ಸೇರ್ತಿದ್ದೊ. ಆಗ ಅಪ್ಪ ಬಂದ್ ಹೇಳ್ತಿದ್ದೊ,

'ಗಂಡ- ಹೆಣ್ಣ್ ಎದ್ರ್ ಕುದ್ದ್ ಆಡ್ಬೋಡಿ. ಜಗಳ ಆದೆ. ಅದಕ್ಕೊಂದು ಕತೆ ಹೇಳ್ತೇಂತ ಹೇಳಿ, ಸೇಡಿಯಾಪು ಕೃಷ್ಣ ಭಟ್ರ್ ಬರ್ದ ಚೆನ್ನಮಣೆ ಕತೆನ ಹೇಳ್ತಿದ್ದೊ.

ನೆಂಪುಗಳ ರಂಗೋಲಿ

ಕೂರ್ಗ್ ಬಸ್ಸ್ ಡ್ರೈವರ್ ಪೂವಯ್ಯಣ್ಣ ಅಪ್ಪನ ದೊಡ್ಡ ಜೋಸ್ತಿ. ಅವೊಮ್ಮೆ ಆಟಿ ಅಮಾಸೆನ ಹಿಂದೆನ ದಿನ ಮಡಿಕೇರಿಂದ ಒಂದು ಕಟ್ಟ್ ಮೊದ್ದುನ ಸೊಪ್ಪು ತಂದ್ ಕೊಟ್ಟೊ. ಅದರ ಆಟಿ ಅಮಾಸೆನ ದಿನ ಬೆಳ್ಗಾರ್‌ಗೆ ಹಸಿ ಹೊಟ್ಟೆಲಿ ಪ್ಯಾಸ ಮಾಡಿ ಕುಡ್ಯಕಡ. ನಲ್ವತ್ತೆಂಟ್ ಬಗೆನ ಮೊದ್ದ್‌ಗ ಆಟಿ ಅಮಾಸೆಗೆ, ಆ ಸೊಪ್ಪುಲಿ ಸೇರ್‍ದೆ ಗಡ. ಅವ್ವ ಅದರ ಗುದ್ದಿ ರಸ ತೆಗ್ದ್, ಆ ರಸಲಿ ಬೆಳ್ತಕ್ಕಿ ಹಾಕಿ ಬೇಯಕೆ ಇಸಿದೊ. ಕಾಯೆನ ಹಾಲ್ ತೆಗ್ದ್ ಅದಕ್ಕೆ ಸೇರ್ಸಿದೊ. ಬೆಲ್ಲನೂ ಸೇರ್ಸಿ ಕೊದ್ಯಕೆ ಇಟ್ಟೊ. ಬೆಳ್ಗಾರ್‌ಲಿ ಈ ಕೆಲ್ಸ ಎಲ್ಲಾ ಮಾಡ್ದೊ. ಬೊಳ್ಪಾಕನ ಎಲ್ಲೋವುನೂ ಹಸಿ ಹೊಟ್ಟೆಲಿ ಒಂದೊಂದು ಗ್ಲಾಸ್ ಪ್ಯಾಸನ ಕುಡ್ದೊ. ಹಂಞ ಕಂಯಿ ಇದ್ದರೂ ರುಚಿ ಇತ್ತ್.

ಆಟಿ ಅಮಾಸೆ ದಿನ ಬಸಳೆ ನೆಟ್ಟರೆ ಆನೆ ಕೆಬಿನಷ್ಟ್ ಅಗಲಲಿ ಅದರ ಎಲೆ ಆದೆ ಗಡ. ಅವ್ವ ಕೆಲ್ಸದವರೊಟ್ಟಿಗೆ ಹೇಳಿ, ಪಾತ್ರೆ ತೊಳ್ಯೊವ ಜಾಗೆಲಿ ನಾಕ್ ಅಡಿ ಅಗಲದ ಗುಂಡಿ ತೆಗ್ಸಿ, ಎರ್ಡ್ ಗೂಟ ಹಾಕ್ಸಿ, ಹಳೆ ಬಸಳೆ ಚಪ್ಪರದ ಒಂದೂವರೆ ಮೂರ್ ಉದ್ದದ ನಾಕ್ ಕೊಡಿ ಇರುವ ಬಸಳೆ ದಂಟ್‌ಗಳ ಕೊಯ್ದ್, ಒಂದೊಂದು ಗೂಟಕ್ಕೆ ಎರಡೆರ್ಡ್‌ರ ಹಾಂಗೆ ನಾಕ್ ಬೊಳ್ಳಿಗಳ ನೆಡ್ಸಿ, ಬೀಳದಾಂಗೆ ಅಲ್ಲಲ್ಲಿ ಬಾಳೆ ಬೊಳ್ಳಿಲಿ ಕಟ್ಟಿ, ಚಪ್ಪರ ಹಾಕಿಸಿದೊ. ಅದರ ಅಡಿಗೆ ಅಂಬಳಕದ ಬೊಳ್ಳಿನ ಕೊಚ್ಚಿ ಹಾಕಿಸಿದೊ.

ಆಟಿ ತಿಂಗಳ್‌ಲಿ ಒಂದು ದಿನ ಕೆಸನ ಎಲೆನ ಪತ್ರೊಡೆ ಮಾಡ್ದೊ. ಮತ್ತೊಂದು ದಿನ ಚಗ್ತೆ ಸೊಪ್ಪುನ ತಂದ್ ಸಣ್ಣ ಕೊಯ್ದ್, ಅದಕ್ಕೆ ಹಲ್ಸಿನಕ್ಕಿನ ಸಣ್ಣಂಗೆ ಕೊಯ್ದ್ ಸೇರ್ಸಿ, ಪಲ್ಯ ಮಾಡ್ದೊ. ಹಂಞ ಸೊಪ್ಪುಲಿ ಅಂಬೊಡೆ ಮಾಡ್ದೊ. ಉಪ್ಪುಲಿಹಾಕಿ ಇಸಿದ ಕಣಿಲೆ, ಹಲ್ಸಿನ ಬೀಜ ಸೇರ್ಸಿ, ಗೈಪು ಮಾಡ್ದೊ. ಕಾಡ್ ಕೆಸನ ಸೊಪ್ಪುನ ತಂದ್ ಅಂಬಟೆ ಸೂಡಿನ ಹಾಂಗೆ ಗಂಟ್ ಕಟ್ಟಿ, ಅದಕ್ಕೆ ಅಂಬಟೆ ಗುದ್ದಿ ಹಾಕಿ, ಹುಳಿ ಮೆಣ್ಸ್‌ಲಿ ಆರ್ಸಿದ ಗೈಪು ಮಾಡ್ದೊ. ಹೀಂಗೆ ಆಟಿ ತಿಂಗ ಇಡೀ ಇಂಥಾ ಕಾಡ್ ತಿನ್ಸ್‌ಗಳನೇ ಹೆಚ್ಚ್ ಮಾಡ್ತಿದ್ದೊ. ಇದರೆಡೆಲಿ ಆಗಾಗ ಅಳಂಬುಗ ನಾವ್ಗೆ ಸಿಕ್ಕ್‌ತಿತ್ತ್. ಅಳಂಬುನ ಗೈಪು ಬಾಳ ರುಚಿ. ಕೆಲವು ಅಳಂಬುನ ತಿಂದರೆ ಕಕ್ಕುವೆ ಗಡ. ಅದರ್ಲಿ ವಿಷ ಇದ್ದದೆ ಗಡ. ಅಳಂಬುನ ತಲೆ ಮೇಲೆ ಬೆರ್ಳ್ ಕೊಡಿಲಿ ಉಜ್ಜಿರೆ, ನೋಳಿ ನೋಳಿ ಆಗಿ ಇದ್ದರೆ, ಅದ್ ತಿಂಬ ಅಳಂಬು ಗಡ. ದೊರ್ಗ್ಗ ಇದ್ದರೆ, ಅದರ ತಿಂಬಕಾಗದ್‌ಂತ ಅವ್ವ ಹೇಳ್ತಿದ್ದೊ. ಅವ್ಕೆ ತಿಂಬ ಅಳಂಬು ಯಾವ್ದು, ತಿನದ ಅಳಂಬು ಯಾವ್ದೂಂತ ಲಾಯ್ಕ್‌ಲಿ ಗೊತ್ತಿತ್ತ್. ಇದರ್‌ಂದಾಗಿ ಅವು ಅಳಂಬು ಸಿಕ್ಕಿರೆ, ಅವೇ ಅದರ ಸಜ್ಜ್ ಮಾಡ್ತಿದ್ದೊ. ಗೈಪು ಮಾಡ್ದ ಮೇಲೆ, ಅವು ಕಬ್ಬಣದ ಸಟ್ಟ್‌ಗನ ಒಲೆನ ಗೆಂಡಲಿ ಇಸಿ, ಅದ್ ಕೆಂಡದಾಂಗೆ ಕೆಂಪಾಕನ ಅದರ ಗೈಪುಗೆ ಹಾಕ್‌ತಿದ್ದೊ. ಆಗ ಅದ್ 'ಜೊಂಯಿ'ಂತ ಹೇಳಿ ಹೊಗೆ ಎದ್ರ್‌ತಿತ್ತ್. ಆಗ ಅದರ್ಲಿದ್ದ ವಿಷ ಎಲ್ಲಾ ಇಳ್ದದೆ ಗಡ.

ಹೆಣ್ಣ್ ಗೂಡೆಗಳಿಗೆ ಮೊದ್ವೆ ಆಗಿ, ಸುರುನ ಆಟಿಲಿ ತೌರು ಮನೆಗೆ ಆಟಿ ಕುದ್ರಿಸಿಕೆ ಕರ್ಕಂಡ್ ಬಂದವೆ. ನಮ್ಮ ಅತ್ತಿಗೆನ ಸಾ ಅವರ ಸೋದರ ಮಾಂವ ಮತ್ತೆ ಅವರ ಅವ್ವ ಬಂದ್, ಆಟಿ ಕುದ್ರಿಕೆ ತವರು ಮನೆಗೆ ಕರ್ಕಂಡ್ ಹೋಗೊಳೊ. ಹದಿನೈದ್ ದಿನ ಕಳ್ದ ಮೇಲೆ ಅಣ್ಣ ಹೋಗಿ ಕರ್ಕಂಡ್ ಬಾತ್. ನನ್ನ ಅಕ್ಕಂದರ್‍ನೂ ಅವ್ವ ಮತ್ತೆ ಅಪ್ಪ ಹೋಗಿ ಆಟಿ ಕುದ್ರಿಕೆ ಕರ್ಕಂಡ್ ಬಂದೊಳೊ.

ಆಟಿ ತಿಂಗಳ್‌ಲಿ ಆಟಿ ಕಳಂಜ ಮನೆ ಮನೆಗೆ ಕೊಣ್ಕಂಡ್ ಬಾತಿತ್ತ್. ಬೊಳಿಯ ಮಜಲಿಲಿ ಇದ್ದ ಇದ್ದ ಅಜಲರ್ ಆಟಿ ಕಳಂಜ ವೇಷ ಕಟ್ಟ್‌ತಿದ್ದೊ. ಕಳಂಜದೊಟ್ಟಿಗೆ ಒಬ್ಬ ಹೆಣ್ಣ್ ವೇಷ ಹಾಕಿ, ಎರ್ಡ್ ಕೈಲಿ ನೆಕ್ಕಿ ಸೊಪ್ಪು ಹಿಡ್ಕಂಡ್ ಕುಣ್ಕಂಡ್ ಬಂದದೆ. ಒಂದ್ ಹೆಣ್ಣ್ ಡೋಲು ಬರ್ಕಂಡ್ ಪಾಡ್ದನ ಹೇಳ್ದೆ. ಮತೊಬ್ಬ ಗೋಣಿ ಚೀಲ ಹಿಡ್ಕಂಡ್ ಅವರೊಟ್ಟಿಗೆ ಬಂದದೆ. ಎಲ್ಲಾ ಮನೆವು ಭತ್ತ, ಕಾಯಿ, ಅಡ್ಕೆ, ಹಳೆ ಬಟ್ಟೆ ಕೊಟ್ಟವೆ. ಅದರೆಲ್ಲಾ ಆ ಗೋಣಿ ಚೀಲಲಿ ತುಂಬಿಸಿಕಂಡವೆ. ದುಡ್ಡುನನೂ ಕೆಲವು ಜನ ಕೊಟ್ಟವೆ. ನಮ್ಮಲ್ಲಿಗೆ ಹೆಚ್ಚಾಗಿ ಆಟಿ ಕಳಂಜ ಆಟಿ ಅಕೆರಿಗೆ ಬಾತಿತ್ತ್. ಆ ಸಮಯಲಿ ಸಣ್ಣಕ್ಕ ಮತ್ತೆ ಅತ್ತಿಗೆ ಸೇರಿಕಂಡ್, ಚೊಲ್ಲಿದ ಕಾಯೆನಷ್ಟ್ ದೊಡ್ಡ ಬೂಡಿನ ಉಂಡೆನ ಮಾಡಿ ಇಸ್ತಿದ್ದೊ. ಅದ್ ಆಟಿ ಕಳಂಜಂಗೆ ಹೊಡ್ಯಕೆ. ನಾವ್ಗೆ ಅಂಗ್ಡಿ ಇದ್ದ ಕಾರಣ, ನಮ್ಮ ಅಂಗ್ಡಿನ ಎದ್ರ್‌ಗಡೆ ರಸ್ತೆಲಿ ಆಟಿ ಕಳಂಜ ಕೊಣ್ಯಾತಿತ್ತ್. ಅಂಗ್ಡಿನ ಪುಡೆಲಿದ್ದ ಓಣಿಲಿ, ಸಣ್ಣಕ್ಕ ಅಡಿಂಗಿ ನಿಂತ್‌ಕಂಡ್ ಕೈಲಿ ಮೂರು ಬೂದಿ ಉಂಡೆಗಳ ಹಿಡ್ಕಂಡ್ ಕಳಂಜಂಗೆ ಹೊಡ್ಯಕೆ ಕಾದ್ ಕುದ್ರ್‌ತಿತ್ತ್. ಪಾಡ್ದನ ಪದಕ್ಕೆ ಸರಿಯಾಗಿ ಹೆಜ್ಜೆ ಹಾಕಂಡ್ ಕಳಂಜ ಕೊಣ್ಯಾತಿತ್ತ್. ಪಾಡ್ದನ ಮುಗ್ಯಕಾಕನ ಡೋಲು ಹೊಡ್ಯೊವು ರಭಸಂದ ಡೋಲು ಹೊಡ್ಯೊತಿದ್ದೊ. ಹಾಡ್ ಹಾಡೋವು ಎತ್ತರದ ದನಿಲಿ ಹೇಳ್ತಿದ್ದೊ. ಆಗ ಆಟಿ ಕಳಂಜ ಮೂರು ಸಲ 'ಕೂ' ಕುಳು ಹಾಕಿ ಓಡ್‌ತಿತ್ತ್. ಆ ಸಮಯಲಿ ಕಾದ್‌ಕಂಡಿದ್ದ ಸಣ್ಣಕ್ಕ, ಕೈಲಿದ್ದ ಬೂದಿನ ಉಂಡೆನ ಬೀಸಿದ್ ಇಡ್ತಿತ್ತ್. ಅದ್ ಆಟಿ ಕಳಂಜಂಗೆ ತಾಂಗ್‌ತಿತ್ತ್. ಅಂವ ತೊಪ್ಪಿಸಿ ಕೊಂಬಕೆ ಒಲಿ ಕೊಡೆನ ಅಡ್ಡ ಹಿಡ್ಯತಿತ್ತ್. ಆಗ ಎಲ್ಲೋವೂ ಜೋರಾಗಿ ಬೊಬ್ಬೆ ಹೊಡ್ಕಂಡ್ ಚಪ್ಪಾಳೆ ತಟ್ಟ್‌ತಿದ್ದೊ.

ಆಟಿ ಕಳ್ದ ಮೊರ್ದಿನ ಚೆನ್ನಮಣೆನ ತೊಳ್ದ್ ಒರ್ಸಿ. ಅಟ್ಟಲಿ ಇಸ್ತಿದ್ದೊ. ಇನ್ನ್ ಅದರ ತೆಗ್ಯೊದು ಬರ್ಪ ವೊರ್ಸದ ಆಟಿಲಿ.

* * * * *

ಚುಕ್ಕೆ – 19

" ನಾಗರ ಪಂಚಮಿ, ಅಷ್ಟಮಿ, ಚೌತಿ"

ನಾಗರ ಪಂಚಮಿ ದಿನ ನಾವು ಅರಶಿನ ಎಲೆಲಿ ಮೊಡ್ಚಿ ಇಡ್ಲಿ ಪಾತ್ರೆಲಿ ಬೇಸುವ ಹಿಟ್ಟ್ ಮಾಡ್ತಿದ್ದೊ. ಈ ಹಿಟ್ಟಿಗೆ ಕೊಂಕ್ಣಿಗ 'ಪನ್ವತ್ರೆ' ಎಂತ ಹೇಳ್ತಿದ್ದೊ. ಕ್ಯೊಸಲಕ್ಕಿ ಮತ್ತೆ ಬೆಳ್ತಕ್ಕಿ ಸಮಪಾಲ್, ಬೊಳ್ಪುಗೆ ನೀರ್‌ಲಿ ನೆನಿಯಕ್ಕೆ ಹಾಕಿ, ಹಿಂಬೊತ್ತು ಅದರ ಬೆಣ್ಣೆನಾಂಗೆ ಕಡ್ದ್ ಅದ್‌ರೊಟ್ಟಿನ ಹಿಟ್ಟ್ ನಾಂಗೆ ಆಕಾಕನ, ಅದರ ತೆಗ್ದ್ ತೆಳುಲಿ ಅರ್ಸಿಣದ ಎಲೆಗಳಿಗೆ ಪೂಜಿ, ಅದರೊಳಗೆ ಕಾಯಿ ಹೂ, ಬೆಲ್ಲ ಹೊರ್ದ್ ಎಳ್ಳ್, ಏಲಕ್ಕಿ ಹೊಡಿ ಹಾಕಿ ಮಾಡ್ದ ಮಿಶ್ರಣದ ಹರಿಂಡಿ ಅದರ ಮೊಡ್ಚಿ, ಮಾಡ್ದ ಹಿಟ್ಟ್‌ನ ಪಾತ್ರಲಿ ಹಾಕಿ ಬೇಸೊಕು. ಮಕ್ಕಳಿಗೆ ಈ ಹಿಟ್ಟ್ ತಿಂಬಕೆ ಭಾರೀ ಕುಸಿ. ಅರ್ಸಿಣ ಎಲೆನ ಪೊರ್ಮಳಕ್ಕೆ, ಹಿಟ್ಟ್ ರುಚಿಯಾಗಿ ಇರ್ತಿತ್ತ್. ನಾಗರ ಪಂಚಮಿನ ಹಿಂದೆನ ದಿನ ಇರ್ಳ್ ಇದರ ಮಾಡಿಸಿರೆ, ಮಾರ್ಣೆ ದಿನ ಬೊಳ್ಪುಗೆ ಇದೇ ನಾವ್ಗೆಲ್ಲಾ ಕಾಫಿಗೆ ತಿಂಡಿ.

ಸಣ್ಣಕ್ಕ ಕೃಷ್ಣನ ಭಕ್ತೆ. ಪೂಜೆನ ತುಂಬಾ ಲಾಯ್ಕ್‌ಲಿ ಮಾಡ್ತಿತ್ತ್. ಅದ್ ಅಷ್ಟಮಿನ ಬಾಳ ನಿಷ್ಠೆಲಿ ಮಾಡ್ತಿತ್ತ್. ಇಡೀ ದಿನ ಉಪಾಸ ಇದ್ದ್, ನಡಿರ್ಳ್ ಚಂದ್ರ ಮೂಡಿಕಾಕನ ಮುಟ್ಟ ಎಚ್ಚರ ಇದ್ದ್, ಚಂದ್ರನ ನೋಡಿ, ತೊಡ್ಪೆಲಿ ಇಸಿದ ಗುಂಡು ಕಲ್ಲಿಗೆ [ಕೃಷ್ಣಂತ ಹೇಳಿ, ಒಂದು ಗುಂಡ್‌ಕಲ್ಲ್‌ನ ತೊಳ್ದ್‌ದ್ ಅದ್ಕೆ ಅರ್ಸಿಣ ನೀರ್‌ಲಿ ಮುಳುಂಗಿಸಿದ ಮಡಿ ಬಟ್ಟೆನ ಸುತ್ತಿ ತಡ್ಪೆಲಿ ಇಸ್ತಿತ್ತ್] ಹಾಲ್‌ನ ಅರ್ಘ್ಯ ಕೊಟ್ಟ್ ಆ ಮೇಲೆ ಅದ್ ಪಳಾರ ಮಾಡ್ತಿತ್ತ್. ಅರ್ಘ್ಯ ಕೊಡುವ ಹಾಲ್‌ನ ಒಂದು ಸಣ್ಣ ಚೊಂಬುಲಿ ತೊಡ್ಪೆಲಿ ಇಸಿ, ಅದರ ಪಕ್ಕಲಿ ಒಂದು ಸಣ್ಣ ಶಂಖ ಇಸ್ತಿತ್ತ್. ಹಾಲ್‌ನ ಶಂಕದ ಮೇಲೆಂದ ಗುಂಡುಕಲ್ಲಿಗೆ (ಕೃಷ್ಣಂಗೆ) ಚಂದ್ರನ ನೋಡಿ ಹೊಯ್ಯತಿತ್ತ್. ಆಗ ಶಂಕದ ಕೊಡಿಲಿ ಹಾಲ್ ಗುಂಡು ಕಲ್ಲಿಗೆ ಬೀಳ್ತಿತ್ತ್. ಇದರೆಲ್ಲಾ ತೊಳಸಿ ಕಟ್ಟೆನ ಎದ್ರ್ ಮಾಡ್ತಿತ್ತ್. ನಾ ಎಷ್ಟೋ ಸಲ ಅದರೊಟ್ಟಿಗೆ ಉಪಾಸ ನಿಂತ್, ಹೊಟ್ಟೆ ಇಸಿದು ತಡ್ಯಕಾಗದೆ ಅರ್ಧಲಿ ಉಂಬತಿದ್ದೆ. ಅಷ್ಟಮಿನ ದಿನ ಇಡೀ ಇರ್ಳ್, ನಾನೂ, ತಮ್ಮಂದರೂ ಅಕ್ಕ, ಅಣ್ಣನ ಮಕ್ಕಳೂ ಭಜನೆ ಮಾಡ್ತಿದ್ದೊ. ಕೃಷ್ಣನ ಪದಗಳ ಹಾಡ್ತಿದ್ದೊ. ಆಗ ಅಕ್ಕ ಸಂಗೀತ ಕಲ್ಯತಿತ್ತ್. ಇದರ್‌ಂದಾಗಿ ಭಜನೆ ಗಡ್ದ್‌ಲಿ ನಡ್ಯತಿತ್ತ್. ಅಕ್ಕನ ಸಂಗೀತ ಕ್ಲಾಸ್‌ನ ಜೋಸ್ತಿ ಗೂಡೆ, ಕಂಡ ಕುಂಞಿಯವರ ಮಗಳ್ ಕಮಲಾಕ್ಷಿನ ಮನೆಲಿ ಹಾರ್ಮೋನಿ ಪೆಟ್ಟಿಗೆ ಇತ್ತ್. ನಾವು ಅಲ್ಲಿಗೆ ಹೋಗಿ, ಅಲ್ಲಿಂದ ಅದರ ಹೊತ್ತ್‌ಕಂಡ್ ಬಂದ್, ಅಷ್ಟಮಿ ದಿನ ಅದರ ಬಾರ್ಸಿ ಭಜನೆ ಮಾಡ್ತಿದ್ದೊ.

ಚೌತಿ ದಿನ ನಾವು ಗಣಪತಿನ ಕುದ್ರ್‌ಸದಿದ್ದರೂ, ಗಣಪತಿ ಪಟ ಇಸಿ, ಅದಕ್ಕೆ ಹೂ ಇಸಿ ಸಿಂಗಾರ ಮಾಡಿ ಗಡ್ದ್‌ಲಿ ಭಜನೆ ಮಾಡ್ತಿದ್ದೊ. ಕೊಟ್ಟಿಗೆ, ಪ್ಯಾಸದ ಅಡ್ಡೆ ಯಾಗೋಳು ಚೌತಿ ದಿನ ಅವ್ವ ನಮ್ಮಲ್ಲಿ ಮಾಡ್ತಿದ್ದೊ. ಪ್ರತಿ ವೊರ್ಸ ಚೌತಿ ದಿನವೇ ಮನೆ ತುಂಬುಸ್ತಿದ್ದೊ.

ಚುಕ್ಕೆ –20

"ಮನೆ ತುಂಬುಸುದು"

ನಮ್ಮ ಮನೆಲಿ ವೊರ್ಸಕೊಮ್ಮೆ ಬರುವ ಗಣೇಶ ಹಬ್ಬ 'ಚೌತಿ ದಿನ' ಮನೆ ತುಂಬುಸ್‌ತಿದ್ದೊ. ಆಟಿ ತಿಂಗಳ್‌ಲಿ ಅಟ್ಟ ಗುಡ್ಸಿ, ಮನೆ ಸುತ್ತ ಮುತ್ತ ಇದ್ದ ಕಾಡ್, ಕಸ ತೆಗ್ದ್ ಮನಾರ ಮಾಡ್ತಿದ್ದೊ. ಒಂದು ದಿನಕ್ಕೆ ಮುಂದೆನೇ ಅಜ್ಜಪ್ಪ ಮನೆ ತುಂಬಿಸಿಕೆ ಬೇಕಾದ ಸೊಪ್ಪು, ಬೊಳ್ಳಿಗಳ ತಂದ್‌ದ್ ತೊಳ್ಸಿ ಕಟ್ಟೆನ ಹಕ್ಕಲೆ ತೊಡ್ಪೆಲಿ ಇಸ್‌ತಿದ್ದೊ. ಅಶ್ವತ್ಥ ಸೊಪ್ಪು, ಬೆದ್ರ್ ಸೊಪ್ಪು, ಹಲ್ಸಿನ ಎಲೆ, ಮಾಯ್ನ ಎಲೆ, ಪಲ್ಲಿ ಸೊಪ್ಪು [ಪೊಲಿ ಬಳ್ಳಿ ಸೊಪ್ಪು] ನೆಲ್ಲಿ ಸೊಪ್ಪು, ಗೋಳಿ ಎಲೆ, ನಾಯಿ ಕಬ್ಬುನ ಎಲೆ– ಇದರೆಲ್ಲಾ ತಾತಿದ್ದೊ. ಅಶ್ವತ್ಥ ಸೊಪ್ಪು, ಬೆದ್ರ್ ಸೊಪ್ಪು, ಹಲ್ಸಿನೆಲೆ, ಮಾಯ್ನ ಎಲೆ ಬೇಕೇ ಬೇಕಡ. ಉಳ್ದದ್ ಸಿಕ್ಕಿತ್ಲರೆನೂ ನಡ್ದದೇಂತ ಅಜ್ಜಪ್ಪ ಹೇಳ್ತಿದ್ದೊ. ದಡ್ಡಾಲದ ಮರನ ಗೆಲ್ಲ್‌ನ ಚೋಳಿ ತೆಗ್ದ್ ಅದರ್‌ಂದ ಮಾಡಿದ ಬೊಳ್ಳಿಗಳ್‌ಂದ ಕದ್ರ್ ಕಟ್ಟ್‌ತಿದ್ದೊ.

ಚೌತಿ ದಿನ ಬೊಳ್ಪುಗೇ ಕೋಳಿ ಕೂಂಗಿಕೆ ಮುಂದೆನೇ ಎದ್ದ್ ಅಜ್ಜಪ್ಪ ಹಳ್ಳಕ್ಕೆ ಹೋಗಿ, ಮಿಂದ್‌ದ್, ಮಡಿ ಬಟ್ಟೆ ಉಟ್ಟ್ ಭಸ್ಮಲಿ ಹಣೆಗೆ ನಾಮ ಎಳ್ದ್, ಗಂಧದ ಬೊಟ್ಟ್ ಇಸಿ, ಕೆರೆಮೂಲೆ ಗದ್ದೆಂದ ಕದಿರ್ ತಾತಿದ್ದೊ. ಅವು ಮಿಾಯಕೆ ಹೋಕಾಕನನೇ ಭಸ್ಮದ ಉಂಡೆ, ನುಣ್ಣಗೆ ಅರ್ದ ಗಂಧನ ಬಾಳೆಲೆ ಬಾಡಿಸಿ, ಅದರ್ಲಿ ಕಟ್ಟಿಕಂಡ್, ಐದೆಲೆ ಒಂದಡ್ಕೆ, ಬೆದ್ರ್‌ನ ಹೊಸ ಕುಕ್ಕೆ ತಕಂಡ್ ಹೋತಿದ್ದೊ. ಮಿಂದ್ ಬಾಕನ ತೆಗೆವ ಗದ್ದೆಗೆ ಸುತ್ತು ಬಂದ್, ಮೂಡು ದಿಕ್ಕಿಗೆ ಮೋರೆ ಮಾಡಿ ನಿಂತ್ ಕೈ ಮುಗ್ದ್ [ಸೂರ್ಯ ದೇವ್ರಿಗೆ] ಎಲೆ,

ಅಡ್ಕೆನ ಗದ್ದೆ ಪುಣೆಲಿ ಇಸಿ, ಆ ಗದ್ದೆಂದ ಕದ್ರ್ ತೆಗ್ಯೋತಿದ್ದೊ. ಹೆಚ್ಚಾಗಿ ನಲ್ವತ್ತೆಂಟ್ ಕದ್ರ್ ತಾತಿದ್ದೊ. ಕದ್ರ್‌ನ ಒಟಾರೆ ತೆಗ್ಯಕೆ ಆಗದ್ ಗಡ. ಅದಕ್ಕೆಲ್ಲಾ ಲೆಕ್ಕ ಉಟ್ಟು ಗಡ. ಹೊಸ ಕುಕ್ಕೆಲಿ ಆ ಕದ್ರ್‌ನ ಇಸಿ, ಮನೆಗೆ ತಂದ್, ಹಿಂದೆನ ದಿನ ತೊಡ್ಪೆಲಿ ಇಸಿದ ಸೊಪ್ಪು, ಬೊಳ್ಳಿಗಳ ಪುಡೆಲಿ ಇಸ್ತಿದ್ದೊ. ಮನೆ ತುಂಬುಸುವ ಭತ್ತದ ಕದ್ರ್‌ನ ಬೇರೆಯವರ ಗದ್ದೆಂದಳೇ ತೆಗ್ಯೊಕಡ. ನಮ್ಮ ಗದ್ದೆನ ಕದ್ರ್‌ನ ಬೇರೇವು ತೆಗ್ದರೆ ನಾವ್ಗೆ ಧಾನ್ಯಲಕ್ಷ್ಮಿ ಒಲ್ಯೋದು ಗಡ.

ಅಷ್ಟಾಕನ ಮನೆನೆಲ್ಲಾ ಗುಡ್ಸಿ, ಒರ್ಸಿ, ಮನೆವೆಲ್ಲಾ ಮಿಂದ್‌ದ್, ಮಡಿ ಬಟ್ಟೆ ಉಟ್ಟ್‌ಕಂಡ್, ಕಾದ್‌ಕಂಡ್ ಇರ್ತಿದ್ದೊ. ಅಜ್ಜಪ್ಪ, ಅಪ್ಪ ಮತ್ತೆ ಅವ್ವ ತೊಡ್ಪೆಲಿದ್ದ ಸಾಮಾನ್‌ನ ಹಿಡ್ಕಂಡ್, ಒಬ್ಬ ಕದ್ರ್ ಹೊತ್ತ್‌ಕಂಡ್, ನಾವು ಮಕ್ಕ ಕೆಲವು ಕದ್ರ್‌ಗಳ ಹಿಡ್ಕಂಡ್, ಒಬ್ಬ ಎಳ್ತ್ ಸೋಂತೆ ಕ್ಯಾನ ಕೈಲಿ ಹಿಡ್ಕಂಡ್, ಮನೆಲಿದ್ದೊವೆಲ್ಲಾ 'ಪೊಲಿ, ಪೊಲಿ'– ಎಂತ ಹೇಳಿಕಂಡ್, ಮನೆಗೆ ಮೂರು ಸುತ್ತು ಬಂದ್, ಅದರೆಲ್ಲಾ ಒಳಗೆ ತಂದ್, ಕನ್ನೆ ಕಂಭದ ಹಕ್ಕಲೆ ಇಸಿದ ಮಣೆನ ಮೇಲೆ ಇಸ್ತಿದ್ದೊ. ಅತ್ತಿಗೆ ಮುಂದೆನೇ ಅಲ್ಲಿ ಒಂದು ಮಣೆ ಮೇಲೆ ಕಾಲ್ದೀಪ ಹೋಸಿ, ಇಸ್ತಿದ್ದೊ. ಇನ್ನೊಂದು ಮಣೆ ಮೇಲೆ ಬಾಳೆಲೆಲಿ ಬೆಳ್ತಕ್ಕಿನನೂ, ನುಣ್ಣಂಗೆ ಅರ್ದ ಗಂಧನನೂ ಇಸ್ತಿದ್ದೊ. ಸುರುಗೆ ಅಜ್ಜಪ್ಪ, ಆ ಮೇಲೆ ಅಪ್ಪ, ಅವ್ವ ದೀಪಕ್ಕೆ ಅಕ್ಕಿ ಹಾಕಿ ಕೈ ಮುಗ್ದವೆ. ಆ ಮೇಲೆ ನಾವು ಉಳ್ದೋವೆಲ್ಲಾ ದೀಪಕ್ಕೆ ಅಕ್ಕಿ ಹಾಕಿ, ಕೈ ಮುಗ್ಯೋತಿದ್ದೊ. ಎಲ್ಲೋವೂ ಬಾಳೆಲೆ ಕೊಡಿಲಿ ಇಸಿದ ಗಂಧನ ತೆಗ್ದ್ ಮುಂಡಕ್ಕೆ ಬೊಟ್ಟ್ ಹಾಕಂಬತಿದ್ದೊ. ಅವ್ವ ನೀರ್ ಸಕ್ಕರೆ ಸೇರ್ಸಿ ಕಾಸಿದ ಹಾಲ್ನ ಎಲ್ಲೋವ್ಕ ಒಂದೊಂದು ಗ್ಲಾಸ್ ಕುಡ್ಯಕೆ ಕೊಡ್ತಿದ್ದೊ.

ಅದರ್‌ಂದ ಮೇಲೆ ಅಜ್ಜಪ್ಪ, ಅಪ್ಪ ಸುರುಲಿ ಅಶ್ವತ್ಥ ಎಲೆ, ಅದರ ಮೇಲೆ ಹಲ್ಸಿನ ಎಲೆ, ಮಾಯ್ನ ಎಲೆ, ಒಂದರ ಮೇಲೆ ಒಂದು ಇಸಿ, ನೆಲ್ಲಿ ಸೊಪ್ಪು, ಪೊಲಿ ಸೊಪ್ಪು, ಬೆದ್ರ್ ಸೊಪ್ಪು, ನಾಯಿ ಕಬ್ಬುನ ಸೊಪ್ಪುನ ಅದ್ಕೆ ಒಂದೊಂದು ಸೇರ್ಸಿ, ಎರ್ಡ್ ಭತ್ತದ ಕದ್ರ್‌ಗಳ ಅದರ ಮೇಲೆ ಇಸಿ, ಸುರುಳಿ ಸುತ್ತಿ, ನೊಡುಗೆ ಬೊಳ್ಳಿನ ಬಿಗ್ಯತಿದ್ದೊ. ಹೀಗೆ ಮಾಡ್ದ ಕದ್ರ್‌ಗಳ ಸುರುಗೆ ಅಜ್ಜಪ್ಪ ಕನ್ನೆಕಂಭಕ್ಕೆ, ದೇವ್ರ ಕೋಣೆಗೆ ಕಟ್ಟ್‌ತಿದ್ದೊ. ಅಪ್ಪ ಮನೆನ ಮುಂದೆನ ಬಾಗಿಲಿಗೆ ಮತ್ತೆ ಅವು ಕುದ್ರುವ ಮಂಡಕ್ಕೆ ಕದ್ರ್ ಕಟ್ಟಿ, ಅಂಗ್ಡಿ ಬಾಗಿಲ್ ತೆಗ್ಯಕೆ ಹೋಗ್ತಿದ್ದೊ. ಅಜ್ಜಪ್ಪನೊಟ್ಟಿಗೆ ನಾವೆಲ್ಲಾ ಸೇರಿಕಂಡ್, ತುಳಸಿಗೆ, ಚಾಳೆಗೆ, ಬಾಮಿದಂಡೆಗೆ ಹಟ್ಟಿ ಕೊಟಗೆಗೆ, ಮನೆನ ಎಲ್ಲಾ ಕೋಣೆಗಳಿಗೆ, ಕಟ್ಟ್‌ತಿದ್ದೊ. ಎಲ್ಲಾ ಬುಟ್ಟ್ ಸಣ್ಣ ಮಕ್ಕಳ ತೊಟ್ಲಿಗೂ ಕಟ್ಟ್‌ತಿದ್ದೊ. ಕಟ್ಟಿಸಿದ ಕದ್ರ್‌ಗ ಎಲ್ಲಾ ಮುಗ್ಯಕಾಕನ ಉಳ್ದ ಸೊಪ್ಪು, ಬೊಳ್ಳಿಗಳ ತೊಡ್ಪೆಲಿಸಿ, ಅಟ್ಟಲಿ ದೇವ್ರ ಮುಡಿಪು ಇದ್ದಲ್ಲಿ ಇಸ್ತಿದ್ದೊ. ಮನೆ ತುಂಬಿಸಿದ ದಿನ ದೇವ್ರಿಗಿಸಿದ ಎಳ್ತ್ ಮುಳ್ಳು ಸೋಂತೆ ಮಿಡಿನ ಕೊಚ್ಚಿ, ಹಸಿಮೆಣ್ಸ್ ಕಾಯೆ ಹೂ ಮತ್ತೆ ದಾಸಿಮೆ ಹಾಕಿ ಕಡ್ದ್ ಅದರ ಕೊಚ್ಚಿ ಇಸಿದ ಮಿಡಿಗೆ ಹಾಕಿ ಪಚ್ಚ್‌ಂಡಿ ಮಾಡ್ತಿದ್ದೊ. ಮಧ್ಯಾಹ್ನದ ನಿತ್ಯದ ಅಡಿಗೆನೊಟ್ಟಿಗೆ, ಪಾಯಿಸ ಮಾಡಿ, ಬಾಳೆಲೆಲಿ ಎಲ್ಲೋವು ಉಂಬತಿದ್ದೊ. ಇರ್ಳ್ ಗಣಪತಿ ದೇವ್ರ ಪಟಕ್ಕೆ ಸಿಂಗಾರ ಮಾಡಿ ಭಜನೆ ಮಾಡ್ತಿದ್ದೊ.

ಚುಕ್ಕೆ –21

" ಗೇಣಿ ವಸೂಲಿ"

"ಬಳ್ಳಡ್ಕಕ್ಕೆ ಗೇಣಿ ವಸೂಲಿ ಮಾಡಿಕೆ ಹೋನೆ. ಬಂದರೆನೊ ಮಕ್ಕಳೆ?"– ಅಪ್ಪ ಕೇಳಿದೊ.

ನಾ, ನಾಣಿ, ಚಂದ್ರ ಕುಸಿಂದ ಅಪ್ಪನೊಟ್ಟಿಗೆ ಹೊರ್‍ಟೊ. ಅಣ್ಣ, ದೊಡ್ಡಕ್ಕ, ಸಣ್ಣಕ್ಕ ಸಾಲೆ ಬುಟ್ಟ ಮೇಲೆ ನಾ, ನಾಣಿ, ಚಂದ್ರ ಸಾಲೆಗೆ ಹೋಕೆ ಸುರು ಮಾಡ್ದೊ. ಹಾಂಗಾಗಿ ನಾವು ಒಟ್ಟಿಗೇ ಇರ್‍ತಿದ್ದೊ. ಗಂಡ್ ಮಕ್ಕ ಇಬ್ಬೊರು ಎಲ್ಲಿಗೆ ಹೊರ್‍ಟ್ರೂ ಅವರ ನೋಡಿಕಂಬಕೇಂತ ಅವರೊಟ್ಟಿಗೆ ನನ್ನ ಕಲ್‌ಸ್ತಿದ್ದೊ. ಹಾಂಗಾಗಿ ನಾವು ಒಟ್ಟಿಗೇ ಇರ್‍ತಿದ್ದೊ.

ಪೊಟ್ಟ ಕುಂಞಿಪ್ಪ, ಬಡುವ ಬ್ಯಾರಿ, ಅಣ್ಣಯ್ಯ, ದೇರಣ್ಣರ ಕರ್‍ಕಂಡ್, ನಮ್ಮೊಂದಿಗೆ ಅಪ್ಪನ ಸವಾರಿ, ಬಳ್ಳಡ್ಕಕ್ಕೆ ಹೊರ್‍ಟತ್. ಕೊಕ್ಕರೆ ಗರಿ ಹಾಂಗೆ ಬೆಳ್ಳಂಗೆ, ಬೆಳ್ಳಂಗೆ, ಇಸ್ತ್ರಿ ಹಾಕಿದ ಮುಂಡು, ಅಂಗಿ ಹಾಕಂಡ್, ಬಿಳಿ ಮುಂಡಾಸ್ ಕಟ್ಟಿ ಕೈಲಿ ಒಂದು ಬೆತ್ತದ ದೊಣ್ಣೆ ಹಿಡ್ಕಂಡ್, ಕಾಲ್‌ಲಿ ಮೆಟ್ಟಿದ ಸಮಗಾರ ಕಟ್ಟಿದ ಮೆಟ್ಟ್‌ನ ಮೆಟ್ಟಿಕಂಡ್ ಚುರ್‍ರ್, ಮುರ್‍ರ್ ಸದ್ದ್‌ಲಿ, ಅಪ್ಪನ ಸವಾರಿ ಹೊರ್‍ಟರೆ, ನಾವು ಓಡಿಕಂಡ್, ಓಡಿಕಂಡ್ ಅವರ ಹಿಂದೆ ಹೋಗ್ತಿದ್ದೊ. ದಾರಿಲಿ ಸಿಕ್ಕಿದೊವೆಲ್ಲಾ ಗೌರವಂದ ಅವುಕೆ 'ನಮಸ್ಕಾರ' – ಹೇಳಿ ಕೈ ಮುಗ್ಯೋತಿದ್ದೊ.

ಬಳ್ಳಡ್ಕಲಿ ಅಪ್ಪಂಗೆ ಹನ್ನೆರ್‍ಡ್ ಮುಡಿ ಮಜಲ್ ಗದ್ದೆಗ ಇದ್ದೊ. ಅದರೆಲ್ಲಾ ಅವು ಗೇಣಿಗ ಕೊಟ್ಟಿದ್ದೊ. ಸುರುಗೆ

ನಾವು ಸೋಂಪ ಸಣಪನಲ್ಲಿಗೆ ಹೋದೊ. ಅಲ್ಲಿ ಅವು ಕೊಟ್ಟ ಭತ್ತನ ಅಳ್ದ್, ಗೋಣಿ ಚೀಲಕ್ಕೆ ತುಂಬಿಸಿ, ಕಟ್ಟನ ಅವರ ಮನೆಲಿ ಇಸಿ, ದೇವಯ್ಯನಲ್ಲಿಗೆ ಹೋದೊ. ಹೋಕನ ಸುಳ್ಯಂದ ಕೆಲ್ಸದೊವು ಕಳ್ಸಿಗೆ, ಸೇರ್, ಗೋಣಿ ಚೀಲಗಳ ಹೊತ್ತ್‌ಕಂಡ್ ಹೋಗಿದ್ದೊ. ಅಲ್ಲಿ ಅವರ ಗೇಣಿ ಭತ್ತನ ಅಳ್ದ್, ಗೋಣಿಲಿ ತುಂಬಿಸಿ, ಅದರ ಬುಡುವ ಬ್ಯಾರಿನ ತಲೆಲಿ ಹೊರ್ಸಿ, ಸಣಪನಲ್ಲಿಗೆ ಕಳ್ಸಿದೊ. ರಾಂಪ ಮತ್ತೆ ಐತಪ್ಪಾಂತ ಹೇಳ್ವ ಇಬ್ಬೊರು ಅಣ್ಣ, ತಮ್ಮಂದರ್ ಅಪ್ಪನ ಗದ್ದೆನ ಗೇಣಿಗೆ ಮಾಡಿಕೊಂಡಿದ್ದೊ. ಅವರಲ್ಲಿಗೂ ಹೋಗಿ, ಅವರ ಭತ್ತನನೂ ಅಳ್ದ್ ಕುಂಞಿಪ್ಪನಲ್ಲಿ ಹೊರ್ಸಿ, ಸಣಪನಲ್ಲಿಗೆ ಕಳ್ಸಿದೊ. ಅಲ್ಲಿಂದ ನಮ್ಮ ಸವಾರಿ ಸೂಂತೋಡು ನಾರಾಯಣ ಬಂಟ್ರಲ್ಲಿಗೆ ಹೋತ್. ನಾರಾಯಣ ಬಂಟ್ರಿಗೆ ಸೊಂತ ಗದ್ದೆಗ ಇದ್ದರೂ ನಮ್ಮ ಎರ್ಡ್ ಮುಡಿ ಗದ್ದೆ ಅವ್ಕೆ ಲಗ್ತಿ ಇದ್ದ ಕಾರಣ, ಅವು ಅದರ ಗೇಣಿಗೆ ತಕಂಡಿದ್ದೊ. ಅಲ್ಲಿಂದಲೂ ಭತ್ತನ ಅಳ್ಸಿ ಸಣಪನಲ್ಲಿಗೆ ತಂದೊ. ಸಣಪನಲ್ಲಿ ಒಟ್ಟು ಸೇರ್ದ ಗೇಣಿ ಭತ್ತಲಿ ನಾಲ್ಕಾಳ್‌ಗ ಹೊರ್ವಸ್ಟ್ ಹೊರ್ಸಿ, ಸುಳ್ಯಕ್ಕೆ ಕಳ್ಸಿದೊ. ಉಳ್ದದರ ಇನ್ನೆರ್ಡ್ ದಿನಲಿ ಸುಳ್ಯಕ್ಕೆ ಸಾಗುಸುವೇಂತ, ಅಪ್ಪ ಸಣಪನಲ್ಲಿ ಹೇಳ್ದೊ. ಹೋದವೆಲ್ಲಾ ನಾವ್ಗೆ ಬೆಂಡನ ಒಟ್ಟೆ ಮಾಡಿ ಕುಡ್ಯಕೆ ಕೊಡ್ತಿದ್ದೊ. ಅದರ ಒಡ್ದ್‌ದ್, ಒಳಗೆನ ಬಾವೆನ ತಿಂಬಕೆ ಕೊಡ್ತಿದ್ದೊ. ನಾವೆಲ್ಲಾ ಸುಳ್ಯಕ್ಕೆ ಬಾಕಾಕನ ಗಂಟೆ ಮೂರಾಗಿತ್ತ್.

"ಅಂತೂ ಬಳ್ಳಡ್ಕದ ಗೇಣಿ ಭತ್ತ ಮನೆಗೆ ಬಾತ್. ಇನ್ನ್ ಕೂಟೇಲ್‌ನ ಕಡೆ ಬರುವ ವಾರ ಹೋಕು."– ಅಂತ ಅಪ್ಪ ಅವ್ವನಲ್ಲಿ ಹೇಳ್ದೊ. ಉಬರಡ್ಕ ಮಿತ್ತೂರು ಗ್ರಾಮದ ಕೂಟೇಲ್‌ಲಿ ಅಪ್ಪಂಗೆ ಹತ್ತೊಂಭತ್ತ್ ಎಕ್ರೆ ಜಾಗೆ ಇತ್ತ್. ಅಲ್ಲಿ 2000 ಅಡ್ಕೆ ದೈಗಳ ನೆಟ್ಟಿದ್ದೊ. ಅಲ್ಲಿ ಗದ್ದೆ ಬೇಸಾಯ ಮಾಡುವ ಎರ್ಡ್ ಒಕ್ಕಲ್‌ಗ ಇದ್ದೊ. ಉಳ್ದ ಕೆಲವು ಗದ್ದೆಗ ಹಡಿಲ್ ಬಿದಿದ್ದೊ. ಅದ್ಕೆಲ್ಲಾ ಚಾಳೆ ದೈಗಳ ಇಸೊಕೂಂತ ಅಪ್ಪ ಹೇಳ್ತಿದ್ದೊ.

"ಹೊಸ ಭತ್ತ ಮನೆಗೆ ಬಾತ್. ಇನ್ನ್ ಹೊಸ್ತೂಟ ಬೇಗ ಮಾಡೊಕು."� ಅಪ್ಪ ಅವ್ವನೊಟ್ಟಿಗೆ ಹೇಳ್ದೊ.

"ಅದಕ್ಕೇನ್? ಒಂದು ಒಳ್ಳೆ ದಿನ ನೋಡಿ ಹೊಸ್ತೂಟ ಮಾಡೊಮೊ. ನಾವೂರು ಜೋಯಿಸರಲ್ಲಿ ಕೇಳಿ ಒಳ್ಳೆ ದಿನ ಗೊತ್ತ್ ಮಾಡಿ." – ಅವ್ವ ಹೇಳ್ದೊ.

ನಾವೂರು ಜೋಯಿಸರ್ ದಿನಾ ಹಿಂಬೊತ್ತ್ ನಮ್ಮ ಅಂಗ್ಡಿಗೆ ಬಾತಿದ್ದೊ. ಅವುನೂ, ಅಪ್ಪನೂ ಅಧ್ಯಾತ್ಮಿಕ ವಿಷಯ ದಿನಾ ಚರ್ಚೆ ಮಾಡ್ತಿದ್ದೊ. ನಾವೆಲ್ಲಾ ಅವು ಮಾತಾಡ್‌ದರ ಅಂಗ್ಡಿನ ಕಪಾಟ್‌ನ ಹಿಂದೆ ನಿಂತ್‌ಕಂಡ್ ಕೇಳ್ತಿದ್ದೊ. ಅವು ನಾವುಗೆ ಕಂಡರೂ ಅವ್ಕೆ ನಾವು ಕಾಂಬತಿತ್ಲೆ.

ಅವ್ವ ನಾವ್ಗಾಗಿ ಉಣದೆ ಕಾದ್‌ಕೊಂಡಿದ್ದೊ. ಬೊಳ್ಪುಗೆ ಏಳ್ ಗಂಟೆಗೆ ಅರ್ಧಂಬರ್ಧ ತಿಂದ್‌ಕಂಡ್ ಹೋದ ನಾವ್ಗೆ ಹೊಟ್ಟೆ ಇಸ್ತಿತ್ತ್. ನಾವು ಕೈ ಕಾಲ್ ತೊಳ್ಕಂಡ್ ಬಂದ್ ಗಬಗಬನೆ ಉಂಡೊ.

* * * * *

ಚುಕ್ಕೆ – 22

" ಹೊಸ್ತೂಟ"

ಹಿಂಬೊತ್ತು ಸಾಲೆ ಬುಟ್ಟ್ ಬಂದ್ ಪುಸ್ತಕನ ಶೆಲ್ಫ್‌ಲಿ ಇಸಿ, ನೀರೆಡಿಗೆ ಹೋಗಿ ಕೈ ಕಾಲ್ ತೊಳ್ದ್, ಮೋರೆಗೆ ನೀರ್ ಹಾಕಂಡ್ ಅಡ್ಗೆ ಕೋಣೆಗೆ ಬಂದೆ. ತಲೆಲಿ ಅಂದ್ ಕ್ಲಾಸ್‌ಲಿ ಕುಂಞಪ್ಪ ಮಾಸ್ಟ್ರ ಮಾಡ್ದ ಚರಿತ್ರೆ ಪಾಠನೇ ಸುತ್ತ್‌ತಿತ್ತ್. ಆಗ ನಾ ಫಿಫ್ತ್ ಫಾರ್ಮ್‌ಲಿ ಇದ್ದೆ. ಅಕ್ಬರನ ಆಸ್ಥಾನಕ್ಕೆ ಅನಾರ್ಕಲಿನ ಕರ್ಸಿದ್, ಅದರೊಟ್ಟಿಗೆ ಸೇಲಿಮನ ಮರ್ತ್ ಬುಡೂಂತ ಅಕ್ಬರ ಕೇಳಿಕಂಡದ್, ಅದ್ಕೆ ಅದ್ ಒಪ್ಪದಿರಿಕನ ಅದರ ಜೀವಲಿರಿಕಾಕನನೇ ಸಮಾಧಿ ಮಾಡೀಂತ ಸೈನಿಕರಿಗೆ ಅಕ್ಬರ ಆಜ್ಞೆ ಮಾಡ್ದ್, ಒಂದೊಂದ್ ಸಾಲ್ ಇಟ್ಟಿಗೆನ ಸಮಾಧಿಗೆ ಕಟ್ಟಿಕಾಕನ, ಸೆಲೀಂನ ಮರಿ, ಸೆಲೀಮನ ಮರಿ– ಎಂತ ಅದರಲ್ಲಿ ಕೇಳಿಕಾಕನ ಅದ್ ಒಪ್ಪದಿದ್ದದ್, ಸಮಾಧಿನ ಕೊನೆ ಇಟ್ಟಿಗೆ ಇಸಿಕಾಕನ ಮುಟ್ಟ ಅದ್ ರಾಜಂಗೆ ಹೆದ್ರದೆ ಇದ್ದದ್– ಇದರೆಲ್ಲಾ ಕಣ್ಣಿಗೆ ಕಾಂಬ ಹಾಂಗೆ ಬಣ್ಣಿಸಿ ಕುಂಞಪ್ಪ ಮಾಸ್ಟ್ರ ಪಾಠ ಮಾಡಿದ್ದೊ. ಕ್ಲಾಸ್‌ಗೆ ಕ್ಲಾಸೇ ಮಂತ್ರಕ್ಕೆ ಸಿಕ್ಕಿದ ಹಾವುನಾಂಗೆ ನಾವು ತಲೆ ತೂಂಗ್‌ತಿದ್ದೊ. ಬೆಲ್ ಹೊಡ್ದದೇ ನಾವ್ಗೆ ಗೊತ್ತಾತ್ಲೆ. ಮನೆಗೆ ಬಾಕಾಕನ ತಲೆ ಇಡೀ ಅದೇ ಸುತ್ತ್‌ತಿತ್ತ್. ಒಳಗೆ ಬಂದ್‌ದ್ ಅವ್ವ ಮಾಡಿಸಿದ ಬನಲೆ ಹಿಟ್ಟ್‌ನ ತಿಂದ್‌ಕಂಡ್ ಕುದ್‌ಕಂಡಿದ್ದೆ. ಆಗ ಅವ್ವ ಬಂದ್, " ಇಂದಾ ಮೋಳು, ನೀ ಕೆರೆಮೂಲೆಗೆ ಹೋಗಿ ಹಂಞ

ಹರ್ವೆ ಸೊಪ್ಪು, ಮತ್ತೆ ಕೆಸನ ದಂಟ್ ತಕಂಡ್ ಬಾ ಬಲಾ. ನಾಳೆ ಹೊಸ್ತೂಟ ಮಾಡೊಮೊ. ಕೆರೆಮೂಲೆ ಉಗ್ಗವನನೂ ಬಾಕೆ ಹೇಳ್. ಹಾಂಗೇ ದೇಂಗೋಂಡಿಗೆ ಹೋಗಿ ನಿನ್ನ ಜೋಸ್ತಿ ಗೂಡೆಗಳ ಹೊಸ್ತೂಟಕ್ಕೆ ಬಾಕೆ ಹೇಳ್" ಎಂತ ಹೇಳ್ದೊ.

ಅವ್ವನ ಮಾತ್ ಕೇಳಿ ಒಮ್ಮಲೇ ನಂಗೆ ಎಚ್ಚರ ಆತ್. ನಂಗೆ ತುಂಬಾ ಕುಸಿನೂ ಆತ್. ಕೆರೆಮೂಲೆಲಿ ಪುಟ್ಟಯ್ಯ ಅಜ್ಜಪ್ಪ ಮತ್ತೆ ಕೇಪಕ್ಕ ಉಗ್ಗವ ಗದ್ದೆ ಬೇಸಾಯ ಮಾಡಿಕೊಂಡಿದ್ದೊ. ಅವರ ಗದ್ದೆನ ಆಚೆ ಪುಡೆಲಿ ಚೋಡಿ ಹರ್‍ಯತಿತ್ತ್. ಸಣ್ಣದಿರಿಕನ ನಾವು ಆ ಚೋಡ್‌ನ ನೀರಿಲಿ ಸೀರೆ ಒಗ್ಯಕೆ ಅರೆಗಾಲಲಿ ಅವ್ವನೊಟ್ಟಿಗೆ ಬಾತಿದ್ದೊ. ಆ ಚೋಡ್‌ನ ಎರ್ಡ್ ಪುಡೆಲಿ ಸುರುಳಿ ಹೂನ ದೈಗ ಇದ್ದೊ. ಅದರ್ಲಿ ದಿನಾ ಸುರುಳಿ ಹೂಗ ಅರ್ಳ್, ಘಮ ಘಮಾಂತ ಅಲ್ಲಿ ಹೋಕಾಕನ ಪೊರ್ಮಳ ಬಾತಿತ್ತ್.

ನಾ ಹಿಟ್ಟ್ ತಿಂದ್, ಕಾಫಿ ಕುಡ್ದ್, ದೊಡ್ಡ ತಮ್ಮ ನಾಣಿನ ಕರ್‍ಕಂಡ್ ಕೆರೆ ಮೂಲೆಗೆ ಹೋದೆ. ಅಲ್ಲಿ ಉಗ್ಗವನಲ್ಲಿ, " ಉಗ್ಗವಾ, ನಾಳೆ ನಮ್ಮಲ್ಲಿ ಹೊಸ್ತೂಟ. ನೀವೆಲ್ಲೋವೂ ಬರಕಡ. ಅವ್ವ ಹೇಳ್ಯೋಳೊ. ಹಾಂಗೆ ಹಂಞ ಹರಿವೆ ಮತ್ತೆ ಕೆಸ ಕೊಡಕಡ"– ಎಂತ ಹೇಳ್ದೆ.

ಕೆರೆಮೂಲೆ ಉಗ್ಗವ ದಿನಾ ಬೊಳ್ಪಿಗೆ ನಮ್ಮ ಅಂಗ್ಡಿಗೆ ಬಾಕನ ಎರ್ಡ್ ಕಟ್ಟ್ ಸುರುಳಿ ಹೂ[ಸುಗಂಧಿ ಹೂ] ತಾತಿದ್ದೊ. ಬಿಳಿ ಮತ್ತೆ ಅರ್ಸಿಣ ಬಣ್ಣದ ಸುರುಳಿ ಹೂ ನೋಡಿಕೆ ಭಾರೀ ಪೊರ್ಲು ಮತ್ತೆ ಪೊರ್ಮಳದ ಹೂಗ. ಅಪ್ಪಂಗೆ ಅದರ ಕೊಟ್ಟ್. ಒಂದಾಣೆ ಹೊಸೆಪು ತಕಂಬತಿದ್ದೊ.

ಉಗ್ಗವ ಇಜ್ಜೆಲಿಗೆ ಬಂದ್ ಬಸಳೆ ಚಪ್ಪರದ ಹಕ್ಕಲೆ ಇದ್ದ ಕೆಸನ ಬುಡಂದ ಐದಾರ್ ದಂಟ್‌ಗಳ ಕೊಯ್ದ್‌ದ್, ಅದರ ಎಲೆನ ದಂಟ್‌ಂದ ಬೇರೆ ಮಾಡಿ, ಎಲೆಲಿ ದಂಟ್‌ನ ಇಸಿ ಕಟ್ಟ ಕಟ್ಟಿ ನನ್ನೊಟ್ಟಿಗೆ ಕೊಟ್ಟ್,

"ಕಾಯಿ ಗಂಜಿಗೆ ಹಾಕಿಕೆ ಅರ್ಸಿಣದ ಎಲೆ ಬೇಡನೋ? ಇಂದಾ ಇದರೊಟ್ಟಿಗೆ ಒಂದು ಐದಾರ್ ಎಲೆನನೂ ಕಟ್ಟಿಕೊಟ್ಟನೆ ತಕಂಡೋಗು"– ಎಂತ ಹೇಳ್ದೊ.

"ಉಗ್ಗವಾ, ಹರಿವೆ ದಂಟುನೂ ಬೇಕಡ" – ನಾ ಹೇಳ್ದೆ. ಅವು ಮನೆ ಹಿಂದೆ ಸೊಕ್ಕಿಕಂಡ್ ಬೆಳ್ದ ದೊಡ್ಡ ದೊಡ್ಡ ದಂಟ್‌ನ ಹರ್ವೆ ದೈಯಿಂದ ನಾಕಾರ್ ಗೆಲ್ಲ್‌ಗಳ ಮುರ್ದ್ ಕೊಟ್ಟೊ. ನಂಗೂ, ತಮ್ಮಂಗೂ ಹೊರುವಸ್ಟ್ ಕಟ್ಟ್ ಆತ್. ನಾವು ಅದರ ತಕಂಡ್ ಮನೆಗೆ ಬಂದ್ ಅವ್ವಂಗೆ ಕೊಟ್ಟೊ.

"ಅವ್ವಾ, ನಾವು ದೇಂಗೋಡಿಗೆ ಹೋಗಿ ಬಂದವೆ"– ಎಂತ ಹೇಳಿ, ದೇಂಗೋಡಿಗೆ ಹೋದೊ. ಸುರುಲಿ ನನ್ನ ಕ್ಲಾಸ್‌ನ ಭಾಗೀರಥಿನ ಮನೆಗೆ ಹೋದೊ. ನಮ್ಮ ನೋಡಿ ಅದ್ಕೆ ಬಾಳ ಕುಸಿ ಆತ್. ಅದರ ಅಪ್ಪ ಸುಬ್ಬಪ್ಪ ಮಾಸ್ಟ್ರ ನಂಗೆ ಐದ್ನೇ ಕ್ಲಾಸ್‌ಲಿ ಕಲ್ಸಿದ ಗುರುಗ. ಸುಬ್ಬಪ್ಪ ಮಾಸ್ಟ್ರ ಅವ್ವ, ದಿನಾ ನಮ್ಮ ಅಂಗ್ಡಿಗೆ ಬಾತಿದ್ದೊ. ಬಂಗಾರ ಭಟ್ರ ಹೋಟ್ಲಿಗೆ, ದಿನಾ ಹಾಲ್ ಕೊಟ್ಟ್, ಅದರ ದುಡ್ಡುಲಿ ನಮ್ಮ ಅಂಗ್ಡಿಂದ ಹಿಂಡಿ ತಕಂಡೋಗ್ತಿದ್ದೊ. ನಂಗೆ ಅಜ್ಜಿಕಾಂತೇಳ್ರೆ ಬಾಳ ಪ್ರೀತಿ. ಕುರುಂಜಿ

ದೇರಕ್ಕ ಅಜ್ಜಿ, ದೇಂಗೋಡಿ ಅಂಗಾರಜ್ಜಿ, ಕೆರೆಮೂಲೆ ಕೇಪಕ್ಕಜ್ಜಿ ನಮ್ಮ ಅಂಗ್ಡಿನ ಖಾಯಂ ಗಿರಾಕಿಗ. ಅವೆಲ್ಲಾ ದೊಡ್ಡ ದೊಡ್ಡ ಚೆಂಬುಲಿ ಎಮ್ಮೆ ಹಾಲ್ ತಂದ್ ಬಂಗಾರ ಭಟ್ರ್, ವೆಂಕಟ್ರಾಯ, ದೊಡ್ಡ ಸರಳಾಯರ ಹೋಟ್ಲ್‌ಗಳಿಗೆ ಹಾಲ್ ಮಾರ್‍ತಿದ್ದೊ. ಸಿಕ್ಕಿದ ಹಣಲಿ ನಮ್ಮ ಅಂಗ್ಡಿಗೆ ಬಂದ್ ಹಿಂಡಿ ತಕಂಡ್ ಹೋಗ್ತಿದ್ದೊ. ನಮ್ಮಲ್ಲಿ ದೊಡ್ಡ ಹಿತ್ತಾಳೆ ಹರಿವಾಣ ಇತ್ತ್. ಅದರ ದಿನಾ ತಿಕ್ಕಿ, ಹೊಳೆವ ಹಾಂಗೆ ತೊಳ್ದ್ ಅದರ್‍ಲಿ ಒಂದೆರ್‍ಡ್ ಕವುಳೆ ಎಲೆ, ಎರ್‍ಡ್ ನೀರಡಿಕೆ ಚೊಲ್ಲಿ, ಗೀಸಿ, ಒಡ್ದ್ ಮಾಡ್ದ ಹೋಳುಗ, ಒಂದು ಎಸಳ್ ಹುರಿ ಮಾಡ್ದ ಹೊಸೆಪು, ಬಂದವ್ಕೆ ತಿಂಬಕೆ ಇಸ್ತಿದ್ದೊ. ಪೊರ್ಲುನ ಅರಳಿ ಎಲೆ ಆಕಾರದ ಹಿತ್ತಾಳೆನ ಸುಣ್ಣದ ಕರ್‍ಡಿಗೆಲಿ ಸುಣ್ಣ ಹಾಕಿ ಇಸ್ತಿದ್ದೊ. ಇದರೆಲ್ಲಾ ಅಂಗ್ಡಿಗೆ ಬಂದೊವು ತಿಂಬತಿದ್ದೊ. ಆಗನ ಕಾಲಲಿ ಎಲ್ಲೋವೂ ಎಲಾಡ್ಕೆ ತಿಂಬೊವೆ. ಅಪ್ಪನ ಮಂಡ್‌ದ ಪುಡೆಲಿ, ಎಲಾಡ್ಕೆ ಹೊಸೆಪು ತಿಂದ್ ಉಗ್ಯಕೆ ದೊಡ್ಡ ಹಿತ್ತಾಳೆನ ಮಡೆಕುತ್ತಿ ಇತ್ತ್. ಅಜ್ಜಿಕ ಎಲ್ಲಾ ನಮ್ಮ ಅಂಗ್ಡಿಗೆ ಬಾಕಾಕನ ಮನೆ ಒಳಗೆ ಬಂದ್ ಅವ್ವನ ಮಾತಾಡ್ಸಿ, ಹೋಗ್ತಿದ್ದೊ. ಅವ್ವ ಅವ್ಕೆ ಚಾ ಮಾಡಿ ಕೊಡ್ತಿದ್ದೊ. ಹೋಕನ ಅವೆಲ್ಲಾ ಎಲಾಡ್ಕೆ ತಿಂದೇ ಹೋತಿದ್ದೊ. ಕಾಫಿ, ಚಾಂದಳೂ ಅವ್ಕೆ ಎಲಾಡ್ಕೆ, ಹೊಸೆಪು ತಿಂಬೊದು ಬಾಳ ಪ್ರೀತಿ. ದೇಂಗೋಡಿ ಅಜ್ಜಿಗೆ, ಕುಂರ್ಜಿ ಅಜ್ಜಿಗೆ ಹಲ್ಲ್ ಇತ್ಲೆ. ಆಗ ನಾ ಅಲ್ಲಿದ್ದರೆ ಅವ್ಕೆ ಗುದ್ದಿಕೊಡ್ತಿದ್ದೆ. ಎಲಾಡ್ಕೆ ಗುದ್ದಿಕೆ ನಮ್ಮಲ್ಲಿ ಕರ್ಗಲ್ಲ್‌ನ ಗುಂಡ್ ಕಲ್ಲ್ ಇತ್ತ್. ಅದರ ಗುಂಡಿಲಿ ಅಜ್ಜಿಕ ನನ್ನ ಕೈಲಿ ಕೊಟ್ಟ ಅಡ್ಕೆ ಹೋಳುನ ಸುರುಲಿ ಗುದ್ದಿ ಹೊಡಿ ಮಾಡ್ತಿದ್ದೆ. ಆಗ ಅವು ಎರ್‍ಡ್ ವೀಳ್ಯದೆಲೆನ ಕೈಲಿ ಪೂಜಿ, ಅದರ ಕಡೆ, ಕೊಡಿನ ಚಿಂಗ್ಟಿ ತೆಗ್ದ್, ಅದರ ಬೆನ್ನ್‌ಲಿ ಸುಣ್ಣ ಉಜ್ಜಿ, ಮೊಡ್ಚಿ ನನ್ನ ಕೈಲಿ ಕೊಡ್ತಿದ್ದೊ. ನಾ ಅದರ ತಕಂಡ್ ಹೊಡಿ ಮಾಡ್ದ ಅಡ್ಕೆನೊಟ್ಟಿಗೆ ಗುದ್ದಿ, ಅದರ ತೆಗ್ದ್ ಉಂಡೆ ಮಾಡಿ, ಅವ್ಕೆ ತಿಂಬಕೆ ಕೊಡ್ತಿದ್ದೆ. ಅವು ಅದರ ಬಾಯಿಗೆ ಹಾಕಂಡ್ ಬೊಚ್ಚ್ ಬಾಯಿಲಿ ಅಗ್ಯೋದರ ನೋಡಿ ಕುಸಿ ಪಡ್ತಿದ್ದೆ.

ಸುಬ್ಬಪ್ಪ ಮಾಸ್ಟ್ರ ಅವ್ವ ಮತ್ತೆ ಹೆಣ್ಣ್ ನರಸಮ್ಮಕ್ಕ ನಮ್ಮ ಮಾತಾಡ್ಸಿ, ಚಾ ಮಾಡಿ ಕೊಟ್ಟೊ. ನಾವು ಅದರ ಕುಡ್ದ್ ಅವರೊಟ್ಟಿಗೆ,

" ನಾಳೆ ನಮ್ಮಲ್ಲಿ ಹೊಸ್ತೂಟ. ನೀವೆಲ್ಲಾ ಬರಕಡ"– ಎಂತ ಹೇಳ್ದೆ.

ಅಲ್ಲಿಂದ ಹೊರ್‍ಟ್, ದೇಂಗೋಡಿ ಸುಬ್ಬಣ್ಣ ಗೌಡರ ಮನೆಗೆ ಬಂದೊ. ಅವರ ತರವಾಡ್ ಮನೆ ದೇವರಗುಂಡ. ಅಲ್ಲಿ ನನ್ನ ಜೊತೆಲಿ ಕಲಿವ ಇನ್ನೊಂದು ಜೋಸ್ತಿ ಗೂಡೆ ಚಿನ್ನಮ್ಮ ಇತ್ತ್. ಅದರ ಉಗ್ಗವಂಗೂ ನಾಂತೇಳ್ರೆ ಭಾರಿ ಪ್ರೀತಿ. ಅವರ ಕೆಬಿಲಿ ದೊಡ್ಡ ಚಿನ್ನದ ಓಲೆ ಇತ್ತ್. ಆ ಓಲೆನ ಎಲ್ಲೋವು ಉತ್ರಾಜಿತ ಓಲೆ, ಗಿಳಿಯೋಲೆ – ಎಂತ ಕರ್‍ಯೋತಿದ್ದೊ. ನೊಡುಲಿ ಉಬ್ಬಿಕಂಡ್ ಆಚೆ ಈಚೆ ಎರ್‍ಡ್ ಗಿಣಿಗ ಇದ್ದೊ. ಅದರ ಕುಸುರಿ ಕೆಲ್ಸ ಭಾರೀ ಪೊರ್ಲು ಇತ್ತ್. ನಾ ಅವರಲ್ಲಿಗೆ ಹೋಕನ ಎಲ್ಲಾ ಅವರ ಕೆಬಿನ ಓಲೆನ ಹಿಡ್ಕಂಡ್, " ಎಷ್ಟ್ ಪೊರ್ಲು"– ಎಂತ

ಹೇಳ್ತಿದ್ದೆ. ಆಗ ಅವು ನೆಗಾಡಿಕಂಡ್,

"ನಿನ್ನ ಅಪ್ಪಂಗೂ ಹೇಳ್. ನಿಂಗೂ ಮಾಡ್ಸಿ ಕೊಡುವೊ"– ಎಂತ ಹೇಳ್ದೊ. ಆಗ ನಾ –

"ನಂಗ್ಯಾಕೆ? ಈಗಳೇ ಗಿಳಿಯೋಲೆ ಇಸಿಕೆ ನಾ ಏನ್ ಅಜ್ಜಿನೋ?"– ಎಂತ ಹೇಳ್ದೆ. ಅವು ನೇಗಾಡಿಕಂಡ್ ನನ್ನ ತಲೆನ ಮೂಜಿ,

"ನಿನ್ನ ಅಕ್ಕಂಗೆ ಎಷ್ಟೆಲ್ಲಾ ಚಿನ್ನ ಮಾಡ್ಸೋಳೋ?" ಎಂತ ಕೇಳ್ದೊ.

"ಅಕ್ಕಂಗೆ ಐದೂವರೆ ಪವನ್‌ನ ನೆಕ್ಲೆಸ್, ಮುತ್ತುನ ಓಲೆ, ನಕ್ಷತ್ರಾಕಾರದ ಲೋಲಾಕ್, ವಂಕಿ ಬಳೆ, ಅಗಲದ ಬ್ರಿಜ್‌ಕಟ್ಟ್ ಬಳೆ, ಉಂಗುರ– ಎಲ್ಲಾ ಮಾಡ್ಯೊಳೊ– ಎಂತ ಹೇಳ್ದೆ.

"ನಿಂಗೆನೂ ಮಾಡ್ಸಿತಿಲ್ಲೆನೋ? ನೀ ಬುಡ್ಬಡ. ಅಕ್ಕನಷ್ಟೇ ನಂಗುನೂ ಚಿನ್ನ ಮಾಡ್ಸೊಕೂಂತ ಅಪ್ಪನಲ್ಲಿ ಹೇಳ್" ಎಂತ ಹೇಳ್ದೊ. ಆಗ ನಾ,

"ನಂಗೆ ಈಗಳೇ ಚಿನ್ನ ಯಾಕೆ? ಅಕ್ಕಂಗಾದ್ರೆ ಬೇಗ ಮೊದ್ವೆ ಉಟ್ಟು. ನಂಗೆ ತುಂಬಾ ಓದೋಕು" ಎಂತ ಹೇಳ್ದೆ.

ನಾನೂ ಚಿನ್ನಮ್ಮನೂ ತುಂಬಾ ಹೊತ್ತು ಮಾತಾಡ್ದೊ. ಅವಳ ತಮ್ಮ ಕುಶಾಲಪ್ಪ, ನನ್ನ ತಮ್ಮ ನಾಣಿ ಒಂದೇ ಕ್ಲಾಸ್‌ಲಿ ಓದ್ತಿದ್ದೊ. ಅವಳ ಅವ್ವನ ತಮ್ಮಂಗೆ ನನ್ನ ಸೋದರ ಮಾಂವ ಎಲ್ಯಣ್ಣ ಗೌಡರ ಮಗಳ್ ತಿಮ್ಮಕ್ಕತ್ತಿಗೆನ ಕೊಟ್ಟದ್ ಆಗ ನಾವ್ಗೆ ನೆಂಟಸ್ತಿಕೆಂದಳೂ ಜೋಸ್ತಿಗಾರಿಕೆನೇ ಹೆಚ್ಚ್ ಆಗಿತ್ತ್.

ಅವರೆಲ್ಲರ ಹೊಸ್ತೂಟಕ್ಕೆ ಬಾಕೆ ಹೇಳಿ, ಅವು ಕೊಟ್ಟ ಚಾ ಕುಡ್ದ್ ಮನೆಗೆ ಬಂದೊ.

ಅವ್ವ ಪತ್ರೊಡೆ ಮಾಡಿಕೆ ಕೆಸನ ಕೊಯ್ದ್ಯೊತಿದ್ದೊ. ಅತ್ತಿಗೆ ಪತ್ರೊಡೆಗೆ ಅಕ್ಕಿ, ಮೆಣ್ಸ್, ಜೀರಿಗೆ, ಕೊತ್ತಂಬರಿ, ಕಾಯಿ ಹೂನ ಹಾಕಿ ಕಡ್ಕಲ್ಲ್‌ಲಿ ಕಡ್ಯತಿದ್ದೊ. ಅವ್ವ ಅದ್ಕೆ ಹುಳಿ, ಅರ್ಸಿಣ ಹೊಡಿ, ಉಪ್ಪು ಹಾಕಿದೊ. ಆದರೆಲ್ಲಾ ಕಡ್ದ್ ತೆಗ್ದ್, ಅವ್ವ ಕ್ಯೊದಿಸಿದ ಕೆಸನ ಎಲೆಗೆ ಬೆರ್ಕೆ ಮಾಡಿ, ನಾಕಾರ್ ಬಾಳೆ ಎಲೆನ ಬಾಡಿಸಿ, ಅದರ್ಲಿ ಮೊಡ್ಚಿ ದೊಡ್ಡ ಇಡ್ಲಿ ಪಾತ್ರೆಲಿ ಬೇಯಕೆ ಇಸಿದೊ.

ಮೊರ್ದಿನ ಅತ್ತಿಗೆ, ಅಕ್ಕ ಮನೆ ಎಲ್ಲಾ ಗುಡ್ಸಿ, ಒರ್ಸಿ, ಮನಾರ ಮಾಡ್ದೊ. ಮಧ್ಯಾಹ್ನದ ಮೇಲೆ ಇರ್‍ನ ಹೊಸಕ್ಕಿ ಊಟಕ್ಕೆ ಅಡ್ಗೆ ಸುರು ಮಾಡ್ದೊ. ಬೊಳ್ಪುಗೆನೇ ಚೆನ್ನು ನಾಕ್ ಸೇರ್ ಒಣ್ಗಿದ ಬೀಜನ ಒಡ್ದ್‌ದ್ ಬೆಂಡ್ ಮಾಡಿ ಇಸಿತ್ತ್. ಅವ್ವ ಅದರ ಬಿಸ್ನೀರಿಗೆ ಹಾಕಿಸಿದೊ. ಈಗ ಅದ್ ಪದಾನಿದ್ ಚೋಲಿ ತೆಗ್ಯಕೆ ಸುಲಭ ಆದೆ. ನನ್ನ ಮುಂದೆ ಬೀಜದ ಬೆಂಡ್‌ನ ಪಾತ್ರೆ ಇಸಿ,

" ಇಂದಾ ಇದರ ಚೋಲಿ ತೆಗ್ದ್‌ದ್ ಇಸ್. ತಿಂಬಡ ಬಲಾ. ಮಡೆ ಮಾಡಿಕೆ ಆಗದ್. ದೇವ್ರಿಗೆ ಇಸಿಕೆ ಇದ್ದದ್. ಮಕ್ಕಳಿಗೂ ಕೊಡ್ಬೇಡ." ಎಂತ ಹೇಳಿ ಚೋಲಿ ಹಾಕಿಕೆ ಒಂದು ಹಾಳೆನ ಕೊಟ್ಟ್, ಬೆಂಡ್ ಹಾಕಿಕೆ ಬೇರೆ ಒಂದು ಪಾತ್ರನ ನನ್ನ

ಹಕ್ಕಲೆ ಇಸಿ, ಅವ್ವ ಅಡಿಗೆ ಕೋಣೆಗೆ ಹೋದೊ. ನಾ ಉಗ್ಗವನ ಕರ್ದೆ. ನಾವಿಬ್ಬರೂ ಬೀಜದ ಬೆಂಡ್‌ನ ಚೋಲಿ ತೆಗ್ದ್, ಮನಾರ ಮಾಡ್ದೊ. ನಮ್ಮ ಕೆಲ್ಸ ಮುಗ್ಯಕಾಕನ ಬೀಜದ ಬೆಂಡ್‌ನ ಅಡ್ಗೆ ಕೋಣೆಗೆ ಹೋಗಿ ಅವ್ವಂಗೆ ಕೊಟ್ಟೆ. ಚೋಲಿನ ತಕಂಡೋಗಿ ಚಾಳೆ ಬುಡಕ್ಕೆ ಹಾಕಿ ಬಂದೆ.

ನಮ್ಮಲ್ಲಿ ಮನೆ ಒಳಗೆ ಒಂದು ಅಡ್ಗೆ ಕೋಣೆ. ಅಲ್ಲಿ ದೊಡ್ಡ ದೊಡ್ಡ ಎರ್ಡ್ ಒಲೆಗ ಇದ್ದೊ. ಹೊರಗೆ ಕೊಟಗೆಲಿ ಅಕ್ಕ ಮತ್ತೆ ಅತ್ತಿಗೆ ಕೇನೆ ಗೆಂಡೆ, ನಾಟೆ ಗೆಣ್ಸ್‌ನ ಚೋಲಿ ತೆಗ್ದ್, ತುಂಡು ಮಾಡ್ತಿದ್ದೊ. ಎರ್ಡ್ ಒಲೆನ ಹೊತ್ತಿಸಿದ್ದೊ. ಒಂದರ್ಲಿ ಕ್ಯೊಸಲಕ್ಕಿ ಅನ್ನ ಬೇಯತಿತ್ತ್. ಇನ್ನೊಂದರ್ಲಿ ಕಡ್ಲೆ ಬೇಯಕೆ ಹಾಕಿದ್ದೊ. ಅತ್ತಿಗೆ ನಿನ್ನೆ ಇರ್ಳ್ನೇ ಕಡ್ಲೆನ ನೆನ್ಯಕ್ಕೆ ಹಾಕಿದ್ದೊ. ಉಪ್ಪುಲಿ ಹಾಕಿದ ಕಣಿಲೆನ ತೆಗ್ದ್ ನೀರ್‌ಲಿ ಹಾಕಿದ್ದೊ. ನಿನ್ನೆ ಅದರ ನೀರ್ ತೆಗ್ದ್ ತೊಳ್ದ್ ಬೇರೆ ನೀರ್ ಹಾಕಿ ಇಸಿದ್ದೊ. ಅತ್ತಿಗೆ ಸೆಡೆಂದ ಕಡ್ಲೆನ ತೋಂಡಿ ತೆಗ್ದ್ ಬೆಂದ್‌ಟ್ಟೋಂತ ಒಂದೆರ್ಡ್ ಕಾಳ್‌ನ ಪಿರಿಂಚಿ ನೋಡಿ,

"ಕಡ್ಲೆ ಬೆಂದ್‌ಕಂಡ್ ಬಾತ್. ಇನ್ನ್ ಇದ್ಕೆ ಕಣಿಲೆ ಹಾಕಕ್" ಎಂತ ಹೇಳಿ, ನೀರಿಲಿ ಹಾಕಿದ ಕಣಿಲೆನ ತೆಗ್ದ್ ಎರ್ಡ್ ಮೂರು ಸಲ ತೊಳ್ದ್, ಹಿಂಡಿ ಒಲೆಲಿ ಬೇಯತಿದ್ದ ಕಡ್ಲೆಗೆ ಸೇರ್ಸಿ, ಸೌದೆಕೊಳ್ಳಿನ ಒಲೆಗೆ ಒಟ್ಟಿ, ಕಿಚ್ಚಿ ಸರಿ ಹೊತ್ತುವಾಂಗೆ ಮಾಡ್ದೊ. ಆಗ ನಾ ಸಣ್ಣಕ್ಕನಲ್ಲಿ ಕೇಳ್ದೆ,

"ಅಕ್ಕಾ ಈ ಸಲ ಹೊಸ್ತ್‌ಗೆ ಎಷ್ಟ್ ಬಗೆ ಗೈಪು?" ಅಕ್ಕ ಲೆಕ್ಕ ಹಾಕಿತ್. ಬಣ್ಣದ ಕಾಳ್, ಬೀಜದ ಬೆಂಡ್ ಒಂದು, ಪತ್ರೊಡೆ ಗಸಿ ಎರ್ಡ್, ನಾಟೆ ಗೆಣ್ಸ್ ಮೂರು, ನಾಕ್ನೇದ್ ಕೇನೆ, ಐದ್ನೆದು ಅಲ್ಸಂಡೆ ಉಪ್ಪುಕರಿ, ಕಡ್ಲೆ, ಕಣಿಲೆ, ಹೀರೆಕ್ಯಾ– ಒಟ್ಟು ಏಳ್ ಬಗೇಂತ ಬೆರ್ಳ್‌ಲಿ ಒಂದೊಂದಾಗಿ ಲೆಕ್ಕ ಮಾಡಿ ಹೇಳ್ತ್.

ಆಗ ಅತ್ತಿಗೆ, "ಸೋಂತೆ ಕ್ಯಾ ಪಚ್ಚಂಡಿ, ಹರ್ವೆ ಕೆಸ ಸೇರಿರೆ ಒಂಭತ್ತ್ ಆತ್."▯ ಎಂತ ಹೇಳ್ದೊ.

"ಪಚ್ಚಂಡಿ, ಹರ್ವೆ ಕೆಸ, ನನಿಯಕ್ಕಿ ಉಪ್ಪು– ಶುಂಠಿ ಬೇಕೇ ಬೇಕಲೆ. ಅದಿಲ್ಲರೆ ಹೊಸ್ತೂಟ ಅದೆನೋ?" ಅಕ್ಕ ಹೇಳ್ತ್.

"ಪ್ರತಿ ವೊರ್ಸ ಒಂಭತ್ತ್ ಬಗೆ ಮಾಡಿವೆ. ಕಳ್ದ ವೊರ್ಸ ದೇಂಗೋಡಿಲಿ ಹನ್ನೊಂದು ಬಗೆ ಮಾಡಿದ್ದೊ. ನಾವು ಈ ಸಲ ಹದ್ನೈದು ಬಗೆ ಮಾಡೊಮೊ" – ನಾ ಹೇಳಿದೆ.

"ಹೋಗು ಅವ್ವನ ಹಕ್ಕಲೆ ಹೇಳ್" ಅಕ್ಕ ಹೇಳ್ತ್. ನಾ ಅಡಿಗೆ ಕೋಣೆಗೆ ಹೋಗಿ,

"ಅವ್ವಾ ಈ ಸಲ ಹದಿನೈದ್ ಬಗೆ ಗೈಪು ಮಾಡೊಮೊ ಎಂತ ಅಕ್ಕ, ಅತ್ತಿಗೆ ಹೇಳಿವೆ. ಈಗ ಒಂಭತ್ತ್ ಬಗೆ ಆತ್ ಗಡ" ನಾ ಹೇಳ್ದೆ.

"ಮಾಡಿ, ಮಾಡಿ ನೀವ್ಗೆ ಏನೇನ್ ಮಾಡೊಕೋ, ಅದೆಲ್ಲಾ ಮಾಡಿ. ನಾ ಹರ್ವೆ

ಕೆಸ, ಪಚ್ಚಂಡಿ, ಪತ್ರೊಡೆ ಗಸಿ, ಕಾಳ್ ಬೀಜದ ಬೆಂಡ್ ಗೈಪು ಮಾಡ್ನೆ. ಉಳ್ದದರ ದಮೇಂತಿ ಸಿಸ್ಲ ಮಾಡಲಿ" ಅವ್ವ ಹೇಳ್ದೊ.

ಇದರ ಎಲ್ಲಾ ನಾ ಅತ್ತಿಗೆಗೆ, ಅಕ್ಕಂಗೆ ವರದಿ ಒಪ್ಪಿಸಿದೆ. ಅವ್ಕಿಬ್ಬೊರಿಗೆ ಭಾರೀ ಕುಸಿ ಆತ್. ಇನ್ ಏನೇನ್ ಮಾಡ್ದೂಂತ ಅವು ಲೆಕ್ಕ ಹಾಕಿದೊ. ಅಷ್ಟಾಕನ ಕನಕಮಜಲ್‌ಂದ ದೊಡ್ಡಕ್ಕ, ಭಾವ, ಮಕ್ಕಳ ಕರ್ಕಂಡ್ ಬಂದೊ. ನಾವ್ಗೆ ಭಾರೀ ಸಂತೋಷ ಆತ್. ಅಣ್ಣನ ನಾಕ್ನೇ ಕೂಸುಗೆ ಈ ಸಲ ಹೊಸ್ತೂಟ ಕೊಡಿಕೆ ಉಟ್ಟು. ಮೊನ್ನೆನೇ ಅಣ್ಣ ಕನಕಮಜಲಿಗೆ ಹೋಗಿ, ದೊಡ್ಡಕ್ಕನ ಹೊಸ್ತೂಟಕ್ಕೆ ಬಾಕೆ ಹೇಳಿ ಬಂದುಟ್ಟು. ಅಕ್ಕ ಬಾಕನ ತುಂಬಾ ನೆಟ್ಟಿಕ್ಕ್ಯಾ ತಂದಿತ್ತ್. ಅದರ್ಲಿ ಮುಳ್ಳು ಸೋಂತೆ, ಹಾಗಲಕಾಯಿ, ಪಟ್ಲ ಕ್ಯಾ, ಬೆಂಡೆ, ತೊಂಡೆ, ಕೆಂಬುಡೆ, ಕಡ್ಪತ್ತಿ ಅವರೆ ಬಾಳ್, ಹಸಿ ಮೆಣ್ಸ್, ಎಲ್ಲಾ ಇತ್ತ್. ಅವು ತುಂಬಾ ನೆಟ್ಟಿಕ್ಕ್ಯಾ ಬೆಳ್ಸುವೆ. ಬಂದವ್ಕೆಲ್ಲಾ ಕಾಫಿ ಆತ್.

ದೊಡ್ಡಕ್ಕ ಕೂಸುನ ನನ್ನ ಕೈಲಿ ಕೊಟ್ಟ್‌ದ್, ಕೆಲ್ಸಕ್ಕೆ ಸೇರಿಕೆ ಕೊಟಗೆಗೆ ಹೋತ್. ಅತ್ತಿಗೆ, ಅಕ್ಕಂದರ್ ಇಬ್ಬೊರು ಕೂಡಿಕಂಡ್, ಹೀರೆಕ್ಯಾ, ತೊಂಡೆ, ಕೆಂಬುಡೆನ ಕೊಯ್ದ್ ಬೇರೆ ಬೇರೆ ಪಲ್ಯ ಮಾಡ್ದೊ. ಪಟ್ಲಕ್ಯಾ, ಕಡ್ಪತ್ತಿ ಅವರೆನ ಸಣ್ಣ ಕೊಯ್ದ್ ಹಸಿಮೆಣ್ಸ್ ಹಾಕಿ, ಕಾಯೆ ಹೂ ಸೇರ್ಸಿ, ಉಪ್ಕರಿ ಮಾಡ್ದೊ. ಹಾಗಲಕ್ಯಾನ ಹೊಸ್ತೂಟಕ್ಕೆ ಮಾಡುವ ಕ್ರಮ ಇಲ್ಲೆ ಗಡ. ಎಳ್ತ್ ಮುಳ್ಳು ಸೋಂತೆನ ಅವ್ವ ತಕೊಂಡೋಗಿ ಕೊಚ್ಚಿ, ಉಪ್ಪು ಹಾಕಿ ಇಸಿದೊ. ಅದ್ಕೆ ದಾಸಿಮೆ, ಹಸಿಮೆಣ್ಸ್, ಕಾಯಿ ಹೂ ಕಡ್ದ್ ಹಾಕಿ ಪಚ್ಚಂಡಿ ಮಾಡ್ದೊ. ಅಂತೂ ಇಂತೂ ನಾವು ನೆನ್ಸಿದಾಂಗೆ ಈ ಸಲ ಉಪ್ಪು – ಶುಂಠಿ ಸೇರಿ ಹದಿನೈದು ಬಗೆನ ಗೈಪುಗ ಹೊಸ್ತೂಟಕ್ಕೆ ಆತ್.

ಹಿಂಬೊತ್ತು ಅವ್ವ ಅಪ್ಪನ ಒಳಗೆ ಕರ್ದ್ " ಹೊಸಕ್ಕಿ ಗಂಜಿ ಮಾಡಿಕೆ ಮಿಾಯಕೆ ಹೋನೆ, ಅಪ್ಪಣೆ ಕೊಡಿ" ಎಂತ ಹೇಳಿ ಅಪ್ಪನ ಕಾಲ್ ಹಿಡ್ದೊ. ಅಪ್ಪ "ದೇವರಪ್ಪಣೆ" ಎಂತ ಹೇಳಿ ಆಶೀರ್ವಾದ ಮಾಡ್ದೊ. ಅವ್ವ ಮಿಾಯಕೆ ನೀರೆಡಿ ಕೊಟಗೆಗೆ ಹೋದೊ. ಅತ್ತಿಗೆ ಕನ್ನೆ ಕಂಭದ ಹಕ್ಕಲೆ ಒಂದು ಮಣೆ ಮೇಲೆ ಕಾಲ್ದೀಪ ಹೋಸಿ ಇಸಿ, ಇನ್ನೊಂದು ಮಣೆ ಇಸಿ, ಅದರ ಮೇಲೆ ಕೊಡಿ ಬಾಳೆಲೆಲಿ ಬೆಳ್ತಕ್ಕಿ, ನುಣ್ಣಂಗೆ ಅರ್ದ ಗಂಧನ ಇಸಿದೊ. ಒಂದು ಮಡೆಲಿ ಬೈ ಹುಲ್ಲುನ ಸುಂಪೆ ಇಸಿ, ಹೊಸಕ್ಕಿ ಗಂಜಿ ಮಾಡುವ ದೊಡ್ಡ ಮೊಣ್ಣ್‌ನ ಮಡ್ಕೆನ ಇಸಿದೊ.

ಅವ್ವ ಮಿಾಂದ್ ಮಡಿ ಬಟ್ಟೆ [ಅವರ ಬಿಳಿ ಧಾರೆ ಸೀರೆ]ನ ಉಟ್ಟ್, ಬಾಮಿಂದ ಒಂದು ಕೊಡ್ಪಾಣ ನೀರ್ ಎಳ್ದ್ ತಂದ್ ಹೊಸ ಅಕ್ಕಿ ಗಂಜಿ ಮಾಡುವ ಮಡ್ಕೆಗೆ ಹೊಯ್ದೊ. ದೀಪಕ್ಕೆ ಅಕ್ಕಿ ಹಾಕಿ ಕೈ ಮುಗ್ದ್, ಗಂಜಿ ಮಡ್ಕೆಗೆ ಕೈ ಮುಗ್ದ್, ಮುಂಡಕ್ಕೆ ಗಂಧದ ಬೊಟ್ಟು ಇಸಿಕಂಡೊ. ಆ ಮೇಲೆ ಅವ್ವ ಮತ್ತೆ ಅತ್ತಿಗೆ ಸೇರಿ ಮೆಲ್ಲಂಗೆ ಹೊಸ ಅಕ್ಕಿ ಗಂಜಿ ಮಾಡುವ ಮಡ್ಕೆನ ಎತ್ತಿಕಂಡ್ ಹೋಗಿ ಒಲೆ ಮೇಲೆ ಇಸಿದೊ. ಕಿಚ್ಚಿಮೊಟ್ಟ್, ನೀರ್ ಕಾದ ಮೇಲೆ ಒಂಭತ್ತ್ ಪಾವು ಬೆಳ್ತಕ್ಕಿನ ತೊಳ್ದ್‌ದ್ ಹಾಕಿದೊ.

ಅಕ್ಕಿನ ಐದ್, ಏಳ್, ಒಂಭತ್ತ್‌ಂತ ಮುಗುಳಿ ಸಂಖ್ಯೆಲಿ ಹಾಕಕಡ. ಗಂಜಿ ಬೆಂದ ಮೇಲೆ ಒಂಭತ್ತ್ ಗಡಿ ಕಾಯಿ ಹೂನ ಕಡ್ಕಲ್‌ಲಿ ಕಡ್ದ್ ತೆಗ್ದ್ ಗಂಜಿಗೆ ಸೇರ್ಸಿದೊ. ಕಾಯಿ ಗಂಜಿ ಅಡಿ ಹಿಡಿಯದಾಂಗೆ ಉದ್ದ ಕೈನ ಸೆಡೆಲಿ ಮೊಗ್ಚಿಕಂಡೇ ಇರ್ತಿದ್ದೊ. ರುಚಿಗೆ ಬೇಕಷ್ಟ್ ಉಪ್ಪು ಹಾಕಿ ಕೊದಿಸಿದೊ. ಹೊಸಕ್ಕಿ ಊಟಕ್ಕೆ ಮಾಡುವ ಅಡ್ಗೆನ ರುಚಿ ನೋಡಿ, ಮಡೆ ಮಾಡಿಕೆ ಆಗದ್ ಗಡ. ಎಲ್ಲಾ ಸಾಮಾನ್‌ನ ಅಂದಾಜಿಗೇ ಹಾಕ್ತಿದ್ದೊ. ನಮ್ಮ ಅವ್ವನ ಅಡ್ಗೆ ಯಾಗೋಳು ರುಚಿ ಇದ್ದದೆ. ಕಣ್ಣಂದಾಜಿಲೆ ಅವು ಸಾಮಾನ್ ಹಾಕಿ ಲಾಯ್ಕ್‌ಲಿ ಅಡ್ಗೆ ಮಾಡ್ತಿದ್ದೊ.

ಕಾಯಿ ಗಂಜಿ ಕೊದ್ದ್‌ದ್ ಒರ್ಪಾಕಾಕನ ಅದ್ಕೆ ಎರ್ಡ್ ‌ ಮೂರ್ ಅರ್ಸಿಣ ಸೊಪ್ಪುನ ತೊಳ್ದ್‌ದ್ ಹಾಕಿದೊ. ಅವ್ವ ಮತ್ತೆ ಅತ್ತಿಗೆ ಇಬ್ಬೊರು ಕೂಡಿ ಒಲೆನ ಹಕ್ಕಲೆ ಇಸಿದ ಸುಂಪೆ ಮೇಲೆ ಇಳ್ಗಿ ಇಸಿದೊ. ಒಂದು ಚೆಂಡಿ ಅರ್ವೆಲಿ ಮಡ್ಕೆನ ಸುತ್ತೊಳು ಉಜ್ಜಿದೊ. ಒಂದು ಕಾಯಿ ಚಿಪ್ಪಿಲಿ ಸುಣ್ಣ ಮತ್ತೆ ಅರ್ದ ಗಂಧ ಸೇರ್ಸಿ, ಅದ್ಕೆ ಕೈನ ತೋರ್ಬೆರ್‌ಳ್‌ನ ಮುಳುಂಗಿಸಿ ಆ ಮಡ್ಕೆ ಸುತ್ತೊಳು ಸೂರ್ಯ, ಚಂದ್ರ, ನಕ್ಷತ್ರಗಳ ಚಿತ್ರನ ಬುಡ್ಸಿಕೆ ಅವ್ವ ನನ್ನೊಟ್ಟಿಗೆ ಹೇಳ್ದೊ. ಅವ್ವ ಹೇಳ್ದಾಂಗೆ ಪೊರ್ಲುನ ಚಿತ್ರ ಬುಡ್ಸಿದೆ. ಅದರಾಂಗೆ ಹರ್ವೆ ಕೆಸ ಮಾಡ್ದ ಮಡ್ಕೆಗೂ ಚಿತ್ರ ಬುಡ್ಸಿದೆ. ಕಾಯಿ ಗಂಜಿಗೆ ಹಾಕಿದಾಂಗೆ ಹರಿವೆ ಕೆಸನ ಗೈಪುಗೂ ಒಂದೆರ್ಡ್ ಅರ್ಸಿಣ ಎಲೆನ ಹಾಕಿದ್ದೊ. ಅದರ ಪೊರ್ಮಳಕ್ಕೆ ಮಾಡ್ದ ಅಡ್ಗೆ ರುಚಿ ಆಗ್ತಿತ್ತ್.

ಆಗಳೇ ಗಂಟೆ ಎಂಟಾತ್. ಅಪ್ಪ ಒಳಗೆ ಬಂದ್ ವಿಚಾರ್ಸಿದೊ. ಅವು ಆಗಾಗ ಬಂದ್ ಅಡ್ಗೆ ಎಷ್ಟಾಗುಟ್ಟೂಂತ ನೋಡಿಕಂಡ್ ಹೋಗ್ತಿದ್ದೊ. ಅವ್ಕೆ ಮಾಡ್ದ ಅಡ್ಗೆ ಯಾಗೋಳೂ ರುಚಿ ರುಚಿ ಆಗಿ ಇರೊಕು. ಅಡ್ಗೆ ಹಾಳಾಕೆ ಬೊತ್ತ್. ಅಡಿ ಹಿಡ್ಯಕೆ ಬೊತ್ತ್. ಅಪ್ಪ ಒಳಗೆ ಬಂದವೇ,

"ಅಡ್ಗೆ ಎಲ್ಲಾ ಆತೋ?" ಎಂತ ವಿಚಾರ್ಸಿದೊ. "ಎಲ್ಲಾ ಆತ್. ಇನ್ನ್ ನನಿಯಕ್ಕಿ ಮಾಡ್ದೊಂದೇ ಬಾಕಿ. ಹೊಸ ಅಕ್ಕಿ ನನಿಯಕ್ಕಿಗೆ ಹಾಕೊಕೋ? ಕಾಯಿ ಗಂಜಿಗೆ ಹಾಕಕೋ?– ಅವ್ವ ಅಪ್ಪನ ಕೇಳ್ದೊ.

" ಹಂಞ ಬೇರೆ ತೆಗ್ದ್ ಇಸಿ ಎರ್ಡಕ್ಕೂ ಏಳೇಳ್ ಹೊಸ ಅಕ್ಕಿ ಹಾಕಿಸ್. ಹೊಸ್ತೂಟ ಆಗದವ್ಕೆ ಹಳೆ ಅಕ್ಕಿನ ಕಾಯಿ ಗಂಜಿ ಮತ್ತೆ ನನಿಯಕ್ಕಿ ಇಕ್ಕ್"– ಅಪ್ಪ ಹೇಳ್ದೊ.

ನನಿಯಕ್ಕಿ ಮಾಡಿಕೆ ಬೆದ್ರ್‌ನ ಸೀಳ್‌ನ ಪಂಚ್ ಕುಕ್ಕೆಲಿ ಅಕ್ಕಿನ ಪದಾನಿಕೆ ಹಾಕಿಸಿದ್ದೊ. ಅದ್ ಈಗ ಪದಾನಿ ಮೆತ್ತಂಗೆ ಆಗಿತ್ತ್. ಅದ್ಕೆ ಹಾಕಿಕೆ ಬೇಕಾದ ಬೆಲ್ಲನ ನನ್ನ ಕೈಗೆ ಕೊಟ್ಟ್,

" ಬೆಲ್ಲದಚ್ಚಿನ ಬೀಸ್ಕತ್ತಿಲಿ ಕೆರ್ಸಿ, ಈ ತಟ್ಟೆಲಿ ಹಾಕಿಸ್" ಎಂತ ಅವ್ವ ಹೇಳ್ದೊ.

ನಾ ಬೀಸ್ಕತ್ತಿಲಿ ಬಿಳಿ ಅಚ್ಚ್ ಬೆಲ್ಲನ ಗೀಸಿ, ಗೀಸಿ ತಟ್ಟೆಗೆ ಹಾಕಿದೆ. ನನ್ನ ಕೆಲ್ಸ ಮುಗ್ಯಕಾಕನ ಅದರ ತಕಂಡೋಗಿ ಅವ್ವಂಗೆ ಕೊಟ್ಟೆ. ಅವು ಮುಂದೆನೇ ಹೆರ್ದ್

ಇಸಿದ ಕಾಯೆ ಹೂಗೆ ಈ ಗೀಸಿದ ಬೆಲ್ಲನ ಹಾಕಿ ಅದರ ಮೇಲೆ ಹಂಞ ತುಪ್ಪನ ಹೊಯ್ದ್‌ದ್ ಏಲಕ್ಕಿ ಹೊಡಿನ ಹಾಕಿ ಸೆಟ್ಟ್‌ಗಲಿ ಅಡಿ ಮೇಲೆ ಮೊಗ್ಚಿದೊ. ರುಚಿ ಹೆಚ್ಚಾಕೆ ಹಂಞ ಹೊರ್ದ ಎಳ್ಳ್, ಸುಟ್ಟ ಬೀಜದ ಬೆಂಡ್‌ನ ಸಣ್ಣ ಸಣ್ಣ ತುಂಡು ಮಾಡಿ ಸೇರ್ಸಿದೊ. ಅಕೆರಿಗೆ ನೆನ್ಸಿದ ಗಂಧ ಸಾಲೆ ಅಕ್ಕಿನನೂ ಸೇರ್ಸಿ ಲಾಯ್ಕ್‌ಲಿ ಕಲ್ಸಿದೊ. ಅಲ್ಲಿಗೆ ರುಚಿಯಾದ ಅವ್ವನ ನೆನಿಯಾಕ್ಕಿ ತಯಾರಾತ್. ಅದರ ಎರ್ಡ್ ಪಾಲ್ ಮಾಡಿ, ಒಂದು ಪಾಲಿಗೆ ಮನೆ ತುಂಬಿಸಿದ ಭತ್ತದ ಕದ್ರ್‌ಂದ ಏಳ್ ಭತ್ತದ ಕಾಳ್ ತೆಗ್ದ್‌ದ್, ಚೊಲ್ಲಿ ಅಕ್ಕಿ ಮಾಡಿ, ಅದ್ಕೆ ಸೇರ್ಸಿ ಕಲ್ಸಿ ಬೆಸಗೆನ ಮೇಲೆ ಇಸಿದೊ. ಅದ್ ಹೊಸ್ತೂಟ ಮಾಡೋವ್ಕೆ. ಅದರಾಂಗೆ ಕಾಯಿ ಗಂಜಿನನೂ ಒಂದು ಬೇರೆ ಮಡ್ಕೆಗೆ ತೋಂಡಿ, ಅದ್ಕೆ ಏಳ್ ಹೊಸ ಅಕ್ಕಿನ ಹಾಕಿಸಿದೊ. ಒಳ್ದ್‌ದ್ ಹೊಸ್ತೂಟ ಆಗದೊವ್ಕೆ.

ಅಷ್ಟರ್ಲಿ ನನ್ನ ಜೋಸ್ತಿ ಭಾಗೀರಥಿ, ಅದರ ಅಪ್ಪ ಸುಬ್ಬಪ್ಪ ಮಾಸ್ಟ್ರ್, ಚಿನ್ನಮ್ಮ, ಅದರ ಅಪ್ಪ ಸುಬ್ಬಣ್ಣ ಗೌಡ್ರ್ ಬಂದೊ. ಸೂಂತೋಂಡುಂದ ದೊಡ್ಡಪ, ಸಣಪ, ಅವರ ಮಕ್ಕ ಹಿಂಬೊತ್ತೇ ಬಂದಿದ್ದೊ. ಕೆರೆಮೂಲೆಂದ ಪುಟ್ಟಯ್ಯಜ್ಜ, ಮತ್ತೆ ಅವರ ಮಂಜ ಕೃಷ್ಣಪ್ಪ ಬಂದೊ. ಅಪ್ಪನ ಜೋಸ್ತಿ ಮ್ಯಾಲಪ್ಪ ಗೌಡ್ರೂ ಬಂದೊ. ಅಣ್ಣನ ಜೋಸ್ತಿ ಕುಂರ್ಜಿ ವಿಶ್ವನಾಥ ಗೌಡ್ರೂ ಬಂದೊ. ಒಂದು ವಾರದ ಹಿಂದೆ ಅವರ ಮಂಜಂಗೆ ಹೊಸ್ತೂಟ ಕೊಡಿಕೆ ಅಣ್ಣನ ಕರ್ದಿದ್ದೊ. ಹಾಂಗಾಗಿ ಅಣ್ಣನೂ ಅವರ ಈ ಸಲ ಬಾಕೆ ಮಾಡಿತ್. ಕೆಳಗೆನ ಪೇಟೆಲಿ ವಿಶ್ವನಾಥಣ್ಣನ ಹೊಸ ಅಂಗ್ಡಿ ಸುರಾಕನ, ಅಲ್ಲಿಗೆ ಹೋಗಿ ಇರ್ಕ್ ಇಡೀ ಅಣ್ಣ ಅವ್ಕೆ ಸಾಯ ಮಾಡಿಟ್ಟು. ಮಂಗ್ಳೂರ್‌ಗೆ ಅವರ ಕರ್ಕೊಂಡೋಗಿ, ನಮ್ಮ ಸಾವ್ಕಾರ್‌ಗ ಎಲ್ಲಾ ಅವ್ಕೆ ಗುರ್ತ ಮಾಡ್ಸಿ, ಸುರುನ ಮಾರಾಟಕ್ಕೆ ಸಾಮಾನ್‌ನ ತೆಗ್ಸಿ ಕೊಟ್ಟ್, ಸಾಯ ಮಾಡಿಟ್ಟು. ಹಾಂಗಾಗಿ ಅಣ್ಣಂಗೂ ಅವ್ಕೂ ಬಾಳ ಜೋಸ್ತಿ. ಅವಿಬ್ಬೊರು ಒಟ್ಟಿಗೆ ತೆಗ್ಸಿಕಂಡ ಫೋಟೋ ನಮ್ಮ ಮನೆಲಿ ಎಷ್ಟೋ ಸಮಯ ಮುಟ್ಟ ಗೋಡೆಲಿ ಕೋಸಿ ಹಾಕಿದ್ದೊ. ಅತ್ತಿಗೆನ ಮನೆಂದ ಅವರ ಸಣ್ಣ ಸೋದರ ಮಾಂವ ವೆಂಕಪ್ಪ ಮಾಸ್ಟ್ರ್, ಅತ್ತಿಗೆನ ಅವ್ವ ಮತ್ತೆ ತಮ್ಮ ಬಂದಿದ್ದೊ.

ಸಣ್ಣಕ್ಕ ಮತ್ತೆ ಅತ್ತಿಗೆ ಕೂಡಿ ಶೂರಯ್ಯನ ಮಿಾಸಿ, ಪೌಡರ್ ಹಾಕಿ, ಅರ್ಸಿಣ ಬಣ್ಣದ ರೇಶ್ಮೆ ಬಟ್ಟೆನ ಅಂಗಿ, ಚಡ್ಡಿ ಹಾಕಿ, ಅಕ್ಕ ಕೊಕ್ಕೆ ಸೂಜಿಲಿ ಹೊಲ್ದ ಗೊಂಡೆ ಕಟ್ಟಿದ ಟೊಪ್ಪಿನ ಅವನ ತಲೆಗೆ ಇಸಿ, ಕಟ್ಟಿ, ಸೊಂಟಕ್ಕೆ ಬೆಳ್ಳಿ, ನೇವಳ, ಕುತ್ತಿಗೆಗೆ ಅಣ್ಣನ ಚಿನ್ನದ ಸರ ಹಾಕಿ, ಮೋರೆಗೆ ಪೌಡರ್ ಹಾಕಿ, ಕಣ್ಣ್‌ಗೆ ಕಣ್ಣ್ ಕಪ್ಪು ಹಾಕಿ, ಸಿಂಗಾರ ಮಾಡ್ದೊ. ಕೂಸು ಅರ್ಸಿಣ ರೇಶ್ಮೆ ಬಟ್ಟೆಲಿ ಬಾಳ ಪೊರ್ಲು ಕಾಂಬತಿತ್ತ್. ಅಂವ ಬೆಳ್ಳಂಗೆ ಇದ್ದ್, ಅವನ ಕಣ್ಣ್‌ಗ ಬಾಳ ಪೊರ್ಲು ಇತ್ತ್. ಹಾಲ್‌ಲಿ ಕಪ್ಪು ದ್ರಾಕ್ಷೆ ಹಣ್ಣ್ ತೇಲಿದಾಂಗೇಂತ ಸಣ್ಣಕ್ಕ ಯಾಗೋಳು ಅವನ ಕಣ್ಣ್‌ಗಳ ನೋಡಿಕಾಕನ ವರ್ಣನೆ ಮಾಡ್ತಿತ್ತ್. ಅಕ್ಕ ಅವನ ಕಣ್ಣ್‌ಗೆ ಕಣ್ಣ್ ಕಪ್ಪು ಹಾಕಿ, ಮುಂಡಕ್ಕೆ, ಎರ್ಡ್ ಕೆನ್ನೆಗಳಿಗೆ, ಗದ್ದಕ್ಕೆ ಬೊಟ್ಟು ಇಸಿ, ಕಣ್ಣ್ ಕಪ್ಪು ಹರ್ಡದಾಂಗೆ ಅದರ ಮೇಲೆ ಹಂಞ

ಪೌಡರ್ ಹಾಕಿತ್. ಬಂಗಾರದ ಬಣ್ಣದ ಆ ಕೂಸುಗೆ ಈ ದೃಷ್ಟಿ ಬೊಟ್ಟು ಇಸಿಕಾಕನ ಬಾಳ ಪೊರ್ಲು ಕಾಂಬತಿತ್ತ್.

ಕನ್ನೆ ಕಂಭದ ಹಕ್ಕಲೆ ಮಣೆ ಮೇಲೆ ಕಾಲ್ದೀಪ ಇಸಿ, ಅದರ ಹೊತ್ತಿಸಿ, ಎರ್ಡ್ ಕೊಡಿ ಬಾಳೆಲೆನ ಮಣೆ ಮೇಲೆ ಇಸಿ, ಮಾಡ್ದ ಅಡ್ಗೆನೆಲ್ಲಾ ಕೊಲೆಗಳಿಗೆ ಇಕ್ಕಿ ದೀಪಕ್ಕೆ ಅಕ್ಕಿ ಹಾಕಿ ಕೈ ಮುಗ್ದ್ ಬಿನ್ನ ಹೇಳ್ದೊ. ಒಂದು ಬಾಳೆಲೆಲಿ ಹೊಸ್ತೂಟಕ್ಕೆ ಮಾಡ್ದರ ಎಲ್ಲಾ ಹಂಞ ಹಂಞ ಇಕ್ಕಿ ಅದರ ಮುದ್ದೆ ಮಾಡಿ ಅಗ್ನಿಗೆ [ಅಗ್ನಿಗೆಂದು ಒಲೆಗೆ] ಹಾಕಿದೊ.

ಅಪ್ಪ ಒಂದು ದೊಡ್ಡ ಕಂಚಿನ ವೊಂಬುಲಿ ನೀರ್ ತಕಂಡ್ ನಡುಕೋಣೆಗೆ ಬಂದ್ ಎಲ್ಲರೊಟ್ಟಿಗೆ,

"ಎಲ್ಲೋವು ಹೊಸ್ತೂಟಕ್ಕೆ ಎದ್ರಿನಿ" – ಎಂತ ಹೇಳ್ದೊ. ಎಲ್ಲೋವು ಇಜ್ಜೆಲಿಗೆ ಬಂದ್ ಕೈಕಾಲ್ ತೊಳ್ದ್, ನಡು ಕೋಣೆಲಿ ಸುತ್ತೊಳೂ ಹಾಸಿದ ಹೊಸ ಮೊಂದ್ರಿಗಳ ಮೇಲೆ ಕುದ್ದೊ. ನೊಡುಲಿ ಅಂಗ್ಡಿನ ಗೇಸ್ ಲೈಟ್ ಹೊತ್ತಿಸಿ ಇಸಿದೊ. ನಡುಕೋಣೆನ ಎದ್ರ್‌ಲಿ ಅಂಗ್ಡಿನ ಉದ್ದದ ಜಗಲಿ ಇತ್ತ್. ಅಲ್ಲಿನು ಉದ್ದಕ್ಕೆ ಮೊಂದ್ರಿ ಹಾಸಿದೊ. ಹಂಞ ಜನ ಅಲ್ಲಿ ಕುದ್ದೊ. ಮಕ್ಕ ಎಲ್ಲಾ ಅಡ್ಗೆ ಕೋಣೆನ ಪಕ್ಕಲಿದ್ದ ಉದ್ದದ ಜಗಲಿಲಿ ಕುದ್ದೊ. ಅಜ್ಜಪ್ಪ ಮತ್ತೆ ಅಣ್ಣ ಅಪ್ಪನ ಆಚೆ ಈಚೆ ಪುಡೆಲಿ ನಡು ಕೋಣೆಲಿ ಕುದ್ದೊ. ದಿನಾ ಉಂಬಕಾಕನ ಅಪ್ಪ, ಅಜ್ಜಪ್ಪನ ಅವರ ಹಕ್ಕಲೆ ಉಂಬಕೆ ಕುದ್ರಿಸಿಕೊಂಬೊತಿದ್ದೊ. ಅಪ್ಪಂಗೆ ಅಸ್ಟ್ ಪ್ರೀತಿ ಅಜ್ಜಪ್ಪನ ಮೇಲೆ.

ಎಲ್ಲರ ಎದ್ರ್ ದೊಡ್ಡ ದೊಡ್ಡ ಕೊಡಿ ಬಾಳೆ ಎಲೆ ಹಾಕಿ, ನೀರ್ ಬುಟ್ಟೊ. ಎಲ್ಲೋವೂ ನೀರ್‌ಲಿ ಬಾಳೆಲೆನ ಒರ್ಸಿಕೊಂಡೊ. ಸುರುಗೆ ಅವ್ವ ಬಾಳೆ ಎಲೆ ಕೊಡಿಲಿ ಉಪ್ಪು ಶುಂಠಿ [ಉಪ್ಪು ಮತ್ತೆ ಶುಂಠಿನ ಗುದ್ದಿ ಮಾಡ್ದ ಮಸಾಲೆ.] ಇಕ್ಕಿಕಂಡ್ ಹೋದೊ. ಆ ಮೇಲೆ ಅಕ್ಕಂದರ್, ಅತ್ತಿಗೆ ಮಾಡಿಸಿದ ಆರ್ಸಿದ ಗೈಪುಗಳ ಎಲೆ ಮೇಲೆ ಸುತ್ತೊಳೂ ಇಕ್ಕಿಕಂಡ್ ಹೊದೊ. ಅವ್ವ ಹೊಸ ಅಕ್ಕಿ ಹಾಕಿದ ಕಾಯಿ ಗಂಜಿನ, 'ಯಾರಿಗೆ ಹೊಸ್ತ್?" – ಎಂತ ಕೇಳಿ ಕೇಳಿ ಇಕ್ಕಿದೊ. ಹೊಸ್ತೂಟ ಅವರವರ ಮನೆಲಿ ಮಾಡದವ್ಕೆ ಹಳೆ ಅಕ್ಕಿ ಕಾಯಿ ಗಂಜಿನ ಅತ್ತಿಗೆ ಇಕ್ಕಿಕಂಡ್ ಹೋದೊ. ನಮ್ಮ ಮನೆಲಿ ಹೊಸ್ತೂಟ ಮಾಡದೆ, ಬೇರೆಯವರ ಮನೆಲಿ ಹೊಸ್ತೂಟ ಮಾಡಿಕೆ ಆಗದ್ ಗಡ. ಆಗನ ಕಾಲದ ಪದ್ಧತಿ ಅದ್, ಈಗನ ಮಕ್ಕಳಿಗೆ ಹೊಸ್ತೂಟ ಏನ್‌ಂತ ಯಾರಿಗೂ ಗೊತ್ತಿಲ್ಲೆ.

ಅಕೇರಿಗೆ ಅವ್ವ ನೆನೆಯಕ್ಕಿ ಹಾಕಿದ ಹರಿವಾಣನ ಕೈಲಿ ಹಿಡ್ಕಂಡ್ ಬಂದ್ ಸುರುಗೆ ಅಪ್ಪನ ಎಲೆಗೆ ಮೂರು ಸಲ ಕೈ ತುಂಬಾ ಇಕ್ಕಿದೊ. ಆ ಮೇಲೆ ಹೊಸ್ತೂಟ ಮಾಡೋವ್ಕೆ ಮಾತ್ರಾ ಈ ಹೊಸ ಅಕ್ಕಿ ಹಾಕಿದ ನನಿಯಕ್ಕಿ ಇಕ್ಕಿದೊ. ಉಳ್ದವ್ಕೆ ಹೊಸ ಅಕ್ಕಿ ಹಾಕದೆ ತೆಗ್ದ್ ಇಸಿದ ನನಿಯಕ್ಕಿನ ಅತ್ತಿಗೆ ಇಕ್ಕಿಕಂಡ್ ಹೋದೊ. ಅಪ್ಪ ಕೇಳ್ದೊ, " ಎಲ್ಲಾ ಆತೋ? ಇನ್ನೂ ಉಟ್ಟೋ" ಎಂತ.

"ಎಲ್ಲಾ ಆತ್. ಇನ್ನ್ ಹರ್ವೆ ಕೆಸ ಮಾತ್ರ ಇರ್‍ದ್. ಅದರ ಅಕೆರಿಗೆ ಇಕ್ಕುದು ಅಲ್ಲನೋ?" ಅವ್ವ ಹೇಳ್ದೊ.

"ಸರಿ ಹಾಂಗಾದರೆ. ಇನ್ ಕೂಸುನ ತಕಂಡ್ ಬನ್ನಿ. ನಮ್ಮ ಮನೆಲಿ ಈ ವೊರ್ಸ ಒಬ್ಬ ಹೊಸ ಮೊಯಿಂಸ ಬಂದುಟು. ಅವಂಗೆ ಮುಂದೆ ಹೊಸ್ತೂಟ ಕೊಟ್ಟ್‌ದ್ ಆ ಮೇಲೆ ನಾವೆಲ್ಲಾ ಹೊಸ್ತೂಟ ಉಮ್ಮನೊ" – ಎಂತ ಅಪ್ಪ ಹೇಳ್ದೊ.

ಅತ್ತಿಗೆ ಎರ್‍ಡ್ ಕೈನ ನೀಂಡಿ ಅದರ್ಲಿ ಕೂಸುನ ಅಂಗಾತ ಮೊಲ್ಗಿಸಿ, ಐದ್ ತಿಂಗಳ ಕೂಸು ಶೂರಯ್ಯನ ಅಪ್ಪನ ಮುಂದೆ ಹಿಡ್ದೊ. ಅಪ್ಪ ನೆನೆಯಕ್ಕಿಗೆ, ಕಾಯಿ ಗಂಜಿಗೆ ಬೆರ್‍ಳ್‌ನ ಕೊಡಿನ ಮುಟ್ಟಿಸಿ,

" ಕೂಸುಗೆ ಹೊಸ್ತೂಟ ಕೊಟ್ಟವೇಂತ ಹೇಳ್ವೆ" – ಎಂತ ಮೂರು ಸಲ ಹೇಳಿ ಅವನ ಬಾಯಿಗೆ ಮುಟ್ಟಿಸಿದೊ ಎಲ್ಲೋವೂ,

"ದೇವರ ಅಪ್ಪಣೆ" – ಎಂತ ಒಟ್ಟಿಗೇ ಹೇಳ್ದೊ. ನನಿಯಕ್ಕಿನ ಸಿಂಯಿಗೆ ಕೂಸು ಬಾಯಿ ಚಪ್ಪರಿಸಿತ್. ಅಜ್ಜಪ್ಪ, ಅಣ್ಣನೂ ಕೂಸುಗೆ ಹೊಸ್ತೂಟ ಕೊಟ್ಟೊ. ಆ ಮೇಲೆ ಹಿರಿಯೊವೆಲ್ಲಾ ಕೂಸುಗೆ ಹೊಸ್ತೂಟ ಕೊಡುವ ಶಾಸ್ತ್ರ ಮಾಡ್ದೊ. ಅತ್ತಿಗೆ ಕೂಸುನ ಒಳಗೆ ಕರ್‍ಕಂಡ್ ಹೋದೊ.

" ಹೊಸ್ತೂಟ ಮಾಡುವ ಮನೆವೆಲ್ಲಾ ಬನ್ನಿ" – ಎಂತ ಅಪ್ಪ ಹೇಳ್ದೊ. ಅವ್ವ ಹೋಗಿ ಬೊಗ್ಗಿ ಅಪ್ಪನ ಎದ್ರ್ ಎಡ ಅಂಗೈ ಮೇಲೆ ಬಲ ಅಂಗೈ ಇಸಿ, ಕೈ ನೀಂಡಿದೊ. ಅಪ್ಪ ಅವರ ಅಂಗೈಗೆ ಒಂದು ಪುಂಡಿ ನನಿಯಕ್ಕಿ ತೆಗ್ದ್ ಹಾಕಿದೊ. ಅವ್ವನ ಹಿಂದೆನೇ ಅತ್ತಿಗೆ, ದೊಡ್ಡಕ್ಕ, ಸಣ್ಣಕ್ಕ ಅಪ್ಪನ ಎದ್ರ್ ಹೋಗಿ ಕೈ ನೀಂಡಿದೊ. ಅವ್ಕೆಲ್ಲಾ ಅಪ್ಪ ಹೊಸ ಅಕ್ಕಿ ನನಿಯಕ್ಕಿ ಕೊಟ್ಟೊ. ಅಪ್ಪ ಎಲ್ಲರೊಟ್ಟಿಗೆ,

"ಇನ್ನ್ ನಾವು ಹೊಸ್ತೂಟ ಮಾಡೊಮೊ. ಆಗದೋ?" – ಎಂತ ಕೇಳ್ದೊ. ಆಗ ಎಲ್ಲೋವೂ ಒಟ್ಟಿಗೇ,

" ದೇವರಪ್ಪಣೆ" – ಎಂತ ಹೇಳ್ದೊ. ಅಪ್ಪ ಉಗ್ಗವಂಗೆ ಕೇಳುವ ಹಾಂಗೆ,

"ಅವ್ವಾ ಹೊಸ್ತೂಟ ಉಂಡವೇ" – ಎಂತ ಗಟ್ಟಿ ದನಿಲಿ ಹೇಳ್ದೊ. ಉಗ್ಗವ ಅಲ್ಲಿಂದಳೇ, " ದೇವರಪ್ಪಣೆ" – ಎಂತ ಹೇಳ್ದೊ. ಉಗ್ಗವಂಗೆ ನಡ್ಯಕೆ ಆಗ್‌ತಿತ್ಲೆ. ಬೊಗ್ಗಿಕಂಡೇ ನಡ್ಯತಿತ್ತ್. ಹಾಂಗಾಗಿ ಅದ್ ಒಂದೇ ಕಡೆ ಸುಮ್ಮನೇ ಕುದ್‌ಕಂಡ್ ಇರ್‍ತಿತ್ತ್. ಅವ್ವ, ಅಪ್ಪ ಕೊಟ್ಟ ನನಿಯಕ್ಕಿಂದ ಹಂಞ ತೆಗ್ದ್ ಉಗ್ಗವಂಗೆ ಕೊಟ್ಟೊ. ಎಲ್ಲೋವೂ ಒಟ್ಟಿಗೆ ನನಿಯಕ್ಕಿನ ಬಾಯಿಗೆ ಹಾಕಿದೊ.

ಆ ಮೇಲೆ ಊಟ ಭರಂದ ಸಾಗಿತ್. ಸುರುಗೆ ಎಲ್ಲೋವೂ ನನಿಯಕ್ಕಿ ತಿಂದೊ. ಒಂದೊಂದೇ ಗೈಪುನ ರುಚಿ ನೊಡಿಕಂಡ್, ಕಾಯಿ ಗಂಜಿ ತಿಂದ್‌ದ್ ಮುಗ್ಸಿದೊ. ಅವ್ವ ಎರಡ್ನೇ ಸಲ ಕಾಯಿ ಗಂಜಿ ತಂದ್‌ದ್ ತಿಂಬೋಸ್ಟ್ ಇಕ್ಕಿದೊ. ಆರ್‍ಸಿದ ಗೈಪುಗಳ ಅಕ್ಕಂದರ್, ಅತ್ತಿಗೆ ಎರಡ್ನೇ ಸರ್ತಿ ತಂದ್‌ದ್ ಕೇಳಿ, ಕೇಳಿ ಇಕ್ಕಿದೊ. ಬೇಕಾದೊವು ಅವ್ಕವ್ಕೆ ಬೇಕಾದ ಗೈಪುಗಳ ಇಕ್ಕಿಸಿಕೊಂಡೊ. ಅದರ್ಲಿ ಬೀಜದ

ಬೆಂಡ್ ಮತ್ತೆ ಬಣ್ಣದ ಅವರೆ ಕಾಳ್ ಗಸಿನ ಎಲ್ಲೋವು ಎರಡೆರ್ಡ್ ಸಲ ಇಕ್ಕಿಸಿಕೊಂಡೊ. ಕೆಲವ್ಕೆ ಪತ್ರೊಡ್ ಗೈಪು ಭಾರೀ ಕುಸಿ ಆತ್. ಅವ್ವ ಪತ್ರೊಡೆನ ತುಂಡು ತುಂಡು ಮಾಡಿ, ಹುಳಿಮೆಣ್ಸ್ ಕಾಯಿ ಅರೆಪ್ಪು ಹಾಕಿ, ಆರ್ಸಿ ಗಸಿ ಮಾಡಿ, ತುಪ್ಪದ ಒಗ್ಗರಣೆ ಹಾಕಿದ್ದೊ. ಅದ್ ಎಲ್ಲೋವ್ಕ ಇಷ್ಟ ಆತ್. ನನ್ನ ಅಣ್ಣಂಗೆ ಹೀರೆ ಕ್ಯಾ ಉಪ್ಕರಿಂತೇಳ್ರೆ ಪ್ರಾಣ. ಹಸಿ ಮೆಣ್ಸ್ ನೀರುಳ್ಳಿ ಕಾಯೆ ಹೂ ಹಾಕಿ, ಒಗ್ಗರಣೆ ಎಣ್ಣೆಲೇ ಬೆಂದ ಉಪ್ಕರಿನ ಅಣ್ಣ ಎಷ್ಟ್ ಬೇಕಾರೂ ತಿಂಬತಿತ್ತ್. ಅಂವ ಅದರ್ನೇ ಎರಡೆರ್ಡ್ ಸರ್ತಿ ಇಕ್ಕಿಸಿಕಂಡತ್.

ಅಕೆರಿಗೆ ಬಿಸಿ ಬಿಸಿ ಕ್ಯೊಸಲಕ್ಕಿ ಹುಗ್ಗಿ, ಹರ್ವೆ ಕೆಸ ಸಾರ್ನ ಇಕ್ಕಿಕಂಡ್ ಬಂದೊ. ಇದ್ ಹೊಸ್ತೂಟದ ಅಕೇರಿನ ಐಟಂ. ಹರ್ವೆ, ಕೆಸ ಇಕ್ಕಿದ ಮೇಲೆ ಊಟ ಮುಗ್ತ್‌ಂತ ಲೆಕ್ಕ. ಎಲ್ಲೋವೂ ಹೊಟ್ಟೆ ತುಂಬಾ ಉಂಡ್‌ದ್ ಎದ್ದ್ ಕೈ ತೊಳ್ದೊ. ದೊಡ್ಡ ಹರಿವಾಣಲಿ ವೀಳ್ಯದೆಲೆ, ಅಡ್ಕೆ, ಸುಣ್ಣ, ಹೊಸೆಪು ಹಾಕಿ ಇಸಿದ್ದೊ. ಎಲ್ಲೋವೂ ಎಲಾಡ್ಕೆ ತಿಂದೊ. ಹೊಸ್ತೂಟ ಮಾಡ್ದ ಮೇಲೆ ಎಲಾಡ್ಕೆ ತಿಂದೇ ತಿನಕಡ. ಬಂದೊವೆಲ್ಲಾ ಅವರವರ ಮನೆಗೆ ಇರ್ಳ್ಗೇ ಹೊದೊ. ಹಕ್ಕಲೆನ ನೆಂಟ್ರ್‌ಗ ನಮ್ಮಲ್ಲೇ ಮೊಲ್ಗಿ, ಬೊಳ್ಪುಗೆ ಕಾಫಿ ಕುಡ್ದ್ ಹೋದೊ. ಭಾವ ಹೋದೊ. ಅಕ್ಕ ಎಂಟ್ ದಿನ ಮಕ್ಕಳೊಟ್ಟಿಗೆ ನಿಂತತ್. ಆಗ ಅಕ್ಕಂಗೆ ಮೂರು ಜನ ಮಕ್ಕ ಇದ್ದೊ. ಒಂದ್ ಹೆಣ್ಣ್, ದೊಡ್ಡದ್ ಮಹಾದೇವಿ, ಆ ಮೇಲೆನ ಎರ್ಡ್ ಗಂಡ್ ಮಕ್ಕ, ಹರಿಶ್ಚಂದ್ರ ಮತ್ತೆ ವೆಂಕಟ್ರಮಣ, ಸಣ್ಣವನ ನಾವೆಲ್ಲಾ 'ಆನಂದ' – ಎಂತ ಕರ್‍ಯೊತಿದ್ದೊ. ನಂತ್ರದ ಅಕ್ಕನ ಮಕ್ಕ ಎಲ್ಲಾ ಶೂರಯ್ಯಂದ ಸಣ್ಣೋವು. ಎಂಟ್ ದಿನ ಕಳ್ಯಕನ ಭಾವ ಬಂದ್ ಅಕ್ಕನ, ಮಕ್ಕಳ ಕರ್ಕಂಡ್ ಹೋದೊ.

* * * * *

ಚುಕ್ಕೆ –23

"ದೀಪಾವಳಿ"

ದೀಪಾವಳಿ ಹಬ್ಬನ ನಾವು ಬಾಳ ಗೌಜಿಂದ ಮಾಡ್ತಿದ್ದೊ. ನಮ್ಮ ನೆರೆಕರೆ ಮೂರ್ನಾಕ್ ಮನೆಗ ಕೊಂಕ್ಣಿಗ. ಅದರ್ಲಿ ಗೌಡ ಸಾರಸ್ವತರೂ ಇದ್ದೊ. ಕಾಡ್ ಕೊಂಕ್ಣಿಗಳೂ ಇದ್ದೊ. ಕೊಂಕ್ಣಿಗಳ ಮಕ್ಕಳೂ ನಾವೂ ಒಟ್ಟಿಗೆ ಸಾಲೆಗೆ ಹೋಗ್ತಿದ್ದೊ. ಗಣಪತಿ ನಾಯಕ್‌ರ ಮಗಳ್ ರಮ, ಸುಂದರ ರಾಯರ ಮಗ್ಳ್, ಪ್ರೇಮಲತ, ಪದ್ಮಾವತಿ, ವೆಂಕಟ್ರಾಯರ ಮಕ್ಕ ಗುಲಾಬಿ, ಸುಗಂಧಿ – ಇವರೊಟ್ಟಿಗೆ ದಿನಾ ನಾವು ಎಲಿಮೆಂಟ್ರಿ ಸಾಲೆಗೆ ಮತ್ತೆ ಹೈಸ್ಕೂಲಿಗೆ ಹೋಗ್‌ತಿದ್ದೊ. ಅವರ ಮನೆಲೆಲ್ಲಾ ದೀಪಾವಳಿ, ಮಂಡೆಪೂಜೆ, ಮಿಾಯ್‌ವ ಹಬ್ಬ ಮಾಡ್ತಿದ್ದೊ. ಅವರ ಹಾಂಗೆ ನಾವೂ, ನಮ್ಮ ಪಕ್ಕದ ಮನೆ ಶೆಟ್ರ ಹೆಂಗ್‌ಸರೂ ಮಂಡೆಪೂಜೆ, ಮಿಾಯ್‌ವ ಹಬ್ಬ ಮಾಡ್ತಿದ್ದೊ. ಹಾಂಗಾಗಿ ತ್ರಯೋದಶಿ ದಿನ ಮಂಡೆ ಪೂಜೆಂದ ಹಿಡ್ದ್, ಪಾಡ್ಯದ ಗೋಪೂಜೆವರೆಗೆ ನಾಕ್ ದಿನ ನಾವು ದೀಪಾವಳಿ ಹಬ್ಬನ ಗಡ್ದ್‌ಲಿ ಮಾಡ್‌ತಿದ್ದೊ. ಆಗ ಸುಳ್ಯಲಿ ಪಟಾಕಿ ಸಿಕ್ಕ್‌ತಿತ್ಲೆ. ನಾವು ಮಂಗ್ಳೂರ್‌ಂದ ಕೂರ್ಗ್ ಬಸ್‌ಲಿ, ಕಂಡೆಕ್ಟರ್ ಹಕ್ಕಲೆ ದುಡ್ಡುಕೊಟ್ಟ್ ಬೆಳ್ಳುಳ್ಳಿ ಪಟಾಕಿ, ಮಾಲೆ ಪಟಾಕಿ, ಓಲೆ ಪಟಾಕಿ ತರ್ಸ್‌ತಿದ್ದೊ. ನನ್ನ ತಮ್ಮಂದರ್ ನಮ್ಮ ಅಂಗ್ಡಿಂದ ಬೆಂಕಿ ಪೆಟ್ಟಿಗೆ ಕದ್ದ್ ತಂದ್, ಅದರ ಕಡ್ಡಿನ ಕೊಡಿಲಿದ್ದ ಮೊದ್ದ್‌ನ ಗೀಸಿ, ಒಂದ್ ಕಾಗ್ದಕ್ಕೆ ಹಾಕಿ ಅದರ ಮೊಡ್ಚಿ, ಗುಂಡ್ ಕಲ್ಲ್‌ಲಿ

ಅದರ ಗುದ್ದ್‌ತಿದ್ದೊ. ಆಗ ಅದರ್‌ಂದ ಪಟಾಕಿ ಸದ್ದ್ ಹೊರ್ಡ್‌ತಿತ್ತ್. ಆಗ ಅದ್ ಅಪ್ಪಂಗೆ ಗೊತ್ತಾಗಿ ಅವು ಬೆತ್ತ ತೆಗ್ದ್ ಅವರ ಓಡ್ಸ್‌ತಿದ್ದೊ. ನಾವು ಮಂಗ್ಳೂರ್‌ಂದ ಸೇವಂತಿಗೆ ಹೂ, ಮಲ್ಲಿಗೆ ಹೂನನೂ ದೀಪಾವಳಿ ಸಮಯಲಿ ತರ್ಸ್‌ತಿದ್ದೊ. ಆಗ ಎಂಟಾಣೆ ಕೊಟ್ಟರೆ ನೂರು ಸೇವಂತಿಗೆ ಹೂ ಸಿಕ್ಕ್‌ತಿತ್ತ್. ನನ್ನ ಜೋಸ್ತಿ ಗೂಡೆಗ ರಮಾ, ಪದ್ಮ ಮಿಾಯುವ ಹಬ್ಬದ ದಿನ ಮಿಾಂದ್ ಹೊಸ ಬಟ್ಟೆ ಹಾಕ್ತಿದ್ದೊ. ನಾವೂ ಹಟ ಮಾಡಿ ಅವ್ವನೊಟ್ಟಿಗೆ ಹೇಳಿ ಹೊಸ ಬಟ್ಟೆ ಹೊಲ್ಸ್‌ತಿದ್ದೊ. ಹೇಂಗೂ ನಾವ್ಗೆ ಧನಲಕ್ಷ್ಮಿ ಪೂಜೆ ದಿನ ಹೊಸ ಬಟ್ಟೆ ಕೊಡ್ತಿದ್ದೊ. ಅದರನೇ ನರಕ ಚತುರ್ದಶಿ ದಿನ ಹಾಕ್ತಿದ್ದೊ.

ತ್ರಯೋದಶಿ ದಿನ್ ಹಿಂಬೊತ್ತ್ ನಾವು ನೀರಡಿಗೆ ಕೊಟಗೆನ ತೊಳ್ದ್, ಬಾಗಿಲಿಗೆ ಮಾಯ್ನ ಸೊಪ್ಪು ತೋರಣ ಕಟ್ಟಿ, ಗೊಂಡೆ ಹೂಂದ ಶೃಂಗಾರ ಮಾಡ್ತಿದ್ದೊ. ಬಾಗಿಲಿಗೆ ದೀಪಗಳ ಚಿತ್ರ ಬುಡ್ಸಿ, ದೀಪಾವಳಿ ಶುಭಾಶಯಗಳು' ಎಂತ ಬಣ್ಣದ ಸುಣ್ಣದ ಕಡ್ಡಿಗಳ್‌ಂದ ಬರ್ಯೊತಿದ್ದೊ. ಮಿಾಯುವ ಮಂಡೆ, ಕೊಡಪಾನ, ಚೊಂಬುಗಳ ಪಳಪಳ ಹೊಳಿವಾಂಗೆ ತೊಳ್ದ್, ಚೆಂಡುಹೂನ ಮಾಲೆ ಮಾಡಿ ಅದರ ಮಂಡೆ, ಕೊಡಪಾನ, ಚೆಂಬುಗಳಿಗೆ ಕಟ್ಟ್‌ತಿದ್ದೊ. ಬಾಮಿಂದ ಮೂರ್ ಸರ್ತಿ ನೀರ್ ಎಳ್ದ್ ತಂದ್ ಮಂಡೆಗೆ ಹಾಕಿಕನ ಗಣ ಗಣ ಗಂಟೆ ಬೊಡ್ದ್ ಗದ್ದಳ ಮಾಡ್ತಿದ್ದೊ. ಕಂಚಿನ ಬಟ್ಲ್‌ಗೆ ಕೋಲ್‌ಂದ ಜೋರಾಗಿ ಬೊಡ್ಯತಿದ್ದೊ. ನೀರೆಡಿ ಚಿಂಟೆಲಿ ಮಂಡೆನ ಸುತ್ತೊಳು ಕೌಂತೆಕಾಯಿ ಹೋಳ್‌ಲಿ ನೆಣೆ ಹಾಕಿ, ಎಂಣೆ ಹಾಕಿ, ದೀಪ ಹೋಸಿ, ಮಂಡೆಗೆ ಆರತಿ ಮಾಡಿ ಪೂಜೆ ಮಾಡ್ತಿದ್ದೊ. ಮಂಡೆ ಪೂಜೆನ ದಿನ ಬೊಳ್ಪುಗೆ ಬಾಳೆಮಕ್ಕಿಗೆ ಹೋಗಿ, ಅಲ್ಲಿದ್ದ ಮಾಪುಳ್ಳಿಗ ಬೆಳ್ಸಿದ ಚೆಂಡ್ ಹೂನ ದುಡ್ಡು ಕೊಟ್ಟ್ ತಾತಿದ್ದೆ.

ನರಕ ಚತುದರ್ಶಿ ದಿನ ಬೆಳ್ಬಾರ್‌ಗೆ ನಾಕ್ ಗಂಟೆಗೇ ಎದ್ದ್ ನೀರ್ ಕಾಸಿಕೆ ನೀರಡಿ ಒಲೆಗೆ ದೊಡ್ಡ ದೊಡ್ಡ ಕುಂಟೆಗಳ ಒಟ್ಟಿ ಅವ್ವ ಕಿಚ್ಚ್ ಮಾಡ್ತಿದ್ದೊ. ನಾವು ಮಕ್ಕ ಮೈ ಕೈಗೆಲ್ಲಾ ಎಣ್ಣೆ ಪೂಜಿಕಂಡ್ ಕುದ್ರ್‌ತಿದ್ದೊ. ಆಗ ನಾವು ಎಲ್ಲೋವು ಪಟಾಕಿ ಸುಟ್ಟು ಗಮ್ಮತ್ತ್ ಮಾಡ್ತಿದ್ದೊ. ಮಂಡೆ ಪೂಜೆ ದಿನ ಒಬ್ಬರ ಮನೆಲಿ ಗಂಟೆ ಸದ್ದ್ ಕೇಳ್ರೆ ಸಾಕ್ ಸಾಲಾಗಿ ಎಲ್ಲರ ಮನೆಂದಳು ನೀರ್ ಹಾಕಿಕನ ಹೊಡ್ಯವ ಗಂಟೆ ಸದ್ದ್‌ಗ ,ಜೋರಾಗಿ ಕೇಳ್ತಿತ್ತ್ . ಎಲ್ಲೋವೂ ಶಕ್ತಿ ಮಿಾರಿ ಗಂಟೆ ಹೊಡ್ಯೊತಿದ್ದೊ. ಮಾರ್ಣೆ ದಿನನೂ ಅಷ್ಟೆ. ಒಂದು ಮನೆಲಿ ಪಟಾಕಿ ಸದ್ದ್ ಕೇಳ್ರೆ ಸಾಕ್ ಎಲ್ಲಾ ಮನೆ ಮಕ್ಕಳೂ, ನಾ ಮೇಲೆ, ನಾ ಮೇಲೆಂತ ಸ್ಪರ್ದೆಲಿ ಪಟಾಕಿ ಹೊಡ್ಯೊತಿದ್ದೊ. ಬಿಸಿ ಬಿಸಿ ನೀರ್‌ಲಿ ಮಿಂದ್ ಹೊಸ ಬಟ್ಟೆ ಹಾಕಿ, ದೇವ್ರಿಗೆ ಕೈ ಮುಗ್ದ್ ತಿಂಬಕೆ ಕುದ್ರ್‌ತಿದ್ದೊ. ಆ ದಿನ ಎಲ್ಲರ ಮನೆಲೂ ಕೊಟ್ಟಿಗೆ, ಹಲ್ಸಿನ ಸೊಪ್ಪುಲಿ ಕಟ್ಟಿದ ಕೊಟ್ಟಿಗೆಲಿ ಹಿಟ್ಟ್ ಹೊಯ್ದ್ ಸೆಕೆಲಿ, ಇಡ್ಲಿ ಪಾತ್ರೆಲಿ ಬೇಸ್ತಿದ್ದೊ. ಅದಕ್ಕೆ ನಮ್ಮ ಮನೆಲಿ ವರ್ಸೊಣೀಳು ಬಣ್ಣದ ಕಾಳ್, ಬಟಾಟೆ, ಬೀಜದ ಬೆಂಡ್‌ನ ಹಾಕಿ ಮಾಡ್ದ

ಸಾರ್, ತುಂಬಾ ಕಾಯಿ ಹಾಕಿ ಕಾರ ಕಮ್ಮಿ ಹಾಕಿ ಹಿಟ್ಟ್ ತಿಂಬಕೆ ಮಾಡ್ತಿದ್ದೊ. ನೆರೆ ಮನೆಲಿದ್ದ ಕೊಂಕ್ಣಿ ಹೆಂಗ್ಸರ್‌ಂದ ನಾನೂ ಹಲ್ಸಿನ ಎಲೆಲಿ ಕೊಟ್ಟಿಗೆ ಕಟ್ಟುದರ ಕಲ್ತೆ. ನಾನೂ, ಸಣ್ಣಕ್ಕನೂ ಒಂದು ದಿನಕ್ಕೆ ಮುಂದೆನೇ ಮೂವತ್ತ್, ನಲ್ವತ್ತ್ ಕೊಟ್ಟಿಗೆ ಕಟ್ಟಿ ಇಸ್ತಿದ್ದೊ. ಅದ್ ಸಾಕಾತ್ಲರೆ, ಅವ್ವ ಬಾಳೆಲೆ ಬಾಡಿಸಿ, ಅದರ್ಲಿ ಮೂಡೆ ಕಟ್ಟಿ ಬೇಸ್ತಿದ್ದೊ. ಆದರೆ ನಾವ್ಗೆಲ್ಲಾ ಹಲ್ಸಿನ ಎಲೆನ ಕೊಟ್ಟಿಗೆನೇ ಇಷ್ಟ. ನರಕ ಚತುರ್ದಶಿ ದಿನ ಮಧ್ಯಾಹ್ನ ನಮ್ಮಲ್ಲಿ ಪಾಯಸ ಮಾಡ್ತಿದ್ದೊ. ಮಾರ್ಣೆ ದಿನ ಧನಲಕ್ಷ್ಮಿ ಪೂಜೆ ಇರ್ತಿದ್ದ ಕಾರಣ ನಾವು ಮಾಸದ ಗೈಪು ಮಾಡ್ತಿತ್ಲೆ. ಬಲಿಪಾಡ್ಯ ದಿನ ಬೊಳ್ಪುಗೆ ನಮ್ಮಲ್ಲಿ ಧನಲಕ್ಷ್ಮೀ ಪೂಜೆ ಮಾಡ್ತಿದ್ದೊ. ಹಿಂಬೊತ್ತ್ ಗೋ ಪೂಜೆ ಮಾಡ್ತಿದ್ದೊ. ಆಗ ನಮ್ಮಲ್ಲಿ ಹಟ್ಟಿ ತುಂಬಾ ದನಗ ಇದ್ದ ಕಾರಣ ಗೋ ಪೂಜೆ ಗೌಜಿಲಿ ನಡ್ಯತಿತ್ತ್. ನಮ್ಮ ಮನೆ ಪಕ್ಕಲಿ ಇದ್ದ ಕ್ಲಬ್ ಕಟ್ಟೋಣದ ಹಿಂದೆ ತುಂಬಾ ಕೌಂತೆ ಕ್ಯಾ ಬೊಳ್ಳಿಗ ಹಬ್ಬಿಕಂಡ್ ಇರ್ತಿತ್ತ್. ಕೌಂತೆಕಾಯಿ ನೋಡಿಕೆ ಸೋಂತೆಕಾಯಿನಾಂಗೆ ಇದ್ದ್ ನಿಂಬೆ ಹಣ್ಣ್‌ನಷ್ಟ್ ದೊಡ್ಡದ್ ಇರ್ತಿತ್ತ್. ಆ ಕಾಯಿಗಳ ಹತ್ತಿಪ್ಪತ್ತ್ ಕೊಯ್ದ್ ತಂದ್ ಎರ್ಡ್ ಭಾಗ ಮಾಡಿ, ಅದರ ಒಳಗೆನ ಬೆಂಡ್‌ನ ತೆಗ್ಯಕಾಕನ ಅದ್ ಚಿಬುಳೆನ ಹಾಂಗೆ ಕಾಂಬತಿತ್ತ್. ಅದರ್ಲಿ ಹಂಞ ಎಂಣೆ ಹಾಕಿ ನೆಣೆ ಹೊತ್ತಿಸಿ, ಇಸ್ತಿದ್ದೊ. ಆ ದೀಪಗಳ ತೊಡ್ಪೆ ಸುತ್ತೊಳೂ ಇಸಿ, ಹಟ್ಟಿಲಿನೂ ಕೌಂತೆಕಾಯಿ ದೀಪಗಳ ಹೊತ್ತಿಸಿ ಇಸ್‌ತಿದ್ದೊ. ಆಗ ಹೈಸ್ಕೂಲಿಗೆ ಹೋಗುವ ದಾರಿಲಿ, ನಾವು ಸಣ್ಣದಿರಿಕನ ತುಂಬಾ ಬಂಡೆಕಲ್ಲ್‌ಗ ಇದ್ದ್, ಅದರ ಮೇಲೆ ಎಲ್ಲಾ ಒಂದು ತರದ ಹೂಗ ಇರ್ತಿದ್ದೊ. ನಾವು ಅದರ 'ಪಾರೆಹೂ'ಂತ ಕರ್ಯೊತಿದ್ದೊ. ಅದರ ತಂದ್‌ಮಾಲೆ ಕಟ್ಟಿ ದನಂಗಳ ಕುತ್ತಿಗೆಗೆಹಾಕ್ತಿದ್ದೊ. ಅದರೊಟ್ಟಿಗೆ ಗೊಂಡೆ ಹೂ (ಚೆಂಡ್ ಹೂ)ನ ಮಾಲೆನವೂ ಹಾಕ್ತಿದ್ದೊ. ದನಂಗಳ ಮಿಂಆಸಿ ಗಂಧ, ಕುಂಕುಮದ ಬೊಟ್ಟ್ ಇಸಿ, ತೊಡ್ಪೆಲಿ ಬಾಳೆಲೆ ಮೇಲೆ ಅಕ್ಕಿ, ಹುಳಿದೋಸೆ, ಕುರ್ಡ್ ಬೊಳ್ಳಿ, ಪಾರೆ ಹೂ, ಕೇಪ್ಳ ಹೂ, ಅವ್ಲಕ್ಕಿ, ಬೆಲ್ಲ, ಕಾಯಿ, ಬಾಳೆಹಣ್ಣ್ –ಎಲ್ಲಾ ಇಸಿ, ಅದರ ತಕಂಡ್ ಹಟ್ಟಿಗೆ ಹೋಗಿ ದನಂಗಳಿಗೆ ಬೊಳ್ಪು ತೋರ್ಸಿ, [ತೊಡ್ಪೆಲಿ ಇಸಿದ ಕವುಂತೆಕ್ಯಾ ದೀಪಗಳ ಹೋಸಿ ಇಸ್ತಿದ್ದೊ] ಆರತಿ ಮಾಡಿ, ಅದರ ದನಂಗಳಿಗೆ ತಿನ್ಸ್‌ತಿದ್ದೊ. ದನಂಗೆಲ್ಲಾ ತಿಂಬ ರಭಸಕ್ಕೆ ಒಂದಕ್ಕೊಂದ್ ಕುಟ್ಟಿಕಂಡ್, ಉರ್ಡಿಕಂಡ್ ತಿಂಬಕನ ನಾವೂ ಒಮ್ಮೊಮ್ಮೆ ಕೆಳಗೆ ಬೀಳ್ತಿದ್ದೊ. ಒಂದರ ಕುತ್ತಿಗೆಲಿ ಇದ್ದ ಹೂನ ಮಾಲೆನ ಇನ್ನೊಂದ್ ಎಳ್ದ್ ತಿಂಬತ್ತಿತ್ತ್. ನಾವು ದನಂಗಳ ಬೆನ್ನ್ ತಟ್ಟಿಕಂಡ್, ಸಮಾಧಾನ ಮಾಡ್ಸಿ, ಅವ್ಕೆ ತಿನ್ಸ್‌ತಿದ್ದೊ. ಆರತಿ ಮಾಡಿಕನ 'ಭಾಗ್ಯದ ಲಕ್ಷ್ಮೀ ಬಾರಮ್ಮ' ಪದ ಹಾಡ್ತಿದ್ದೊ. ಹಟ್ಟಿಂದ ಮನೆಗೆ ಬಂದ್ ಅತ್ತಿಗೆ ಮಾಡಿಸಿದ ಪಂಚಕಜ್ಜಾಯನ ಎಲ್ಲೋವೂ ತಿಂಬತಿದ್ದೊ.

ದೀಪಾವಳಿನ ನಾಕ್ ದಿನನೂ ನಾವು ಮಕ್ಕ ಅನ್ನ ಉಂಬತಿತ್ಲೆ. ಕೊಟ್ಟಿಗೆ, ದೋಸೆ, ಬಾಳೆ ಹಣ್ಣ್, ಅಪ್ಪದ ಹಿಟ್ಟ್, ಅವ್ಲಕ್ಕಿ, ಪ್ಯಾಸಾಂತ ನಮ್ಮ ಹೊಟ್ಟೆ ತುಂಬುತಿತ್ತ್.

ಆಗ ಅಪ್ಪ ಹೇಳ್ತಿದ್ದೊ,

'ಪರ್ಬ ಗದ್ದಳ – ಬಜಿಲ್‌ಮುಕ್ಕಂಡೆ' ಎಂತ. ಅಂದರೆ ದೀಪಾವಳಿಗೆ ತಂದ ಅವ್ಲಕ್ಕಿ ಸಾಕಾತ್ಲೇಂತ. ದೀಪಾವಳಿಲಿ ಅವ್ಲಕ್ಕಿಗೆ ಮುಖ್ಯಸ್ಥಾನ ಕೊಟ್ಟವೆ. ನಮ್ಮ ಜಾತಿಲಿ ದೀಪಾವಳಿಗೆ ಮುಂದೆ ತೀರಿ ಹೋದವ್ಕೆ ಹಬ್ಬಲಿ ಅವ್ಲಕ್ಕಿ ಹಾಕುವ ಕ್ರಮ ಉಟ್ಟು. ಗಂಡ್‌ಗ ಸತ್ತರೆ ಅವ್ಕೆ ಪಾಡ್ಯದ ದಿನ ಬೆಳ್ಗಾರ್‌ಲಿ, ಹೆಣ್ಣ್‌ಗ ಸತ್ತರೆ ಅವ್ಕೆ ಅಮಾಸೆ ದಿನಲಿ ಬೆಳ್ಗಾರ್‌ಲಿ ಅವ್ಕೆ ಅಗಳ್ ಹಾಕಿವೆ. ಕನ್ನೆ ಕಂಭದ ಹಕ್ಕಲೆ ಅಗ್ಳ್ ಹಾಕಿ, ಅವ್ಲಕ್ಕಿ, ಬೆಲ್ಲ, ಕಾಯಿ, ಬಾಳೆಹಣ್ಣ್ ಇಕ್ಕಿದ್, ಊದುಬತ್ತಿ ಹೋಸಿ ಇಸುವೆ. ಹಕ್ಕಲೆ ಕಾಲ್ದೀಪ ಹೋಸಿ ಇಸುವೆ. ನೆಂಟ್ರ್‌ಗ ಊರ್‌ನವು ಆ ದಿನ ಬಂದ್ ಅವುಲು ಹಾಕಿವೆ. ಅವ್ಕೆಲ್ಲಾ ಮಧ್ಯಾಹ್ನ ಊಟ ಕೊಟ್ಟ್ ಕಳ್ಸುವೆ. ಕೊಲೆಗಳಿಗೆ ಹಬ್ಬದ ದೋಸೆ, ಕೋಳಿ ಗೈಪುನ ಕನು, ಕರ್ಯಟ, ಪಲ್ಲೆಕ್ಯಾ ಇಕ್ಕುವೆ. ಹೊಸ್ತೂಟ ಆದ ಮೇಲೆ ತೀರಿ ಹೋದರೆ ಅವ್ಕೆ ಬರುವ ವೊರ್ಸದ ದೀಪಾವಳಿಗೆ ಅವ್ಲು ಹಾಕಿವೆ.

* * * * *

ಚುಕ್ಕೆ –24

"ಧನಲಕ್ಷ್ಮಿ ಪೂಜೆ"

" ಈ ಸಲ ಐನೂರು ಲಾಡ್ ಸಾಕಾಕಿಲ್ಲೆ. ಹೆಚ್ಚ್ ಮಾಡ್ಲೊಕು"– ಅವ್ವ ಅಪ್ಪನೊಟ್ಟಿಗೆ ಹೇಳ್ದೊ.

"ಅದ್ಕೇನ್ ಸಾವಿರ ಲಾಡ್ ಮಾಡ್ಲೊಮೊ. ಈ ಸಲ ನನ್ನ ಖಾಯಂ ಗಿರಾಕಿಗಳಿಗೆ ಹತ್ತತ್ತ್ ಲಾಡ್ ಕಳ್ಲೋಕು." ಅಪ್ಪ ಹೇಳ್ದೊ. "ನಿನ್ನೆ ಲಾಡ್ ಬಟ್ರ್ ಸಿಕ್ಕಿದೊ ಗುರುವಾರ ಬಾಕೆ ಹೇಳ್ಯಲೆ" ಎಂತ ಅಪ್ಪಹೇಳ್ದೊ.

ಇವಿಬ್ಬೊರು ಮಾತಾಡ್ದಾರ ಕೇಳಿ ನಂಗೆ ಗೊತ್ತಾತ್ ಅಂಗ್ಡಿ ಪೂಜೆನ ಈ ಸರ್ತಿ ಗಡ್ದ್‌ಲಿ ಮಾಡಿವೇಂತ. ವರ್ಷಕ್ಕೊಮ್ಮೆ ದೀಪಾವಳಿಲಿ " ಧನಲಕ್ಷ್ಮಿಪೂಜೆ'ನ ನಮ್ಮಲ್ಲಿ ಮಾಡ್ತಿದ್ದೊ. ನಾವದರ ಅಂಗ್ಡಿಪೂಜೇಂತ ಹೇಳ್ದಿದ್ದೊ. ವ್ಯಾಪಾರದ ಸಾಲ ವಸೂಲಿ ಈ ಸಮಯಲಿ ಆಗ್ತಿತ್ತ್. ಕೆಲವು ಜನ ವೊರ್ಸ ಇಡೀ ಸಾಮಾನ್‌ಗಳ ಸಾಲ ತಕಂಡ್ ಹೋಗ್ತಿದ್ದೊ. ಅವೆಲ್ಲಾ ದೀಪಾವಳಿ ಸಮಯಲಿ ಸಾಲ ಹಿಂತಿರ್ಗಿಸ್‌ತಿದ್ದೊ. ಅಪ್ಪನೂ ಮಂಗ್ಳೂರ್‌ನ ಅವರ ಸಾಹುಕಾರರ ಸಾಲನ ಈ ಸಮಯಲೇ ತೀರ್ಸ್‌ತಿದ್ದೊ. ಧನಲಕ್ಷ್ಮಿ ಪೂಜೆನ ಪ್ರಸಾದ ಮತ್ತೆ ಉಡ್ಗೊರೆ ಅಪ್ಪಂಗೆ ಅವರ ಸಾಹುಕಾರರ್‌ಂದ ಸಿಕ್ತಿತ್ತ್.

ಎಲ್ಲಾ ಕಡೆ ದೀಪಾವಳಿ ಅಮಾಸೆ ದಿನ ಇರ್ಪ್ ಧನಲಕ್ಷ್ಮಿ ಪೂಜೆ ಇದ್ದರೂ, ನಮ್ಮಲ್ಲಿ ಬಲಿ ಪಾಡ್ಯ ದಿನ ಬೊಳ್ಪುಗೆ ಧನಲಕ್ಷ್ಮಿ ಪೂಜೆ ಮಾಡ್ತಿದ್ದೊ. ಕಾಯಿತರ್ೋಡಿ

ದೇವಸ್ಥಾನದ ಪೂಜೆ ಬಟ್ರ್ ಶಂಕರನಾರಾಯಣ ಮೂಡೆತ್ತಾಯರ್ ನಮ್ಮಲ್ಲಿ ಪೂಜೆ ಮಾಡ್ತಿದ್ದೊ. ಇದೆಲ್ಲಾ ನಂಗೆ ನೆಂಪಾಕನ, ಸಣ್ಣಕ್ಕನೊಟ್ಟಿಗೆ ಇದರೆಲ್ಲಾ ಹೇಳಿಕೊಂತ ಅದರ ಹುಡ್ಕಿಕಂಡ್ ಹೋದೆ. ಅದ್ ಬಾಮಿ ಕಟ್ಟೆ ಹಕ್ಕಲೆ ಅದರ ಜೋಸ್ತಿ ಗೂಡೆ ಭಾಗೀರಥಿನ ಒಟ್ಟಿಗೆ ಮಾತಾಡಿಕಂಡ್ ಇತ್ತ್. ಅವಿಬ್ರೊರು ಏನ್ ಮಾತಾಡ್ತ್ವೆನೊ ದೇವ್ರಿಗೇ ಗೊತ್ತು. ಯಾಗ ನೋಡ್ರೂ ಗುಸು ಗುಸು, ಪಿಸಿ ಪಿಸಿ ಮಾತ್. ನಾ ಹಕ್ಕಲೆ ಹೋಕನ ಬೊಯ್ದ್ ಕಳ್ಸ್ತಿದ್ದೊ. ಅವರ ಗುಟ್ಟು ಏನಿರ್ದು? ಭಾಗೀರಥಿನ ಮೊದ್ವೆ ನಿಶ್ಚಯ ಆಗುಟ್ಟು. ಅಕ್ಕನ ಅದ್ ಮೊದ್ವೆಗೆ ಬಂದೇ ಬರಕೊಂತ ಒತ್ತಾಯ ಮಡಿಕಂಡ್ ಉಟ್ಟು. ಅದರ ಮನೆಗೂ ನಮ್ಮ ಮನೆಗೂ ನೊಡುಲಿ ಶೆಟ್ರ್ ಹಿತ್ಲ್ ಬಂದದೆ. ಅದ್ ದಿನಾ ನಮ್ಮಲ್ಲಿಗೆ ಬಂದದೆ ಕತ್ತಲಾಕನ ಮುಟ್ಟ ಅವಿಬ್ರೊರು ಬಾಮಿಕಟ್ಟೆ ಹಕ್ಕಲೆ ಮಾತಾಡಿಕಂಡೇ ಇದ್ದವೆ. ಕತ್ತಲಾಕಾಕನ ಅದರ ಮನೆಂದ ಅದರ ಅವ್ವ 'ಭಾಗೀರಥೀ'ಂತ ಗಟ್ಟಿಲಿ ಎರ್ಡ್‌ಸರ್ತಿ ಕರ್ದವೆ. ಆಗ ಅದ್ ಅಂಬೆರ್ಪುಂದ ಓಡ್ದೆ.

ನಾ ಅಕ್ಕನ ಹುಡ್ಕಿಕಂಡ್ ಬಾಮಿ ಕಟ್ಟೆ ಹಕ್ಕಲೆ ಹೋದೆ.

" ಅಕ್ಕಾ, ಅಕ್ಕಾ, ಈ ಸಲ ಅಂಗ್ಡಿ ಪೂಜೆಗೆ ಸಾವ್ರ ಲಾಡ್ ಮಾಡ್ಸುವೆ ಗಡ. ಗುರುವಾರ ಲಾಡ್ ಮಾಡಿಕೆ ಬಟ್ರ್ ಬಂದವೆ ಗಡ" ಎಂತಹೇಳ್ದೆ.

ಅಕ್ಕ ನನ್ನ ನೋಡ್ದವುಳೇ ಬೊಯ್ಯಕೆ ಬಾಯಿ ತೆಗ್ದವುಳೇ, ನಾ ಕುಸಿಂದ ಬೇಗ ಬೇಗ ಈ ಮಾತ್ ಹೇಳಿಕಾಕನ ಸುಮ್ಮನಾತ್.

"ಭಾಗೀ, ನೀನೂ ಗುರುವಾರ ಬಾ. ನಾವಿಬ್ರೊರು ಲಾಡ್ ತಿಂಬೊನೊ." ಎಂತ ಅಕ್ಕ ಭಾಗೀರಥಿನ ಒಟ್ಟಿಗೆ ಹೇಳ್ತ್.

" ದೇವ್ರ್‌ಗೆ ಮಾಡ್ದು. ತಿಂಬೊಕೆ ಅವ್ವ ಬುಡೊಕೊಲ"ನಾಹೇಳ್ದೆ.

" ಇಲ್ಲೆ ಇಲ್ಲೆ. ದೇವ್ರಿಗೆ ಇಸಿಕೆ ಬೇರೆ ನೂರು ಮಾಡಿ ಡೊಬ್ಬಿಲಿ ಹಾಕಿಸುವೆ. ಆ ಮೇಲೆ ಮಾಡ್ದರ ನಾವು ತಿನಕ್."– ಅಕ್ಕ ಹೇಳ್ತ್.

ನಂಗೆ ತುಂಬಾ ಸಂತೋಷ ಆತ್. " ಯಾಗ ಗುರುವಾರ ಬಂದದೇ? ಲಾಡ್‌ಬಟ್ರ್ ಯಾಗ ಬಾವೋ?" ಎಂತ ಕಾದ್‌ಕೊಂಡಿದ್ದೆ. ಓಡಿ ಹೋಗಿ ಮನೆ ಹಿಂದೆ ಆಟ ಆಡಿಕಂಡಿದ್ದ ತಮ್ಮಂದ್ರಿಗೆ ಈ ವಿಷಯ ತಿಳ್ಸಿದೆ. ಅವಿಬ್ರೊರು ಕೊಣ್‌ದಾಡ್‌ದೊ.

ಗುರುವಾರ ಮಧ್ಯಾಹ್ನದ ಮೇಲೆ ಭಟ್ರ್ ಬಂದೊ. ಅವ್ವ ಅಡ್ಗೆ ಕೊಟಗೆಲಿ ಕಡ್ಲೆ ಹಿಟ್ಟ್, ಸಕ್ಕರೆ, ಎಂಣೆ ಏಲಕ್ಕಿ, ದ್ರಾಕ್ಷೆ – ಎಲ್ಲಾ ದೊಡ್ಡ ಹೊಸ ಹೆಡಗೆಲಿ ಹಾಕಿ ಕೊಟ್ಟೊ. ಬಟ್ರ್ ಒಂದ್ ತೊಡ್ಪೆಲಿ ಪೇಪರ್ ಹಾಕಿ, ಕಡ್ಲೆ ಹಿಟ್ಟ್‌ನ ಗಾಳ್ಸಿಕೆ ಸುರುಮಾಡ್ದೊ. ನಮ್ಮ ಅಂಗ್ಡಿಲಿ ಕೆಲ್ಸ ಮಾಡುವ ರಾಮ ಮತ್ತೆ ಶೇಷನ ಅವ್ಕೆ ಸಾಯ ಮಾಡಿಕೆ ಅಪ್ಪ ಕಳ್ಸಿದೊ. ಆ ಮೇಲೆ ಕೆಲ್ಸದ ಮಕ್ಕ ಗಾಳ್ಸಿಕೆ ಸುರು ಮಾಡ್ದೊ ಬಟ್ರ್ ಗಾಳ್ಸಿದ ಹಿಟ್ಟ್‌ನ ಒಂದು ದೊಡ್ಡ ತಪಲೆಗೆ ಹಾಕಿ ನೀರ್ ಹಾಕಿ ಕಲ್ಸಿ, ಒಲೆಗೆ ಕಿಚ್ಚ್ ಮೊಟ್ಟ್, ದೊಡ್ಡ ಬಾಣೆಲೆಲಿ ಒಂದು ಕುತ್ತಿ ಎಣ್ಣೆ ಹಾಕಿ ಕಾಯಕೆ ಇಸಿದೊ. ಒಂದು ಕೈಲಿ ಗುಂಡಿ

ಇದ್ದ ಕಣ್ಣ್ ಸಟ್ಟ್‌ಗನ ಹಿಡ್ದ್, ಇನ್ನೊಂದು ಸೆಡೆಂದ ಹಿಟ್ಟ್ ತೆಗ್ದ್, ಕಣ್ಣ್ ಸಟ್ಟ್‌ಗಕ್ಕೆ ಹಾಕಿ ಉಜ್ಜಿದೊ. ಕಣ್ಣ್ ಸಟ್ಟ್‌ಗದ ಕಣ್‌ಗಳ್‌ಂದ ಹಿಟ್ಟ್ ಕಾದ ಎಣ್ಣೆಗೆ ಬಿದ್ದ್, ಅರ್ಸಿಣ ಮಣಿಗಳ ಹಾಂಗೆ ಮೇಲೆ ತೇಲಿಕಾಕನ, ಅದರ ಇನ್ನೊಂದ್ ಕಣ್ಣ್ ಸಟ್ಟ್‌ಗಂದ ತೆಗ್ದ್ ಹೆಡಗೆಗೆ ಹಾಕಿದೊ. ಬಾಣಲೆಲಿ ಎಂಣೆ ಕಡಿಮೆ ಆದ ಹಾಂಗೆ ಡೊಬ್ಬಿಂದ ಬೊಗ್ಗಿಸಿ ಎಂಣೆ ಸೇರ್‌ಸ್ತಿದ್ದೊ. ಹೊಸ ಮೊಂದ್ರಿ ಹಾಸಿ, ಅದರ ಮೇಲೆ ಪೇಪರ್ ಹಾಕಿ, ಹೆಡಗೆಲಿದ್ದ ಬೂಂದಿ ಕಾಳ್‌ಗಳ ಸುರ್‍ದೊ. ನಾವು ಇದರೆಲ್ಲಾ ನೋಡಿಕಂಡ್ ಕುದ್ದೊ. ಕುದ್ದಲೇ ಕುದ್ದ್ ನಾವ್ಗೆ ಸಾಕಾತ್.

ನಾ ಎದ್ದ್ ಒಳಗೆ ಅಡ್ಗೆ ಕೋಣೆಗೆ ಹೋದೆ. ಅಲ್ಲಿ ಕೂಟೇಲ್‌ನ ಚಿನ್ನಮ್ಮತ್ತೆ ಮತ್ತೆ ಅವರ ಮಗಳ್ ಪಾರ್ವತಿ ಕಾಪಿ ಕುಡ್ಕಂಡಿದ್ದೊ. ಅವರ ಮುಂದೆ ಬಾಳೆಲೆಲಿ ಹಾಕಿದ ಕೊಟ್ಟಿಗೆನ ತುಂಡುನ ಸಾರ್‌ಲಿ ಮುಳುಂಗಿಸಿ ತಿಂಬತಿದ್ದೊ. ಅವು ಬಾಳೆಲೆ ಮತ್ತೆ ಪಿಂಗಾರನ ಕೂಟೇಲಿಂದ ಅಪ್ಪನ ತೋಟಂದ ತಂದಿದ್ದೊ. ನಾಳೆ ಅಂಗ್ಡಿ ಪೂಜೆಗೆ ಬೇಕಲೆ. ಅಷ್ಟಾಕನ ಸಣ್ಣಕ್ಕ ಬಂದ್,

" ಇಲ್ಲೇನ್‌ಮಾಡ್ಯ? ದೇವ್ರಮಂಟಪಕ್ಕೆ ತೋರಣ ಕಟ್ಟಿಕೆ ಭಾಗೀರಥಿ ಮನೆಂದ ಮಾಯ್ನ ಸೊಪ್ಪು ಮತ್ತೆ ಕಾಡ್ ಗುಲಾಬಿನ ಉದ್ದದ ದಂಡ್ ತಕಂಡ್‌ಬಾ" ಎಂದ್ ಹೇಳಿ ನನ್ನ ಅಲ್ಲಿಂದ ಭಾಗೀರಥಿ ಮನೆಗೆ ಓಡ್ಸಿತ್. ನಾ ನಾಣಿನ [ನನ್ನ ದೊಡ್ಡ ತಮ್ಮ] ಕರ್ಕಂಡ್ ಭಾಗೀರಥಿ ಮನೆಗೆ ಹೋದೆ. ಅಲ್ಲಿ ಮಾಯ್ನ ಮರದ ಗೆಲ್ಲ್ ಕೈಗೆ ಸಿಕ್ಕ್‌ತಿತ್ತ್. ಭಾಗೀರಥಿ ನಾವ್ಗೆ ಚೀಲ ತುಂಬಾ ಮಾಯ್ನ ಸೊಪ್ಪುನ ಕೊಯ್ದ್ ಕೊಟ್ಟತ್. ಉದ್ದದ ಲಾಂಟಾನಾ[ಕಾಡ್ ಗುಲಾಬಿ] ಗೆಲ್ಲ್‌ನ ಕಡ್ದ್, ಗೀಸಿ ಕೊಟ್ಟತ್. ಅದರ ತಂದ್ ಅಕ್ಕಂಗೆ ಕೊಟ್ಟೆ. ಅಕ್ಕ ಅದರ ಕಮಾನ್ ಬೊಗ್ಗಿಸಿ ಕಟ್ಟಿ, ಅದಕ್ಕೆ ಮಾಯ್ನ ಸೊಪ್ಪುನ 'ತ' ಆಕಾರಲಿ ಕಟ್ಟಿತ್.

ಆಗ ನಾ, 'ನಾ ತೇರ್‌ಹೂ [ರಥಪುಷ್ಪ] ಕೊಯ್ಕಂಡ್‌ಬನ್ನೆ. ಅದರಸಣ್ಣಸಣ್ಣ ಗೊಂಚಲ್‌ಗಳಸುತ್ತೊಳು ಕಟ್ಟೊಮೊ. ನೊಡುಲಿ ಸೇವಂತಿಗೆ ಮಾಲೆ ಕಟ್ಟಿರೆ, ಪೊರ್‍ಲುನ ಕಮಾನ್ ದೇವ್ರಿಗೆ ಇಸಿಕೆ ಆದೇ"– ಎಂತ ಹೇಳ್ದೆ. ತೇರ್ ಹೂ ತಾಕೆ ನೀರೆಡಿ ಕೊಟಗೆನ ಹಿಂದೆ ಓಡಿದೆ. ಅಲ್ಲಿ ತೇರ್ ಹೂ ದೈಗ ಬೇರ್ ಹೋದಲ್ಲೆಲ್ಲಾ ಹುಟ್ಟಿ ಅಡ್ಡಾದಿಡ್ಡಿ ಬೆಳ್ದಿದ್ದೊ. ಒಂದೊಂದು ದೈಲಿ ರಥದ ಗೋಪುರದ ಹಾಂಗೆ ಇದ್ದ ತೇರ್ ಹೂ ಇತ್ತ್. ನಾ ನಾಲ್ಕೈದ್ ತೇರ್ ಗೊಂಚಲ್‌ಗಳ ಕೊಯ್ಕಂಡ್ ತಂದ್ ಅಕ್ಕಂಗೆ ಕೊಟ್ಟೆ. ಅದರ ಎಸಳ್ ಎಸಳಾಗಿ ಸಣ್ಣ ಸಣ್ಣ ತುಂಡು ತೆಗ್ದ್, ಕಟ್ಟಿಕೆ ಕೊಟ್ಟೆ. ಅಕ್ಕ ಅದರ ಮಾಯ್ನ ಸೊಪ್ಪುನ ಮೇಲೆ ಕಮಾನ್‌ಗೆ 'ಗಿ' ಆಕಾರಲಿ ಕಟ್ಟಿಕಂಡ್ ಬಾತ್. ಪಚ್ಚೆಸೊಪ್ಪುನ ಎಡೆಲಿ ಕೆಂಪು ಹೂಗ ಪೊರ್‍ಲು ಕಾಂಬತಿತ್ತ್.

" ಇನ್ನ್ ಇದರನೊಡುಲಿ ಉದ್ದದ ಸೇವಂತಿಗೆ ಮಾಲೆನ ಮಾಡಿ ಕಟ್ಟಿರೆ ಬಾಳ ಸೋಕು ಕಾಂಬೊದಲ್ಲಕ್ಕಾ"– ಎಂತ ನಾ ಕೇಳ್ದೆ. ಅಕ್ಕ, "ಹೂಂ" ಎಂತಹೇಳ್ತ್.

ಆಗಳೇ ಗಂಟೆ ಐದ್ ಆತ್. "ಕೂರ್ಗ್ ಬಸ್ಸ್ ಬಾಕಾತ್. ಅಣ್ಣಂಗೆ ನೆಂಪುಟ್ಟೋ

ಇಲ್ಲೆನೋ?" ಎಂತ ನಾ ನೆನ್ಸಿಕಂಡ್ ಹೊರಗೆ ಅಂಗ್ಡಿಗೆ ಓಡಿ ಹೋದೆ. ಮಂಗ್ಳೂರ್‌ಂದ ಐನೂರ ಸೇವಂತಿಗೆ ಹೂಗಳ ತಾಕೆ ಅಣ್ಣ ಬಸ್ ಡ್ರೈವರ್ ಕೈಲಿ ಬೊಳ್ಪುಗೆ ದುಡ್ಡು ಕೊಟ್ಟಿತ್ತ್. ಆಗ ಐನೂರು ಹೂಗೆ ಎರಡುವರೆ ರೂಪಾಯಿ. ನಾ ನೋಡಿಕನ ಕೂರ್ಗ್ ಬಸ್ಸ್, ನಮ್ಮ ಅಂಗ್ಡಿ ಎದ್ರ್‌ಗಡೆ ಬಂದ್ ನಿಂತಿತ್ತ್. ಅಣ್ಣ ಡ್ರೈವರ್ ಕೈಯಿಂದ ಹೂನ ಕಟ್ಟ್‌ನ ತೆಗ್ದ್ ತಂದ್ ನನ್ನ ಹಕ್ಕಲೆ ಕೊಟ್ಟತ್. ನಾ ಅದರ ತಕಂಡ್ ಬಂದ್ ಅಕ್ಕಂಗೆ ಕೊಟ್ಟೆ ಅದರ ನೋಡಿ ಅಕ್ಕ ಕುಸಿಂದ,

"ಮೋಳು, ಹೂ ಕಟ್ಟಿಕೆ ಬೊಳ್ಳಿ ಮುಗ್ದುಟ್ಟು . ಕೊಟಗೆ ಮಾಡ್‌ಲಿ ಹೂ ಕಟ್ಟ್‌ವ ಬೊಳ್ಳಿ ಉಟ್ಟು. ತಕಂಡ್ ಬಾ"ಎಂತ ಅಕ್ಕ ಹೇಳ್ತ್.

ನಾ ಹಟ್ಟಿ ಪುಡೆಲಿ ಇದ್ದ ಕೊಟಗೆಗೆ ಓಡಿ ಹೋಗಿ ನೋಡ್ದೆ. ಅಲ್ಲಿ ಮಾಡ್‌ಲಿ ಒಣ್ಗಿದ ಬಾಳೆ ನಾರ್ನ ಸುತ್ತಿ ಇಸಿದ್ದೊ. ಗೊನೆ ಹಾಕಿದ ಬಾಳೆನ ಕಡ್ಯಕಾಕನ, ಅದರ ದಂಡ್‌ಂದ ರೆಂಬೆಗಳ ಬೇರೆ ಮಾಡಿ ಉಗ್ಗವ ಬಿಸಿಲಿಲಿ ಒಣ್ಗಿಕೆ ಇಸಿ, ಮಕ್ಕಳಿಗೆ ಹೂ ಕಟ್ಟಿಕೆ ಕೊಟಗೆ ಮಾಡ್‌ಲಿ ಸಿಕ್ಕಿಸಿ ಇಸಿತ್ತ್. ನಾ ಬಾಳೆ ನಾರ್‌ನ ತಂದ್, ಅಕ್ಕನ ಕೈಲಿ ಕೊಟ್ಟೆ. ಅದ್ ಪಾಟೇಲಿದ್ದ ನೀರ್‌ಲಿ ಬೊಳ್ಳಿನ ಮುಳುಂಗಿಸಿ, ಸಣ್ಣ ಸಣ್ಣ ದಾರನ ಹಾಂಗೆ ಸಿಗ್ದ್‌ದ್, ಕಿಡಿಕೆನ ಸರ್ಳ್‌ಗೆ ಒಂದು ಸುತ್ತು ಸುತ್ತಿ, ಕಟ್ಟಿ ಅದರ ಎಡೆಲಿ ಒಂದೊಂದೇ ಹೂನ ಇಸಿ, ಹೂ ಕಟ್ಟಿಕೆ ಸುರು ಮಾಡ್ತ್. ದೊಡ್ಡ ದೊಡ್ಡ ಸೇವಂತಿಗೆ ಹೂನ ತೆಗ್ದ್‌ದ್, ಅದ್ಕೆ ಕೊಡಿಕೆ ಸುರು ಮಾಡ್ದೆ. ಕಮಾನ್‌ಗೆ ಬೇಕಾದ ಉದ್ದದ ಮಾಲೆ ನೇಯ್ದ ಮೇಲೆ, ಅದರ ಕಮಾನಿಗೆ ಕಟ್ಟಿಕೆ ಸುರುಮಾಡ್ತ್. ಆಗ ಬಾಳ ಪೊರ್ಲುನ ಕಮಾನ್ ಆತ್. ಆ ಮೇಲೆ ನಾನೂ, ಸಣ್ಣಕ್ಕನೂ ನೊಡುಕೋಣೆಲಿದ್ದ ಒಂದು ಮೇಜಿನ ಅಡಿ ಮೇಲೆ ಮಾಡಿ ಇಸಿ, ಅದರ ಮುಂದೆನ ಕಾಲ್‌ಗಳಳಿಗೆ ಎರ್ಡ್ ಸಪೂರದ ಬಾಳೆ ಕುರ್ಲೆಗಳ ಕಟ್ಟಿ ಸುತ್ತೋಳೂ ಮಾಯ್ನ ಎಲೆನ ತೋರಣ ಕಟ್ಟಿದೊ. ತಮ್ಮಂದರೂ ತೋರಣ ಕಟ್ಟಿಕೆ ಸಾಯ ಮಾಡ್ದೊ. ಮೇಜಿನ ತಳ ಭಾಗಲಿ ಒಂದು ಅಗಲದ ಮಣೆನ ಇಸಿ, ಅದರ ಹೊಸ ಕೆಂಪು ಬಟ್ಟೆಂದ ಮುಚ್ಚಿದೊ. ಲಕ್ಷ್ಮಿ ದೇವ್ರ ಪಟನ ಅದರ ಮೇಲೆ ಇಸಿ, ಅಕ್ಕ ತಯಾರ್ ಮಾಡ್ದ ಹೂನ ದಂಡೆನ ಅದಕ್ಕೆ ಇಸಿದೊ. ಒಂದ್ ಪಿಂಗಾರನ ಒಡ್ದ್ ಸಣ್ಣ ಸಣ್ಣ ಎಳೆನ ಮಾಡಿ, ಮಾಯ್ನ ಸೊಪ್ಪುನ ಎಡೆ ಎಡೆಲಿ ತೂಗಿಸಿದೊ. ನಾಳೆ ಬೊಳ್ಪುಗೆ ಭಟ್ರ್‌ಗೆ ಪೂಜೆಗೇಂತ ಒಂದು ಹರಿವಾಣಲಿ ಕಟ್ಟಿ ಬಾಕಿ ಉಳ್ದ ಸೇವಂತಿಗೆ ಹೂಗಳ ಇಸಿದೊ.

ಆಗ ನಂಗೆ ಕೊಟಗೆಲಿ ತಯಾರ್ ಮಾಡುವ ಲಾಡ್‌ನ ನೆಂಪಾತ್. ಓಡಿ ಹೋಗಿ ನೋಡ್ದೆ. ಬಟ್ರ್ ಸಕ್ಕರೆ ಪಾಕನ ನೂಲೆಳೆ ಹಾಂಗೆ ಇಳ್ಸಿಕಂಡ್ ಇದ್ದೊ. ಶೇಷ, ರಾಮ ದೊಡ್ಡ ಬಾಣಲೆಲಿ ಹಾಕಿದ ಬೂಂದಿನ ಅಲ್ಲಾಡ್ಸಿಕಂಡ್ ಇದ್ದೊ.

"ಹೋ, ಇನ್ನ್‌ಹಂಞ ಹೊತ್ತ್‌ಲಿ ಉಂಡೆ ಕಟ್ಟಿಕೆ ತಯಾರಾದೆ. " ಎಂತ ಯೋಚನೆಮಾಡಿಕಂಡ್ ಅಕ್ಕನ ಹಕ್ಕಲೆ ಬಂದೆ.

ನಮ್ಮ ದೇವ್ರ ಮಂಟಪದ ಸಿಂಗಾರನ ನೋಡಿಕೆ ಭಾಗೀರಥಿ ಬಾತ್. ಬಾಕನ

ಒಂದು ತಟ್ಟೆಲಿ ದಾಸವಾಳ, ಗೋರಟೆಗಳ ಮುಗುರುಗಳ ತಾತ್. ಅಕ್ಕನೂ ಅದುನೂ ನಮ್ಮ ಹೂ ತೋಟಲಿದ್ದ ಹೂಗಳ ಮುಗುರುಗಳ ಕೊಯ್ಯಕೆ ಹೋದೊ. ಅಕ್ಕ ನನ್ನ ನೋಡಿ, ಅವು ಕೊಯ್ದು ಹೂಗಳ ನನ್ನ ಹಕ್ಕಲೆ ಕೊಟ್ಟ್, " ಇದರ ದೇವ್ರ ಹಕ್ಕಲೆ ಇಸಿ, ಬಟ್ರಲಿ ಕೇಳಿ ಒಂದು ಬಾಳೆಲೆಲಿ ಬೂಂದಿ ತಕಂಡ್‌ಬಾ" ಎಂತಹೇಳ್ತ್.

" ಇಲ್ಲೆ, ದೇವ್ರಿಗೆ ಇಸಿಕೆ ಕಟ್ಟಿ ಆತ್ಲೆ". ಎಂತನಾಹೇಳ್ದೆ.

"ಹೌದಾ? ಹಾಂಗಾದರೆ ನಾವಿಬ್ಬೊರು ಬಾಮಿ ಕಟ್ಟೆಹಕ್ಕಲೆ ಇದ್ದವೆ. ನೀ ಆ ಮೇಲೆ ಅಲ್ಲಿಗೆ ತಾ" ಎಂತ ಅಕ್ಕಹೇಳ್ತ್. "ಸರಿ" ಎಂತನಾ ಹೇಳಿ ಹೂಗಳ ದೇವ್ರಮಂಟಪದ ಎದ್ರ್‌ಗೆ ಇಸಿ, ಕೊಟಗೆಗೆ ಹೋದೆ. ಅಲ್ಲಿ ಬಾಳ ರಭಸಂದ ಎಲ್ಲೋವೂ ಲಾಡ್ ಉಂಡೆ ಕಟ್ತಿದ್ದೊ. ಕಟ್ಟಿ, ಕಟ್ಟಿ ಹೊಸ ಹೆಡಗೆಲಿ ಇಸ್ತಿದ್ದೊ. ಅವ್ವ ಒಂದ್ ಹೊಸ ಡೊಬ್ಬಿ ತಂದ್‌ದ್ "ಬಟ್ರೇ, ದೇವ್ರಿಗೆ ಇಸಿಕೆ ಇದರ್ಲಿ ಹಾಕಿಸಿ" ಎಂದ್‌ಹೇಳ್ದೊ. ಬಟ್ರ್ ಅದರ್ಲಿ ಹಿಡಿವೊಸ್ಟ್ ತುಂಬಿಸಿ ರಾಮನೊಟ್ಟಿಗೆ ಒಳಗೆ ಕಳ್ಸಿದೊ. ನಾ ಅದರೆಲ್ಲಾ ನೋಡಿಕಂಡ್ ಅಲ್ಲೇ ನಿಂತಿದ್ದೆ. ಬಟ್ರ್ ನನ್ನ ನೋಡಿ ನೋಡಿ ಒಂದು ಬಾಳೆಲಿಲಿ ಸಕ್ಕರೆ ಪಾಕ ಹಾಕಿದ್ದ ಬೂಂದಿನ ಒಂದು ಪುಂಡಿ ತೆಗ್ದ್ ಹಾಕಿ ನನ್ನ ಹಕ್ಕಲೆ ಕೊಟ್ಟೊ. ಅವು,

" ತಮ್ಮಂದರ್‌ಗೆ ಕೊಟ್ಟ್ ತಿನ್ನ್" ಎಂತಹೇಳ್ದೊ. ನಾ ಅದರ ತಕಂಡ್ ಬಾಮಿ ಕಟ್ಟೆ ಹಕ್ಕಲೆ ಓಡಿಕಂಡ್ ಹೋಗಿ ಅಕ್ಕ ಮತ್ತೆ ಭಾಗೀರಥಿಗೆ ಕೊಟ್ಟೆ. ಅವಿಬ್ಬೊರು ಹರ್ಟೆ ಹೊಡ್ಕಂಡ್ ತಿಂದೊ. ನಾ ತಿರ್‍ಗಿ ಕೊಟಗೆಗೆ ಬಂದೆ.

"ಮತ್ತೆ ಯಾಕೆ ಬಂದ? ಇನ್ನೂ ಬೇಕೋ?"ಬಟ್ರ್‌ನನ್ನ ಕೇಳ್ದೊ. ನಾ ತಲೆ ಹಂದಾಡ್ಸಿದೆ. ಅವು ಇನ್ನೊಂದು ಬಾಳೆಲೆಲಿ ಸೀಂಯಿನ ಬೂಂದಿ ಕಾಳ್‌ನ ಹಾಕಿಕೊಟ್ಟೊ. ನಾ ಅದರ ತಕಂಡ್ ತಮ್ಮಂದರ ಹುಡ್ಕಿಕಂಡ್ ಹೋದೆ. ನಾವು ಮೂರು ಜನ ಅದರ ತಿಂದೊ.

ಇರ್ಳ್ ಹತ್ತ್ ಗಂಟೆ ಮುಟ್ಟ ನಾವು ಎಚ್ಚರ ಇದ್ದೊ. ಅಣ್ಣ ಒಂದ್ ವಾರಕ್ಕೆ ಹಿಂದೆನೇ ಅಂಗ್ಡಿ ಎದ್ರ್‌ನ ದೊಡ್ಡ ಬಾಗಿಲ್ನ ಎರ್ಡ್ ಪುಡೆಲಿ ಇದ್ದ ದೊಡ್ಡ ದೊಡ್ಡ ಕಿಡ್ಕೆಗಳ ದಳಿಗಳಿಗೆ ಆಕಾಶ ನೀಲಿ ಬಣ್ಣ ಹಾಕಿಸಿತ್ತ್. ಈಗ ಅದರ ಮೇಲೆ ಕೇಂಡ್ಲ ಅಂಟಿಸಿ, ಮೂರು ದಿನನೂ, ನರಕ ಚತುರ್ದಶಿ ಅಮಾಸೆ, ಪಾಡ್ಯ ದಿನ ಅದರ ಹೊತ್ತಿಸಿ ಇಸ್ತಿತ್ತ್ ಆಗ ನಾವ್ಗೆ ಅದರ ನೋಡಿಕೆ ಭಾರೀ ಕುಸಿ ಆಗ್ತಿತ್ತ್. ಅಂಗ್ಡಿನ ಎದ್ರ್ ಬಾಗಿಲಿಗೆ ಗೊನೆ ಹಾಕಿದ ಎರ್ಡ್ ಬಾಳೆಗಳ ಕಟ್ಟಿ ಇಸಿದ್ದೊ. ಮಾಯ್ನ ಸೊಪ್ಪುನ ತೋರ್ಣ ಕಟ್ಟಿದೊ. ಇದರೆಲ್ಲಾ ನೋಡಿ ನಮ್ಮ ನಿದ್ದೆ ಹಾರಿ ಹೋತ್. ಅಣ್ಣ,

"ಹೋಗಿ ಹೋಗಿ ನಾಳೆಬೇಗ ಎದ್ರೊಕು. ಈಗ ಹೋಗಿ ಮೊಲ್ಗಿನಿ" ಎಂತಹೇಳ್ತ್. ನಾವ್ಗೆ ಉಂಬೊದು ಬೇಡಾಗಿತ್ತ್. ಹೋಗಿ ಮೊಲ್ಗಿದೊ. ನಿದ್ದೆ ಬಾರದೆ ಅತ್ತಿತ್ತ ಹೊರ್ಳಾಡ್ದೊ. ನಿದ್ದೆ ಬಂದದೇ ಗೊತ್ಲಾತ್ಲೆ. ಅಕ್ಕ ಬಂದ್ ಎದ್ರಿಸಿಕಾಕನನೇ ಗೊತ್ತಾತ್,

ಬೊಳ್ಪಾತ್ಂತ

ನಾ ಎದ್ದ್ ಕಣ್ಣುಜ್ಜಿ, ದೇವರ ಮಂಟಪ ಇದ್ದಲ್ಲಿಗೆ ಓಡ್ದೆ. ಆಗಳೇ ಕಾಯತರ್ೋಡಿ ದೇವಸ್ಥಾನದ ಪೂಜೆ ಬಟ್ರ್ ಮೂಡೆತ್ತಾಯರ್ ಅಕ್ಕಿ ಹಿಟ್ಟ್ಂದ ರಂಗೋಲಿ ಹಾಕಿಕಂಡಿದ್ದೊ. ನಾ ಅದರ ನೋಡಿಕಂಡ್ ನಿಂತೆ. ಅವರ ಕೈಚಳಕ ನೋಡಿ ಸೋಜಿಗ ಪಡ್ತಿದ್ದೆ. ಅಪ್ಪಾಕನ ಅತ್ತಿಗೆ ಬಂದ್, “ಹೋಗು, ಹೋಗು ಬೇಗ ಮಿಂದ್‌ದ್ ಪೂಜೆಗಾಕನ ಮಡಿಲಿ ಹೊಸ ಅಂಗಿ ಹಾಕಂಡ್‌ಬಾ” ಎಂತಹೇಳ್ದೊ.

ನಾ ನೀರೆಡಿ ಕೊಟಗೆಗೆ ಓಡ್ದೆ. ತಮ್ಮಂದರ್ ಆಗಳೇ ಮಿಾಂದ್‌ದ್ ಹೊಸ ಬಟ್ಟೆ ಹಾಕಿದ್ದೊ. ನಾ ಓಡಿ ಹೋಗಿ ಹಲ್ಲುಜ್ಜಿ, ಮಿಾಂದ್ ಹೊಸ ಬಟ್ಟೆ ಹಾಕಿ, ಪೂಜೆ ಮಾಡುವ ಜಾಗೆಗೆ ಬಂದೆ. ಆಗಳೇ ನೆರೆಕರೆವು ಅಂಗ್ಡಿ ಗಿರಾಕಿಗ ಬಂದಿದ್ದೊ. ದೇವರ ಮಂಟಪ ಹೂಗಳ್ಂದ ತುಂಬಿತ್ತ್. ಬಟ್ರ್ ಬಾಕಾಕನ ತುಳಸಿ, ತುಂಬೆ ಹೂ, ಕೇಪುಳು ಹೂಗಳ ತಂದಿದ್ದೊ. ಮೂಡೆತ್ತಾಯರ್ ಮಂತ್ರ ಹೇಳಿ, ಎಲ್ಲೋವ್ಕೂ ಮಂತ್ರಾಕ್ಷತೆ ಕೊಟ್ಟ್, ಮಂಗಳಾರತಿ ಮಾಡ್ದೊ. ಅಪ್ಪ ಕುದ್ರುವ ಮಂಡಕ್ಕೂ, ದುಡ್ಡುನ ಪೆಟ್ಟಿಗೆಗೂ ಪೂಜೆ ಮಾಡ್ದೊ. ಪಾವು, ಸೇರು, ಕಳಸಿಗೆ, ತ್ರಾಸ್, ತೂಕದ ಕಲ್ಲ್‌ಗ– ಎಲ್ಲದರನೂ ದೇವ್ರ ಎದ್ರ್‌ಗೆ ಇಸಿದ್ದೊ. ಅದಕ್ಕೆಲ್ಲಾ ಆರತಿ ಎತ್ತಿ, ಬೊಳ್ಪು ತೋರ್ಸಿ, ಮಂತ್ರಾಕ್ಷತೆ ಹಾಕಿದೊ. ನಾವೆಲ್ಲಾ ಮಂತ್ರಾಕ್ಷತೆ ಹಾಕಿ ಕೈ ಮುಗ್ದ್ ಅಡ್ಡ ಬಿದ್ದೊ. ಎಲ್ಲೋವ್ಕೂ ಪ್ರಸಾದ ಹಂಚಿದೊ. ಕಾಯಿ ಹೂ, ಬೆಲ್ಲ, ಎಳ್ಳ್, ಏಲಕ್ಕಿ ಹೊಡಿ ಹಾಕಿ, ಕಲ್ಸಿದ ಹೊದ್ಲ್ ಮತ್ತೆ ಅವ್ಲಕ್ಕಿನ ಪಂಚಕಜ್ಜಾಯ, ಬಾಳೇಹಣ್ಣ್ ಮೇಲೆ ಒಂದೊಂದ್ ಲಾಡ್ ಇಸಿ, ಬಾಳೆಲೆಲಿ ಎಲ್ಲೋವ್ಕೂ ಹಂಚಿದೊ. ಆ ದಿನ ಬೊಳ್ಪುಂದ ಹಿಂಬೊತ್ತ್ ಮುಟ್ಟ ಅಂಗ್ಡಿಗೆ ಬಂದೊವ್ಕೆಲ್ಲಾ ಪ್ರಸಾದ ಹಂಚಿದೊ. ಅಪ್ಪನ ಖಾಯಂ ಗಿರಾಕಿಗಳಿಗೆ ಹತ್ತತ್ತ್ ಲಾಡ್‌ನ ಪ್ರಸಾದದೊಟ್ಟಿಗೆ ಕೊಟ್ಟೊ. ನನ್ನ ಜೋಸ್ತಿ ಗೂಡೆಗ ಎಲ್ಲಾ ಬಂದಿದ್ದೊ. ಅವ್ಕೆಲ್ಲಾ ನಾನೇ ಪ್ರಸಾದ ಹಂಚಿದೆ. ನನ್ನ ಮನೆ ಪಾಟದ ಮಾಸ್ಟ್ರ ನಾರಾಯಣ ರೈ ಮಾಸ್ಟ್ರಿಗೆ, ಅವ್ವನೊಟ್ಟಿಗೆ ಹೇಳಿ ನಾಕಾರ್ ಲಾಡ್ ಹೆಚ್ಚಿಗೆ ಕಟ್ಟಿಸಿ, ಅವರ ಮನೆಗೆ ಹೋಗಿ ಅವರ ಹೆಣ್ಣ್‌ನ ಕೈಲಿ ಕೊಟ್ಟ್ ಬಂದೆ. ಅವರ ಹೆಣ್ಣ್‌ಗೆ ನಾಂತೇಳ್ರೆ ಬಾಳ ಪ್ರೀತಿ. ಅಂತೂ ವರ್ಸೊಕೊಮ್ಮೆ ನಡೆವ ನಮ್ಮ ಅಂಗ್ಡಿ ಪೂಜೆ ಈ ವೊರ್ಸ ಬಾಳ ಗೌಜಿಲಿ ನಡ್ತ್.

* * * * *

ಚುಕ್ಕೆ – 25

"ಭಾಗೀರಥಿನ ಮೊದ್ವೆ"

ಸಣ್ಣಕ್ಕ ಬಣ್ಣದ ನೂಲ್ಂದ ಹೊಲಿಗೆ ಬಾಳ ಪೊರ್ಲುಲಿ ಮಾಡ್ತಿತ್ತ್. ಕೊಕ್ಕೆ ಸೂಜಿಂದ ಲೇಸ್, ಬನಿಯಾನ್ ಹೊಲ್ಯತಿತ್ತ್. ಎಡ ತೋರ್ ಬೆರ್ಳಿಗೆ ನೂಲ್‌ನ ಹತ್ತಾರ್ ಸಲ ಸುತ್ತಿ, ಬಲ್ದ ಹೆಬ್ಬೆಟ್ಟ್ ಮತ್ತೆ ತೋರ್ಬೆಳ್‌ಲಿ ಕೊಕ್ಕೆ ಸೂಜಿನ ಹಿಡ್ದ್, ಅದ್ ಲೇಸ್ ಹೊಲ್ಯಕಾಕನ ನಾ ಹಕ್ಕಲೆ ಕುದ್ದ್‌ಕಂಡ್, ಅದ್ ಹೊಲ್ಯೊದರನೇ ನೋಡ್ತಿದ್ದೆ. ಸಣ್ಣಕ್ಕಂದ ನಾನೂ, ಚೈನ್ ಕಂಬ ಹೊಲ್ಯೊದರ ಕಲ್ತೆ. ಅಕೆರಿಗೆ ಹೂ ಮಾಡ್ದರನೂ ಕಲ್ತೆ. ಅದ್ ಎಷ್ಟೇ ಕಷ್ಟದ ಕೊಕ್ಕೆ ಸೂಜಿ ಹೊಲ್ಗೆನನೂ ಒಮ್ಮೆ ನೋಡ್ರೆ ಸಾಕ್, ಬೇಗನೆ ಕಲ್ಯತಿತ್ತ್. ಬನಿಯನ್‌ಲಿ ಹಂಸ, ಆಟಿನ್, ಡೈಮಂಡ್, ತಾವರೆ ಎಲ್ಲಾ ಹೊಲ್ಯತಿತ್ತ್. ತಲೆ ಮೊಟ್ಟೆ ಕವರಿಗೆ ಪೊರ್ಲುಲಿ ಚಿತ್ರ ಬುಡ್ಸಿ, ಬಣ್ಣದ ನೂಲ್ಂದ ಸೂಜಿಲಿ ಹೊಲ್ಯತಿತ್ತ್. ನಂಗೆ ಚಿತ್ರ ಬುಡ್ಸುದುಂತೇಳ್ರೆ ತುಂಬಾ ಇಷ್ಟದ ಕೆಲ್ಸ. ಟ್ರಸ್ ಪೇಪರ್ಲಿ ಚಿತ್ರಗಳ ನಕಲ್ ತೆಗ್ದ್‌ದ್, ಬಟ್ಟೆ ಮೇಲೆ ಕಾರ್ಬನ್ ಪೇಪರ್ ಇಸಿ, ಅದರ ಮೇಲೆ ಚಿತ್ರಗಳ ಇಸಿ, ಆ ಚಿತ್ರಗಳ ಮೇಲೆ ಪೆನ್ಸಿಲಿಲಿ ಬರ್ದ್‌ದ್, ಕಾರ್ಬನ್ ಮತ್ತೆ ಟ್ರೆಸ್ ಪೇಪರ್ ತೆಗ್ದರೆ ಬಟ್ಟೆ ಮೇಲೆ ಕಾರ್ಬನ್ ಗೆರೆಲಿ ಚಿತ್ರ ಪೊರ್ಲುಲಿ ಕಾಂಬತಿತ್ತ್. ಇದೆಲ್ಲಾ ನಾ ಅಕ್ಕಂಗೆ ಮಾಡಿಕೊಡ್ತಿದ್ದೆ. ಅದ್ ಬಣ್ಣದ ನೂಲ್‌ಲಿ ಅದರ ಮೇಲೆ ಹೊಲ್ಯತಿತ್ತ್. ಹೂಗಳಿಗೆ ಬಣ್ಣ ತುಂಬಿಸಿಕಾಕನ ಬಣ್ಣದ ಆಯ್ಕೆ ನನ್ನ ಕೆಲ್ಸ. ಹೊಲ್ಯೊದು ಅದರ ಕೆಲ್ಸ. ಸಣ್ಣಕ್ಕಂದ ನಾನೂ ಕೈ ಚೌಕದ ಮೇಲೆ, ತಲೆ ಮೊಟ್ಟೆ ಕವರ್‌ಗಳ ಮೇಲೆ, ಮೇಜಿಗೆ ಹಾಕುವ ಬಟ್ಟೆನ ಮೇಲೆ ಕಸೂತಿ ಮಾಡ್ದರ ಕಲ್ತೆ.

ನಮ್ಮ ಅಪ್ಪಂಗೆ ಕಲೆ, ಸಾಹಿತ್ಯ, ಸಂಗೀತಲಿ ಬಾಳ ಆಸಕ್ತಿ. ಅಕ್ಕನನೂ, ನನ್ನನೂ, ತಮ್ಮಂದರ್‌ನನೂ ಅಣ್ಣನ ಮಕ್ಕಳನೂ ಅವು ಸಂಗೀತ ಕ್ಲಾಸಿಗೆ ಸೇರ್ಸಿದೊ. ಅವೆಲ್ಲಾ ಅರ್ಧಂಭರ್ದ ಕಲ್ತ್ ಬುಟ್ಟೊ. ನನ್ನ ಅತ್ತಿಗೆ ತುಂಬಾ

ಲಾಯ್ಕ್‌ಲಿ ಸೋಬಾನೆ ಹಾಡ್ ಹಾಡ್ತಿದ್ದೊ. ಅಣ್ಣನ ದೊಡ್ಡ ಮಗಳ್ ಶೀಲ, ಹೈಸ್ಕೂಲ್‌ಲಿ ಓದಿಕಾಕನ ಹಾಡ್ ಹೇಳ್ದರ್‌ಲಿ ಬಾಳ ಸಲ ಇನಾಮು ಪಡ್ದುಟ್ಟು.

ನಾ ಸಣ್ಣಕ್ಕ ಹೇಳ್ದಾಂಗೆ ಕೇಳ್ತಿದ್ದೆ. ನನ್ನ "ಸಣ್ಣಕ್ಕನ ಬೀಲ" – ಎಂತ ಅವ್ವ ನಂಗೆ ಬೊಯ್ಯೊತಿದ್ದೊ. ನಂಗೆ ಸಣ್ಣಕ್ಕ ಹೇಳ್ದೇ ವೇದ ವಾಕ್ಯ. ಅದರ ಎಲ್ಲಾ ಬಿಟ್ಟಿ ಕೆಲ್ಸ ನಾ ಮಾಡ್ತಿದ್ದೆ. ಅದ್ ಹೇಳ್ದರ ಎಲ್ಲಾ ನಂಬ್ತಿದ್ದೆ. ಸಣ್ಣಕ್ಕನ ಮೊದ್ವೆ ಆದ ಮೇಲೆ ಅಣ್ಣನ ಮಕ್ಕಳಿಗೆ ನಾನೇ ಯಜಮಾನ್ತಿ ಆದೆ. ಅಣ್ಣನ ಮಕ್ಕ, ಹೂವಯ್ಯ, ಶೀಲ, ಸಕಿ– ನನ್ನ ತುಂಬಾ ಹಚ್ಚಿಕೊಂಡಿದ್ದೊ. ನಾನೂ ಅವರ್ನ ತುಂಬಾ ಪ್ರೀತಿಸ್‌ತಿದ್ದೆ. ಅಂಗ್ಡಿಗೆ ಹೊಸ ಹೊಸ ಜವುಳಿ ಬಾಕಾಕನ ಅದರ್ಲಿ ಪೊರ್ಲು ಪೊರ್ಲುನ ಬಟ್ಟೆನ ನೋಡಿ, ಶೀಲ, ಸಕಿಗೆ ತರತರದ ಅಂಗಿನ ಹೊಲ್ಸ್‌ತಿದ್ದೆ. ನಂಗೆ ಹೆಣ್ಣ್ ಮಕ್ಕಾಂತೇಳ್ರೆ ಬಾಳ ಪ್ರೀತಿ. ಅವೂ ನನ್ನ ಆಂಟಿ, ಆಟೀಂತ ಹೇಳಿ ನಂಗೇ ಅಂಟಿಕೊಂಡಿದ್ದೊ.

ಸಣ್ಣಕ್ಕ ಅಣ್ಣನೊಟ್ಟಿಗೆ ಕೇಳಿ ಒಂದು ಗಜ ಲಾಂಗ್ ಕ್ಲಾತ್ ಬಟ್ಟೆನ ತಕ್ಕಂಡ್, ಅದರ್ಲಿ ಆರ್ ಕೈ ಚೌಕ ಕತ್ರಿಸಿ, ನನ್ನೊಟ್ಟಿಗೆ, "ಮೋಳು, ಇದರ ಬದಿನ ಒಂದೂವರೆ ಇಂಚ್ ಬುಟ್ಟ್ ಹತ್ತ್ ಎಳೆ ನೂಲು ತೆಗ್ದ್ ಕೊಡು"– ಎಂತ ಹೇಳ್ತ್. "ಯಾಕಕ್ಕಾ? ಇಷ್ಟೆಲ್ಲಾ ಕೈ ಚೌಕಗ ಯಾರಿಗೆ?"ನಾ ಕೇಳ್ದೆ. "ಇದ್ ಭಾಗೀರತಿನ ಮೊದ್ವೆಗೆ ಉಡ್ಗೊರೆ ಕೊಡಿಕೆ" ಎಂತ ಅಕ್ಕ ಹೇಳ್ತ್.

ನಾ ಕೈ ಚೌಕಗಳ ನಾಕ್ ಬದಿಂದ ಒಂದೂವರೆ ಇಂಚ್ ಜಾಗ ಬುಟ್ಟ್ ನೂಲು ಎಳೆಗಳ ಎಳ್ದ್ ತೆಗ್ದ್ ಅಕ್ಕಂಗೆ ಕೊಟ್ಟೆ. ಅದ್ ನೂಲು ತೆಗ್ದ ಜಾಗೆನ ಸಣ್ಣ ಸೂಜಿಲಿ, ಸಾಲಾಗಿ ಕಂಬ ಬಾವಾಂಗೆ ಹೊಲ್ದ್‌ದ್ ಬದಿನ ಕಟ್ಟಿತ್. ಆ ಮೇಲೆ ಎಲ್ಲಾ ಕೈ ಚೌಕಕ್ಕೆ ಹೂ, ಬೊಳ್ಳಿ ಇರುವ ಚಿತ್ರನ ಬುಡ್ಸಿ, ಬಣ್ಣದ ನೂಲ್‌ಂದ ಪೊರ್ಲುನ ಕಸೂತಿ ಹೊಲ್ದತ್. ಒಂದರ್‌ಂದ ಒಂದು ಪೊರ್ಲುನ ಕೈ ಚೌಕನ ನೋಡಿ ನಂಗೆ ಆಸೆ ಆತ್.

"ಅಕ್ಕ ಇದರ್‌ಂದ ಒಂದುನಂಗೆ ಕೊಡು" ಎಂತ ಸಣ್ಣಕ್ಕನ ಕೇಳ್ದೆ. ಆಗ ಅದ್, "ಬೇಡ. ಇದೆಲ್ಲಾ ಮೊದೊಳ್ಗೆಗೆ ಉಡ್ಗೊರೆ ಕೊಡಿಕೆ. ಅದರ ಮೊದ್ವೆ ಮುಗ್ಯಲಿ ಇದಕ್ಕಿಂತಳೂ ಪೊರ್ಲುನ ಕಸೂತಿ ಹಾಕಿ ನಿಂಗೆ ಮಾಡಿ ಕೊಟ್ಟನೆ"– ಎಂತ ಅಕ್ಕ ಹೇಳ್ತ್.

ಆಗ ನಾ ಸುಮ್ಮನಾದೆ. ಅಕ್ಕ ಭಾಗೀರಥಿಗೆ ಆರ್ ಕೈ ಚೌಕಗ, ಸ್ನೋ, ಪೌಡರ್ ಡೊಬ್ಬಿ, ಲಾಲ್ ಗಂಧ, ಕನ್ನಡಿ, ಬಾಚಣಿಗೆ, ಕಸೂತಿ ಹಾಕಿದ ಎರ್ಡ್ ತಲೆಮೊಟ್ಟೆ ಕವರ್‌ಗ ಇದರೆಲ್ಲಾ ಒಂದು ರಟ್ಟ್‌ನ ಪೆಟ್ಟಿಗೆಲಿ ಹಾಕಿ, ಅದ್ಕೆ ಬಣ್ಣದ ಕಾಗ್ದನ ಸುತ್ತಿ, ಅಂಟಿಸಿ, ಸಣ್ಣಕ್ಕನ ಹೆಸ್ರ್ ದಮಯಂತಿಂತ ಬರ್ದ್ 'ಒಲವಿನ ಗೆಳತಿಗೆ ಒಲವಿನ ಉಡುಗೊರೆ' ಎಂತಬರ್ತ್. ಮೊದ್ವೆದಿನ ನಾನೂ ಅಕ್ಕನೂ ಸಡ್ಗರಲಿ ಹೊರ್ಟೊ. ಅಕ್ಕ ಗುಲಾಬಿ ಬಣ್ಣದ ಜರಿ ಸೀರೆ, ಕೆಂಪು ಗುಳ್ಳೆ ಕೈ ರವ್ಕೆ ಹಾಕಿತ್. ಆಗನ ಕಾಲಲಿ ಕೈಗೆ ನೆರಿಗೆ ಇಸಿ, ರವ್ಕೆ ಹೊಲ್ಯತಿದ್ದೊ. ನಾವದರ ಗುಳ್ಳೆ ಕೈ ರವ್ಕೇಂತ ಹೇಳ್ತಿದ್ದೊ. ಮತ್ತೊಂದು ಗ್ಲಾಸ್ ಕೈನ ರವ್ಕೆ ಉಟ್ಟು. ಆ ರವ್ಕೆನ ಕೈ ಲೋಟದ ಆಕಾರಲಿ,

ಮೇಲೆ ಅಗಲ, ಕೆಳಗೆ ಲೋಟದ ಅಡಿಭಾಗದಾಂಗೆ ಹಂಞ ಸಪೂರ ಇರ್ತಿತ್ತ್. ಕಾಫಿ, ಚಾ ಕುಡ್ಯೊವ ಲೋಟಗಳ ನಾವು ಗ್ಲಾಸ್‌ಂತ ಹೇಳ್ತಿದ್ದೊ. ಸಣ್ಣಕ್ಕ ಕುತ್ತಿಗೆಗೆ ಮುತ್ತುನ ಎರ್ಡೆಳೆ ಸರ ಹಾಕಿಕಂಡೆತ್. ಕೆಬಿಗೆ ಮುತ್ತುನ ಓಲೆ, ನಕ್ಷತ್ರ ಆಕಾರಲಿದ್ದ ಲೋಲಾಕ್ ಹಾಕಿತ್. ಅಪ್ಪ ಅದರ ಕಾಸರಗೋಡ್‌ಲಿ ಮಾಡಿಸಿ ತಂದಿದ್ದೊ. ಆಗ ಚಿನ್ನಕ್ಕೆ ಪವನಿಗೆ 35 ರೂಪ್ಯಾ ಇತ್ತ್.

ನಾನೂ ಸಣ್ಣಕ್ಕನೂ ಮೊದುವೆ ಮನೆಗೆ ಬಂದೊ. ಜನ ಹೆಚ್ಚ್ ಇತ್ಲೆ. ಭಾಗೀರಥಿನ ಮನೆಲೇ ಮೊದ್ವೆ. ಹಕ್ಕಲೆನ ನೆಂಟ್ರ್‌ಗ ಮಾತ್ರಾ ಇದ್ದೊ. ಭಾಗೀರಥಿನ ಅವ್ವ, ಅಕ್ಕನ ಮೊದುಮಗ್ಳ ಕುದ್ದ ನೊಡುಕೋಣೆಗೆ ಕರ್ಕಂಡ್ ಹೋದೊ. ಅವರ ಮನೆ ಒಂದು ನೊಡುಕೋಣೆ ಮತ್ತೆ ಸುತ್ತೋಳೂ ಜಗಲಿ ಇದ್ದ ಮುಳಿ ಹುಲ್ಲುನ ಮನೆ ಆಗಿತ್ತ್. ಸೆಗಣಿ ಹಾಕಿದ ನೆಲ, ಬೀಜದೆಣ್ಣೆ ಕೊಟ್ಟ್ ಅರ್ದಿದ್ದೊ. ನೆಲ ಪಳ ಪಳ ಹೊಳ್ಯತಿತ್ತ್. ಮನೆ ಎದ್ರ್ ಸಣ್ಣ ಮೊದ್ವೆ ಮಂಟಪ ಮಾಡಿದ್ದೊ. ಮೊದೊಳ್ಗ್ ಕುದ್ದ ಕೋಣೆ ಕತ್ತಲೆ ಕೋಣೆ. ಮೊದೊಳ್ಗ್‌ನ ಹೊಸ ಬಿಳಿ ಧಾರೆ ಸೀರೆ ಉಡ್ಸಿ, ಹೂ ಮುಡ್ಸಿ, ಸಿಂಗಾರ ಮಾಡಿದ್ದೊ. ಅಕ್ಕನ ನೋಡಿ ಭಾಗೀರಥಿ ಗೋಳೋಂತ ಮೊರ್ಟತ್. ಅಕ್ಕನೂ ಅದರ ತೊಬ್ಬಿಕಂಡ್ ಮೊರ್ಟತ್. ಹಂಞ ಸಮಯ ಕಳ್ದ ಮೇಲೆ ಇಬ್ಬೊರು ಸಮಾಧಾನಕ್ಕೆ ಬಂದೊ. ಮತ್ತೆ ಪಿಸ ಪಿಸ ಮಾತಾಡಿಕೆ ಸುರು ಮಾಡ್ದೊ. ಮೂರ್ತ ಆಕಾಕನ ಮೊದೊಳ್ಗ್‌ನ ಅದರ ಸೋದರ ಮಾಂವ ಎತ್ತಿಕಂಡ್ ಹೋಗಿ ಧಾರೆ ಮಂಟಪಲಿ ಕುದ್ರಿಸಿದೊ. ಅವರ ಮೊದ್ವೆ ಕ್ರಮ ಬೇರೆ ತರ ಆಗಿತ್ತ್. ಮಂಟಪದ ಒಳಗೆ ಗಂಡ್ ಹೆಣ್ಣ್‌ನ ಎದ್ರ್ ಬದ್ರ್ ಕುದ್ರಿಸಿ ಬಟ್ರ್ ಮಂತ್ರ ಹೇಳಿ ತಾಳಿ ಕಟ್ಟಿಸಿದೊ. ಆ ಮೇಲೆ ಗೂಡೆಗೆ ಉಡ್ಗೊರೆ ಕೊಡಿಕೆ ಸುರುಮಾಡ್ದೊ. ಅಕ್ಕ ಎಲ್ಲರ್‌ಂದ ಮುಂದೆ ಹೋಗಿ, ಉಡ್ಗೊರೆ ಕೊಟ್ಟತ್. ಬಟ್ರ್ ಅದರ ಬಿಚ್ಚಿ, ಬೇರೆ ಬೇರೆ ಇಸಿ, ಪ್ರತಿಯೊಂದು ಸಾಮಾನ್‌ನ ಹೆಸ್ರ್ ಹೇಳಿ, ಅಕ್ಕಿ ಕಾಳ್ ಅದರ ಮೇಲೆ ಹಾಕಿ ಮೊದೊಳ್ಗ್‌ಗೆ ಅದರ ಕೊಟ್ಟೊ. ಎಲ್ಲರ ಎದ್ರ್ ಅದರ ಬಿಚ್ಚಿಕಾಕನ, ಅಕ್ಕಂಗೆ ನಾಚಿಕೆ ಆತ್. ಆ ಮೇಲೆ ನಾವು ಕಾಫಿ ಕುಡ್ದ್, ಅವ್ಲಕ್ಕಿ, ಬಾಳೆಹಣ್ಣ್, ಒಂದೊಂದ್ ಲಾಡ್ ತಿಂದ್ ಮನೆಗೆ ಬಂದೊ. ಊಟ ಇತ್ಲೆ. ನಂಗೆ ಭಾಗೀರಥಿನ ಗಂಡನ ನೋಡಿ ಕುಸಿ ಆತ್ಲೆ. ಅಂವ ಕಪ್ಪಾಗಿ, ಎತ್ತರ ದಪ್ಪ ಇದ್ದ್, ನೋಡಿಕನ ಜೋರ್‌ನಂವನಾಂಗೆ ಕಾಂಬತಿತ್ತ್. ಅಂವ ಪೋಲೀಸ್ ಗಡ. ಭಾಗೀರಥಿ ಬಾಳ ಪೊರ್ಲುನ ಗೂಡೆ. ಮೈ, ಕೈ ತುಂಬಿಕಂಡ್, ಗುಂಡು ಗುಂಡಾಗಿ ಬೆಳ್ಳಂಗೆ ಇತ್ತ್. ಅದ್ಕೆ ಮೊದ್ವೆ ಅಕನ ಹದ್ನಾರ್ ವೊರ್ಸ. ಅದರ ಗಂಡಂಗೆ ಇಪ್ಪತ್ತೈದು ವೊರ್ಸ ಗಡ. ಅದ್ ಗಂಡನ ಮನೆಗೆ ಹೋದ ಮೇಲೆ ಒಂದೆರ್ಡ್ ಸರ್ತಿ ಮಾತ್ರಾ ತೌರು ಮನೆಗೆ ಬಂದ್‌ದ್ ನಂಗೆ ಗೊತ್ತುಟ್ಟು. ಆಗ ಅಕ್ಕನೇ ಹೋಗಿ ಅದರ ಮಾತಾಡ್ಸಿಕಂಡ್ ಬಾತಿತ್ತ್. ಆ ಮೇಲೆ ಬಾತೇ ಇಲ್ಲೆ. ಅಲ್ಲಿಗೆ ಅದರ ಮತ್ತೆ ಅಕ್ಕನ ಜೋಸ್ತಿ ಮುಗ್ದತ್. ಅದರ ಅಪ್ಪ ಮತ್ತೆ ಅವ್ವ, ಅವಿದ್ದ ಜಾಗೆನ ಮಾರಿ ಬೇರೆ ಕಡೆ ಒಕ್ಕಲು ಹೋದೊ.

* * * * *

ಚುಕ್ಕಿ – 26

“ಭಜನೆ”

ಪ್ರತಿ ಶನಿವಾರ ಸುಂದರ ರಾಯರ ಮನೆನ ಇಜ್ಜೆಲಿಲಿ ಇದ್ದ ಸಣ್ಣ ಕೊಟಗೆಲಿ ಇರ್ಕ್ಕೆ ಏಳ್ ಗಂಟೆಂದ ಒಂಭತ್ತ್ ಗಂಟೆ ಮುಟ್ಟ, ರಾಮ ದೇವ್ರ ಪಟ ಇಸಿಕಂಡ್ ಭಜನೆ ಮಾಡ್ತಿದ್ದೊ. ಅಲ್ಲಿಗೆ ಸುತ್ತೊಳು ಇದ್ದ ಜನಂಗೆಲ್ಲಾ ಭಜನೆ ಪದ ಹಾಡಿಕೆ ಬಾತಿದ್ದೊ. ವೆಂಕಟ್ರಾಯರ್ ಅವರ ಮಂಜ ಗುಂಡೂ ರಾಯರ್, ಬಾಳ ಲಾಯ್ಕ್‌ಲಿ ಭಜನೆ ಹಾಡ್ ಹಾಡ್ತಿದ್ದೊ. ಬಾಳಮುಕ್ಕಿಲಿ ಇದ್ದ ಟೈಲರ್ ಆನಂದ, ಕುಶಾಲಪ್ಪ, ಎಲಿಮೆಂಟ್ರಿ ಶಾಲೆ ಹಕ್ಕಲೆ ಹೋಟ್ಲ್ ಇಸಿಕಂಡಿದ್ದ ಶಿವರಾಯರ್ ಮತ್ತೆ ನಂಗೆ ಗೊತ್ತಿಲ್ಲದ ಕೆಲವು ಜನಂಗೆಲ್ಲಾ ಬಂದ್ ಭಜನೆಗೆ ಹಾಜರಾಗ್ತಿದ್ದೊ. ವೆಂಕಟ್ರಾಯರ್ ಮತ್ತೆ ಅವರ ಮಂಜ ಗುಂಡು ರಾಯರ್ ಭಜನೆ ಪದ ಹೇಳಿಕಾಕನ, ಕೊಣ್ಕಂಡ್, ತಾಳ ಬೊಟ್ಟಿಕಂಡ್ ಕಾಲ್ದೀಪದ ಸುತ್ತೋಳೂ ತಿರ್ಗಿಕಂಡ್ ಹಾಡ್‌ದರ ನೋಡಿಕೆನೇ ಒಂಥು ಕುಸಿ ಆಗ್ತಿತ್ತ್. ಅವು ಭಕ್ತಿಂದ ಕೊಣ್ಕಂಡ್ ಪದ ಹೇಳಿಕಾಕನ ಅವ್ಕೆ ಹೊತ್ತ್ ಹೋದದೆ ಗೊತ್ತಾಗ್ತಿತ್ಲೆ. ಒಂದೊಂದು ಸಲ ನಾನೂ, ಅಕ್ಕನೂ ಭಜನೆಗೆ ಹೋಗ್ತಿದ್ದೊ. ಅಕ್ಕಂಗೆ ಜತೆಲಿ ಗಣಪತಿ ನಾಯಕರ ಮಗಳ್ ವಿಮಲ, ತಾರ ಬಾತಿದ್ದೊ. ನಂಗೆ ಅವರ ತಂಗೆ ರಮಾ ಜತೆ ಆಗ್ತಿತ್ತ್. ವೆಂಕಟ್ರಾಯರ ಮಕ್ಕ ಗುಲಾಬಿ, ಸುಗಂಧಿನೂ ಬಾತಿದ್ದೊ. ಭಜನೆ ಮುಗ್ದ ಮೇಲೆ ಅವ್ಲಕ್ಕಿ ಪಂಚಕಜ್ಜಾಯ ಹಂಚ್‌ತಿದ್ದೊ. ಕೆಲವು

ಮಕ್ಕ ಅದರ ಆಸೆಗೆ ಬಾತಿದ್ದೊ.

ವಾರಂದ ವಾರಕ್ಕೆ ಭಜನೆಗೆ ಬಾವ ಜನ ಸಂಖ್ಯೆ ಹೆಚ್ಚಾತ್. ಅಕೆರಿಗೆ ಸುಂದರ ರಾಯರ್, ಕೆಳಗೆನ ಪೇಟೆನ ನರಸಪ್ಪಯ್ಯರ ಜಾಗೆಲಿ [ಈಗ ಇರುವ ಶ್ರೀರಾಮ ಭಜನೆ ಮಂದಿರದ ಜಾಗೆಲಿ] ಒಂದು ಸಣ್ಣ ಮುಳಿ ಹುಲ್ಲುನ ಮಂದಿರ ಕಟ್ಟಿಸಿದೊ. ಭಜನೆ ಗಡ್ದ್‌ಲಿ ನಡ್ಯತಿತ್ತ್. ಒಂದೆರ್ಡ್ ವೊರ್ಸಲಿ ಲಾಯ್ಕ್‌ನ ಹಂಚ್ ಹಾಕಿದ ಮಂದಿರ ಕಟ್ಟಿಸಿದೊ. ಭಜನಾ ತಂಡ ಅಲ್ಲಿಗೆ ಹೋದ ಮೇಲೆ ಸುತ್ತು ಮುತ್ತ್‌ನ ಜನ ಬಾದು ಜಾಸ್ತಿ ಆತ್. ಕಾಣಿಕೆಗ ಕೂಡಾ ತುಂಬಾ ಬೀಳ್ತಿತ್ತ್. ಪ್ರತಿ ಶನಿವಾರ ಇರ್ಳ್ ಅಲ್ಲಿ ಭಜನೆ ನಡ್ಯತಿತ್ತ್. ಅದರ ಮೇಲ್ವಿಚಾರಣೆನ ಶಿವರಾಯರ್ ನೋಡ್ತಿದ್ದೊ. ಕಾಯರ್ತೋಡಿ ಗೋವಿಂದ ಭಟ್ರ್ ಅಲ್ಲಿ ಪೂಜೆ ಭಟ್ರ್ ಆದೊ. ನಾವೆಲ್ಲಾ ಪ್ರತಿ ಶನಿವಾರ ಭಜನೆಗೆ ಅಲ್ಲಿಗೆ ಹೋಗ್ತಿದ್ದೊ. ಒಂದೊಂದು ಶನಿವಾರ ಒಬ್ಬೊಬ್ಬರ ಲೆಕ್ಕಲಿ ಹರಿಕೆನ ಭಜನೆ ನಡ್ಯತಿತ್ತ್. ಅಪ್ಪ ವೊರ್ಸಕೊಮ್ಮೆ ಅವರ ಹೆಸ್ರ್‌ಲಿ ಅಲ್ಲಿ ಸತ್ಯನಾರಾಯಣ ಪೂಜೆ, ಭಜನೆನ ಮಾಡ್ಸ್‌ತಿದ್ದೊ. ಕೆಲವೊಮ್ಮೆ ಅಲ್ಲಿ ಹರಿಕತೆ ನಡ್ಯತಿತ್ತ್. ಪ್ರತಿ ಹರಿಕಥೆನ ನಾನೂ, ತಮ್ಮಂದರೂ ತಪ್ಪದೆ ನೋಡ್ತಿದ್ದೊ. ಹರಿಕತೆಂದಳೂ ಅದರ ಉಪಕಥೆ ನಾವ್ಗೆ ತುಂಬಾ ಇಷ್ಟ ಆಗ್ತಿತ್ತ್. ಹರಿಕಥೆ ನೋಡಿ ಮೊರ್ದಿನ, ನಾನೂ ತಮ್ಮಂದರೂ ಅವರ ಹಾಂಗೆ, ಅತ್ತಿಗೆನ ಸೀರೆನ ತಕಂಡ್ ಕಚ್ಚೆ ಹಾಕಿ ಉಟ್ಟ್ ಕುತ್ತಿಗೆಗೆ ಹೂ, ತೊಳ್ಸಿ ಕೊಡಿಗಳ ಸೇರ್ಸಿ ಮಾಡ್ದ ಮಾಲೆನ ಹಾಕಿ, ಹರಿಕಥೆ ಮಾಡಿಕಂಡ್ ಕೊಣ್ಯತಿದ್ದೊ.

ವೊರ್ಸಕ್ಕೊಮ್ಮೆ ಕಾರ್ತಿಕ ಏಕಾದಶಿ ದಿನ 'ಏಕಾಹಭಜನೆ'ನ ಸುಂದರ ರಾಯರ್‌ಮಾಡ್ಸ್‌ತಿದ್ದೊ. ಬೊಳ್ಪಿಗೆ ಆರ್ ಗಂಟೆಂದ ಮೊರ್ದಿನ ಬೊಳ್ಪಿಗೆ ಆರ್ ಗಂಟೆಗೆ ಮುಟ್ಟ, ಇರ್ಳಿಡೀ ಭಜನೆ ನಡ್ಯತಿತ್ತ್. ಸುಂದರ ರಾಯರ ಮನೆಂದ 'ಉಲುಪೆ' ತಕಂಡ್ ಭಜನೆ ತಂಡದೊವು ಭಜನೆ ಮಂದಿರಕ್ಕೆ ಮೆರವಣಿಗೆಲಿ ಹೋಗ್ತಿದ್ದೊ. ಬೇರೆ ಬೇರೆ ಹರಿವಾಣಲಿ ಸೇವಂತಿಗೆ, ಮಲ್ಲಿಗೆ, ಕುಂಕುಮ, ಮಾದಳ, ಬಾಳೆಹಣ್ಣ್, ಮುಸುಂಬಿ, ದ್ರಾಕ್ಷೆ, ಕಿತ್ತಳೆಹಣ್ಣ್, ಎಲ್ಲಾ ತುಂಬಿಸಿ ಇಸ್ತಿದ್ದೊ. ಹಂಡೆಲಿ ಪಂಚಕಜ್ಜಾಯ, ಹೆಡಗೆಲಿ ಲಾಡ್, ಕಡ್ಲೆ ಮಿಠಾಯಿ ಇರ್ತಿತ್ತ್. ಭಾರ ಇದ್ದದರ ಗಂಡ್‌ಗ ಹೊರ್ತಿದ್ದೊ. ಹಗ್‌ರ ಇದ್ದದರ ಗೂಡೆಗ, ಹೈದಂಗ ತಲೆಲಿ ಹೊತ್ತ್‌ಕಂಡ್ ಮೆರವಣಿಗೆಲಿ ಹೋಗ್ತಿದ್ದೊ. ಭಜನೆ ಮಂದಿರಂದ ಒಂದು ತಂಡ ಭಜನೆ ಹೇಳೋವು ಸುಂದರರಾಯರ ಮನೆಗೆ 'ಉಲುಪೆ' ತಕಂಡೋಕೆ ಬಾತಿದ್ದೊ. ಜನ ಎಲ್ಲಾ ಎರ್ಡ್ ಸಾಲ್‌ಲಿ ಅದರೆಲ್ಲಾ ಹೊತ್ತ್‌ಕಂಡ್ ಭಜನೆ ತಂಡದೊಟ್ಟಿಗೆ ಜೈಕಾರ ಹಾಕಂಡ್, ಭಜನೆ ಹೇಳಿಕಂಡ್ ಮೆರವಣಿಗೆಲಿ ಮಂದಿರಕ್ಕೆ ತಕಂಡೋಗ್ತಿದ್ದೊ. ದಾರಿಲಿ ಅಲ್ಲಲ್ಲಿ ಮನೆ ಅಂಗ್ಡಿಗಳ ಎದ್ರ್‌ಲಿ ನೊಡು ರಸ್ತೆಲಿ ಸ್ಟೂಲ್ ಇಸಿ, ಅದರ ಮೇಲೆ ದೀಪ ಹೋಸಿ ಇಸ್ತಿದ್ದೊ. ಭಜನೆ ತಂಡದೊವು ಅದಕ್ಕೆ ತಾಳ ಹಾಕಂಡ್ ಭಜನೆ ಹೇಳಿಕಂಡ್, ಸುತ್ತು ಬಾತಿದ್ದೊ. ಹೀಂಗೆ ಮೆರವಣಿಗೆ ಭಜನೆ ಮಂದಿರಕ್ಕೆ ಸಾಗ್ತಿತ್ತ್. ಆಗ ಗರ್ನಾಲ್,

ದುರುಸು, ಪಟಾಕಿ ಹೊಡ್ಸ್ತಿದ್ದೊ. ಉಲುಪೆ ತಕೊಂಡೋಕನ ನೋಡ್ದೇ ಒಂದು ಭಾರಿ ಕುಸಿ. ಮಾರ್ಗದ ಎರ್ಡ್ ಪುಡೆಲಿದ್ದ ಮನೆಗಳ್‌ಂದ ಜನಂಗ ಹೊರಗೆ ಬಂದ್ ಮೆರವಣಿಗೆ ನೋಡ್ತಿದ್ದೊ. ಬಣ್ಣ ಬಣ್ಣದ ಲಂಗ ಹಾಕಿದ ಗೂಡೆಗ ತಲೆಲಿ ಹರಿವಾಣಲಿ ಹೂ, ಪಿಂಗಾರ, ಬಾಳೆಹಣ್ಣ್, ಕುಂಕುಮನ ಹೊತ್ತ್‌ಕಂಡ್ ಬಾವ್ದರ, ಹೈದಂಗ ಭಜನೆ ಹೇಳಿಕಂಡ್ ಕುಣ್ಕಂಡ್ ಬಾವ್ದರ, ಉಳ್ದೋವೆಲ್ಲಾ ಅವರವರ ಕೈಲಾದ ಉಲುಪೆ ಸಾಮಾನ್‌ನ ಹೊತ್ತ್‌ಕಂಡ್ ಬಾವುದರ ನೋಡಿಕೆ ಎರ್ಡ್ ಕಣ್ಣ್ ಸಾಲ್ದ್. ಊರಿಗೆ ಊರೇ ಅಲ್ಲಿ ಸೇರ್ತಿತ್ತ್. ಸಣದಿರಿಕನ ನಾವೂ ಇದರ್ಲೆಲ್ಲಾ ಸೇರಿಕಂಬತಿದ್ದೊ.

ಮಧ್ಯಾಹ್ನ ಹನ್ನೆರ್ಡ್ ಗಂಟೆಗೆ ಹಿಂಬೊತ್ತ್ ಆರ್ ಗಂಟೆಗೆ ನಡಿರ್ಳ್ ಹನ್ನೆರ್ಡ್ ಗಂಟೆಗೆ ಮಹಾಮಂಗಳಾರತಿ ಮಾಡ್ತಿದ್ದೊ. ನಡಿರ್ಳ್ ಹನ್ನೆರ್ಡ್ ಗಂಟೆಗೆ ಪೂಜೆ ಆದ ಮೇಲೆ ಪ್ರಸಾದ ಹಂಚ್‌ತಿದ್ದೊ. ಕಡ್ಲೆ, ಮಿಠಾಯಿ, ಲಾಡ್, ತರತರದ ಹಣ್ಣ್‌ಗಳ ತೋಳೆಗ, ಅವ್ಲಕ್ಕಿ ಪಂಚಕಜ್ಜಾಯ, ಹೂ, ಕುಂಕುಮ, ಎಲ್ಲದರ ಬೇರೆ ಬೇರೆ ತಟ್ಟೆಲಿ ಹಾಕಿ ಸುಂದರ ರಾಯರ ಕಡೆನ ಜನಂಗ ಬಂದೋವ್ಕೆಲ್ಲಾ ಹಂಚ್‌ತಿದ್ದೊ. ತಾಳ, ಗಂಟೆ, ಜಾಗಟೆಗಳ ಸದ್ದ್ ಜೋರಾಕನ 'ರುಕ್ಮಿಣಿ' ಎಂಬ ಹೆಂಗ್ಸ್ ಥರಥರನೆ ನಡ್ಗಿಕಂಡ್ ಕೊಣ್ಯತಿತ್ತ್. ಎಲ್ಲೋವು ಅದ್ಕೆ "ದೇವ್ರು ಮೈಮೇಲೆ ಬಂದೊಳೊ, ದರ್ಸನ ಹಿಡ್ತ್" ಎಂತ ಹೇಳ್ತಿದ್ದೊ. ಅದ್ಕೆ ಕೊಣ್ದ್ ಕೊಣ್ದ್ ಸಾಕಾಕನ ಪೂಜೆ ಭಟ್ರ್ ಅದರ ಹಕ್ಕಲೆ ಮಂಗಳಾರತಿ ತಕಂಡೋಗಿ, ಅದ್ಕೆ ಮಂತ್ರಾಕ್ಷತೆ ಹಾಕಿ, ಅದರ ಮೈಮೇಲೆ ಕುಂಕುಮ ಎರ್ಚಿ ಹೋಗ್ತಿದ್ದೊ. ಅಷ್ಟಾಕನ ಅದರ ನಡ್ಗಟ ನಿಂತ್ ಅದ್ ಅಡ್ಡ ಬೀಳ್ತಿತ್ತ್. ಹಂಞ ಹೊತ್ತ್‌ನ ಮೇಲೆ ಅದ್ ಎಲ್ಲರ ಹಾಂಗೆ ಆಗ್ತಿತ್ತ್.

ಸುಂದರ ರಾಯರ ಎರಡ್ನೇ ಮಂಜ 'ಸೂರ್ಯ' ಎಂಬ ಹೈದ ಒಮ್ಮೆ ಅವನ ಜೋಸ್ತಿಗಳ ಸೇರ್ಸಿಕಂಡ್ ದೊಡ್ಡ ಒಂದು ವಿಮಾನನ ಮಾಡ್ತ್. ಅದರ ಬೆದ್ರ್‌ನ ಕಡ್ಡಿಂದ ಮಾಡಿ, ಬಣ್ಣದ ಕಾಗ್ದನ ಅದ್ಕೆ ಅಂಟಿಸಿ, ಅದರೊಳಗೆ ದೀಪ ಹೋಸಿ ಇಸಿ, ಸರಿಗೆಗಳ ಸಾಯಂದ ಮಾರ್ಗದ ಆಚೆ ಪುಡೆಂದ ಭಜನೆ ಮಂದಿರದ ಕಡೆ ಹಾರಿಕಂಡ್ ಬಾವ ಹಾಂಗೆ ವ್ಯವಸ್ಥೆ ಮಾಡ್ತ್. ಆ ಸರ್ತಿನ ಏಕಾಹ ಭಜನೆಲಿ ಎಲ್ಲೋವ್ಕ ಅದೊಂದು ಆಕರ್ಷಣೆನ ಸಂಗತಿ ಆಗಿತ್ತ್. ನಡಿರ್ಳ್ ಹನ್ನೆರ್ಡ್ ಗಂಟೆಗೆ ಮಹಾ ಮಂಗಳಾರತಿ ಆಕಾಕನ ಆ ಪುಡೆಂದ ಭಜನೆ ಮಂದಿರದ ಕಡೆಗೆ ಸರಿಗೆಗಳ ಸಾಯಂದ ವಿಮಾನ ಬಾವ್ದರ ನೋಡಿ, ಜನಂಗೆಲ್ಲಾ ಚಪ್ಪಾಳೆ ತಟ್ಟಿ, ಸಿಳ್ಳ್ ಹೊಡ್ದ್ ಸ್ವಾಗತ ಮಾಡ್ದೊ. ಇದರೆಲ್ಲಾ ನೋಡಿಕೆ ಆ ಸರ್ತಿ ಭಾರೀ ಜನ ಸೇರಿದ್ದೊ. 'ಸೂರ್ಯ' ಒಳ್ಳೆ ಕಲಾಗಾರ. ಶ್ರೀಮಂತರ ಮಂಜ ಆದರೂ ಎಲ್ಲರೊಟ್ಟಿಗೆ ಸೇರಿಕಂಡ್ ಕುಸಿ, ಕುಸಿಲಿ ಇರುವ ಸ್ನೇಹ ಜೀವಿ. ಅವಂಗೆ ಸ್ನೇಹಿತರ ಬಳಗ ದೊಡ್ಡದ್. ಒಮ್ಮೆ ನಮ್ಮ ಹೈಸ್ಕೂಲ್‌ಲಿ 'ಸ್ಕೂಲ್ ಡೇ'ಸಮಯಲಿ ಕಂದಾರಿ ವೇಷಹಾಕಿ, ಜಿಪ್ಸಿ ಡೇನ್ಸ್ ಮಾಡಿ, ಜನರ್‌ಂದ 'ಶಾಭಾಸ್' ಗಿಟ್ಟಿಸುಟ್ಟು. ಒಳ್ಳೇವ್ಕೆ ಆಯುಷ್ಯ ಕಮ್ಮಿ ಗಡ. ದೇವ್ರಿಗೆ ಒಳ್ಳೇವೇ ಬೇಕೋ ಏನೋ? ಸಣ್ಣ ಪ್ರಾಯಲೇ ಅಂವ ದೇವ್ರ ಪಾದ

ಸೇರ್ತ್. ನಾವೆಲ್ಲಾ ತುಂಬಾ ದುಃಖ ಪಟ್ಟೊ.

ನಾ ಪ್ರತಿ ವೊರ್ಸ ಪಾರೆ ಹೂನ ಕೊಯ್ದ್, ದಪ್ಪದ ಮಾಲೆ ಮಾಡಿ ಹಣ್ಣ್ ಕ್ಯಾ ಒಟ್ಟಿಗೆ ಆ ಮಾಲೆನನೂ ದೇವ್ರಿಗೆ ಕೊಡ್ತಿದ್ದೆ. ಆ ಮಾಲೆ ನಾಕಾರ್ ತಿಂಗ ಆದರೂ ಹಾಳಾಗ್ತಿತ್ಲೆ. ನಾ ಕೊಟ್ಟ ಮಾಲೆನ ಮಂದಿರದ ಒಳಗೆ, ಎದುರಿಗೆ ಇದ್ದ ಹನುಮಂತ ದೇವ್ರ ದೊಡ್ಡ ಪಟಕ್ಕೆ ಗೋವಿಂದ ಭಟ್ರ್ ಹಾಕ್‌ತಿದ್ದೊ. ನಾ ಆಗ ಅದರ ನೋಡಿ ಕುಸಿ ಪಡ್ತಿದ್ದೆ.

ಪ್ರತಿ ವೊರ್ಸ ಏಕಾಹ ಭಜನೆಲಿ ಗಂಡಸರ ತಂಡ, ಒಂದು ತಂಡದೊವು ಆದ ಮೇಲೆ ಇನ್ನೊಂದು ತಂಡದೊವು ಭಜನೆ ಪದ ಹೇಳ್ತಿದ್ದೊ. ಆದರೆ ಒಮ್ಮೆ ಸೀತಾರಾಮ ಮಾಸ್ಟ್ರ ಮಗಳ್ ಕುಸುಮಾಂತ ಅದರ ಹೆಸ್ರ್, ಅದರ ಮುಂದಾಳ್‌ತನಲಿ ಒಂದು ಗಂಟೆ ಭಜನೆ ಹೇಳುವ ಅವಕಾಶ ಗೂಡೆಗಳಿಗೆ ಸಿಕ್ಕಿತ್. ಕುಸುಮ ಬಾಳ ಲಾಯ್ಕ್‌ಲಿ ದೇವ್ರ ಪದ ಹಾಡ್ತಿತ್ತ್. ಅದ್ 'ಉಡುಪಿ ಕೃಷ್ಣ ಪೊಡವಿಗೊಡೆಯ'ಹಾಡ್‌ನ ಹಾಡಿ ಕಾಕನ ಅದರ ದನಿಗೆ ನಾವು ಮರ್‍ಳಾಗ್ತಿದ್ದೊ. ಅದರ ತಂಡಲಿ ಆ ವೊರ್ಸ ನಾನೂ ಭಜನೆ ಹಾಡ್ದೆ.

ನಡಿರ್‍ಳ್ ಹನ್ನೆರ್ಡ್ ಗಂಟೆಗೆ ಮಹಾಮಂಗಳಾರತಿ ಮಾಡಿ, ಪ್ರಸಾದ ಹಂಚಿದ ಮೇಲೆ ಹೆಚ್ಚಿನ ಜನಂಗ ಮನೆಗೆ ಹೋಗ್ತಿದ್ದೊ. ದೂರ ದೂರುನೊವು ಮಾತ್ರಾ ಬೊಳ್ಪುಗೆ ಮುಟ್ಟ ನಿಲ್ತಿದ್ದೊ. ನಮ್ಮ ಮನೆನವೂ ಮಹಾಪೂಜೆ ಆದ ಮೇಲೆ ನಿಲ್ತಿತ್ಲೆ. ಹಾಂಗಾಗಿ ನಾನೂ ಮನ್ಸಿಲ್ಲದ ಮನ್ಸಿಲಿ ಅವರೊಟ್ಟಿಗೆ ಮನೆಗೆ ಬಾತಿದ್ದೆ.

* * * * *

ಚುಕ್ಕೆ – 27

“ಯಕ್ಷಗಾನ”

ನಮ್ಮಪ್ಪಂಗೆ ಯಕ್ಷಗಾನದ ಹುಚ್ಚು. ಇರ್ಳ್ ಅವು ನಮ್ಮನ್ನೆಲ್ಲಾ ಕುದ್ರಿಸಿಕಂಡ್ ಯಕ್ಷಗಾನದ ಹಾಡ್‌ನ ಹಾಡ್ತಿದ್ದೊ. “ಚಿಕ್ಕ ಪ್ರಾಯದ ಬಾಲೆ ಚದುರೆ”–ಎಂತ ಹಾಡ್ತಿದ್ದೊ. “ಹಸ್ತಿನಾವತಿಗೆ ಯಾರೆಂದು ಕೇಳಿ ಬಲ್ಲಿರಯ್ಯಾ?” ಎಂತ ಪುರಾಣಿಕ ಪ್ರಸಂಗದ ಕೆಲವು ಮಾತ್‌ಗಳ ಹೇಳ್ತಿದ್ದೊ. ನಳದಮಯಂತಿ, ಸತ್ಯಹರಿಶ್ಚಂದ್ರ, ರಾಮಾಯಣ, ಮಹಾಭಾರತದ ಕತೆಗಳ ದಿನಾ ನಂಗೂ ನನ್ನ ತಮ್ಮಂದರಿಗೂ ಹೇಳ್ತಿದ್ದೊ. ಯಕ್ಷಗಾನ ಬಯಲಾಟ ಬಂದರೆ ನಮ್ಮ ಎಲ್ಲಾನರ್ೂ ಆಟ ನೋಡಿಕೆ ಕಳ್ಸ್‌ತಿದ್ದೊ. ಆಗನ ಕಾಲಲಿ ಆಟಗಳಿಗೆ ಟಿಕೇಟ್ ಇರ್ತಿತ್ಲೆ. ಯಾರಾದರೊಬ್ಬ ಊರ್‍ನ ದೊಡ್ಡ ವೊಂಯಿಂಸ ಆಡ್ಸ್‌ತಿದ್ದೊ. ನಾವೆಲ್ಲಾ ಮಕ್ಕ ರಂಗ ಸ್ಥಳದ ಎದ್ರ್ ಮೊಂದ್ರಿ ಹಾಕಿ ಕುದ್ರ್‌ತಿದ್ದೊ. ಸುಳ್ಯದ ಚೆನ್ನಕೇಶವ ದೇವಸ್ಥಾನದ ಹಕ್ಕಲೆ, ಇಲ್ಲರೆ ಬಾಳೆಮಕ್ಕಿ ಗದ್ದೆಲಿ ಬಯಲಾಟ ಆಡ್ಸ್‌ತಿದ್ದೊ. ಆಗನ ಕಾಲಲಿ ಬಡವರ್ ದೊಡ್ಡ ಶ್ರೀಮಂತರ್ ಎಂಬ ಬೇಧ ಇರ್ತಿತ್ಲೆ. ಎಲ್ಲೋವು ನೆಲಲೇ ಕುದ್ದ್‌ಕಂಡ್ ಆಟ ನೋಡ್ತಿದ್ದೊ. ದೇವಿ ಮಹಾತ್ಮೆ ಆಟ ಮೂರು ದಿನ ಆಗ್ತಿತ್ತ್. ಮೂರು ದಿನನೂ ಇರ್ಳ್ ಹೋಗಿ ಆಟ ನೋಡ್ದೇ ನಮ್ಮ ಕೆಲ್ಸ. ಹಿಂಬೋತ್ ರಂಗಸ್ಥಳಂದ ಚೆಂಡೆ ಸದ್ದ್ ಕೇಳ್ರೆ ಸಾಕ್. ನಮ್ಮ ಕಾಲ್‌ಗ ಕೊಣ್ಯತಿದ್ದೊ. ಸಂತೋಸಂದ

ಎದೆ ಬೊಡ್ಯತಿತ್ತ್. ರಾಮಾಯಣದ ರಾಮಪಟ್ಟಾಭಿಷೇಕ, ಸೀತಾಪಹರಣ, ಕಿಷ್ಕಿಂದಾ ಕಾಂಡ, ವಾಲಿ–ಸುಗ್ರೀವ ಕಾಳಗ, ಇಂದ್ರಜಿತು ಕಾಳಗ, ಲಂಕಾದಹನ, ಅಶ್ವಮೇಧ ಯಾಗ, ಲವ–ಕುಶ ಕಾಳಗ, ಮಹಾಭಾರತದ ದ್ರೌಪದೀಕಲ್ಯಾಣ, ಅಕ್ಷಯಾಂಬರ ವಿಲಾಸ, ಭೀಮಾರ್ಜುನ ಕಾಳಗ, ವಿರಾಟಪರ್ವ, ಕೀಚಕವಧೆ, ಪಾಂಡವ ವನವಾಸ– ಇವೆಲ್ಲಾ ಆಗ ನಾವ್ಗೆ ಬಾಯ್ಪಾಟ. ಪುರಾಣದ ಎಷ್ಟೋ ಕತೆಗಳ ನಾ ಯಕ್ಷಗಾನಂದಳೇ, ಕಲ್ತಳೆ. ದಿನ ಹೋದಾಂಗೆ, ಆಟಕ್ಕೆ ಟಿಕೆಟ್ ಇಸಿ ಆಡಿಕೆ ಸುರು ಮಾಡ್ದೊ. ನಾವು ಸಣ್ಣವಿರಿಕನ ದೊಂದಿ ಬೊಳ್ಪುಲಿ ಆಡ್ತಿದ್ದೊ. ಆ ಮೇಲೆ ಗೇಸ್ ಲೈಟ್ ಬಾತ್. ಅದರ್‌ಂದ ಮೇಲೆ ವಿದ್ಯುತ್ ದೀಪಗಳ್‌ಂದ ರಂಗಸ್ಥಳ ಝಗ ಝಗ ಹೊಳ್ಯಕೆ ಸುರಾತ್. ಆಟಲಿ ಪುರಾಣ ಕತೆಗ ಹೋಗಿ, ಹೊಸ ಹೊಸ ಕತೆಗಳ ಕಟ್ಟಿ, ಆಡಿಕೆ ಸುರು ಮಾಡ್ದೊ. ತುಳು ಭಾಷೆಲಿನೂ ಯಕ್ಷಗಾನ ಸುರಾತ್. ದೇವಪೂಂಜ ಪ್ರತಾಪ, ತುಳುನಾಡ ಸಿರಿ, ಬಪ್ಪನಾಡ್ ಕ್ಷೇತ್ರ ಮಹಾತ್ಮೆ, ಕೋರ್ದಬ್ಬು–ಬಾರಗ, ಕೋಟಿ– ಚೆನ್ನಯ ಸೊರ್ಕುದ ಸಿರಿಗೆಂಡೆ –ಎಂತ ಹೇಳುವ ಬೇರೆ ಬೇರೆ ತರದ ತುಳು ಯಕ್ಷಗಾನ ಪ್ರಸಂಗಗ ಸುರಾದೊ. ರತ್ನಾವತಿ ಕಲ್ಯಾಣ, ಮೀನಾಕ್ಷಿ ಕಲ್ಯಾಣ, ಅಶ್ವಮೇಧ, ಸತ್ಯ ಹರಿಶ್ಚಂದ್ರ ಇಂಥಾ ಹಳೆ ಪ್ರಸಂಗಗ ಮೂಲೆ ಪಾಲಾತ್.

ಧರ್ಮಸ್ಥಳ ಮೇಳ, ಕೂಡ್ಲ್‌ಮೇಳ, ಕಟೀಲ್ ಮೇಳ, ಇರಾ ಮೇಳ, ಕರ್ನಾಟಕ ಮೇಳಾಂತ ಹತ್ತಾರ್ ಯಕ್ಷಗಾನ ಮೇಳಗ ಇದ್ದೊ. ಆಗ ಹೆಣ್ಣ್ ವೇಸ ಹಾಕುದರ್ಲಿ ಅಳಿಕೆ ರಾಮಯ್ಯ ರೈ, ಪಾತಾಳ ವೆಂಕಟ್ರಮಣ ಭಟ್, ಕರ್ಗಲ್ಲ್ ಪುರುಶೋತ್ತಮ, ಕೊಳ್ಯೂರು ರಾಮಚಂದ್ರ, ಮಂಕುಡೆ ಸಂಜೀವ ಹೆಸ್ರ್ ಮಾಡ್ದೊವು ಆಗಿದ್ದೊ. ಸತ್ಯಹರಿಶ್ಚಂದ್ರ ಆಟಲಿ ಅಳಿಕೆ ರಾಮಯ್ಯ ರೈಗಳ 'ಚಂದ್ರಮತೀ ವಿಲಾಪ' ಪ್ರಸಂಗಲಿ, ಚಂದ್ರಮತಿ ವೇಸ ಹಾಕಿ ಅವು ಮಾತಾಡಿಕನ ನಾವೆಲ್ಲಾ ಮೊರ್ಡ್ತಿದ್ದೊ. ಭಸ್ಮಾಸುರ ಮೋಹಿನಿ ಆಟಲಿ ಕೊಳ್ಯೂರು ರಾಮಚಂದ್ರ ರಾಯರ 'ಮೋಹಿನಿ' ಪಾತ್ರಕ್ಕೆ ನಾವೆಲ್ಲಾ ಮೊರ್ಳಾಗ್ತಿದ್ದೊ. 'ಬ್ರಹ್ಮಕಪಾಲ' ಆಟಲಿ ಕುರಿಯ ವಿಠ್ಠಲ ಶಾಸ್ತ್ರಿಗಳ್ ಈಶ್ವರನ ಪಾತ್ರಲಿ ಹೆಸ್ರ್ ಮಾಡಿದ್ದೊ. ಅವು ಶ್ರೀಕೃಷ್ಣನ ಪಾತ್ರಲೂ ಮಿಂಚ್‌ತಿದ್ದೊ. ಅವ್ಕೆ ಭರತನಾಟ್ಯ ಗೊತ್ತಿತ್ತ್. ಅವರ ಶಿವತಾಂಡವ ನೃತ್ಯನ ಎಷ್ಟ್ ಸಲ ನೋಡ್ರೂ ಸಾಕಾಗ್ತಿತ್ಲೆ. ಅವರ್‌ಂದ ಮೇಲೆ ಯಕ್ಷಗಾನಲಿ ಭರತನಾಟ್ಯ ಪ್ರದರ್ಶನ ಸುರುಮಾಡ್ದೊ. ಹಳೆಕಾಲದ ಕೋಡಂಗಿ, ಕಟ್ಟೆ ವೇಷ ಮೂಲೆ ಸೇರ್ದೊ. ಬೋಳಾರ್ ನಾರಾಯಣ ಶೆಟ್ಟಿ, ಅಡ್ಕಸ್ಥಳ ನಾರಾಯಣ ಶೆಟ್ಟಿ–ಇವರ ಕೋಟಿ–ಚೆನ್ನಯ ಪಾತ್ರಗ ಆಗ ಎಲ್ಲರ ಮೆಚ್ಚಿಗೆ ಗಳ್ಸಿತ್. ಪುತ್ತೂರು ಕೃಷ್ಣ ಭಟ್ಟರ ಕಂಸನ ಪಾತ್ರಕ್ಕೆ ನಾವೆಲ್ಲಾ ಬೆರಗಾಗ್ತಿದ್ದೊ.

ಮಲ್ಪೆ ಶಂಕರ ನಾರಾಯಣ ಸಾಮುಗರ್ ಮತ್ತೆ ರಾಮದಾಸ ಸಾಮುಗರ್ ಮಾತಾಡ್ದರ್ಲಿ ಬಾಳ ಉಸಾರ್. ಅವು ಮಾತಾಡಿಕೆ ಸುರು ಮಾಡ್ರೆ ಗಂಟೆಕಟ್ಲೆ ಮಾತಾಡ್ತಿದ್ದೊ. ಸಬೆಲಿದ್ದೊವೆಲ್ಲಾ ಕಣ್ಣ್ ಬಾಯ್ ಬುಟ್ಟ್ ಕೇಳ್ತಿದ್ದೊ. ಜನ ಅವರ ದೊಡ್ಡ ಸಾಮುಗರ್, ಸಣ್ಣ ಸಾಮುಗರ್– ಎಂತ ಕರ್ಯೊತಿದ್ದೊ. ಒಮ್ಮೆ ಶ್ರೀಕೃಷ್ಣ

ಲೀಲೆ ಆಟಲಿ, ದೊಡ್ಡ ಸಾಮುಗರ್ 'ಅಕ್ರೂರ'ನ ಪಾತ್ರ ಮಾಡಿದ್ದೊ. ಕೃಷ್ಣನ ಮಥುರೆಗೆ ಕರ್ಕಂಡ್ ಬಾಕೆ, ಕಂಸ ಅಕ್ರೂರನ ನಂದಗೋಕುಲಕ್ಕೆ ಕಳ್ಸಿದೆ. ಅಕ್ರೂರ ಕೃಷ್ಣನ ದೊಡ್ಡ ಭಕ್ತ. ಕಂಸನ ದುಷ್ಟತನ ಅಂವಂಗೆ ಪೂರಾ ಗೊತ್ತುಟ್ಟು. ಅಕ್ರೂರಂಗೆ ಸಣ್ಣ ಹೈದ ಕೃಷ್ಣನ ಕರ್ಕಂಡ್ ಬಂದ್ ಕಂಸಂಗೆ ಒಪ್ಪುಸೊಕೊಲೆಂತ ತುಂಬಾ ಬೇಜಾರಾದೆ. ಆಗ ದಾರಿಲಿ ಯಮುನಾ ನದಿ ತೀರಲಿ, ಸಂಧ್ಯಾವಂದನೆ ಮಾಡುವ ಸಮಯಲಿ, ರಥಂದ ಇಳ್ದ್, ನೀರ್‌ಲಿ ನಿಂತ್ ಅಂವನ ಬೊಗಸೆಲಿ ತೆಗ್ದ್ ನೀರ್‌ಲಿ, ಅಂವಂಗೆ ಕೃಷ್ಣನ ದರ್ಶನ ಆಗಿ ಕಣ್ಣ್‌ಂದ ಬಳ ಬಳ ನೀರ್ ಸುರ್ಸಿಕಂಡ್ ಅಂವ ಮೊರ್ಪದೆ. ಬೇರೆ ಬೇರೆ ರೀತಿಲಿ ಕೃಷ್ಣನ ಸ್ತುತಿ ಮಾಡ್ದೆ. ಆಗ ದೊಡ್ಡ ಸಾಮುಗರ್ ಅಕ್ರೂರನ ಪಾತ್ರಲಿ, ಒಂದೂವರೆ ಗಂಟೆ ಮುಟ್ಟ ಕೃಷ್ಣನ ಹೊಗ್ಳಿಕಂಡ್ ಮೊರ್ದುದರ ನೋಡಿಕಾಕನ, ಸೇರ್ದ ಸಭೆವೆಲ್ಲಾ ಮೊಂತ್ರಕ್ಕೆ ಸಿಕ್ಕಿದ ಹಾವುನಾಂಗೆ ಸುಮ್ಮನೇ ಕೇಳಿಕೊಂಡಿದ್ದೊ. ಅವರ ಮಾತ್ ಅಷ್ಟ್ ಜನರ ಮೇಲೆ ಮೋಡಿ ಮಾಡ್ತಿತ್ತ್. ಒಮ್ಮೆ ದೊಡ್ಡ ಸಾಮುಗರ್ ಸುಳ್ಯದ ರಾಮಭಜನಾ ಮಂದಿರಲಿ ಹರಿಕತೆ ಮಾಡಿಕಾಕನ ತುಂಬಾ ಜನ ಸೇರಿದ್ದೊ. ಅವು ಹರಿಕತೆಲಿ ಎತ್ತಿದ ಕೈ. ಅವ್ಕೆ 'ಹರಿದಾಸರ್'ಂತ ಹೆಸ್ರುನೂ ಇತ್ತ್. ಸತ್ಯ ಹರಿಶ್ಚಂದ್ರ ಆಟಲಿ ದೊಡ್ಡ ಸಾಮುಗರ್ ಹರಿಶ್ಚಂದ್ರ ಆದರೆ ಸಣ್ಣ ಸಾಮುಗರ್ ವಿಶ್ವಾಮಿತ್ರ ಪಾತ್ರ ಮಾಡ್ತಿದ್ದೊ. ಅವರಿಬ್ಬೊರ ಮಾತ್‌ನ ಮೇಲಾಟನ ಕೇಳಿಕಾಕನ ಎಲ್ಲೋವೂ ಮೂಂಕ್‌ನ ಮೇಲೆ ಬೆರ್ಳ್ ಇಸ್ತಿದ್ದೊ. ಇವ್ಕಿಬ್ಬೊರಿಗೆ ಸರಿಸಮ ಆಗಿ ಮಾತ್‌ಲಿ ಸಭೆನ ಸಂತೋಸ ಪಡ್ಸ್ತಿದ್ದೊವು, ಇನ್ನೊಬ್ಬ ಯಕ್ಷಗಾನಲಿ ಇದ್ದೊ. ಅವೇ ಶೇಣಿ ಗೋಪಾಲಕೃಷ್ಣ ಭಟ್ ಇವೆಲ್ಲಾ ಯಕ್ಷಗಾನದ ಆಗನ ಕಾಲದ ಕಲಾವಿದರ್‌ಗ. ಈಗನ ಕಾಲ ಆಗ್ತಿದ್ದರೆ ಅವ್ಕೆಲ್ಲಾ ದಿನ ದಿನ ಸನ್ಮಾನ ಮಾಡ್ತಿದ್ದೊ. ಆಗನ ಕಾಲಲಿ ಸಭೆನ ಜನಂಗಳ ಕೇಕೆ, ಶಿಳ್ಳ್, ಚಪ್ಪಾಳೆಗಳೇ ಅವ್ಕೆ ಸನ್ಮಾನ.

ರಾಕ್ಷಸ ವೇಸಲಿ ಬಣ್ಣದ ಮಾಲಿಂಗಾಂತ ಹೇಳೊವು ಹೆಸ್ರ್‌ವಾಸಿ ಆಗಿದ್ದೊ. ಅವರ ರಾಕ್ಷಸವೇಸ ನೋಡ್ರೆ ಮಕ್ಕ ಹೆದ್ರಿ ಚಡ್ಡಿಲೇ ಉಚ್ಚೆ ಹೊಯ್ಯಕಂಬತಿದ್ದೊ. ಅವು ಜನರ ನೊಡುಂದ ದೊಡ್ಡ ಸೊರಲಿ ಆರ್ಭಟೆ ಹೊಡ್ಕಂಡ್ ಕೈಲಿದ್ದ ರಾಳ ಹೊಡಿನದೊಂದಿಗೆ ಹಾಕಂಡ್, ಅದರ್‌ಂದ ಎದ್ರುವ ಕಿಚ್ಚಿಗೆ ಕೈಕಾಲ್ ಆಡ್ಸಿಕಂಡ್ ಬೊಬ್ಬೆ ಹೊಡ್ಯಕಾಕನ ಮಕ್ಕ ಕುದ್ದಲ್ಲೇ ಉಚ್ಚೆ ಹೊಯ್ಕಂಡ್ ಅಯ್ಯೆಗಳ ಸೆರ್‌ಂಗ್‌ನ ಅಡಿಲಿ ಅಡ್‌ಂಗ್‌ತಿದ್ದೊ.

ಆ ಕಾಲಲಿ ಹಾಸೇಗಾರರ್‌ಂತೇಳ್ರೆ ಮಕ್ಕಳಿಗೆ ಬಾಳ ಕುಸಿ. ಅವು ನಿಲ್ಲಿಕನ, ಕುದ್ರಿಕನ, ಅವು ಮಾಡುವ ಚೇಷ್ಠೆಗಳ, ಅವರ ವೇಸಗಳ ನೋಡಿಕಾಕನ ಮಕ್ಕ ಎಲ್ಲಾ ಬಿದ್ದ್ ಬಿದ್ದ್ ನಗಾಡ್ತಿದ್ದೊ. ಗೋಪಾಲಕೃಷ್ಣ ಜೋಷಿ ಮತ್ತೆ ಮಿಜಾರ್ ಅಣ್ಣಪ್ಪ –ಇಂತಾ ಹಾಸ್ಯಗಾರರ ಪಾತ್ರಲಿ ಹೆಸ್ರ್ ಮಾಡ್ದೊವು. 'ಶಶಿಪ್ರಭಾ ಪರಿಣಯ' ಆಟಲಿ ವನಪಾಲಕಿ ಅಜ್ಜಿ ಆಗಿ ಜೋಷಿಯೊವು ಎಲ್ಲರ ನೆಗಾಡ್ಸಿ ನೆಗಾಡ್ಸಿ ಹಾಕ್ಯೊಳೊ. ಅವು ಸತ್ಯ ಹರಿಶ್ಚಂದ್ರ ಆಟಲಿ 'ನಕ್ಷತ್ರಿಕ' ನ ಪಾತ್ರ ಮಾಡ್ತಿದ್ದೊ. ಇಂಥಾ ಮುಂಡು

ವೇಸಲಿ ಜೋಷಿಯೊವು ಎತ್ತಿದ ಕೈ. ಅವರ ಹಾಂಗೆ ಮಿಜಾರ್ ಅಣ್ಣಪ್ಪನೂ ಬಪ್ಪ ಬ್ಯಾರಿನ ಪಾತ್ರ ಮಾಡಿ ಹೆಸ್ರ್ ಗಳ್ಸಿದೊವು.

ವೊರ್ಸಲಿ ಹತ್ತಾರ್ ಸಲ ನಾವು ಯಕ್ಷಗಾನ ಆಟ ನೋಡ್ತಿದ್ದೊ. ಇರ್ಳ್ ಇಡೀ ಆಟ ನೋಡಿ, ಹಗ್ಲ್ ನಾವೂ ಸೊಪ್ಪು ಕಟ್ಟಿಕಂಡ್ ಖಾಲಿ ಡೊಬ್ಬಿಗೆ ಬೊಡ್ಕಂಡ್, ಕಾಡ್ ಗುಲಾಬಿ ಬಲ್ಲೆಲಿದ್ದ ದಂಟ್‌ಗಳ ಕಡ್ದ್, ಗೀಸಿ, ಬಿಲ್ಲ್ ಬಾಣ ಮಾಡಿಕಂಡ್ ಆಡ್ತಿದ್ದೊ. ರಟ್ಟ್‌ನ ಕತ್ರಿಸಿ, ಬೇಗಟೆ ಅಂಟಿಸಿ ಕಿರೀಟ ಮಾಡ್ತಿದ್ದೊ. ಯಕ್ಷಗಾನ ಆಟದೊವು ನಮ್ಮ ಊರ್‌ಂದ ಹೋದರೂ, ಒಂದ್ ವಾರ ಮುಟ್ಟ ಆಟದ ಗುಂಗ್‌ಲೇ ನಾವು ಕೊಣ್ಯತಿದ್ದೊ. ನೆರೆಕರೆ ಮನೆ ಮಕ್ಕ ಸಾ ನಮ್ಮೊಟ್ಟಿಗೆ ಸೇರಿಕಂಡ್ ಕೋಲ ಕಟ್ಟಿಕಂಡ್ ಆಟ ಆಡ್ತಿದ್ದೊ. ಹಂಞ ಮಕ್ಕ ವೇಸ ಹಾಕಿಕಂಡ್ ಕುಣ್ದರೆ, ಹಂಞ ಮಕ್ಕ ನೆಲಲಿ ಕುದ್ದ್ ಕಂಡ್ ನಾವು ಕೊಣ್ಯವ ಆಟನ ನೋಡ್ತಿದ್ದೊ. ನಾವು ಹೊದ್ದೈವ ಒಲ್ಲಿಗಳ ಪರ್ದೆ ಹಾಂಗೆ ಹಿಡ್ಕಂಡ್ ಆಟದ ಒಡ್ಡೋಲಗ ನಡ್ಸ್‌ತಿದ್ದೊ. ಅಪ್ಪನ ಮುಂಡುನ ಕಚ್ಚೆ ಹಾಕಿಕಂಡ್ ಅವ್ವನ, ಅತ್ತಿಗೆನ ಸೀರೆನ ಉಟ್ಕಂಡ್ ಕೊಣ್ಯತಿದ್ದೊ. ನಾವು ಸಣ್ಣವಿರಿಕನ ಈ ತರದ ಆಟ ಆಡಿಕಂಡ್ ಕೊಣ್ಯೊದರ ನೆನ್ಸಿಕಾಕನ ಈಗಳೂ ಬಾಳ ಕುಸಿ ಆದೆ. ಈಗನ ಮಕ್ಕಳಿಗೆ ಇಂಥಾ ಆಟಗ ಎಲ್ಲಾ ಕನ್ಸ್‌ನ ಮಾತ್.

* * * * *

ಚುಕ್ಕೆ – 28

“ಸಣ್ಣದಿರಿಕನ ನಾವು ಕಳ್ದ ಮಳೆಗಾಲ”

ನಾವು ಸಣ್ಣದಿರಿಕನ ಮಳೆಗಾಲಲಿ ಒಂದೆರ್ಡ್ ತಿಂಗ ಬುಡದೆ ‘ಧೋ ಧೋಂ’ತ ದಿನ ಇಡೀ ಮಳೆ ಸುರ್ದ್ ಕಂಡೇ ಇರ್ತಿತ್ತ್. ವಾರಗಟ್ಲೆ ಜಡಿಮಳೆ ಬಾತಿತ್ತ್. ನಾವು ಅದರ ‘ಆರ್ದ್ರ ಮಳೆ’ಂತ ಕರ್‍ಯೊತಿದ್ದೊ. ಆ ಸಮಯಲಿ ಎಲ್ಲರ ಮನೆಲಿ ಮಕ್ಕಳಿಗೆ ಜೊರ ಬಾತಿತ್ತ್. ಆ ಜೊರನ ‘ಗಾಂಡ್ ಗುದ್ಗೆ’ ಜೊರೊಂತ ಕರ್‍ಯೊತಿದ್ದೊ. ಒಂದೆರ್ಡ್ ಮಳೆ ಬೀಳಿಕಾಕನ ಅಪ್ಪ ಕಾಡ್‌ಲಿದ್ದ ನಾರ್ ಬೇರ್‌ಗಳ ತಂದ್, ಗುದ್ದಿ ರಸ ತೆಗ್ದ್, ಅದರ ಕಣೆರ್ ರಸಕ್ಕೆ ಕೆಲವು ಅಂಗ್ಡಿ ಮೊದ್ದುಗಳ ಹೊಡಿ ಮಾಡಿ ಹಾಕಿ, ನಿಂಬೆ ಹುಳಿ ಹಿಂಡಿ, ಬೊಳ್ಗ್ಲ್‌ನ ಕೆಂಡಲಿ ಕೆಂಪು ಬಣ್ಣ ಬಾಕನ ಮುಟ್ಟ ಸುಟ್ಟ್‌ದ್ ಅದರ ಕಣೆರ್ ರಸಕ್ಕೆ ಹಾಕ್‌ತಿದ್ದೊ. ಆಗ ‘ಜೋಂಯ್’ಂತ ಸದ್ದ್ ಮಾಡಿ ಆ ರಸ ಬಿಸಿ ಆಗ್ತಿತ್ತ್. ಅದರ ನಾವ್ಗೆಲ್ಲೋವ್ಕೊ ಅರ್ಧ ಗ್ಲಾಸ್ ನಷ್ಟ ಕುಡ್ಸ್‌ತಿದ್ದೊ. ಕುಡ್ಯಕೆ ಹಟ ಮಾಡ್ದ ಮಕ್ಕಳ ಕಾಲ್‌ಲಿ ಮೊಲ್ಗಿಸಿ, ಅವರ ಕೈಗಳ ಎರ್ಡ್ ಕಾಲ್ ಸಂದ್‌ಲಿ ಅಮ್‌ಕಿ, ಮೂಂಕುನ ಹಿಡ್ದ್ ಮೊದ್ದ್ ಕುಡ್ಸ್‌ತಿದ್ದೊ. ಮೂಂಕು ಹಿಡ್ಯಕಾಕನ ನಾವು ಬಾಯಿ ಬುಡ್ತಿದ್ದೊ. ಮತ್ತೂ ಹಟ ಮಾಡಿರೆ, ಬಾಯಿಗೆ ಸೆಡೆ ಕಡೆನ ಹಾಕಿ ಕುಡ್ಸ್‌ತಿದ್ದೊ.

ಜಡಿ ಮಳೆ ಬೀಳಿಕಾಕನ ನಾವು ವಾರ ಇಡೀ ಸಾಲೆಗೆ ಹೋಗ್ತಿತ್ಲೆ. ಸಾಲೆಗೂ ಮಳೆಗಾಗಿ ರಜೆ ಕೊಡ್ತಿದ್ದೊ.

ಆಗ ಮಾರ್ಗದ ಎರ್ಡ್ ಪುಡೆಲಿದ್ದ ಕಣಿಗಳ್‌ಲಿ ಕೆಂಪು ಬಣ್ಣದ ನೀರ್ ತುಂಬಿ ಮಾರ್ಗದ ಮೇಲೆ ಹರ್‍ಯತಿತ್ತ್. ಆಗ ನಾವ್ಗೆ ಮಾರ್ಗ್ಗ ಯಾವ್ದು, ಕಣಿ ಯಾವ್ದು ಗೊತ್ತಾಗದೆ ಹೆದ್ರಿ ನೊಡು ರಸ್ತೆಲೇ ನಾವು ನಡ್ಯೊತಿದ್ದೊ. ಆಗನ ಕಾಲಲಿ ಬಸ್‌ಗ ಭಾರೀ ಕಮ್ಮಿ. ಒಮ್ಮೆ ಇಂಥಾ ಜಡೆಮಳೆ ಹೊತ್ತ್‌ಲಿ, ಸುಳ್ಯದ ಕೃಷ್ಣಾ ಸ್ಟೋರ್ ಹಕ್ಕಲೆ ಇದ್ದ ಸಂಕಲಿ [ಈಗ ಆ ಸಂಕ ಮುಚ್ಚಿ ಹೋಗುಟ್ಟು] ಮಳೆ ನೀರ್ ತುಂಬಾ ಭರಲಿ ಹರ್ದ್ ಹೋಕನ, ಸುಂದರ ರಾಯರ ಮಗಳ್ ಪದ್ಮಾವತಿ ಕಾಲ್ಜಾರಿ ಹರ್‍ಯವ ನೀರ್‌ಗೆ ಬಿದ್ದ್ ಕೊಚ್ಚಿಕೊಂಡ್ ಹೋತ್ ಆಗ ದಾರಿಲಿ ನಡ್ಯೊವು ಇದರ ನೋಡಿ ಓಡಿಹೋಗಿ ಆ ಗೂಡೆನ ನೀರ್‌ಂದ ಎತ್ತಿ ಹಾಕಿ ಬೊದ್ಕಿಸಿದೊ. ಈ ಸುದ್ದಿ ಕೇಳಿ ನಾವು ಮಕ್ಕ ಹೆದ್ರಿ ಗಡಗಡ ನಡ್ಗಿದೊ. ಮೊಗರ್ಪಣೆ ಸಂಕಲಿ ಆಗ ವರ್ಸೊಳೂ ಬೊಳ್ಳ ಬಾತಿತ್ತ್. ಸುತ್ತ್ ಮುತ್ತ್‌ನ ಮನೆಗ ಮುಳ್ಗ್‌ತಿದ್ದೊ. ಅಲ್ಲಿದ್ದ ಮಾಪ್ಳೆಗಳ ಪಳ್ಳಿನ ಸುತ್ತೊಳೂ ನೀರ್ ನಿಲ್ತಿತ್ತ್. ಆ ಸಮಯಲ್ಲಿ ಸುತ್ತು ಮುತ್ತ್‌ನ ಮನೆವೆಲ್ಲಾ ಮನೆ ಬುಟ್ಟ್ ಬಂಗ್ಲೆ ಗುಡ್ಡೆಗೆ ಹೋಗ್ತಿದ್ದೊ. ನೀರ್ ಇಳ್ದ ಮೇಲೆ ಬಾತಿದ್ದೊ. ಬೊಳ್ಳ ಬಾಕಾಕನ ಊರೊವೆಲ್ಲಾ ಗುಂಪು ಗುಂಪಾಗಿ ಬೊಳ್ಳ ನೋಡಿಕೆ ಹೋಗ್ತಿದ್ದೊ. ಆ ಬೊಳ್ಳ ನೋಡಿಕಾಕನ ನಾವ್ಗೆ ಹೆದ್ರಿಕೆ ಆಗ್ತಿತ್ತ್. ನೀರ್‌ಲಿ ದನಕರ್‌ಗ ಮನೆ ಸಾಮಾನ್‌ಗ, ತೆಂಗಿನ ಕಾಯೆಗ ತೇಲಿ ಹೋದರ ನಾ ನೋಡ್ಯಳೆ. ಕೆಲವು ಜನ ಆ ಕಾಯೆಗಳ ನೀರ್‌ಲಿ ಈಜಿಕಂಡ್ ಹೋಗಿ ಹಿಡ್ದ್ ತಾತಿದ್ದೊ.

ನಾವು ಸಣ್ಣವಿರಿಕನ ಸುಳ್ಯ ಮಲೇರಿಯಾ ಜ್ವರದ ಕೊಂಪೆ ಆಗಿತ್ತ್. ಪರವೂರ್‌ಂದ ಉದ್ಯೋಗ ಮಾಡೊವು ನಮ್ಮ ಊರಿಗೆ ಬಾಕೆ ಹೆದ್ರ್‌ತಿದ್ದೊ. ಇಲ್ಲಿಗೆ ಬಂದರೆ ಮಲೇರಿಯಾ ಜೊರ ಬಂದದೇಂತ ಅವ್ಕೆ ಹೆದ್ರಿಕೆ. ಎಷ್ಟೋ ಮಕ್ಕ ಮಲೇರಿಯಾಂದ ಹೊಟ್ಟೆ ಡುಮ್ಮಣ್ಣ ಆಗಿರ್ತಿದ್ದೊ. ಅವರ ಹೊಟ್ಟೆಲಿ ಮಲೇರಿಯಾ ಗೆಂಡೆ ಬೆಳ್ದುಟ್ಟೊಂತ ಹೇಳ್ತಿದ್ದೊ. ಆಗ ಅದ್ ಹೋಕೆ ಧರ್ಮಾಸ್ಪತ್ರೆಲಿ ಕ್ವಿನಿನ್ ಮಾತ್ರೆ ಕೊಡ್ತಿದ್ದೊ.

ಒಂದು ವೊರ್ಸ ನಾನೂ, ತಮ್ಮಂದರೂ ನೀರ್ ಕೋಟ್ಲೆ ಆಗಿ ಮೊಲ್ಗಿದೊ. ಆಗ ಮೈಮೇಲೆಲ್ಲಾ ನೀರ್ ತುಂಬಿದ ಗುಳ್ಳೆಗಳಾಂಗೆ ಬೊಕ್ಕೆಗ ಎದ್ರ್‌ತಿದ್ದೊ. ಆ ಹೊತ್ತ್‌ಲಿ ಜೋರ್‌ಲಿ ಜೊರನೂ ಬಾತಿತ್ತ್. ಆಗ ನಾವ್ಗೆ ತಣ್ಣಂಗೆ ಇದ್ದ ಗಂಜಿ ಮತ್ತೆ ನೆಂಜಿಕೆ ನೀರುಳ್ಳಿ ಕೊಡ್ತಿದ್ದೊ. ಮೈಲಿ ನೀರ್ ಕೋಟ್ಲೆ ಬಿದ್ದರೆ ಕಣ್ಣ್‌ಗೆ ಭಾರೀ ದೋಷಗಡ. ಕೆಲವ್ಕೆ ಕಣ್ಣೆ ಕಾಂಬತಿತ್ಲೆಗಡ ಕಡ್ಲೆನ ನೆನ್ಸಿ ಅದರ ನೀರ್, ಇಲ್ಲರೆ ಕೊತ್ತಂಬರಿ ನೆನ್ಸಿ ಅದರ ನೀರ್ ಕಣ್ಣಿಗೆ ಬುಡ್ತಿದ್ದೊ. ನಾಯಿಕಬ್ಬುನ ದಂಟ್‌ನ ಬೆಚ್ಚಂಗಿದ್ದ ಬೂದಿಲಿ ಬಾಡಿಸಿ, ಅದರ ಗುದ್ದಿ ತೆಗ್ದ ರಸ ಇದುನೂ ಕಣ್ಣಿಗೆ ಬುಡ್ತಿದ್ದೊ. ಇದರ್ಲಿ ಯಾವುದಾದರ್ ಒಂದರ ಕಣ್ಣಿಗೆ ಬುಟ್ಟರೆ ಸಾಕ್. ನಮ್ಮ ಅಂಗ್ಡಿಲಿ ಪನ್ನೀರ್ ಇದ್ದ ಕಾರಣ ನಾವ್ಗೆ ಅಪ್ಪ ಅದರ ಬುಡ್ತಿದ್ದೊ. ಪಳ್ಚಪ್ಪು, ಕಾಳಜೀರಿಗೆ, ಹಸಿ ಅರ್ಸಿಣ ಅರ್ದ್ ಅದರ ಬೆಚ್ಚಂಗೆ ಮಾಡಿ, ಮೈ, ಕೈ ಮೋರೆಗೆಲ್ಲಾ ಪೂಜ್‌ತಿದ್ದೊ. ಅದರ

ಹಂಞ ರಸನ ಹೊಟ್ಟೆಗೂ ಕೊಡ್ತಿದ್ದೊ. ಒಂದು ವಾರಲಿ ಗುಣ ಆಗ್ತಿತ್. ಏಳ್, ಇಲ್ಲರೆ ಒಂಭತ್ತನೇ ದಿನ ನಮ್ಮ ತಣ್ಣೀರ್, ಇಲ್ಲರೆ ಉಗುರು ಬೆಚ್ಚ ನೀರ್‌ಲಿ ಮೀಸ್‌ತಿದ್ದೊ.

ಮನೆಲಿ ಒಬ್ಬಂಗೆ ಮೈಲಿ ಬಿದ್ದರೆ ಸಾಕ್. ಅದ್ ಎಲ್ಲೋವ್ಕೂ ಹರ್‌ಂಡ್‌ತಿತ್. ಮನೆಲಿದ್ದವ್ಕೆಲ್ಲಾ ನೀರ್ ಕೋಟ್ಲೆ ಆಗಿ ಮುಗ್ದ ಮೇಲೆ, ಕ್ಯೊಸ್ಲಕ್ಕಿನ ನೀರ್‌ಪುಂಡಿ, ಕುಡು ಒಣ್ಗೆಲ್ ಮೀನ್ ಸಾರ್ ಮಾಡಿ ಹೊಟ್ಟೆ ತುಂಬಾ ತಿನ್ಸಿ, ನಾವು ತಿಂದ್ ಉಳ್ದದರ ಎಲೆಲಿ ಮೊಡ್ಚಿ, ಮೂರು ದಾರಿ ಕೂಡುವಲ್ಲಿ ತಕಂಡೋಗಿ ಇಟ್ಟ್ ಬಾತಿದ್ದೊ. ಒಟ್ಟಿಗೆ ಒಂದು ಕೋಲ್‌ಂತ್ರಿನೂ ಹೊತ್ತಿಸಿ ತಕೊಂಡೋಗ್ತಿದ್ದೊ. ಇದರ ಬಾರಣೆ ತೆಗ್ಯೂದೂಂತ ಹೇಳ್ತಿದ್ದೊ. ಈ ಕಾಯ್ಲೆಂದ ಎದ್ದ ಮೇಲೆ ನಾವ್ಗೆ ಹೊಟ್ಟೆ ಇಸುದು ಹೆಚ್ಚಾಗ್ತಿತ್. ಎಷ್ಟ್ ಉಂಡರೂ ಸಾಕಾಗ್ತಿತ್ಲೆ. ಮೈಲಿ ಒಂದು ಕಲೆನೂ ಉಳ್ಯದಾಂಗೆ ಈ ಮೊದ್ದ್‌ಲಿ ಗುಣ ಆಗ್ತಿತ್.

* * * * *

ಚುಕ್ಕೆ – 29

“ಹೆಬ್ಬಾವು ಪರ್ಸಂಗ”

'ಕಂಡೆಕ್ಟರ್ ಬಟ್ರ ಹಿತ್ಲ್‌ಲಿ ತುಂಬಾ ಗೋರಟೆ ಮುಗುರುಗ ಒಳೊಗಡ. ಕೊಯ್ಕಂಡ್ ಬಾ' – ಎಂತ ಸಣ್ಣಕ್ಕ ಹೇಳಿ, ಸಣ್ಣ ಬೆದ್ರ್‌ನ ಸೀಳ್‌ಂದ ಮಾಡ್ದ, ಹಿಡ್ಕಂಬಕೆ ಕೈ ಇದ್ದ ಹೂ ಕುಕ್ಕೆನ ನಂಗೆ ಕೊಟ್ಟತ್. ಆ ಹೂನ ಕುಕ್ಕೆಂತೇಳ್ರೆ ನಂಗೆ ತುಂಬಾ ಪ್ರೀತಿ. ಅದರ್ಲಿ ತುಂಬಾ ಹೂವುನ ಮುಗುರುಗಳ ಕೊಯ್ದ್‌ದ್ ಅಕ್ಕಂಗೆ ದಿನಾ ತಂದ್ ಕೊಡ್ತಿದ್ದೆ. ಮಳೆಗಾಲಲಿ ಕೊರಗರ್ ತೊಡ್ಟೆ, ಒನಲೆ, ಬೆಂಡ್ ಕುಕ್ಕೆ ಎಲ್ಲಾ ಮಾರಿಕಂಡ್ ಮನೆ ಮನೆ ಬಾತಿದ್ದೊ. ಒಮ್ಮೆ ಅವು ಬಾಕಾಕನ ಪೊರ್ಲುನ ಈ ಹೂವುನ ಬುಟ್ಟಿನ ತಂದಿದ್ದೊ. ಅದರ ಪೊರ್ಲುಗೆ ಸೋತ್ ಸಣ್ಣಕ್ಕ, ಅವ್ಕೆ ಒಂದ್ ಸೇರ್ ಭತ್ತ್ ಕೊಟ್ಟ್ ತಕಂಡತ್. ನಂಗೆ ಆ ಬುಟ್ಟಿ ತುಂಬಾ ಹೂ ಕೊಯ್ದುಂತೇಳ್ರೆ ಬಾಳ ಪ್ರೀತಿ. ನಾ ಅಕ್ಕ ಕೊಟ್ಟ ಹೂ ಬುಟ್ಟಿನ ಹಿಡ್ಕಂಡ್ ಮನೆ ಮುಂದೆನ ಅಂಗ್ಡಿಗೆ ಬಂದೆ. ನೋಡ್ನೆ, ರಸ್ತೆಲಿ ಜನಂಗೆಲ್ಲಾ ಬಿರಬಿರನೆ ನಡ್ಕಂಡ್ ಮೇಲೆನ ಪೇಟೆ ಕೆಲ್ಸಿಕಟ್ಟೆ ಕಡೆಗೆ ಓಡ್ತಿದ್ದೊ. ಆಗ ಈಗನ ಹಾಂಗೇ ಪೇಟೆಲಿ ಜನ ಸಂಚಾರ ಇರ್ತಿತ್ಲೆ. ಚೆನ್ನಕೇಶವ ದೇವರ ರಥೋತ್ಸವದ ದಿನ, ದೇವರ ಆ ಕಟ್ಟೆಲಿ ಕುದ್ರ್‌ಸ್‌ತಿದ್ದೊ. ಆ ಕಟ್ಟೆಗೆ ನಾವು ಸಣ್ಣದಿರಿಕನ ಜನಂಗೆಲ್ಲ “ಕೆಲ್ಸಿಕಟ್ಟೆ” ಎಂತ ಕರ್‍ಯತಿದ್ದೊ. ಅಲ್ಲಿಂದ ಮೇಲೆ ಹೋಕಾಕನ ಮಾಪ್ಳೆಗಳ ಪಳ್ಳಿ ಸಿಕ್ತಿತ್ತ್. ಅದರ ಪಕ್ಕಲಿ ಸುಬ್ರಾಯ ಸೆರೆಗಾರ'ರ ಹೋಟ್ಲ್, ಆ ಮೇಲೆ ಕಂಡ ಕುಂಞಯವರ ಮಾಳಿಗೆ ಮನೆ, ಅದರ ಪಕ್ಕಲಿ ತಿಮ್ಮಯ್ಯ ಸೆರೆಗಾರರ ಹೋಟ್ಲ್ ಸಿಕ್ತಿತ್ತ್. ಅದರ್‌ಂದ ಮುಂದೆ ಕೆಲವು ಮಾಪ್ಳೆಗಳ ಮನೆಗ ಇದ್ದೊ. ಆ ಮೇಲೆ ಸಿಕ್ಕುದೇ ಆಲೇಟಿಗೆ ಹೋಗುವ ಅಡ್ಡ ರಸ್ತೆ. ರಾಜ ರಸ್ತೆಲಿ ಮುಂದೆ ಹೋದರೆ ಸಿಕ್ಕುದು ಗಾರ್ಡ್ ಶೆಡ್ಡ್. ಅಲ್ಲಿಗೆ ಕಲ್ಲುಮುಟ್ಲ್‌ಂತಳೂ ಹೇಳ್ತಿದ್ದೊ. ಈಗ ಆ ಜಾಗೆಗೆಲ್ಲಾ ಗಾಂಧಿ ನಗರಾಂತ ಹೇಳ್ವೆ.

ಜನಂಗೆಲ್ಲಾ ಓಡ್ದರ ನೋಡಿ ಅಣ್ಣ ಅಂಗ್ಡಿಂದ ಓಡಿ ಹೋಗಿ, ಅವರ ವಿಚಾರ್ಸಿಕಂಡ್ ಬಾತ್, ಅಪ್ಪನೊಟ್ಟಿಗೆ,

“ಗಾರ್ಡ್ ಶೆಡ್ಡ್‌ಲಿ ಒಂದು ಹೆಬ್ಬಾವು ಆಡ್‌ನ ಮೊರಿನ ಅರ್ಧ ನುಂಗಿತ್ ಗಡ”– ಎಂತ ಹೇಳಿ, ಅಂವನೂ ಅಂಗ್ಡಿಂದ ಕೆಳಗೆ ಇಳ್ದ್. ರಸ್ತೆಲಿ ಓಡುವ ಜನಂಗಳೊಟ್ಟಿಗೆ ಸೇರಿಕಂಡತ್. ಅದರ ಕೇಳಿ ನನ್ನ ಮೈ 'ಜುಂ'ಂತ ಹೇಳಿ, ಮೈ ಅಕ್ಕಿ ಹೊಡ್ತ್. ನಾ ಒಳಗೆ ಓಡಿ ಹೋಗಿ, ಅಕ್ಕನ ಕೈಲಿ ಹೂನ ಕುಕ್ಕೆನ ಇಸಿ,

“ನಾ ಹೋದುಲ್ಲೆ, ಗಾರ್ಡ್‌ಶೆಡ್ಡ್‌ಲಿ ಹೆಬ್ಬಾವು ಆಡ್‌ನ ಮೊರಿನ ಅರ್ಧ ನುಂಗಿಟ್ಟು ಗಡ” – ಎಂತ ಹೇಳ್ದೆ. ಆಗ ಅಕ್ಕ.

“ಥೂ, ಹೆದ್ರ್ ಪುಕ್ಕಿ, ಅಲ್ಲಿ ಹೆಬ್ಬಾವು ಆಡ್‌ನ ಮೊರಿನ ನುಂಗಿರೆ, ಇಲ್ಲಿಗೆ

ಬಂದದೆನೋ?" — ಎಂತ ನಂಗೆ ಬೊಯ್ತ್. ಅಷ್ಟಾಕನ ಹೊರಗೆ ಜನರ ಬೊಬ್ಬೆ ಕೇಳ್ಸಿತ್. ನಾನೂ ಅಕ್ಕನೂ ಹೊರಗೆ ಓಡ್ದೊ. ನಮ್ಮೊಟ್ಟಿಗೆ ಅವ್ವ, ಅತ್ತಿಗೆ, ಮಕ್ಕ ಎಲ್ಲಾ ಹೊರಗೆ ಬಂದೊ. ನಾವು ನೋಡ್ವೇ, ರಸ್ತೆಲಿ ಹತ್ತಡಿ ಉದ್ದದ ದೊಡ್ಡ ಹೆಬ್ಬಾವುನ ಎಳ್ಕಂಡ್ ತಂದವೆ. ನಾವು ಕಣ್ಣ್ ಕಣ್ಣ್ ಬುಟ್ಟ್, ಅಂಗ್ಡಿನ ಬಾಗ್ಲಿಲಿ ನಿಂತ್ ನೋಡ್ದೊ. ಯಾರೊ ಅದ್ಕೆ ಗುಂಡು ಹೊಡ್ದೊಗಡ. ಆಗ ಅದ್ ಅರ್ಧ ನುಂಗಿದ ಆಡ್‌ನ ಮೊರಿನ ಹೊರಗೆ ಉಗುಳಿಕಂಡ್ ಸತ್ತತ್ ಗಡ. ಅದರ ಕುತ್ತಿಗೆಗೆ ತಂತಿ ಬಿಗ್ದ್, ಅದರ ರಸ್ತೆಲಿ ಮೆರೊಣ್ಣೆ ಮಾಡಿಕಂಡ್ ಎಳ್ದ್‌ಕಂಡ್ ಹೋಗಿ, ಈಗನ ಹಳೆ ಬಸ್ಸ್‌ಸ್ಟಾಂಡ್‌ಲಿದ್ದ ದೊಡ್ಡ ಮರದಡಿಲಿ ಹಾಕಿದೊ. ಜನಂಗೆಲ್ಲಾ ಬಂದ್ ನೋಡಿಕಂಡ್ ಹೋಗ್ತಿದ್ದೊ. ಅಷ್ಟಕಾನ ಕತ್ತಲಾತ್. ಅದ್ ಸತ್ತ್ ಹೋತೂಂತ ಜನಂಗೆಲ್ಲಾ ಅದರ ಅಲ್ಲೇ ಬುಟ್ಟ್ ಹೋದೊ.

ಆಗ ಹಳೆ ಬಸ್ಸ್ ಸ್ಟಾಂಡ್‌ಲಿ, ಒಂದು ಮುಳಿ ಹುಲ್ಲುನ ಕಟ್ಟೋಣಲಿ, ಮಾಪ್ಳೆಗಳ ಹೋಟ್ಲಿತ್. ಅಲ್ಲಿಂದ ಡೊಬ್ಬಿಲಿ ಗಂಜಿತೆಳಿ ಹೊತ್ತ್‌ಕಂಡ್ ಹೋಗ್ತಿದ್ದ. ಒಬ್ಬ ಮಾಪಿಳ್ಳೆ ಜನ ದಾರಿಲಿ ಯಾವುದೋ ಮರದ ಕೊರ್ಡ್‌ನ ಎಡ್ಗಿತ್. ಅಂವ ಕೈಲಿದ್ದ ಲೈಟ್‌ನ ಹಾಕಿ ನೋಡ್ದೆ, ಅದ್ ಅರೆ ಪೆಟ್ಟಾಗಿದ್ದ ಹೆಬ್ಬಾವು ತೆವಳಿಕಂಡ್ ರಸ್ತೆನ ದಾಟಿ, ಗಣಪತಿ ನ್ಯಾಕರ ಜಗಲಿಕಡೆ ಹೊರ್ಟುಟು. ಅದರ ಹಿಂದೆನ ಪುಡೆ ಮಾಪ್ಳೆಗೆ ತಾಂಗಿಟ್ಟು. ಆಗ ಅಂವ ಒಮ್ಮನೇ 'ಯಾ, ಅಲ್ಲಾ'ಂತ ಬೊಬ್ಬೆ ಹೊಡ್ತ್. ಅಂವನ ಬೊಬ್ಬೆ ಕೇಳಿ, ಅಕ್ಕ ಪಕ್ಕದ ಜನಂಗೆಲ್ಲಾ ಓಡಿ ಬಂದೊ. ನೋಡಿವೆ, ಹೆಬ್ಬಾವು ಗಣಪತಿ ನ್ಯಾಕರ (ರಮಾನ ಅಪ್ಪ) ತಿಣೆಗೆ ಹತ್ತ್‌ತಿತ್ತ್. ತಿಣೆಲಿ ಮೊಲ್ಗಿದ ಮನೆವು ಜನರ ಬೊಬ್ಬೆಗೆ ಎಚ್ಚರ ಆಗಿ, ಹಾವುನ ನೋಡಿ ಬೊಬ್ಬೆ ಹೊಡ್ದೊ. ಆ ಇರ್ಳ್ ಎಲ್ಲೋವು ಸೇರಿ, ಗೇಸ್ ಲೈಟ್‌ನ ಬೊಳ್ಪುಗೆ, ಆ ಹೆಬ್ಬಾವುನ ಮತ್ತೆ ಮರದ ಕೆಳಗೆ ಎಳ್ಕೊಂಡೋಗಿ, ಒಂದು ಡೊಬ್ಬಿ ಚಿಮಿಣಿ ಎಂಣೆ ಹೊಯ್ದ್‌ದ್, ಸಣ್ಣ ಸಣ್ಣ ಮರದ ಸೊಯ್ದೆಗಳ ಒಟ್ಟಿದ್ ಕಿಚ್ಚ್ ಕೊಟ್ಟೊ. ಆಗ ಆ ಹಾವು ಮೇಲೆ ಕೆಳಗೆ ಹಾರಿ, ಹಾರಿ ಸುರುಳಿ ಸುತ್ತಿಕಂಡ್ ಜೀವ ಬುಟ್ಟತ್. ನಾವೆಲ್ಲಾ ನಮ್ಮ ಮನೆ ಅಂಗ್ಡಿನ ಚಿಂಟೆಲಿ ನಿತ್ತ್‌ಕಂಡ್ ನೋಡ್ದೊ. ಜನಂಗಳ ಗುಂಪುಲಿ ಕತ್ತಲೆಲಿ ನಾವ್ಗೆ ಎಂತದ್ ಕಾಂಬತಿತ್ಲೆ. ಮೊರ್ದಿನ ಬೊಳ್ಪುಗೆ ಸಾಲೆಗೆ ಹೋಕನ ನೋಡ್ನೆ, ಬಸ್ಸ್‌ನ ಟಯರ್ ಹಾಂಗೆ ಸುತ್ತಿಕಂಡ್ ಬಿದ್ದ ಹೆಬ್ಬಾವುನ ಹೆಣ ಕಂಡತ್.

* * * * *

ಚುಕ್ಕಿ – 30

"ಹಣೆ ಬೊಟ್ಟು ಮತ್ತೆ ಕಣ್ಣ್ ಕಪ್ಪು"

ನಾವು ಸಣ್ಣದಿರಿಕನ ಈಗನ ಹಾಂಗೆ ಮುಂಡಕ್ಕೆ ಬೊಟ್ಟು ಇಸಿಕೆ, ಸ್ಟಿಕ್ಕರ್, ಬಿಂದಿ – ಇವೆಲ್ಲಾ ಇರ್ತಿತ್ಲೆ. ಪೊರ್ಸಕ್ಕೊಮ್ಮೆ ಜಾತ್ರೆ ಬಾಕಾಕನ ಅಲ್ಲಿ ಸಿಕ್ತಿದ್ದ ಕುಂಕುಮನ ತಕಂಡ್ ಕರ್ಡಿಗೆಲಿ ಹಾಕಿ ಜೋಪಾನಲಿ ಇಸಿಕೊಂಬೊತಿದ್ದೊ. ಜೇನ್ ಮಾಯಣನ ಕಾಯೆಣ್ಣೆಲಿ ಕೊದಿಸಿ, ಅದರ ತಣ್ಣೀರಿಗೆ ಹಾಕಿಕಾಕನ ಅದ್ ನೀರ್‌ಂದ ಮೇಲೆ ತೇಲ್ತಿತ್ತ್. ಅದರ ತೆಗ್ದ್ ಕರ್ಡಿಗೆಲಿ ತುಂಬಿಸಿ ಇಸ್ತಿದ್ದೊ. ಆ ಬೆಣ್ಣೆನಾಂಗೆ ಇದ್ದ ಅಂಟ್‌ನ ತೆಗ್ದ್, ಮುಂಡಕ್ಕೆ ಇಸಿ, ಅದರ ಮೇಲೆ ಕುಂಕುಮದ ಬೊಟ್ಟ್ ಇಸಿರೆ ಕುಂಕುಮ ಉದ್ರ್‌ತಿತ್ಲೆ. ಮೋರೆ ತೊಳ್ದರೂ ಸುಲಭಲಿ ಅದ್ ಹೋಗ್‌ತಿತ್ಲೆ. ನಾವು ಸಣ್ಣ ಮಕ್ಕ ಮುಂಡಕ್ಕೆ ಸಣ್ಣ ಸಣ್ಣ ಬೊಟ್ಟು ಇಸಿಕೆ ಬೇರೆ ಮಾರ್ಗ ಹುಡ್ಕ್ತಿದ್ದೊ. ಬೇಂಗದ ಮರಕ್ಕೆ ಕತ್ತಿಂದ ಕೊಡ್ಪಿರೆ ಅದರ್ಲಿ ಕೆಂಪುನ ರಸ ಒಸರ್ತಿತ್ತ್. ಅದರ ತೆಗ್ದ್‌ದ್ ಸಣ್ಣ ಸಣ್ಣ ಕುಪ್ಪಿಗಳ್‌ಲಿ ಹಾಕಿಸಿ, ಮ್ಯಾಪುನ ಕಡ್ಡಿಂದ ಅದರ್ಲಿ ಬೊಟ್ಟ್ ಇಸ್ತಿದ್ದೊ. ಅದ್ ದಿನ ಹೋದಾಂಗೆ ಅಂಟ್ ಅಂಟಾಗಿ ಕೆಂಪು ಬಣ್ಣಲಿ ಇರ್ತಿತ್ತ್. ಚಾಕೊಟೆ ಮರಕ್ಕೂ ಗಾಯ ಮಾಡಿ ಇಸಿರೆ ಅದರ್ಲಿ ಕಪ್ಪು, ಕೆಂಪು ಬಣ್ಣದ ಅಂಟ್‌ನ ರಸ ಬರ್ತಿತ್ತ್. ಅದರ್‌ಂದ ನಾವು ಹಣೆಗೆ ಬೊಟ್ಟು ಇಸ್ತಿದ್ದೊ. ಕರವೀರ ಹೂನ ದೈಯಿನ ಎಲೆಗಳ ತೆಗ್ಯಕಾಕನ ಆ ಎಲೆ ಬುಡಲಿ ಬೆಳ್ಳಂಗೆನ ಹಾಲ್‌ನಾಂಗೆ ಇದ್ದ (ಈಗನ ಪೆವಿಕಾಲ್ ಇದ್ದಾಂಗೆ) ಅಂಟ್ ಸಿಗ್ತಿತ್ತ್. ಅದರ್‌ಂದ ಮುಂಡಲಿ ಬೇಕಾದ ಆಕಾರಲಿ (ಸೂರ್ಯ, ಚಂದ್ರ)ಬರ್ದ್, ಅದರ ಮೇಲೆ ಕುಂಕುಮದ ಹೊಡಿ ಹರಿಂಡಿದ್ ಕೈ ಚೌಕಲಿ ಮೆಲ್ಲಂಗೆ ಅದರ ಮೇಲೆ ಒರ್ಸಿರೆ, ಹೆಚ್ಚಿನ ಹೊಡಿಗ ಬಿದ್ದ್, ಪೊರ್ಲುನ ಹಣೆ ಬೊಟ್ಟು ಆಗ್ತಿತ್ತ್. ಈಗ ಅದೆಲ್ಲಾ ಯಾರ್ ಮಾಡ್ವೆ? ದುಡ್ಡು ಕೊಟ್ಟರೆ ಬೇಕಾದ ಹಣೆ ಬೊಟ್ಟುಗ ಅಂಗ್ಡಿಲಿ ಸಿಕ್ಕುವೆ. ಆರೋಗ್ಯದ ದೃಷ್ಟಿಲಿ ನಮ್ಮ ಹಳೇ ಕಾಲದ ಬೊಟ್ಟುಗ ಒಳ್ಳೆದ್. ಇದರ್‌ಂದ ಯಾವ ಚರ್ಮರೋಗ ಬಾಕಿಲ್ಲೆ. ನನ್ನ ಸೋದರತ್ತಿಗೆಕ ಬಂದನಾರ್ ಬೀಜಗಳ ಕತ್ತಿನ ಮೇಲೆ ಉಜ್ಜಿ ಬಂದ ರಸದ

ಮೇಲೆ ಒಂದು ತುಂಡು ಮೊಸಿಂದ ಉಜ್ಜಿರೆ ಅದರ್ಲಿ ಕಪ್ಪು ಬಣ್ಣದ ಅಂಟ್ ಸಿಗ್ತಿತ್ತ್. ಅದರ್ಲಿ ಅವು ಹಣೆಗೆ ಬೊಟ್ಟು ಹಾಕಂಬತಿದ್ದೊ. ನನ್ನ ಕೆಲವು ಜೋಸ್ತಿ ಗೂಡೆಗಳ ಮನೆಲಿ, ಅಕ್ಕಿನ ಕರಿ ಆಕನ ಮುಟ್ಟ ಹೊರ್ದ್ ಹೊಡಿ ಮಾಡಿ, ಸಣ್ಣ ತುಂಡು ಬೆಲ್ಲ ಹಾಕಿ ಕುದಿಸಿ ಅಂಟ್ ಅಂಟಾದ ಬೊಟ್ಟ್‌ನ ಮಾಡ್ತಿದ್ದೊ. ಅದರ್ಲಿ ಹಣೆಗೆ ಬೊಟ್ಟು ಇಸ್ತಿದ್ದೊ.

ನನ್ನ ಅಕ್ಕಂದರ್ ಹೆರಿಗೆಗೆ ತವರು ಮನೆಗೆ ಬಾತಿದ್ದೊ. ಆಗ ನಮ್ಮ ಅವ್ವ ಪೆದ್ದೋಳ್ತಿಗೆ ಮತ್ತೆ ಕೂಸುಗೆ ಹಾಕಿಕೆ ಕಣ್ಣ್ ಕಪ್ಪು ಮನೆಲೇ ಮಾಡ್ತಿದ್ದೊ. ನಂದಿ ಬಟ್ಟಲ್ ಎಲೆ ಮತ್ತೆ ಹೂಗಳ ಒಟ್ಟಿಗೆ ನುಣ್ಣಂಗೆ ಅರ್ದ್‌ದ್ ಬಿಳಿ ಮಡಿ ತೆಳ್ಳಂಗೆನ ಹತ್ತಿ ಬಟ್ಟೆಲಿ ಅದರ ಮುಳುಂಗಿಸಿ ಒಂದು ದಿನ ಇಡೀ ಇಸ್ತಿದ್ದೊ. ಮೊರ್ದಿನ ಆ ಬಟ್ಟೆನ ಬಿಸ್ಲಿಲಿ ಒಣ್‌ಗಿಸಿ, ಅದರ್‌ಂದ ನೆಣೆ ಮಾಡ್ತಿದ್ದೊ. ಒಂದು ಮೊಣ್ಣ್‌ನ ಚಿಬುಳೆಲಿ ಆ ನೆಣೆಗಳ ಇಸಿ, ಅದರ್ಲಿ ತುಂಬಾ ಹರಳೆಣ್ಣೆ ಹಾಕಿ, ನೆಣೆನ ಹೊತ್ತ್‌ಸ್‌ತಿದ್ದೊ. ಆ ದೀಪನ ಪೆದ್ದೋಳ್ತಿ ಕೋಣೆನ ಮೂಲೆಲಿ ಇಸಿ, ಅದರ ಸುತ್ತ ಮೂರು ಕಾಯೆ ಹೆರ್ದ ಚಿಪ್ಪಿನ ಇಸಿ, ಆ ಚಿಪ್ಪಿಗಳ ಮೇಲೆ ಅಗಲದ ಕಂಚಿನ ಬಟ್ಲ್ ಇಸಿ, ಅದರ ತುಂಬಾ ನೀರ್ ಹೊಯ್ಯತಿದ್ದೊ. ಚಿಬುಳೆ ದೀಪ ಹೊತ್ತಿಕನ, ನೀರ್ ಕಾದ್, ಕೊದ್ದ್‌ದ್ ಆರ್ತಿತ್ತ್. ಬಟ್ಲ್‌ನ ಕೆಳ ಪುಡೆಲಿ ದೀಪದ ಹೊಗೆ ಹಿಡ್ದ್, ಕರಿ ಕಟ್ಟ್‌ತಿತ್ತ್. ಬಟ್ಲ್‌ನ ನೀರೆಲ್ಲಾ ಆರಿ ಹೋಕಾಕನ, ನಿಂಬೆ ಹುಳಿನಷ್ಟ್ ದೊಡ್ಡ ಕರಿ ಬಟ್ಲ್ ಅಡಿಲಿ ಸಿಕ್ಕ್‌ತಿತ್ತ್. ಒಂದು ಬಾಡಿಸಿದ ಬಾಳೆಲೆ ಮೇಲೆ ಆ ಬಟ್ಲ್‌ನ ಕಂಕಣೆ ಹಾಕಿ, ಬಟ್ಲ್‌ನ ಬೆನ್ನ್ ಮೇಲೆ ಇದ್ದ ಕರಿನ ಒಣ್ಗಿದ ಚಾಳೆ ಮಡ್ಲ್‌ನ ಕಡ್ಡಿಲಿ ಗೀಸಿ, ಬಾಳೆಲೆಗೆ ಹಾಕ್ತಿದ್ದೊ. ಅಂದೇ ಕಡ್ದ ಹಸ್‌ನ ಬೆಣ್ಣೆ ಮುದ್ದೆ ತೆಗ್ದ್, ಅದರ ಆ ಮೊಸಿ ಕರಿ ಹೊಡಿಲಿ ಬೆರ್ಸಿ, ಕಡ್ಡಿಲಿ ಪೊರ್ಲು ಕಲ್‌ಸ್ತಿದ್ದೊ. ಆ ಮೇಲೆ ಎಲೆಲಿ ಸಿಕ್ಕಿದ ಕಣ್ಣ್ ಕಪ್ಪುನ ಅದೇ ಬಾಳೆಲೆಲಿ ಮೊಡ್ಚಿ ಬಾಳೆ ಬೊಳ್ಳಿಂದ ಕಟ್ಟಿ ಮೊಣ್ಣ್‌ನ ಮಡ್ಕೆಲಿ ತುಂಬಿಸಿದ ತಣ್ಣೀರ್‌ಲಿ ಮೂರು ದಿನ ಹಾಕಿಸ್‌ತಿದ್ದೊ. ಆಗ ಅದರ್ಲಿದ್ದ ಚೂಡು ಎಲ್ಲಾ ಹೋಗಿ, ಅದ್ ತಂಪಾದ ಕಣ್ಣ್ ಕಪ್ಪು ಆಗ್ತಿತ್ತ್. ಅದರ ಒಂದು ಸಣ್ಣ ಕರ್ಡಿಗೆಲಿ ತುಂಬಿಸಿ ಇಸ್ತಿದ್ದೊ. ಇದರ ಪೆದ್ದೋಳ್ತಿಗೂ, ಹುಟ್ಟಿದ ಕೂಸುನ ಕಣ್ಣಿಗೂ ಹಾಕಿರೆ ಯಾವ ತರದ ತೊಂದರೆ ಇಲ್ಲದೆ ತಂಪಾದ ಕಣ್ಣ್ ಕಪ್ಪು. ಮಿಂದರೂ ಇದರ ಕಪ್ಪು ಕಣ್ಣ್‌ಂದ ಹೋಗ್ತಿತ್ಲೆ.

ಈ ಕಣ್ಣ್ ಕಪ್ಪುನ ಇನ್ನೊಂದು ತರಲೂ ಮಾಡಕ್. ಚಾಳೆ ಮಡ್ಲ್‌ನ ನಾಕ್ ಕಡ್ಡಿಗಳಿಗೆ, ಸಣ್ಣ ಬಿಳಿ ಹರ್ಳ್‌ನ ಒಣ್ಗಿದ ಬೀಜದ ಚೋಲಿ ತೆಗ್ದ್ ಅದರ ಬೆಂಡ್‌ನ ಆ ಕಡ್ಡಿಗಳಿಗೆ ಮಣಿ ಚುರ್ದಾಂಗೆ ಚುರಿಯೊಕು. ಆ ನಾಕ್ ಕಡ್ಡಿ ಉದ್ದಕ್ಕೂ ಚುರ್ದ, ಹರ್ಳ್‌ನ ಬೀಜದ ಕಡ್ಡಿಗಳ ದೀಪಕ್ಕೆ ಹಿಡ್ಯಕಾಕನ ಅದ್ ನೆಣೆನ ಹಾಂಗೆ ಹೊತ್ತಿದೆ. ಚಿಬುಳೆನ ಬದ್ಲ್‌ಗೆ ಈ ಹರ್ಳ್ ನೆಣೆಗಳ ಬಟ್ಲ್‌ನ ಅಡಿಗೆ ಹೊತ್ತಿಸಿ ಇಸಿ, ಅದರ್‌ಂದ ಸಿಕ್ಕಿದ ಮೊಸಿ ಕರಿಲಿನೂ ಕಣ್ಣ್ ಕಪ್ಪು ಮಾಡಿವೆ. ಆರೋಗ್ಯದ ದೃಷ್ಟಿಲಿ ನಾವು ಮನೆಲಿ ಮಾಡ್ದ ಕಣ್ಣ್ ಕಪ್ಪು ಕಣ್ಣಿಗೆ ತಂಪು, ಹೊಳ್ಪು ಕೊಟ್ಟದೆ. ನೀವೂ ಮಾಡಿ ನೋಡಿ.

ಚುಕ್ಕೆ – 31

"ನಮ್ಮ ಕಾಲದ ತೊಡು ತಿನ್ಸ್‌ಗ"

ಮಿಲ್ಕ್ ಬಾರ್, ಕ್ಯಾಡ್ ಬರಿ, ಚಾಕ್ಲೆಟ್‌ಗಳ ನಾವು ಸಣ್ಣದಿರಿಕನ ಕಣ್ಣ್‌ಲಿ ಕಂಡವೇ ಅಲ್ಲ. ಈಗನ ಮಕ್ಕಳ ಹಾಂಗೆ ಆಗ ನಾವ್ಗೆ ಇದರ ತಿಂದೂ ಗೊತ್ತಿತ್ಲೆ. ಆಗ ನಮ್ಮ ತೊಡು (ಆಸೆನ) ತಿನ್ಸ್‌ಗ ಕಾಡ್‌ಲಿ ಬೆಳ್ದ ನೆಲ್ಲಿಕಾಯಿ, ಮುಳ್ಕರೆಕಾಯಿ, ಕೇಪ್ಳ ಹಣ್ಣ್, ಜೋಂಪ್ಳೆ ಹಣ್ಣ್, ಮಾದ್ರಿ ಹಣ್ಣ್, ಮನೆಲಿ ಮಾಡ್ದ ಸಾಂತಾಣಿ, ಬಾಳಕ, ಬೇಸಿ ಒಣ್ಗಿಸಿದ ಗೆಣ್ಸ್‌ನ ತುಂಡು, ಹೊರ್ದ ಹುಣಿಸೆ ಬೀಜ, ಹಪ್ಪಳ, ಸಂಡಿಗೆ ಇದೆಲ್ಲಾ ನಾವ್ಗೆ ಪ್ರೀತಿನ ತಿನ್ಸ್‌ಗ.

ಹಳ್ಳಿಂದ ಸಾಲೆನ ಬಾತಿದ್ದ ಮಕ್ಕ, ಚೀಲಲಿ ಕಾಡ್ ಹಣ್ಣ್‌ಗಳ ತುಂಬಿಸಿಕಂಡ್ ಬಂದ್ ಎಲ್ಲೋವ್ಕು ಹಂಚ್‌ತಿದ್ದೊ. ಸುಳ್ಯಲಿ ಈಗ ಪುರಭವನ ಇರುವಲ್ಲಿ ನಮ್ಮ ಕಾಲಲಿ ದೊಡ್ಡ ಕಾಡ್. ಅಲ್ಲಿ ಆಗ ತುಂಬಾ ನೆಲ್ಲಿಕಾಯಿ ಮರಗ, ಮುಳ್ಕರೆ ಕಾಯಿ ಹಿಂಡ್ಳ್‌ಗ ಇರ್ತಿದ್ದೊ. ನಾವು ಶನಿವಾರ, ಐತ್ವಾರ, ಸಾಲೆಗೆ ರಜೆ ಇರಿಕಾಕನ ನೆರೆಕರೆ ಮಕ್ಕ ಎಲ್ಲಾ ಸೇರಿಕಂಡ್, ಅಲ್ಲಿಗೆ ಹೋಗಿ, ಚೀಲ ತುಂಬಾ ತುಂಬಿಸಿಕಂಡ್ ತಾತಿದ್ದೊ. ದೊಡ್ಡ ಮಕ್ಕ ಮರ ಹತ್ತಿ ಕಾಯಿ ಉದ್ರ್‌ಸಿರೆ, ಸಣ್ಣೊವು ಕೆಳಗೆ ಬಿದ್ದವರ ಹೆರ್ಕಿ ಚೀಲಕ್ಕೆ ತುಂಬಿಸ್ತಿದ್ದೊ. ನೆಲ್ಲಿಕಾಯಿ ತಿಂದ್ ನೀರ್ ಕುಡ್ದರೆ, ಆ ನೀರ್ ಸಿಂಯಿ, ಸಿಂಯಿ ಆಗಿ ಅಮೃತದಾಂಗೆ ನಾವ್ಗೆ ಆಗ್ತಿತ್ತ್. ಆ ದಿನಗಳ್‌ಲಿ, ಎಲ್ಲಾ ಮಕ್ಕಳ ದೌಡೆಲಿ

ಒಂದೊಂದು ನೆಲ್ಲಿಕಾಯಿ ಇದ್ದೇ ಇರ್ತಿತ್. ಅದರ ದವುಡೆಲಿ ಇಸಿಕಂಡ್, ನಿದಾನಲಿ ಅದರ ರಸನ ಚೀಂಪಿಕಂಡ್ ತಿಂಬೊದೂಂತೇಳ್ರೆ ನಾವ್ಗೆ ಬಾಳ ಕುಸಿ. ನೆಲ್ಲಿಕ್ಕಾಲಿ 'ಸಿ' ವಿಟಾಮಿನ್ ತುಂಬಾ ಇರ್ದರ್‌ಂದ ಅದ್ ನಮ್ಮ ಆರೋಗ್ಯಕ್ಕೆ ಒಳ್ಳೇದ್ ಆದರೆ ಆಗ ನಾವ್ಗೆ ಇದೆಲ್ಲಾ ಗೊತ್ತಿತ್ಲೆ. ಮುಳ್ಕರೆ ಕಾಯಿನ ನಾವು ಹಸಿ ಮತ್ತೆ ಉಪ್ಪು ಹಾಕಿ ಬೇಸಿ ತಿಂಬತಿದ್ದೊ. ಚೋಂಪ್ಪೆ ಹಣ್ಣ್ ಹುಳಿ ಹುಳಿಯಾಗಿ, ಹಂಞ ಸಿಂಯಿ, ಸಿಂಯಿ ಆಗಿ ಇದ್ದ್ ತಿಂಬಕೆ ರುಚಿ ಇರ್ತಿತ್. ಆದರೆ ಅದರ ಹೆಚ್ಚ್ ತಿಂಬಕೆ ದೊಡ್ಡೊವು ಬುಡ್ತಿತ್ಲೆ. ಅದ್ ತುಂಬಾ ಉಷ್ಣ ಗಡ ಉರ್ಚಿಕನ ನೆತ್ತೆರ್ ಹೋದೆ ಗಡ.

ಈಗನ ಸರ್ಕಾರಿ ಜ್ಯೂನಿಯರ್ ಕಾಲೇಜಿನ ಹಿಂದ್‌ಗಡೆ ಆಗ ದೊಡ್ಡ ಕಾಡ್. ಅಲ್ಲಿ ನಾವ್ಗೆ ಬೇಕಾದಷ್ಟ್ ಮಾದೆರಿ ಹಣ್ಣ್ ಸಿಕ್ಕ್‌ತಿತ್. ಕಿತ್ತಳೆ ಬಣ್ಣದ ನಿಂಬೆಹುಳಿಂದಲೂ ದೊಡ್ಡದಿದ್ದ ಹಣ್ಣ್‌ಗಳ ಒಳಗೆ ನೋಳಿ ನೋಳಿ ಆದ ಎರ್ಡ್ ಬೀಜಗ ಇದ್ದ್, ಅದರ ತಿಂಬಕೆ ತುಂಬಾ ರುಚಿ ಆಗ್ತಿತ್. ಅದರ ಬೀಜಗಳ ಜಗ್ದ್‌ಕಂಡ್ ತಿಂಬೊದೂಂತೇಳ್ರೆ ನಾವ್ಗೆ ಬಾಳ ಕುಸಿ. ಕೇಪುಳ ಹಣ್ಣ್‌ಗ ಸಾ ಅಲ್ಲಿ ತುಂಬಾ ಸಿಗ್ತಿತ್. ನಾವು ಮಂಗಗಳಾಂಗೆ, ಭೂಮಿ ತಾಯಿ ಕೊಟ್ಟ ಈ ಹಣ್ಣ್‌ಗಳ ತಿಂದ್‌ಕಂಡ್, ಬಾಯಿ ಚಪ್ಪಿಸಿಕಂಡ್ ಲಾಗ ಹಾಕ್ತಿದ್ದೊ. ಕುಂರ್ಜಿ ವೆಂಕಟ್ರಮಣ ಗೌಡರ ಪೇಟೆ ಮನೆನ ಹಿಂದೆ ಆ ಕಾಲಲಿ ಅಲ್ಲಿ ಬುಡಾನ್ ಸ್ಯಾಬರ ಮನೆ, ಪಕ್ಕೀರ ಸ್ಯಾಬರ ಮನೆ ಇತ್. ಅಲ್ಲಿ ಒಂದು ದೊಡ್ಡ ಪುನರ್ಪುಳಿ ಮರ ಇತ್. ಅದ್ ಹಣ್ಣಾಗಿ ಬೀಳಿಕಾಕನ, ನಮ್ಮ ಮಕ್ಕಳ ಸೈನ್ಯ ಅದರಡಿ ಹಾಜಿರ್. ತುಂಬಾ ಹುಳಿ ಮತ್ತೆ ಸಿಂಯಿಂದ ಕೂಡ್ದ ಕೆಂಪು ಕಪ್ಪು ಮಿಶ್ರ ಇದ್ದ ಬಣ್ಣದ ಆ ಹಣ್ಣ್ ತಿಂಬಕಾಕನ, ಅದರದೇ ಆದ ಬೇರೆ ತರದ ರುಚಿಲಿ ನಾವ್ಗೆ ಕುಸಿ ಸಿಗ್ತಿತ್. ಎಷ್ಟೋ ಸಲ ನಾವು ಪುನರ್ಪುಳಿ ಕಾಯಿಗಳ ತಿಂದ್, ಅದರ ಬೀಜದ ಮೇಲೆ ಇದ್ದ ಅಂಟ್‌ನ ಹಳದಿ ಬಣ್ಣ, ನಮ್ಮ ಹಲ್ಲಿಗೂ ಅಂಟ್‌ತಿತ್. ಅದರ ನೋಡಿ ಮನೆಲಿ ನಾವ್ಗೆ ಚೆಲ್ಯಾಣತ್ ಸಿಕ್ತಿತ್. ಆದರೆ ಇದರ್ಲಿ ಎಲ್ಲಾ ಕಾಡ್ ಮೊದ್ದ್‌ಗ ಇರುವ ಕಾರ್ಣ ನಾವ್ಗೆ ಆರೋಗ್ಯಕೆ ಯಾವ ತೊಂದರೆ ಬಾತಿಲ್ಲೆ. ಈಗನ ಹಾಂಗೆ ಯಾಗೋಳೋ ಮಾಡ್ದ ಪೆಕೆಟ್ ತಿನ್ಸ್‌ಗಳ ತಿಂದ್, ತಿಂದದ್ ವಿಸ ಆಕಾಕನ ಆಸ್ಪತ್ರೆಗೆ ಸೇರ್ದಾಂಗೆ ಆಗ ಆಗ್‌ತಿತ್ಲೆ.

* * * * *

ಚುಕ್ಕೆ – 32

“ನನ್ನ ಸುರುನ ತಿರ್ಗಾಟ”

ಮಾಲಯ ಅಮಾಸೆ ದಿನ ಸಮುದ್ರ ಸ್ನಾನ ಮಾಡ್ರೆ ಬಾಳ ಒಳ್ಳೆದ್‌ಂತ ನಾವೂರು ಜೋಯಿಸರ್ ಒಮ್ಮೆ ಅಪ್ಪನೊಟ್ಟಿಗೆ ಹೇಳ್ದೊ. ಅಪ್ಪ ಅಂಗ್ಡಿ ಬುಟ್ಟ್ ಎಲ್ಲಿಗೂ ಹೋಗ್ತಿತ್ಲೆ. ವ್ಯಾಪಾರನೇ ಅವರ ಜೀವ. ಒಂದು ದಿನ ಮನೆ ತೊಪ್ಪಿರೂ, ಎಲ್ಲಾ ಹಾಳಾದೇಂತ ಅವರ ನಂಬಿಕೆ. ಆ ವೊರ್ಸ ಅಣ್ಣನ ಮೊದ್ವೆ ಆಗಿತ್ತ್. ಹೊಸ ಮೊದು ಮಕ್ಕ ಮಹಾಲಯ ಅಮಾಸೆಗೆ ಸಮುದ್ರ ಸ್ನಾನ ಮಾಡಿಕೆ ಕಾಸರಗೋಡಿಗೆ ಹೋಗೀಂತ ಅಪ್ಪ ಅಣ್ಣನೊಟ್ಟಿಗೆ ಹೇಳ್ದೊ. ಅಣ್ಣಂಗೆ ಆಗ ಇಪ್ಪತ್ತೊಂದು ವೊರ್ಸ. ಅತ್ತಿಗೆಗೆ ಹದ್ನಾರ್ ವೊರ್ಸ. ಅವರಿಬ್ಬೊರನೆ ಕಳ್ಸಿಕೆ ಅಪ್ಪಂಗೆ ಹೆದ್ರಿಕೆ. ಅಣ್ಣ ಬರೇ ಪಾಪದ ಹೈದ. ಮತ್ತೆ ಹಂಞ ಪುಕ್ಕೆಲನು. ಹಾಂಗಾಗಿ ಅವ್ವ ಸಾ ಅವರೊಟ್ಟಿಗೆ ಹೋದೂಂತ ನಿಶ್ಚಯ ಆತ್. ಈ ವಿಷಯ ಯಾವ್ದೂ ನಂಗೆ ಗೊತ್ತಿತ್ಲೆ. ಅವ್ವ, ಅಣ್ಣ, ಅತ್ತಿಗೆ ಹೊರ್ಡಿಕಾಕನನೇ, ಅವು ಎಲ್ಲಿಗೋ ಹೋದವೇಂತ ನಂಗೆ ಗೊತ್ತಾತ್. ಆಗ ನಂಗೆ ಎಂಟ್ ವೊರ್ಸ. ಸಣ್ಣಕ್ಕಂಗೆ ಅವರೊಟ್ಟಿಗೆ ಹೋಕೆ ಆಸೆ ಇತ್ತ್. ಆದರೆ ಅವ್ವ ಬೇಡಾಂತ ಹೇಳ್ದೊ. ಅದಕ್ಕೆ ಅಕ್ಕಂಗೆ ಸಿಟ್ಟ್. ಅದ್ ನನ್ನ ಕರ್ದ್,

“ಮೋಳು, ನೀ ಅವರೊಟ್ಟಿಗೆ ಹೋಗು” ಎಂತ ಹೇಳ್ತ್.

“ಬೇಡಾಂತೇಳ್ರೆ”– ನಾ ಕೇಳ್ದೆ”.

“ಹಟ ಮಾಡ್”– ಅಕ್ಕ ಹೇಳ್ತ್”.

ನಂಗೆ ಅವರೊಟ್ಟಿಗೆ ಹೋಕೆ ಮನ್ಸಿತ್ಲೆ. ಮನೆಲಿದ್ದರೆ ತಮ್ಮಂದರೊಟ್ಟಿಗೆ ಆಟ ಆಡಕ್. ಅದೂ ಅಲ್ಲದೆ ನನ್ನ ಕೊತ್ತಿ ಇನ್ನ್ ಎರ್ಡ್ ದಿನಲಿ ಮೊರಿ ಇಸುದೂಂತ ಉಗ್ಗವ ಹೇಳ್ತಿದ್ದೊ. ನಂಗೆ ಕೊತ್ತಿನ ಬುಟ್ಟ್ ಹೋಕೆ ಮನ್ಸಿತ್ಲೆ. ಆದರೆ ಸಣ್ಣಕ್ಕನ ಒತ್ತಾಯ ನಂಗೆ ಹೆಚ್ಚಾತ್. ಅಕೆರಿಗೆ,

"ನಾನೂ ಬನ್ನೆ"– ಎಂತ ಅವ್ವನೊಟ್ಟಿಗೆ ಹೇಳ್ದೆ. ಅವ್ವ ನಂಗೆ ಜೋರ್ ಮಾಡ್ದೊ. 'ಬಾದು ಬೇಡಾ'ಂತೇಳ್ದೊ. ಅವೆಲ್ಲಾ ಸುಂದರ ರಾಯರ ಮನೆ ಹಕ್ಕಲೆ ನಿಂತ ಕಾಸ್ರಗೋಡ್ ಬಸ್ಸಿಗೆ ಹತ್ತಿಕೆ ಹೋದೊ. ಅಕ್ಕ ನನ್ನ ಕರ್ದ್,

" ನೀ ಯಾಕೆ ಹೋತ್ಲೆ? ಹೋಗು, ಹೋಗು, ಓಡಿ ಹೋಗಿ ಬಸ್ಸ್ ಹತ್ತ್. "– ಎಂತ ಒತ್ತಾಯ ಮಾಡ್ತ್. ನಂಗೆ ಅವ್ವನ ಹೆದ್ರಿಕೆ.

" ನಾ ಹೋದ್ಲೆ"–ಎಂತ ಹೇಳ್ದೆ.

" ನೀ ಹೋತ್ಲರೆ ಇನ್ನ್ ಮುಂದೆ ನಿನ್ನೊಟ್ಟಿಗೆ ನಾ ಮಾತಾಡ್ದುಲ್ಲೆ. "–ಎಂತ ಅಕ್ಕ ಬೊಯ್ದತ್.

ನಂಗೆ ಸಣ್ಣಕಾಂತೇಳ್ರೆ ತುಂಬಾ ಪ್ರೀತಿ. ದೊಡ್ಡಕ್ಕ ಗಂಡನ ಮನೆಗೆ ಹೋದ ಮೇಲೆ ನಾ ಸಣ್ಣಕ್ಕಂಗೇ ಅಂಟಿಕೊಂಡಿದ್ದೆ. ಅದ್ ಹೇಳ್ದಾಂಗೆ ಕೊಣ್ಯತಿದ್ದೆ. ಸಣ್ಣಕ್ಕ ಮಾತ್ ಬುಟ್ಟನೇಂತ ಹೇಳಿಕಾಕನ ನಂಗೆ ಉಪಾಯ ಇಲ್ಲೆ. ನಾ ಬಸ್ಸ್ ನಿಂತಲ್ಲಿಗೆ ಓಡ್ದೆ. ಬಸ್ಸ್ ಹೊರ್ಡಿಕೆ ತಯಾರಾಗಿತ್ತ್. ಓಡಿ ಹೋಗಿ ಬಸ್ಸ್ ಹತ್ತಿದೆ. ಬಸ್ಸ್ ಹೊರ್ಟತ್. ಬಸ್ಸ್‌ಲಿ ಹೆಚ್ಚ್ ಜನ ಇತ್ಲೆ. ನನ್ನ ನೋಡಿ ಅವ್ವ,

" ನೀ ಎಲ್ಲಿಗೆ?" –ಎಂದ್ ಜೋರ್ ಮಾಡ್ದೊ. ನಾ ಮನೆಗೆ ಹೋದರೆ ಅಕ್ಕ ಬೊಯ್ದದೆ. ಇಲ್ಲಿ ಅವ್ವ ಬೊಯ್ದವೆ. ನಾ ಹೆದ್ರಿ ಬಿಕ್ಕಿಡ್ಸಿ, ಬಿಕ್ಕಿಡ್ಸಿ ಮೊರ್ತೆ. ಅಣ್ಣ ಸಮಧಾನ ಮಾಡ್ತ್.

" ನಿಂಗೆ ಸರಿಯಾದ ಒಂದ್ ಲಂಗ ಹಾಕಿಕಂಡ್ ಬಾಕೆ ಆತ್ಲೆನೋ? ಈ ಕೋಲಲಿ ಬಂದಳಲೇ?"– ಎಂತ ಅವ್ವ ಜೋರ್ ಮಾಡ್ದೊ.

ನಾ ನನ್ನ ಅಂಗಿ ನೋಡಿಕಂಡೆ. 'ಹೌದಲ್ಲಾ?' ನಾ ಬರೇ ಚಿಮ್ಮಿಸ್ (ಒಳ ಅಂಗಿ) ಲೇ ಬಂದಿದ್ದೆ. ಅಕ್ಕ ಕೊಕ್ಕೆ ಸೂಜಿಲಿ ಹೊಲ್ದ ಲೇಸ್‌ನ ಆ ಚಿಮ್ಮಿಸ್‌ನ ಅಡಿಗೆ ಹೊಲ್ದಿದ್ದೊ. ನಂಗೆ ನಾಚಿಕೆ ಆತ್. ಅಷ್ಟಾಕನ ಬಸ್ ಎಲಿಮೆಂಟ್ರಿ ಸಾಲೆನ ದಾಟಿತ್ತ್. ಅಣ್ಣ ಹೇಳ್ತ್,

"ಚಿಂತೆ ಇಲ್ಲೆ. ಕಾಸ್ರಗೋಡಿಗೆ ಹೋದ ಕೂಡ್ಲೆ ಅದ್ಕೆ ಒಂದು ಜೊತೆ ಅಂಗಿ ಹೊಲ್ಯಕೆ ಹಾಕೊಮೊ"–ಎಂತ.

ನಂಗೆ ಬಾಳ ಕುಸಿ ಆತ್. ಹೊಸ ಅಂಗಿ ಸಿಕ್ಕಿದಲೇಂತ. ಮನ್ಸ್ ಇಲ್ಲದ ಮನ್ಸ್‌ಂದ ಅವ್ವ ಎಳ್ದ್ ನನ್ನ ಅವರ ಹಕ್ಕಲೆ ಕುದ್ರಿಸಿಕೊಂಡೊ.

ಕಾಸರಗೋಡಿಲಿ ಬಸ್ಸ್‌ಂದ ಇಳ್ದ್ ನಾವು ಕುಂಞರಾಮನ ಜವುಳಿ ಅಂಗಿಡಿಗೆ ಹೋದೊ. ಅಂವ ನಮ್ಮ ಬಾಳ ಪ್ರೀತಿಂದ ಬಾಕೆ ಮಾಡ್ತ್. ಸುರುಗೆ ಅಣ್ಣ ನಂಗೆ

ಒಂದು ನೀಲಿ ಬಣ್ಣದ, ಪಚ್ಚೆ, ಬಿಳಿ ಹೂಗ ಇದ್ದ ಬಟ್ಟೆಂದ ಎರ್ಡ್ ಲಂಗ ಮತ್ತೆ ರವ್ಕೆ ಹೊಲ್ಯಕೆ ಹಾಕಿತ್. ಹಿಂಬೊತ್ತು ಕೊಡೊಕೂಂತ ಹೇಳ್ತ್. ಅದ್ ಆಕನ ಮುಟ್ಟ ನಾ ಆ ಚಿಮ್ಮಿಸ್‌ಲೇ ಇರಕಾಗಿತ್ತ್. ಆಗನ ಕಾಲಲಿ ಉಡ್ಗೆ –ತೊಡ್ಗೆಗೆ ಅಷ್ಟ್ ಜನ ಮರ್‌ಳಾಗ್ತಿತ್ಲೆ. ಜನಂಗೆಲ್ಲಾ ತುಂಡು ಬಟ್ಟೆಲೇ ಜೀವನ ಸಾಗ್ಸ್‌ತಿದ್ದೊ. ಹಾಂಗಾಗಿ ನನ್ನ ಉಡ್ಗೆ ಬಗ್ಗೆ ತಲೆಕೆಡ್ಸಿಕಂಡತ್ಲೆ. ನಂಗೆನೂ ಆ ಬಗ್ಗೆ ಹೆಚ್ಚ್ ತಿಳುವಳಿಕೆ ಇತ್ತಿಲ್ಲೆ.

ಕುಂಞಿರಾಮ ಅವರ ಮನೆಗೆ ನಮ್ಮ ಕರ್ಕಂಡ್ ಹೋದೋ. ನಾವು ಅವರ ಮನೆ ಅಟ್ಟಲಿ ನಿಂತೊ. ಊಟ, ತಿಂಡಿ ಹೋಟ್ಲ್‌ಲಿ ಮಾಡ್ತಿದ್ದೊ. ಮೊಲ್ಗಿಕೆ ಮಾತ್ರಾ ಅವರ ಮನೆ ಅಟ್ಟ.

ಹಿಂಬೊತ್ ಆಕಾಕನ ಅಣ್ಣ ನಂಗೆ ಹೊಸ ಅಂಗಿ ತಂದ್ ಕೊಟ್ಟತ್. ನಾ ಅದರ ಹಾಕಿಕಂಡ್ ಕುಸಿಲಿ ಕೊಣ್ದೆ. ಕಾಸರಗೋಡ್‌ಲಿ ಕೊರಕೋಡು ಮಹಾದೇವಿ ದೇವಸ್ಥಾನ ಬಾಳ ಪ್ರಸಿದ್ಧ. ವೊರ್ಸಕ್ಕೊಮ್ಮೆ ಅಪ್ಪ, ಅವ್ವ ಸಣ್ಣಕ್ಕನ ಕರ್ಕಂಡ್ ನವರಾತ್ರಿ ಸಮಯಲಿ ಕೊರಕೋಡಿಗೆ ಹೋಗಿ ಪೂಜೆ ಮಾಡಿಸಿ, ಪ್ರಸಾದ ತಕಂಡ್ ಬಾತಿದ್ದೊ. ಅಲ್ಲಿನ ಪಾತ್ರಿಗ ಎಲ್ಲಾ ಅಪ್ಪ, ಅವ್ವಂಗೆ ಗುರ್ತದೋವು. ಕೊರಕೋಡು ದೇವಸ್ಥಾನದ ಪಕ್ಕಲೇ ನಾವು ನಿತ್ತ ಕುಂಞಿರಾಮನ ಮನೆ ಇತ್ತ್. ಹಿಂಬೊತ್ತ್ ನಾವೆಲ್ಲಾ ದೇವಸ್ಥಾನಕ್ಕೆ ಹೋಗಿ, ದೇವರ ದರ್ಸನ ಮಾಡಿ ಪುರ್ಸಾದ ತಕಂಡೊ. ಆಗ ಅಲ್ಲಿ ಇದ್ದ 'ಸಂಜೀವಣ್ಣ' ಎಂಬೊವು ಅವ್ವ, ಅಣ್ಣನ ಗುರ್ತ ಹಿಡ್ದ್, ಮಾತಾಡ್ಸಿದೊ. ಮೊರ್ದಿನ ಸಮುದ್ರ ಸ್ನಾನಕ್ಕೆ ಹೋದವೇಂತ ತಿಳ್ದ್, ಅವು ಸಾ ನಮ್ಮೊಟ್ಟಿಗೆ ಬನ್ನೇಂತ ಹೇಳ್ದೊ.

ಮೊರ್ದಿನ ಬೊಳ್ಪುಗೆನೇ ನಾವು ಸಂಜೀವಣ್ಣನೊಟ್ಟಿಗೆ ಕಾಸರಗೋಡ್‌ನ ಸಮುದ್ರ ತೀರಕ್ಕೆ ಹೋದೋ. ಆಗಳೇ ಸಮುದ್ರ ಸ್ನಾನ ಮಾಡಿಕೆ ಜನಂಗೆಲ್ಲಾ ಬಂದ್‌ಕಂಡಿದ್ದೊ. ಹೆಚ್ಚಿನೊವು ಗಂಡ ಹೆಣ್ಣ್‌ಗ, ಒಬ್ಬರ ಕೈ ಒಬ್ಬ ಹಿಡ್ಕಂಡ್ ಸಮುದ್ರಲಿ ಮೂರು ಮೂರು ಸಲ ಮುಳುಂಗಿದ್ ಎದ್ದ್ ಬಾತಿದ್ದೊ. ಮಕ್ಕಳೂ ಸಾಕಷ್ಟ್ ಇದ್ದೊ. ಮಕ್ಕ ಎಲ್ಲಾ ಪೊಯ್ಯೆಲಿ ಬಿದ್ದ್‌ಕಂಡಿದ್ದ ಶಂಖ, ಕಪ್ಪೆ ಚಿಪ್ಪುಗಳ ಹೆಕ್ಕಿಕಂಡ್ ಅತ್ತಿತ್ತ ಓಡಾಡ್ತಿದ್ದೊ. ಅವರ ನೋಡಿ ನಾನೂ ಕಪ್ಪೆ ಚಿಪ್ಪುಗಳ ಹೆಕ್ಕಿಕೆ ಸುರು ಮಾಡ್ದೆ. ಅದರ ನೋಡಿ ಅತ್ತಿಗೆ ಪೊರ್ಲು ಪೊರ್ಲುನ ಶಂಖ, ಚಿಪ್ಪುಗಳ ಹೆಕ್ಕಿ ಕೊಟ್ಟೊ. ನಾ ಅದರೆಲ್ಲಾ ನನ್ನ ಲಂಗದ ಜೋಬುಲಿ ಹಾಕಿಕಂಡೆ. ಆಗನ ಕಾಲಲಿ ನಾವ್ಗೆ ಲಂಗ ಹೊಲ್ಸಿಕಾಕನೆಲ್ಲಾ ಅದಕ್ಕೆ ಎರ್ಡ್ ಪುಡೆಲಿ ಜೋಬು ಇಸಿಕೆ ಅವ್ವ ದರ್ಜಿಗೆ ಹೇಳ್ತಿದ್ದೊ. ನಮ್ಮ ಕಡ್ಡಿ, ಪೆನ್ಸಿಲ್, ರಬ್ಬರ್, ಹುಣ್ಸೆ ಬೀಜ, ಮಾಯ್ನ ಮಿಡಿ ಎಲ್ಲಾ ಕಟಾಕುಟಿ ಸಾಮಾನ್‌ಗಳ ಈ ಜೋಬುಲಿ ತುಂಬಿಸಿಕೆ ಉಪಯೋಗ ಆಗ್ತಿತ್ತ್. ನಾ ಸಮುದ್ರನ ನೋಡ್ದೇ ಇದ್ ಸುರು. ಸಮುದ್ರನ ನೋಡಿ ನಂಗೆ ತುಂಬಾ ಹೆದ್ರಿಕೆ ಆತ್. ಪೊಯ್ಯೆಲಿ ಸಮುದ್ರದ ಹಕ್ಕಲೆ ನಡ್ಕಂಡ್ ಹೋಕನ ಅದರ ದೊಡ್ಡ ದೊಡ್ಡ ಅಲೆಗ ಹಾರಿಕಂಡ್ ಬಂದ್, ನಮ್ಮ ಕಾಲಡಿನ ಪೊಯ್ಯೆ ಜಾರಿಕಾಕನ ನಾವು ಅಲ್ಲೇ

ಬೀಳುವ ಹಾಂಗೆ ಆಗ್ತಿದ್ದೊ. ಸುರುಸುರುಗೆ ಹೆದ್ರಿಕೆ ಆದರೂ ಈ ಅಲೆಗಳ ಕಣ್ಣ ಮುಚ್ಚಾಲೆ ಆಟ, ನಾವ್ಗೆ ಒಂದು ತರದ ಕುಸಿ ಕೊಡ್ತಿತ್ತ್. ಆದರೆ ಸಮುದ್ರಕ್ಕೆ ಇಳ್ಯಕೆ ಹೆದ್ರಿಕೆ. ಅಣ್ಣ, ಅತ್ತಿಗೆ ಕೈ ಕೈ ಹಿಡ್ಕಂಡ್, ಸಮುದ್ರದ ತೆರೆಲಿ ಮೂರು ಮೂರು ಸಲ ಮುಳುಂಗಿದ್ ಮೇಲೆದ್ದ್ ಬಂದೊ. ಅವ್ವನೂ ಮೂರು ಸರ್ತಿ ಮುಳುಂಗಿ ಬಂದೊ. ನಾ ಆಗಾಗ ರಭಸಂದ ಅಟ್ಟಿಕಂಡ್ ಬಾವ ತೆರೆನ ಕಂಡ್ ಹೆದ್ರಿದೆ. ಸಮುದ್ರ ಸ್ನಾನ ಮಾಡಿಕೆ ಒಪ್ಪಿತೇ ಇಲ್ಲೆ. ಆಗ ಸಂಜೀವಣ್ಣ ನನ್ನ ಎತ್ತಿಕಂಡ್ ಹೋಗಿ, ಸಮುದ್ರಲಿ ಮುಳುಂಗಿಸಿದೊ. ನಾ ಕೈ ಕಾಲ್ ಬೊಡ್ದ್ ಕಿರ್ಚಿದೆ. ಅವ್ವ ದೂರಂದಳೇ,

"ಸಾಕ್, ಸಾಕ್, ಅದ್ಕೆ ಹೆದ್ರಿಕೆ ಆಗುಟು. ಕರ್ಕಂಡ್ ಬನ್ನಿ" ಎಂತ ಬೊಬ್ಬೆ ಹಾಕಿದೊ. ಸಂಜೀವಣ್ಣ ನನ್ನ ದಡಕ್ಕೆ ಎತ್ತಿಕಂಡ್ ಬಂದೊ. ನಾ ಹೆದ್ರಿಕಂಡ್ ನಡ್ಗ್‌ತಿದ್ದೆ. ನನ್ನ ಬಾಯಿ ಎಲ್ಲಾ ಉಪ್ಪು ನೀರ್‌ಂದ ಉಪ್ಪು ಉಪ್ಪಾಗಿತ್ತ್. ಅವ್ವ ನನ್ನ ತಲೆ ಮೈ ಒರ್ಸಿದೊ. ನಾವು ಕುಂಞಿಕಣ್ಣನ ಮನೆಗೆ ಬಂದ್ ಬಾಮಿ ನೀರ್‌ಲಿ ಮಿಂದ್ ಹೊಸ ಬಟ್ಟೆ ಹಾಕಿಕಂಡೊ. ಅಲ್ಲಿಂದ ನಾವು ದೇವಸ್ಥಾನಕ್ಕೆ ಹೋದೊ. ಬೊಳ್ಪುನ ಪೂಜೆ ಮುಗ್ಸಿ, ಮಂಗಳಾರತಿ ತಕಂಡ್, ಹೋಟ್ಲ್‌ಗೆ ಹೋಗಿ ಕಾಫಿ, ತಿಂಡಿ ಮುಗ್ಸಿ, ಕುಂಞಿರಾಮನ ಮನೆಗೆ ಬಂದೊ. ಅಲ್ಲಿಂದ ನಮ್ಮ ಬಟ್ಟೆ ಬರೆ ತಕಂಡ್ ರೇಲ್ವೇ ಸ್ಟೇಶನ್‌ಗೆ ಬಂದೊ. ನಂಗೂ ಅತ್ತಿಗೆಗೂ ಇದ್ ಸುರುನ ರೇಲ್ ಪ್ರಯಾಣ. ಹಾವುನಾಂಗೆ ಉದ್ದಕ್ಕೆ, ಒಂದರ ಹಿಂದೆ ಒಂದು ಬಂಡಿ ಸಿಕ್ಕಿಸಿಕಂಡ್, ಹೊಗೆ ಕಾರಿಕಂಡ್ ಬಂದ ರೈಲ್‌ನ ಆಶ್ಚರ್ಯಂದ ನಾ ಕಣ್ಣ್ ಕಣ್ಣ್ ಬುಟ್ಟ್‌ಕಂಡ್ ಸುರುನ ಸರ್ತಿ ನೋಡ್ದೆ. ಅಣ್ಣ ಹೋಗಿ ನಾವ್ಗೆಲ್ಲಾ ಮಂಗ್ಳೂರ್‌ಗೆ ಟಿಕೆಟ್ ತೆಗ್ದ್ ತಾತ್. ನಂಗೆ ಅರ್ಧ ಚಾರ್ಜ್ ಗಡ. ಅಣ್ಣ ಹೇಳ್ತ್. ನಾವೆಲ್ಲಾ ರೈಲ್ ಹತ್ತಿದೊ. ಒಳಗೆ ಹತ್ತಿ ಕುದ್ರುದೇ ತಡ ರೈಲ್ ಬಿಗಿಲ್ ಹಾಕಿಕಂಡ್ ಓಡಿಕೆ ಸುರು ಮಾಡ್ತ್. ಮರಗಿಡಗ ಸರಸರಾಂತ ಹಿಂದೆ ಹಿಂದೆ ಹೋದರ ರೈಲ್‌ಲಿ ಕುದ್ದ್‌ಕಂಡ್ ನೋಡಿ ನಂಗೆ ಭಾರೀ ಕುಸಿ ಆತ್. ರೈಲಿಲಿ ಕುದ್ದ್, ಕೇರಳದ ಚಾಳೆ ಮರಗಳ್ ಸಾಲ್ ಸಾಲ್ ಹಿಂದೆ ಹೋದರ ನೋಡಿ ಮೈಮರ್ತೆ. ಎಷ್ಟೋ ಕಡೆ ದೂರಲಿ ಉದ್ದ ಅಗಲಲಿ ಹರ್‌ಂಡಿಕೊಂಡಿದ್ದ ಸಮುದ್ರನ ನೋಡಿ ಬೆರಗಾದೆ. ಹೊರಗೆನ ನೋಟ ನೋಡಿಕಂಡಿದ್ದ ನಂಗೆ ಹೊತ್ತ್ ಹೋದದೇ ಗೊತ್ತಾತ್ಲೆ. ಮಂಗ್ಳೂರಿಗೆ ನಾವು ಮುಟ್ಟಿದ್ ಸಾ ನಂಗೆ ತಿಳ್ತ್‌ಲ್ಲೆ. ರೈಲ್ ನಿಲ್ಲಿಕಾಕನ ಅಣ್ಣ, "ಇದ್ ಮಂಗ್ಳೂರು ಇಳ್ಯನಿ" –ಎಂತ ಹೇಳ್ತ್.

ಮಂಗ್ಳೂರ್‌ಲಿ ರೈಲ್‌ಂದ ಇಳ್ದ ಕೂಡ್ಲೇ ಅಣ್ಣ ಒಂದು ಕುದುರೆ ಗಾಡಿ ತಾತ್. ನಾವೆಲ್ಲಾ ಅದರ ಹತ್ತಿ 'ಜಯ ಕೆಫೆ' ಹೋಟ್ಲ್‌ಗೆ ಬಂದೊ. ನಾವೆಲ್ಲಾ ರೂಮಿಗೆ ಹೋಗಿ, ಅಲ್ಲಿದ್ದ ಬಾತ್ ರೂಮಿಗೆ ಹೋಗಿ ಕೈ ಕಾಲ್ ತೊಳ್ಕಂಡ್ ಬಂದ್, ರೂಮಿಲಿದ್ದ ಹಾಸಿಗೆಲಿ ಬಿದ್ದ್‌ಕೊಂಡೊ. ಆಗ ಅಲ್ಲಿ ಬರೇ ರೂಮ್ ಮಾತ್ರಾ

ಬಾಡಿಗೆಗೆ ಸಿಕ್ತಿತ್ತ್. ಕಾಫಿ, ತಿಂಡಿ ಊಟಕ್ಕೆ ಬೇರೆ ಕಡೆ ಹೋಕಾಗಿತ್ತ್.

ಅವ್ವನೊಟ್ಟಿಗೆ ತಿರ್ಗಣಿ ಮುಚ್ಚಳ ಇದ್ದ ಹಿತ್ತಾಳೆನ ಒಂದು ಚೊಂಬು ಇತ್ತ್. ಅದರ ನಾವು ' ರೈಲ್ ಚೊಂಬು'ಂತ ಹೇಳ್ತಿದ್ದೊ. ಹೊರಗೆ ಹೋಕನ ಎಲ್ಲಾ ಅವ್ವ ಅದರ್ಲಿ ನೀರ್ ತುಂಬಿಸಿ ತಕಂಡೋಗ್ತಿದ್ದೊ. ಅಣ್ಣ ಆ ರೈಲ್ ಚೊಂಬು ತಕಂಡ್ ಹೊರಗೆ ಹೋತ್. ದೋಸೆ, ಉದ್ದ್‌ನ ಒಡೆ, ಚಟ್ನಿ, ಸಾಂಬಾರ್, ರೈಲ್ ಚೊಂಬುಲಿ ಕಾಫಿ ತುಂಬಿಸಿ ತಾತ್. ನಾವ್ಗೆಲ್ಲಾ ತುಂಬಾ ಹೊಟ್ಟೆ ಇಸ್ತಿತ್ತ್. ತಿಂಡಿ ತಿಂಬಕನ ನಾವ್ಗೆ ಆಗ ಅದ್ ತುಂಬಾ ರುಚಿ ಆಗಿ ಕಂಡತ್. ಆ ಮೇಲೆ ನಾವೆಲ್ಲಾ ಹಂಞ ಹೊತ್ತು ಮೊಲ್ಗಿದೊ.

ಮಧ್ಯಾಹ್ನ ನಮ್ಮ, ಅಣ್ಣ 'ವಿಶ್ವ ಭವನ'ಕ್ಕೆ ಊಟಕ್ಕೆ ಕರ್ಕಂಡೋತ್ ಅಲ್ಲಿ ನೆಲಲಿ ಹಾಸಿದ ಹುಲ್ಲು ಮೊಂದ್ರಿ ಮೇಲೆ ಕುದ್ದ್, ಬಾಳೆಲೆಲಿ ಉಂಡ್ ರೂಮಿಗೆ ಬಂದೊ.

ಹಿಂಬೊತ್ ಅಣ್ಣ ನಮ್ಮ ಸಿನೆಮಾಕ್ಕೆ ಕರ್ಕಂಡ್ ಹೋತ್. ಸೆಂಟ್ರಲ್ ಟಾಕೀಸ್‌ಲಿ ಯಾವುದೋ ಇಂಗ್ಲಿಷ್ ಸಿನೆಮಾ ಅದ್. ನಂಗೆ ಒಂದು ಚೂರು ಅರ್ಥ ಆತ್ಲೆ. ಅದ್ ಬಣ್ಣದ ಚಿತ್ರ ಅಲ್ಲ. ಕಪ್ಪು – ಬಿಳುಪು ಚಿತ್ರ. ಸಿನೆಮಾಂದ ಬಾಕಾಕನನೇ ಹೋಟ್ಲ್‌ಲಿ ಉಂಡ್ ನಾವು ರೂಮಿಗೆ ಬಂದೊ. ನಂಗೆ ಹೊಟ್ಟೆ ತುಂಬಿದರ್‌ಂದಳೋ ಏನೋ ಹೊಟ್ಟೆ ಬೇನೆ ಸುರು ಆತ್. ಅವ್ವನೊಟ್ಟಿಗೆ ಹೊಟ್ಟೆ ಬೇನೆ ಆದೇಂತ ಹೇಳ್ದೆ. ಅವ್ವ ಅಣ್ಣನ ಹಕ್ಕಲೆ ಹೇಳ್ದೊ. ಅಲ್ಲೇ ರೂಮ್‌ನ ಪಕ್ಕಲಿ ಸಾಲಾಗಿ ಎರ್ಡ್ ಸಣ್ಣ ಸಣ್ಣ ಪಾಯಿಖಾನೆ ಇತ್ತ್. ಒಂದರ್ಲಿ ಅಣ್ಣ ನನ್ನ ಕುದ್ರಿಸಿ, ಅಂವ ರೂಮಿಗೆ ಹೋತ್. ಅಲ್ಲಿ ಒಂದು ಮರದ ಸ್ಟೂಲ್‌ಲಿ ಉರುಂಟು ಕೊರ್ದ್‌ದ್, ಅದರ್ಲಿ ಒಂದು ಬಾಲ್ದಿ ಇಸಿದ್ದೊ. ಅದರ ಮೇಲೆ ನಾವು ಕುದ್‌ಕಂಡ್ ಪಾಯಿಖಾನೆ ಮಾಡೊಕು. ಆಗ 1947ನೇ ಇಸ್ವಿ. ಆ ಸಮಯಲ್ಲಿ ನಾವು ಸುಳ್ಯಲಿ ಗುಡ್ಡೆಗೆ ಹೋಗ್ತಿದ್ದೊ. ಆಗ ನಮ್ಮ ಮನೆ ಸುತ್ತು ಮುತ್ತು ಎಲ್ಲಾ ಕಾಡ್. ಈ ಹೊಸ ಪದ್ಧತಿ ನಂಗೆ ಅಭ್ಯಾಸ ಇಲ್ಲದ ಕಾರಣ ಏನ್ ಮಾಡ್ರೂ ನಂಗೆ ಪಾಯಿಖಾನೆ ಮಾಡಿಕೆ ಆತ್ಲೆ. ಹಂಞ ಹೊತ್ತ್ ಹಾಂಗೇ ಕುದ್ದೆ. ಅಷ್ಟಾಕನ ಏನೋ ಒಂದು ತರದ ಮೊರ್ದುವ ಹಾಂಗೆ ಇದ್ದ ದನಿ ಕೇಳ್ಸಿತ್. ಸುರು ಸುರುಗೆ ಸಣ್ಣ ದನಿಲಿ ಕೇಳ್ಸಿದ್ ಮತ್ತೆ ದೊಡ್ಡದಾಗಿ ಕಿರ್ಚಿತ್. ನಾ ಹೆದ್ರಿ, ' ಅಣ್ಣಾಂ'ತ ಬೊಬ್ಬೆ ಹೊಡ್ದೆ. ರೂಮ್‌ಲಿ ಇದ್ದ ಅಣ್ಣ, ಅತ್ತಿಗೆ, ಅವ್ವ ಎಲ್ಲೋವು ಓಡಿ ಬಂದೊ. ಅಣ್ಣ ಹೇಳ್ತ್,

"ಮೋಳು, ಹೆದ್ರ್ ಬಡ. ಅದ್ ಸೈರನ್, ಇಲ್ಲೆ ಪಕ್ಕಲಿ ಕಾರ್ಖಾನೆ ಉಟ್ಟು. ಅಲ್ಲಿಂದ ಬರುವ ಸದ್ದ್ ಅದ್ ನಾ ನಿಂಗೆ ಮುಂದೆನೇ ಹೇಳಕಾಗಿತ್ತ್."– ಎಂತ ಹೇಳಿ, ನನ್ನ ಬಂದ್ ಹಿಡ್ಕಂಡತ್. ಎಲ್ಲೋವೂ ನಂಗೆ ಸಮಾಧಾನ ಮಾಡ್ದೊ. ನಮ್ಮ ರೂಮ್‌ನ ಪಕ್ಕದ ರೂಮಿಲಿ ಇದ್ದ ಹೆಂಗ್‌ಸ್ ಒಂದು ಆ ಗಲಾಟೆಗೆ ಬಂದತ್. ಅದ್‌ನೂ ನನ್ನ ಸಮಾಧಾನ ಮಾಡ್ತ್. ಹೆದ್ರಿಕಂಡ ನನ್ನ ಹೊಟ್ಟೆ ಬೇನೆ,

ನಂಗೆ ಗೊತ್ತಿಲ್ಲದೇನೇ ಮಾಯ ಆತ್.

ಮೊರ್ದಿನ ಅಣ್ಣ ನಮ್ಮ ಪೇಟೆ ತೋರ್ಸಿಕೆ ಕರ್ಕಂಡ್ ಹೋತ್. ಹಿಂದೆನ ದಿನ ಗುರ್ತ ಆದ ನಮ್ಮ ಪಕ್ಕದ ಕೋಣೆನ ಹೆಂಗ್ಸ್‌ನೂ ನಮ್ಮೊಟ್ಟಿಗೆ 'ನಾನೂ ಬನ್ನೆ'ಂತ ಬಾತ್. ಅದ್ಕೆ ಮಂಗ್ಳೂರ್ ಹೊಸ್ತ್ ಗಡ. ಗಂಡನೊಟ್ಟಿಗೆ ಬಂದ್ ಜಯ ಕೆಫೆಲಿ ರೂಂ ಮಾಡಿಟ್ಟು ಗಡ. ಅವಳ ಗಂಡಂಗೆ ಬೇರೆ ಕಡೆ ಕೆಲ್ಸ ಇದ್ದ ಕಾರಣ ಅಂವ ಬೊಳ್ಪುಗೇ ಎದ್ದ್ ಹೋಗುಟ್ಟು ಗಡ. ಇನ್ನ್ ಅಂವ ಬಾದು ಇರ್‍ಳ್. ಅದ್ಕೆ ಒಬ್ಬಂಗೇ ರೂಮ್‌ಲಿ ಇರಿಕೆ ಬೇಜಾರಾಂತ ನಮ್ಮೊಟ್ಟಿಗೆ ಬಾತ್. ಅವ್ವಂಗೂ, ಅತ್ತಿಗೆಗೂ ಗುರ್ತ ಇಲ್ಲದ ಅದರ ನಮ್ಮೊಟ್ಟಿಗೆ ಕರ್ಕಂಡೋಕೆ ಮನ್ಸಿತ್ಲೆ. ಆದರೆ ಏನ್ ಮಾಡಿಕೆ ಆದೆ? ಅದ್ ನಮ್ಮ ಬುಟ್ಟತೇ ಇಲ್ಲೆ. ನಾವು ಪೇಟೆ ಸುತ್ತಿ, ಅತ್ತಿಗೆಗೆ ಅವ್ವಂಗೆ ಸೀರೆ ತೆಗ್ದ್, ಐಸ್‌ಕ್ರೀಂ ತಿಂದ್, 'ಪ್ರಕಾಶ ಭವನ' ಕ್ಕೆ ಹೋಗಿ ಊಟ ಮಾಡಿ, ರೂಮಿಗೆ ಬಂದೊ. ನಮ್ಮೊಟ್ಟಿಗೆ ಬಂದ ಹೆಂಗ್ಸ್ ಒಂದು ಪೈಸೆನೂ ಖರ್ಚಿ ಮಾಡಿತ್ಲೆ. ಎಲ್ಲದಕ್ಕೂ ಅಣ್ಣನೇ ದುಡ್ಡು ಕೊಟ್ಟತ್.

ಮಧ್ಯಾಹ್ನ ಒಂದು ನಿದ್ದೆ ಮಾಡಿ, ಹಿಂಬೊತ್ ನಾವೆಲ್ಲಾ ಒಂದು ಕುದ್ರೆ ಗಾಡಿಲಿ ಕದ್ರಿ ದೇವಸ್ಥಾನ ನೋಡಿಕೆ ಹೋದೊ. ನಾವು ಹೊರಗೆ ಹೋದರ ಆ ಹೆಂಗ್ಸ್‌ಗೆ ತಿಳ್ಸದ ಕಾರಣ, ಅದ್ ನಮ್ಮೊಟ್ಟಿಗೆ ಬಾತಿಲ್ಲೆ. ಕದ್ರಿಲಿ ಮಂಜುನಾಥ ಸ್ವಾಮಿ ದೇವಸ್ಥಾನ ನೋಡಿ, ದೇವ್ರಿಗೆ ಅಡ್ಡ ಬಿದ್ದ್ ಪುರ್ಸಾದ ತಕಂಡ್ ಹರಿಕೆ ಹಾಕಿದೊ. ದೇವಸ್ಥಾನದ ಪಕ್ಕಲಿದ್ದ ಏಳ್ ಕೆರೆಗಳ ನೋಡಿ ಹಿಂದೆ ಬಂದೊ. ರೂಮಿಗೆ ಬಾಕಾಕನ ಆ ಹೆಂಗ್ಸ್ ನಮ್ಮ ಕಾದ್ ಕಂಡಿತ್ತ್.

"ನೀವು ನಂಗೆ ಹೇಳದೆ ಹೋದರಿ. ಹೇಳ್ತಿದ್ದರೆ ನಾನೂ ಬಾತಿದ್ದೆ." – ಎಂತ ಅದ್ ಬೇಜಾರಲಿ ಹೇಳ್ತ್. ಅವ್ವ, ಅತ್ತಿಗೆ ಮಾತಾಡ್ತಿಲ್ಲೆ. ಆ ದಿನ ಇರ್‍ಳ್ ನಂಗೆ ಗಡ್ದ್ ನಿದ್ದೆ ಬಾತ್. ಬೊಳ್ಪುಗೆ ನಾವು ಊರಿಗೆ ಹೊರ್‍ಟೊ. ಸುಳ್ಯಕೆ ಬಾಕಾಕನ ಸಣ್ಣಕ್ಕ ಹೇಳ್ತ್,

"ಹೇಂಗಿತ್ತ್ ಸಮುದ್ರ ಸ್ನಾನ?" –ಎಂತ, ನಾ ನಂಗೆ ತಿಳ್ದಷ್ಟ್ ಅಕ್ಕಂಗೆ ವರದಿ ಒಪ್ಪಿಸಿದೆ. ಮಂಗ್ಳೂರ್‌ಲಿ ನಮ್ಮೊಂದಿಗೆ ಸುತ್ತಿದ ಆ ಹೆಂಗ್ಸ್‌ನ ವಿಷಯನೂ ಹೇಳ್ದೆ. ಅದಕ್ಕೆ ಅಕ್ಕ,

"ಅದ್ ಅದರ ಗಂಡನೊಟ್ಟಿಗೆ ಬಂದಿರಿಕ್ಕಿಲ್ಲೆ. ಬಂದಿದ್ದರೆ ಅಂವ ಅದರ ಪೇಟೆ ಸುತ್ತಿಸಿರಿಕಿತ್ಲೆನೋ? ನಿಮ್ಮೊಟ್ಟಿಗೆ ಬಾತಿತ್ತೊ? ದೊಡ್ಡ ದೊಡ್ಡ ನಗರಲಿ ಇಂಥಾ ಹೆಂಗ್‌ಸರ್ ಎಷ್ಟೊ ಜನ ಒಳೊ. ಯಾರ ಯಾರ್‍ನೋ ಬೋಳ್ಸಿ, ಜೀವನ ಮಾಡೋವು. ಅಂಥವ್ರ ಪೈಕಿ ಇದೂ ಒಂದಾಗಿರ್‍ದು." – ಎಂತ ಹೇಳ್ತ್. ಆಗ ಅತ್ತಿಗೆ,

'ನಂಗೂ ಹಂಗೇ ಆತ್. ಅದರ ನಡೋಳ್ಕೆ ನಂಗೆ ಸರಿ ಕಾಂಬತಿತ್ಲೆ. ನಿನ್ನ ಅಣ್ಣನ ಅದ್ ಹೇಂಗೆ ಹೇಂಗೋ ನೋಡ್ತಿತ್ತ್. ಒಮ್ಮೆ ರೂಮಿಗೆ ಹೋದರೆ

ಸಾಕಾಗಿತ್ತ್‌ಂತ ನಂಗೆ ಆಗ್ತಿತ್ತ್" ಎಂತ ಹೇಳ್ದೊ. ಅವ್ವನೂ ಅದ್ಕೆ ದನಿಗೂಡ್ಸಿದೊ. ನಂಗೆ ಇದೊಂದು ಗೊತ್ತಾತ್ಲೆ. ನನ್ನ ಅದ್ ತುಂಬಾ ಪ್ರೀತಿಂದ ಮಾತಾಡ್ಸ್‌ತಿತ್ತ್. ಹಾಂಗಾಗಿ ನಂಗೆ ಅದ್ ತುಂಬಾ ಇಷ್ಟ ಆತ್. ಮನೆಗೆ ಬಾಕನ ಅಣ್ಣ ಕಸಿ ಮಾಯ್ನ ಹಣ್ಣ್‌ನನೂ, ಮಂಗ್ಳೂರ್ ಮಲ್ಲಿಗೆ ಹೂನನೂ ತಂದಿತ್ತ್. ತಮ್ಮಂದರ್ ಹಣ್ಣ್‌ಗಾಗಿ ಜಗಳಾಡ್ದೊ. ಅಕ್ಕ ಹೂವುನ ಎಲ್ಲೋವ್ಕೂ ಹಂಚಿ ಮುಡ್ಕಂಡತ್.

" ನಾ ಒತ್ತಾಯಂದ ಕಳ್ಸಿದ ಕಾರ್ಣ ನೀ ಒಂದು ಊರು ನೋಡ್ದ, ಸಮುದ್ರ ನೋಡ್ದ, ರೈಲ್ ನೋಡ್ದ, ಇನ್ನ್ ಮುಂದೆ ಆಗಾಗ ದೊಡ್ಡವರೊಟ್ಟಿಗೆ ಊರು ಸುತ್ತಿಕೆ ಹೋಗ್. ಆಗ ನಿಂಗೆ ಲೋಕ ಏನ್‌ಂತ ಗೊತ್ತಾದೆ" – ಎಂತ ಸಣ್ಣಕ್ಕ ಹೇಳ್ತ್. ಅದ್ ಅಪ್ಪನೊಟ್ಟಿಗೆ, ಅಣ್ಣನೊಟ್ಟಿಗೆ ಆಗಾಗ ಮಂಗ್ಳೂರ್‌ಗೆ ಅಪ್ಪ ಸಾಮಾನ್ ತಾಕೆ ಹೋಕಾಕನೆಲ್ಲಾ ಹೋಗ್ತಿತ್ತ್. ಕಾಸ್ರ್‌ಗೋಡಿಗೂ ಹೋಗ್ತಿತ್ತ್. ಅಕ್ಕ ಹೇಳ್ದ ಮಾತ್‌ಗಳ ಕೇಳಿಕಂಡ್ ನಾ, "ಹೌದಲ್ಲಾ" – ಎಂತ ಯೋಚನೆ ಮಾಡ್ದೆ. ಅಂತೂ ನನ್ನ ಸುರುನ ತಿರ್‍ಗಾಟಂದ ಒಂದು ಹೊಸ ಅನುಭವ ಪಡ್ದೆ. ಮನ್ಸ್ ಸಂತೋಷಂದ ಹಿಗ್ಗಿತ್. ಅದರ್‌ಂದ ಮೇಲೆ ನಾ ಪುತ್ತೂರು, ಮಂಗ್ಳೂರು, ಕಾಸ್ರ್‌ಗೋಡಿಗೆ ಅಪ್ಪನೊಟ್ಟಿಗೆ ಅಣ್ಣನೊಟ್ಟಿಗೆ ಆಗಾಗ ಹೋಕೆ ಸುರು ಮಾಡ್ದೆ.

* * * * *

ಚುಕ್ಕೆ – 33

“ನನ್ನ ಹೈಸ್ಕೂಲುನ ಜೀವನ ”

ಸುಮಾರ್ ಸಾವಿರದೊಂಬೈನೂರ ಐವತ್ತನೇ ಇಸವಿನ ಕತೆ ಇದ್. ನಾ ಆಗ ಐದನೇ ಕ್ಲಾಸ್‌ಲಿ ಕಲ್ಯತಿದ್ದೆ. ನಮ್ಮ ಮನೆ ಪಕ್ಕಲಿ ಕ್ಲಬ್ ಕಟ್ಟೋಣ. ಅದರ್‌ಲಿ ಒಂದು ಪುಡೆ ಪಂಚ್ಯಾತ್ ಆಫೀಸ್. ಮತ್ತೆ ಅದರ್‌ಲಿ ಪಂಚ್ಯಾತ್ ಲೈಬ್ರರಿನೂ ಇತ್ತ್. ನಂಗೆ ಸಣ್ಣದರ್‌ಂದಳೇ ಓದುವ ಹುಚ್ಚು. ಸುರು ಸುರುಗೆ ಅಕ್ಕಂಗೆ ಬೇಕಾಗಿ ಕತೆ ಪುಸ್ತಕ ತಾತಿದ್ದೆ. ಕಡೆ ಕಡೆಗೆ ನಾನೇ ಓದಿಕೆ ಸುರು ಮಾಡ್ದೆ. ನಾ ಪುಸ್ತಕ ತಾಕಾಗಿ ಅಲ್ಲಿಗೆ ಹೋಕಾಕನ, ಒಮ್ಮೊಮ್ಮೆ ಆ ಕಟ್ಟೋಣದ ಮುಖ ಸಾಲೆಲಿ, ಊರ್‌ಲಿದ್ದ ಆಗನ ಗಣ್ಯ ಜನಂಗ ಸೇರಿಕಂಡ್ ಆಗಾಗ ಸಭೆ ಮಾಡ್ತಿದ್ದೊ. ಅವೆಲ್ಲಾ ಸೇರಿಕಂಡ್ ಊರಿಗೊಂದು ಹೈಸ್ಕೂಲ್ ಬೇಕ್‌ಂತ ಚರ್ಚೆ ಮಾಡ್ತಿದ್ದೊ. ನನ್ನ ಅಪ್ಪನೂ ಆ ಸಭೆಗಳಿಗೆ ಹೋಗ್ತಿದ್ದೊ. ಇವರೆಲ್ಲರ ಮುಂದಾಳ್, ಸಹಕಾರಿ ರಂಗಲಿ ಪಳಗಿ ಹೆಸ್ರ್ ಪಡ್ದ ಮೊಳಹಳ್ಳಿ ಶಿವರಾಯರ್. ನಾ ಸಣ್ಣಂವ ಆಗಿದ್ದರೂ ಅವರ ಕೆಲವು ಮಾತ್‌ಗ ನನ್ನ ಕೆಬಿಗೆ ಬೀಳ್ತಿತ್ತ್. ಅದರ ತಿಳಿವಂಥಾ ಶಕ್ತಿನೂ ನನ್ನಲ್ಲಿತ್ತ್. ಇದರ್‌ಂದ ನಂಗೆ ತಿಳ್ದ್ ಬಂದ ಸಂಗತಿ ಏನ್‌ಂತೇಳ್ರೆ, ಬೇಗನೆ ನಮ್ಮ ಊರಿಗೊಂದು ಹೈಸ್ಕೂಲ್ ಬಂದದೇಂತ.

ಅದೇ ಸಮಯಲಿ ಆಗಣ ಜವ್ವಣ ಹೈದಂಗ ಆದ ಕುಂಜಿರ್ ವೆಂಕಟ್ರಮಣ ಗೌಡ್ರ್, ಮಹಾಲಿಂಗೇಶ್ವರ ಭಟ್,

ಭಾಸ್ಕರ ವಾಗ್ಲೆ, ಕಾನತ್ತಿಲ ಪದ್ಮಯ್ಯ ಗೌಡ್ರು, ಡಾಕ್ಟರ್ ವೆಂಕಪ್ಪಯ್ಯ (ಉಳ್ದವರ ಹೆಸ್ರ್ ನಂಗೆ ನೆಂಪುಗೆ ಬಾದುಲ್ಲೆ.) ಇವೆಲ್ಲೋವು ಸೇರಿಕಂಡ್, ಹೈಸ್ಕೂಲ್ ಕಟ್ಟೋಣದ ಸಹಾಯಕ್ಕಾಗಿ, ಶ್ರೀ ಕೃಷ್ಣ ದೇವರಾಯ, ತೆನ್ನಾಲಿ ರಾಮಕೃಷ್ಣ ಎಂತ ನಾಟಕ ಆಡ್ದ್ ನಂಗೆ ನೆಂಪುಟ್ಟು. ಅದಾದ ಒಂದು ವೊರ್ಸ‌ಲಿ ನಮ್ಮ ಮನೆ ಪಕ್ಕದ ಕ್ಲಬ್ ಕಟ್ಟೋಣದ ಹಕ್ಕಲೆ ಸದ್ಯಕೆ ಒಂದು ಉದ್ದದ ಕಟ್ಟೋಣ ಕಟ್ಟಿಸಿ, ಅದರ್ಲಿ ಬೆದ್ರ್‌ನ ತಟ್ಟಿಂದ ನಾಕ್ ಭಾಗ ಮಾಡಿ, ಕೋಣೆಗಳಾಂಗೆ ಮಾಡ್ದೊ. ಅದರ್ಲಿ ಮತ್ತೆ ಕ್ಲಬ್ ಕಟ್ಟೋಣದ ಒಂದು ಪುಡೆಲಿ ಹೈಸ್ಕೂಲ್ ಸುರು ಮಾಡಿಯೇ ಬುಟ್ಟೊ.

ದಿ। ಕೂಜುಗೋಡು ವೆಂಕಟ್ರಮಣ ಗೌಡ್ರ್ ಅಧ್ಯಕ್ಷರಾಗಿ, ದಿ। ಸಿ. ರಾಮಚಂದ್ರ ಭಟ್ ಕಾರ್ಯದರ್ಶಿಯಾಗಿ, ದಿ। ಸುಬ್ಬಯ್ಯ ಪ್ರಭುಗ ಖಜಾಂಜಿಯಾಗಿ, ಊರುನ ಮುಂದಾಳ್‌ಗಳ ಸೇರ್ಸಿಕಂಡ್ ಒಂದ್ ಕಮಿಟಿ ಮಾಡಿ, ಈಗ ಇರುವ ಜ್ಯೂನಿಯರ್ ಕಾಲೇಜ್ ಜಾಗಲಿ ಹೊಸ ಹೈಸ್ಕೂಲ್ ಕಟ್ಟೋಣ ಕಟ್ಟಿಸಿಕೆ, ಊರ್ನ, ಪರವೂರ್ನ ಜನಂಗಳ್‌ಂದ ವಂತಿಗೆ ವಸೂಲು ಮಾಡಿಕೆ ಸುರು ಮಾಡ್ದೊ. ನನ್ನ ಅಪ್ಪ ದಿ। ಸೂಂತೋಡು ಅಪ್ಪಣ್ಣ ಗೌಡ್ರುನೂ ರೂಪ್ಯಾ ಇನ್ನೂರ ಒಂದು ವಂತಿಗೆ ಕೊಟ್ಟದ್ ನಂಗೆ ನೆಂಪುಟ್ಟು. ನನ್ನ ಗಂಡನ ಅಪ್ಪ (ಮಾಂವ) ಮಾವಾಜಿ ಐತಪ್ಪ ಗೌಡ್ರೂ ಇನ್ನೂರು ರೂಪಾಯಿ ವಂತಿಗೆ ಕೊಟ್ಟೊಳೊ. ಇವೆಲ್ಲರ ಪರಿಶ್ರಮಂದ 1951 ನೇ ಇಸ್ವಿ ಜೂನ್ 19ನೇ ತಾರೀಕಿಗೆ ಹೊಸ ಕಟ್ಟೋಣಲಿ ಹೈಸ್ಕೂಲ್ ಸುರಾತ್.

ಆಗ ತಮ್ಮಂದರ್ ಸಂಣವಿದ್ದ ಕಾರಣ, ಅವರ ಎಲಿಮೆಂಟ್ರಿ ಸಾಲೆಗೆ ಕರ್ಕಂಡೋಗುವ ಕೆಲ್ಸ ನನ್ನದಾಗಿತ್ತ್. ಅದರ್‌ಂದಾಗಿ ನಾ ಸುರುನ ವೊರ್ಸ ಹೈಸ್ಕೂಲಿಗೆ ಫಸ್ಟ್ ಫಾರ್ಮಿಗೆ ಸೇರಿಕೆ ನಂಗಾತ್ಲೆ. ಸೆಕೆಂಡ್ ಫಾರ್ಮಿಗಾದರೂ ನಾ ಹೈಸ್ಕೂಲಿಗೆ ಸೇರಕೂಂತ ಅಪ್ಪನಲ್ಲಿ ಒತ್ತಾಯ ಮಾಡ್ದೆ. ನನ್ನ ಒತ್ತಾಯಕ್ಕೆ ಅಪ್ಪ, ನನ್ನ ಹೈಸ್ಕೂಲಿಗೆ ಸೇರ್ಸಿಕೆ ಮನ್ಸ್ ಮಾಡ್ದೊ. ಹೈಸ್ಕೂಲ್ ಸುರಾಕನ ಎಲ್ಲರ್ನೂ ಕ್ಲಾಸಿಗೆ ಸೇರ್ಸಿಕೊಂಡೊ. ಎರಡ್ನೆ ವೊರ್ಸಕಾಕನ ಸೇರುವ ಮಕ್ಕಳ ಸಂಖ್ಯೆ ಹೆಚ್ಚಾತ್. ಅದಕ್ಕಾಗಿ ಸಿಲೆಕ್ಷನ್ ಪರೀಕ್ಷೆಂತ ಮಾಡ್ದೊ. ಇದರ್ಲಿ ಪಾಸಾದವರ ಮಾತ್ರಾ ತಕಂಬಕೂಂತ ನಿರ್ಧಾರ ಮಾಡ್ದೊ. ಇಂಗ್ಲಿಷ್ ಮತ್ತೆ ಲೆಕ್ಕಲಿ ಪರೀಕ್ಷೆ ಇರ್ತಿತ್ತ್. ದಿ। ನಾರಾಯಣ ರೈ ಮಾಸ್ಟ್ರ್ ಇದರ ಮೇಲ್ವಿಚಾರಣೆ ಮಾಡ್ತಿದ್ದೊ. ನಾ ಇದರ್ಲಿ ಪಾಸಾಗಿ ಹೈಸ್ಕೂಲ್ ಸೇರ್ದೆ. ಮನೆ ಹಕ್ಕಲೆ ಇರುವ ಕ್ಲಬ್ ಕಟ್ಟೋಣಲಿ ಸಾಲೆ. ನಡ್ಯಕೂಂತ ಇಲ್ಲೆ. ಮೂಂಕುಂದ ಬಾಯಿಗೆ ಇದ್ದಷ್ಟ್ ದೂರ. ನಂಗೆ ಬಾಳ ಸಂತೋಷ ಆತ್. ಗಂಟೆ ಹೊಡ್ಯಕಾಕನ ನಾ ಕ್ಲಾಸಿಗೆ ಹೋಗ್ತಿದ್ದೆ. ನಾ ಆಗ ಸೆಕೆಂಡ್ ಫಾರ್ಮಿಗೆ ಸೇರ್ದ್. ನನ್ನ ಕ್ಲಾಸ್‌ಲಿ ನಾ ಒಬ್ಬಳೇ ಗೂಡೆ. ಉಳ್ದವೆಲ್ಲಾ ಹೈದಂಗ. ನಂಗಾಗಿ ಒಂದು ಇಡೀ ಬೆಂಚ್ ಮತ್ತೆ ಡೆಸ್ಕ್. ಎಲ್ಲರೊಟ್ಟಿಗೆ ಇದ್ದ ನಂಗೆ ಈ ಒಂಟಿತನ ಸುರು ಸುರುಗೆ ನಂಗೆ ಬೇಜಾರ್ ಆಗ್ತಿತ್ತ್. ಕಡೆಗೆ ಇದಕ್ಕೆ ಹೊಂದಿಕಂಡೆ.

ನಾವ್ಗೆ ಕನ್ನಡಕ್ಕೆ ನೆಕ್ರಾಜೆ ಜಗನ್ನಾಥ ರೈ ಎಂಬ ಕನ್ನಡ ಪಂಡಿತರ್ ಇದ್ದೊ.

ಅವು ಯಕ್ಷಗಾನ ಭಾಗವತಿಕೆನ ಲಾಯ್ಕ್‌ಲಿ ಹಾಡ್ತಿದ್ದೊ. ಪಾಠಲಿ ಬರುವ ಪದ್ಯಗಳ ಅವು ರಾಗಲಿ ಹೇಳ್ತಿದ್ದೊ. ಕನ್ನಡ ಪಾಠನ ಅವು ರಸಲಿ ವಿವರ್ಸ್ತಿದ್ದೊ. ನಾ ಕನ್ನಡಲಿ ಯಾಗೋಳೂ ಮುಂದೆ. ನೂರಕ್ಕೆ ಅರುವತ್ತರ್‌ಂದ ಹೆಚ್ಚ್ ಮಾರ್ಕ್ ಪಡ್ಯೆತಿದ್ದೆ. ಆಗನ ಕಾಲಲಿ ಈಗನಾಂಗೆ ನೂರಕ್ಕೆ ನೂರು ಮಾರ್ಕ್ ಕೊಡ್ತಿತ್ಲೆ. ಲೆಕ್ಕಲಿ ಮಾತ್ರಾ ನೂರಕ್ಕೆ ನೂರು ಮಾರ್ಕ್ ಸಿಗ್ತಿತ್ತ್. ಅರುವತ್ತರ್‌ಂದ ಹೆಚ್ಚ್ ಮಾರ್ಕ್ ಪಡ್ಡೋವು ಎಲ್ಲರ ದೃಷ್ಟಲಿ ಮೇಲೆ. ಲೆಕ್ಕ ಒಂದರ ಬುಟ್ಟ್ ಉಳ್ದದರ್ಲಿ ಮಾಸ್ಟ್ರಗ ಅಳ್ದ್, ಸುರ್ದ್ ಮಾರ್ಕ್ ಕೊಡ್ತಿದ್ದೊ. ಭಾಷೆನ ಪಾಠಲಿ ಬಾಳ ಕಮ್ಮಿ ಮಾರ್ಕ್ ಕೊಡ್ತಿದ್ದೊ. ನಾವುಗೆ ಇಂಗ್ಲಿಷ್ ಮತ್ತೆ ಸಮಾಜ ಶಾಸ್ತ್ರಕ್ಕೆ ನಾರಾಯಣ ರೈ ಮಾಸ್ಟ್ರ ಬಾತಿದ್ದೊ. ಲೆಕ್ಕದ ಪಾಠಕ್ಕೆ ದಿ। ಸಿ. ಆರ್. ಭಟ್ಟ್ ಬಾತಿದ್ದೊ. ನಾ ಚಿತ್ರಕಲೆಲಿ ಯಾಗೋಳೂ ಮುಂದೆ. ಕ್ಲಾಸಿಗೆ ನಾನೇ ಫಸ್ಟ್. ನನ್ನ ಹೈಸ್ಕೂಲ್ ಜೀವನಲಿ ಆ ಸ್ಥಾನನ ಅಕೆರಿಗೆ ಮುಟ್ಟ ನಾ ಯಾರಿಗೂ ಬುಟ್ಟು ಕೊಟ್ಟತ್ಲೆ. ಚಿತ್ರಕಲೆಗೆ ನಾವ್ಗೆ ಯನ್. ನಾರಾಯಣ ರಾವ್ ಮಾಸ್ಟ್ರ ಬಾತಿದ್ದೊ.

ಮನೆ ಹಕ್ಕಲೆ ಸಾಲೆಗೆ ಹೋಗುವ ನನ್ನ ಕನ್ಸ್ ಅರ್ಧಲೇ ತುಂಡಾತ್. ಸುಳ್ಯ ಅಂಬಟೆಡ್ಕಲಿ ಕಟ್ಟಿದ ಹೊಸ ಸೊಂತ ಕಟ್ಟೋಣಕ್ಕೆ ನಮ್ಮ ಸಾಲೆನ ಜಾಗೆ ಬದ್ಲಾಯಿಸಿದೊ. ನಾವ್ಗೆಲ್ಲಾ ಹೊಸ ಕಟ್ಟೋಣಕ್ಕೆ ಬಂದ್ ಕುಸಿ ಆತ್. ಆದರೆ ದಿನಾ ನಂಗೆ ಮೂರು ಪರ್ಲಾಂಗ್ ನಡ್ಯಕಾಗಿತ್ತ್. ಅಲ್ಲಿ ಸಾಲೆನ ಸುತ್ತು ಮತ್ತು ಕಲ್ಲ್ ಬಂಡೆಗ ಇದ್ದೊ. ಆಟ ಆಡಿಕೆ ಬುಡಿಕಾಕನ, ಅಲ್ಲಿನ ಏರ್ ತಗ್ಗ್‌ನ ಜಾಗೆಗಳ ದೊಡ್ಡ ಮಕ್ಕ ಅಗ್ದ್, ಮೊಣ್ಣ್ ತೆಗ್ದ್ ಸಮತಟ್ಟ್ ಮಾಡ್ತಿದ್ದೊ. ಸಣ್ಣ ಮಕ್ಕ ಆದ ನಾವುಗ ಅದರ ಕುಕ್ಕೆಲಿ ಹಾಕಿ ಕೈ ಕೈ ಹಿಡ್ಕಂಡ್, ದೂರ ತಕಂಡೋಗಿ ಹಾಕಕಾಗಿತ್ತ್. ಹೆಡಗೆಲಿ ತುಂಬಿಸಿದ ದೊಡ್ಡ ದೊಡ್ಡ ಪಾರೆಕಲ್ಲ್‌ಗಳ ತುಂಡುಗಳ ಎರ್ಡೆರ್ಡ್ ಜನ ಕೈ ಕೈ ಹಿಡ್ಕಂಡ್ ದೂರ ಸಾಗ್ಸ್‌ತಿದ್ದೊ. ನಾವ್ಗೆ ಅದ್ ಕಷ್ಟ ಆದರೂ, ಎಲ್ಲಾ ಮಕ್ಕಳೊಟ್ಟಿಗೆ ಸೇರಿ ಕೆಲ್ಸ ಮಾಡಿಕಾಕನ ಕುಸಿ ಆಗ್ತಿತ್ತ್. ಆಗ ಸಾಲೆಲಿ ಬಾಮಿ ಇತ್ಲೆ. ನಮ್ಮೆ ಹೈಸ್ಕೂಲ್ ಪಕ್ಕಲಿ ಬ್ರಾಹ್ಮಣ ಮಕ್ಕಳ ಬೋರ್ಡಿಂಗ್ ಇತ್ತ್. ಅಲ್ಲಿನ ಬಾಮಿಂದ ನಾವು ಮಕ್ಕ, ಕುಡ್ಯಕೆ ನೀರ್ ಎಳ್ದ್ ತಂದ್ ಕ್ಲಾಸ್‌ನ ಎದ್ರ್ ಇಸಿದ ಮೊಣ್ಣ್‌ನ ಪಾತ್ರೆಗೆ (ಫಿಲ್ಟರ್) ತುಂಬುಸ್‌ತಿದ್ದೊ.

ಹೈಸ್ಕೂಲ್‌ಲಿ ಪ್ರತಿ ಪಾಠನ ದಿನ ದಿನ ಕಲ್ಯಕಾಗಿತ್ತ್. ಇಸ್ಟ್ ದಿನ ಮುಟ್ಟ ಎಲಿಮೆಂಟ್ರಿ ಸಾಲೆಲಿ ಒಟಾರೆ ಬೇಕಾಬಿಟ್ಟಲಿ ಕಲ್ಯತಿದ್ದ ನಂಗೆ ಸುರು ಸುರುಗೆ ಕಷ್ಟ ಆಗ್ತಿತ್ತ್. ದಿನಾ ನೋಟ್ಸ್ ಕೊಡ್ತಿದ್ದೊ. ಅದರ ಸಾಲೆಲಿ ಬೇಗ ಬೇಗ ಮಾಸ್ಟ್ರ ಹೇಳಿಕಾಕನ ರಫ್ ಪುಸ್ತಕಲಿ ಬರ್ದ್, ಮನೆಗೆ ಬಂದ್ ಪೊರ್ಲುಲಿ ಉರುಂಟು ಅಕ್ಷರಲಿ ಬೇರೊಂದು ಪುಸ್ತಕಲಿ ಬರ್ದ್ ಇಸಕಾಗಿತ್ತ್. ವಾರಕೊಮ್ಮೆ ನಾವು ಬರ್ದದರ ಮಾಸ್ಟ್ರ ನೋಡಿ ತಿದ್ದ್‌ತಿದ್ದೊ. ವಿಜ್ಞಾನ ಪಾಠಲಿ ಓದಿದರ ಮಾಡಿ ತೋರ್ಸಕಾಗಿತ್ತ್. ಅದರ 'ಪ್ರಯೋಗ'– ಎಂತ ಕರ್‍ಯೊತಿದ್ದೊ. ಅದಕ್ಕಾಗಿ ಪ್ರತ್ಯೇಕ ಪ್ರಯೋಗ ಶಾಲೆ

ಇತ್. ಅದರ್ಲಿ ಪ್ರಯೋಗ ಮಾಡ್ದೊಂತೇಳ್ರೆ ನಂಗೆ ಬಾಳ ಇಷ್ಟ ಆಗ್ತಿತ್. ನೀಲಿ ಲಿಟಮಸ್ ಪೇಪರ್ ಆಮ್ಲಲಿ ಕೆಂಪಾಗುದರ ನಾ ಆಶ್ಚರ್ಯಲಿ ನೋಡ್ತಿದ್ದೆ. ರಂಜಕನ ನೀರ್‌ಂದ ತೆಗ್ದ್‌ದ್ ಕಾಗ್ದಲಿ ಕಟ್ಟಿಕಾಕನ ಹಂಞ ಹೊತ್ತ್‌ಲಿ ಅದರ್‌ಂದ ಹೊಗೆ ಎದ್ರುದರ ನೋಡಿ ಸೋಜಿಗ ಆಗ್ತಿತ್. ಹೊಸ ಹೊಸ ಪಾಠಲಿ ಹೊಸ ಹೊಸ ಪ್ರಯೋಗ ನಂಗೆ ತುಂಬಾ ಕುಸಿ ಕೊಡ್ತಿತ್. ಹಿಂದೆನ ಹುಡುಗತನ ಮಾಯ ಆಗಿ, ಪಾಠಲಿ ಆಸಕ್ತಿ ಆಕೆ ಸುರಾತ್. ವಿಜ್ಞಾನದ ಎಲ್ಲಾ ಚಿತ್ರಗಳ ನಾ ನೋಟ್ಸ್ ಪುಸ್ತಕಲಿ ಪೊರ್ಲುಲಿ ಬರ್ದ್‌ದ್ ಇಸ್ತಿದ್ದೆ. ನನ್ನ ಕ್ಲಾಸ್‌ನ ಗೂಡೆಗ ಅವರ ಪುಸ್ತಕಲಿ ಚಿತ್ರ ಬುಡ್ಸಿಕೆ ನನ್ನ ಹಕ್ಕಲೆ ಹೇಳ್ತಿದ್ದೊ. ನಾ ಅವ್ಕೆಲ್ಲಾ ಕುಸಿಲಿ ಬುಡ್ಸಿ ಕೊಡ್ತಿದ್ದೆ. ಶಾಲೆಗ ಪರೀಕ್ಷಾಧಿಕಾರಿಗ ಬಾಕಾಕನ ಮಾಸ್ಟ್ರ ನನ್ನ ಪುಸ್ತಕನ ತೆಗ್ದ್ ಅವ್ಕೆ ತೋರ್ಸ್‌ತಿದ್ದೊ. ಪ್ರತಿ ಪುಸ್ತಕಲಿ ಮಾರ್ಜಿನ್ ಹಾಕಿ ಸುತ್ತೋಳೂ ನಾಕ್ ಗೀಟ್ ಎಳ್ದ್ ಚೌಕಟ್ಟ್ ಮಾಡಿ ಅದರ ನೊಡುಲಿ ಬಾಳ ಪೊರ್ಲುಲಿ ಅಕ್ಷರಗಳ ಬರ್‍ಯತಿದ್ದೆ. ವಾಕ್ಯಲಿ ಇದ್ದ ಮುಖ್ಯಾಂಶಗಳ ದಪ್ಪಕ್ಷರಲಿ ಬರ್ದ್ ಇಡ್ತಿದ್ದೆ. ನನ್ನ ಎಲ್ಲಾ ನೋಟ್ಸ್ ಪುಸ್ತಕಗ ನೀಟಾಗಿ ಇರ್ತಿತ್. ಪ್ರತಿವೊರ್ಸ ಅಪ್ಪ ನಂಗೆ ಹೊಸ ಓದುವ ಪುಸ್ತಕನನೇ ತೆಗ್ದ್ ಕೊಡ್ತಿದ್ದೊ. ಆಗ ಸುಳ್ಯಲಿ ಸುಬ್ಬಯ್ಯ ಪ್ರಭುಗಳ ಅಂಗ್ಡಿ ಪುಸ್ತಕ ವ್ಯಾಪಾರಕ್ಕೆ ಪ್ರಸಿದ್ಧವಾಗಿತ್. ನಾ ಎಲ್ಲಾ ಪುಸ್ತಕಗಳ ಅಲ್ಲಿಂದಳೇ ತೆಗ್ಯತಿದ್ದೆ. ನನ್ನ ಜೋಸ್ತಿ ಗೂಡೆ ಪ್ರೇಮಲತಂದ ನಾ ಪುಸ್ತಕಗಳಿಗೆ ಬೈಂಡ್ ಹಾಕುದರ ಕಲ್ತೆ. ಸುರು ಸುರುಗೆ ಪ್ರೇಮಲತನೇ ನಂಗೆ ಬೈಂಡ್ ಹಾಕಿಕೊಡ್ತಿತ್. ಮತ್ತೆ ನಾನೇ ಕಲ್ತೆ. ನನ್ನ ಪುಸ್ತಕಗ ಎಲ್ಲಾ, ವೊರ್ಸ ಕಳ್ದರೂ ಹೊಸ ಪುಸ್ತಕದಾಂಗೇ ಕಾಂಬತಿತ್. ನಾವು ಮೇಲೆನ ಕ್ಲಾಸಿಗೆ ಪಾಸಾಕನ, ನಮ್ಮ ಪುಸ್ತಕನ ಕೆಳಗೆನ ಕ್ಲಾಸ್‌ನ ಮಕ್ಕ ಅರ್ಧ ಕ್ರಯಕ್ಕೆ ತಕಂಬತಿದ್ದೊ. ಒಮ್ಮೆ ಅಪ್ಪ ಹೇಳ್ದೊ,

"ನೀ ಪುಸ್ತಕಗಳ ಮಾರ್ಬೇಡ. ಬಡ ಮಕ್ಕಳಿಗೆ ದರ್ಮಕ್ಕೆ ಕೊಡು" – ಎಂತ ಅದರ್‌ಂದ ಮೇಲೆ ಪ್ರತಿ ವೊರ್ಸ ಬಡ ಮಕ್ಕಳಿಗೆ ಧರ್ಮಾರ್ಥ ಪುಸ್ತಕಗಳ ಹಂಚ್‌ತಿದ್ದೆ.

ಒಮ್ಮೆ ಸಾಲೆಲಿ ಸುರುನ ವಾರ್ಷಿಕೋತ್ಸವ ಆಕನ ನಾವೆಲ್ಲಾ ಬಾಳ ಕುಸಿ ಪಟ್ಟೊ. ಡ್ರಾಯಿಂಗ್ ಮಾಸ್ಟ್ರ ಕೆಂಪು ಬಿಳಿ ಬಣ್ಣದ ಹೊಡಿಗಳ ಮತ್ತೆ ವ್ಯಾಸಲೀನ್ ತಂದ್ ನನ್ನ ಹಕ್ಕಲೆ ಕೊಟ್ಟ್ ಹೇಳ್ತಿದ್ದೊ,

"ನೀನೂ ನಿನ್ನ ಗೆಳತಿಯರೂ ಕೂಡಿ ಇದನ್ನು ಅರೆದು ಕೊಡಿ" – ಎಂತ. ಅರ್‍ಯಕೆ ಬೋಗುಣಿನ ಹಾಂಗೆ ಇದ್ದ ಒಂದು ಸಣ್ಣ ಅರೆವ ಕಲ್ಲ್‌ನನೂ, ಒಂದು ಉರುಂಟು ಆಗಿ ಉದ್ದ ಇದ್ದ ಕುಟಾಣಿನನೂ ಕೊಡ್ತಿದ್ದೊ. ನಾನೂ ನನ್ನ ಜೋಸ್ತಿ ಗೂಡೆಗಳೂ ಅದರ ಹದ ಆಗಿ ಬೆರ್ಸಿ, ಅರ್ದ್‌ದ್ ಡೊಬ್ಬಿಗೆ ತುಂಬಿಸಿ ಕೊಡ್ತಿದ್ದೊ. ಅದ್ ನಾಟಕದ ವೇಸ ಹಾಕವುಕೆ ಮೋರೆಗೆ ಹಾಕುವ ಬಣ್ಣ ಗಡ. ಬಣ್ಣದ ಕಾಗ್ದಗಳ ಬೇರೆ ಬೇರೆ ರೀತಿಲಿ ಕತ್ರಿಸಿ, ತೋರಣ ಕಟ್ಟಿಕೆ ಬೊಳ್ಳಿಗಳಿಗೆ ಅಂಟಿಸಿ, ನಾವು ಕೊಡ್ತಿದ್ದೊ. ಅದರ ಅಂಟಿಸಿಕೆ ಮೈದಾ ಹೊಡಿಂದ ಮಾಡ್ದ ಅಂಟ್‌ನ

ಕೊಡ್ತಿದ್ದೊ.

ಸುರುನ ವಾರ್ಷಿಕೋತ್ಸವಲಿ ನಿಡ್ಯಮಲೆ ಮುದ್ದಪ್ಪ ಜಡ್ಜರ್ ಅಧ್ಯಕ್ಷರಾಗಿ ಬಂದೊ. ಆ ವೊರ್ಸ ಆಟೋಟಲಿ ಜೂನಿಯರ್ ಚಾಂಪಿಯನ್‌ಶಿಪ್ ನಂಗೆ, ಸೀನಿಯರ್ ಚಾಂಪಿಯನ್ ಶಿಪ್ ಸುಂದರ ರಾಯರ ಮಗಳ್ ಪ್ರೇಮಲತಂಗೆ ಸಿಕ್ಕಿತ್. ಆಗ ನಾವು ಸಂತೋಸಲಿ ಕೊಣ್ದಾಡ್ಡೊ.

ನಾವ್ಗೆ ಕವಿ ವಿದ್ವಾನ್ ದಿ। ಪುಟ್ಟಣ್ಣ ಗೌಡರ್ ಕನ್ನಡ ಪಾಠಕ್ಕೆ ಇದ್ದೊ. ಆಗ ಅವರ ಪಾಠ ಕೇಳಿ, ಕೇಳಿ ಕ್ಲಾಸ್‌ಲಿ ಇದ್ದ ಎಲ್ಲೋವೂ ಒಂದೊಂದು ರೀತಿಲಿ ಮರಿ ಕವಿಗಳೇ ಆಗಿದ್ದೊ. ಅವರ ಗರಡಿಲಿ ನಾವೆಲ್ಲಾ ಒಳ್ಳೆ ಮಾತುಗಾರರೂ, ಬರವಣಿಗೆಗಾರರೂ ಆಗಿ ಮುಂದುವರ್‍ದೊ. ಕವಿ ಕುತ್ಯಾಳ ನಾಗಪ್ಪ ಗೌಡರೂ (ಕಿರಣ), ಡಾ। ರಮಾನಂದ ಬನಾರಿಯವೂ, ಡಾ। ಚಿದಾನಂದ ಕೊಳಂಬೆವೂ ನನ್ನ ಸಹಪಾಠಿಗ ಆಗಿ ಕೊಳಂಬೆಯವರ ಶಿಷ್ಯರಾಗಿದ್ದೊ. ಕೊಳಂಬೆವು ಪಾಠ ಮಾಡಿಕಾಕನ ವರ್ಣನೆ ಮಾಡ್ತಿದ್ದ ಯಶೋದರ ಚರಿತ್ರೆ, ಚಂದ್ರಮತಿ ವಿಲಾಪ, ರನ್ನನ ಗದಾಯುದ್ಧ, ರಾಮಾಯಣ, ಮಹಾಭಾರತದ ಕತೆಗ ಎಲ್ಲಾ ನಾವ್ಗೆ ರಸಾಯನ ತಿಂದಾಂಗೆ ಆಗ್ತಿತ್ತ್. ಅವು ಸೊಂತ ಬರ್‍ದ ನಾಟಕಗಳ ನಮ್ಮಿಂದ ಆಡ್‌ಸ್ತಿದ್ದೊ. ಅವು ಬರ್‍ದ 'ವರದಕ್ಷಿಣೆ' ಎಂಬ ನಾಟಕಲಿ ಕಥಾನಾಯಕ ಆಗಿ ನಾ ವೇಸ ಹಾಕಿ, ಇನಾಮ್ ಪಡ್ದಿದ್ದೆ. ಅವರ್‌ಂದಾಗಿ ನಂಗೆ ಕನ್ನಡ ಭಾಷೆ ಮೇಲೆ ತುಂಬಾ ಪ್ರೀತಿ ಬಾತ್. ಆ ಸಮಯಲಿ ನಾ, 'ಭಗಿನಿ' – ಎಂಬ ಕೈ ಬರಹದ ಒಂದು ಮಾಸ ಪತ್ರಿಕೆನ ಬರ್‍ದ್, ಎಲ್ಲೋವ್ಕು ಓದಿಕೆ ಕೊಟ್ಟ್ ಶಹಭಾಷ್ ಪಡ್ದಿದ್ದೆ. ಎರ್‍ಡ್ – ಮೂರು ತಿಂಗ ಆಕನ ನಂಗೆ ಬರ್‍ದ್ ಬರ್‍ದ್ ಸಾಕಾತ್. ಕಡೆಗೆ ನಾ ಅದರ ನಿಲ್ಸಿ ಬುಟ್ಟೆ. ಸೆಕೆಂಡ್ ಪಾರ್ಮ್‌ಂದ ಸಿಕ್ತ್ ಪಾರ್ಮ್‌ವರೆಗೆ ಇದೇ ಬೋರ್ಡ್ ಹೈಸ್ಕೂಲ್‌ಲಿ ನಾ ಕಲ್ತ ಪಾಠ, ಆಟ, ಸಾಂಸ್ಕೃತಿಕ ಕಲೆ, ತೋಟಗಾರಿಕೆ, ನನ್ನ ಜೀವನಲಿ ಮರ‍್ಯಕೆ ಆಗದ ದಿನಗ.

ಆಗ ನಂಗೆ ಬಾಳ ಪ್ರೀತಿನ ಗುರುಗಾಂತೇಳ್ರೆ ಸಿ.ಆರ್. ಭಟ್. ಅವರ ಹೆಸ್ರ್ ಸಿ. ರಾಮಚಂದ್ರ ಭಟ್. ಅವು ನಾವ್ಗೆ ಲೆಕ್ಕ ಪಾಠ ಮಾಡ್ತಿದ್ದೊ. ಅವ್ಕೆ ಸಿಟ್ಟ್ ಬಂದರೆ ಇಡೀ ಕ್ಲಾಸಿಗೇ ಬೆತ್ತದ ರುಚಿ ತೋರ್‌ಸ್ತಿದ್ದೊ. ಕಬ್ಬಿಣದ ಕಡಲೆ ಹಾಂಗಿದ್ದ ಲೆಕ್ಕ ಅವರ್‌ಂದಾಗಿ ನಂಗೆ ಹುರಿಕಡ್ಲೆ ಹಾಂಗಾತ್. ಒಮ್ಮೆ ಸಿ.ಆರ್. ಭಟ್ ನಮ್ಮ ಗೂಡೆಗಳ ಕಾಸರಗೋಡಿಗೆ ಪಿಕ್‌ನಿಕ್ ಕರ್‍ಕಂಡ್ ಹೋದೊ. ಆ ಕಾಲಲಿ ಗೂಡೆಗ ಮತ್ತೆ ಹೈದಂಗ ಒಟ್ಟಿಗೆ ಊರ್ ನೋಡಿಕೆ ಹೋಕೆ ಮನೆವು ಕಳ್‌ಸ್ತಿಲ್ಲೆ. ಕಾಸರಗೋಡ್‌ಲಿ ಗಾಜಿನ ಕಾರ್ಖಾನೆ, ಹಂಚಿನ ಕಾರ್ಖಾನೆ, ದೇವಸ್ಥಾನ, ರೈಲ್, ಸಮುದ್ರ ಎಲ್ಲಾ ನೋಡ್ಡೊ. ಬಾಕಾಕನ ಸಿ.ಆರ್. ಭಟ್ರ್ ನಾವ್ಗೊಂದು ಪ್ರಶ್ನೆ ಕೇಳ್ದೊ.

" ನೀವು ದಿನಾ ಸಮುದ್ರ ನೋಡಿಕೆ ಏನ್ ಮಾಡೊಕು?" – ಎಂತ. ಆಗ ನಾವು ಈಗನ ಮಕ್ಕಳ ಹಾಂಗೆ ಬುದ್ಧಿವಂತರ್ ಆಗಿತ್ಲೆ. ನಾವುಗೆ ಯಾರಿಗೂ

ಉತ್ತರ ಗೊತ್ತಾತ್ಲೆ. ' ಊರ್‌ಗೆ ಹೋದ ಮೇಲೆ ಈ ಪ್ರಶ್ನೆಗೆ ಉತ್ತರ ಹೇಳ್ನೆ.– ಎಂತ ಮಾಸ್ಟ್ರ ಹೇಳ್ದೊ. ಅಕೆರಿಗೆ ಅವು ನಾವ್ಗೆ ಹೇಳ್ದ ಉತ್ತರ ಎಂತದ್‌ಂತ ಗೊತ್ತೋ? 'ಸಮುದ್ರ ತೀರಲಿ ಇರುವ ಹೈದಂಗಳನೇ ನೀವು ಮೊದ್ವೆ ಆಗಿನಿ" ಎಂತ ಹೇಳ್ದೊ.

ನಾ ಹೈಸ್ಕೂಲ್‌ಲಿ ಕಲ್ಯಕಾಕನ ನಾವ್ಗೆ ದಿ| ನಾರಾಯಣ ರೈ, ದಿ| ಮೋಂಟಡ್ಕ ಕೃಷ್ಣಪ್ಪ ಮಾಸ್ಟ್ರ, ದಿ| ಜಗನ್ನಾಥ ರೈ, ಮೋಂಟಡ್ಕ ರಾಮಯ್ಯ ಮಾಸ್ಟ್ರ, ಪಾರೆ ವೆಂಕಪ್ಪಯ್ಯ, ದಿ| ಕುಂಞಪ್ಪ ಮಾಸ್ಟ್ರ, ದಿ| ಕೃಷ್ಣ ಭಟ್, ರಾಮ ಭಟ್, ಪದಕಣ್ಣಾಯ, ಸುಬ್ರಾಯ ಕಾರಂತ – ಇವೆಲ್ಲಾ ಪಾಠಕ್ಕೆ ಇದ್ದೊ.

ನಂಗೆ ಹಿಂದಿ ಪಾಠಕ್ಕೆ ಸುರುಗೆ ಎಸ್. ಸುಬ್ಬಯ್ಯ ನಾಯ್ಕರ್ ಇದ್ದೊ. ಅವು ನಾವ್ಗೆ ಸ್ಪೆಷಲ್ ಕ್ಲಾಸ್ ಮಾಡಿ, ದಕ್ಷಿಣ ಭಾರತ ಹಿಂದಿ ಪ್ರಚಾರ ಸಮಿತಿಯವರ ಪರೀಕ್ಷೆಗೆ ಕುದ್ರಿಸ್‌ತಿದ್ದೊ. ಪ್ರಾಥಮಿಕ, ಮಾಧ್ಯಮಿಕ ಮತ್ತೆ ರಾಷ್ಟ್ರ ಭಾಷೆ ಪರೀಕ್ಷೆಗೆ ಕುದ್ರ್‌ಸ್‌ತಿದ್ದೊ. ನಾನೂ ಸಣ್ಣಕ್ಕನೂ ಪ್ರಾಥಮಿಕ ಪರೀಕ್ಷೆಗೆ ಕುದ್ದು ಪಾಸಾಗೊಳೊ. ಒಮ್ಮೆ ದಕ್ಷಿಣ ಭಾರತ ಹಿಂದಿ ಪ್ರಚಾರ ಸಮಿತಿಯೊವು ಇಸಿದ ಒಂದು ಪ್ರಬಂಧ ಸ್ಪರ್ಧೆಗೆ ಕುದ್ದ್ ನಂಗೆ ಪ್ರಥಮ ಬಹುಮಾನ ನೂರು ರೂಪಾಯಿ ಮತ್ತೆ ಒಂದು ಹಿಂದಿ ಅರ್ಥಕೋಶ ಸಿಕ್ಕಿಟ್ಟು. ಸುಬ್ಬಯ್ಯ ನಾಯ್ಕರ್ ಅವರ ಕೆಲ್ಸಕ್ಕೆ ರಾಜಿನಾಮೆ ಕೊಟ್ಟ್ ರಾಜಕೀಯಕ್ಕೆ ಇಳ್ದೊ. ಓಟಿಗೆ ನಿಂತ್ ಗೆದ್ದ್ ಒ.ಐ.ಂಆದೊ. ಅವು ಹೋದ ಮೇಲೆ ನಾವ್ಗೆ ಹೆಚ್. ನಾರಾಯಣ ಭಟ್ ಹಿಂದಿ ಪಂಡಿತರಾಗಿ ಬಂದೊ.

ಹೈಸ್ಕೂಲ್ ಸುರಾಕಾಕನ ಮಾರಪ್ಪ ಶೆಟ್ರ್ ಹೆಡ್ ಮಾಸ್ಟ್ರ ಆಗಿದ್ದೊ. ಅವರ್‌ಂದ ಮೇಲೆ ವಿಠ್ಠಪ್ಪ ಪೂಜಾರಿ ಎಂಬೊವು ಹೆಡ್ ಮಾಸ್ಟ್ರ ಆಗಿ ಬಂದೊ. ಅವು ಹೋದ ಮೇಲೆ ಭವಾನಿಶಂಕರ ರಾವ್ ಹೆಡ್ ಮಾಸ್ಟ್ರ ಆಗಿ ಬಂದೊ. ಅವು ನಮ್ಮ ಮನೆ ಹಕ್ಕಲೆ ಇರುವ ಪಡ್ಡಂಬೈಲ್ ಚೆನ್ನಪ್ಪ ಶಾನುಭಾಗರ ಮನೆಲಿ ಬಾಡಿಗೆಗೆ ಇದ್ದೊ. ನಾ ಆಗಾಗ ಅವರ ಮನೆಗೆ ಹೋಗ್ತಿದ್ದೆ. ಅವರ ಹೆಣ್ಣ್ ಸತ್ಯವತಿಯೊವು ನನ್ನ ಸಣ್ಣಕ್ಕನ ದೊಡ್ಡ ಜೋಸ್ತಿ. ಅವರ ಮನೆಗೆ ಶಿವರಾಮ ಕಾರಂತರ ಹೆಣ್ಣ್ ಲೀಲಾವತಿ ಕಾರಂತ್ ಮತ್ತೆ ಅವರ ಮಗಳ್ ಮಾಲವಿಕಾ ಬಾತಿದ್ದೊ. ಲೀಲಾವತಿ ಕಾರಂತರ್ ಅಕ್ಕನೊಟ್ಟಿಗೆ ಮಾತಾಡ್ತಿದ್ದೊ. ಮಾಲವಿಕಾ ಮತ್ತೆ ನಾ ಗಜ್ಜುಗ ಆಟ ಆಡ್ತಿದ್ದೊ. ಆದರೆ ಒಮ್ಮೆ ನಂಗೆ ಮಾಲವಿಕಾನ ಭೇಟಿ ಮೈಸೂರ್‌ಲಿ ಆತ್. ಆಗ ನಾ ಮೈಸೂರ್‌ಲಿ ಸೈಂಟ್ ಫಿಲೋಮಿನಾ ಕಾಲೇಜಿಲಿ ಪಿ.ಯು.ಸಿ ಓದಿಕಂಡಿದ್ದೆ. ಮಾಲವಿಕಾ ಆಗ ಮಹಾರಾಣೀ ಕಾಲೇಜಿಲಿ ಓದಿಕಂಡಿತ್ತ್. ಅದ್ಕೆ ನನ್ನ ಗುರ್ತ ಸಿಕ್ಕಿಲ್ಲೆ. ನಾ ಗುರ್ತ ಸಿಕ್ಕಿರೂ ಮಾತಾಡ್ಸಿಕೆ ಹೋತ್ಲೆ. ಸತ್ಯವತಿಯೊವು ಮತ್ತೆ ಸಣ್ಣಕ್ಕ ದಿನಾ ಹಿಂಬೊತ್ತ್ ತಿರ್ಗಾಟಕ್ಕೆ ಹೋಗ್ತಿದ್ದೊ. ಒಮ್ಮೊಮ್ಮೆ ನಾನೂ ಅವರೊಟ್ಟಿಗೆ ಹೋಗ್ತಿದ್ದೆ. ಒಂದು ದಿನ ನಮ್ಮ ಹೈಸ್ಕೂಲ್ ಪೇದೆ ಹುಸೇನ್ ಸ್ಯಾಬ್ರು ಸತ್ಯವತಿ ಮತ್ತೆ ಸಣ್ಣಕ್ಕನ ದೋಣಿ ವಿಹಾರಕ್ಕೆ ಪಯಸ್ವಿನಿ ನದಿಲಿ ಏರ್ಪಾಡ್ ಮಾಡ್ದೊ.

ನಾನೂ ಅವರೊಟ್ಟಿಗೆ ಹೋಗಿದ್ದೆ. ಒಂದು ಗಂಟೆ ಮುಟ್ಟ ನಾವು ದೋಣಿಲಿ ಸುತ್ತಿದೊ.

ಭವಾನಿ ಶಂಕರ ಮಾಸ್ಟ್ರ ವರ್ಗ ಆಗಿ ಹೋದ ಮೇಲೆ ಸಂಕಪ್ಪ ರೈಗ ನಾವ್ಗೆ ಹೆಡ್ ಮಾಸ್ಟ್ರ ಆಗಿ ಬಂದೊ. ಅವು ಬಾಳ ಶಿಸ್ತ್‌ನೊವು. ಅವು ಕಲ್ಕತ್ತ ಯುನಿವರ್‌ಸಿಟಿಲಿ ಓದಿದೊವು ಗಡ. ಎಲ್ಲೋವು ಹೇಳ್ತಿದ್ದೊ. ನಾ ಹೈಸ್ಕೂಲ್ ಬುಡಿಕನ ಮುಟ್ಟ ಅವೇ ನಂಗೆ ಹೆಡ್ ಮಾಸ್ಟ್ರ ಆಗಿದ್ದೊ. ಅವರ ಹೆಣ್ಣ್‌ಗೆ ನನ್ನೊಟ್ಟಿಗೆ ಬಾಳ ಪ್ರೀತಿ. ಎಸ್.ಎಸ್.ಎಲ್.ಸಿ ಪಬ್ಲಿಕ್ ಪರೀಕ್ಷೆ ಆಗ ಪುತ್ತೂರ್‌ಲಿ ಬೋರ್ಡ್ ಹೈಸ್ಕೂಲಿಲಿ ನಡ್ಯತಿತ್ತ್. ಸಂಕಪ್ಪ ರೈಗಳ ಸೊಂತ ಮನೆ ಪುತ್ತೂರ್‌ಲಿ ಬೋರ್ಡ್ ಹೈಸ್ಕೂಲ್ ಹಕ್ಕಲೆ ಕೊಂಬೆಟ್ಟ್‌ಲಿ ಇತ್ತ್. ನಾನೂ ನನ್ನ ಕ್ಲಾಸ್‌ನ ವಾರಿಜ, ಗಿರಿಜ, ಗೂಡೆಗಳೂ ಎಸ್.ಎಸ್.ಎಲ್.ಸಿ ಪಬ್ಲಿಕ್ ಪರೀಕ್ಷೆ ಸಮಯಲಿ ಒಂದು ವಾರ ಮುಟ್ಟ ಅವರ ಮನೆಲಿ ಇದ್ದ್, ಪರೀಕ್ಷೆ ಮುಗ್ಸಿದೊ. ಅವರ ಸೊಸೆ ಮತ್ತೆ ಮಂಜ ನಮ್ಮ ಲಾಯ್ಕ್‌ಲಿ ನೋಡಿಕೊಂಡೊ. ನಾ ಎಸ್.ಎಸ್.ಎಲ್.ಸಿ ಫಸ್ಟ್ ಕ್ಲಾಸ್‌ಲಿ ಪಾಸಾದೆ. ಆಗ ನಾ ನನ್ನ ದೊಡ್ಡ ತಮ್ಮ ನಾಣಿನ ಕರ್ಕಂಡ್, ಅವ್ವ ಮಾಡಿಕೊಟ್ಟ ಒಂದು ಕುತ್ತಿ ತುಪ್ಪನ ತಕಂಡ್, ಅವರ ಮನೆಗೆ ಹೋಗಿ ಅವ್ಕೆ ಕೊಟ್ಟ್ ಕೃತಜ್ಞತೆ ಅರ್ಪಿಸಿ, ಅವರಿಬ್ಬೊರ ಆಶೀರ್ವಾದ ಪಡ್ದ್ ಬಂದೆ. ಅವುನೂ ನಾವ್ಗೆ ಪ್ರೀತಿಂದ ಕೋಳಿ ಗೈಪು, ಹುಗ್ಗೆ ಸಮ್ಮಾನ ಮಾಡಿ ಕಳ್ಸಿದೊ.

ನಾ ಹೈಸ್ಕೂಲಿಲಿ ಇರಿಕನ ಶಾಲಾ ಎಸೆಂಬ್ಲಿ ಮಾಡ್ತಿದ್ದೊ. ಶಾಲೆನ ವಿದ್ಯಾರ್ಥಿ ಮುಖಂಡ ಚುನಾವಣೆ ನಡ್ಯತಿತ್ತ್. ಒಮ್ಮೆ ಮೋಹಿನಿ ನಾಯಕ್ ಎಂಬ ಗೂಡೆ, ಧರ್ಮಾಸ್ಪತ್ರೆ ಡಾಕ್ಟರ ಮಗಳ್, ಖ.ಕ.ಐ ಆಗಿ ಗೂಡೆಗಳಿಗೆ ಗೌರವ ತಂದತ್. ಆ ಸಲ ಖ.ಕ.ಐ ಗೆ ಯಾವ ವಿದ್ಯಾರ್ಥಿಗ ಹೆಸ್ರ್ ಕೊಟ್ಟಿತ್ಲೆ. ಆಗ ಮಾಸ್ಟ್ರಗ ಎಲ್ಲ ಸೇರಿ ಮೋಹಿನಿ ನಾಯಕ್‌ನ ಖ.ಕ.ಐ ಆಕೆ ಒಪ್ಪಿಸಿದೊ. ಆಗನ ಕಾಲಲಿ ಗೂಡೆಗ ಖ.ಕ.ಐ ಆದೂಂತೇಳ್ರೆ ಬಾಳ ವಿಶೇಷ. ಕೆಲವು ಹೈದಂಗ ನಾವು ಗೂಡೆಗಳಿಗೆ ಸೆಲ್ಯೂಟ್ ಹೊಡ್ಯದಿಲ್ಲೇಂತ ಎಸೆಂಬ್ಲಿಗೆ ತೊಪ್ಪುಸ್‌ತಿದ್ದೊ. ಇದ್ ಹೆಡ್ ಮಾಸ್ಟ್ರಗೆ ಗೊತ್ತಾಗಿ ಆ ಹೈದಂಗಳಿಗೆ ಬೊಯ್ದ್, ಅವು ಎಸೆಂಬ್ಲಿಗೆ ಬಾವ ಹಾಂಗೆ ಮಾಡ್ದೊ. ಆಗ ಸಾಲೆಲಿ ಮಾದರಿ ಪಾರ್ಲಿಮೆಂಟ್ ಮಾಡ್ತಿದ್ದೊ. ಆರೋಗ್ಯ ಮಂತ್ರಿ ಸ್ಥಾನ ಗೂಡೆಗಳಿಗೆ ಕೊಡ್ತಿದ್ದೊ. ನನ್ನ ಆರೋಗ್ಯ ಮಂತ್ರಿ ಮಾಡ್ದೊ. ಆಗ ಸ್ಪೀಕರ್ ಆಗಿ ಮಾವಾಜಿ ಗೋಪಾಲಕೃಷ್ಣ ಇದ್ದೊ. ಅವು ನನ್ನಂದ ಒಂದು ಕ್ಲಾಸ್ ಮುಂದೆ ಇದ್ದೊ. ಗೂಡೆಗಳ ತ್ರೋಬಾಲ್ ಟೀಂ, ರಿಂಗ್ ಟೆನ್ನಿಸ್ ಟೀಂ ಇತ್ತ್. ಬೆಳ್ಳಾರೆ, ವಿಟ್ಲ, ಪುತ್ತೂರಿಗೆ ನಾವು ಆಡಿಕೆ ಹೋಗ್ತಿದ್ದೊ.

ಒಮ್ಮೆ ಮಾಸ್ಟ್ರಗ ಎಲ್ಲಾ ಸೇರಿ 'ಟಿಪ್ಪು ಸುಲ್ತಾನ್' ನಾಟಕ ಆಡ್ದೊ. ಕುಂಞಪ್ಪ ಮಾಸ್ಟ್ರ ಟಿಪ್ಪು ಸುಲ್ತಾನ ಪಾತ್ರ ಬಾಳ ಹೆಸ್ರ್ ಪಡ್ತ್. ಡ್ರಿಲ್ ಮಾಸ್ಟ್ರ ಕಾನತ್ತಿಲ ಪದ್ಮಯ್ಯ ಗೌಡ್ರ್ ಮೀರ್ ಸಾಧಕನ ಪಾತ್ರ ಮಾಡ್ದೊ. ಕ್ಲಾರ್ಕ್ ಶೇಷಪ್ಪ ಗೌಡ್ರು

ತಿರುಮಲ, ಸುಬ್ರಾಯ ಕಾರಂತರ್ ಕಾರ್ನ್‌ವಾಲೀಸ್ ಪಾತ್ರ ಮಾಡಿ ಎಲ್ಲರ್‌ಂದ ಹೊಗ್ಳ್ಸಿಕೊಂಡೊ. ಟಿಪ್ಪು ಸುಲ್ತಾನ ನಾಟಕ ಎರಡ್ನೇ ಸರ್ತಿ ಮಾಡಿದ್ದೊ. ಆಗ ಸುಬ್ರಾಯ ಕಾರಂತರಿಗೆ ವರ್ಗ ಆಗಿತ್ತ್. ಆ ಸಮಯಲಿ ನಾರಾಯಣ ರೈ ಮಾಸ್ಟ್ರ ಕಾರ್ನ್‌ವಾಲೀಸ್ ಮಾಡಿದ್ದೊ. ಮತ್ತೊಮ್ಮೆ 'ದೇವದಾಸಿ' – ನಾಟಕನ ಮಾಸ್ಟ್ರ್‌ಗ ಎಲ್ಲಾ ಸೇರಿ ಮಾಡ್ದೊ. ಅದರ್ಲಿ ವೆಂಕಪ್ಪಯ್ಯ ಡಾಕ್ಟ್ರ ಅಕ್ಕನ ಮಂಜ ಶಂಕರ ಭಟ್ ಎಂಬಂವ 'ಮಣಿ ಮಂಜರಿ' ಪಾತ್ರ ಮಾಡಿ ಎಲ್ಲರ್‌ಂದ ಹೊಗ್ಳಿಸಿಕಂಡತ್.

ಆ ಕಾಲಲಿ ನಾವು ಸ್ವಾತಂತ್ರ್ಯ ದಿನಾಚರಣೆನ ಬಾಳ ಗೌಜಿಲಿ ಮಾಡ್ತಿದ್ದೊ. ನಮ್ಮ ನಮ್ಮ ಕ್ಲಾಸ್‌ನ ಚೊಕ್ಕ ಮಾಡಿ ರಂಗೋಲಿ ಹಾಕಿ, ಕಾಡ್ ಹೂಗಳ್‌ಂದ, ಎಲೆಗಳ್‌ಂದ ಅದರ ಸಿಂಗಾರ ಮಾಡ್ತಿದ್ದೊ. ಗಾಂಧಿ, ನೆಹರು ಪಟಗಳ ನಾವೇ ಕೈಲಿ ಬುಡ್ಸಿ, ಕ್ಲಾಸ್‌ಲಿ ತೂಗ ಹಾಕ್ತಿದ್ದೊ. ಎಸೆಂಬ್ಲಿ, ಮೆರೊವಣ್ಗೆ, ಸಿಂಯಿ ತಿನ್ಸ್, ಎಲ್ಲಾ ಗಮ್ಮತ್ತ್ ಇರ್ತಿತ್ತ್. ನಮ್ಮ ತೋಟಗಾರಿಕೆ ಕೆಲ್ಸನ ಕೇಳ್ದೇ ಬೇಡ. ಡ್ರಾಯಿಂಗ್ ಮಾಸ್ಟ್ರ ನಾರಾಯಣ ರಾವ್ ಕ್ರಾಫ್ಟ್ ಟೀಚರೂ ಆಗಿದ್ದೊ. ಅವರ ಮುಂದಾಳ್ತನಲಿ, ಶಾಲೆನ ಪಕ್ಕದ ಜಾಗೆಲಿ ಬೇಲಿ ಹಾಕಿ, ಸೋಂತೆ, ಅಲ್ಸಂಡೆ, ಬೆಂಡೆ, ಕುಂಬಳ, ಹೂ ದೈಗಳ ಬೆಳ್ಸ್‌ತಿದ್ದೊ. ಬೆಳ್ಸಿದ ನೆಟ್ಟಿಕಾಯಿಗಳ 'ಯಾಲಂ' ಮಾಡ್ತಿದ್ದೊ. ನಾವು ಮಕ್ಕ ಅದರ 'ಏಲಂ' ಲಿ ತಕಂಬತಿದ್ದೊ.

ಆಗನ ಕಾಲಲಿ ಈಗನಾಂಗೆ ಗೂಡೆಗ ಹೈದಂಗಳ ಒಟ್ಟಿಗೆ ಮಾತಾಡ್ತಿತ್ತೆ. ಗೂಡೆಗೆಲ್ಲಾ ಅತ್ತಿತ್ತ ನೋಡದೆ ತಲೆ ಬೊಗ್ಗಿಸಿಕಂಡ್ ನಡ್ಯತಿದ್ದೊ. ಮಾನ ಮೊರ್‍ಯಾದೆಗೆ ಬಾಳ ಹೆದ್ರ್‌ತಿದ್ದೊ. ಅಣ್ಣ, ತಂಗೆಕ ಆದರೂ ಸಾಲೆಲಿ ಅವು ಮಾತಾಡ್ತಿತ್ತೆ. ಗುರುಗಳಿಗೆ ತುಂಬಾ ಗೌರವ ಕೊಡ್ತಿದ್ದೊ. ಎಸ್.ಎಸ್.ಎಲ್.ಸಿ.ಲಿ ಇರಿಕಾಕನ ನಾ ವಾರಿಜ, ಗಿರಿಜ, ನಮ್ಮ ಕ್ಲಾಸ್‌ಲಿ ನಾವು ಮೂರು ಜನ ಹೆಣ್ಣ್ ಗೂಡೆಗ. ನಾವು ಬಾಳ ಒಗ್ಗಟ್ಟಿಲಿ ಇದ್ದೊ. ನಾವು 'ತ್ರಿಸಿಸ್ಟರ್ಸ್' –ಎಂತ ಹೆಸ್ರ್ ಇಸಿಕಂಡ್ ಸಾಲೆನ ವಾರ್ಷಿಕೋತ್ಸವಲಿ ಬಹುಮಾನ ಕೊಟ್ಟಿದ್ದೊ. ನಮ್ಮ ಇಂಗ್ಲಿಷ್ ಮಾಸ್ಟ್ರ ರಾಮಭಟ್ಟರ ಕೂಸಿಗೆ "ತ್ರಿಸಿಸ್ಟರ್ಸ್" ಹೆಸ್ರ್‌ಲಿ ಒಂದು ಉಡ್ಗೊರೆ ಕೊಟ್ಟೊಳೊ.

ನಾವ್ಗೆ ಹೈಸ್ಕೂಲ್‌ಲಿ ಹೆಡ್ ಮಾಸ್ಟ್ರ ಕೋಣೆ ಹಕ್ಕಲೆ ಗೂಡೆಗಳಿಗಾಗಿ, ಒಂದು ರೂಮು ಬುಟ್ಟು ಕೊಟ್ಟಿದ್ದೊ. ಅದರ 'ಗರ್ಲ್ಸ್ ರೂಂ' – ಎಂದು ಕರ್‍ಯತಿದ್ದೊ. ಹತ್ತ್‌ಗಂಟೆಗೆ ಸಾಲೆ ಸುರು ಆಗ್ತಿತ್ತ್. ಅದರ್‌ಂದ ಮುಂದೆ ಬಂದ ಗೂಡೆಗೆಲ್ಲಾ ಗೂಡೆಗಳ ಕೋಣೆಲೇ ಇರಕಾಗಿತ್ತ್. ಒಮ್ಮೆ ಗೂಡೆಗಳಿಗೆಲ್ಲಾ ಒಬ್ಬ ಲೀಡರ್ ಮಾಡೊಕೂಂತ ಹೇಳ್ದೊ. ಆಗ ನಮ್ಮ ಸಾಲೆಲಿ ಒಂದು ಬಾಳ ಪೊರ್ಲುನ ಗೂಡೆ ಇತ್ತ್. ಅದರ ಎಲ್ಲೋವು 'ಸಿಂಡ್ರೆಲ್ಲಾ'ಂತ ಹೇಳ್ತಿದ್ದೊ. ಅದ್ ಅಷ್ಟ್ ಪೊರ್ಲು ಇತ್ತ್. ಎಸೆಂಬ್ಲಿಲಿ ನಿಲ್ಲಿಕಾಕನ ಗೂಡೆಗ ಎಲ್ಲಾ ಒಂದು ಗುಂಪುಲಿ ನಿಲ್ತಿದ್ದೊ. ಆ ಗುಂಪುನ ಎದ್ರ್ ಅದರ ನಾಯಕಿ ನಿಲ್ತಿತ್ತ್. ಹೆಚ್ಚಾಗಿ ನಮ್ಮ ಗುಂಪುಲಿ ಪ್ರೇಮಲತಾ ಪ್ರಭು

ನಾಯಕಿ ಆಗಿ ನಿಲ್ತಿಲ್ತ್. ಒಮ್ಮೆ ಮೀನಾಕ್ಷಿಗೂ ಪ್ರೇಮಲತಂಗೂ ಸ್ಪರ್ಧೆ ಆತ್. ಮೇಲೆನ ಪೇಟೆಂದ ಬಾವ ಗೂಡೆಗ ಎಲ್ಲಾ ಪ್ರೇಮಲತಂಗೆ ಓಟು ಕೊಟ್ಟೊ. ಕೆಳಗೆನ ಪೇಟೆಂದ ಬಾವ ಗೂಡೆಗೆಲ್ಲಾ ಮೀನಾಕ್ಷಿಗೆ ಓಟು ಕೊಟ್ಟೊ. ಅದರ್ಲಿ ಪ್ರೇಮಲತಾ ಗೆದ್ದತ್. ಮಿನಾಕ್ಷಿ ನಾಟಕಲಿ ಆಟೋಟಲಿ ಬಾಳ ಮುಂದೆ. ಪ್ರೇಮಲತಂಗೆ ಅದ್ ಪ್ರತಿಸ್ಪರ್ಧಿ ಆಗಿತ್ತ್. ತ್ರೋಬಾಲ್‌ಲಿ ನಾರಾಯಣಿ ಎಂಬ ಗೂಡೆ ಬಾಳ ಉಸಾರ್. ಅದ್ ನಮೆಲ್ಲರ್‌ಂದ ಎತ್ತರ ಇದ್ದ ಕಾರಣ ಸುಲಬಲಿ ಚೆಂಡ್‌ನ ಹಿಡ್ಯತಿತ್ತ್. ಅದಿದ್ದ ಪಾರ್ಟಿ ಯಾಗೋಳು ಗೆಲ್ತಿತ್ತ್. ವಾರಿಜ, ಗಿರಿಜ, ಕೂಡಾ ಒಳ್ಳೆಯ ಆಟಗಾರ್ತಿಗ ಆಗಿದ್ದೊ.

ನನ್ನಂದ ಎರ್ಡ್ ಕ್ಲಾಸ್ ಕೆಳಗೆ ಒದ್‌ತಿದ್ದ 'ಜಾನಕಿ' ಹೆಸ್ರ್‌ನ ಗೂಡೆ ಒಂದಿತ್ತ್. ಆಟ ಆಡಿಕಾಕನ ಅದರ ಮೂಕುಂದ ನೆತ್ತೆರ್ ಬಾತಿತ್ತ್. ಆಗ ಅದಕ್ಕೆ ತುಂಬಾ ದಣ್ಕೆ ಆಗ್ತಿತ್ತ್. ನಾವೆಲ್ಲಾ ಆಗ ಹೆದ್ರಿ ಅದರ ಆಟದ ಮೈದಾನಲಿ ಕುದ್ರಿಸಿ, ಗಾಳಿ ಹಾಕ್ತಿದ್ದೊ. ಕುಡ್ಯಕೆ ನೀರ್ ಕೊಡ್ತಿದ್ದೊ. ಅದ್ ತುಂಬಾ ಬಡ ಗೂಡೆ ಆದ ಕಾರಣ, ನಾ ಆಗಾಗ ಅದ್ಕೆ ಸಾಯ ಮಾಡ್ತಿದ್ದೆ. ಮನೆಗೆ ಬಾಕಾಕನೆಲ್ಲಾ ಊಟ, ತಿಂಡಿ ಕೊಟ್ಟ್ ಕಳ್ಸ್‌ತಿದ್ದೆ. ಪುಸ್ತಕಗಳ ತೆಗ್ಸಿ ಕೊಡ್ತಿದ್ದೆ. ಅದ್ ಎಂಟ್‌ನೇ ಕ್ಲಾಸ್ ಪಾಸಾದ ಮೇಲೆ ಟೀಚರ್ ಟ್ರೈನಿಂಗಿಗೆ ಹೋತ್. ಆ ಸಮಯಲಿನೂ ಅದ್ಕೆ ತುಂಬಾ ಸಾಯ ಮಾಡ್ತಿದ್ದೆ. ರಜೆ ಸಿಕ್ಕಿಕಾಕನೆಲ್ಲಾ ಮನೆಗೆ ಬಾತಿತ್ತ್. ಅದರ ತಂಗೆನಾಂಗೆ ಪ್ರೀತಿಸ್‌ತಿದ್ದೆ. ಆ ಕಾಲಲಿ ಎಂಟನೇ ಕ್ಲಾಸ್ ಪಾಸಾದರೆ ಟೀಚರ್, ನರ್ಸ್ ಟ್ರೈನಿಂಗಿಗೆ ಹೋಕೆ ಆಗ್ತಿತ್ತ್. ಇನ್ನೊಂದು ಗೂಡೆ ನನ್ನೊಟ್ಟಿಗೆ ಓದ್ತಿದ್ದ ಜಲಜ ಮತ್ತೆ ನಾ ಎಲಿಮೆಂಟ್ರಿ ಸಾಲೆಲಿ ಕಲ್ಯಕಾಕನನೇ, ನಾವಿಬ್ರೂರು ಒಟ್ಟಿಗೆ ಓದ್ತಿದ್ದೊ. ಅದುನೂ ಎಂಟನೇ ಕ್ಲಾಸ್ ಪಾಸಾದ ಮೇಲೆ ನರ್ಸ್ ಟ್ರೈನಿಂಗಿಗೆ ಹೋತ್. ನನ್ನ ಕ್ಲಾಸ್‌ಲಿ ವಿನಿಫ್ರೆಡ್ ಮಾಡ್ತಾ ಎಂತ ಹೇಳ್ವ ಗೂಡೆ ಒಂದಿತ್ತ್. ಅದ್ ಎಲ್ಲರೊಟ್ಟಿಗೆನೂ, " ಯಾರಲ್ಲೂ ಹೇಳ ಬೇಡ" – ಎಂತ ಗುಟ್ಟು ಹೇಳ್ತಿತ್ತ್. ಎಲ್ಲರೊಟ್ಟಿಗೆನೂ ಆ ಗುಟ್ಟುನ ಹೇಳಿ, ಹೇಳ್ಬಡಾಂತ ಹೇಳ್ತಿತ್ತ್. ಎಲ್ಲೋವ್ಕು ಅದರ ಗುಟ್ಟ್‌ನ ಮಾತ್ ಗೊತ್ತಾಗ್ತಿತ್ತ್. ಯಾವ ಮಾತ್‌ನೂ ಅದರ ಹಕ್ಕಲೆ ಗುಟ್ಟಾಗಿ ಇರ್ತಿತ್ಲೆ. ಅದರ್‌ಂದಾಗಿ, ಯಾರಾದರೂ ಗುಟ್ಟು ಮಾತ್ ಹೇಳ್ರೆ ನಾವು, "ಏನದು? ವಿನ್ನಿ ಗುಟ್ಟೇ?" ಎಂತ ಕೇಳ್ತಿದ್ದೊ. ಅದ್ ಎಲ್ಲರೊಟ್ಟಿಗೆ ಜಗಳ ಮಾಡ್ತಿತ್ತ್. ಆದರೆ ಅಷ್ಟೇ ಬೇಗ ಮರ್ರ್ಯತಿತ್ತ್. ಅದುನೂ ಥರ್ಡ್ ಪಾರ್ಮ್ ಪಾಸಾದ ಮೇಲೆ ಟೀಚರ ಟ್ರೈನಿಂಗಿಗೆ ಹೋಗಿ ಟೀಚರಾತ್. ನೆಡ್ಬೈಲ್ ಕೇಶವ ಭಟ್ರ ಮಗಳ್ ಜಯಲಕ್ಷ್ಮಿ ಯಾಗೋಳೂ ಲೆಕ್ಕಲಿ ಕ್ಲಾಸ್‌ಗೆ ಫಸ್ಟ್ ಬಾತಿತ್ತ್. ನೂರಕ್ಕೆ ನೂರು ಮಾರ್ಕ್ ತೆಗ್ಯತಿತ್ತ್. ಕಲ್ಯೋದರ್ಲಿ ಕ್ಲಾಸಿಗೆ ಫಸ್ಟ್ ಆಗಿತ್ತ್. ಆದರೆ ಅದ್ ಥರ್ಡ್ ಪಾರ್ಮ್ ಪಾಸಾದ ಮೇಲೆ ಸಾಲೆ ಬುಟ್ಟ್ ಮೊದ್ವೆ ಆತ್. ಸಿ.ಆರ್ ಭಟ್ಟರ ಮಗಳ್ ಶ್ರೀ ದೇವಿ, ನನ್ನ ಕ್ಲಾಸ್ ಮೇಟ್. ಅದುನೂ ಅರ್ಧಲೇ ಸಾಲೆ

ಬುಟ್ಟತ್. ಪೈಲೂರು ನಾರಾಯಣ ರಾವ್ ಅವರ ಮಗಳ್ ಪ್ರೇಮಲತಾ ನನ್ನ ಕ್ಲಾಸ್ ಮೇಟ್. ಅದರ ಅಣ್ಣ ಅಮೇರಿಕಾಲಿ ಕೆಲ್ಸಲಿತ್ತ್. ಅಂವ ಅಲ್ಲಿಂದ ಆಗಾಗ ಕಾಗ್ದ ಬರ್ಯತಿತ್ತ್. ಒಮ್ಮೆ ಅದ್ಕೆ ಒಂದು ಪೆನ್ನ್‌ನ ಪಾರ್ಸೆಲ್ ಮಾಡಿ ಕಳ್ಸಿತ್. ಅದರ ಅದ್ ನಾವ್ಗೆಲ್ಲಾ ತೋರ್ಸಿ ಸಂಭ್ರಮ ಪಟ್ಟತ್. ಅದ್ ನನ್ನ ಒಳ್ಳೆ ಜೋಸ್ತಿ. ಅದ್ಕೆ ತೋಟಗಾರಿಕೆಲಿ ಬಾಳ ಪ್ರೀತಿ. ಸಾಲೆಲಿ ತೋಟಗಾರಿಕೆ ಮಾಡಿಕಾಕನ ಅದ್ ಒಳ್ಳೊಳ್ಳೆ ಹೂವುನ ದೈಗಳ, ನೆಟ್ಟಿ ಕ್ಯಾ ಬೀಜಗಳ, ಹೂವುನ ಬೀಜಗಳ ತಂದ್ ಕೊಡ್ತಿತ್ತ್. ಪೋರ್ತ್ ಪೋರ್ಮ್‌ಲಿ ಅದ್ ಪಂಜ ಹೈಸ್ಕೂಲಿಗೆ ಹೋತ್. ಅಲ್ಲಿಂದ ವಾರಕ್ಕೊಮ್ಮೆ ಕಾಗ್ದ ಬರ್ಯತಿತ್ತ್. ನನ್ನ 'ಅಕ್ಕಾ'ಂತಳೇ ಕರ್ಯತಿತ್ತ್. ರಜೆ ಸಿಕ್ಕಿಕಾಕನೆಲ್ಲಾ ಮನೆಗೆ ಬಾತಿತ್ತ್. ಎಸ್.ಎಸ್.ಎಲ್.ಸಿ. ಆದ ಮೇಲೆ ಅದ್ ಮೈಸೂರಿಗೆ ಹೋಗಿ ಪಿ.ಯು.ಸಿ ಮಾಡಿ ಮೆಡಿಕಲ್‌ಗೆ ಸೇರಿ ಡಾಕ್ಟರಾತ್. ಪ್ರೀತಿಸಿದ ಡಾಕ್ಟರ್ ಹೈದನನೇ ಮೊದ್ವೆ ಆಗಿ ಒಂದು ಗಂಡು ಕೂಸುನೂ ಆಗಿ ಸುಖಲಿತ್ತ್. ಒಂದು ದಿನ ಪ್ರೇಮಲತಾ ಪೈಲೂರು ರಸ್ತೆ ಅಪಘಾತಲಿ ತೀರಿ ಹೋತ್‌ಂತ ನಂಗೆ ಸುದ್ದಿ ಸಿಕ್ಕಿತ್. ನಂಗೆ ಬಾಳ ಬೇಜಾರಾತ್. ಅದರ ಗಂಡ, ಕೂಸು ಬೊದ್ಕಿದೊ ಗಡ. ಗಂಡ ಮಾತ್ರಾ ಇನ್ನೊಂದು ಮೊದ್ವೆ ಆತ್ಲೆ.

ಉಬರಡ್ಕ ಮಿತ್ತೂರು ಗ್ರಾಮಂದ ಲಕ್ಷ್ಮಿ ಕುಮಾರಿ ಮತ್ತೆ ವಿಜಯಲಕ್ಷ್ಮಿ ಎಂಬ ಇಬ್ಬೊರು ಬಟ್ಟೆತಿ ಗೂಡೆಗ ದಿನಾ ಐದ್ ಮೈಲ್ ನಡ್ದ್ ಹೈಸ್ಕೂಲಿಗೆ ಬಾತಿದ್ದೊ. ಅವು 5 ಗಂಟೆಗೆ ಎದ್ದ್, 7 ಗಂಟೆಗೆ ಮನೆ ಬುಟ್ಟರೆ 93/4 ಕ್ಕೆ ಸಾಲೆ ಸೇರ್ತಿದ್ದೊ. ಅವು ದಾರಿಲಿ ನಡ್ಕಂಡ್ ಬಾಕಾಕನ ಓದಿದರ ಬಾಯಿಪಾಠ ಮಾಡ್ತಿದ್ದೊ ಗಡ. ಕಲ್ಯಕೆ ಭಾರಿ ಉಸಾರಿದ್ದೊ. ದೇಂಗೋಡಿಂದ ಬಾವ ಚಿನ್ನಮ್ಮ, ಭಾಗಿರಥಿ ನನ್ನ ಕ್ಲಾಸ್‌ನ ಗೂಡೆಗ. ಭಾಗೀರಥಿ ಫಿಫ್ತ್ ಪಾರ್ಮ್‌ಲಿ ಫೈಲಾಗಿ ಸಾಲೆ ಬುಟ್ಟತ್. ಅದುನೂ ಒಂದೆರ್ಡ್ ವೊರ್ಸಲಿ ತೀರಿ ಹೋತ್. ಭಾಗೀರಥಿ, ಚಿನ್ನಮ್ಮ ನಮ್ಮ ಮನೆಗೆ ಹಬ್ಬ ಹೊಸ್ತ್‌ಗೆ ಬಾತಿದ್ದೊ. ನಾವು ಕಾಸ್ರ್ರಗೋಡಿಗೆ ಪಿಕ್‌ನಿಕ್ ಹೋಕಾಕನ ಬಸ್ಸ್‌ಸ್ಟಾಂಡ್ ನಮ್ಮ ಮನೆ ಹಕ್ಕಲೆ ಇದ್ದ ಕಾರಣ, ಇರ್ಳ್ ನಮ್ಮಲ್ಲೇ ಉಳ್ದ್ ಬೊಳ್ಪುನ ಆರ್ ಗಂಟೆ ಬಸ್ಸ್‌ಲಿ ನಾವು ಹೋದೊ.

ಹೈಸ್ಕೂಲ್‌ಗೆ ಹೋಕನ ನಾವು ಮೇಲೆನ ಪೇಟೆಂದ ತುಂಬಾ ಗೂಡೆಗ ಒಟ್ಟಿಗೆ ಹೋಗ್ತಿದ್ದೊ. ದೇಂಗೋಡಿಂದ ಸುಬ್ಬಪ್ಪ ಮಾಸ್ತ್ರ ಮಗಳ್ ಭಾಗೀರಥಿ, ಅದರ ತಂಗೆ ದೇವಿಕುಮಾರಿ, ಸುಬ್ಬಣ್ಣ ಗೌಡ್ರ ಮಗಳ್ ಚಿನ್ನಮ್ಮ, ಚಿಕ್ಕಮ್ಮಕ್ಕನ ಹೋಟ್ಲ್‌ಲಿ ರೂಂ ಮಾಡಿ ಕಂಡಿದ್ದ ವಾರಿಜ, ಸುಗಂಧಿ, ಸತ್ಯಭಾಮ, ಸುಂದರ ರಾಯರ ಮನೆಂದ ಪ್ರೇಮಲತ, ಪದ್ಮಾವತಿ, ವೆಂಕಟ್ರಾಯರ ಮಕ್ಕ ಗುಲಾಬಿ, ಸುಗಂಧಿ, ಕೃಷ್ಣಾ ಸ್ಟೋರ್ ಹಕ್ಕಲೆ ಬಾಕಾಕನ ಸರಳಾಯರ ಮಕ್ಕ ಕಮಲಾಕ್ಷ, ಬೇಬಿ ಸರೋಜ ಇಷ್ಟ್ ಜನ ನಾವು ಒಟ್ಟಿಗೆ ಸಾಲೆಗೆ ಹೋಗ್ತಿದ್ದೊ. ನಾವ್ಗೆಲ್ಲಾ ಲೀಡರ್ ಪ್ರೇಮಲತ. ಅದ್

ನಾವ್ಗೆ ದೊಡ್ಡಕ್ಕ ಇದ್ದ ಹಾಂಗೆ. ಅದ್ ನಾವ್ಗೆ ದಾರಿ ಉದ್ದಕ್ಕೂ ಕತೆ ಹೇಳ್ತಿತ್. ಪ್ರೇಮಲತ ಎಸ್.ಎಸ್.ಎಲ್.ಸಿ. ಬುಟ್ಟ ಮೇಲೆ ನಾವು ಹೈಸ್ಕೂಲ್‌ಗೆ ಹೋಗುವ ದಾರಿ ಬದ್ಲಾತ್.

ಆಗ ಸುಳ್ಯ ಪೇಟೆ ಮುಂದೆಂದ ಹಂಞ ದೊಡ್ಡದಾಗಿತ್ತ್. ಊರ್‌ಲಿ ಕಾಡ್ ಹೋಗಿ ದಾರಿ ಬದಿಲಿ ಅಲ್ಲಲ್ಲಿ ಮನೆಗ ಎದ್ದೊ. ಆಗ ನಮ್ಮ ಮನೆ ಹಿಂದೆಂದ ಹೋದರೆ ಧರ್ಮಸ್ಥಳ ಬಂಗ್ಲೆಗೆ ಮುಟ್ಟ ಹೋಗಿ, ಅದ್ ದೇವ್ರ ತೇರ್ ಎಳ್ಯವ ರಸ್ತೆಗೆ ಸೇರ್ತಿತ್. ಚೆನ್ನಕೇಶವ ದೇವಸ್ಥಾನದ ಹಕ್ಕಲೆ ಅಡ್ಡ ತಿರ್‍ಗಿಕೆ ಕಾಲ್ದಾರಿ ಇತ್ತ್. ಅದರ್ಲಿ ಮುಂದೆ ಹೋದರೆ ಹೈಸ್ಕೂಲ್ ಸಿಕ್ತಿತ್ತ್. ಕಾಲ್ದಾರಿಲಿ ಆಗ ಜನ ಸಂಚಾರ ಸುರಾತ್. ನಾವು ಆಗ ಹೆದ್ರಿಕೆ ಇಲ್ಲದೆ ಆ ದಾರಿಲಿ ನಡ್ಯತಿದ್ದೊ. ಆಗ ನಂಗೆ ಜೊತೆಗೆ ಸಿಕ್ಕ್‌ತಿದ್ದದ್ ಪದ್ಮಾಕ್ಷಿ ಬೈಪಡಿತ್ತಾಯ ಮತ್ತೆ ನನ್ನ ಮೇಲೆನ ಪೇಟೆನ ಗೂಡೆಗ. ಪದ್ಮಾಕ್ಷಿ ಬೈಪಾಡಿತ್ತಾಯ ವರದಕ್ಷಿಣೆ ನಾಟಕಲಿ ನನ್ನ ಹೆಣ್ಣ್ ಆಗಿ ಪಾತ್ರ ಮಾಡ್ತ್. ಅಲ್ಲಿಂದ ಮೇಲೆ ಅದುನೂ ನಾನೂ ಜೋಸ್ತಿಗ ಆದೊ. ಅದ್ ನನ್ನಂದ ಮೂರು ಕ್ಲಾಸ್ ಸಣ್ಣದ್. ನನ್ನ ದೊಡ್ಡ ತಮ್ಮನ ಕ್ಲಾಸ್ ಮೇಟ್. ಎಸ್.ಎಸ್.ಎಲ್.ಸಿ ಇರಿಕಾಕನ ನಾವ್ಗೆ ಸೆಲೆಕ್ಷನ್ ಪರೀಕ್ಷೆ ಮಾಡ್ತಿದ್ದೊ. ನಂಗೆ ಎಲ್ಲಾ ಪಾಠಲಿನೂ ಅರುವತ್ತರ್‌ಂದ ಹೆಚ್ಚಿಗೆ ಮಾರ್ಕ್ ಇತ್ತ್. ಇಂಗ್ಲೀಷ್ ಪಾಠಲಿ ನಾ ತುಂಬಾ ಹಿಂದೆ ಬರೇ 23 ಮಾರ್ಕ್ ಸಿಕ್ಕಿತ್. ಇದರ್‌ಂದಾಗಿ ನಮ್ಮ ಇಂಗ್ಲಿಷ್ ಮಾಸ್ಟ್ರ, ರಾಮ ಭಟ್ರ್ ನನ್ನ ಸರ್ಕಾರ ಪರೀಕ್ಷೆಗೆ ಕುದ್ರಿಕೆ ಬುಟ್ಟತ್ತಿಲ್ಲೆ. ನೂರಕ್ಕೆ ನೂರು ಜನ ಪಾಸಾಕೂಂತ ಅವರ ಇಚ್ಛೆ. ಹಾಂಗಾಗಿ ನಮ್ಮ ಕೆಲವು ಮಕ್ಕಳ ಪರೀಕ್ಷೆಗೆ ಕುದ್ರಿಕೆ ಬುಟ್ಟತಿಲ್ಲೆ. ಶಿಕ್ಷಕ –ರಕ್ಷಕ ಸಂಘದ ಮಿಾಟಿಂಗ್‌ಲಿ ನನ್ನ ಪರ ಕುಂಜ಼ಿ ವೆಂಕಟ್ರಮಣ ಗೌಡ್ರ್ ಮಾತಾಡ್ದೊ ಗಡ. ನಂಗೆ ಆ ಮೇಲೆ ಗೊತ್ತಾತ್. ಆದರೆ ರಾಮ ಭಟ್ರ್ ಒಪ್ಪಿತ್ಲೆ. ಆಗ ಕುಂಜ಼ಿಯೊವ್ಕೆ ಅಸ್ಟ್ ಹೆಸ್ರ್ ಇತ್ಲೆ. ಇದರ ಕುಂಜ಼ಿಯೊವು ನನ್ನ ಅಪ್ಪನೊಟ್ಟಿಗೆ ಹೇಳ್ದೊ. ವ್ಯಾಪಾರಲಿ ಮುಳುಂಗಿ ಹೋದ ಅಪ್ಪ, ನನ್ನ ವಿದ್ಯೆ ಬಗ್ಗೆ ಹೆಚ್ಚ್ ತಲೆ ಕೆಡ್ಸಿಕಂಡತ್ಲೆ. ನಾ ಹೆಣ್ಣ್ ಗೂಡೆ ಅಲ್ಲನೋ? ಹೆಣ್ಣ್ ಮಕ್ಕ ಕಲ್ತರೆಸ್ಟ್? ಬುಟ್ಟರೆಸ್ಟ್? ಎಷ್ಟಾದರೂ ಅವು ಬೇರೆ ಮನೆಗೆ ಹೋಗೋವು ಅಲ್ಲನೋ? ಅಪ್ಪ,

“ಸಿಲೆಕ್ಷನ್ ಮಾಡದಿದ್ದರೆ ಅಷ್ಟೇ ಹೋತ್. ಅದ್ ಬೇಕಾರೆ ಇನ್ನೊಂದು ವೊರ್ಸ ಸಾಲೆಗೆ ಹೋಗಲಿ” ಎಂತ ಹೇಳ್ದೊ. ಬೇಜಾರ್‌ಲಿ ನಾ ಸಾಲೆಗೆ ಹೋಗದೆ ಮನೆಲೇ ಮೂರು ತಿಂಗ ಕಳ್ದೆ. ಜೂನ್‌ಂದ ಮೇಲೆ ನಾ ಸಂಪೂರ್ಣ ಬದ್ಲಾಗಿ ಹೋದೆ. ಯಾರೊಟ್ಟಿಗೂ ಮಾತಾಡದೆ ಮೌನ ಗೌರಿ ಆದೆ. ಬರೇ ಪುಸ್ತಕದ ಹುಳ ಆದೆ. ಗಂಭೀರ ಆದೆ. ಇದರ್‌ಂದಾಗಿ ನನ್ನ ವ್ಯಕ್ತಿತ್ವನೇ ಬದ್ಲಾತ್. ಪುನಃ ಸಾಲೆಗೆ ಹೋಗಿ ಫಸ್ಟ್ ಕ್ಲಾಸ್‌ಲಿ ಪಾಸಾದೆ. ಆಗ ಈಗನ ಹಾಂಗೆ ಟ್ಯೂಶನ್ ಭರಾಟೆ ಇತ್ಲೆ. ಆದರೂ ನಾರಾಯಣ ರೈ ಮಾಸ್ಟ್ರ ಹಕ್ಕಲೆ ನಾ ಇಂಗ್ಲೀಷ್ ಟ್ಯೂಶನ್ ತಕಂಡೆ. ಇರ್‍ಳ ಇಡೀ

ಕುದ್ದ್ ಕಷ್ಟ ಪಟ್ಟ್ ಓದಿದೆ. ಆಗ ಎಸ್.ಎಸ್.ಎಲ್.ಸಿ ಓದಿರೆ ಐ.ಋ.ಓ ಡಾಕ್ಟರ್ ಆಕೆ ಆಗ್ತಿತ್ತ್. ನಮ್ಮ ಅಂಗ್ಡಿ ಎದ್ರ್‌ಗಡೆ ಇದ್ದ ಡಾಕ್ಟರ್ ವೆಂಕಪ್ಪಯ್ಯನೊವು ಐ.ಋ.ಓ ಡಾಕ್ಟರ್. ನಂಗೂ ಅವರಾಂಗೆ ಡಾಕ್ಟರ್ ಆಕೆ ತುಂಬಾ ಆಶೆ. ಅಪ್ಪನೊಟ್ಟಿಗೆ ಹೇಳ್ದೆ ಅವು ಒಪ್ಪಿತ್ಲೆ.

" ನೀ ಡಾಕ್ಟರ್ ಆದ್ರೆ ನಿನ್ನ ಗಂಡನ ಮನೆಯೊಕ್ಕೆ ಆತ್. ನಂಗೇನ್ ಪ್ರಯೋಜನ? ನನ್ನ ಗಂಡ್ ಮಕ್ಕಳ ಡಾಕ್ಟರ್ ಮಾಡ್ನೆ." ಎಂತ ಹೇಳ್ಡೊ. ನಾ ಒಂದ್ ವಾರ ಇಡೀ ಮೊರ್ಟ್‌ಕಂಡೇ ಇದ್ದೆ. ಊಟನೂ ಬುಟ್ಟೆ. ಆದರೆ ನನ್ನ ಈ ದುಃಖ 'ಅರಣ್ಯ ರೋದನ' ಆತ್.

"ಬೇಕರೆ ನೀ ನರ್ಸ್ ಟ್ರೈನಿಂಗ್‌ಗೆ ಹೋಗು. ಎಂತ ಅಪ್ಪ ಹೇಳ್ಡೊ. ನಾ ಒಪ್ಪಿತ್ಲೆ. ಆ ಮೇಲೆ ಅವ್ವನೊಟ್ಟಿಗೆ ಹಟ ಹಿಡ್ದ್, ಕಾಲೇಜಿಗೆ ಸೇರ್ದೆ. ಆಗ ಪುತ್ತೂರ್‌ಲಿ ಕಾಲೇಜ್ ಇತ್ಲೆ. ನಮ್ಮದ್ ಆಗ ಮದರಾಸು ವಿಶ್ವವಿದ್ಯಾಲಯಕ್ಕೆ ಸೇರಿದ್ ಆಗಿತ್ತ್. ಒಂದು ಪಾಠಲಿ ಫೈಲ್ ಆದರೆ ಎಲ್ಲಾ ಪಾಠಲಿನೂ ಕುದ್ದ್ ಪಾಸಾಕಾಗಿತ್ತ್. ಇಲ್ಲರೆ ಕಾಲೇಜಿಗೆ ಸೇರಿಕೆ ಆಗ್ತಿತ್ಲೆ. ನನ್ನ ಮೈಸೂರು ಫಿಲೋಮಿನಾ ಕಾಲೇಜಿಗೆ ಸೇರ್ಸಿದೊ. ನನ್ನ ಜೋಸ್ತಿ ಪ್ರೇಮಲತಾ ಪೈಲೂರು ಅದೇ ಕಾಲೇಜಿಲಿ ಓದ್ತಿತ್ತ್. ಆಗ ನಾವ್ಗೆ ಪಿ.ಯು.ಸಿ ಒಂದು ವೊರ್ಸದ ಕೋರ್ಸ್ ಎಸ್.ಎಸ್.ಎಲ್.ಸಿ ಹನ್ನೊಂದು ಕ್ಲಾಸ್ ಓದಕಾಗಿತ್ತ್. ಹೇಂಗೂ ನನ್ನ ಡಾಕ್ಟರ್ ಓದುಸುದಿಲ್ಲೇಂತ ತಿಳ್ದ್, ನಾ ಆರ್ಟ್ ತಕಂಡೆ. ಹಿಸ್ಟರಿ, ಎಕನಾಮಿಕ್ಸ್, ಲಾಜಿಕ್ (H.E.L.) ತಕಂಡೆ. ಪ್ರೇಮಲತಾ ಪೈಲೂರು ಪಿ.ಯು.ಸಿ ಮಾಡಿ M.B.B.S ಗೆ ಸೇರ್ತ್.

ನನ್ನ ಹೈಸ್ಕೂಲ್‌ನ ಸಿಂಯಿ, ಸಿಂಯಿ ನೆಂಪುಗ ನೆನ್ಸಿಕಾಕನ ಈಗಳೂ ನಂಗೆ ತುಂಬಾ ಕುಸಿ ಆದೆ. ನನ್ನ ಸಾಲೆ, ಆ ಸಾಲೆಲಿ ಕಲ್ತ ದಿನಗ, ನನ್ನ ಜೋಸ್ತಿ ಗೂಡೆಗ, ಶಿಷ್ಯರ ಮಕ್ಕಳಾಂಗೆ ಪ್ರೀತಿ ಮಾಡುವ ಗುರುಗ ಇವೆಲ್ಲಾ ಈಗ ನಂಗೆ ನೆಂಪುಗ ಮಾತ್ರ. ಎಸ್.ಎಸ್.ಎಲ್.ಸಿ ಸಿಲೆಕ್ಷನ್ ಪ್ರಕರಣ ಒಂದರ ಬುಟ್ಟರೆ, ಉಳ್ದದೆಲ್ಲಾ ಬೆಲ್ಲದ ಹಾಂಗೆ ಇದ್ದ ದಿನಗ.

* * * * *

ಚುಕ್ಕೆ – 34

“ಅವ್ವನ ಷಷ್ಠಿ ಉಪವಾಸ ”

“ಅವ್ವಾ, ನಾಳೆ ನಾವುಗೆ ಷಷ್ಠಿಗೆ ರಜೆ ಕೊಟ್ಟೊಳೊ” ಎಂತ ನಾ ಅವ್ವನೊಟ್ಟಿಗೆ ಹೇಳ್ದೆ.

“ ನಾಳೆ ನಾವು ಹಳ್ಳದ ಕರೆಲಿ ಷಷ್ಠಿ ಉಣೊನೊ” ಎಂತ ಅವ್ವ ಹೇಳ್ದೊ.

ಅವ್ವ ಪ್ರತಿ ವೊರ್ಸ ಸುಬ್ರಹ್ಮಣ್ಯ ಷಷ್ಠಿ ದಿನ ಉಪಾಸ ಇದ್ದ್ ವೃತ ಮಾಡ್ತಿದ್ದೊ. ನಂಗೆ ಕುಸಿ ಆತ್. ಮೊರ್ದಿನ ಅವ್ವ ನನ್ನ ಕರ್ಕಂಡ್, ಒಂದು ಚೀಲಲಿ ಒಂದು ಪಾವು ಅಕ್ಕಿ, ಒಂದು ಸಣ್ಣ ಪಾತ್ರೆ, ಮುಚ್ಚಳ, ಸೆಡೆ ಕಿಚ್ಚಿನ ಪೆಟ್ಟಿಗೆ ಹಾಕಿ ಅದರ ನನ್ನ ಹಕ್ಕಲೆ ಕೊಟ್ಟೊ. ಅವು ಒಗ್ಯೊವ ಸೀರೆಗಳ ಗಂಟ್ ಕಟ್ಟಿ ಹಿಡ್ಕಂಡೊ. ನಾವು ಕೆರೆಮೂಲೆ ಬೈಲ್ ದಾಟಿ, ಮೊಡ್ಯಾಳರ ಮನೆ ಹಕ್ಕಲೆ ಬಂದೊ. ಅಲ್ಲಿ ಅವ್ವ ಮೊಡ್ಯೋಳ್ತಿ ಕಾವೇರಿನ ಕರ್ದ್,

“ಎರ್ಡ್ ಬಾಳೆಲೆ ಕೊಯ್ದ್ ಕೊಡು”ಎಂತ ಹೇಳ್ದೊ. ಕಾವೇರಿ ಎರ್ಡ್ ಬಾಳೆಲೆ ಕೊಯ್ದ್ ಅವ್ವನಲ್ಲಿ ಕೊಟ್ಟ್,

“ಎಜಮಾನ್ತಿ, ಷಷ್ಠಿ ಉಂಬಕೆ ಹೊರ್ಟ್ಟಳರಿನೋ?” ಎಂತ ಕೇಳ್ತ್.

ಅವ್ವ, “ ಹೌದು” ಎಂತ ಹೇಳಿ ಎಲೆಗಳ ತಕಂಡ್, ನನ್ನ ಕರ್ಕಂಡ್ ಹಳ್ಳದ ಕರೆಗೆ ಬಂದೊ. ಅಲ್ಲಿ ಅವ್ವ ಸೀರೆನೆಲ್ಲಾ ಒಗ್ದ್ ಒಣ್ಗಿಕೆ ಹಾಕಿಕಾಕನ ಹೊತ್ತು ಮಧ್ಯಾಹ್ನ ಆತ್. ನಂಗೆ ಹೊಟ್ಟೆ ಇಸಿಕೆ ಸುರಾತ್. ಯಾಗ ಅವ್ವನ

ಸೀರೆ ಒಗ್ಯವ ಕೆಲ್ಸ ಮುಗ್ದದೆನೋ, ಎಂತ ನಾ ಕಾಯತಿದ್ದೆ. ಅವ್ವ ಒಗ್ದ್ ಹಿಂಡಿಕೊಟ್ಟ ಸೀರೆನೆಲ್ಲಾ ಪಾರೆ ಮೇಲೆ ಒಣ್ಗಿಕೆ ಹಾಕಿಕೆ ನಾ ಅವ್ವಂಗೆ ಸಾಯ ಮಾಡ್ದೆ. ಆಗ ನಂಗೆ 10–12 ವೊರ್ಸ ಆಗಿರ್ದು. ಆ ಮೇಲೆ ಅವ್ವ ಹಳ್ಳಲಿ ಮಿಾಂದ್ ಹೊಸ ಮಡಿ ಬಟ್ಟೆ ಉಟ್ಟು, ಹಳ್ಳದ ಕರೆಲಿ ಹಂಞ ಎತ್ತರದ ಜಾಗೆಗೆ, ಒಂದು ಮರದ ನೆರ್ಳ್‌ಗೆ ಬಂದೊ. ಅಲ್ಲಿ ಪಾರೆ ಮೇಲೆ ಅವ್ವ ಮೂರು ಕಲ್ಲ್‌ಗಳ ಜೋಡಿಸಿ ಒಲೆ ಮಾಡಿ, ಸುತ್ತೋಳು ಹರ್‌ಂಡಿಕಂಡಿದ್ದ ಸಣ್ಣ ಸಣ್ಣ ಸೊಯ್ದೆ ತುಂಡುಗಳ ಹೆಕ್ಕಿ ಕಿಚ್ಚಿಮೊಟ್ಟೊ. ಅದರ ಮೇಲೆ ನಾವು ತಂದ ಪಾತ್ರೆಲಿ ನೀರ್ ಇಸಿದೊ. ನೀರ್ ಕಾಯಕಾಕನ ಅಕ್ಕಿ ತೊಳ್ದ್ ಹಾಕಿದೊ. ನಂಗೆ ಯಾಗ ಗಂಜಿ ಬೆಂದದೆ ಯಾಗ ಉಂಡವೇಂತ ಕಾದ್‌ಕಂಡಿದ್ದೆ. ಬೆಳ್ತಕ್ಕಿ ಹತ್ತ್ ಮಿನಿಟ್‌ಲಿ ಬೆಂದತ್. ನಾವಿಬ್ಬೊರು ಉಂಬಕೆ ಕುದ್ದೊ. ಎರ್ಡ್ ಬಾಳೆಲೆ ಹಾಕಿಕಂಡ್ ಅವ್ವ ಬಿಸಿ ಬಿಸಿ ಹುಗ್ಗೆ ಅದರ ಮೇಲೆ ಇಕ್ಕಿದೊ. ನನ್ನ ಹಕ್ಕಲೆ 'ಉಣು' ಎಂತ ಹೇಳ್ದೊ.

"ಈ ಚಪ್ಪೆ ಹುಗ್ಗೆ ಹೇಂಗೆ ಉಂಬೊಂದು?" ನಾ ಕೇಳ್ದೆ.

ಷಷ್ಠಿಲಿ ಚಪ್ಪೆ ಉಣಕಡ. ಇದ್ ವ್ರತಂತ ಅವ್ವ ಹೇಳ್ದೊ. ನಂಗೆ ಇದೆಲ್ಲಾ ಗೊತ್ತಿತ್ಲೆ. ಒಂದು ಕಡೆ ಹೊಟ್ಟೆ ಇಸಿ ಪ್ರಾಣ ಹೋದೆ. ಅದರೆಡೆಲಿ ಬಿಸಿ, ಬಿಸಿ ಹುಗ್ಗೆ. ಉಪಾಯ ಇಲ್ಲದೆ ಕರೆ ಕರೆಂದ ಹಂಞ, ಹಂಞ ಹುಗ್ಗೆ ತೆಗ್ದ್ ಉಂಬಕೆ ಸುರು ಮಾಡ್ದೆ. ಉಪ್ಪು ಇಲ್ಲದೆ ಚಪ್ಪೆ ಹುಗ್ಗೆನ ಉಂಬಕೆ ಕಷ್ಟ ಆತ್. ಅಂತೂ ಇಂತೂ ಷಷ್ಠಿ ಊಟನ ಹಳ್ಳದ ಕರೆಲಿ ಅವ್ವನೊಟ್ಟಿಗೆ ನಾ ಊಟ ಮಾಡ್ದೆ. ಹಳ್ಳದ ಕರೆಲಿ ಷಷ್ಠಿ ಊಟ ಮಾಡ್ರೆ ಭಾರೀ ಪುಣ್ಯ ಸಿಕ್ಕಿದೆ ಗಡ. ಆ ಮೇಲೆ ಅವ್ವ ಪಾತ್ರೆಗಳ ತೊಳ್ದ್ ಚೀಲಲಿ ಹಾಕಿ ನನ್ನ ಹಕ್ಕಲೆ ಹಿಡ್ಕಂಬಕೆ ಕೊಟ್ಟೊ. ಒಣ್ಗಿದ ಸೀರೆಗಳ ಗಂಟ್ ಕಟ್ಟಿ ಅವ್ವ ಹಿಡ್ಕೊಂಡೊ. ನಮ್ಮ ಸವಾರಿ ಮನೆ ಕಡೆ ಹೊರ್ಟತ್. ಮನೆಗೆ ಬಂದಾಕನ ನಾಣಿ ನನ್ನ ಕೇಳ್ತ್.

"ಹೇಂಗಿತ್ತ್? ಷಷ್ಠಿ ಊಟ? ಎಂತ.

"ಚಪ್ಪೆ" ಎಂತ ನಾ ಹೇಳ್ದೆ.

"ನಂಗೆ ಗೊತ್ತಿತ್ತ್. ಕಳ್ದ ವೊರ್ಸ ನಾ ಅವ್ವನೊಟ್ಟಿಗೆ ಹೋಗಿ ನಂಗೆ ಸಾಕಾಗುಟ್ಟು. ಹಾಂಗಾಗಿ ಈ ಸಲ ನಾ ಬಾತಿಲ್ಲೆ." ಎಂತ ನಾಣಿ ಹೇಳ್ತ್.

"ಕಳ್ಳ, ಇದರ ನಂಗೆ ನೀ ಮುಂದೆನೇ ಯಾಕೆ ಹೇಳ್ತಿಲ್ಲೆ?" ಎಂತ ನಾ ಕೇಳ್ದೆ.

" ನಿಂಗೂ ಗೊತ್ತಾಗಲಿ" ಎಂತ ಅಂವ ಹೇಳ್ತ್. ಸುಬ್ರಹ್ಮಣ್ಯಕ್ಕೆ ಹೋಗಿ ಅಲ್ಲಿ ಷಷ್ಠಿ ಊಟ ಮಾಡಿ ಬಂದರೆ, ಮನೆಲಿ ಮಾಡುವ ಷಷ್ಠಿ ಊಟಕ್ಕೆ ಉಪ್ಪು ಹಾಕಕಡ. ಎಲ್ಲಾ ಅವರವರ ನಂಬಿಕೆ.

* * * * *

ಚುಕ್ಕೆ – 35

"ಹುಡುಗು ಬುದ್ಧಿ"

ಜಯಂತಿ ದಿನಾ ನಮ್ಮ ಮನೆಗೆ ಬಾತಿತ್ತ್. ಅದ್ ನನ್ನ ದೊಡ್ಡ ತಮ್ಮ ನಾಣಿನ ಕ್ಲಾಸ್ ಮೇಟ್. ನಂಗೂ ಅದ್ಕೂ 'ಗಳಸ್ಯ ಕಂಠಸ್ಯ' ಸ್ನೇಹ. ಅದ್ ನನ್ನ 'ಅಕ್ಕಾ'ಂತ ಕರ್ಯತಿತ್ತ್. ಒಂದು ದಿನ ನನ್ನ ಸಣ್ಣ ತಮ್ಮ ಚಂದ್ರಂಗೂ ಅದಕ್ಕೂ ಜಗಳ ಆತ್. ಅದ್ ಮೊರ್ಟ್‌ಕಂಡ್ ನನ್ನ ಕೋಣೆಗೆ ಬಂದ್,

"ಅಕ್ಕಾ, ನಾಳೆಂದ ನಾ ನಿಮ್ಮ ಮನೆಗೆ ಬಾದುಲ್ಲೆ"– ಎಂತ ಹೇಳಿ ಸರ ಸರಾಂತ ಹೊರ್ಟೇ ಹೋತ್.

ನಮ್ಮ ಮನೆನ ಮುಂದೆನ ಭಾಗ ಅಂಗಡಿ. ಜೀನ್ಸ್, ಜವುಳಿ, ಕೋವಿ ಮೊದ್ದ್, ಕಿರಾಣಿ ಅಂಗ್ಡಿ ಎಲ್ಲೋನೂ ನಮ್ಮ ಅಂಗ್ಡಿಲಿ ಇತ್ತ್. ಅಂಗ್ಡಿನ ಮುಂದೆ ಮಂಗ್ಳೂರ್– ಮಡಿಕೇರಿ ರಾಜರಸ್ತೆ. ರಸ್ತೆನ ಎದ್‌ರ್ ಪುಡೆಲಿ ಹಂಞ ಮುಂದೆ ಹೋದರೆ ಪೋಲಿಸ್ ಸ್ಟೇಶನ್. ನಮ್ಮ ಅಂಗ್ಡಿಲಿ ನಿಂತ್ ನೋಡ್ರೆ ಅದ್ ಕಾಂಬತಿತ್ತ್. ಸ್ಟೇಶನ್‌ನ ಹಿಂದೆ ಸಾಲಾಗಿ, ಎರ್ಡ್ ಸಾಲ್‌ಲಿ ಪೋಲೀಸ್ ಲೈನ್. ಒಂದೊಂದು ಪುಡೆಲಿ ಐದೆದ್ ಸಂಸಾರ ಇರ್ತಿದ್ದೊ. ಎಡಪುಡೆನ ಲೈನಿನ ಕಡೇ ಮನೆಲಿ ನನ್ನ ಜೋಸ್ತಿ ಗೂಡೆ ಜಯಂತಿ ಇರ್ತಿತ್ತ್. ಅದರ ಅಕ್ಕ ಸಬಿತಂಗೆ ಮೊದ್ವೆ ಆಗಿತ್ತ್. ಅದರ ಭಾವ ಮಂಗ್ಳೂರ್ ಪಾಲಿಟೆಕ್ನಿಕ್ ಕಾಲೇಜಿಲಿ ಗುಮಾಸ್ತ ಆಗಿತ್ತ್. ಅದರ ಅಪ್ಪ ಪೋಲೀಸ್ ರೈಟರ್ ಆಗಿದ್ದೊ.

ಎರ್ಡ್ ದಿನಂದ ಜಯಂತಿ ನಮ್ಮ ಮನೆಗೆ ಬಾತಿಲ್ಲೆ. ನಂಗೆ ಬಾಳ ಬೇಜಾರ ಆತ್. ನಾ ಅದರ ಮನೆಗೆ ಹೋಗಿ ಯಾಕೆ ಬಾತ್ಲೇಂತ ಕೇಳ್ದೆ.

"ಅಕ್ಕ, ನಾ ಬಾದ್ಲೆ. ಚಂದ್ರ ನಂಗೆ ಎಂತದೆಲ್ಲಾ ಹೇಳ್ದೆ." –ಎಂತ ಹೇಳ್ತ್.

"ಏನಂತ ಹೇಳ್ತ್? ನೀ ಅಂವನ ಫ್ರೆಂಡ್ ಅಲ್ಲ. ನನ್ನ ಫ್ರೆಂಡ್. ಅವನ ಮಾತಿಗೆ ನೀ ಏಕೆ ಬೆಲೆ ಕೊಟ್ಟಿಯಾ ? ನೀ ಬಾರದೆ ನಂಗೆ ತುಂಬಾ ಬೇಜಾರ ಆದೆ"– ಎಂತ ಅದರೊಟ್ಟಿಗೆ ಹೇಳ್ದೆ.

"ಇಲ್ಲಕ್ಕ. ಅಂವ ಹೇಳ್ತ್, ನಾ ನಿನ್ನ ನೋಡಿಕೆ ಬಾದು ಅಲ್ಲಗಡ. ನಾಣಿನ ನೋಡಿಕೆ ಬಾದು ಗಡ"–ಎಂತ ಹೇಳಿ ಬೇಜಾರ ಮಾಡ್ತ್.

ನಾಣಿ ನನ್ನ ದೊಡ್ಡ ತಮ್ಮ. ಅಂವ ಗೂಡೆಗಳೊಟ್ಟಿಗೆ ಸರಾಗಲಿ ಮಾತಾಡ್ತೆ. ಬೇಗ ಹೊಂದಿಕಂಡದೆ. ಚಂದ್ರ ಹಾಂಗಲ್ಲ. ಹಂಞ ಚೊರೆ ಬುದ್ಧಿ. ಅಂವನ ಅಣ್ಣ ನೊಟ್ಟಿಗೆ ಜಯಂತಿ ಮಾತಾಡ್ದು, ಅಂವಂಗೆ ನೋಡಿಕಾತಿತ್ಲೆ. ಅದಕ್ಕೆ ಜಗಳ ಮಾಡ್ತ್. ನಾ ಹೇಳ್ದೆ,

"ಅಂವ ಹಂಞ ಹಾಂಗೆ. ನೀ ಅದರೆಲ್ಲಾ ಕೆಬಿಗೆ ಹಾಕಂಬಡ. ನೀ ಇತ್ಲರೆ ನಂಗೆ ಹೊತ್ತೇ ಹೋದ್ಲೆ. ರಜೆನ ಹೇಂಗೆ ಕಳ್ಯಲಿ? ನೀ ಬಾ ನಮ್ಮ ಮನೆಗೆ"– ಎಂತ ಹೇಳಿ ಅದರ ಕೈ ಹಿಡ್ದ್ ಎಳ್ದ್ ಕಂಡ್ ಮನೆಗೆ ಕರ್ಕಂಡ್ ಬಂದೆ. ಅದ್ಕೂ ಈ ಎರ್ಡ್ ದಿನಲಿ ಸಾಕಾಗಿತ್ತ್. ನನ್ನ ಸಾವಾಸ ಇಲ್ಲದೆ. ಹೆಚ್ಚ್ ಒತ್ತಾಯ ಮಾಡದೆ ಬಾತ್. ಅದರ ಅಮ್ಮ,

"ನಿಲ್ಲಿಸಿ, ಕಾಫಿ ಕುಡ್ದ್ ಹೋಗಿ"– ಎಂತ ಹೇಳ್ರೂ ಕೇಳದೆ ಇಬ್ರೊಬ್ರೂ ನಮ್ಮ ಮನೆಗೆ ಬಂದೊ. ನಮ್ಮ ಎರ್ಡ್ ದಿನದ ಮಾತ್‌ಗಳ ಮುಗ್ಸೋಕಲೆ.

ನಾವು ಮನೆಗೆ ಬಾಕನ ಚಂದ್ರ ದುರುಗುಟ್ಟಿ ಕಂಡ್ ನಮ್ಮ ನೋಡ್ತ್. ನಾವು ಅವನ ಕ್ಯಾರೇ ಮಾಡದೆ ನಮ್ಮ ಕೋಣೆಗೆ ಹೋಗಿ ಬಾಗಿಲ್ ಹಾಕೊಂಡೊ. ಎರ್ಡ್ ದಿನದ ಬಾಕಿ ಉಳ್ದ ಮಾತೆಲ್ಲಾ ಮಾತಾಡಿ ತೀರ್ಸಿ, ನಾ ಅದರೊಟ್ಟಿಗೆ,

'ಜಯಾ, ನಾವು ಯಾಕೆ ನಾಳೆ ಒಂದು 'ಪಿಕ್‌ನಿಕ್' ಹೋಗಿ ಬಾಕಾಗದ್ ? ನಮ್ಮ ತೋಟ ತುಂಬಾ ಲಾಯ್ಕುಟ್ಟು. ಅಲ್ಲಿ ಅತ್ತಿಗೆ ಒಳೊ. ನಾಳೆನೇ ಪೋಯಿ"– ಎಂತ ಹೇಳ್ದೆ.

ಅದ್ ಸಂತೋಷಂದ ಒಪ್ಪಿಕಂಡತ್. ನಾ ನನ್ನ ಅಪ್ಪನೊಟ್ಟಿಗೆ ತುಂಬಾ ಸಲ ತೋಟಕ್ಕೆ ಹೋಗಿ, ಬಂದದರ್‌ಂದ ನಂಗೆ ದಾರಿ ಲಾಯ್ಕ್‌ಲಿ ಗೊತ್ತಿತ್ತ್. ಮೊರ್ದಿನ ಒಂಭತ್ತ್ ಗಂಟೆಗೆ ಮನೆ ಬುಟ್ಟೊ.

ನಮ್ಮ ಅಂಗ್ಡಿ ಎದ್ರ್‌ನ ರಸ್ತೆ ದಾಟಿ, ನಾವೂರು ದಾರಿಲಿ ಮುಂದೆ ಹೋಗಿ, ಕಣಕ್ಕಿರ ಪಳ್ಳ ರೋಡಿಲಿ ಹೋದೊ. ಅಲ್ಲಿಂದ ತಡ್ಮೆ ದಾಟಿ ಬೊಳಿಯಮಜಲಿಗೆ ಬಂದೊ. ಅಲ್ಲಿ ಮೂರು–ನಾಕ್ ತಂಡ ಅಜಲರ್ ಇದ್ದೊ. ಅಲ್ಲಿ ಒಂದು ಕಾಲ್ಸಂಕನೂ ಇತ್ತ್. ಅದರ ದಾಟಿ ಮುಂದೆ ಹೋದರೆ ಸಿಕ್ಕುದೇ ಸೂರ್ತಿಲ ಜೋಯಿಸರ ಮುಳಿ ಪಡ್ಪು. ಸೂರ್ತಿಲಲಿ ಬೊಳ್ಪುನ ಹೊತ್ತು ತುಂಬಾ ಜನಂಗ ಹಳ್ಳಿಂದ ಸುಳ್ಯ ಪೇಟೆಗೆ ಬಾವ ಜನ ಸಿಕ್ಕಿದೊ. ನಮ್ಮ ಅಪ್ಪ ಸುಳ್ಯಲಿ ಹೆಸ್ರ್ ಪಡ್ದ ವ್ಯಾಪಾರಸ್ಥರ್ ಆದ ಕಾರಣ ನನ್ನ ಗುರ್ತ ಎಲ್ಲೋವ್ಕೂ ಇತ್ತ್. ಗುರ್ತದೊವೆಲ್ಲಾ ನನ್ನ ನೋಡಿ ನೆಗಾಡಿಕಂಡ್,

“ಎಲ್ಲಿಗೆ ಹೊರ್ಟ್ಳರಿ? ತೋಟಕ್ಕನೋ?” ಎಂತ ಕೇಳಿ, ನನ್ನ ಉತ್ತರಕ್ಕೆ ಕಾಯದೆ ನಮ್ಮ ದಾಟಿ ಮುಂದೆ ಹೋಗ್ತಿದ್ದೊ. ನಾವು ಹರ್ಟೆ ಹೊಡ್ಕಂಡ್, ಆಟ ಆಡಿಕಂಡ್ ಬಳ್ಳಡ್ಕಕ್ಕೆ ಬಂದೊ. ಅಲ್ಲಿ ಅಪ್ಪಂಗೆ ಹನ್ನೆರ್ಡ್ ಮುಡಿ ಗದ್ದೆಗ ಇದ್ದೊ. ಅದರೆಲ್ಲಾ ಅವು ಗೇಣಿಗೆ ಕೊಟ್ಟಿದ್ದೊ. ದಾರಿ ಪುಡೆಲಿದ್ದ ಒಂದು ಮನೆಲಿ ನನ್ನ ಸಣಪ ಗೇಣಿಗೆ ಗದ್ದೆ ಬೇಸಾಯ ಮಾಡಿಕೊಂಡಿದ್ದೊ. ಸಣಪಂತೇಳ್ರೆ ಅಪ್ಪನ ಕುಟುಂಬದೊವು.

ನಾವು ಬಳ್ಳಡ್ಕಲಿ ಸಣಪನ ಮನೆಗೆ ಹೊದೊ. ಸಣಪ, ಚಿಕವ, ಎರ್ಡ್ ಸಣ್ಣ ಸಣ್ಣ ಮಕ್ಕ ಆ ಸಣ್ಣ ಮನೆಲಿ ಇದ್ದೊ. ಅವು ನಾವುಗೆ ಬೆಲ್ಲದ ಪಾನಕ ಮಾಡಿ ಕುಡ್ಯಕೆ ಕೊಟ್ಟೊ. ಅದರ ಕುಡ್ದ್ ಮುಂದೆ ಹೋದೊ. ಗದ್ದೆ ಪುಣಿ ದಾಟಿ ಮುಂದೆ ಹೋಕನ ದಾರಿ ಬದಿಲಿ ಸಾಲಾಗಿ ನಿಂಬೆ ಹಣ್ಣ್‌ನ ದೈಗ ಇದ್ದೊ. ನಮ್ಮ ಅಪ್ಪ ಕಸಿ ದೈಗಳ ಪುತ್ತೂರ್‌ಂದ ತರ್ಸಿ ಅಲ್ಲಿ ನೆಟ್ಟಿದ್ದೊ. ದೊಡ್ಡ ದೊಡ್ಡ ಅರಶಿಣ ಬಣ್ಣದ ನಿಂಬೆ ಹುಳಿಗಳ ನೋಡಿಕಾಕನ ನಾವ್ಗೆ ಆಶೆ ಆತ್.

“ನಾವು ಬಾಕಾಕನ ಇದರ್‌ಂದ ಹಂಞ ಕೊಯ್ದ್ ತಕಂಡ್ ಪೋಯಿ”–ಎಂತ ಜಯಂತಿಯಲ್ಲಿ ಹೇಳ್ದೆ.

ಅಲ್ಲಿಂದ ಗೋರ್ಮುಡ್ಕಕ್ಕೆ ಹೋದೋ. ಅಲ್ಲಿ ನನ್ನ ಉಗ್ಗವನ ತಂಗೆ ಇದ್ದೊ. ನಮ್ಮ ಕಂಡ್ ಅವ್ಕೆ ಬಾಳ ಕುಸಿ ಆತ್. ಅವರ ಮಗಳ್ ದೇವಮ್ಮ.

“ದ್ಯಾಮಾ, ಮಕ್ಕ ಬಂದೊಳೊ. ಪೇಟೆ ಗೂಡೆಗಳಿಗೆ ಕಾಡ್ ತಿನ್ಸ್ ತುಂಬಾ ಇಷ್ಟ. ಹಲ್ಸಿನಣ್ಣ್ ಕೊಟಗೆಲಿ ಉಟ್ಟೋ ನೋಡ್. ಇದ್ದರೆ ಒಂದರ ಕೊಯ್ದ್ ಕೊಡು”– ಎಂತ ಉಗ್ಗವ ಮಗಳಿಗೆ ಹೇಳ್ದೊ.

ದ್ಯಾಮತ್ತೆ ಒಟ್ಟಿಗೆ ನಾವೂ ಕೊಟಗೆಗೆ ಹೋದೊ. ಅಲ್ಲಿ ಐದಾರ್ ಹಲ್ಸಿನ ಕ್ಯಾಗಳಕೊಯ್ದ್ ಸಾಲಾಗಿ ಇಸಿದ್ದೊ. ಹಕ್ಕಲೆ ಹೋಕಾಕನ ಹಲ್ಸಿನ ಹಣ್ಣ್‌ನ ಪೊರ್ಮಳ ಮೂಂಕಿಗೆ ಘಮ ಘಮಾಂತ ಬಾತ್. ನಾವು ಆಸೆಂದ ನೋಡ್ದೊ. ದ್ಯಾಮತ್ತೆ ಹೆಬ್ಬೆರ್ಳ್, ನಡು ಬೆರ್ಳ್ ಸೇರ್ಸಿ, ಒಂದೊಂದೇ ಹಲ್ಸಿನ ಕ್ಯಾಗಳ ಮೇಲೆ ಬೊಟ್ಟಿ ನೋಡ್ದೊ. ಹಣ್ಣಾದ ಹಲ್ಸಿನ ಹಣ್ಣ್‌ನ ಎತ್ತಿಕಂಡ್ ಬಂದ್, ಇಜ್ಜೆಲಿಲಿ, ಮನೆನ ಎದ್ರ್ ಇದ್ದ ಚಿಂಟೆಲಿ ಇಸಿ, ಮೆಟ್ಟ್‌ಕತ್ತಿ ತಂದೊ. ಅದರ್ಲಿ ಕುದ್ದ್ ಅಷ್ಟ್ ದೊಡ್ಡ ಹಲ್ಸಿನ ಹಣ್ಣ್‌ನ ಎತ್ತಿ ಕತ್ತಿ ಮೇಲೆ ಗಸಕ್ಕನೆ ಹಾಕಿದೊ. ಹಲ್ಸಿನಣ್ಣ್ ಮೆಟ್ಟ್ ಕತ್ತಿಲಿ ಅರ್ಧಲಿ ಸಿಕ್ಕಿ ಮೊಗ್ಚಿ ಬೀತ್. ದ್ಯಾಮತ್ತೆನೂ ಇನ್ನೊಂದು ಪುಡೆಗೆ ಬಿದ್ದೊ. ಅಲ್ಲಿಂದಳೇ ನೆಲಕ್ಕೆ ಕೈವೂರಿ ಎದ್ದ್ ನಿಂತೊ. ಅದರ ನೋಡಿ ಉಗ್ಗವ.

“ಅಯ್ಯೋ ಮಗಾ, ಹಾಂಗಾ ಕೊಯ್ಯುದ್? ಒಂದು ಕಡ್ಪತ್ತಿಲಿ ಎರ್ಡ್ ಬೊದಿ ಗಡಿ ಹಾಕ್, ಮತ್ತೆ ಕೊಯ್. ಇಲ್ಲರೆ ಅದ, ಅಲ್ಲಿ ಸೊಯ್ದೆ ತುಂಡು ಮಾಡುವ ಮೊಚ್ಚ್ ಉಟ್ಟು. ಅದರ್ಲಿ ಒಂದು ಗಡಿ ಹಾಕ್. ಬೇಗ ತುಂಡಾದೆ”. –ಎಂತ ಹೇಳ್ದೊ.

ದ್ಯಾಮತ್ತೆ ಮೆಟ್ಟ್ ಕತ್ತಿಂದ ಕಷ್ಟಪಟ್ಟ್ ಹಲ್ಸಿನ ಹಣ್ಣ್‌ನ ಬುಡ್ಸಿ, ಮತ್ತೊಂದು ಪುಡೆನ ಕಡ್ಪತ್ತಿಂದ ಕಡ್ದ್, ತುಂಡು ಮಾಡ್ದೊ. ಚಕ್ರದಾಂಗೆ ಕಾಂಬ ಹಲ್ಸಿನ

ಹಣ್ಣ್‌ನ ಗಡಿಲಿ ಮಾಯಣನೊಟ್ಟಿಗೆ ಕೇದಗೆ ಹೂನ ಬಣ್ಣದ ಉದ್ದದ ದೊಡ್ಡ ದೊಡ್ಡ ಹಲ್ಸಿನ ತೋಳೆಗಳ ನೋಡಿ, ಅದರ ಪೊರ್ಮಳಕ್ಕೆ, ನಮ್ಮ ಬಾಯಿಲಿ ನೀರ್ ಬಾತ್. ದ್ಯಾಮತ್ತೆ ಅಂಗಳದ ಪುಡೆಲಿ ಸಾಲಾಗಿ ನೆಟ್ಟ್‌ಕಂಡಿದ್ದ ಅಬ್ಬಂತಿಕೆ ಹೂಗಳ ದೈಗಳ ಪುಂಡೆಲಿಂದ, ಒಣ್ಗಿದ ದಪ್ಪದ ಒಂದು ದಂಟ್‌ನ ಮುರ್ದ್, ಅದರ್ಲಿ ಹಣ್ಣ್‌ನಮಾಯಣನ ಕೋಲಿಗೆ ಸುತ್ತಿ ತೆಗ್ದ್, ಅರ್ಧ ಗಡಿ ಹಣ್ಣ್‌ನ ಮೆಟ್ಟ್ ಕತ್ತಿಲಿ ಎಂಟ್ ತುಂಡು ಮಾಡಿ, ಗೂಂಜಿನ ಕೆತ್ತಿ ತೆಗ್ದೊ. ಎಲ್ಲಾ ತುಂಡುಗಳ ಮಾಯಣನ ಕೋಲಿಗೆ ಸುತ್ತಿ ತೆಗ್ದ್, ಒಂದೊಂದು ತುಂಡುನ ನಮ್ಮ ಮುಂದೆ ಇಸಿ, "ತಿನ್ನಿ"– ಎಂತ ಹೇಳ್ದೊ. ಆಗ ಉಗ್ಗವ,

"ಎಂತಾ ಮಗ, ಅವು ಪೇಟೆ ಗೂಡೆಗ. ಅವ್ಕೆ ಮಾಯಣ ಕೈಗೆ ಬಾಯಿಗೆ ಅಂಟಿಕಿಲ್ಲೆನೋ? ನೀ ತೋಳೆ ತೆಗ್ದ್ ಕೊಡು"–ಎಂತ ಹೇಳಿ, ಇಜ್ಜೆಲಿನ ಪುಡೆಲಿದ್ದ ಬಾಳೆ ಪುಂಡೆಲ್‌ಂದ ಎರ್ಡ್, ಮೂರು ಬಾಳೆಲೆ ಕೊಯ್ದ್, ನಮ್ಮ ಮುಂದೆ ಇಸಿ, ಕುದ್ರಿಕೆ ಮಣೆ ಕೊಟ್ಟೊ. ನಾವು ಮಣೆ ಮೇಲೆ ಕುದ್ದ್, ಅತ್ತೆ ತೆಗ್ದ್ ಬಾಳೆಲೆಲಿ ಹಾಕಿದ ಹಲ್ಸಿನ ಹಣ್ಣ್‌ನ ತೋಳೆನ ಒಂದೊಂದೇ ಬೀಜ ತೆಗ್ದ್ ಬಾಯಿ ಚಪ್ಪರಿಸಿಕಂಡ್ ತಿಂದೊ. ಜೇನ್‌ನಾಂಗೆ ನೀರ್ ಸೋರುವ ದಪ್ಪ ತೋಳೆಗ, ಬಾಳ ಪೊರ್ಮಳ ಇದ್ದ್, ತಿಂಬಕನ ಕಮ್ಮಂಗೆ ಆಗ್ತಿತ್ತ್. ಹೊಟ್ಟೆ ತುಂಬಾ ತೋಳೆಗಳ ತಿಂದ್, ಉಗ್ಗವ ಕಾಸಿ ಕೊಟ್ಟ ಕಣ್ಣ ಕಾಪಿನ ಅವ್ಕೆ ಬೇಜಾರ ಆಕೆ ಆಗದ್‌ಂತ ಕಷ್ಟಂದ ಕುಡ್ದೊ. ಹಾಲ್ ಇಲ್ಲದರ್‌ಂದ ಅವು ಬಿಸಿ ಕಾಪಿಗೆ ಒಂದೊಂದು ಚೌಂಟು ತುಪ್ಪ ಹಾಕಿದ್ದೊ. ತುಪ್ಪ ಹಂಞ ಕಸೆಂಟ್ ಬಾತಿತ್ತ್. ಹಾಂಗಾಗಿ ನಾವ್ಗೆ ಕುಡ್ಯಕೆ ಕಷ್ಟ ಆತ್. ನಾವು ಮೋರೆ ಮೋರೆ ನೋಡಿಕಂಡ್ ಕುಡ್ದೊ. ಆದರೆ ಅವರ ಪ್ರೀತಿನ ಮುಂದೆ ನಾವ್ಗೆ ಇದೆಲ್ಲಾ ಲೆಕ್ಕಕ್ಕಿಲ್ಲೆ.

" ನಮ್ಮಲ್ಲಿ ಹಾಲಿಲ್ಲೆ ಮಗಾ. ಗಂಗೆ ದನ ಇನ್ನೊಂದು ವಾರಲಿ ಕರ್ ಹಾಕುದು. ಬರ್ವ ತಿಂಗ ಬನ್ನಿ. ಹಾಲ್, ಮೊಸ್ರ್ ಬೆಣ್ಣೆ ತಿಂಬಕೆ." ಎಂತ ಉಗ್ಗವ ಹೇಳ್ದೊ. ಗೋರ್ಮುಡ್ಕ ಉಗ್ಗವನ ಮನೆಂದ ನಾವು ಹೊರ್ಡಿಕಾಕನ ಉಗ್ಗವ,

" ನೀವೀಗ ಎಲ್ಲಿಗೆ ಹೊರ್ಟವು" ಎಂತ ಕೇಳ್ದೊ. ಆಗ ನಾ,

" ನಾವು ಕೂಟೇಲಿಗೆ ಅತ್ತಿಗೆನ ನೋಡಿಕೆ ಹೊರ್ಟೊವು" ಎಂತ ಹೇಳ್ದೊ. ಆಗ ಉಗ್ಗವ,

" ದ್ಯಾಮಾ, ಮಕ್ಕಳ ಹಳ್ಳ ದಾಟಿಸಿ ಬುಡು." ಎಂತ ಹೇಳಿ, ದ್ಯಾಮತ್ತೆನ ನಮ್ಮೊಟ್ಟಿಗೆ ಕಳ್ಸಿದೊ. ನಾವು ಅತ್ತೆನೊಟ್ಟಿಗೆ ಹೊರ್ಟೊ. ಅವರ ಮನೆ ಹಳ್ಳದ ಪುಡೆಲಿ ಇತ್ತ್. ಹಳ್ಳಲಿ ಮೊಳಕಾಲ್ಮುಟ್ಟ ನೀರಿತ್ತ್. ಅತ್ತೆ ನಮ್ಮ ಎರ್ಡ್ ಕೈಲಿ ಹಿಡ್ಕಂಡ್ ಹಳ್ಳ ದಾಟಿಸಿ,

" ಎಚ್ಚರಂದ ಹೋಗಿ" ಎಂತ ಹೇಳಿ ಹಿಂದೆ ಹೋದೊ. ಹಳ್ಳ ದಾಟಿರೆ ಸಿಕ್ಕುದು ಪಾಲಡ್ಕ. ಪಾಲಡ್ಕಲಿ ಕಣ್ಣ ಬೆಳ್ಚಪ್ಪಾಡನ ಚಾ ಹೋಟ್ಲ್‌ನ ದಾಟಿ ಮುಂದೆ

ಹೋದೊ. ಕಣ್ಣ ತಟ್ಟಿ ಸೆರೆಂದ ಬೊಗ್ಗಿ, ನಮ್ಮ ನೋಡಿ ಒಳಗೆ ಹೋತ್. ಪಾಲಡ್ಕಂದ ಕೂಟೇಲ್ ಕಡೆಗೆ ನಮ್ಮ ಸವಾರಿ ಮುಂದೆ ಹೋತ್.

ದಾರಿ ಪುಡೆಲಿ ಇದ್ದ ಕುರುಚ್ಚೆಲ್ ಪುಂಡೆಲ್‌ಂದ ನಾವು ಒಂದೊಂದು ಬೆತ್ತನ ಮುರ್ಕಂಡ್ ಅದರ್‌ಂದ ಎರ್ಡ್ ಪುಡೆಲಿದ್ದ ದೈಗಳಿಗೆ ಹೊಡ್ಕಂಡ್, ಹೊಟ್ಟೆ ತುಂಬಿದರ್‌ಂದ,

" ರದ್ದೇ ರದ್ದೇ ರಾಯನ ಮಗಳ್, ಲಂಗದ ನಿರಿಯನು ಚಿಮ್ಮುತ ಬಂದಳು ಜಾನಕಿ ತೋಟಕ್ಕೆ" ಎಂತ ಪದಗಳ ಗಟ್ಟಿಲಿ ಹಾಡಿಕಂಡ್, ಒಬ್ಬರ್‌ಂದ ಒಬ್ಬ ಒಡ್ಸುವ ಕತೆಗಳ ಹೇಳಿಕಂಡ್ ಹೋಕಾಕನ ನಾವ್ಗೆ ದಾರಿ ಸಾಗಿದೇ ಗೊತ್ತಾತ್ಲೆ. ಕೂಟೇಲ್‌ಲಿ ನಮ್ಮ ಅಪ್ಪಂಗೆ ಹತ್ತೊಂಭತ್ತ್ ಎಕ್ರೆ ಜಾಗೆ ಇತ್ತ್. ಅದರ್ಲಿ ತುಂಬಾ ಕಮ್ಮನ ತೋಟ ಇತ್ತ್. ಬಾಳೆ ದೈಗ, ಮಾಯ್ನ ಮರಗ, ಹಲ್ಸಿನ ಮರಗ, ಹುಣ್ಸೆ ಮರಗ ಇದ್ದೊ. ಎರ್ಡ್ ಸಾವಿರ ಅಡ್ಕೆ ದೈಗಳ ಹಾಕಿ, ಹೊಸ ತೋಟ ಮಾಡಿದ್ದೊ. ಅದರ್ಲಿ ಫಸಲ್ ಬಾತಿತ್ಲೆ. ತೋಟದ ಎಡೆ ಎಡೆಲಿ ಬಾಳೆ ನೆಟ್ಟಿದ್ದೊ. ಒಳ್ಳೆ ಮೆಣ್ಸ್ ದೈಗಳ ಕಮ್ಮಗೆ ಹಬ್ಬಿಸಿದ್ದೊ. ಜಾಗೆ ನೀರ್‌ನ ನಿಧಿ ಕೆಲವು ಕಡೆ ಕೆಸ್ರ್‌ಂದ ಕಾಲ್ ಹೂತೋಗ್ತಿತ್ತ್. ಬಾಣೆಲಿ ತುಂಬಾ ಬೀಜದ ಮರಗ ಇದ್ದೊ. ಕಾನಕಜೆ, ನೆರವೊಳು, ಸೀಗೆ– ಹೀಗೆ ಕಾಡುತ್ವತ್ತಿಗ ಬೇಕಾದಷ್ಟ್ ಇದ್ದೊ. ಇದರೆಡೆಲಿ ಹೋದಲ್ಲೆಲ್ಲಾ ಬೆದ್ರ್ ಹಿಂಡ್ಲ್‌ಗ ಇದ್ದೊ. ಅಪ್ಪ ಚಿಕ್ಕು, ಮಾವು, ಪೇರಳೆ, ಜಂಬುನೇರಳೆ, ಗಜನಿಂಬೆ– ಈ ಎಲ್ಲಾ ಕಸಿ ದೈಗಳ ತುಂಬಾ ಪುತ್ತೂರ್‌ಂದ ತರ್ಸಿ ನೆಡ್ಸಿದ್ದೊ. ರೆಂಜೆ, ಸುರ್ಗಿ ಹೂ, ಮಂಜಟ್ಟಿ, ಗಜ್ಜುಗದ ಹಿಂಡೆಲ್ ಎಲ್ಲಾ ಇದ್ದೊ. ಆ ಜಾಗೆಲಿ ಒಂದು ಉಟ್ಟು, ಒಂದು ಇಲ್ಲೆಂತ ಇಲ್ಲೆ. ಎಲ್ಲಾ ಇತ್ತ್. ನಾಕ್ ಕೆರೆಗ ಅಲ್ಲಲ್ಲಿ ನೀರ್‌ನ ತೊರೆಗ, ಹಂಞ ದೂರಲಿ ಹಳ್ಳ ಎಲ್ಲಾ ಇತ್ತ್. ಅದೊಂದು ಪೊರ್ಲುನ ಪ್ರಕೃತಿ ಸೌಂದರ್ಯದ ಭೂಮಿ ಆಗಿತ್ತ್. ಜಯಂತಿಗೆ ಕುಸಿನೋ ಕುಸಿ. ಅದ್ಕೆ ಹಳ್ಳಿಗೆ ಬಂದ್ ಗೊತ್ತೇ ಇಲ್ಲೆ.

ಕೂಟೆಲ್ ತೋಟದ ನೋಡಿಕಂಬಕೆ ಕೊರಗಪ್ಪ ದೊಡಪ ಇದ್ದೊ. ಅವು ಬಳ್ಳಡ್ಕಲಿದ್ದ ಸೋಂಪ ಸಣಪನ ಅಣ್ಣ. ದೊಡಪಂಗೆ ಮೂರು ಜನ ಹೆಣ್ಣ್ ಮಕ್ಕ ಸೀತಮ್ಮ, ದೇವಕಿ, ಜಾನಕಿ ಸೀತಮ್ಮನ ಚೊಕ್ಕಾಡಿಗೆ ಕೊಟ್ಟಿದ್ದೊ. ದೇವಕಿ, ಜಾನಕಿ ಅವಳಿ ಮಕ್ಕ. ಅವರ ಬೈಲೆ ಮುದ್ದಯ್ಯ ಗೌಡ್ರ ಅವಳಿ ಮಕ್ಕ ರಾಮ ಲಕ್ಷ್ಮಣರಿಗೆ ಮೊದ್ವೆ ಮಾಡಿ ಕೊಟ್ಟಿದ್ದೊ. ಈ ಸಂಧಾನನ ಅಪ್ಪನೇ ಮಾಡ್ಸಿದ್. ದೊಡಪಂಗೆ ಒಬ್ಬನೇ ಮಂಜ. ರಾಮು. ಅಂವ ನಮ್ಮ ಅಂಗ್ಡಿಲಿ ಕೆಲ್ಸಕ್ಕೆ ಇತ್ತ್. ದೊಡಪಂಗೆ ಸೊಂತ ಮನೆ ಇತ್ಲೆ. ಅವರ ಹೆಂಞ್, ಮಕ್ಕ ಸಣ್ಣಪಿರಿಕಾಕನನೇ ತೀರಿ ಹೋಗಿದ್ದೊ. ನಮ್ಮ ಅಪ್ಪ ಕೂಟೇಲ್ ಆಸ್ತಿಲಿ ಒಂದು ಸಣ್ಣ ಮನೆ ಕಟ್ಟಿ, ಅಲ್ಲಿ ಮೇಲ್ವಿಚಾರಣೆ ನೋಡಿಕಂಬಕೆ ಕುದ್ರಿಸಿದ್ದೊ. ಆ ಮನೆಲಿ ನಮ್ಮ ಅತ್ತಿಗೆ ಹಂಞ ಸಮಯ ಇದ್ದೊ.

ಪೇಟೆ ಮನೆಲಿ ಆಡಂಭರದ ಜೀವನ ನಡ್ಸ್‌ತಿದ್ದ ನಮ್ಮ ಅಪ್ಪಂಗೆ, ಹಳ್ಳಿಲಿ ಮುಳಿ ಮನೆಲಿ ಅವರ ಮುದ್ದುನ ಸೊಸೆ ಇರ್ದು ಇಷ್ಟ ಇರ್‌ತಿತ್ಲೆ. ಹಾಂಗಾಗಿ ಅತ್ತಿಗೆ ಪೇಟೆ

ಮನೆಗೆ ಬಂದ್ಯೊ. ಅತ್ತಿಗೆ ಕೂಟೇಲ್‌ನ ತೋಟದ ಮನೆಲಿ ಇರಿಕಾಕನ ನಾ ಜಯಂತಿನ ಅಲ್ಲಿಗೆ ಕರ್ಕಂಡ್ ಹೋಗಿದ್ದೆ.

ನಾವು ಹುಡುಗು ಬುದ್ಧಿಲಿ ಆಟ ಆಡಿಕಂಡ್, ಪದ ಹೇಳಿಕಂಡ್ ಬಾಕಾಕನ ನಾವ್ಗೆ ದಾರಿ ಸಾಗಿದೇ ಗೊತ್ತಾತ್ತೆ. ತೋಟದ ಮನೆಗೆ ಬಂದವೇ, ಇಜ್ಜೆಲಿಂದಳೇ,

"ಅತ್ತಿಗೇ" ಎಂತ ನಾವಿಬ್ಬರೂ ಒಟ್ಟಿಗೇ ಕರ್ದ್ಯೋ. ಜಯಂತಿನೂ ನನ್ನ ಅತ್ತಿಗೆನ 'ಅತ್ತಿಗೇ'ಂತ ಕರ್ಯತಿತ್ತ್. ನಮ್ಮ ದನಿ ಕೇಳಿ ಅಡ್ಗೆ ಕೋಣೆಲಿದ್ದ ಅತ್ತಿಗೆ ಓಡಿ ಬಂದ್ ನಮ್ಮ ತೊಬ್ಬಿಕಂಡ್ ಒಳಗೆ ಕರ್ಕಂಡ್ ಹೋಗಿ ಹೊಸ ಮೊಂದ್ರಿ ಹಾಸಿ, ಕುದ್ರಿಸಿ, ಕುಡ್ಯಕೆ ತಂಪುನ ಮೊಜ್ಜಿಗೆ ನೀರ್ ಕೊಟ್ಟ್ಯೋ. ಎರ್ಡೆರ್ಡ್ ಗ್ಲಾಸ್ ಮೊಜ್ಜಿಗೆ ನೀರ್ ಕುಡ್ದ್, ಸುದಾರ್ಸಿಕೊಂಡ್ಯೊ. ಅತ್ತಿಗೆಗೆ ನಮ್ಮ ನೋಡಿ ಕುಸಿನೋ ಕುಸಿ. ಪೇಟೆಂದ ನಾದಿನಿ ಮತ್ತೆ ಅದರ ಜೋಸ್ತಿ ಗೂಡೆನ ಕರ್ಕಂಡ್ ಅವರ ನೋಡಿಕೆ ಬಂದದ್‌ಕ್ಕಾಗಿ. ನಾವು ಅಲ್ಲಿಗೆ ಮುಟ್ಟಿಕಾಕನ ಗಂಟೆ ಒಂದಾಗಿತ್ತ್. ಅತ್ತಿಗೆನವ್ಕೆ ಊಟ ಆಗಿತ್ತ್. ಹಳ್ಳಿ ಮನೆಲಿ ಮಧ್ಯಾಹ್ನದ ಹೊತ್ತಿಗೆ ಯಾರ್ ಬಂದರೂ ಉಂಬಕೆ ಕೊಡ್ತಿದ್ದ್ಯೋ. ಒಂದೆರ್ಡ್ ಜನರ ಅಡ್ಗೆ ಹೆಚ್ಚಿಗೆನೇ ಮಾಡ್ತಿದ್ದ್ಯೋ. ಕಾಡ್ ಮಾಯ್ನ ಹಣ್ಣ್‌ನ ಚಂಡ್ರ್‌ಪುಳಿಲಿ ನಾವ್ಗೆ ಊಟ ಕೊಟ್ಟ್ಯೋ. ಸಣ್ಣದಿರಿಕನ ನಂಗೆ ಚಂಡ್ರ್‌ಪುಳಿಂತೇಳ್ರೆ ಪ್ರಾಣ. ಚಂಡ್ರ್‌ಪುಳಿಲಿ ನಾವಿಬ್ಬೊರು ಹೊಟ್ಟೆ ತುಂಬಾ ಉಂಡ್ಯೊ. ಆದರೆ ಅತ್ತಿಗೆಗೆ ತೃಪ್ತಿ ಇಲ್ಲೆ. ಅವರಲ್ಲಿ ಎರ್ಡ್ ಕೋಳಿಗ ಮೊಟ್ಟೆ ಇಸ್ತಿದ್ದ್ಯೋ. ಅದ್ಕೆ ಬೇರೆ ಬೇರೆ ಹೆಡ್ಗೆಲಿ ಬೈ ಹುಲ್ಲು ಹಾಕಿ ಕೊಟಗೆಲಿ ಮಾಡಿಗೆ ಕಟ್ಟಿದ್ದ್ಯೋ. ಅತ್ತಿಗೆ ಕೊಟಗೆಗೆ ಹೋಗಿ ಹೆಡಗೆಂದ ನಾಕೈದ್ ಮೊಟ್ಟೆ ತಂದ್ ಬೇಸಿ, ಬೇಡಾಂತೇಳ್ರೂ ಒತ್ತಾಯಲಿ ತಿನ್ಸಿದ್ಯೊ.

ಅತ್ತಿಗೆನೊಟ್ಟಿಗೆ ಒಂದೆರ್ಡ್ ಗಂಟೆ ಪೇಟೆ ಸುದ್ದಿ, ಸಾಲೆ ಸುದ್ದಿ ಎಲ್ಲಾ ಹೇಳಿಕಂಡ್ ಹರ್ಟೆ ಹೊಡ್ದ್ಯೋ. ನಾವು ಒಂದೇ ಕಡೆ ಸುಮ್ಮಂಗೆ ಕುದ್ರುವ ಜಾತಿ ಅಲ್ಲ. ಅತ್ತಿಗೆನೊಟ್ಟಿಗೆ ಹೇಳಿ, ತೋಟ ತಿರ್ಗಿಕೆ ಹೋದ್ಯೊ. ಅಲ್ಲಿದ್ದ ಮೂರು – ನಾಕ್ ಕೆರೆಗಳ ನೋಡಿ ನೀರಿಗೆ ಕಲ್ಲ್ ಹೊಡ್ದ್, ನೀರ್‌ನ ಅಲೆಗಳ ನೋಡಿ ಕುಸಿ ಪಟ್ಟ್ಯೋ. ತೋಟದ ಕರೆಲಿ ಒಂದು ಕಾಡ್ ಮಾಯ್ನ ಮರ ಇತ್ತ್. ಅದರಡಿಲಿ ಗಾಳಿಗೆ ಉದ್ರ್‌ದ ಹಣ್ಣ್‌ಗಳ್‌ಂದ ನಾಕಾರ್ ಹಣ್ಣ್‌ಗಳ ಹೆಕ್ಕಿ, ಅದರ ಕೈಲಿ ಹಿಡ್ಕಂಡ್, ಚೀಂಪಿಕಂಡ್, ಗೊರ್‌ಂಟ್‌ನ ಇಟ್ಟ್ ತೋಟದ ಇನ್ನೊಂದು ಕರೆಲಿ ಇದ್ದ ರಾಮಯ್ಯ ಮಾಂವನ ಮನೆಗೆ ಹೋದ್ಯೊ. ಅವು ನಮ್ಮ ಅಪ್ಪನ ಗದ್ದೆ ಗೇಣಿಗೆ ಬೇಸಾಯ ಮಾಡ್ತಿದ್ದ್ಯೋ. ಮನೆಲಿ ಯಾರೂ ಇತ್ಲೆ. ಮೂರು ಮಕ್ಕ ಇಜ್ಜೆಲಿಲಿ ಆಟ ಆಡ್ತಿದ್ದ್ಯೋ. ಮನೆವು ಕೆಲ್ಸಕ್ಕೆ ಹೋಗಿರೊಕು. ನಾ ಜಯಂತಿನ ಕರ್ಕಂಡ್ ಅಲ್ಲಿಂದ ಹತ್ತ್ ಮಾರ್ ದೂರಲಿದ್ದ ಇನ್ನೊಂದ್ ಒಕ್ಲ್ ಮನೆಗೆ ಹೋದೆ. ಅಲ್ಲಿ ರಾಮಣ್ಣ ಮಾಂವನ ಮನೆಲಿ ಚಿನ್ನಮ್ಮತ್ತೆ ಮತ್ತೆ ಅವರ ಮಗಳ್ ಪಾರ್ವತಿ ಇಬ್ಬೊರು ಇದ್ದ್ಯೋ. ಅವು ನಾವ್ಗೆ ನೆಂಟ್ರ್ ಅತ್ಲರೂ, ಜಾತಿ ಮಕ್ಕ ಆದ ಕಾರಣ ನಾವು ಅವರ ಅತ್ತೆ, ಮಾಂವಾಂತ ಕರ್ಯತಿದ್ದ್ಯೋ. ಅವ್ಕಿಬ್ಬೊರಿಗೆ ನಮ್ಮ ನೋಡಿ ಕುಸಿ ಆತ್. ಯಾಕೇಂತೇಳ್ರೆ ಅವಿಬ್ಬೊರು ಆಗಾಗ ಸುಳ್ಯಕ್ಕೆ ಬಂದ್ ನಮ್ಮ

ಮನೆಲಿ ತಿಂದ್, ಉಂಡ್ ಹೋಗ್ತಿದ್ದೊ. ಅವುನೂ ನಮ್ಮಪ್ಪನ ಗದ್ದೆ ಬೇಸಾಯ ಮಾಡ್ತಿದ್ದೊ. ನಮ್ಮ ನೋಡಿ ಪಾರ್ವತಿ ಅಟ್ಟ ಹತ್ತಿ, ಎರ್ಡ್ ಸೇರ್‌ನಷ್ಟ್ ಒಣ್ಗಿದ ಬೀಜ ತೆಗ್ದ್ ಸುಟ್ಟ್ ಬೆಂಡ್ ಮಾಡಿ ತಿಂಬಕೆ ಕೊಟ್ಟತ್. ಅದರೊಟ್ಟಿಗೆ ಒಣ್ಗಿದ ಗೋಟ್‌ಕಾಯೆ ತುಂಡುನು, ಬೆಲ್ಲನು ತಿಂಬಕೆ ಕೊಟ್ಟತ್. ಆಗ ನಾವು ಕೋಳಿಗಳಾಂಗೆ ಆಗಾಗ ತಿಂಬತಿದ್ದೊ. ಎಷ್ಟ್ ತಿಂದರೂ, ಹೊಟ್ಟೆಲಿ ಸೆರೆ ಇರ್ತಿತ್. ಅವು ಕೊಟ್ಟದರ ಎಲ್ಲಾ ಕುಸಿಲಿ ತಿಂದ್, ಅವರೊಟ್ಟಿಗೆ ಹರ್ಟೆ ಹೊಡ್ದ್, ಅಲ್ಲಿಂದ ಅತ್ತಿಗೆ ಇದ್ದಲ್ಲಿಗೆ ಬಂದೊ. ಅಲ್ಲಿ ಅಣ್ಣ ನಮ್ಮ ಕಾದ್‌ಕಂಡ್ ನಿಂತಿತ್ತ್. ನಾವು ಹೊರ್ಡುವ ಅಂಬೆರ್ಪುಲಿ ಮನೆಲಿ ಹೇಳಿ ಬಾಕೆ ಮರ್ತಿದ್ದೊ. ಕಣ್ಣ ಬೆಳ್ಚಪ್ಪಾಡ ಅಂಗ್ಡಿಗೆ ಬಂದಂವ ನಾವು ಪಾಲಡ್ಕಲಿ ಹೋತಿದ್ದರ ಅಪ್ಪನೊಟ್ಟಿಗೆ ಹೇಳಿಟು. ಅಪ್ಪ, ಅವ್ವಂಗೆ ಬ್ಯೊದ್ ಅಣ್ಣನ ಕಳ್ಸ್ಯೊಳೊ. ಗಂಟೆ ಐದಾಕಂಡ್ ಬಾತ್. ನಾವು ಅಲ್ಲಿ ನಿಂತರೆ ಸುಳ್ಯಕೆ ಮುಟ್ಟುದು ಯಾಗ? ಅತ್ತಿಗೆ ನಿಲ್ಲಿಕೆ ಒತ್ತಾಯ ಮಾಡ್ಡೊ. ನಾವುಗೆ ಹೆದ್ರಿಕೆ ಸುರು ಆತ್. ಈಗನ ಹಾಂಗೆ ಫೋನ್ ಇತ್ಲೆ. ಅತ್ತಿಗೆನೊಟ್ಟಿಗೆ ನಾವು ಹೋದವೇಂತ ಹೇಳ್ದೊ. ನಾವ್ಗಾಗಿ ಅತ್ತಿಗೆ ನೀರ್ ದೋಸೆ, ಕೋಳಿ ಗೈಪು ಮಾಡಿಸಿದ್ದೊ. ನಮ್ಮ ಹೊಟ್ಟೆಲಿ ಸೆರೆ ಇತ್ಲರೂ, ಅತ್ತಿಗೆ ಮೇಲೆನ ಪ್ರೀತಿಂದ ಎರ್ಡೆರ್ಡ್ ನೀರ್ ದೋಸೆ ತಿಂದ್ ಸುಳ್ಯಕ್ಕೆ ಹೊರ್ಟೊ. ಅತ್ತಿಗೆ ಜಯಂತಿನ ಮನೆಗೆ ತಕಂಡೋಕೆ ಮಾಯ್ನ ಹಣ್ಣ್, ಸಾಂತಾಣಿ, ಮಾಂಬಳ ಕಟ್ಟಿಕೊಟ್ಟೊ. ಅದರ ತಕಂಡ್ ನಾವು ಸುಳ್ಯಕ್ಕೆ ಹೊರ್ಟೊ.

ಹೋಕನ ಇದ್ದ ಹುರ್ಪು ಬಾಕನ ಇತ್ಲೆ. ಕತ್ತಲಾದರೆ ಮನೆಲಿ ಬೆನ್ನಿಗೆ ಬರೆ ಎಳ್ಯೊವೋಂತ ಹೆದ್ರಿಕೆ. ಬೇಗ, ಬೇಗ ನಡ್ದೊ. ಬಳ್ಳಡ್ಕಲಿ ನಿಂಬೆ ಹಣ್ಣ್ ಕೊಯ್ಯಕೆ ನಿಂತತ್ಲೆ. ಏಳ್ ಗಂಟೆಗೆ ಸುಳ್ಯಕೆ ಮುಟ್ಟಿದೊ. ಜಯಂತಿನ ಅದರ ಮನೆ ಹಕ್ಕಲೆ ಬುಟ್ಟು, ಹೆದ್ರಿಕಂಡೇ ಮನೆಗೆ ಹೋದೆ. ಹೋದ ಕೂಡ್ಲೇ ಅವ್ವ ನನ್ನ ಬೆನ್ನಿಗೆ ಎರ್ಡ್ ಗುದ್ದು ಗುದ್ದಿ, " ಹೇಳಿಕಂಡ್ ಹೋಕೆ ಏನಾಗಿತ್ತ್? ಕಣ್ಣ ಬೆಳ್ಚಪಾಡ ಬಂದ್ ಹೇಳದಿದ್ದರೆ ನೀವಿಬ್ಬೊರು ಕೂಟೆಲಿಗೆ ಹೋದ್ ಗೊತ್ತೇ ಆಗ್ತಿತ್ಲೆ." ಎಂತ ಹೇಳಿ ಬೊಯ್ದೊ.

ಜಯಂತಿ ಮನೆಂದ ಅದರ ತಮ್ಮ ಎರ್ಡೆರ್ಡ್ ಸಲ ಬಂದ್ ವಿಚಾರ್ಸಿ ಹೋತ್ ಗಡ. ಅಪ್ಪ ಸಮಾಧಾನ ಮಾಡಿ ಕಳ್ಸಿದೊ ಗಡ.

"ಏನೂ ಹೆದ್ರುದು ಬೇಡ. ಅಲ್ಲಿ ಎಲ್ಲೋವೂ ನಾವ್ಗೆ ಬೇಕಾದೊವೇ. ನಾ ನನ್ನ ದೊಡ್ಡ ಮಂಜನ ಕಳ್ಸ್ಯೆಳೆ. ಅವು ಬೇಗ ಬಾವೊ" ಎಂತ ಅಪ್ಪ ಸಮಾಧಾನ ಹೇಳ್ದೊ ಗಡ. ಸಣ್ಣ ತಮ್ಮ ಚಂದ್ರ, "ನಿಂಗೆ ಹಾಂಗೇ ಆಕೂಂತ' ಕೈ ಬಾಸೆ, ಕಣ್ಣ್ ಸನ್ನೆ ಮಾಡಿ ಹಂಗಿಸಿ ನೆಗಾಡ್ತ್. ದೊಡ್ಡಂವ, "ಹೇಳ್ತಿದ್ದರೆ ನಾನೂ ಬಾತಿದ್ದೆ" ಎಂತ ಹೇಳ್ತ್.

* * * * *

ಚುಕ್ಕೆ – 36

" ಕಾಲೇಜು ಜೀವನ "

ಧಟ್ಟನೆ ಎಚ್ಚರ ಆತ್. ಸುತ್ತೋಳೂ ಕತ್ತಲೆ. ಪಕ್ಕದ ಮಂಚಲಿ ಮೊಲ್ಗಿದ ಉಗ್ಗವ ಗೊರ್ಕೆ ಹೊಡ್ಯತಿತ್ತ್. ನಾ ಅವ್ವನ ಖಜಾನೆ ಇಸಿದ ಪತ್ತಾಯದ ಮೇಲೆ ಹಾಸಿಗೆ ಹಾಕಿ ಮೊಲ್ಗಿದ್ದೆ. ಈ ಜಾಗೆ ಸುರುಗೆ ಸಣ್ಣಕ್ಕಂದ್ ನಾ ಅದರೊಟ್ಟಿಗೇ ಮೊಲ್ಗ್‌ತಿದ್ದೆ. ಅದ್ ಮೊದ್ವೆ ಆಗಿ ಹೋದ ಮೇಲೆ ಈ ಜಾಗೆಗೆ ನಾನೇ ಹಕ್ಕ್‌ದಾರ್ತಿ ಆದೆ. ಉಗ್ಗವನ ಮಂಚದ ಪುಡೆಲಿ, ಕೆಳಗೆ ನೆಲಲಿ, ಒಂದು ಮಣೆ ಮೇಲೆ ಚಿಮಿಣಿ ದೀಪ, ಕಿಚ್ಚಿನ ಪೆಟ್ಟಿಗೆ ಇತ್ತ್. ನಾ ಮೆಲ್ಲಂಗೆ ಪತ್ತಾಯಂದ ಇಳ್ದ್, ಕತ್ತಲೆಲಿ ತಡವರ್ಸಿ ಕಂಡ್ ಚಿಮಿಣಿ ದೀಪ ಹುಡ್ಕಿದೆ. ಕೈಗೆ ಮುಟ್ಟಿತ್. ಅದರ ಹಕ್ಕಲೆ ಇದ್ದ ಕಿಚ್ಚಿನ ಪೆಟ್ಟಿಗೆನ ಕಡ್ಡಿ ತೆಗ್ದ್ ಉರ್ಸಿ, ದೀಪ ಹೋಸಿದೆ. ದೀಪನ ಎತ್ತಿ, ಅದರ ಬೊಳ್ಪುಲಿ ಅಲ್ಲೇ ಸ್ಟೂಲ್ ಮೇಲೆ ಇಸಿದ ಅಲಾರಂ ಗಂಟೆ ನೋಡ್ದೆ. ಐದ್ ಗಂಟೆಗೆ ಹತ್ತ್ ಮಿನಿಟ್ ಇತ್ತ್. ಐದ್ ಗಂಟೆಗೆ ಸರಿಯಾಗಿ 'ಅಲಾರಂ' ಇಸಿದ್ದೆ. ಇರ್ಳ್ ಇಡೀ ನಿದ್ದೆ ಬಾತ್ಲೆ. ಇಂದ್ ನಾ ಅಪ್ಪನೊಟ್ಟಿಗೆ ಕಾಲೇಜಿಗೆ ಸೇರಿಕೆ ಮಡಿಕೇರಿಗೆ ಹೋನೆ. ಅದರ ನೆನ್ಸಿಕಾಕನನೇ ಮೈ ಅಕ್ಕಿ ಹೊಡ್ತ್. ನಾ ಎಷ್ಟೊಂದು ಕನ್ಸ್ ಕಟ್ಟಿದ್ದೆ. ಡಾಕ್ಟರ್ ಆಕೂಂತ ನನ್ನ ಕ್ಲಾಸ್‌ಮೇಟ್ ಪೈಲೂರು ಪ್ರೇಮ, ಡಾಕ್ಟರ್, ಆಕೆ ಮೈಸೂರಿಗೆ ಹೋತ್. ಅಲ್ಲಿ ಸೈಂಟ್ ಫಿಲೋಮಿನಾ ಕಾಲೇಜಿಲಿ ಪಿ.ಯು.ಸಿ.ಗೆ ಸೇರ್ತ್. ಕನ್ನಡ ಮಾಡಿಯಂದ ಹೋದ ಕಾರಣ ಅದ್ ಒಂದು ಪಾಠಲಿ ಫೇಲಾತ್. ಪುನಃ

ಈ ಸೆಪ್ಟಂಬರಲಿ ಪರೀಕ್ಷೆಗೆ ಕಟ್ಟಿದೆ ಗಡ. ಅದ್ಕೆ ಮನೆವ್ರ ಒತ್ತಾಸೆ ಉಟ್ಟು. ನಂಗೆ ಯಾರೊಳೊ? ಅಪ್ಪಂಗೆ ನಾ ಮೆಡಿಕಲ್ ಓದುದು ಇಷ್ಟ ಇಲ್ಲೆ. ಹಣ ಖರ್ಚಾದೆಲೆ? ನಾ ಹೆಣ್ಣ್ ಅಲ್ಲನೋ? ನಾಣಿಗೆ ಆದರೆ ಎಷ್ಟ್ ಬೇಕರೂ ಖರ್ಚ್ ಮಾಡ್ವೊ. ಅದ್ಕೆ ನಾ ಕಾಲೇಜಿಗಾದರೂ ಹೋನೇಂತ ಹಟ ಹಿಡ್ದೆ. ನನ್ನ ಹಟದ ಮುಂದೆ ಅವು ಸೋತೊ. ಅವ್ವ ಅಪ್ಪನ ಒಪ್ಪಿಸಿದೊ. ಇದೇ ಗುಂಗ್‌ಲಿ ನಾ ಇರಿಕಾಕನ ಅಲಾರಂ ಹೊಡ್ತ್. ಗಡಿ ಬಿಡಿಂದ ಗಂಟೆನ ತಲೆಗೆ ಮೊಡಂಕಿ, ಹಾಸಿಗೆ ಸುತ್ತಿ ಇಸಿ, ಕೈಲಿ ಚಿಮಿಣಿ ದೀಪ ಹಿಡ್ಕಂಡ್ ರೂಮ್‌ಂದ ಹೊರಗೆ ಬಂದೆ. ಉದ್ದದ ಜಗಲಿಲಿ ಗೋಣಿ ಚೀಲಲಿ ಅಂಗ್ಡಿ ಜೀನ್ಸ್, ಅಕ್ಕಿ, ಧಾನ್ಯಗ, ಹಿಂಡಿ ಮೆಣ್ಸ್‌ಂತ ತುಂಬಾ ಸಾಮಾನ್‌ಗಳ ಸಾಲಾಗಿ ಒಟ್ಟಿ ಇಸಿದ್ದೊ. ಅದರ ಪಕ್ಕಲಿ ಮೆಲ್ಲಂಗೆ ಒಂದು ಕೈಲಿ ದೀಪ ಹಿಡ್ದ್, ಇನ್ನೊಂದು ಅಂಗೈಂದ ಅದರ ಬೊಳ್ಪುಗೆ ಅಡ್ಡ ಹಿಡ್ದ್, ಹೆಜ್ಜೆ ಮೇಲೆ ಹೆಜ್ಜೆ ಇಸಿಕಂಡ್ ಮುಂದೆ ನಡ್ದೆ. ನಡುಕೋಣೆಲಿ ನಾಣಿ, ಚಂದ್ರ ಹಾಸಿಗೆಲಿ ಅಡ್ಡಾದಿಡ್ಡಿ ಉರ್ಳಿಕೊಂಡಿದ್ದೊ. ಅಪ್ಪನ ಮಂಚ ಖಾಲಿ ಇತ್ತ್. ಅವು ಆಗಳೇ ಎದ್ದ್ ಹಳ್ಳಕ್ಕೆ ಮಿಾಯಕೆ ಹೋಗೊಳೊ. ಅವರಕ್ಕಲೆ ಐದ್ ಬೆಟ್ರಿನ ಲೈಟಿತ್ತ್. ಅವ್ವನ ಹಕ್ಕಲೆನೂ ಒಂದು ಸಣ್ಣ ಬೆಟ್ರಿ ಲೈಟಿತ್ತ್. ಅಡ್ಗೆ ಕೋಣೆಲಿ ಕೆಲ್ಸ ಮಾಡುವ ಸದ್ದ್ ಕೇಳ್ಸ್‌ತಿತ್ತ್. ನಾ ಮನೆಂದ ಹೊರಗೆ ಬಂದೆ. ಪಕ್ಕದ ಕೋಣೆಲಿ ಅತ್ತಿಗೆ ಕೂಸುನ ತೊಟ್ಟಿಲ್ ಒಚ್ಚುವ ಸದ್ದ್ ಕೇಳ್ಸ್‌ತಿತ್ತ್. ನನ್ನ ನೋಡಿಕಾಕನ ದಾಸು ನಾಯಿ ಬೀಲ ಹಂದಾಡ್ಸಿಕಂಡ್ ನನ್ನ ಹಿಂದೆ ಬಾತ್. ಇಜ್ಜೆಲ್‌ನ ಇನ್ನೊಂದು ಪುಡೆಲಿ ನೀರೆಡಿ ಕೊಟಗೆ ಇತ್ತ್. ನಾ ನೀರೆಡಿಗೆ ಬಂದ್ ಮಂಡೆಗೆ ಕೈ ಹಾಕಿ ನೋಡ್ದೆ. ನೀರ್ ಬೆಚ್ಚಂಗೆ ಇತ್ತ್. ಇರ್ಳ್ ಹಾಕಿದ ಕಿಚ್ಚಿ ಆರ್ತಿಲ್ಲೆ. ನೀರೆಡಿ ಒಲೆಗೆ ದಿನಾ ದೊಡ್ಡ ದೊಡ್ಡ ಕುಂಟೆಗಳ ಒಟ್ಟಿ ಕಿಚ್ಚಿ ಮೊಡ್ತಿದ್ದೊ. ನೀರ್ ದಿನ ಇಡೀ ಬೆಚ್ಚಂಗೆ ಇರ್ತಿತ್ತ್. ದೀಪನ ಮಂಡೆ ಪಕ್ಕ ಇಸಿ, ಅಲ್ಲೇ ಡೊಬ್ಬಿಲಿದ್ದ ಉಮಿಕರಿನ ಅಂಗೈಗೆ ಹಾಕಿ, ತೋರ್ ಬೆರ್ಳ್‌ಂದ ಹಲ್ಲ್ ಉಜ್ಜಿಕೆ ಸುರು ಮಾಡ್ದೆ. ಮನ್ಸ್ ಇಡೀ ಕನ್ಸ್‌ಗ. ಹೇಂಗಿರ್ದು ಕಾಲೇಜು ಜೀವನ? ನಮ್ಮ ಕುಟುಂಬಲಿ ನಾನೇ ಸುರುನಂವ ಕಾಲೇಜಿಗೆ ಹೋಗುವ ಗೂಡೆ. ಏಕೆ? ನಮ್ಮ ಹೈಸ್ಕೂಲ್‌ಲಿ ಕಲ್ತ ಗೂಡೆಗಳ ಪೈಕಿ ನಾನೇ ಅಲ್ಲನೋ ಸುರುನ ಗೂಡೆ ಕಾಲೇಜ್ ಮೆಟ್ಲ್ ಹತ್ತೋವ್ಳು. ನೆನ್ಸಿಕಾಕನ ನಂಗೇ ನನ್ನ ಮೇಲೆ ಹೆಮ್ಮೆ ಆತ್. ಬೇಗ ಬೇಗನೆ ಹಲ್ಲುಜ್ಜಿ, ಮಿಾಯಕೆ ಇಳ್ದೆ. ಮಿಂದ್ ಅಲ್ಲೇ ಬೊಳ್ಳಿಲಿ ಒಣ್ಗಿಕೆ ಹಾಕಿದ ಬೈರಾಸ್‌ಲಿ ತಲೆ ಮೈ ಒರ್ಸಿ, ತಲೆಗೆ ಕಟ್ಟಿಕಂಡೆ. ಬೊಳ್ಳಿ ಮೇಲೆ ಹರ್ಗಿದ ಲಂಗ, ರವ್ಕೆ, ತೆಗ್ದ್ ಹಾಕಂಡ್, ಸೀರೆನ ಮೈಗೆ ಸುತ್ತಿಕಂಡ್ ಮನೆಗೆ ಬಂದೆ. ಅಷ್ಟರ್ಲಿ ಚುಮು ಚುಮು ಬೊಳ್ಪಾತ್. ಮನೆಲಿ ಸೀರೆನ ಸರಿಯಾಗಿ ಉಟ್ಟ್ ಇಜ್ಜೆಲಿಗೆ ಬಂದ್, ತೊಳ್ಸಿ ಕಟ್ಟೆಲಿ ದೈ ನೊಡುಲಿ ಇಸಿದ ಸೂರ್ಯಕಾಂತಿ ಹೂಗಳ ಹೂ ಬುಟ್ಟಿಲಿ ಹಾಕಂಡ್ ಒಳಗೆ ಹೋದೆ. ನಿನ್ನೆ ಹಿಂಬೊತ್ತ್ ಸೂರ್ಯಕಾಂತಿ ಮುಗುರುಗಳ ಕೊಯ್ದ್, ಅರ್ಳಿಕೆ ತೊಳ್ಸಿ ಕಟ್ಟೆಲಿ, ತೊಳ್ಸಿ ದೈಯಿಲಿ, ಸಿಕ್ಕಿಸಿ ಇಸಿದ್ದೆ. ಅದ್ ಬೊಳ್ಪುಗೆ ಪೊರ್ಲುಲಿ ಅರ್ಳಿತ್ತ್.

ನೊಡು ಕೋಣೆಗೆ ಬಂದ್ ದೇವ್ರ ಪಟಲಿ ನಿನ್ನೆ ಇಸಿದ ಹೂಗಳ ಎಲ್ಲಾ ತೆಗ್ದ್, ಹೊಸ ಹೂಗಳ ಪಟಗಳಿಗೆ ಇಸಿದೆ. ದೀಪದ ಹಳೆ ನೆಣೆ ತೆಗ್ದ್, ಒರ್ಸಿ, ನಿನ್ನೆ ಉರ್ಸಿದ ಊದುಬತ್ತಿ ಕಡೆನ ಕಡೆಗಳ ತೆಗ್ದೆ. ಅದರೆಲ್ಲಾ ಒಂದು ಕಾಗ್ದಲಿ ಹಾಕಿ ಚಾಳೆ ಬುಡಕ್ಕೆ ಬಿಸಾಡಿ ಬಂದೆ. ನಾಣಿ ಗುಡಿ ಹೊದ್ದ್ ಮೊಲ್ಗಿತ್ತ್. ಅಂವನೂ ನಮ್ಮೊಟ್ಟಿಗೆ ಬಂದದೆ. ಅಪ್ಪ ಇಂದ್ ಬೆಂಗ್ಳೂರಿಗೆ ಯಾವುದೊ ಒಂದು ಕೇಸ್‌ನ ವಿಚಾರಕ್ಕೆ ಹೈ ಕೋರ್ಟ್ ವಕೀಲರ ನೋಡಿಕೆ ಹೋದವೆ. ಇದರ ಎಡೆಲಿ ನನ್ನನೂ ಕರ್ಕಂಡ್ ಮಡಿಕೇರಿಲಿ ಕೋಲೇಜಿಗೆ ಸೇರ್ಸಿ ಹೋದವೆ ಗಡ. ನಾಣಿನನೂ ಒಟ್ಟಿಗೆ ಕರ್ಕಂಡ್ ಹೋದವೆ. ಅಂವಂತೇಳ್ರೆ ಅಪ್ಪಂಗೆ ಬಾಳ ಪ್ರೀತಿ. ಎಲ್ಲಿಗೆ ಹೋದರುನೂ ಅವನ ಒಟ್ಟಿಗೆ ಕರ್ಕಂಡ್ ಹೋಗ್ತಿದ್ದೊ. ಅಷ್ಟರ್ಲಿ ಅಪ್ಪ ಹಳ್ಳಲಿ ಮಿಂದ್, ಉದಯರಾಗ ಹಾಡಿಕಂಡ್ ಬಂದೊ. ಅವು ಹಾಕಿದ ಮರದ ಮೆಟ್ಟ್‌ನ ಟಕ ಟಕ ಸದ್ದ್ ದೂರಂದಳೇ ಕೇಳ್ಸ್‌ತಿತ್ತ್. ಬಂದವೇ ನಾರಾಯಣ, ನಾರಾಯಣ ಎಂತ ಹೇಳಿ ತಮ್ಮನ ಗಟ್ಟಿಲಿ ಕರ್ದೊ. ಅಂವ ಉಪಾಯ ಇಲ್ಲದೆ ಎದ್ದ್ ಕುದ್ದ್ ಕಣ್ಣ್ ಉಜ್ಜಿಕಂಡತ್.

'ಹೋಗ್ ಬೇಗ ಮಿಂದ್ ಬಾ' ಎಂತ ಅಪ್ಪ ಹೇಳ್ದೊ. ಅಂವ ಎದ್ದ್ ನೀರಡಿಗೆ ಓಡ್ತ್. ಅಪ್ಪ ದೇವ್ರಿಗೆ ದೀಪ ಹಚ್ಚಿ, ಐದ್ ಊದು ಕಡ್ಡಿಗಳ ಹೋಸಿ, ಮಂಗಳಾರತಿ ಮಾಡ್ದೊ. ನಾ ಕೈ ಮುಗ್ದೆ.

ಎಂಟ್ ಗಂಟೆನ ಮೋಡರ್ನ್ ಬಸ್‌ಗೆ ನಾ, ಅಪ್ಪ, ನಾಣಿ ಹೊರ್ಟೊ. ಪೆರಾಜೆ ಹಕ್ಕಲೆ ಬಾಕನ ಬಸ್ ನಿತ್ತತ್. ಅಲ್ಲಿ ಮಾವಾಜಿ ರಾಮಣ್ಣ ಮಾಂವ, ಅವರ ಮಕ್ಕ ಅಚ್ಚುತ ಭಾವ, ವಾರಿಜ ಅತ್ತಿಗೆ, ಬಸ್ ಹತ್ತಿದೊ. ಅವು ಮಡ್ಕೇರಿ ಕಾನ್ವೆಂಟಿಗೆ ಹೋಗೋವು. ನಾವೆಲ್ಲಾ ಮಡ್ಕೇರಿ ಮುಟ್ಟಿಕಾಕನ ಸಿಕ್ಕಾ ಬಟ್ಟೆ ಮಳೆ ಬಾತ್. ಅದೂ ಅಲ್ಲದೆ ಮಡಿಕೇರಿನ ಚಳಿನೂ ಇತ್ತ್. ನಾವ್ಯಾರೂ ಸೆಟ್ಟರ್ ಹಾಕಿತ್ಲೆ. ನಾವು ಬಾಡಿಗೆ ಕಾರ್ ಮಾಡಿಕಂಡ್ ಕಾನ್ವೆಂಟಿಗೆ ಬಂದೊ. ಅಲ್ಲಿ ವಾರಿಜತ್ತಿಗೆನ ತಂಗೆ ಸುಗಂಧಿ ಓದ್ತಿತ್ತ್. ವಾರಿಜ ಅತ್ತಿಗೆ ಅಲ್ಲಿ ನಿತ್ತೊ. ನನ್ನ ಮಡಿಕೇರಿ ಗವರ್ಮೆಂಟ್ ಕಾಲೇಜಿಗೆ ಸೇರ್ಸುದೂಂತ ಅಪ್ಪ ನಿಶ್ಚೈಸಿ ನಿಲ್ಲಿಕೆ ಹಾಸ್ಟೆಲ್ ಹುಡ್ಕಿ ಕಂಡ್ ಹೋದೊ. ಅಲ್ಲಿ ಹಾಸ್ಟೆಲ್ ನೋಡಿ ಅಪ್ಪಂಗೆ ಕುಸಿ ಆತ್ಲೆ. ಅವು,

" ಮಡಿಕೇರಿನ ಈ ಮಳೆ, ಚಳಿಗೆ ನಿಂಗೆ ಊರು ಹಿಡ್ಸಿಕಿಲ್ಲೆ. ನಾವು ಮೈಸೂರಿಗೆ ಪೋಯಿ" ಎಂತ ಹೇಳ್ದೊ.

ನಂಗೆ ಕುಸಿ ಆತ್. ಯಾಕೆಂತೇಳ್ರೆ ಪೈಲೂರು ಪ್ರೇಮ ಮೈಸೂರ್‌ಲಿ ಅಲ್ಲನೋ ಓದಿದ್."

ಅಲ್ಲಿಂದ ನಾವು ಮೈಸೂರಿಗೆ ಬಂದ್ ಇಂದ್ರ ಭವನಲಿ ರೂಮ್ ಮಾಡ್ದೊ. ನಾ ಮೈಸೂರುನ ನೋಡ್ದು ಇದ್ ಸುರು. ಮಂಗ್ಳೂರು, ಪುತ್ತೂರು, ಕಾಸ್ರೋಡಿಗೆ ಅಪ್ಪ, ಅಣ್ಣನೊಟ್ಟಿಗೆ ಆಗಾಗ ಹೋಗ್ತಿದ್ದೆ. ಅದ್ ನಾವ್ಗೆ ನೆರೆಮನೆ ಇದ್ದ ಹಾಂಗೆ. ಮೈಸೂರ್‌ಲಿ ದೊಡ್ಡ ದೊಡ್ಡ ರಾಜ ಬೀದಿಗಳ, ದೊಡ್ಡ ದೊಡ್ಡ ಅರಮನೆ ಹಾಂಗಿದ್ದ

ಕಟ್ಟೋಣಗಳ, ಅಲ್ಲಿನ ದೀಪಾಲಂಕಾರಗಳ ನೋಡಿ ನಂಗೆ ಸೋಜಿಗ ಆತ್. ಅಪ್ಪನೊಟ್ಟಿಗೆ ಹೋದರೆ ತಿಂಬಕೆ, ಉಂಬಕೆ ಅವು ಧಾರಾಳಲಿ ಕರ್ಚ್ ಮಾಡ್ತಿದ್ದೊ. ನಾವ್ಗೆ ಸಿನೆಮಾ ತೋರ್ಸಿದೊ. ಮಾರ್ಣೆ ದಿನ ಮೃಗಾಲಯಕ್ಕೆ ಕರ್ಕಂಡ್ ಹೋದೊ. ಮೃಗಾಲಯಲಿ ಸುತ್ತಿ ಸುತ್ತಿ ಸಾಕಾತ್. ಆದರೆ ಅಲ್ಲಿ ಮುರ್ಗಗಳ, ಹಕ್ಕಿಗಳ ನೋಡಿ ಕುಸಿ ಆಗಿ ಹಿಂದೆ ಬಾಕೆ ಮನ್ಸೇ ಆತ್ಲೆ. ಬಗೆ ಬಗೆ ರಂಗ್‌ನ ಗಿಳಿಗ, ನವಿಲ್‌ಗ ಬೇರೆ ಬೇರೆ ಜಾತಿನ ಹಾವುಗ, ಮಂಗ, ಮುಸ್ಯ, ಚಿಂಪಾಂಜಿ, ಮೊನ್ಸರ ಹಾಂಗಿದ್ದ ಮಂಗ, ಅದರ ಗೊರಿಲ್ಲಾಂತ ಹೇಳ್ತಿದ್ದೊ. ಹುಲಿ, ಕರ್ಡಿ, ಖಡ್ಗಮೃಗ, ಘೇಂಡಾಮೃಗ, ನೀರಾನೆ –ಒಂದೇ ಎರ್ಡೇ? ಕಾಡ್‌ಲಿ ಇದ್ದ ಮುರ್ಗಗ, ಹಕ್ಕಿಗ ಎಲ್ಲಾ ಅಲ್ಲಿ ಇದ್ದೊ.

ಮೊರ್ದಿನ ನನ್ನ ಮಹಾರಾಣಿ ಕಾಲೇಜಿಗೆ ಕರ್ಕಂಡ್ ಹೋದೊ. ಅಲ್ಲಿ ಅರ್ಜಿ ಕೊಟ್ಟ್ ಬಂದೊ. ರೂಮಿಗೆ ಬಾಕನ ನಮ್ಮ ದೂರದ ಸಂಬಂಧಿ, ಮಾವಾಜಿ ಮಾಂವನ ಮಂಜ ಗೋಪಾಲಕೃಷ್ಣ ಮತ್ತೆ ಕುರುಂಜಿ ಶಿವರಾಮ ನಮ್ಮ ಕಾದ್‌ಕಂಡ್ ರೂಮುನ ಪಕ್ಕ ನಿಂತಿದ್ದೊ. ಅಪ್ಪ ರೂಮ್‌ನ ಬಾಗಿಲ್ ತೆಗ್ದ್, ಅವರ ಕುದ್ರಿಸಿ ಕಾಫಿ, ತಿಂಡಿ ತರ್ಸಿದೊ. ಅಪ್ಪ,

"ನಂಗೆ ಇದರ್ದೇ ಚಿಂತೆ. ಮಹಾರಾಣೀಸ್‌ಲಿ ಅರ್ಜಿ ಕೊಟ್ಟ್ ಬಂದೊಳೊ. ನಿಲ್ಲುದೆಲ್ಲಿ? ಮಹಾರಾಣೀಸ್‌ಲಿ ಹಾಸ್ಟೆಲ್ ಸುರಾಕನ ಹದ್ನೈದ್ ದಿನ ಆದು ಗಡ." ಎಂತ ಹೇಳ್ದೊ.

ಗೋಪಾಲಕೃಷ್ಣ ಮತ್ತೆ ಶಿವರಾಮ ಆಗ ಸೈಂಟ್ ಫಿಲೋಮಿನಾ ಕೋಲೇಜಿಲಿ ಫಸ್ಟ್ ಬಿ.ಎ ಓದ್‌ತಿದ್ದೊ. ಅವು ಹೇಳ್ದೊ.

" ಅದಕ್ಕೇನ್? ಓ.ಖ ಮೊಹಲ್ಲಾಲಿ ಒಂದು ಗೂಡೆಗಳ ಹಾಸ್ಟೆಲ್ ಉಟ್ಟು. ಅಲ್ಲಿ ನಾವು ಸೀಟ್ ಮಾಡಿ ಕೊಟ್ಟವೆ."

ಅಪ್ಪಂಗೆ ಬಾಳ ಕುಸಿ ಆತ್. ಅವು ನಾಳೆ ಬೆಂಗ್ಳೂರಿಗೆ ಹೋಗಿ ತಲ್ಪಕಾಗಿತ್ತ್. ಅಪ್ಪ ಒಂದು ಬಾಡಿಗೆ ಕಾರ್ ಮಾಡಿ ನನ್ನ ಲಗೇಜ್ ತಕಂಡ್ ನಮ್ಮ ಕರ್ಕಂಡ್ ಎನ್.ಆರ್. ಮೊಹಲ್ಲಾದ ಆ ಹಾಸ್ಟೆಲಿಗೆ ಬಂದೊ. ನಮ್ಮೊಟ್ಟಿಗೆ ಗೋಪಾಲಕೃಷ್ಣ ಮತ್ತೆ ಶಿವರಾಮರೂ ಬಂದೊ. ಮೈಸೂರ್‌ನ ಕ್ರೈಸ್ತ ಕಿಂಗ್ ಕಾನ್ವೆಂಟ್‌ನೊವು ಈ ಹಾಸ್ಟೆಲ್‌ನ ನಡ್ಸುದು ಗಡ. ಆಗ ಅಲ್ಲಿ ಹಾಸ್ಟೆಲ್ ಸುರು ಆತ್ಲೆ. ಬರೇ ಸಿಸ್ಟರ್ಸ್ ಮತ್ತೆ ವಾರ್ಡನ್ ಸಿಸ್ಟರ್ ಇದ್ದೊ. ನನ್ನ ವಿಚಾರ ಎಲ್ಲಾ ತಿಳ್ದ್ ಅವು ನನ್ನ ಹಾಸ್ಟೆಲ್‌ಲಿ ನಿಲ್ಲಿಸಿಕಂಬಕೆ ಒಪ್ಪಿದೊ. ಅಪ್ಪ ಅಲ್ಲಿ ನನ್ನ ಸೇರ್ಸಿ, ಮುನ್ನೂರು ರೂಪಾಯಿ ಎಡ್ವಾನ್ಸ್ ಕೊಟ್ಟ್, ಅವೆಲ್ಲಾ ನನ್ನ ಅಲ್ಲಿ ಬುಟ್ಟ್ ಹೋದೊ.

ಅಲ್ಲಿ ಯಾವೊಬ್ಬ ಗೂಡೆನೂ ಅಷ್ಟರವರೆಗೆ ಸೇರ್ತಿಲ್ಲೆ. ನಂಗೆ ತುಂಬಾ ಬೇಜಾರಾತ್. ಎರ್ಡ್– ಮೂರು ದಿನ ಒಂಟಿ ಆಗಿ ಇದ್ದೆ. ಸಿಸ್ಟರ್ಸ್ ಮಾತಾಡ್ರೆ ಮಾತ್ರಾ ಮಾತಾಡ್ತಿದ್ದೆ. ಅವು ಯಾರೂ ನನ್ನ ಹೆಚ್ಚಿಗೆ ಮಾತಾಡ್ಸ್‌ತಿತ್ಲೆ. ನಾ ಹೋಕಾಕನ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಪುಸ್ತಕ ಮತ್ತೆ ಸೇಡಿಯಾಪು ಕೃಷ್ಣಭಟ್ಟರ 'ಪಳಮೆಗಳು'

ತಕಂಡೋಗಿದ್ದೆ. ಅದರ ಓದುದರ್ಲೆ ದಿನ ಕಳ್ದೆ. ಆಗಾಗ ವಾರ್ಡನ್ ಬಂದ್ ನನ್ನ ರೂಮ್‌ಲಿ ಇಣ್ಕಿ ನೋಡ್ತಿದ್ದೊ. ನಾ ಓದುದರ ನೋಡಿ ಮತ್ತೆ ಅವು ಅತ್ತ ಬಾತ್ಲೆ.

ನಮ್ಮ ಹಾಸ್ಟೆಲ್ ಕಟ್ಟೋಣ ಒಂದು ದೊಡ್ಡ ಹಳೆ ಮನೆ ಆಗಿತ್ತ್. ಸುತ್ತೋಳೂ ಎತ್ತರದ ಗಟ್ಟಿ ಮುಟ್ಟಾದ ಕಂಪೌಂಡ್ ವಾಲ್ ಇತ್ತ್. ದೊಡ್ಡದಾದ ಒಂದು ಗೇಟ್. ಮತ್ತೊಂದು ಸಣ್ಣ ಗೇಟ್ ಇತ್ತ್. ಹೋದ ಕೂಡ್ಲೇ ಅಗಲದ ಒಂದು ಹಜಾರ. ಅದರ ಪಕ್ಕ ಒಂದು ಸಣ್ಣ ಕೋಣೆ. ಅದರ ಅವು 'ಚಾಪ್ಲ್' ಮಾಡಿಕೊಂಡಿದ್ದೊ. ಅಲ್ಲಿ ಏಸು ಕ್ರಿಸ್ತನ ಮೂರ್ತಿಗ ಇದ್ದೊ. ಹಜಾರಲಿ ಒಂದು ಪಕ್ಕ ಪರದೆಂದ ಭಾಗ ಮಾಡಿ ಒಂದು ರೂಮು ಮಾಡಿದ್ದೊ. ಅಲ್ಲಿ ಮಂಚ ಹಾಕಿ, ಇಬ್ಬೊರು ಸಿಸ್ಟರ್ಸ್‌ಗ ಮಲ್ಗ್‌ತಿದ್ದೊ. ಹಜಾರಂದ ಒಳಗೆ ಹೋದರೆ ಒಳಗೆ ಮತ್ತೊಂದು ದೊಡ್ಡ ಹಜಾರ. ಅದರ ಅತ್ತ ಇತ್ತ ಎರ್ಡ್ ದೊಡ್ಡ ದೊಡ್ಡ ಕೋಣೆಗ. ಒಂದೊಂದು ಕೋಣೆಲಿ ನಾಕ್, ನಾಕ್ ಮಂಚಗಳ ಇಸಿದ್ದೊ. ಆ ಹಜಾರ ದಾಟಿಕಾಕನ ಅಲ್ಲಿನೂ ವಿಶಾಲವಾದ ಹಜಾರ ಮತ್ತೆ ಅದರ ಎರ್ಡ್ ಪುಡೆಲಿ ದೊಡ್ಡ ದೊಡ್ಡ ಕೋಣೆಗ. ಆ ಹಜಾರಂದ ಒಳಗೆ ಹೋದರೆ ಒಂದು ಊಟದ ಕೋಣೆ. ಅದರ ಬಲ ಬದಿಲಿ ಅಡ್ಗೆ ಕೋಣೆ. ಅಡ್ಗೆ ಕೋಣೆ ಒಳಗೆ ಸಾಮಾನ್ ಇಸುವ ಕೋಣೆ. ಎಡ ಬದಿಲಿದ್ದ ಮೀಯುವ ಕೋಣೆನೂ ತುಂಬಾ ದೊಡ್ಡದಾಗಿತ್ತ್. ಅಲ್ಲಿಂದ ಇಳ್ಯಕಾಕನ ಹಿಂದೆ ದೊಡ್ಡ ಇಜ್ಜೆಲ್. ಇಜ್ಜೆಲಿಲಿ ಒಂದು ಮೂಲೆಲಿ ಸಾಲ್‌ಲಿ ನಾಕ್ ಪಾಯಿಖಾನೆಗ. ಇಜ್ಜೆಲ್‌ನ ನೊಡುಲಿ ಎರ್ಡ್ ನೀರ್ನ ನಲ್ಲಿಗ. ಅದರ ಹಕ್ಕಲೆ ಪಾತ್ರೆ ತೊಳ್ಯಕೆ ಬಟ್ಟೆ ಒಗ್ಯಕೆ ಕಲ್ಲ್ ಹಾಕಿದ್ದೊ. ಅದರ ಪಕ್ಕಲಿ ದೊಡ್ಡ ದೊಡ್ಡ ಎರ್ಡ್ ನೀರ್‌ನ ಟಾಂಕಿನೂ ಇದ್ದೊ. ಇಜ್ಜೆಲಿನ ಬಲ ಪುಡೆಲಿ ಇಪ್ಪತ್ತ್ ಜನ ಕುದ್ದ್‌ಕಂಬಷ್ಟ್ ಇದ್ದ ಊಟದ ಕೋಣೆ. ಅಲ್ಲಿ ಅಗಲದ ಮೇಜು ಹಾಕಿ ಅದರ ಸುತ್ತೋಳು ಕುರ್ಚಿಗಳ ಹಾಕಿದ್ದೊ. ಆ ಊಟದ ಕೋಣೆ ಮುಂದೆ ಕಾರ್‌ಶೆಡ್ ಆಗಿತ್ತ್ ಗಡ. ಮಕ್ಕ ಹೇಳ್ತಿದ್ದೊ. ಪಾಯಿಖಾನೆನ ಎದ್ರ್‌ಗಡೆ ಮೂರು ರೂಮುನ ಶೀಟ್ ಹಾಕಿದ ಒಂದು ಕಟ್ಟೋಣ ಇತ್ತ್. ಎರ್ಡ್ ರೂಮ್‌ಲಿ ಕಟಾಕುಟಿ ಸಾಮಾನ್ ಮತ್ತೆ ಸೊಯ್ದೆ ಒಟ್ಟಿದ್ದೊ. ಮತ್ತೊಂದು ಕೋಣೆ, ಗೂಡೆಗಳಿಗೆ ಮುಟ್ಟಾಕನ ಬಟ್ಟೆ ತೊಳ್ಯಕೆ ಉಪಯೋಗಿಸ್‌ತಿದ್ದೊ. ಹಾಂಗೂ ಹೀಂಗೂ ಹಾಸ್ಟೆಲ್ ಅಚ್ಚುಕಟ್ಟಾಗಿತ್ತ್.

ಅಡಿಗೆ ವಿಭಾಗಕ್ಕೆ ನಾಕ್ ಜನ ಇದ್ದೊ. ಇಬ್ಬೊರು ಅಡ್ಗೆವು, ಇಬ್ಬೊರು ಇಕ್ಕಿಕೆ, ಕೈ ಕೆಲ್ಸ ಮಾಡಿಕೆ. ಅಡ್ಗೆ ವಿಭಾಗಕ್ಕೆ ಒಬ್ಬ ಮೇಲ್ವಿಚಾರಣೆ ಮಾಡುವ, ಸಿಸ್ಟರ್ ಫಿಲೋಮಿನಾ ಎಂಬೊವು ಇದ್ದೊ. ಅವು ಸುರುಂದ ಕಡೆವರೆಗೆ ನನ್ನ ಪ್ರೀತಿನ ಸಿಸ್ಟರ್ ಆಗಿದ್ದೊ. ನಂಗಾಗಿ ಅವು ಎಷ್ಟೋ ಸಲ ಏಸುನಲ್ಲಿ ಪ್ರಾರ್ಥನೆ ಮಾಡ್ಯೊಳೊ. ನಾ ಆ ವೊರ್ಸದ ಸುರುನ ಹಾಸ್ಟೆಲ್ ಗೂಡೆ. ನನ್ನ ಹಕ್ಕಲೆ ಅವು ನಿಂಗೆ ಬೇಕಾದ ರೂಂ. ತಕಾಂತೇಳಿದ್ದೊ. ಸುರುನ ಹಜಾರನ ಬಲಬದಿ ರೂಮುನ ನಾ ತಕಂಡೆ. ಅದರ್ಲಿ ನಾಕ್ ಮಂಚಗ ಇದ್ದೊ. ನಾ ಹೋದ ನಾಕನೇ ದಿನ ಮಂಗ್ಳೂರ್‌ನ

‘ಐರಿನ್ ವಾಸ್’ □ ಎಂಬ ಗೂಡೆ ನನ್ನ ರೂಮಿಗೆ ಬಾತ್. ಅದ್ ನಾಕ್ ವೊರ್ಸಂದ ಅಲ್ಲೆ ಇತ್ತ್ ಗಡ. ಈ ವೊರ್ಸ ಅದರ್ದ್ ಅಕೇರಿ. ಸಯನ್ಸ್ ತಕಂಡಿತ್. ಅದರ ನೋಡಿ ನಂಗೆ ಭಾರೀ ಕುಸಿ ಆತ್. ಅದ್ ನನ್ನಲ್ಲಿ ತುಳು ಮಾತಾಡ್ತಿತ್ತ್. ಅಲ್ಲಿ ಯಾರಿಗೂ ತುಳು ಬಾಸೆ ಅರ್ಥ ಆಗ್ತಿತ್ಲೆ. ಆ ಮೇಲೆ ಒಬ್ಬೊಬ್ಬನೇ ಬಾಕೆ ಸುರು ಮಾಡ್ದೊ. ಆ ಹಾಸ್ಟೆಲ್ ಸುರು ಆದ ಮೇಲೆ ಆ ವೊರ್ಸ ಹೆಚ್ಚ್ ಜನ ಗಡ. ಅಕೆರಿಗೆ ನಾವು ಇಪ್ಪತ್ತೈದ್ ಜನ ಆದೊ. ಅದರ್ಲಿ ಐರಿನ್ ವಾಸ್, ಭಾರತಿ, ಇಂದಿರಾ ಜೈನ್ ಮತ್ತೆ ನಾ ದಕ್ಷಿಣ ಕನ್ನಡದೊವು. ದಕ್ಷಿಣ ಕನ್ನಡ ಜಿಲ್ಲೆಯವ್ಕೆ ಅಲ್ಲಿ ಬಾಳ ಗೌರವ ಕೊಡ್ತಿದ್ದೊ. ಎಲ್ಲಿಗೆ ಹೋಕಾದರೂ ಒಪ್ಪಿಗೆ ಕೊಡ್ತಿದ್ದೊ. ಆದರೆ ಕೊಡಗ್‌ನವ್ಕೆ ಮತ್ತೆ ಮಳಿಯಾಳಿಗಳಿಗೆ ಆಗಾಗ ಅವು ಬೊಯ್ಯತಿದ್ದೊ. ಅವು ಹೊರಗೆ ಹೋಕಾದರೆ ಅವ್ಕೆ ಬೇಗನೆ ಒಪ್ಪಿಗೆ ಕೊಡ್ತಿತ್ಲೆ.

ನಾ ಹಾಸ್ಟೇಲಿಗೆ ಬಂದ್ ಒಂದು ವಾರ ಆದರೂ ಅಪ್ಪ, ತಮ್ಮ ಬಾತ್ಲೆ. ನಾ ಊರಿಗೆ ಕಾಗ್ದ ಬರ್ದ್ ಹಾಕಿದೆ. ಅಲ್ಲಿಂದ ಅಪ್ಪ ಕಾಗ್ದ ಬರ್ದೊ.

“ನಿನ್ನ ಫಿಲೋಮಿನಾ ಕಾಲೇಜಿಗೆ ಸೇರ್ಸಿಕೆ ಅರ್ಜಿ ಕೊಟ್ಟ್ ಬಂದಳೆ, ಅಲ್ಲಿಗೆ ಹೋಗು” ಎಂತ.

ನಂಗೆ ಆಗ ಕಾಲೇಜಿನ ಯಾವ ಸಂಗತಿನೂ ಗೊತ್ತಿತ್ಲೆ. ಸಯನ್ಸ್‌ಂತೇಳ್ರೆ ಎಂತದ್, ಆರ್ಟ್ಸ್‌ಂತೇಳ್ರೆ ಎಂತದ್ ಎಂತ ಗೊತ್ತಿತ್ಲೆ. ನಂಗೆ ಫಿಲೋಮಿನಾ ಕಾಲೇಜಿಗೆ ಸೇರಿಕೆ ಇಷ್ಟ ಇತ್ಲೆ. ಮಹಾರಾಣೀ ಕಾಲೇಜಿಗೆ ಸೇರಿ ಓದೊಕೂಂತ ಆಸೆ ಇತ್ತ್. ನಾ ಐರಿನ್ ವಾಸ್‌ನ ಕರ್ಕಂಡ್ ಮಹಾರಾಣೀಸ್ ಕಾಲೇಜಿಗೆ ಹೋಗಿ ನೋಟೀಸ್ ಬೋರ್ಡ್ ನೋಡ್ದೆ. ಅಲ್ಲಿ ನನ್ನ ಹೆಸ್ರ್ ಇತ್ಲೆ.

“ಇನ್ ಒಂದು ವಾರ ಬುಟ್ಟ್ ಬನ್ನಿ. ಕನ್ನಡಲಿ ಕಲ್ತವರ ಹೆಸ್ರ್‌ನ ಅಕೆರಿಗೆ ತಕಂಬದು” ಎಂತ ಹೇಳ್ದೊ. ನಾ ಪಸ್ಟ್ ಕ್ಲಾಸ್‌ಲಿ ಪಾಸಾದರೂ ಪ್ರಯೋಜನ ಆತ್ಲೆ. ತಿರ್ಗಿ ಹಾಸ್ಟೆಲಿಗೆ ಬಂದೊ. ಒಂದು ವಾರ ಕಳ್ದ ಮೇಲೆ ಬಿ.ಯಸ್. ಪಾರ್ವತಿ ಮತ್ತೆ ಅವರ ಅಕ್ಕ ಕೃತಿಕಾನ ಕರ್ಕಂಡ್ ತಿರ್ಗಿ ಮಹಾರಾಣೀಸ್ ಕಾಲೇಜಿಗೆ ಹೋದೆ. ಆಗಳೂ ನನ್ನ ಹೆಸ್ರ್ ಇತ್ಲೆ. ‘ಹಾಂಗಾದ್ರೆ ನನ್ನ ಸರ್ಟಿಫಿಕೇಟ್ ಕೊಡಿ’– ಎಂತ ನಾ ಹೇಳ್ದೆ. ಇನ್ನೊಂದು ದಿನ ಬಾಕೆ ಹೇಳ್ದೊ. ನನ್ನ ಜೋಸ್ತಿ ಗೂಡೆಗ ಎಲ್ಲಾ.

“ಒರಿಜಿನಲ್ ಸರ್ಟಿಫಿಕೆಟ್ ಯಾಕೆ ಕೊಟ್ಟೆ? ಸೀಟ್ ಸಿಕ್ಕಿದ ಮೇಲೆ ಕೊಡಕಾಗಿತ್ತ್. ಅರ್ಜಿ ಹಾಕಿಕಾಕನ ಅದರ ಮೂಲ ಪ್ರತಿ ಕೊಡಿಕಾಗದ್. ಅದರ ಕೋಪಿ ತೆಗ್ದ್ ಕೊಡೊಕು– ಎಂತ ಹೇಳ್ದೊ. ನಂಗೆ ಇದೆಲ್ಲಾ ಗೊತ್ತಿತ್ಲೆ.

‘ಹೆಂಗಾದರೂ ನಂಗೆ ಫಿಲೋಮಿನಾಸ್‌ಲಿ ಸೀಟ್ ಕೊಟ್ಟವೆ ಗಡ. ಇನ್ನ್ ಅಲ್ಲಿಗೆ ಹೋದು. ಮಹಾರಾಣೀಸ್ ನಮ್ಮ ಹಾಸ್ಟೆಲ್‌ಂದ್ ತುಂಬಾ ದೂರ. ಇಲ್ಲಿರುವೆಲ್ಲಾ ಫಿಲೋಮಿನಾಸ್ ಕಾಲೇಜಿಗೆ ಹೋಗೋವು. ನಂಗೆ ಜತೆ ಸಿಕ್ಕಿದೆ” ಎಂತ ಎಲ್ಲಾ ಯೋಚನೆ ಮಾಡ್ದೆ. ಕಾಲೇಜಿಗೆ ಹೋಗುವ ನಮ್ಮ ಹಾಸ್ಟೆಲ್ ಮಕ್ಕಳೊಟ್ಟಿಗೆ

ಫಿಲೋಮಿನಾಕ್ಕೆ ಹೋದೆ. ಹಾಸ್ಟೆಲಿಲಿ ಎಲ್ಲಾ ಮಕ್ಕ ಕೋಲೇಜಿಗೆ ಹೋಕಾಕನ, ನಾ ಒಬ್ಬನೇ ಹಾಸ್ಟೆಲಲಿ ಇರ್ದುದ್ ನಂಗೆ ಬೇಜಾರದ ಸಂಗತಿ. ಆಗಾಗ ಮಕ್ಕಳೊಟ್ಟಿಗೆ ಕಾಲೇಜಿಗೆ ಹೋಕೆ ಸುರು ಮಾಡ್ದೆ. ಒಂದು ದಿನ ನನ್ನ ಮಾಂವನ ಮಂಜ ನಂಗೆ ಸಿಕ್ಕಿ ಮಾತಾಡ್ಸಿತ್.

"ನಿನ್ನ ಆರ್ಟ್ಸ್ ಭಾಗಕ್ಕೆ ಸೇರ್ಸಿ ಆಗುಟ್ಟು, ನೀ ಯಾವುದಕ್ಕೂ ಹೆದ್ರ್ ಬಡ. ಏನಾದರ್ ಕಷ್ಟ ಇದ್ದರೆ ನನ್ನೊಟ್ಟಿಗೆ ಹೇಳ್. ಮಾಂವ ಹೇಳ್ಯೊಳೊ. ನಿಂಗೆ ಕಷ್ಟ ಆದರೆ ಸಾಯ ಮಾಡೋಕೂಂತ" – ಎಂತ ಹೇಳ್ತ್. ನಂಗೆ ಅಪ್ಪನ ಮೇಲೆ ಸಿಟ್ಟ್ ಬಾತ್. ' ಗುರ್ತ ಪರ್ಚಯ ಇಲ್ಲದ ಊರ್ಲಿ ನನ್ನ ಒಬ್ಬಳ್ನೇ ಬುಟ್ಟ್ ಹೋಗೊಳೇ? ಎಂತ. ಆ ಮೇಲೆ ನಾ ನಿದಾನಲಿ ಯೋಚನೆ ಮಾಡ್ದೆ. ' ಅವಾದ್ರೂ ಏನ್ ಮಾಡ್ದು? ಅವರ್ದೇನ್ ತಪ್ಪುಟ್ಟು? ಅವು ಎಷ್ಟ್ ದಿನ ನನ್ನೊಟ್ಟಿಗೆ ಇರ್ವೊ? ನಾ ಇಲ್ಲಿ ಒಬ್ಬನೇ ಇದ್ದೇ ಇರೊಕೊಲೆ' ಎಂತ ನಂಗೆ ನಾನೇ ಸಮಾಧಾನ ಹೇಳಿಕಂಡೆ. ಗೋಪಾಲಕೃಷ್ಣ,

'ಇಲ್ಲಿ ಮೇರಿಯಮ್ಮ ಹೇಳ್ವ ಆಯಾ ಉಟ್ಟು. ಅದ್ ಲೇಡೀಸ್ ರೂಮ್‌ನ ಮೇಲ್ತನಿಕೆ ಮಾಡಿದೆ. ಏನಾದರ್ ಬೇಕರೆ ಅದರಕ್ಕಲೆ ಹೇಳಿ ಕಳ್ಸ್." ಎಂತ ಹೇಳಿ ಅಂವ ಹೊರ್ಟ್ ಹೋತ್.

ಒಂದು ದಿನ ಮೇರಿಯಮ್ಮ ನನ್ನ ಹುಡ್ಕಿಕಂಡ್ ಬಂದ್,

"ನೀವು ಆಫೀಸು ರೂಮಿಗೆ ಹೋಗಬೇಕಂತೆ ಎಂತ ಹೇಳ್ತ್. ನಂಗೆ ಆಫೀಸ್ ರೂಂ ಎಲ್ಲಿ ಉಟ್ಟುಂತ ಗೊತ್ತಿತ್ಲೆ. ಅದರಕ್ಕಲೆ ಕರ್ಕಂಡ್ ಹೋಕೆ ಹೇಳ್ದೆ. ಅದ್ ಸುತ್ತಿ, ಬಳ್ಸಿ, ಮಾಳಿಗೆ ಮೇಲೆ ಇದ್ದ ಆಫೀಸ್ ರೂಂಗೆ ಕರ್ಕಂಡ್ ಹೋತ್. ಅಲ್ಲಿ ಹೆಡ್ ಕ್ಲಾರ್ಕ್,

"ನಿಮ್ಮ ಸರ್ಟಿಫಿಕೆಟ್ ಇಲ್ಲಿಲ್ಲ. ಟಿ. ಸಿ ಮತ್ತು ಮಾರ್ಕ್ಸ್ ಕಾರ್ಡ್ ತಂದ್ ಕೊಡಿ." ಎಂತ ಹೇಳ್ತ್. ನಾ ತಲೆ ಹಂದಾಡ್ಸಿ ಕೆಳಗೆ ಬಂದೆ. ಅಕೆರಿಗೆ ಉಪಾಯ ಇಲ್ಲದೆ ಮೇರಿಯಮ್ಮನೊಟ್ಟಿಗೆ ಗೋಪಾಲಕೃಷ್ಣನ ಬಾಕೆ ಹೇಳ್ದೆ. ಮೊರ್ದಿನ ಅಂವ ಬಾತ್.

"ನನ್ನ ಸರ್ಟಿಫಿಕೆಟ್ ಎಲ್ಲಾ ಮಹಾರಾಣೀಸ್ ಕೋಲೇಜಿಲಿ ಉಟ್ಟು. ಎರ್ಡ್ □ ಮೂರು ಸರ್ತಿ ಅಲ್ಲಿಗೆ ಹೋದೆ. ಸಿಕ್ಕಿತ್ಲೆ" ಎಂತ ಹೇಳ್ದೆ. ಅದಕ್ಕಂವ,

"ನೀ ಮುಂದೆನೇ ಯಾಕೆ ಹೇಳ್ತಿಲ್ಲೆ? ನಾ ತರ್ಸಿ ಕೊಡ್ತಿದ್ದೆ." ಎಂತ ಹೇಳ್ತ್. ಎರ್ಡ್ ದಿನ ಬುಟ್ಟ್ ಅಂವ ಬಂದ್,

"ನಾಳೆ ಮಹಾರಾಣೀಸ್ ಕಾಲೇಜಿಗೆ ಪೋಯಿ ಅಲ್ಲಿ ಕ್ಲಾರ್ಕ್‌ನ ಹಕ್ಕಲೆ ಮಾತಾಡ್ಯೆಳೆ. ನಾಳೆ ಬಾಕೆ ಹೇಳಿಟ್ಟು." ಎಂತ ಹೇಳ್ತ್.

ನಂಗೆ ಅಂವನೊಟ್ಟಿಗೆ ಒಬ್ಬಂಗೇ ಹೋಕೆ ಇಷ್ಟ ಇತ್ಲೆ. ನಾ ನನ್ನ ಜೋಸ್ತಿ ಗೂಡೆ ಬಿ.ಯಸ್. ಪಾರ್ವತಿನ ಒಟ್ಟಿಗೆ ಕರ್ಕಂಡ್ ಹೋದೆ. ನಾವು ಮೂರು ಜನ

ಮಹಾರಾಣೀಸ್ ಕಾಲೇಜಿಗೆ ಹೋದೊ. ಅಲ್ಲಿ ನಾವ್ಗೆ ಸುಲಭಲಿ ಸರ್ಟಿಫಿಕೆಟ್ ಸಿಕ್ಕಿತ್. ನಂಗೆ ಜೀವ ಬಂದಾಂಗೆ ಆತ್. ಅದರ ತಕಂಡ್ ಪಾರ್ವತಿನೊಟ್ಟಿಗೆ ಆಫೀಸ್ ರೂಂಗೆ ಹೋಗಿ ಕೊಟ್ಟೆ. ಮೂರು ತಿಂಗಳ ಫೀಸ್ ಕಟ್ಟಿ ಬಂದೆ. ಅಪ್ಪ ಹೋಕಾಕನ ನಂಗೆ ಖರ್ಚಿಗೆ ದುಡ್ಡು ಕೊಟ್ಟ್ ಹೋಗಿದ್ದೊ. ಅಂತೂ ನಾ ಮೈಸೂರ್‌ನ ಸೈಂಟ್ ಫಿಲೋಮಿನಾ ಕೋಲೇಜಿಲಿ ಕಲ್ಯವ ಗೂಡೆ ಆದೆ. ನಾ ಮಡಿಕೇರಿ ಕಾಲೇಜಿಲಿ, ಇಲ್ಲರೆ ಮಹಾರಾಣೀಸ್ ಕೋಲೇಜಿಲಿ ಸೇರ್ತಿದ್ದರೆ ನನ್ನ ಜೀವನದ ಗತಿನೇ ಬೇರೆ ಆಗ್ತಿತ್ತ್. ಎಲ್ಲಾ ದೇವ್ರ ಲೀಲೆ. ನಂಗೆ ಪಾಠಕ್ಕೆ ಬೇರೆ ಬೇರೆ ರೂಮುಗಳಿಗೆ ಹೋಕಾಗಿತ್ತ್. ರೂಂ ನಂಬ್ರ ಕೊಡ್ತಿದ್ದೊ. ಸುರುನ ವಾರ ರೂಂ ಹುಡ್ಕುದೇ ಆತ್. ಫಿಲೋಮಿನಾ ಕಾಲೇಜ್ ಒಂದು ಮಹಾಸಾಗರ. ಸಾವಿರಾರ್ ಮಕ್ಕ ಅಲ್ಲಿ ಓದ್ತಿದ್ದೊ. ಕೋಲೇಜ್ ಕ್ಯಾಂಪಸ್‌ಲಿ ಮಾಳಿಗೆನ ಎರ್ಡ್ ದೊಡ್ಡ ದೊಡ್ಡ ಕಟ್ಟೋಣಗ ಇದ್ದೊ. ಒಂದು ಸಯನ್ಸ್ ಬ್ಲಾಕ್. ಇನ್ನೊಂದು ಆರ್ಟ್ಸ್ ಬ್ಲಾಕ್. ನಾ ಆರ್ಟ್ಸ್‌ಲಿ ಹಿಸ್ಟರಿ, ಏಕಾನಾಮಿಕ್ಸ್, ಲಾಜಿಕ್ (ಹೆಚ್.ಇ.ಎಲ್.) ತಕಂಡಿದ್ದೆ. ಕನ್ನಡಕ್ಕೆ ನಾವು ಸಯನ್ಸ್ ಸೆಕ್ಷನಿಗೆ ಹೋಕಾಗಿತ್ತ್. ಅಲ್ಲಿ ಗ್ಯಾಲರಿ ಇತ್ತ್. ನೂರ್, ನೂರ್ರೈವತ್ತ್ ಮಕ್ಕ ಒಂದು ರೂಮ್‌ಲಿ ಸೇರ್ತಿದ್ದೊ. ಸಯನ್ಸ್‌ನವುನೂ, ಆರ್ಟ್ಸ್‌ನವುನೂ ಕನ್ನಡಕ್ಕೆ ಒಟ್ಟಿಗೆ ಸೇರ್ತಿದ್ದೊ. ಲೆಕ್ಚರರ್ ಬಂದ್ ಅವರಷ್ಟಕ್ಕೆ ಲೆಕ್ಚರ್ ಕೊಟ್ಟ್ ಹೋಗ್ತಿದ್ದೊ. ಕನ್ನಡ ಪಾಠಲಿ ಮಕ್ಕ ಗಲಾಟೆ ಮಾಡ್ದು ಜಾಸ್ತಿ. ಹಿಂದೆಂದ ಹೈದಂಗ ರಾಕೆಟ್ ಮಾಡಿ ಹಾರ್‌ಸ್ತಿದ್ದೊ. ಕತ್ತೆ ಅರ್ಚಿದಾಂಗೆ ಅರ್ಚಿತಿದ್ದೊ. ಸಿಳ್ಳೆ ಹಾಕ್‌ತಿದ್ದೊ. ಹಂಞ ಮಕ್ಕ ಪಾಠ ಕೇಳ್ತಿದ್ದೊ. ಹಂಞ ಮಕ್ಕ ಅರ್ಧಲಿ ಎದ್ದ್ ಹೋಗ್ತಿದ್ದೊ. ಅಲ್ಲಿ ರೀತಿ, ನೀತಿಗ ನಂಗೆ ಸುರುಲಿ ವಿಚಿತ್ರ ಆಗಿ ಕಾಂಬತಿತ್ತ್. ಹೀಂಗೂನೂ ಕ್ಲಾಸ್ ನಡ್ದದೆನೋಂತ? ಆ ಮೇಲೆ ಅಭ್ಯಾಸ ಆತ್. ಒಂದೊಂದು ಪಾಠದ ಸಮಯ ಒಂದು ಗಂಟೆ ಇರ್ತಿತ್ತ್. ಪ್ರತಿ ಪಿರೆಡಿಗೆ ಸೈರನ್ ಕೂಗ್‌ತಿತ್ತ್. ಬೊಳ್ಪುಗೆ ಹತ್ತುವರೆ ಗಂಟೆಂದ ಮಧ್ಯಾಹ್ನ ಒಂದೂವರೆ ಗಂಟೆ ಮುಟ್ಟ, ಮೂರು ಪಿರೆಡ್ ಪಾಠ ಇರ್ತಿತ್ತ್. ಆ ಮೇಲೆ ಒಂದು ಗಂಟೆ ವಿಶ್ರಾಂತಿ. ಮಧ್ಯಾಹ್ನದ ಮೇಲೆ 21/2 ಗಂಟೆಂದ 41/2ಗಂಟೆ ಮುಟ್ಟ ಎರ್ಡ್ ಪಿರೆಡ್ ಪಾಠ ಮಾಡ್ತಿದ್ದೊ. ಪ್ರತಿ ಪಿರೆಡಿಗೂ ಕ್ಲಾಸ್‌ಲಿ ಹಾಜಿರ್ ಕರ್‍ಯತಿದ್ದೊ. ಹಾಜಿರ್ ಕರ್‍ಯಕಾಕನ ಹೆಸ್ರ್ ಕರ್‍ಯತಿತ್ಲೆ. ಎಲ್ಲೋವ್ಕು ಒಂದೊಂದು ನಂಬ್ರ ಕೊಡ್ತಿದ್ದೊ. ಆ ನಂಬ್ರ ಹೇಳ್ದ ಕೂಡ್ಲೆ ಎದ್ದ್ ನಿಂತ್, 'ಏಸ್ ಸರ್' ಎಂತ ಹೇಳಕಾಗಿತ್ತ್. ನನ್ನ ನಂಬ್ರ ಹನ್ನೊಂದು.

ನಾವ್ಗೆ ಗೋಪಾಲಕೃಷ್ಣ ಅಡಿಗರ್ ಇಂಗ್ಲಿಷ್ ಪಾಠಕ್ಕೆ ಬಾತಿದ್ದೊ. ಅವು ಅಷ್ಟೊಂದು ದೊಡ್ಡ ಸಾಹಿತಿ ಎಂತ ಆಗ ನಂಗೆ ಗೊತ್ತಿತ್ಲೆ. ಅವು ನಾವ್ಗೆ ದಿನಾ ಬೊಳ್ಪುಗೆ ಬಾದಾಮಿ ಮರದ ಹಕ್ಕಲೆ ದಾರಿಲಿ ಸಿಕ್ಕ್‌ತಿದ್ದೊ. ನಾವು ಅವ್ಕೆ ನಮಸ್ಕಾರ ಮಾಡಿಕನ, ಅವು ನೆಗಾಡಿಕಂಡ್ ತಲೆ ಹಂದಾಡ್ಸಿ ಹೋಗ್ತಿದ್ದೊ. ಅವರ ಪಾಠಲಿ ಯಾರೂ ಗದ್ದಳ ಮಾಡ್ತಿತ್ಲೆ. ಅಷ್ಟ್ ಲಾಯ್ಕ್‌ಲಿ ಪಾಠ ಮಾಡ್ತಿದ್ದೊ. 'ರಾಯಲ್ ಸಿಂಗ್' ಎಂತ ಹೇಳ್ವ ಪ್ರೊಫೆಸರ್ ನಾವ್ಗೆ ಹಿಸ್ಟರಿ (ಚರಿತ್ರೆ) ಪಾಠಕ್ಕೆ ಬಾತಿದ್ದೊ. ಬಾಳ

ಲಾಯ್ಕ್‌ಲಿ ಪಾಠ ಮಾಡ್ತಿದ್ದೊ. ಪ್ರತಿ ಆದಿತ್ಯವಾರ ದಿನ ಸ್ಪೆಶಲ್ ಕ್ಲಾಸ್ ಮಾಡ್ತಿದ್ದೊ. ನಾ ಒಂದೆರ್ಡ್ ವಾರ ಹೋದೆ. ಆದರೆ ಹಾಸ್ಟೆಲ್‌ಲಿ ಬುಡ್ತಿತ್ಲೆ. ಮತ್ತೆ ಹೋದರ ನಿಲ್ಸಿದೆ. ಫಸ್ಟ್ ಟರ್ಮ್ ಪರೀಕ್ಷೆಲಿ ಹಿಸ್ಟರಿಲಿ ನಾ ಕ್ಲಾಸಿಗೆ ಸೆಕೆಂಡ್ ಬಂದೆ. ಪ್ರಥಮ ಸ್ಥಾನ ' ಜರೀನಾ' ಎಂತ ಹೆಸ್ರ್‌ನ ಆಂಗ್ಲೋ ಇಂಡಿಯನ್ ಗೂಡೆ ಪಡ್ತ್. ಕನ್ನಡ ಮೀಡಿಯಂದ ಹೋದ ಕಾರ್‍ಣ ನಂಗೆ ಸುರು ಸುರುಗೆ ತುಂಬಾ ಕಷ್ಟ ಆತ್. ರಾಯಲ್ ಸಿಂಗ್ ನೋಟ್ಸ್ ಕೊಡ್ತಿದ್ದೊ. ನಾ ಅದರನೇ ಬಾಯಿ ಪಾಠ ಮಾಡಿ ಬರ್‍ಯತಿದ್ದೆ. ಕನ್ನಡಕ್ಕೆ ಕೃಷ್ಣಪ್ಪ ಎಂಬ ಲೆಕ್ಚರ್ ಬಾತಿದ್ದೊ. ನಂಗೆ ಕೊಳಂಬೆಯವರ ಪಾಠ ಕೇಳಿ, ಕೇಳಿ ಅಲ್ಲಿನ ಕನ್ನಡ ಪಾಠ ಚಪ್ಪೆಂತ ಕಾಂಬತಿತ್ತ್. ಅದಲ್ಲದೆ ಸಯನ್ಸ್‌ನ ಮತ್ತೆ ಆರ್ಟ್ಸ್‌ನ ಎಲ್ಲಾ ಮಕ್ಕ ಒಟ್ಟಿಗೆ ಕನ್ನಡ ಪಾಠಕ್ಕೆ ಸೇರ್‍ತಿದ್ದ ಕಾರ್‍ಣ, ದಿನಾ ಗಲಾಟೆ ಬೊಬ್ಬೆ. ಲೆಕ್ಚರರಿಗೆ ಮಕ್ಕ ಹಂಞನೂ ಗೌರವ ಕೊಡ್ತಿಲ್ಲೆ. ಮಕ್ಕಳಿಗೆ ಕನ್ನಡ ಪಾಠಂತೇಳ್ರೆ, ಕನ್ನಡ ಕಲ್ಸುವ ಗುರುಗಾಂತೇಳ್ರೆ ತುಂಬಾ ತಾತ್ಸಾರ. ನಂಗೆನೋ ಕನ್ನಡಾಂತೇಳ್ರೆ ಪ್ರಾಣ. ನಾ ತುಂಬಾ ಬೇಜಾರ ಮಾಡ್ತಿದ್ದೆ.

ಫಾದರ್ 'ಓಡಿಯೊ' ಎಂಬೊವು ಆಗ ಪ್ರಿನ್ಸ್‌ಪಾಲ್ ಆಗಿದ್ದೊ. ಅವು ತುಂಬಾ ಪ್ರಾಯಸ್ಥರ್. ನಾವ್ಗೆ ಲಾಜಿಕ್ ಪಾಠಕ್ಕೆ ಬಾತಿದ್ದೊ. ಅವರ ಇಂಗ್ಲಿಷ್ ಉಚ್ಚಾರ ನಾವ್ಗೆ ಸುರು ಸುರುಗೆ ಅರ್ಥ ಆಗ್ತಿತ್ಲೆ. ಕಡೆಗೆ ಅಭ್ಯಾಸ ಆತ್. ಫಾದರ್ ' ಎಂಟೋನಿಯೋ' ಎಂಬೊವು ನಾವ್ಗೆ ಎಕನಾಮಿಕ್ಸ್‌ಗೆ ಬಾತಿದ್ದೊ. ಅವು ಬಾಳ ಲಾಯ್ಕ್‌ಲಿ ಅರ್ಥಶಾಸ್ತ್ರ ವಿವರ್‍ಸ್‌ತಿದ್ದೊ. ಅವರ ಪಾಠಲಿ ಹೆಚ್ಚಿನೊವೆಲ್ಲಾ ಪಾಸಾಗ್ತಿದ್ದೊ. ಇಂಗ್ಲಿಷ್ ಸೆಕೆಂಡ್ ಪಾಠಕ್ಕೆ ರಾಮದಾಸ ಪೈ ಎಂಬ ಲೆಕ್ಚರರ್ ಬಾತಿದ್ದೊ. ಅವರ ಪಾಠಲಿ ಎಲ್ಲೋವು ಸದ್ದ್ ಮಾಡದೆ ಕುದ್ರ್‌ತಿದ್ದೊ.

ಸಯನ್ಸ್ ಬ್ಲಾಕ್‌ಲಿ ಪ್ರೊಫೆಸರ್ ನಾರಾಯಣ ರಾವ್ ಎಂಬ ದಕ್ಷಿಣ ಕನ್ನಡ ಜಿಲ್ಲೆನ ಒಬ್ಬ ಪ್ರೊಫೆಸರ್ ಇದ್ದೊ. ಅವು ಮೈಸೂರ್‌ನ ಒಂಟಿಕೊಪ್ಪಲ್‌ಲಿ ಸೊಂತ ಮನೆ ಮಾಡಿಕಂಡಿದ್ದೊ. ದಕ್ಷಿಣ ಕನ್ನಡದ ವಿದ್ಯಾರ್ಥಿಗಳಿಗೆ ಅವು ತುಂಬಾ ಸಾಯ ಮಾಡ್ತಿದ್ದೊ. ಇಂದಿರಾ ಜೈನ್ ಎಂಬ ಗೂಡೆನ ಅವೇ ನಮ್ಮ ಹಾಸ್ಟೆಲಿಗೆ ತಂದ್ ಸೇರ್‍ಸಿದೊವು. ಒಮ್ಮೆ ನಾವು ದಕ್ಷಿಣ ಕನ್ನಡ ವಿದ್ಯಾರ್ಥಿ ಗೂಡೆಗ ಎಲ್ಲಾ ಹಾಸ್ಟೆಲ್‌ಂದ ಅವರ ಮನೆಗೆ ಹೋಗಿ ಬಂದೊ. ಅವರ ಹೆಣ್ಣ್ ಬಂದೊವ್ರ ಉಪಚಾರ ಮಾಡ್ದರ್‍ಲಿ ಬಾಳ ಎತ್ತಿದ ಕೈ. ನಾವ್ಗೆಲ್ಲಾ ಹೊಟ್ಟೆ ತುಂಬಾ ತಿಂಡಿ ತಿನ್ಸ್ ಕೊಟ್ಟ್, ಬಾಯ್ತುಂಬಾ ಮಾತಾಡಿ ಕಳ್ಸಿದೊ. ನಾ ಮದ್ವೆ ಆದ ಮೇಲೆ ಸುಳ್ಯದ ನಮ್ಮ ಮನೆ 'ನಿಸರ್ಗ' ಕ್ಕೆ ಎರ್ಡ್ ಮೂರು ಸರ್ತಿ ಅವು ಬಂದ್ ಮಾತಾಡ್ಸಿ ಹೋಗೊಳೊ. ನನ್ನ ಗಂಡನೂ ಅವರ ಶಿಷ್ಯ. ಆದ ಕಾರಣ ನಮ್ಮಿಬ್ಬರೊಟ್ಟಿಗೆ ಅವ್ಕೆ ತುಂಬಾ ಪ್ರೀತಿ.

ನಾವ್ಗೆ ಕೋಲೇಜ್ ಬೊಳ್ಪುಗೆ ಹತ್ತೂವರೆಗೆ ಸುರು. ನಾವಿರುವ ಎನ್.ಆರ್. ಮೊಹಲ್ಲಾಂತ ಕೋಲೇಜಿಗೆ ಒಂದೂವರೆ ಮೈಲ್ ದೂರ. ನಾವು ಒಂಭತ್ತ್ ಗಂಟೆಗೆ ಹಾಸ್ಟೆಲ್ ಬುಡ್ತಿದ್ದೊ. ಬೊಳ್ಪುಗೆ ಎದ್ದ ಕೂಡ್ಲೇ ನಾವ್ಗೆ ಏಳ್ ಗಂಟೆಗೆ ಬೆಡ್ ಕಾಫಿ,

ರೂಮಿಗೆ ತಂದ್ ಕೊಡ್ತಿದ್ದೊ. ಎಲ್ಲೋವು ಮೋರೆ ತೊಳ್ಯದೆ ಕುಡ್ಯತಿದ್ದೊ. ನಂಗೆ ಮೋರೆ ತೊಳ್ಯದೆ, ಹಲ್ಲುಜ್ಜದೆ ಕುಡಿವ ಅಭ್ಯಾಸ ಇತ್ಲೆ. ನಾ ಬೇಗ ಎದ್ದ್ ಹಲ್ಲುಜ್ಜಿ ಮೋರೆ ತೊಳ್ದ್ ಕಾಫಿ ಕುಡ್ಯತಿದ್ದೆ. ಎಂಟ್ ಗಂಟೆಗೆ ತಿಂಡಿ ಆಗ್ತಿತ್ತ್. ಕಾಲೇಜ್ ಇದ್ದ ದಿನಲಿ, ಕೋಲೇಜಿಗೆ ಹೋಕೆ ಮುಂದೆ ಟೀ ಬಿಸ್ಕೆಟ್ ಒಂಭತ್ತ್ ಗಂಟೆಗೆ ಕೊಡ್ತಿದ್ದೊ. ರಜೆ ದಿನಲಿ ಹತ್ತ್ ಗಂಟೆಗೆ ಟೀ, ಬಿಸ್ಕೆಟ್ ಕೊಡ್ತಿದ್ದೊ. ಮಧ್ಯಾಹ್ನ ಊಟ ಕಾಲೇಜಿಗೆ ಕೆಲ್ಸದೊವು ದೊಡ್ಡ ದೊಡ್ಡ ಬುಟ್ಟಿಲಿ ಹೊತ್ತ್‌ಕಂಡ್ ತಾತಿದ್ದೊ. 'ಮರಿ' ಎಂದ್ ಹೇಳ್ವ ಒಬ್ಬ ಗಂಡಾಳ್ ಕೆಲ್ಸಕಿತ್ತ್. ಅಂವ ದಿನಾ ಬೊಳ್ಪುಗೆ ರೂಂ ಗುಡ್ಸಿಕೆ ಬಾತಿತ್ತ್. ನಾವು ತಿಂಗೊಳಿಗೊಮ್ಮೆ ಅಂವಂಗೆ ಎಂಟೆಂಟಾಣೆ ಹಾಂಗೆ ದುಡ್ಡು ಕೊಡ್ತಿದ್ದೊ. ನಾವ್ಗೆ ಕಾಲೇಜಿಲಿ ಪ್ರತ್ಯೇಕ ಲೇಡೀಸ್ ರೂಂ ಇತ್ತ್. ಎರ್ಡ್ ದೊಡ್ಡ ದೊಡ್ಡ ಹಾಲ್, ಎರ್ಡ್ ದೊಡ್ಡ ಟಾಯ್ಲೆಟ್, ಇದ್ದೊ. ದೊಡ್ಡ ದೊಡ್ಡ ಕನ್ನಡಿಗಳ ಹಾಲ್‌ಲಿ ಮತ್ತೆ ಟಾಯ್ಲೆಟ್‌ಲಿ ತೂಗಿ ಹಾಕಿದ್ದೊ. ಊಟ ಮಾಡಿಕೆ ಡೈನಿಂಗ್ ಟೇಬಲ್ ಕುರ್ಚಿಗ ಇದ್ದೊ. ಕುದ್ರಿಕೆ ಹಾಲ್‌ಲಿ ದೊಡ್ಡ ಸೈಜಿನ ಸೋಫಾಗ, ಚೆಂದದ ಬೆತ್ತದ ಮೆತ್ತೆ ಲೋಡು ಹಾಕಿದ ಕುರ್ಚಿಗ ಇದ್ದೊ.

ಸಾವಿರದ ಒಂಭೈನೂರ ಐವತ್ತೆಂಟ್ ಐವತ್ತೊಂಭತ್ತರ್ಲಿ ನಾ ಪಿ.ಯು.ಸಿ ಕಲ್ತೆ. ಆಗ ಹಾಸ್ಟೆಲ್ ಪೀಸ್ ಅರುವತ್ತ ಮೂರುವರೆ ರೂಪ್ಯಾ. ಮಹಾರಾಣೀಸ್ ಕೋಲೇಜಿಲಿ ಇಪ್ಪತ್ತೈದ್ ▯ ಮೂವತ್ತ್ ರೂಪ್ಯಾ ಒಳಗೆ ಆಗ್ತಿತ್ತ್. ಗಡ. ಆದರೆ ನಮ್ಮದ್ ಖಾಸಗಿ ಹಾಸ್ಟೆಲ್ ಶ್ರೀಮಂತರ ಮಕ್ಕಳಿಗಾಗಿ ಇದರ ತೆಗ್ದಿದ್ದೊ. ಮಿಾಯಕ್ಕೆ ಬಿಸಿನೀರ್ ಕೊಡ್ತಿದ್ದೊ. ನಾವು ಉಂಡ ಬಟ್ಲ್ ತೊಳ್ಯಕೆ ಬೇರೆ ಜನ ಇದ್ದೊ. ಹಾಸ್ಟೆಲ್‌ಲಿ ಬಟ್ಟೆ ಒಗ್ಯಕೆ ಬುಡ್ತಿತ್ಲೆ. ವಾರಕ್ಕೊಮ್ಮೆ ಡೋಭಿ ಬಾತಿತ್ತ್. ಎಲ್ಲೋವು ಅಂವಂಗೆ ಬಟ್ಟೆ ಒಗ್ಯಕೆ ಕೊಡ್ತಿದ್ದೊ. ಕ್ರಿಶ್ಚಿಯನ್ ಹಾಸ್ಟೆಲಿಲಿ ದನದ ಮಾಸ ಕೊಟ್ಟವೇಂತ ಎಲ್ಲೋವು ಹೇಳ್ತಿದ್ದೊ. ಆಗ ನಾ ಮಾಸ ತಿಂಬತಿದ್ದರೂ ಸಸ್ಯಹಾರಕ್ಕೆ ಸೇರ್ದೆ. ಸಸ್ಯಹಾರಕ್ಕೆ ನಾ ಮತ್ತೆ ಭಾರತಿ ಶೆಣೈ ಇಬ್ಬೊರೇ ಇದ್ದೊ. ಆ ಮೇಲೆ ಇಂದಿರಾ ಜೈನ್ ಎಂತ ಹೇಳ್ವ ಗೂಡೆ ಬಂದ್ ಸೇರ್ತ್. ಹಾಸ್ಟೆಲ್‌ಲಿ ಕಡ್ಡಾಯವಾಗಿ ಎಲ್ಲರ್‍ನೂ ಬಹುವಚನಲಿ ಕರ್‍ಯಕಾಗಿತ್ತ್.

ಒಮ್ಮೆ ಊಟ ಬಡ್ಸಿಕನ ಇಂದಿರಾ ಜೈನ್ ಇಕ್ಕುವ ಹೆಂಗ್ಸುಗೆ ಜೋರ್ ಮಾಡ್ತ್. ಮಾಸದ ಸಾರಿಗೆ ಹಾಕಿದ ಸೌಟ್ ನಾವ್ಗೆ ಇಕ್ಕಿತ್‌ಂತ ಬೊಯ್ತ್. ಸಿಸ್ಟರ್ ಎಲ್ಲಾ ಬೊಬ್ಬೆ ಕೇಳಿ ಬಂದೊ. ಅವು ಇಂದಿರಾ ಜೈನ್‌ಗೆ ಸಮಧಾನ ಪಡ್ಸಿದೊ. ಇನ್ನ್ ಮುಂದೆ ಹೀಂಗಾಗದಾಂಗೆ ನೋಡಿಕಂಡವೇಂತ ಹೇಳ್ದೊ. ಈ ಪ್ರಕರಣದ ಮೇಲೆ ನಂಗ್ಯಾಕೋ ಅವರೊಟ್ಟಿಗೆ ಕುದ್ದ್ ಉಂಬಕೆ ಮನ್ಸಾತ್ಲೆ. ಆದರೆ ಉಪಾಯ ಇಲ್ಲದೆ ತಿಂದ್ ಎದ್ದ್ ಬಾತಿದ್ದೆ. ಸಿಸ್ಟರ್ ಫಿಲೋಮಿನಾ ಒಮ್ಮೆ ನನ್ನ ಕರ್ದ್,

"ನೀ ಮಾಸ ತಿಂಬೊದಿಲ್ಲೆನೋಂ'ತ ಕೇಳ್ದೊ. ನಾ ಅವರಲ್ಲಿ,

"ನಾ ಮಾಸ ತಿಂದನೆ. ಆದರೆ ಇಲ್ಲಿ ದನದ ಮಾಸ ಕೊಟ್ಟವೇಂತ, ಸಸ್ಯಹಾರಕ್ಕೆ ಸೇರ್ದೆ" ಎಂತ ಹೇಳ್ದೆ.

"ನೀ ಮಾಸ ತಿಂಬಡ. ಮೊಟ್ಟೆ ತಿನ್ನ್" ಎಂತ ಅವು ಹೇಳ್ದೊ. ನಾ ಅದಕ್ಕೆ ಒಪ್ಪಿದೆ. ನಂಗೂ ಇವರೊಟ್ಟಿಗೆ ಕುದ್ದ್ ಉಂಬೊದರ್ಂದ ತೊಪ್ಪಿರೆ ಸಾಕ್ಂತ ಇತ್ತ್. ಆ ಮೇಲೆ ನಾ ಮಾಸ ತಿಂಬವರೊಟ್ಟಿಗೆ ದೊಡ್ಡ ಡೈನಿಂಗ್ ಹಾಲ್‌ಗೆ ಹೋದೆ. ನಾವ್ಗೆ ವಾರಕ್ಕೆ ಎರ್ಡ್ ಸಲ ಮಾಸ ಕೊಡ್ತಿದ್ದೊ. ಮಾಸ ತಿನದವ್ಕೆ ಮೊಟ್ಟೆ ಕೊಡ್ತಿದ್ದೊ. ಮೀನ್ ಮಾಡ್ತಿತ್ಲೆ. ನಾ ಮೊಟ್ಟೆನೇ ತಿಂಬತಿದ್ದೆ. ವಾರಕ್ಕೆ ಎರ್ಡ್ ಸಲ ಬೊಳ್ಪುಗೆ ಚಪಾತಿ, ಗಸಿ, ಉಳ್ದ ದಿನ ಇಡ್ಲಿ, ದೋಸೆ, ಉಪ್ಪಿಟ್ಟ್ ಕೊಡ್ತಿದ್ದೊ. ಸಣ್ಣದಿರಿಕನ ನಾ ಮಾಸ ತಿಂಬತಿತ್ಲೆ. ತುಂಬಾ ಸಪೂರ ಕೋಲ್‌ನ ಹಾಂಗಿದ್ದೆ. ಒಂದು ದಿನ ಅವ್ವ ನಂಗೆ ಬೊಯ್ದ್, ಮೀನ್ ಸಾರ್ ತಿನ್ಸಿದೊ. ಅದರ್ಂದ ಮೇಲೆ ನಾ ಹಂಞ ಹಂಞ ತಿಂಬಕೆ ಸುರು ಮಾಡ್ದೆ.

ನಾವು ಮನೆಲಿ ಉಮಿಕರಿಲಿ ಹಲ್ಲುಜ್ಜುತಿದ್ದೊ. ಭತ್ತದ ಹೊಟ್ಟು ಕರಿಮಾಡಿ, ಅದರ ಗಾಳ್ಸಿ, ಅದಕ್ಕೆ ಉಪ್ಪು ಸೇರ್ಸಿ ಗುದ್ದಿ, ಡೊಬ್ಬಿಲಿ ತುಂಬಿಸಿ ಇಸ್ತಿದ್ದೊ. ನಾ ಹಾಸ್ಟೆಲಿಗೆ ಬಾಕನ ಅದರ್ನೆ ಒಂದು ಸಣ್ಣ ಡೊಬ್ಬಿಲಿ ತುಂಬಿಸಿಕಂಡಿದ್ದೆ. ಅಣ್ಣ ಅದರ ನೋಡಿ ನಂಗೆ ಅಂಗ್ಡಿಂದ ಹಲ್ಲುಜ್ಜುವ ಹೊಡಿನ ಪೊಟ್ಟಣ ತಂದ್ ಕೊಟ್ಟ್,

"ಬೇಡ ಮೋಳು, ಅಲ್ಲಿ ಉಮಿಕರಿಲಿ ಉಜ್ಜು ಬಡ. ಹಳ್ಳಿಂದ ಬಂದವಾಂತ ನಿಂಗೆ ಡೋಂಗಿ ಮಾಡ್ವೊ." ಎಂತ ಹೇಳ್ತ್.

ನಮ್ಮ ಮನೆಲಿ ಆಗ ಯಾರೂ ಬ್ರೆಶ್‌ಲಿ ಹಲ್ಲುಜ್ಜಿತಿತ್ಲೆ. ಇಲ್ಲಿ ಹಾಸ್ಟೆಲಿಲಿ ನಾ ಬೊಳ್ಪುಗೆ ಬೆರ್ಳ್‌ಲಿ ಹಲ್ಲುಡಿ ತೆಗ್ದ್ ಉಜ್ಜಿಕಾಕನ ಉಳ್ದ ಗೂಡೆಗ ನನ್ನನೇ ನೋಡ್ತಿದ್ದೊ. ಅವೆಲ್ಲಾ ಬಣ್ಣ ಬಣ್ಣದ ಬ್ರೆಶ್‌ಗಳ ಕೈಲಿ ಹಿಡ್ದ್, ಟ್ಯೂಬ್‌ಂದ ಪೇಸ್ಟ್ ತೆಗ್ದ್ ಅದರ ಮೇಲೆ ಹಾಕಂಡ್ ಹಲ್ಲುಜ್ಜಿಕಾಕನ ಬಾಯಿಲಿ ಪೊಟುವ ನೊರೆ ಬಾತಿತ್ತ್. ನಂಗೆ ಅದರ ನೋಡಿ ನಾಚಿಕೆ ಆತ್. ಅದೇ ಐತ್ವಾರ ನಾ ಐರಿನ್ ವಾಸ್‌ನ ಕರ್ಕಂಡ್ ದೇವರಾಜ ಮಾರ್ಕೆಟಿಗೆ ಹೋಗಿ, ಅಲ್ಲಿಂದ ಬ್ರೆಷ್, ಪೇಸ್ಟ್ ಮತ್ತೆ ಬಾತ್‌ರೂಂ ಚಪ್ಪಲ್ ತಕಂಡೆ. ಹಾಸ್ಟೆಲ್ ಒಳಗೆ ಯಾರೂ ಬರಿಗಾಲಿಲಿ ನಡ್ಯತಿತ್ಲೆ. ಎಲ್ಲೋವೂ ಬಾತ್‌ರೂಂ ಚಪ್ಪಲ್ ಹಾಕ್ತಿದ್ದೊ. ಹಾಸ್ಟೆಲ್‌ಲಿ ಎಲ್ಲೋವೂ ಸೀರೆ ಉಟ್ಟ್, ಇಲ್ಲರೆ ಚೂಡಿದಾರ ಹಾಕಿ, ಅದರ ಮೇಲೆ ಹೌಸ್ ಕೋಟ್ ಹಾಕ್‌ತಿದ್ದೊ. ಯಾರಾದಾರ್ ನಮ್ಮ ನೋಡಿಕೆ ಬಂದರೆ ವಾರ್ಡನ್ ನಮ್ಮ ಕರ್ಯೊತಿದ್ದೊ. ಆಗ ಎಲ್ಲೋವೂ ಹೌಸ್ ಕೋಟ್ ಕಳ್ಚಿ ಇಸಿ, ಮಡಿ ಡ್ರೆಸ್‌ಲಿ ಅವರ ಮುಂದೆ ಹೋಗಿ ನಿಲ್ತಿದ್ದೊ. ಇರ್ಳ್ ಮೊಲ್ಗಿಕಾಕನ, ವಾರ್ಡನ್ ಎಲ್ಲರ ರೂಮ್ ಬಾಗಿಲಿಗೆ ಬಂದ್, ನೈಟ್ ಡ್ರೆಸ್ ಹಾಕಿ ಮೊಲ್ಗಿಕೆ ಹೇಳ್ತಿದ್ದೊ. ಬಟ್ಟೆಗಳ ಬಿಗಿಯಾಗಿ ಕಟ್ಟಿ ಮೊಲ್ಗಿಕೆ ಬೊತ್ತ್ಂತ ಹೇಳ್ತಿದ್ದೊ. ಬೊಳ್ಪುಗೆ ಬಂದ್ ಎಲ್ಲರ ಮಂಚ ನೋಡ್ತಿದ್ದೊ. ಹಾಸಿಗೆ ಮೇಲೆ ಸುಕ್ಕು ಇಲ್ಲದಾಂಗೆ ಬೆಡ್ ಶೀಟ್‌ನ ಹಾಕಿ ಅದರ ಮೇಲೆ ಬೆಡ್ ಸ್ಪ್ರೆಡ್ ಹಾಕಿ ಇಸಿಕೆ ಹೇಳ್ತಿದ್ದೊ. ಹಾಸಿಗೆ ಹರ್ಂಡಿಕಂಡಿದ್ದರೆ ಫೈನ್ ಹಾಕ್ತಿದ್ದೊ.

ನನ್ನ ಸಣ್ಣಕ್ಕ ದಮಯಂತಿ ಆಗ ಮೊದ್ವೆ ಆಗಿ ಸೋಮವಾರ ಪೇಟೆಲಿ ಇತ್ತ್.

ಭಾವ ಆಗ ಅಲ್ಲಿ ಕೃಷಿ ಇಲಾಖೆಲಿ ಕೆಲ್ಸಲಿದ್ದೊ. ಒಮ್ಮೆ ನಾವ್ಗೆ ಎರ್ಡ್ ಮೂರು ದಿನ ರಜೆ ಸಿಕ್ಕಿತ್. ಅಕ್ಕಂಗೆ ಈ ವಿಷಯ ಮುಂದೆನೇ ಕಾಗ್ದ ಬರ್ದ್ ತಿಳಿಸಿದ್ದೆ. ಅದ್ ವಾರ್ಡನ್‌ಗೆ ಕಾಗ್ದ ಬರ್ದ್ ನನ್ನ ಕಳ್ಸಿಕೊಡಿಕೆ ಕೇಳ್ತ್. ವಾರ್ಡನ್ ಪಾರ್ವತಿ ಮತ್ತೆ ಲೀಲಾವತಿನ ಜತೆಮಾಡಿ, ನನ್ನ ಬಸ್‌ಸ್ಟೇಂಡಿಗೆ ಕಳ್ಸಿದೊ. ಅವು ನನ್ನ ಬೊಳ್ಪುಗೆ ಒಂಭತ್ತ್ ಗಂಟೆಗೆ ಮೈಸೂರ್‌ಂದ ಸೋಮವಾರ ಪೇಟೆಗೆ ಹೋವ 'ಚಾಮುಂಡೇಶ್ವರಿ' ಬಸ್ಸ್‌ಲಿ ಹತ್ತಿಸಿ ಬುಟ್ಟೊ. ಬಸ್ ಕುಶಾಲನಗರಕ್ಕೆ ಬಂದ್, ಕೂಡಿಗೆ ಮಾರ್ಗಲಿ ತಿರ್ಗಿ, ಸೋಮವಾರ ಪೇಟೆಗೆ ಹೋತ್. ಬಸ್‌ಸ್ಟೇಂಡ್‌ಲಿ ಭಾವನ ಆಫೀಸ್ ಪೇದೆ, 'ರಾಮದೇವ' ಕಾದ್ ನಿತ್ತಿತ್ತ್. ಅಂವ ನನ್ನ ಲಗೇಜ್ ತಕಂಡತ್. ಸೋಮವಾರ ಪೇಟೆ ಸಂತೆ ಮಾಳಂದ ಕೆಳಗೆ ಇರುವ ರಸ್ತೆಲಿ ಹೋದರೆ, ಅಕ್ಕನ ಮನೆ ಸಿಗ್ತಿತ್ತ್. ಅಕ್ಕ ಬಾಗಿಲಿಲಿ ನಿಂತ್ ನಮ್ಮನೇ ಕಾಯ್ತಿತ್ತ್. ನನ್ನ ನೋಡಿ ಕುಸಿಂದ ತೊಬ್ಬಿಕಂಡತ್. ನಾ ಮೈಸೂರ್‌ಂದ ಬಾಕನ ಒಂದು ಬುಟ್ಟಿ ತುಂಬಾ ಕಸಿ ಮಾಯ್ನ ಹಣ್ಣ್, ದ್ರಾಕ್ಷೆ ತಂದಿದ್ದೆ. ಅಕ್ಕಂಗೆ ಮೈಸೂರ್ ಮಲ್ಲಿಗೆ ಒಂದ್ ಮಾರ್, ಮೈಸೂರು ಚಿಗುರು ವೀಳ್ಯದೆಲೆ, ಬಣ್ಣ ಕಟ್ಟಿದ ಅಡ್ಕೆನೂ ತಂದಿದ್ದೆ. ನಾನೂ ನನ್ನ ಜೋಸ್ತಿ ಗೂಡೆಗಳೂ ಟಾಂಗಾ ಮಾಡಿ ಬಸ್‌ಸ್ಟೇಂಡಿಗೆ ಹೋದ ಕಾರಣ, ನಾವ್ಗೆ ಇದೆಲ್ಲಾ ತೆಗ್ಯಕೆ ಕಷ್ಟ ಆತ್ಲೆ. ಆಗ ಹತ್ತ್ ರೂಪಾಯಿಗೆ ಒಂದು ಬುಟ್ಟಿ ತುಂಬಾ ಹಣ್ಣ್ ಸಿಗ್ತಿತ್ತ್. ಒಂದು ಮಾರ್ ಮೈಸೂರು ಮಲ್ಲಿಗೆ ಎಂಟಾಣೆಗೆ ಸಿಗ್ತಿತ್ತ್. ಇದರೆಲ್ಲಾ ನೋಡಿ ಅಕ್ಕ ನಂಗೆ ಬೊಯ್ತ್.

" ಓದಿಕೆ ಹೋದ ಗೂಡೆ, ಇದಕ್ಕೆಲ್ಲಾ ಖರ್ಚ್ ಮಾಡ್ರೆ, ನಿನ್ನ ಸೊಂತ ಖರ್ಚಿಗೆ ಏನ್ ಮಾಡ್ಯ?" ಎಂತ ಕೇಳ್ತ್. ನಾ ಮಾತಾಡ್ತಿಲ್ಲೆ. ನಂಗೆ ಗೊತಿತ್ತ್. ಬಾಕಾಕನ ಅಕ್ಕ ನನ್ನ ಬರಿ ಕೈಲಿ ಕಳ್ಸುದುಲ್ಲೇಂತ. ಬಾಕಾಕನ ನನ್ನ ಕೈಲಿ ಐವತ್ತ್ ರೂಪ್ಯಾ ಇಸಿ ಕಳ್ಸಿತ್. ಆಗ ಅಕ್ಕಂಗೆ ಮನು ಒಬ್ಬನೇ ಮಂಙ ಇತ್ತ್. ನ ಅಂವನ ಕೊಂಡಾಟ ಮಾಡ್ದೇ ಮಾಡ್ದ್. ಆಗ ಅಕ್ಕ ಹೇಳ್ತಿತ್ತ್.

" ನೀ ಅಂವನ ಬೊಮ್ಮಣ ಮಾಡ್. ನೀ ಹೋದ ಮೇಲೆ ನಂಗೆ ಅಂವನ ಸುಧಾರ್ಸಿಕೆ ಕಷ್ಟ ಆಕೆ ಉಟ್ಟು" ಎಂತ. ನಾ ನೆಗಾಡಿಕಂಡ್ ಅವನ ಆಡ್ಸಿಕಂಡಿದ್ದೆ. ಎರ್ಡ್, ಮೂರು ದಿನ ಕಳ್ದದೇ ಗೊತ್ತಾತ್ಲೆ. ನಾ ಅಕ್ಕನಲ್ಲಿ,

" ಅಕ್ಕಾ ಹಾಸ್ಟೆಲಿಲಿ ಎಲ್ಲೋವು ಹೌಸ್ ಕೋಟ್ ಹಾಕಿವೆ. ನನ್ನಲ್ಲಿ ಇಲ್ಲೆ." ಎಂತ ಹೇಳ್ದೆ. ಅದ್ ನಂಗೆ ಎರ್ಡ್ – ಮೂರು ಹೌಸ್ ಕೋಟಿಗೆ ಆಗುವಸ್ಟ್ ಬಟ್ಟೆ ತೆಗ್ದ್ ಕೊಟ್ಟ್,

" ನಿಂಗೆ ಬೇಕಾದ ಹಾಂಗೆ ಹೊಲ್ಸಿಕ." ಎಂತ ಹೇಳ್ತ್. ನಮ್ಮ ಹಾಸ್ಟೆಲಿಗೆ ವಾರಕ್ಕೊಮ್ಮೆ ದರ್ಜಿ ಬಾತಿತ್ತ್. ಅಕ್ಕ ಕೊಟ್ಟ ಬಟ್ಟೆಲಿ ಅವನಕ್ಕಲೆ ಎರ್ಡ್ ಹೌಸ್ ಕೋಟ್, ಒಂದು ನೈಟಿ ಹೊಲ್ಸಿದೆ.

ಹಾಸ್ಟೆಲಿಗೆ ದಿನಾ ಹೂ ಮಾರುವ ಹೆಂಗ್ಸ್ ಬಾತಿತ್. ದಿನಾ ಎಲ್ಲೋವೂ

ಅದರಕ್ಕಲೆ ಅರ್ಧ ಮಾರ್ ಹೂವು ತಕಂಬತಿದ್ದೊ. ನಂಜನ ಗೂಡ್‌ನ ರಸಬಾಳೆ ಹಣ್ಣ್, ಬೇಲದ ಹಣ್ಣ್, ಐತ್ವಾರ, ಐತ್ವಾರ ಮಾರಿಕಂಡ್ ಬಾತಿದ್ದೊ. ಗೂಡೆಗ ಎಲ್ಲಾ ತಕಂಬತಿದ್ದೊ. ನಂಗೆ ಬೇಲದ ಹಣ್ಣ್ ತಿಂದ್ ಗೊತ್ತಿಲ್ಲೆ. ಅದರ ನೆಲಕ್ಕೆ ಬೊಡ್ಡ್ ಅದರೊಳಗಿದ್ದ ತಿರ್ಳ್ ತೆಗ್ದ್, ಬೆಲ್ಲ ಹಾಕಿ ಪಾನಕ ಮಾಡ್ತಿದ್ದೊ. ಅದ್ ಪಿತ್ಥಕ್ಕೆ ಬಾರಿ ಒಳ್ಳೆದ್ ಗಡ. ನಾವೆಲ್ಲಾ ಪಾನಕ ಮಾಡಿ ಕುಡ್ಯತಿದ್ದೊ. ಕಡ್ಲೆಕಾಯಿನೂ (ನೆಲಗಡ್ಲೆ) ಮಾರಿಕಂಡ್ ಬಾತಿದ್ದೊ. ಅದರೆಲ್ಲಾ ನಾವು ತಕಂಬತಿದ್ದೊ.

ಒಮ್ಮೆ ಒಬ್ಬ ಚಪ್ಪಲಿ ಮಾಡೊಂವ ಬಾತ್. ಅಂವನ ಹಕ್ಕಲೆ ಪೊರ್ಲುನ ಎರ್ಡ್ ಚಪ್ಪಲಿಗ ಇದ್ದೊ. ಗೂಡೆಗಳ ಕಾಲ್‌ನ ಅಳ್ತೆ ತೆಗ್ದ್, ಐದು ರೂಪಾಯಿಗೆ ಅಲ್ಲಿಯೇ ಚಪ್ಲಿ ಹೊಲ್ದ್ ಕೊಟ್ಟತ್. ಅವನ ಹಕ್ಕಲೆ ಹೋಗಿ ಗೂಡೆಗ ಎಲ್ಲಾ,

' ನಂಗೆ ಹೊಲ್ದು ಕೊಡು, ನಂಗೆ ಹೊಲ್ದು ಕೊಡು" ಎಂತ ದುಂಬಾಲು ಬಿದ್ದೊ. ಅಂವ,

' ಐದೈದ್ ರೂಪಾಯಿ ಕೊಡಿ, ನಾಳೆ ಹೊಲ್ದ್ ತನ್ನೇಂತ ಹೇಳ್ತ್. ಆದ್ರೆ ಯಾರಿಗೂ ಅಂವನ ಮೇಲೆ ನಂಬಿಕೆ ಇತ್ಲೆ. ಆಗ ಅಂವ,

' ನಾ ಮೋಸ ಮಾಡಿಕಿಲ್ಲೆ.' ಎಂತ ಬೇರೆ ಬೇರೆ ರೀತಿಲಿ ಹೇಳಿ ಗೂಡೆಗಳ ನಂಬಿಸಿತ್. ಅಂವನ ಮಾತ್ ಕೇಳಿ ಅಕೆರಿಗೆ ನಾಕ್ ಜನ ಗೂಡೆಗ ಹೋದರೆ ಹೋಗಲಿ ಎಂತ ನೆನ್ಸಿಕಂಡ್ ಐದೈದ್ ರೂಪ್ಯಾ ಒಟ್ಟು ಇಪ್ಪೊತ್ತು ರೂಪ್ಯಾ ಕೊಟ್ಟೊ. ಮೊರ್ದಿನ ಅಂವ ನಾಕ್ ಜತೆ ಚಪ್ಲಿ ಮಾಡಿ ತಂದ್ ಕೊಟ್ಟತ್. ಎಲ್ಲೋವ್ಕು ಅವನ ಮೇಲೆ ನಂಬಿಕೆ ಬಾತ್. ಆಗ ಉಳ್ದ ಗೂಡೆಗಳೂ ಹಣ ಕೊಟ್ಟೊ. ನಾ ಮಾತ್ರಾ ಕೊಟ್ಟತ್ಲೆ. ಆಗ ಎಲ್ಲೋವೂ ನನ್ನ ಪಿಟ್ಟಾಸಿಂತ ಹಿಯಾಳ್ಸಿದೊ. ನಂಗೆ ಬೇಜಾರಾಗಿ ನಾನೂ ಐದ್ ರೂಪ್ಯಾ ಕೊಟ್ಟೆ. ಮೊರ್ದಿನ ಎಲ್ಲೋವೂ ಕಾದೊ. ಅಂವ ಬಾತೇ ಇಲ್ಲೆ. ಒಂದ್ ದಿನ ಕಾದೊ. ಎರ್ಡ್ ದಿನ ಕಾದೊ. ಅಂತೂ ಅಂವ ಎಲ್ಲೋವ್ಕೂ ಪಂಗನಾಮ ಹಾಕಿತ್.

ಪ್ರತಿ ಐತ್ವಾರ ವಾರ್ಡನ್ ನಮ್ಮ ಕರ್ದ್, ವಿಚಾರಣೆ ಮಾಡ್ತಿದ್ದೊ. ಅರ್ಧ ಗಂಟೆ ಬುದ್ಧಿವಾದ ಹೇಳ್ತಿದ್ದೊ. ಊಟ ತಿಂಡಿ ಸರಿಯಾದೆನೋಂತ ವಿಚಾರ್ಸ್ತಿದ್ದೊ. ನಮ್ಮ ಕಷ್ಟ ಸುಖನ ವಿಚಾರ್ಸ್ತಿದ್ದೊ. ತಿಂಗಳಿಗೊಮ್ಮೆ ಇಲ್ಲಿನ ಸಿಸ್ಟರ್ಸ್ ಎಲ್ಲಾ ಕ್ರೈಸ್ತ ಕಿಂಗ್ ಕಾನ್ವೆಂಟಿಗೆ ಮೀಟಿಂಗ್‌ಗೆ ಹೋಗ್ತಿದ್ದೊ. ಆ ದಿನ ಹಾಸ್ಟೆಲ್‌ಲಿ ಬೊಬ್ಬೆನೋ ಬೊಬ್ಬೆ. ನಾವು ದಕ್ಷಿಣ ಕನ್ನಡ ಜಿಲ್ಲೆವು ಗಲಾಟೆ ಮಾಡ್ತೆತ್ಲೆ.

ಒಮ್ಮೆ ನಮ್ಮ ವಾರದ ಮೀಟಿಂಗ್‌ಲಿ, ಮೃಗಾಲಯಕ್ಕೆ ಹೋಕೂಂತ ಕೆಲವು ಗೂಡೆಗ ಹೇಳ್ದೊ. ವಾರ್ಡನ್, ಸಿಸ್ಟರ್ 'ಬ್ಯಾಪ್ಟಿಸ್ಟಾ' ಎಂಬವರ ನಮ್ಮ ಮೇಲ್ವಿಚಾರಣೆಗೆ ಬುಟ್ಟ್, ಅವರೊಟ್ಟಿಗೆ ನಮ್ಮ ಕಳ್ಸಿದೊ. ಹೊರಗೆ ತಿಂಬಕೆ ಬೊತ್ತ್‌ಂತ ನಾವ್ಗೆ ಆಜ್ಞೆ ಮಾಡ್ದೊ. ಹಾಸ್ಟೆಲ್‌ಂದಳೇ ಬಿಸ್ಕೆಟ್ ಪಟ್ಟೆ ಮತ್ತೆ ಕುರ್ಕ್ಲ್ ತಿಂಡಿ ಕಟ್ಟಿಕಂಡ್ ಹೋಗಿದ್ದೊ. ನಾವು ಸಂತೋಷಲಿ ಮೃಗಾಲಯ ನೋಡಿ ಬಂದೊ.

ಮತ್ತೊಮ್ಮೆ ಪಿಕ್‌ನಿಕ್ ಹೋಕೂಂತ ದೊಡ್ಡ ಕ್ಲಾಸ್‌ನ ಗೂಡೆಗ ವಾರ್ಡನ್ ಒಟ್ಟಿಗೆ ಹೇಳ್ದೊ. ಎಲ್ಲಿಗೇಂತ ಚರ್ಚೆ ಮಾಡಿ, ಅಕೆರಿಗೆ ಶಿಂಷಾ ಮತ್ತೆ ಶಿವನ ಸಮುದ್ರಕ್ಕೆ ಹೋಗಿ ಬಾದೂಂತ ನಿಶ್ಚೈಸಿದೊ. ಕ್ರೈಸ್ತ್ರಕಿಂಗ್ ಕಾನ್ವೆಂಟ್‌ಂದ ದೊಡ್ಡ ವೇನ್ ಬಾತ್. ಬೊಳ್ಪುಗೆ ಆರು ಗಂಟೆಗೆ ನಾವು ಹೊರ್‍ಟೊ. ದೊಡ್ಡ ದೊಡ್ಡ ಹೆಡಗೆಲಿ ಬೊಳ್ಪುನ ತಿಂಡಿಗಳ ತುಂಬಿಸಿಕಂಡ್, ತಂದ್ ಕೆಲ್ಸದೊವು ವೇನ್‌ಲಿ ಇಸಿದೊ. ದಾರಿಲಿ ತಿಂಬಕೆ ತಿಂಡಿಗಳ ಕಟ್ಟ್‌ಗಳ ಮಾಡಿ ಹಿಡ್ಕಂಡೊ. ಒಬ್ಬ ಸಿಸ್ಟರ್ ಮತ್ತೆ ಒಂದು ಕೆಲ್ಸದವ್ಳ ಹಾಸ್ಟೆಲ್‌ಲಿ ಬುಟ್ಟ್, ಉಳ್ದೊವೆಲ್ಲಾ ಪಿಕ್‌ನಿಕ್‌ಗೆ ಬಂದೊ. ದಾರಿಲಿ ಹೋಕಾಕನ ಎಲ್ಲೋವೂ ಹಾಡ್ ಹೇಳಿಕೆ ಸುರು ಮಾಡ್ದೊ. ನಮ್ಮೊಟ್ಟಿಗೆ ಸಿಸ್ಟರ್‍ಸ್ ಕೂಡಾ ದನಿ ಕೂಡ್ಸಿದೊ. ಶಿಂಷಾ ಮುಟ್ಟಿಕಾಕನ ಅಲ್ಲಿನ ಗೆಸ್ಟ್ ಹೌಸ್‌ಲಿ ನಾವು ಇಳ್ಕಂಡ್ ಬೊಳ್ಪುನ ಪಳಾರ ಮುಗ್ಸಿದೊ. ಶಿಂಷಾಲಿ ಜಲಪಾತಗ ಸಣ್ಣೊವು. ಅಲ್ಲಿ ನಾವು ಟ್ರಾಲಿಲಿ ಕೆಳಗೆ ಇಳ್ದೊ. ಕೆಳಗೆ ಹೋಕಾಕನ ಕೆಮರ ತಕಂಡ್ ಹೋಕೆ ಬುಟ್ಟತ್ಲೆ. ಆದರೆ ಒಂದು ಕೊಡ್ಗೆತಿ ಗೂಡೆ ಅದರ ಸೀರೆನ ಹಿಂದೆನ ನೆರ್‍ಗಲಿ ಕೆಮರನ ಅಡ್ಗಿಸಿಕಂಡ್ ತಕೊಂಡೋತ್. ಕೊಡ್ಗೆತಿಗ ನೆರಿಗೆನ ಹಿಂದೆ ಸಿಕ್ಕಿಸಿ ಸೀರೆ ಉಡ್ತಿದ್ದೊ. ಕೆಳಗಡೆ ಅದರ್‌ಂದ ನಾವು ಪಟಗಳ ತೆಗ್ದೊ. ಅಲ್ಲಿ ವಿದ್ಯುತ್ತ್ ಉತ್ಪತ್ತಿ ಮಾಡ್ವ ದೊಡ್ಡ ದೊಡ್ಡ ಜನರೇಟ್‌ಗಳ ನೋಡಿ ನಾವ್ಗೆ ಆಶ್ಚರ್ಯ ಆತ್. ಟ್ರಾಲಿಲಿ ಕುದ್ರಿಕಾಕನ ಸುರುಲಿ ಭಯ ಆದರೂ, ಅಕೆರಿಗೆ ಕುಸಿ ಆಗ್ತಿತ್ತ್. ನಾವು ಕೆಳಗಿಳ್ಯಕಾಕನ, ಪಕ್ಕಲಿ ಕೆಳಗೆಂದ ಮೇಲೆ ಬಾವ ಟ್ರಾಲಿಲಿದ್ದ ಜನಂಗಳ ನೋಡಿ, ನಾವು ಕುಸಿಲಿ ಚಪ್ಪಾಳೆ ತಟ್ಟಿ, ಅವ್ಕೆ ಕೈ ಬೀಸ್‌ತಿದ್ದೊ. ಅವುನೂ ನಮ್ಮ ನೋಡಿ ನೆಗಾಡಿಕಂಡ್ ಕೈ ಬೀಸ್ತಿದ್ದೊ.

ಮೇಲೆ ಬಂದ್, ಜಲಪಾತಗಳ ಸೊಬಗ್‌ನ ನೋಡಿ, ನಾವು ಅಲ್ಲಿ ಪಕ್ಕಲಿದ್ದ ಕಾರಂಜಿಗಳ ಉದ್ಯಾನ ವನಗಳ ನೋಡಿಕೆ ಬಂದೊ. ಅಲ್ಲಿನ ನೌಕರರ ಕ್ವಾರ್ಟರ್ಸ್‌ಗ ಇದ್ದೊ. ಅಲ್ಲಿ ತರತರದ ಕಾರಂಜಿಗ, ಹೂನ ದೈಗ ಇದ್ದೊ. ನಾನೂ, ಪಾರ್ವತಿ, ಲೀಲ ಅಲ್ಲೆಲ್ಲಾ ಸುತ್ತಾಡಿ, ಕ್ವಾರ್ಟರ್ಸ್‌ನ ಹಕ್ಕಲೆ ಬಾಕನ ಅಲ್ಲಿ ಒಂದು ರಾಮ ಫಲದ ತೋಟ ಸಿಕ್ಕಿತ್. ಹಣ್ಣಾದ ರಾಮ ಫಲಗ ಕೈಗೆ ಮುಟ್ಟುವಾಂಗೆ ಇದ್ದೊ. ನಾವು ಅದರ ಕೊಯ್ಯಕೇಂತ ಹೋಕನ ತೋಟದ ಆಳ್ ಬಾತ್. ' ನೀವ್ಗೆ ಬೇಕ್‌ಂತೇಳ್ರೆ ದುಡ್ಡು ಕೊಡೀ'ಂತ ಹೇಳ್ತ್. ನಾವು ಮೂರು ಜನ ಅವಂಗೆ ದುಡ್ಡ್ ಕೊಟ್ಟ್, ಒಂದೊಂದು ಹಣ್ಣ್ ತಕಂಡ್ ತಿಂದೊ. ತುಂಬಾ ರುಚಿ ಇತ್ತ್. ಸೀತಾಫಲಲಿ ಬೀಜ ತುಂಬಾ ಇರ್‍ತಿತ್ತ್. ರಾಮ ಫಲಲಿ ಬೀಜ ಕಮ್ಮಿ ಇದ್ದ್, ಒಳಗೆ ಬೆಣ್ಣೆನಾಂಗೆ ತಿರ್‍ಳ್ ತಿಂಬಕೆ ಸಿಗ್ತಿತ್ತ್. ಬಾಳ ಸಿಂಯಿ ಇದ್ದ್ ರುಚಿ ಪೊಟುವ ಇರ್‍ತಿತ್ತ್. ಅಷ್ಟಾಕನ ನಮ್ಮ ಹುಡ್ಕಿಕಂಡ್ ಬೇರೆ ಗೂಡೆಗ ಸಾ ಅಲ್ಲಿಗೆ ಬಂದೊ. ಅವುನೂ ಹಣ್ಣ್‌ಗಳ ಹಣ ಕೊಟ್ಟ್ ತಕಂಡ್ ತಿಂದೊ.

ಶಿಂಷಾಂದ ನಾವು ಶಿವನ ಸಮುದ್ರಕ್ಕೆ ಹೋದೊ. ಅಲ್ಲಿ ಇಲ್ಲಿಂದ ದೊಡ್ಡ ಜಲಪಾತ ಇತ್ತ್. ಗಗನ ಚುಕ್ಕಿ, ಭರಚುಕ್ಕಿ ಜಲಪಾತಗಳ ನೋಡಿ ನಾವೆಲ್ಲಾ

ಸಂತೋಷ ಪಟ್ಟೊ. ಆಗ ನಾ ಜೋಗ್ ಜಲಪಾತ ನೋಡಿರದ ಕಾರಣ, ನಾವ್ಗೆ ಇದೇ ಭಾರೀ ದೊಡ್ಡದಾಗಿತ್ತ್. ಶಿವನ ಸಮುದ್ರಲಿ ನಂಗೆ ನಾ ಓದಿದ ಕಾದಂಬರಿ, "ನಾಟ್ಯರಾಣಿ ಶಾಂತಲಾ" ನೆಂಪಾತ್. ಕೊನೆಗಾಲಲಿ ಇದೇ ಶಿವನ ಸಮುದ್ರಲಿ ಬಿದ್ದ್ ಸತ್ತದ್ ಅಲ್ಲನೋ? ಅದರ ನೆನ್ಸಿ, ನಂಗೆ ಕಣ್ಣ್‌ಲಿ ನೀರ್ ತುಂಬಿತ್. ಶಿವನ ಸಮುದ್ರಲಿ ಟ್ರಾಲಿಗ ನಾಕ್ ಇದ್ದೊ. ಕೆಳಗಡೆ ಆಳ ನೋಡಿಕನ ಕಣ್ಣ್‌ಕತ್ಲೆ ಬಾತಿತ್ತ್. ಅಲ್ಲಿನೂ ಟ್ರಾಲಿಲಿ ಗೂಡೆಗ ಕೆಳಗೆ ಹೋದೊ. ಅಲ್ಲಿ ಎಲ್ಲರ ಜಪ್ತಿ ಮಾಡ್ದ ಕಾರ್ಣ, ಕೆಮರ ತಂದ ಗೂಡೆ ಹೆದ್ರಿ, ಆ ಕೆಮರನ ವ್ಯಾನಿಲಿ ಇಸಿ ಬಾತ್.

ಕೆಳಗಿನ ಆಳಕ್ಕೆ ಹೆದ್ರಿ ಹೆಚ್ಚಿನೊವು ಕೆಳಗೆ ಹೋತ್ಲೆ. ಅದರ್ಲಿ ನಾನೂ ಒಬ್ಳು. ನಂಗೆ ಕೆಳಗೆ ನೋಡಿಕಾಕನತಲೆತಿರ್ಗಿ, ಹೊಟ್ಟೆ ತೊಳ್ಸಿದಾಂಗೆ ಆಗ್ತಿತ್ತ್.

ಮಧ್ಯಾಹ್ನ ಅಲ್ಲಿನ ದೊಡ್ಡ ಹೋಟ್ಲ್‌ಲಿ ನಾವ್ಗೆಲ್ಲಾ ಊಟ ಕೊಡ್ಸಿದೊ. ಅಲ್ಲಿ ಹಂಞ ಹೊತ್ತು ವಿಶ್ರಾಂತಿ ಪಡ್ದೊ. ಹಿಂಬೊತಾಕನ ಮೈಸೂರ್‌ಗೆ ಹೊರ್ಟೊ. ಹೋಕನ ಇದ್ದ ಹುರ್ಪು ಬಾಕನ ಇತ್ಲೆ. ದಾರಿಲಿ ಆಗಾಗ ತಿಂಡಿ, ತಿನ್ಸ್‌ಕೊಡ್ತಿದ್ದೊ. ಮೈಸೂರ್ ಮುಟ್ಟಿಕಾಕನ ಗಂಟೆ ಎಂಟ್ ಆಗಿತ್ತ್. ಇರ್ಳ್‌ಯಾರೂ ಉಂಡತ್ಲೆ. ಆಯಾಸಂದ ಎಲ್ಲೋವೂ ಬೇಗ ಮೊಲ್ಗಿದೊ.

ಕೋಲೇಜ್‌ಲಿ ಎಲ್ಲೋವೂ ಮಾತಾಡ್ತಿದ್ದೊ. 'ಈ ಸಲ ಕನ್ನಂಬಾಡಿ ಅಣೆಕಟ್ಟ್‌ಲಿ ಮಳೆ ಜೋರ್ ಇರ್ದರ್‌ಂದ, ಭಾರೀ ನೀರ್ ಬಂದುಟೂಂತ, ಅಣೆಕಟ್ಟ್‌ಲಿ ಹೆಚ್ಚಿನ ನೀರ್ನ ಬುಟ್ಟವೆಗಡ. ಆಗ ಅದರ ಹರಿವು ನೊಡಿಕೆ ಎರ್ಡ್‌ಕಣ್ಣ್ ಸಾಲದ್‌ಗಡ.'– ಎಂತ ವಿದ್ಯಾರ್ಥಿಗ ಗೂಡೆಗ, ನೋಡಿ ಬಂದೊವು ಮಾತಾಡ್ತಿದ್ದೊ. ನಮ್ಮ ಹಾಸ್ಟೆಲ್‌ನ ಲೀಡರ್ 'ಮೇರಿಕುರಿಯಾಕೋಸ್' ಇದರೆಲ್ಲಾ ವಾರ್ಡನ್‌ಗೆ ಹೇಳ್ತ್. ಅವು,

ನೀವ್ಗೆ ನೋಡೋಕೂಂತೇಳ್ರೆ ಸಿಸ್ಟರ್ ಬ್ಯಾಪ್ಟಿಸ್ಟಾರ ಕರ್ಕಂಡ್ ಹೋಗಿ ಬನ್ನಿ. ಕೃಷ್ಣರಾಜ ಸಾಗರದ ವೃಂದಾವನದ ಇರ್ಳ್ ಲೈಟ್ ಹಾಕಿದ ಮೇಲೆ ನೋಡೋಕು. ನೀವು ಹಿಂಬೊತ್ ನಾಲ್ಕ್‌ಗಂಟೆ ಮೇಲೆ ಹೋಗಿ' ಎಂತ ಹೇಳ್ದೊ.

ನಾವು ಹತ್ತ್‌ಜನ ಗೂಡೆಗ ಸಿಸ್ಟರ್ ಬ್ಯಾಪಿಸ್ಟ್‌ರ ಮೇಲ್ವಿಚಾರಣೆಲಿ ಅದೇ ಐತ್ವಾರ ನೋಡಿಕೆ ಹೊರ್ಟೊ. ನಮ್ಮೊಟ್ಟಿಗೆ ಸಿಸ್ಟರ್ ಫಿಲೋಮಿನಾನೂ ಬಂದೊ. ಎರ್ಡ್ ಟಾಂಗಾ ಮಾಡಿಕಂಡ್ ಬಸ್ ಸ್ಟೇಂಡ್‌ಗೆ ಮುಟ್ಟ ಹೋಗಿ, ಅಲ್ಲಿಂದ ಕನ್ನಂಬಾಡಿಗೆ ಹೋವ ಸಿಟಿ ಬಸ್ಸ್‌ಲಿ ಹೋದೊ. ಕೃಷ್ಣರಾಜ ಸಾಗರದ ಗೇಟ್‌ನ ಹಕ್ಕಲೆ ನಮ್ಮ ಬಸ್ ನಿಲ್ಲಿಕನ, ಸಾಗರದ ವೈಭವ ನೋಡಿ ಬೆರ್ಗಾಗಿದೊ. ಒಳಗೆ ಹೋಕೆ ಟಿಕೆಟ್ ಪಡ್ದ್, ಸೇತುವೆ ಮೇಲೆ ನಡ್ಕಂಡ್ ಸುತ್ತೋಳೂ ನೋಡಿಕಂಡ್ ಹೋದೊ. ಅಣೆಕಟ್ಟ್‌ಲಿ ನೀರ್‌ನ ಮಟ್ಟ ಬಾಳ ಮೇಲಕ್ಕೆ ಇತ್ತ್. ಎಲ್ಲೆಲ್ಲೂ ನೀರೆ ನೀರ್. ಕಂಡಿಲಿ ನೀರ್ ಬುಟ್ಟಕಾರ್ಣ, ನೀರ್‌ನ ಸದ್ದ್‌ಗೆ ಮಾತಾಡ್ದೇ ಕೇಳ್ತ್‌ತಿತ್ಲೆ. ಒಳಗೆ ಹೋಕನ ನಂಗೆ ಸೊರ್ಗ ಲೋಕಕ್ಕೆ ಹೋದ ಹಾಂಗೆ ಆತ್. ನಾ ಸೊರ್ಗನ ನೋಡ್ತ್‌ತ್ಲರೂ ಸೊರ್ಗ ಅಂದರೆ ಹೀಂಗೆ ಇರ್ದೂಂತ ನೆನ್ಸಿಕಂಡೆ. ಆ ಕಾರಂಜಿಗಳ, ಅದರ ನಾನಾ ತರದ

ನೀರ್ ಚಿಮ್ಮುವ ದೃಶ್ಯಗ, ನೆಟ್ಟ ದೈಗಳ ಸೌಂದರ್ಯಗ, ನಾ ನೋಡದ ಅನೇಕ ತರದ ಹೂಗಳ ಸೊಬಗ್‌ನ ನೋಡಿಕನ, ಇದೆಲ್ಲಾ ಕನ್ನೋನೆನ್ನೊಂತ ಸೋಜಿಗ ಪಟ್ಟೆ. ಇಷ್ಟೊಂದು ವಿಧಲಿ ಕಲಾತ್ಮಕವಾಗಿ ದೈಗಳ ನೆಡಿಕೆ ಹೇಂಗೆ ಸಾಧ್ಯಾಂತ ಆಶ್ಚರ್ಯ ಪಟ್ಟೆ. ಇದರ ನೆಡಿಕೆ, ಸಾಕಿಕೆ ಮಾಲಿಗ ಎಷ್ಟೊಂದು ಕಷ್ಟ ಪಟ್ಟಿರ್ರೋ? ಏನೋ? ಇದೆಲ್ಲಾ ನನ್ನ ತಲೆಲಿ ಸುತ್ತ್‌ತಿತ್ತ್. ವೃಂದಾವನಕ್ಕೆ ಇಳ್ದ ಕೂಡ್ಲೆ, ಎತ್ತರಲಿ ಕೆತ್ತಿ ನಿಲ್ಲಿಸಿದ ಕರ್ಗಲ್ ಮೂರ್ತಿ ಕಾವೇರಿ ಮಾತೆಗೆ ಮನ್ಸ್‌ಲೇ ಕೈ ಮುಗ್ದೆ. ನಾವೆಲ್ಲಾ ಮಾತ್ ಬಾರದಾಂಗೆ ಒಬ್ಬರ ಹಿಂದೆ ಒಬ್ಬ ಪುಡೆಲಿ ಇದ್ದ ಕಾಲ್ದಾರಿಲಿ ಒಬ್ಬರ ಕೈ ಹಿಡ್ಕಂಡ್ ಒಬ್ಬ ಮುಂದೆ ಹೋದೊ. ಸಾವಿರಾರ್ ಜನ ಕನ್ನಂಬಾಡಿನ ವೃಂದಾವನನ ನೋಡಿಕೆ ಬಂದಕಾರ್‍ಣ, ನಾವೆಲ್ಲಾ ತೊಪ್ಪಿಸಿಕೊಂಬಕೆ ಆಗದ್‌ಂತ ಒಟ್ಟಿಗೇ ಹೋದೊ. ಕಾರೆಂಜಿಗ ಒಂದರ್‌ಂದ ಒಂದ್ ಪೊರ್ಲುಇತ್ತ್. ಯಾವ್ದರ ನೋಡ್ದು ಯಾವ್ದರ ಬುಡ್ದುಂತ ಗೊತ್ತಾಗ್ತಿತ್ಲೆ. ಕಾಲ್ದಾರಿನ ಕೊಟ್ಟ ಕೊನೆಗೆ ದೊಡ್ಡ ಸರೋವರದಾಂಗೆ ಜಲಾಶಯ ಇತ್ತ್. ಅಲ್ಲಿ ದೋಣಿಲಿ ಸಂಚಾರ ಮಾಡಿಕೆ ದೋಣಿಗ ಇದ್ದೊ. ಆದರೆ ನಮ್ಮ, ದೋಣಿ ಸಂಚಾರ ಮಾಡಿಕೆ ಸಿಸ್ಟರ್ ಬುಟ್ಟತ್ಲೆ. ವೃಂದಾವನನ ನಾವು ಸುತ್ತಿಕಂಡ್, ಅಕೆರಿಗೆ ಅಣೆಕಟ್ಟ್‌ನ ನೀರ್ ಬುಟ್ಟ ಜಾಗೆಗೆ ಬಂದೊ. ನೋಡ್ದೇನ್? ಆ ರುದ್ರರಮಣೀಯ ದೃಶ್ಯನ ಎಲ್ಲೆಲ್ಲೂ ಬಿಳಿ ನೊರೆ ಹಾಂಗೆ ಎತ್ತರ್‌ಂದ ಹಾರುವ ನೀರ್‌ನ ರಾಶಿ. ಬೇರೆ ಯಾವ್ದೂ ಕಾಂಬತಿತ್ಲೆ. ತುಂಬಾ ಹೊತ್ತು ಮಾತ್ ಬಾರದವರಾಂಗೆ ಅದರ್ನೇ ನೋಡಿ ಮೈ ಮರ್‍ತೊ. ಅಷ್ಟರ್ಲಿ ಝುಗ್ಗನೆ ಲೈಟ್‌ಗ ಎಲ್ಲಾ ಒಮ್ಮೆನೇ ಹೊತ್ತಿದೊ. ಲೈಟ್ ಬೊಳ್ಪುಲಿ ವೃಂದಾವನ ಇಂದ್ರನ ಅಮರಾವತಿನ ಹಾಂಗೆ ಕಾಂಬತಿತ್ತ್. ನಾ ಸೊರ್ಗನ ನೋಡ್‌ತ್ಲಲ್ಲರೂ, ಇದರ ಸೌಂದರ್ಯದ ಮುಂದೆ ಸೊರ್ಗ ಏನೇನೂ ಇರಿಕಿಲ್ಲೆಂತ ನೆನ್ಸಿದೆ. ತುಂಬಾ ಹೊತ್ತು ಲೈಟ್ ಬೊಳ್ಪುಲಿ ಕಾರಂಜಿಗಳ ನೊಡುಲಿ ಇದ್ದದಾರಿಲಿ ನಾವು ನಡ್ಕಂಡ್ ಹೋಗಿ, ಎಲ್ಲದರ ನೋಡಿಕಂಡ್, ಮುಂದೆ, ಮುಂದೆ ನಡ್ದೊ. ಇರ್‍ಳ್ ಎಟಿಟ್ ಗಂಟೆ ಮುಟ್ಟ ಅಲ್ಲಿದ್ದೊ. ಸಿಸ್ಟರ್ಸ್ ನಮ್ಮ ಎಚ್ಚರ್ಸಿ ಹೊರಗೆ ಕರ್ಕಂಡ್ ಬಂದೊ. ನಾವು ಕನ್ಸ್‌ಲಿ ನಡ್ದಾಂಗೆ ನಡ್ದ್, ಬಸ್ ನಿಂತಲ್ಲಿಗೆ ಬಂದ್ ಬಸ್ಸ್ ಹತ್ತಿದೊ. ಹಾಸ್ಟೆಲ್ ಮುಟ್ಟಿಕಾಕನ ಇರ್‍ಳ್ ಒಂಭತ್ತ್ ಗಂಟೆ.

ನಾ ವಾರ ಇಡೀ ಕನ್ನಂಬಾಡಿ, ವೃಂದಾವನದ ಗುಂಗ್‌ಲೇ ಇದ್ದೆ. ಕನ್ನಂಬಾಡಿನ ನಿರ್ಮಾತೃ ಸರ್. ವಿಶ್ವೇಶ್ವರಯ್ಯನವರ ಶ್ರಮ, ಮತ್ತೆ ಸಾಧನೆನ ನೆನ್ಸಿ, ಸೋಜಿಗ ಪಟ್ಟೆ. ಸೂರ್ಯ, ಚಂದ್ರ ಇರುವವರೆಗೆ ಅವರ ಈ ಕೊಡುಗೆ ನಮ್ಮೆಲ್ಲರ ಭಾಗ್ಯನೇ ಸರಿ.

ಒಮ್ಮೆ ಸಿಸ್ಟರ್ ಪಿಲೋಮಿನಾ, ನನ್ನ ಮತ್ತೆ ಬಿ.ಯಸ್. ಪಾರ್ವತಿನ ಸೈಂಟ್ ಫಿಲೋಮಿನಾ ಚರ್ಚ್‌ಗೆ ಕರ್ಕಂಡ್ ಹೋದೊ. ಸುಳ್ಯಲಿ ನನ್ನ ಕ್ರಿಶ್ಚಿಯನ್ ಜೋಸ್ತಿ ಗೂಡೆ ವಿನ್ನಿನೊಟ್ಟಿಗೆ, ಎಷ್ಟೋ ಸಲ ಚರ್ಚಿಗೆ ಹೋಗಿದ್ದೆ. ಅವಳ ಹಾಂಗೆ ನಾನೂ ಮೊಣಕಾಲೂರಿ ಯೇಸು ಪ್ರಭುಗೆ ನಮಸ್ಕಾರ ಮಾಡ್ತಳೆ. ಕೇಂಡ್ಲ್ ಉರ್ಸಿ ಪ್ರಾರ್ಥನೆ

ಮಾಡ್ಯಳೆ. ಅಲ್ಲಿದ್ದ ಬೇರೆ ಬೇರೆತ್ಯೈಲ ಚಿತ್ರಗಳ್‌ಲಿ ಯೇಸುಕ್ರಿಸ್ತನ ಸಣ್ಣದಿರಿಕನ ಇದ್ದ ಚಿತ್ರಗ, ಮೇರಿ ತಾಯಿ ಒಟ್ಟಿಗೆ ಇರುವ ಬಾಲ ಯೇಸು, ಏಸುನ ಜನನ, ಕುರಿ ಮೊರಿ ಹಿಡ್ದ್‌ದಯೇಸು, ಶಿಲುಬೆ ಹೊತ್ತಯೇಸುಎಲ್ಲಾ ಚಿತ್ರಗಳ ನೋಡಿ ಸಂತೋಷ ಮತ್ತೆ ದು:ಖ ಆಗ್ತಿತ್ತ್. ಆದರೆ ಮೈಸೂರ್‌ನ ಈ ಸೈಂಟ್ ಫಿಲೋಮಿನಾ ಚರ್ಚ್‌ನ ವೈಭವ ನೋಡಿ, ನಾ ಬೆರ್ಗ್ಾದೆ. ಎತ್ತರದ ಎರ್ಡ್ ಗೋಪುರಗ ದೂರಕ್ಕೂ ಎದ್ದ್ ಕಾಂಬತಿತ್ತ್. ಒಳಗೆ ಹೋದರೆ ವಿಸ್ತಾರವಾದ ಪ್ರಾರ್ಥನೆ ಮಾಡುವ ಹಜಾರ, ಅಲ್ಲಲ್ಲಿ ತ್ಯೈಲ ಚಿತ್ರಗ, ದೊಡ್ಡ ದೊಡ್ಡ ಯೇಸುನ ಪ್ರತಿಮೆಗ, ನೋಡಿ ಸೋಜಿಗ ಆತ್. ಅದರ್ಲೂ ನೆಲ ಮಾಳಿಗೆಲಿ ಇದ್ದ ಚಾಪೆಲ್ ನೋಡಿ ಬೆರ್ಗ್ಾದೆ. ನಂಗೆ ತುಂಬಾ ಕುಸಿ ಆದ್ ಈ ಅಂಡರ್‌ಗ್ರೌಂಡ್ ಚಾಪೆಲ್. ಅಲ್ಲಿ ಮೊಲ್ಗಿದ ಮೇರಿತಾಯಿ ಮತ್ತೆ ಬಾಲಯೇಸುನ ಪ್ರತಿಮೆನ ಎಷ್ಟ್ ನೋಡ್ರೂ ತೃಪ್ತಿ ಆಗ್ಲಿತ್ಲೆ. ಇನ್ನೂ ಇನ್ನೂ ನೋಡೊಮೋಂತ ಆಗ್ತಿತ್ತ್. ಅದ್‌ಗಾಜಿನ ಗೋಳದ ನೊಡುಲಿ ಉಟ್ಟು. ನಾ ಎಷ್ಟೋ ಸಲ ಅಲ್ಲಿಗೆ ನನ್ನ ಜೋಸ್ತಿ ಗೂಡೆಗಳ ಒಟ್ಟಿಗೆ ಹೋಗಿ, ಕೇಂಡ್ಲ್ ಹೊತ್ತಿಸಿ, ನನ್ನ ದು:ಖನ ಅಲ್ಲಿ ಹೇಳಿಕಂಡ್ ಬಂದಳೆ. ಮೊದ್ವೆ ಆದ ಮೇಲೆನೂ ನನ್ನ ಗಂಡನ ಕರ್ಕಂಡ್ ಅಲ್ಲಿಗೆ ಹೋಗಿ ಕೇಂಡ್ಲ್ ಹೊತ್ತಿಸಿ ಬಂದಳೆ. ಸೈಂಟ್ ಫಿಲೇವಿನಾ ಫೀಸ್ಟ್ ಅಲ್ಲಿ ಮೂರು ದಿನ ನಡ್ಯತಿತ್ತ್. ಅಕೆರಿನ ದಿನ ನಾವು ಹಾಸ್ಟೆಲ್ ಮಕ್ಕ ಎಲ್ಲಾ ಸಿಸ್ಟರ್ಸ್‌ನೊಟ್ಟಿಗೆ ಹೋಗಿದ್ದೊ. ಆ ಜನ ಸಂದಣಿಲಿ ನಡ್ಕಂಡ್ ಹೋಕೆ ಆಗ್ತಿಲ್ಲೆ. ನೂಕು ನುಗ್ಗಲಿಲಿ ನಾವ್ಗೆ ಉಸ್ರ್ ಕಟ್ಟಿ ಹೋಗ್ತಿತ್ತ್. ನಂಗೆ "ಯಾಕಪ್ಪಾ ನಾವು ಇಸ್ಟ್ ಕಷ್ಟಲಿ ಬಂದೋ? ಒಮ್ಮೆ ಇಲ್ಲಿಂದ ಹೋದರೆ ಸಾಕ್" ಎಂತಾಗ್ತಿತ್ತ್. ನಾವೆಲ್ಲಾ ಬೇಗ ಹಾಸ್ಟೆಲಿಗೆ ಬಂದೊ.

ಒಂದು ದಿನ ಐತ್ವಾರ ನಾ ಹಾಸ್ಟೆಲ್ ಕಂಪೌಂಡ್ ಹಕ್ಕಲೆ ಕಲ್ಲ್ ಬೆಂಚಿನ ಮೇಲೆ ಕುದ್ದ್‌ಕಂಡ್ ಓದಿಕಂಡಿದ್ದೆ. ಅಷ್ಟರ್ಲಿ ಒಂದು ಟಾಂಗಾ ಬಂದ್ ನಮ್ಮ ಗೇಟ್‌ನ ಹಕ್ಕಲೆ ನಿಂತ ಸದ್ದಾತ್. ತಲೆ ಎತ್ತಿ ನೋಡ್ನೆ, ಅಣ್ಣ ಅದರ್‌ಂದ ಇಳ್ಯತಿತ್ತ್. ನಂಗೆ ಕುಸಿಂದ ಉಸ್ರ್ ಕಟ್ಟಿ ದಂಗಾತ್. ಓಡಿಹೋಗಿ ಅಣ್ಣನ ತೊಬ್ಬಿಕಂಡ್, 'ಅಣ್ಣಾ'ಂತ ಕರ್ದೆ. ನನ್ನ ಕಣ್ಣ್‌ಲಿ ನೀರ್ ತುಂಬಾ ಬಾತ್. ನಾ ಬಂದ ಮೇಲೆ ನನ್ನ ನೋಡಿಕೆ ಯಾರೂ ಬಾತೇ ಇಲ್ಲೆ. ಸುರುನ ಸಲ ಅಣ್ಣ ನನ್ನ ನೋಡಿಕೆ ಬಾಕನ ನಂಗೆ ಕೊಪ್ಪರಿಗೆ ಸಿಕ್ಕಿದಸ್ಟ್ ಸಂತೋಷ ಆತ್. ಅಣ್ಣಂಗೂ ನನ್ನ ನೋಡಿ ಕಣ್ಣ್ ತುಂಬಿತ್ತ್. ನನ್ನ ಕೈ ಹಿಡ್ದ್,

" ಮೋಳು, ಹೇಂಗ್ಯೊಳ? ಎಂತ ಕೇಳಿ ತಿಂಡಿಕಟ್ಟ್‌ನ ನನ್ನ ಕೈಲಿಸಿತ್.

"ಯಾಗ ಬಂದ ಅಣ್ಣಾ?" – ನಾ ಕೇಳ್ದೆ.

"ನಿನ್ನೆ ಬಂದೆ. ಇಂದ್ರಭವನಲಿ ರೂಂ. ಮಾಡ್ಯಳೆ. ಈಗ ನಿನ್ನ ನೋಡಿಕೆ ಬಂದೆ ಮಧ್ಯಾಹ್ನದ ಬಸ್ಸ್‌ಲಿ ಹೋನೆ" ಎಂತ ಹೇಳ್ತ್.

ಅಣ್ಣನ ಕೈ ಹಿಡ್ದ್ ಎಳ್ಕಂಡ್ ಬಂದ್ ವಾರ್ಡನ್‌ಗೆ ಗುರ್ತ ಮಾಡ್ಸಿದೆ. ಅಣ್ಣ

ಹಂಞ ಹೊತ್ತ್ ಇದ್ದ್, ವಾರ್ಡ್‌ನ ಹಕ್ಕಲೆ ಐನೂರು ರೂಪ್ಯಾ ಕೊಟ್ಟ್,

"ನಾವ್ಗೆ ಊರ್‌ಂದ ಆಗಾಗ ಬಾಕೆ ಆದುಲ್ಲೆ. ಅಕೆರಿಗೆ ಉಳ್ದ ಹಣನ ತಂಗೆ ಹಕ್ಕಲೆ ಕೊಡಿಸಿ"– ಎಂತ ಕನ್ನಡಲಿ ಹೇಳ್ತ್. ಮತ್ತೆ ಹೊರ್ಟ್ ಹೋತ್. ಅಪ್ಪ ಮುಂದೆನೇ ವಾರ್ಡ್‌ನ್ ಹಕ್ಕಲೆ ಮುನ್ನೂರು ರೂಪ್ಯಾ ಕೊಟ್ಟಿದ್ದೊ. ನಾ ದಿನಾ ಹಾಲ್ ತಕಂಬತಿದ್ದೆ. ಹಾಂಗಾಗಿ ನಂಗೆ ತಿಂಗಳಿಗೆ ಐದ್ ರೂಪ್ಯಾ ಹೆಚ್ಚಿಗೆ ಬಿಲ್ಲ್ ಆಗ್ತಿತ್ತ್. ಉಳ್ದವ್ಕೆ ಅರುವತ್ತ ಮೂರುವರೆ ರೂಪ್ಯಾ ಆದರೆ ನಾ ಅರುವತ್ತೆಂಟೂವರೆ ರೂಪಾಯಿ ಕಟ್ಟಕಾಗಿತ್ತ್. ಆಗ ಹಾಲ್‌ಗೆ ಕುಡ್ತೆಗೆ ಒಂದೂವರೆ ಆಣೆ ಬರ್ತಿತ್ತ್. (ಅಂದರೆ ಈಗನ ಹದಿನೈದ್ ಪೈಸೆ).

ನಮ್ಮ ಕಾಲೇಜಿಲಿ ಕಾಲೇಜ್ ಡೇ ಎಂಬ ಸಮಾರಂಭ ಇರ್ತಿತ್ತೆ. ನಾ ಇದ್ದ ವೊರ್ಸ ಲೇಡೀಸ್ ಎಸೋಸಿಯೇಶನ್, ಸೋಶಿಯಲ್ ಸಯನ್ಸ್ ಎಸೋಸಿಯೇಶನ್ ಎಂಬ ಎರ್ಡ್ ಸಮಾರಂಭ ಮಾಡಿದ್ದೊ. ಅದ್ಕೆ ನಾ ಹೋಗಿದ್ದೆ. ಅದ್ಕೆ ಐದ್ ರೂಪಾಯಿ ಕೊಟ್ಟ್ ಗೆಸ್ಟ್ ಟಿಕೇಟ್ ತೆಗ್ಯಕಾಗಿತ್ತ್. ಎಷ್ಟ ಟಿಕೆಟ್ ಬೇಕರೂ ತೆಗ್ಯಕ್. ಅದ್ಕೆ ನಮ್ಮ ಜೋಸ್ತಿ ಗೂಡೆಗಳ ಎಸ್ಟ್ ಜನ ಬೇಕಾರೂ ಕರ್ಕಂಡೋಕ್. ಭರ್ಜರಿ ಟಿಫಿನ್ ಕೊಡ್ತಿದ್ದೊ. ಮಿಮಿಕ್ರಿ, ಫ್ಯಾನ್ಸಿ ಡ್ರೆಸ್, ಭಾಷಣ ಎಲ್ಲಾ ಮಾಡ್ತಿದ್ದೊ. ಲೇಡೀಸ್ ಎಸೋಸಿಯೇಷನ್ ಸಮಾರಂಭಕ್ಕೆ, ಮೈಸೂರ್ ಮಹಾರಾಣಿ ತ್ರಿಪುರ ಸುಂದರಿ ಅಮ್ಮಣ್ಣಿ ಅವರ ಅಧ್ಯಕ್ಷೆ ಆಗಿ ಕರ್ದಿದ್ದೊ. ನಾವೆಲ್ಲಾ ಮಕ್ಕ. ಮಹಾರಾಣಿ ಹೇಂಗಿರ್ವೊಂತ ಮಾಳಿಗೆ ಮೇಲೆ ನಿಂತ್ ಕುತೂಹಲಂದ ನೋಡ್ತಿದ್ದೊ. ಬಣ್ಣದ ಹೊದಿಕೆಂದ ಸಿಂಗಾರ ಮಾಡ್ದ, ಕುದುರೆ ಗಾಡಿಗ ಸಾಲಾಗಿ ಒಂದರ ಹಿಂದೆ ಒಂದು ಬಂದೊ. ಸುರುನ ಗಾಡಿ ಬಾಕಾಕನ ಮಹಾರಾಣಿ ಬಂದೋಂತ ನಾವೆಲ್ಲಾ ಬೊಗ್ಗಿ ಬೊಗ್ಗಿ ನೋಡ್ದೊ. ಆದರೆ ಸುರುನ ಮೂರು – ನಾಕ್ ಕುದ್ರೆ ಗಾಡಿಲಿ, ಅವರ ಪರಿವಾರದೊವು ಇಳ್ದೊ. ಮತ್ತೆ ಬಂದ ತುಂಬಾ ಸಿಂಗಾರ ಮಾಡ್ದ ದೊಡ್ಡ ಕುದ್ರೆ ಗಾಡಿಲಿ ಮಹಾರಾಣಿ ಬಂದೊ. ಆ ಗಾಡಿಗೆ ಕಸೂತಿ ಹಾಕಿದ್ದ ಪರದೆ ಇಳ್ಸಿದ್ದೊ. ಆ ಗಾಡಿನ ಹಿಂದೆ ಮತ್ತೂ ಮೂರು– ನಾಕ್ ಕುದ್ರೆ ಗಾಡಿಗ ಬಂದೊ. ಮಹಾರಾಣಿನ ಸವಾರಿ ಒಂದು ಮೆರವಣಿಗೆನ ಹಾಂಗೆ ಇತ್ತ್. ಅವರ ಕೈಹಿಡ್ದ್ ಇಳ್ಸಿ, ಅವರ ಪರಿವಾರದವರೊಟ್ಟಿಗೆ ಕರ್ಕಂಡ್ ಬಂದ್, ಸಮಾರಂಭ ನಡೆವ ವೇದಿಕೆಗೆ ತಂದ್ ಬುಟ್ಟೊ. ಮಹಾರಾಣಿಯೊವು ಜರಿ ಕುಸುರಿ ಕೆಲ್ಸ ಮಾಡ್ದ ಬಿಳಿ ರೇಶ್ಮೆ ಸೀರೆ ಉಟ್ಟಿದ್ದೊ. ಅಲಂಕಾರಕ್ಕಾಗಿ ಮುತ್ತುನ ಸೆಟ್ ಹಾಕಿದ್ದೊ. ನೋಡಿಕೆ ಬಾಳ ಪೊರ್ಲು ಇದ್ದ್, ಗಂಭೀರವಾಗಿದ್ದೊ. ನಮ್ಮ ಮಹಿಳಾ ಎಸೋಸಿಯೇಶನ್‌ದ ಲೀಡರ್ ಬಿ.ಸಿ. ಕಾವೇರಿ (ಕೊಡ್ಗತಿ) ಅವರ ಬರಮಾಡಿಕಂಡ್ ಕೈ ಮುಗ್ದ್, ಕೈ ಕುಲ್ಕಿ, ಆಸನ ಸ್ವೀಕಾರ ಮಾಡಿಕೆ ಹೇಳ್ದೊ. ಆಮೇಲೆ ಕಾರ್ಯಕ್ರಮಗಳ ಅಂಬೆರ್ಪುಲಿ ಸುರು ಮಾಡ್ದೊ. ಕೆಲವು ಇನಾಮುಗಳ ಮಹಾರಾಣಿ ಕೈಲಿ ಕೊಡ್ಸಿದೊ. ಅವು ಭಾಷಣನ ಓದಿ ಹೇಳ್ದೊ. ಅರ್ಧಗಂಟೆ ಒಳಗೆ ಸಭೆನ ಕಾರ್ಯಕ್ರಮಗ ಮುಗ್ದ್, ನಮ್ಮ ಅತಿಥಿ

ಸತ್ಕಾರನ ಸ್ವೀಕಾರ ಮಾಡಿ, ನಮ್ಮೊಟ್ಟಿಗೆ ಗ್ರೂಫ್ ಪಟ ತೆಗ್ಸಿ, ಅವು ಹಿಂದೆ ಹೊರ್‍ಟು ಹೋದೊ. ಅವು ಹೋದ ಮೇಲೆ ಉಳ್ದ ಸಾಂಸ್ಕೃತಿಕ ಕಾರ್ಯಕ್ರಮಗ ನಡ್ದೊ. ಅದುನೂ ಅರ್ಧಗಂಟೆಲಿ ಮುಗ್ತ್. ಹಿಂಬೊತ್ತು ಆರ್. ಗಂಟೆಗೆ ನಾವೆಲ್ಲಾ ಹಾಸ್ಟೇಲಲಿ ಇದ್ದೊ. ಕೋಲೇಜಿನ ಸಮಾರಂಭಗ ಎಲ್ಲಾ ನಡ್ಯತಿತ್ತ್. ಆ ವೊರ್ಸ ಕೋಲೇಜ್ ಮ್ಯಾಗಜೀನ್‌ನ ಕನ್ನಡ ವಿಭಾಗಕ್ಕೆ ನಾ ಎರ್‍ಡ್ ಲೇಖನಗಳ ಬರ್ದ್ ಕೊಟ್ಟಿದ್ದೆ. ಅದ್ ಪ್ರಕಟ ಆಗಿತ್ತ್.

“ ಸೌತ್ ಕೆನರಾ ಎಸೊಸಿಯೇಷನ್ ”,

ಮಳಿಯಾಳಿ ಎಸೋಸಿಯೇಷನ್, ಕೂರ್ಗ್ ಎಸೋಸಿಯೇಷನ್, ಸೌತ್ ಕೆನರಾ ಎಸೊಸಿಯೇಷನ್ – ಎಂತ ಸಂಘಟನೆಗಳ ಕಾರ್ಯಕ್ರಮ ನಡ್ಯತಿತ್ತ್. ನಮ್ಮ ದಕ್ಷಿಣ ಕನ್ನಡದ ಸಂಘಟನೆ ಮೈಸೂರ್‌ನ ದಾಸ ಪ್ರಕಾಶ ಹೋಟೇಲ್‌ನ ಸಭಾಂಗಣಲಿ ನಡ್ತ್. ನಂಗೆ ಅದರ ಆಮಂತ್ರಣ ಕಾಗ್ದ ಸಿಕ್ತ್. ಹಾಸ್ಟೆಲ್‌ಂದ ಐರಿನ್‌ವಾಸ್, ಇಂದಿರಾಜೈನ್, ಭಾರತೀ ಶೆಣೈ ಮತ್ತೆ ನಾ ವಾರ್ಡನ್ ಅಪ್ಪಣೆ ಪಡ್ದ್, ದಾಸ ಪ್ರಕಾಶ ಹೋಟೇಲಿಗೆ ಹೋದೊ. ಆ ಹೋಟೇಲ್‌ನ ‘ಮೋಡರ್ನ್ ಕೆಫೆ’ □ ಎಂತಲೂ ಕರ್‍ಯತಿದ್ದೊ. ಮೋಡರ್ನ್ ಕೆಫೆನ ಮೇಲೆನ ಅಂತಸ್ತ್‌ನ ಟೆರೆಸ್ ಮೇಲೆ ಶಾಮಿಯಾನ ಹಾಕಿ ಸಮಾರಂಭ ಮಾಡಿದ್ದೊ. ನಾವು ಲಿಫ್ಟ್‌ಲಿ ಮೇಲೆ ಹೋದೊ. ಆಗ ಮೋಡರ್ನ್ ಕೆಫೆಗೆ ಮೂರು ಅಂತಸ್ತ್ ಇತ್ತ್. ಮಹಾರಾಣೀ ಕಾಲೇಜಿಂದಲೂ ದಕ್ಷಿಣ ಕನ್ನಡದ ಗೂಡೆಗ ಬಂದಿದ್ದೊ. ಅಲ್ಲಿ ಸಭಾ ಕಾರ್ಯಕಲಾಪಗ ಎಲ್ಲಾ ಅಚ್ಚ್‌ಕಟ್ಟಾಗಿತ್ತ್. ನಮ್ಮೊರ್‍ನ ವಾತಾವರಣ ಇತ್ತ್. ಹೆಚ್ಚಿನೊವು ತುಳುಲಿ ಮಾತಾಡ್ತಿದ್ದೊ. ತುಳು, ಕನ್ನಡ ಹಾಡ್‌ಗ, ಭಾಷಣ, ಮಿಮಿಕ್ರಿ, ಏಕಾಂಕ ನಾಟಕ ಎಲ್ಲಾ ಇತ್ತ್. ಪ್ರೊ। ನಾರಾಯಣ ರಾವ್ ಬಂದಿದ್ದೊ. ಮಹಾರಾಣೀ ಕಾಲೇಜಿಂದ ಬಿ.ಯಸ್. ಕೃತಿಕಾಳ ಜೋಸ್ತಿ ಗೂಡೆ ವಿಜಯಲಕ್ಷ್ಮಿ ಬಂದಿತ್ತ್. ಬಿ.ಯಸ್. ಕೃತಿಕಾ ಮತ್ತೆ ಬಿ.ಯಸ್. ಪಾರ್ವತಿ ಅಕ್ಕ, ತಂಗೆಕ. ವಿರಾಜಪೇಟೆ ಬಲ್ಲ ಚಂಡ ಸುಬ್ಬಯ್ಯ (ಹ್ಯಾರಿ)ನವರ ಮಕ್ಕ. ಸುನಾಲಿನಿ ಎಂಬ ಗೂಡೆ ವಿಜಯಲಕ್ಷ್ಮಿನೊಟ್ಟಿಗೆ ಗೆಸ್ಟ್ ಟಿಕೆಟ್‌ಲಿ ಬಂದಿತ್ತ್. ಅವಿಬ್ಬೊರು ವಿರಾಜಪೇಟೆಯೊವು. ಆಗ ಅವರ ಅಲ್ಲಿ ನೋಡ್ರೂ ಮಾತಾಡ್ತಿಲ್ಲೆ. ಸಾವಿರದ ಒಂಭೈನೂರ ಅರುವತ್ತ ಮೂರರ್‍ಲಿ ಸುನಾಲಿನಿ ಸುಳ್ಯದ ಸುಬ್ಬಯ್ಯ ಪ್ರಭುಗಳ ಸೊಸೆ ಆಗಿ ಬಂದೊ. ಆ ಮೇಲೆ ನಾವಿಬ್ಬೊರು ಜೋಸ್ತಿಗ ಆದೊ. ದಕ್ಷಿಣ ಕನ್ನಡದ ಸಂತೋಷ ಕೂಟನ ಮುಗ್ಸಿ ನಾವೆಲ್ಲಾ ಹಾಸ್ಟೆಲಿಗೆ ಹಿಂತಿರುಗಿದೊ.

“ಕಲ್ಲೊತ್ತು”

ಒಮ್ಮೆ ನಂಗೆ ಹಾಸ್ಟೆಲಿಲಿ ಇರಿಕಾಕನ ಪಾದದ ಮುಡುಲಿ ಬೇನೆ ಸುರಾತ್. ಮುಡುಲಿ ಬೇನೆ ಎದ್ದರೆ ಅದರ ‘ಕಲ್ಲೊತ್ತು’ಂತ ಕರ್‍ಯತಿದ್ದೊ. ಅದಕ್ಕೆ ಬೆಸಗೆನ ಅಡಿಲಿದ್ದ ಕರಿ ತೆಗ್ದ್ ಅದರೊಟ್ಟಿಗೆ ಹಸಿ ಅರ್‍ಸಿಣ, ಉಪ್ಪು, ಹುಗ್ಗೆನ ಸೇರ್‍ಸಿ, ಅರ್‍ದ್

ಅದರ ಕೊದಿಸಿ, ಮಡಿ ಬಟ್ಟೆಲಿ ಹಾಕಿ ಬಿಸಿ ಬಿಸಿಯಾಗಿ ಬೇನೆ ಇದ್ದ ಜಾಗೆಗೆ ಕಟ್ಟಿರೆ, ಅದರ ಶಾಖಕ್ಕೆ ಬೇನೆ ಮಾಯ ಆಗ್ತಿತ್ತ್. ಒಂದೆರ್ಡ್ ದಿನಲಿ ಗುಣ ಆಗ್ತಿತ್ತ್. ಆದರೆ ಹಾಸ್ಟೆಲಿಲಿ ಅದರೆಲ್ಲಾ ಮಾಡಿಕೆ ಆದೆನೋ? ಸುರುನ ದಿನ ನಾ ಯಾರೊಬ್ಬರಿಗುನೂ ಹೇಳ್ತಿಲ್ಲೆ. ಕುಂಟಿಕಂಡ್ ನಡ್ಯತಿದ್ದೆ. ಪಿಲೋಮಿನಾ ಸಿಸ್ಟರ್ ನೋಡಿ ಒಂದು ಮುಲಾಮು ಪೂಜಿಕೆ ಕೊಟ್ಟೊ. ಅದರ್‌ಂದ ಗುಣ ಆತ್ಲೆ. ಮೊರ್ದಿನ ಜೋರಾತ್. ಸಿಡ್ತ ತಡ್ಯಕಾತ್ಲೆ. ನಾ ಮೊರ್ಡಿಕೆ ಸುರು ಮಾಡ್ದೆ. ನನ್ನ ರೂಂನ ಗೂಡೆಗ ವಾರ್ಡನ್‌ಗೆ ತಿಳ್ಸಿದೊ. ವಾರ್ಡನ್,

"ನಿನ್ನೆನೇ ಯಾಕೆ ತಿಳ್ಸಿತಿಲ್ಲೆ?" ಎಂತ ಕೇಳ್ದೊ. "ಸಿಸ್ಟರ್ ಫಿಲೋಮಿನಾಂಗೆ ತಿಳ್ಸಿದ್ದೆ" ಎಂತ ನಾ ಹೇಳ್ದೆ.

"ಅವ್ಕೆ ಯಾಕೆ ತಿಳ್ಸಿದೆ? ನಂಗೆ ತಿಳ್ಸಕಾಗಿತ್ತ್." – ಎಂತ ವಾರ್ಡನ್ ಹೇಳ್ದೊ. ನಾ ಮಾತಾಡ್ತ್‌ಲ್ಲೆ. ವಾರ್ಡನ್ ನಮ್ಮ ಹಾಸ್ಟೆಲ್ ಲೀಡರ್, ಮೇರಿ ಕುರಿಯಾ ಕೋಸ್‌ನ ಕರ್ದ್, ನನ್ನ ಡಾಕ್ಟ್ರಲ್ಲಿಗೆ ಕರ್ಕಂಡ್ ಹೋಕೆ ಹೇಳ್ದೊ. ಮೇರಿ ಕುರಿಯಾ ಕೋಸ್ ಮತ್ತೆ ಅನ್ನ ಕುಟ್ಟಿ, ಎಂಬ ಗೂಡೆಗ ನನ್ನ ಎನ್.ಆರ್. ಮೊಹಲ್ಲಾಲಿ ಇದ್ದ ಡಾಕ್ಟರ್ ಹಕ್ಕಲೆ ಕರ್ಕಂಡ್ ಹೋದೊ. ಡಾಕ್ಟರ್ ಅಂಗಾಲ್‌ನ ಮುಡುನ ಕೊಯ್ದ್, ಬ್ಯಾಂಡೇಜ್ ಮಾಡ್ದೊ. ನಂಗೆ ತುಂಬಾ ಬೇನೆ ಆತ್. ಎರ್ಡ್ ದಿನ ಕೋಲೇಜಿಗೆ ಹೋತ್ಲೆ. ಆ ಸುದ್ದಿ ತಿಳ್ದ್, ಗೋಪಾಲಕೃಷ್ಣ ಬಂದ್ ನೋಡಿ ಹೋದೊ.

ಸೆಪ್ಟಂಬರ್ ಸಪ್ಲಿಮೆಂಟರಿ ಪರೀಕ್ಷೆಗೆ ಪೈಲೂರು ಪ್ರೇಮ ಹಣ ಕಟ್ಟಿತ್ತ್. ಅದ್ ಪಿ.ಯು.ಸಿ.ಲಿ ಪೈಲಾಗಿತ್ತ್. ಪರೀಕ್ಷೆಗೆ ಬಾಕನ ನಮ್ಮ ಹಾಸ್ಟೆಲಿಲಿ ನಿಂತತ್. ನಾನೂ ಐರಿನ್ ವಾಸ್ ನಮ್ಮ ಮಂಚಗಳ ಜೋಡಿಸಿ, ಅದರ ಮೊಲ್ಗಿಸಿಕೊಂಡೊ. ಆ ಮೇಲೆ ಅದ್ ಸಪ್ಲಿಮೆಂಟರಿಲಿ ಪಾಸಾಗಿ ಮೆಡಿಕಲ್ ಸೇರ್ತ್.

"ದಸರಾ ರಜೆ"

ಫಸ್ಟ್ ಟರ್ಮ್ ಎಕ್ಸಾಮ್ ಬರ್ದ್, ದಸಾರಾ ರಜೆ ಬಾಕಾಕನ ಊರಿಗೆ ಹೊರ್ಟ್ ನಿಂತೊ. ಎಲ್ಲಾ ಗೂಡೆಗಳಿಗೂ ಊರಿಗೆ ಹೋಗುವ ಸಂಭ್ರಮ. ಏರ್ ಬ್ಯಾಗ್‌ಲಿ ಅಗತ್ಯದ ಸಾಮಾನ್‌ಗಳ ತುಂಬಿಸಿ ಇಸಿದೊ. ಮೊರ್ದಿನ ಎಲ್ಲೋವೂ ದೇವರಾಜ ಮಾರ್ಕೆಟಿಗೆ ಹೋಗಿ, ಸುರುಗೆ ಒಂದೊಂದ್ ಬೆದ್ರ್‌ನ ಬುಟ್ಟಿಗಳ ತಕಂಡೊ. ಆಗ ಎಂಟ್ ಆಣೆಗೆ ಒಂದು ಬುಟ್ಟಿ ಸಿಗ್ತಿತ್ತ್. ಕೂಲಿ ಮಕ್ಕ ಓಡೋಡಿ ಬಂದ್ ನಮ್ಮ ಬುಟ್ಟಿ ತಕಂಡೊ. ಅವರ ಕರ್ಕಂಡ್ ನಾವು ಹಣ್ಣ್ ಮಾರುವ ಜಾಗೆಗೆ ಹೋದೊ. ಮಾಯ್ನ ಹಣ್ಣ್, ಮೂಸುಂಬಿ, ದ್ರಾಕ್ಷೆ, ದಾಳಿಂಬ, ಕಿತ್ತಳೆ – ಎಂತ ಅವ್ಕವ್ಕೆ ಬೇಕಾದರ ತಕಂಡೊ. ಮೈಸೂರು ವಿಳ್ಯದೆಲೆ, ಬಣ್ಣ ಕಟ್ಟಿದ ಅಡ್ಕೆ, ಮೈಸೂರು ಮಲ್ಲಿಗೆ ಹೂ– ಎಲ್ಲಾ ತಕಂಡ್, ಬುಟ್ಟಿ ತುಂಬಿಕಾಕನ, ಬಸ್ ಸ್ಟೇಂಡಿಗೆ ಬಂದೊ. ಆಗ ದೇವರಾಜ್ ಮಾರ್ಕೆಟ್ ಹಕ್ಕಲೆ ಬಸ್ ಸ್ಟೇಂಡ್ ಇತ್ತ್. ನಮ್ಮ ನಮ್ಮ ಬಸ್ ಹುಡ್ಕಿ ಹತ್ತಿದೊ. ಬುಟ್ಟಿ ಹೊತ್ತ ಹೈದಂಗ ಬುಟ್ಟಿನ ನಮ್ಮ, ನಮ್ಮ ಸೀಟ್‌ನ ಹಕ್ಕಲೆ

ಇಸಿದೊ. ಆಗ ಅವ್ಕೆ ನಾವು ಎಂಟಾಣೆ ಕೂಲಿ ಕೊಡ್ತಿದ್ದೊ. ಅವು ಮಾತಾಡದೆ ತಕಂಡೋಗ್ತಿದ್ದೊ. ಚರ್ಚ್ ಮಾಡ್ದ ಹೈದಂಗಳಿಗೆ ನಾಕಾಣೆ ಹೆಚ್ಚಿಗೆ ಕೊಡ್ತಿದ್ದೊ. ಬಸ್ ಹೊರ್ಡ್ತಿಕಾಕನ ಒಬ್ಬಂಗೆ ಇನ್ನೊಬ್ಬ ಬೈ, ಬೈ ಹೇಳ್ತಿದ್ದೊ.

ನಂಗಂತೂ ಊರಿಗೆ ಹೋದೂಂತೇಳ್ರೆ ತುಂಬಾ ಕುಸಿ. ಯಾಗ ಅವ್ವನ ನೋಡ್ನೇ? ತಮ್ಮಂದರ, ಅಣ್ಣನ ಮಕ್ಕಳ ನೋಡ್ನೇಂತ ಆತುರ ಆಗ್ತಿತ್ತ್. ಅಣ್ಣನ ಮಕ್ಕಳಿಗಾಗಿ ಚಾಕ್ಲೆಟ್ ಡೊಬ್ಬಿನ ತಕಂಡಿದ್ದೆ. ಬಳೆ, ರಿಬ್ಬನ್, ಗಂಧದ ಮರಲಿ ಮಾಡ್ದ ಪೆನ್ಸಿಲ್ ಒಂದು ಡಜನ್, ತಕಂಡಿದ್ದೆ. ದಾರಿ ಇಡೀ ತಲೆ ತುಂಬಾ ಊರೇ ತುಂಬಿಕಂಡಿತ್ತ್. ಸುಳ್ಯ ಹಕ್ಕಲೆ ಬಾಕಾಕನ ಎದೆ ಹಾರ್ತಿತ್ತ್. ಬಸ್ಸ್ ಸುಳ್ಯ ಬಸ್‌ಸ್ಟೇಂಡ್‌ಲಿ ನಿತ್ತ ಕೂಡ್ಲೇ ಬಸ್ಸ್‌ಂದ ಇಳ್ದೆ. ಆಗ ನಮ್ಮ ಅಂಗ್ಡಿನ ಜಗಲಿಲಿ ನಿಂತರೆ ಬಸ್ಸ್‌ಂದ ಇಳ್ಯೊವು ಕಾಂಬತಿದ್ದೊ. ಅಣ್ಣ ಕೆಲ್ಸದ ಹೈದಂಗಳ ಕಳ್ಸಿತ್. ಅವು ನನ್ನ ಲಗ್ಗೇಜ್ ಹೊತ್ತ್‌ಕಂಡ್ ಹೋದೊ.

ನನ್ನ ನೋಡಿ ಎಲ್ಲೋವ್ಕೂ ಕುಸಿನೊ ಕುಸಿ. ಅಣ್ಣ ,ಅತ್ತಿಗೆ, ಮಕ್ಕಳ್, ತಮ್ಮಂದರಿಗೆ ಸಂತೋಷನೋ ಸಂತೋಷ. ಎಲ್ಲೋವ್ಕೂ ಹೂ, ಹಣ್ಣ್ ಹಂಚಿ, ಅಣ್ಣನ ಮಕ್ಕಳಿಗೆ ಬಳೆ, ರಿಬ್ಬನ್, ಚಾಕ್ಲೆಟ್ ಡಬ್ಬ ಕೊಟ್ಟೆ. ಶೀಲನೊಟ್ಟಿಗೆ, “ಈ ಚಾಕ್ಲೆಟ್‌ನ ಎಲ್ಲೋವು ತಿಂದ್, ಇದರ ಡಬ್ಬಿ ಮಾತ್ರಾ ನಂಗೆ ಕೊಡೊಕು.” ಎಂತ ಹೇಳ್ದೆ.

ಅದ್ ತಲೆ ಹಂದಾಡ್ಸಿ ಒಳಗೆ ತಕೊಂಡೋತ್. ಮಕ್ಕ ಎಲ್ಲಾ ಅದರ ಹಿಂದೆ ಓಡ್ದೊ. ಆ ಡಬ್ಬಿಲಿ ಪೊರ್ಲುನ ರಾಧಾಕೃಷ್ಣರ ಫೋಟೋ ಇತ್ತ್. ಆ ಚಿತ್ರನ ನೋಡಿನೇ ನಾ ಅದರ ದುಡ್ಡು ಕೊಟ್ಟ್ ತಂದೆ. ಎಷ್ಟೋ ಸಮಯದವರೆಗೆ ಆ ಡಬ್ಬಿ ನನ್ನ ಹಕ್ಕಲೆ ಇತ್ತ್. ಮಕ್ಕಳ ಹಿಗ್ಗ್, ಹೇಳಿಕೆ ಬೊತ್ತ್. ‘ಮೈಸೂರ್ ಆಂಟಿ, ಮೈಸೂರ್ ಆಂಟಿ– ಎಂತ ನನ್ನ ಹಿಂದೆ ಮುಂದೆ ಸುತ್ತ್‌ತಿದ್ದೊ. ದಿನಾ ಅವರ ಕುದ್ರಿಸಿಕಂಡ್ ಮೈಸೂರ್‌ನ ವರ್ಣನೆ ಮಾಡ್ತಿದ್ದೆ. ನಾ ಬಂದ ಸುದ್ದಿ ಕೇಳಿ, ಸುಳ್ಯದ ನನ್ನ ಜೋಸ್ತಿ ಗೂಡೆಗ ಎಲ್ಲಾ ಬಂದ್ ನನ್ನ ನೋಡಿ ಮಾತಾಡ್ಸಿಕಂಡ್ ಹೋದೊ. ಅವ್ಕೆಲ್ಲಾ ಒಂದೊಂದು ಗಂಧದ ಮರಂದ ಮಾಡ್ದ ಪೆನ್ಸಿಲ್ ಕೊಟ್ಟೆ. ಅವು ಅದರ ಮೂಸಿ, ಹಾ, ಎಷ್ಟ್ ಪೊರ್ಮಳ ಬಂದದೇಂತ ಹೇಳ್ದೊ. ರಜೆ ಹೇಂಗೆ ಕಳ್ತ್‌ಂತ ಗೊತ್ತಾತ್ಲೆ. ಅದರೆಡೆಲಿ ದೊಡ್ಡಕ್ಕನ ನೋಡಿಕೆ ತಮ್ಮನ ಕರ್ಕಂಡ್ ಕನಕಮಜಲಿಗೆ ಹೋದೆ. ಅಕ್ಕಂಗೆ ಬಾಳ ಕುಸಿ ಆತ್. ಕೋಲೇಜ್ ಕಲ್ಯವ ತಂಗೆಂತ ಅದ್ಕೆ ಬಾಳ ಹೆಮ್ಮೆ. ಅಲ್ಲಿಂದ ಬಾಕನ ಅಕ್ಕ ನಂಗೆ ಸೀರೆ ತೆಗ್ಯಕೇಂತ ಇಪ್ಪತ್ತೈದ್ ರೂಪಾಯಿ ಕೊಟ್ಟ್ ಕಳ್ಸಿತ್. ಅದರ್‌ಂದ ಹದ್ನೈದ್ ರೂಪ್ಯಾ ಕೊಟ್ಟ್ ಒಂದು ಡೋರಿಯಾ ಸಿಲ್ಕ್ ಸೀರೆ ತೆಗ್ದೆ. ಉಳ್ದದರ ತೆಗ್ದಿಸಿದೆ. ರಜೆ ಹೇಂಗೆ ತೀರ್ತ್ ಗೊತ್ತಾತ್ಲೆ. ಹೊರ್ಡುವ ದಿನ ಬಾಕನ ಮೊರ್ಡಿಕೆ ಬಂದಾಂಗಾತ್. ಮಕ್ಕ ಎಲ್ಲಾ ಮೋರೆ ಚಪ್ಪೆ ಮಾಡ್ದೊ. ಅವ್ಕೆಲ್ಲಾ ಪೆಪ್ರ ಮಿಠಾಯಿ ತಿಂಬಕೆ ನಾಕಾಣೆ ಕೊಟ್ಟೆ.

" ದಸರಾ ವಸ್ತು ಪ್ರದರ್ಶನ"

ರಜೆ ಮುಗ್ದ್ ಹಾಸ್ಟೆಲಿಗೆ ಬಾಕಾಕನ ಎಲ್ಲೋವೂ ಊರ್‌ಂದ ಬಂದ ಸಂಭ್ರಮಲಿದ್ದೊ. ಮೈಸೂರ್‌ಲಿ ಆಗ ನವರಾತ್ರಿ ಮುಗ್ದರೂ, ಅದರ ಸಂಭ್ರಮ ಮುಗ್ದಲ್ಲೆ. ದಸರಾ ಎಗ್ಜಿಬಿಷನ್ ಇರ್ತಿತ್ತ್. ಆಗ ದಸರಾ ವಸ್ತು ಪ್ರದರ್ಶನ ರೇಲ್ವೇ ಸ್ಟೇಶನ್ ಹಕ್ಕಲೆ ನಡ್ಯತಿತ್ತ್. ಒಂದು ಐತ್ವಾರ ನಾವು ಹಾಸ್ಟೆಲ್ ಮಕ್ಕ ದಸರಾ ವಸ್ತು ಪ್ರದರ್ಶನ ನೋಡಿಕೆ ಹೋದೊ. ಊರ್‌ಂದ ಬಾಕನ ಎಲ್ಲೋವೂ ದುಡ್ಡು ತಂದಿದ್ದೊ. ಹಾಂಗಾಗಿ ಧಾರಾಳ ಖರ್ಚ್ ಮಾಡ್ದೊ. ಎಗ್ಜಿಬಿಷನ್‌ಲಿ ನೋಡ್ದೇನ್? ಅದೇ ಒಂದು ಸಣ್ಣ ಮೈಸೂರು ಆಗಿತ್ತ್. ಯಾವುದು ನೋಡ್ದು ಯಾವ್ದು ಬುಡ್ದು ಗೊತ್ತಾತ್ಲೆ. ಎಲ್ಲೋವೂ ಅವ್ಕವ್ಕೆ ಬೇಕಾದರ ತಕಂಡೊ. ನಾ ಒಂದು ಜತೆ ಚಪ್ಲಿ ಮತ್ತೆ ಒಂದು ಪರ್ಸ್ ತಕಂಡೆ. ನಮ್ಮ ಕೋಲೇಜ್‌ನವರ ಸ್ಟಾಲ್ ಇತ್ತ್. ಅಲ್ಲಿ ಗೋಲಕ ಇಟ್ಟಿದ್ದೊ. ಎಲ್ಲೋವು ಅದ್ಕೆ ಒಂದು ರೂಪ್ಯಾ, ಎಂಟ್ ಆಣೇಂತ ಹಾಕಿಕನ ನಾನೂ ಒಂದು ರುಪ್ಯಾ ಹಾಕಿದೆ.

ಒಂದು ಕಡೆ ಎರ್ಡ್ ಕೈ ಇಲ್ಲದ ಗೂಡೆ ಕಾಲ್‌ಂದಳೇ ಎಲ್ಲಾ ಕೆಲ್ಸ ಮಾಡ್ತಿತ್ತ್. ಸೂಜಿಗೆ ನೂಲು ಹಾಕುದು, ತಲೆ ಬಾಚುದು, ಬೊಟ್ಟು ಇಸುದು, ಚಾ ಕುಡ್ಯೋದು, ಎಲ್ಲದರ ಕಾಲ್ಗಳ ಮೂಲಕ ಮಾಡ್ತಿತ್ತ್. ನೋಡಿ ಆಶ್ಚರ್ಯ ಆತ್. ಮತ್ತೊಂದು ಕಡೆ ಒಂದು ರಂಗ ಮಂಟಪ ಇತ್ತ್. ಗಾಯನ ಕಛೇರಿ ನಡ್ಯತಿತ್ತ್. ನಾವು ಬೇಗ, ಬೇಗ ಅದರೆಲ್ಲಾ ನೋಡ್ದೊ. ಚಾಮುಂಡೇಶ್ವರಿ ಬೆಟ್ಟ, ಮೈಸೂರು ಅರಮನೆಗ, ರಾಜ ಬೀದಿಗ, ಕನ್ನಂಬಾಡಿ ಕಟ್ಟೆ, ಇದರ ಮಾದರಿಗಳ ಮಾಡಿ ಇಸಿದ್ದೊ. ಜನಂಗೆಲ್ಲ ಗುಂಪು ಗುಂಪಾಗಿ ಬಂದ್ ಇದರೆಲ್ಲ ನೋಡ್ತಿದ್ದೊ. ಮತ್ತೊಂದು ಕಡೆ ವಿಮಾನ ನಿಲ್ದಾಣ, ಮಿನಿ ವಿಮಾನ ಇತ್ತ್. ನಾವು ಅದರ ಹತ್ತಿ, ಇಳ್ದ್ ನೋಡ್ದೊ. ಕೆಲವು ಪಟ ತೆಗ್ಯವ ಸ್ಟುಡಿಯೋಗ, ಆಗಂದಾಗ ಪಟ ತೆಗ್ದ್ ಕೊಡ್ತಿದ್ದೊ. ತರತರದ ಬಟ್ಟೆ ಅಂಗ್ಗಿಗ, ಬಳೆ ಅಂಗ್ಡಿಗ, ಗೂಡೆಗಳಿಗೆ ಬೇಕಾದ ಅಲಂಕಾರದ ಸಾಮಾನ್‌ಗ, ಬೇಕಾದಸ್ಟ್ ಅಲ್ಲಿ ಇರ್ತಿತ್ತ್. ಪ್ರತಿ ಕಡೆ ನೋಡಿಕೆ ಹೋಕಾಕನ ಬೇರೆ ಬೇರೆ ಟಿಕೆಟ್ ತೆಗ್ಯಕಾಗಿತ್ತ್. ಎಲ್ಲದರ ನೋಡಿ ಸುಸ್ತಾಗಿ ನಾವು ಹಾಸ್ಟೆಲಿಗೆ ಬಂದೊ.

ಕಾಲೇಜ್ ಜೋಸ್ತಿ ಗೂಡೆಗ.

ನಂಗೆ ತುಂಬಾ ಹಕ್ಕಲೆನ ಜೋಸ್ತಿ ಗೂಡೆಗ ಬಿ.ಯಸ್. ಪಾರ್ವತಿ ಮತ್ತೆ ಎಮ್.ಎ ಕಾವೇರಮ್ಮ. ಅದರ್‌ಂದ ಮೇಲೆ ರಾಧಾಂತ ಒಂದು ಗೂಡೆ ಇತ್ತ್. ಇವೆಲ್ಲಾ ಕೊಡಗರ್. ಪಿ.ಯು.ಸಿ.ಲಿ ಕಲ್ಯತಿದ್ದೊ. ಬಿ.ಯಸ್. ಪಾರ್ವತಿ ಮಾತ್ರಾ ಸಯನ್ಸ್ ತಕಂಡಿತ್ತ್. ಉಳ್ದೊವೆಲ್ಲಾ ಆರ್ಟ್ಸ್ ಬಿ.ಯಸ್. ಪಾರ್ವತಿ ವಿರಾಜಪೇಟೆಲಿ ಕಾನ್ವೆಂಟ್‌ಲಿ ಓದಿದವ್ಳು. ಇಂಗ್ಲಿಷ್ ಮೀಡಿಯಮ್‌ಂದ ಬಂದವ್ಳು. ಇಂಗ್ಲಿಷ್ ಸರಾಗ ಮಾತಾಡ್ತಿತ್ತ್. ನಂಗೆ ಪ್ರತಿಯೊಂದು ಪಾಠನ ಸಣ್ಣದಾಗಿ ಇಂಗ್ಲಿಷ್‌ಲಿ ಬರ್ಯಕೆ ಹೇಳಿ ಕೊಡ್ತಿತ್ತ್. ಅದರ್‌ಂದ ನಾ ತುಂಬಾ ಕಲ್ತೆ. ದಿನಾ ದಾರಿಲಿ ಬಾಕಾಕನ ಅದ್ ನಂಗೆ

ಇಂಗ್ಲಿಷ್ ಪಾಠ ಮಾಡ್ತಿತ್ತ್. ಅದ್ಕೆ ನಾಂತೇಳ್ರೆ ಬಾಳ ಪ್ರೀತಿ. ನನ್ನ ಕ್ಯಾಂಟೀನ್‌ಗೆ ಕರ್‍ಯತಿತ್ತ್. ಅದರ ಅಪ್ಪ ಕಾಫಿ ಪ್ಲೇಂಟರ್. ಹಾಸ್ಟೆಲಿಲಿ ಕೊಡ್ದು ಸಾಕಾತ್ಲರೆ ಕ್ಯಾಂಟಿನಿಲಿ ತಿನ್ನ್‌ಂತ ಅದ್ಕೆ ಮನೆಂದ ಧಾರಾಳ ದುಡ್ಡು ಕೊಡ್ತಿದ್ದೊ. ಅದ್ಕೆ ಒಟ್ಟಿಗೆ ಹೋಕೆ ಜತೆ ಬೇಕಾಗಿತ್ತ್. ಅದ್‌ಕ್ಕಾಗಿ ಅದ್ ನನ್ನ ಕರ್‍ಯತಿತ್ತ್. ಕೋಲೇಜ್ ಕ್ಯಾಂಪಸ್‌ಲಿ ಕ್ಯಾಂಟೀನ್ ಇತ್ತ್. ಗೂಡೆಗಳಿಗೆ ಕುದ್‌ಕಂಬಕ್ಕೆ ಬೇರೆ ಏರ್ಪಾಡ್ ಮಾಡಿದ್ದೊ. ಅದ್ ನಂಗೆ ತುಂಬಾ ಬುದ್ಧಿವಾದ ಹೇಳ್ತಿತ್ತ್. ' ಹೈದಂಗ ಚುಡಾಯ್ಸಿರೆ ಮಾತಾಡದೆ ನೋಡಿನೂ, ನೋಡದಂಗೆ ಮುಂದೆ ಹೋಕು, ಉತ್ತರ ಕೊಡಿಕೆ ಹೋಗ್ಬಡ" ಎಂತ ಎಲ್ಲಾ ಬುದ್ದಿ ಹೇಳ್ತಿತ್ತ್. ಅದ್ ಪ್ರಾಯಲಿ ನನ್ನಂದ ಸಣ್ಣದ್. ವ್ಯವಹಾರಲಿ ಬುದ್ಧಿವಂತೆ. ಅದರ ಅಕ್ಕ ಬಿ.ಯಸ್. ಕೃತಿಕಾ ಫೈನಲ್ ಬಿ.ಯಸ್ಸಿಲಿ ಓದ್ತಿತ್ತ್. ಅದರ ಪಾರ್ವತಿ 'ರಾಣಿಕ್ಯ' (ರಾಣಿ ಅಕ್ಕಯ್ಯ) ಎಂದ್ ಕರ್‍ಯತಿತ್ತ್. ಅದರಾಂಗೆ ನಾನೂ ಕೃತಿಕನ ಕರ್‍ಯತಿದ್ದೆ. ಕೋಲೇಜಿಲಿ ಗೂಡೆಗ ಹೇಂಗಿರೊಕೂಂತ ಅದರ ಅಕ್ಕ ತಂಗೆಗೆ ಹೇಳಿಕೊಡ್ತಿತ್ತ್. ತಂಗೆ ಇದರೆಲ್ಲಾ ನಂಗೆ ಕಲ್ಸ್‌ತಿತ್ತ್. ಬೊಳ್ಪುಗೆ ನಾವ್ಗೆ ಕೆಲವು ಸಮಯ ಪಾಠ ಇರ್‍ತಿತ್ಲೆ. ಆ ಸಮಯಲಿ ನನ್ನ ಪಾರ್ವತಿ ಕ್ಯಾಂಟಿನಿಗೆ ಕರ್‍ಯತಿತ್ತ್. ನಾಕಾಣೆ ಇದ್ದರೆ ನಾವ್ಗಿಬ್ಬೊರಿಗೆ ಸಾಕಾಗ್ತಿತ್ತ್. ಎರ್ಡ್ ಉದ್ದಿನ ವಡೆ, ಒಂದು ಗ್ಲಾಸ್ ಕಾಫಿ ಸಿಕ್ತಿತ್ತ್. ಆದರೆ ನಂಗೆ ತುಂಬಾ ಸಂಕೋಚ. ಅದರ್‌ಂದ ಹಣ ಕರ್ಚ್ ಮಾಡ್ಸಿಕೆ ನನ್ನ ಮನ್ಸ್ ಒಪ್ಪಿತ್ಲೆ. ಕಡೆಗೆ ನಾವಿಬ್ಬೊರು ಒಂದು ಒಪ್ಪಂದ ಮಾಡಿಕೊಂಡೊ. ಒಂದು ದಿನ ಅದ್ ದುಡ್ಡು ಕೊಟ್ಟರೆ, ಇನ್ನೊಂದು ದಿನ ನಾ ಕೊಡ್ದೂಂತ ಅದ್ಕೆ ಅದ್ ಒಪ್ಪಿತ್. ನಮ್ಮೊಟ್ಟಿಗೆ ಕೆಲವು ಸರ್ತಿ ಎಮ್.ಎ ಕಾವೇರಮ್ಮ, ರಾಧ, ಮತ್ತೆ ಲೀಲನ ಕರ್ಕಂಡ್ ಹೋಗ್ತಿದ್ದೊ.

ಎಂ.ಎ ಕಾವೇರಮ್ಮ ಮತ್ತೆ ನಾ ತುಂಬಾ ಹಚ್ಚಿಕೊಂಡಿದ್ದೊ. ನಾವಿಬ್ಬೊರು ಹಕ್ಕಲೆ ಹಕ್ಕಲೆ ಕುದ್‌ರ್‍ತಿದ್ದೊ. ಅದ್ ಯಾಗೋಳೂ ಕೊಡ್ಗ್‌ನ ಸಾಂಪ್ರಾದಾಯಿಕ ಉಡ್ಗೆ, ಗೇಂಟಿ ಹಾಕಿ, ಹಿಂದೆ ನೆರಿಗೆನ ಸೀರೆ ಉಡ್ತಿತ್ತ್. ಉದ್ದ ಕೈನ ಜಾಕೆಟ್ ಹಾಕಿ, ತಲೆಗೆ ಚೌಕುಳಿ ಎಲಸ್ತ್ರ ಕಟ್ತಿತ್ತ್. ಅದರ ಮನೆಲಿ ಅದರ ಅಜ್ಜಿ ಇದ್ದೊ. ಅವು ಬೇರೆ ಡ್ರೆಸ್ ಮಾಡಿಕೆ ಬುಡ್ತಿತ್ಲೆ ಗಡ. ಅದ್ಕೆ ಮಾತ್ ತುಂಬಾ ಕಮ್ಮಿ. ನಮ್ಮ ಇಬ್ಬೊರ ಹೆಸ್ರ್ ಒಂದೇ ಆದ ಕಾರ್ನ, ನಾವಿಬ್ಬೊರು ಬೇಗ ಹೊಂದಿಕೊಂಡೊ. ಇನ್ನೊಬ್ಬು ರಾಧ. ಅದರ ಹೆಸ್ರ್‌ನೂ ಕಾವೇರಮ್ಮ. ಆದರೆ ಎಲ್ಲೋವು ಅದರ ರಾಧಾಂತ ಕರ್‍ಯತಿದ್ದೊ. ನಾವು ದಿನಾ ಹಾಸ್ಟೆಲ್‌ಂದ ಕಾಲೇಜಿಗೆ ಬಾಕಾಕನ ದಾರಿ ಪಕ್ಕದ ಮನೆಲಿದ್ದ ಅದ್ ಕಾದ್‌ಕಂಡಿದ್ದ್, ನಮ್ಮೊಟ್ಟಿಗೇ ಕೋಲೇಜಿಗೆ ಬಾತಿತ್ತ್. ನಾವು ಮೂರು ಜನ ಒಟ್ಟಿಗೆ ಕ್ಲಾಸ್‌ಲಿ ಕುದ್‌ರ್‍ತಿದ್ದೊ. ಎಲ್ಲಾ ಕಡೆ ಒಟ್ಟಿಗೆನೇ ಹೋಗ್ತಿದ್ದೊ. ರಾಧಾ ತುಂಬಾ ನಾಚಿಕೆನ ಗೂಡೆ. ಯಾರೊಟ್ಟಿಗೂ ಸೇರ್‍ತಿತ್ಲೆ. ದೊಡ್ಡ ಗೂಡೆಗ ಮಾತಾಡ್ಸಿರೆ ಅದ್ ಪುಸ್ತಕಲಿ ಮೋರೆ ಮುಚ್ಚಿಕಂಬತಿತ್ತ್.

ವೊರ್ಸದ ಅಕೆರಿಗೆ ನಾವು ಒಬ್ಬರ್‌ಂದೊಬ್ಬ, ಬುಟ್ಟ್ ಹೋಕಾಕನ, ನನ್ನನೂ

ಬಿ.ಯಸ್. ಪಾರ್ವತಿನನೂ ಎಂ.ಎ ಕಾವೇರಮ್ಮ ಅದರ ಮನೆಗೆ ಕರ್ದ್ ಊಟ ಕೊಟ್ಟತ್. ಕಡುಂಬಿಟ್ಟ್, ಪುಟ್ಟು, ಮಾಸದ ಸಾರ್ ತಿಂದ್ ಬಂದೊ. ಅದ್ಕೆ ನಾವಿಬ್ರೊರು ಕೂಡಿ ನಮ್ಮ ನೆಂಪಿಗೆ ತಾವರೆ ಆಕಾರದ ಕುಂಕುಮ ಕರ್ಡಿಗೆ ಉಡ್ಗೊರೆ ಕೊಟ್ಟೊ. ರಾಧಾ ನಮ್ಮ ಅದರ ಮನೆಗೆ ಕರ್ತಿಲ್ಲೆ. ಕಾವೇರಮ್ಮ ರಜೆ ಸಿಕ್ಕಿಕಾಕನೆಲ್ಲಾ ನಂಗೆ ಕಾಗ್ದ ಬರ್‍ಯತಿತ್ತ್. ಪಾರ್ವತಿನೂ ಕಾಗ್ದ ಬರ್‍ಯತಿತ್ತ್. ಪಾರ್ವತಿನೂ, ನಾನೂ ಒಬ್ಬರ್‌ಂದೊಬ್ಬ ನೆಂಪು ಕಾಣಿಕೆಗಳ ಕೊಟ್ಟ್‌ಕೊಂಡೊ. ನಾ ಮೈಸೂರ್‍ನ ಪಟ್ಟು ಬ್ರದರ್ಸ್ ಎಂಬಲ್ಲಿ ಒಂದು ಕೋಟ್ ಹೊಲ್ಯಕೆ ಹಾಕಿದ್ದೆ. ಊರ್‌ಗೆ ಹೋಕಾಕನ ಅದ್ ಹೊಲ್ದ್ ಸಿಕ್ಕತ್ಲೆ. ಆಗ ಪಾರ್ವತಿ,

"ನಾವು ಬೇಸಗೆ ರಜೆಲಿ ಧರ್ಮಸ್ಥಳಕ್ಕೆ ಹೋದವೆ. ಆಗ ನಿಂಗೆ ಅದರ ತಂದ್ ಕೊಟ್ಟನೆ" ಎಂತ ಹೇಳ್ತ್. ನಾ ಅದ್ಕೆ, ಅದರ ಹೊಲ್ಗೆ ಚಾರ್ಜ್ ಕೊಟ್ಟ್ ಊರಿಗೆ ಬಂದೆ. ಅದ್, ಅದರ ಅಕ್ಕಂದರ್, ಅದರ ಅಪ್ಪನೊಟ್ಟಿಗೆ ಧರ್ಮಸ್ಥಳಕ್ಕೆ ಹೋಕಾಕನ ನಮ್ಮಲ್ಲಿಗೆ ಬಂದ್ ಕೋಟುನ ಕೊಟ್ಟ್ ಹೋದೊ. ನಂಗೆ ಮೊದುವೆ ಆಗಿ ಒಂದು ಕೂಸು ಆದ ಮೇಲೆ ಪಾರ್ವತಿ ಮತ್ತೆ ಕೃತಿಕಾ ಅದರ ಅಪ್ಪನೊಟ್ಟಿಗೆ ಧರ್ಮಸ್ಥಳಕ್ಕೆ ಹೋಕಾಕನ, ಬಂದ್ ನನ್ನ ನೋಡಿ ಹೋದೊ. ನಂಗೆ ಬಾಳ ಕುಸಿ ಆತ್. ಧರ್ಮಸ್ಥಳಂದ ಬಾಕಾಕನ ಬರಕೂಂತ ಹೇಳ್ದೆ. ಅವು ಹಿಂತಿರ್‍ಗಿ ಬಾಕಾಕನ ಅವ್ಕೆ ಗಡ್ದ್‌ನ ಮಾಸದ ಅಡ್ಗೆ ಮಾಡಿ ಹಾಕಿ ಉಪಚಾರ ಮಾಡಿ ಕಳ್ಸಿದೆ. ಈಗ ಅದೆಲ್ಲಾ ನೆಂಪು ಮಾತ್ರ. ಅದರ್‌ಂದ ಮೇಲೆ ನಂಗೆ ಅವರ ಭೇಟಿ ಆತ್ಲೆ. ನಾನೂ ನನ್ನ ತಾಪತ್ರಯಲಿ ಮುಣಿಂಗಿ ಹೋದೆ.

ಕೊಲೇಜಿನ ಅಕೆರಿನ ದಿನ

ಕೋಲೇಜಿಲಿ ಯಾಗೋಳು ನಡಿವ ಹಾಂಗೆ ಪಾಠಗ ನಡ್ಯತಿದ್ದೊ. ಕನ್ನಡಲಿ ಎಸ್.ಎಸ್.ಎಲ್.ಸಿ.ಲಿ ಫಸ್ಟ್ ಕ್ಲಾಸ್ ಮಾರ್ಕ್ಸ್ ಸಿಕ್ಕಿದವ್ಕೆ ಯಾರೋ ಒಬ್ಬ ಪುಣ್ಯಾತ್ಮರ್ ಸ್ಕಾಲರ್ ಶಿಪ್ ಕೊಟ್ಟವೇಂತ ನೋಟೀಸ್ ಬೋರ್ಡ್‌ಲಿ ಹಾಕಿದ್ದೊ. ನಾ ಅದರ ನೋಡಿ ಅರ್ಜಿ ಹಾಕಿದೆ. ನಂಗೆ ತಿಂಗಳಿಗೆ ಹತ್ತ್ ರೂಪ್ಯಾನಾಂಗೆ ಸ್ಕಾಲರ್ ಶಿಪ್ ಸಿಕ್ಕಿತ್. ಆಗ ಐರಿನ್ ವಾಸ್ ಹೇಳ್ತ್,

" ನಿಂಗೆ ಕೊಡ್ವ ಬದ್ಲ್ ಯಾರಿಗಾದರೂ ಪಾಪದ ಗೂಡೆಗಳಿಗೆ ಕೊಡಕಾಗಿತ್ತ್" ಎಂತ.

ಫಸ್ಟ್ ಟರ್ಮ್ ಸೆಕೆಂಡ್ ಟರ್ಮ್‌ಲಿ ನಂಗೆ ಸೆಕೆಂಡ್ ಕ್ಲಾಸ್ ಮಾರ್ಕ್‌ಗ ಬಂದೊ. ಕನ್ನಡ ಮಿಡಿಯಂದ ಹೋದೊವು ಇಷ್ಟ್ ತೆಗ್ಯೊದು ದೊಡ್ದ್‌ಂತ ಎಲ್ಲೋವು ಹೇಳ್ದೊ. ನಾ ಆಗ ಇಂಗ್ಲಿಷ್ ಸರಾಗ ಮಾತಾಡ್ಕೆ ಕಲ್ತೆ. ಹಾಸ್ಟೆಲಿಲಿ ಕಡ್ಡಾಯವಾಗಿ ಇಂಗ್ಲಿಷ್‌ಲಿ ಮಾತಾಡಕಾಗಿತ್ತ್. ಕೆಲ್ಸದೊವುನೂ ಇಂಗ್ಲಿಷ್‌ಲಿನೇ ಮಾತಾಡ್ತಿದ್ದೊ. ನಾವೂ ಅಪ್ಪಿ, ಇಪ್ಪಿ ಇಂಗ್ಲಿಷಿಲಿ ಮಾತಾಡ್ಕೆ ಸುರು ಮಾಡ್ದೊ. ಮತ್ತೆ ಮತ್ತೆ ಸರಿಯಾಗಿ ಕಲ್ತೋ. ಅರ್ಧ ವೊರ್ಸದ ಪರೀಕ್ಷೆ ಮುಗ್ಸಿ ಊರಿಗೆ

ಹೋದ್ರೊ. ಈ ಸರ್ತಿ ರಜೆ ಮುಗ್ಸಿ ಊರ್‌ಂದ ಹೊರ್ಡಿಕಾಕನ ನಂಗೆ ಅಷ್ಟೊಂದು ಬೇಜಾರ ಆತ್ಲೆ. ಕ್ರಿಸ್‌ಮಸ್ ರಜೆ ಮುಗ್ದ್ ಕೋಲೇಜು ಸುರು ಆಕಾಕನ ಎಲ್ಲಾ ಸಮಾರಂಭಗಳ ಮಾಡಿಕೆ ಸುರು ಮಾಡ್ದೊ. ಎಲ್ಲಾ ವಿಭಾಗದೊವು ಬೇರೆ ಬೇರೆ ಸಮಾರಂಭ ಮಾಡ್ತಿದ್ದೊ.

ಸಮಾರಂಭಗಳ ಭರಾಟೆ ಮುಗ್ದ ಮೇಲೆ ನಾವ್ಗೆ ಪಬ್ಲಿಕ್ ಪರೀಕ್ಷೆನ ಚಿಂತೆ ಸುರಾತ್. ಯಾಗೋಳೂ ಓದು, ಓದು– ನಾವ್ಗಾಗಿ ಇಷ್ಟೆಲ್ಲಾ ಖರ್ಚ್ ಮಾಡ್ದ ಹೆತ್ತೋವು ತಲೆ ಬೊಗ್ಗಿಸಿಕೆ ಆಗದಲೆ? ಅದಕ್ಕಾಗಿ ಹಟ ಕಟ್ಟಿ ಓದಿಕೆ ಸುರು ಮಾಡ್ದೊ. ನಂಗೆ ಪಾಸಾವ ಭರವಸೆ ಇತ್ತ್. ಆಗ ಪಿ.ಯು.ಸಿ ಒಂದೇ ವೊರ್ಸದ ಕೋರ್ಸ್. ಪಬ್ಲಿಕ್ ಪರೀಕ್ಷೆ. ನಂಗೆ ಒಳ್ಳೊಳ್ಳೆ ಗೈಡ್‌ಗಳ ನನ್ನ ಭಾವ ಗೋಪಾಲಕೃಷ್ಣ ತಂದ್ ಕೊಟ್ಟೊ. ಇದರೆಡೆಲಿ ಭಾವಂಗೆ ನನ್ನ ಮೊದುವೆ ಆಗುವ ಬಯಕೆ ಒಳಗೊಳಗೆ ಇತ್ತ್. ಒಂದು ದಿನ ಅದರ ನನ್ನಲ್ಲಿ ಬಾಯ್ಬುಟ್ಟು ಕೇಳಿಯೇ ಬುಟ್ಟೊ. ಸಣ್ಣದಿರಿಕನನೇ ನನ್ನ ಅಪ್ಪನೂ, ಅವರ ಅವರ ಅಪ್ಪನೂ ತುಂಬಾ ಅನ್ಯೋನ್ಯತೆಂದ ಇದ್ದ ಕಾರ್ಣ. ಅವರ ಅಪ್ಪಂಗೂ ನನ್ನ ಸೊಸೆ ಆಗಿ ತರೊಕೂಂತ ಇರಾದೆ ಇತ್ತ್. ಆದರೆ ಕೆಲವು ಜನರ ಪಿತೂರಿಂದ, ಅಕೆರಿಗೆ ನಮ್ಮ ಮೊದ್ವೆಗೆ ಮಾಂವ ವಿರೋಧ ಮಾಡ್ದೊ. ಗೋಪಾಲಕೃಷ್ಣ ಮಾತ್ರಾ ಹಟ ಹಿಡ್ದ್, ನಾ ಪ್ರೀತಿ ಮಾಡ್ದ ಗೂಡೆನ ಕೈ ಬುಡಿಕಿಲ್ಲೆಂತ, ಅಕೆರಿಗೂ ನನ್ನ ಮೊದ್ವೆ ಆದೊ.

ನಂಗೆ ತುಂಬಾ ಓದೊಕೂಂತ ಆಸೆ ಇತ್ತ್. ಒಮ್ಮೆ ಹೈಸ್ಕೂಲಿಲಿ ಇರಿಕಾಕನ ಸ್ಟಾಫ್ ರೂಮ್‌ಲಿ ಕೊಳಂಬೆ ಪುಟ್ಟಣ್ಣ ಗೌಡರ್ ನನ್ನ ಕೈ ನೋಡಿ,

" ನಿನ್ನ ವಿದ್ಯೆ ಅರ್ಧಲಿ ನಿತ್ತದೆ." ಎಂತ ಹೇಳ್ದೊ. ಆಗ ನಾ ಮನ್ಸ್‌ಲಿ,

" ನಾನೂ ತುಂಬಾ ಓದಿನೆ. ಈ ಹಸ್ತಸಾಮುದ್ರಿಕಾ ಶಾಸ್ತ್ರ ಎಲ್ಲಾ ಸುಳ್ಳು" ಎಂತ ನೆನ್ಸಿಕಂಡೆ. ಕಡೆಗೂ ಅವು ಹೇಳ್ದ ಭವಿಷ್ಯ ನಿಜ ಆತ್.

ಅವ್ವಂಗೆ ತುಂಬಾ ನಿರಾಶೆ ಆತ್. ನಾ ತುಂಬಾ ಓದೊಕೂಂತ, ಓದಿ ಸರ್ಕಾರಿ ಉದ್ಯೋಗ ಪಡ್ಯಕೂಂತ, ಅವ್ವಂಗೆ ತುಂಬಾ ಆಸೆ ಇತ್ತ್. ಆದರೆ ನನ್ನ ಗಂಡ ಆಗೋವು ಇದಕ್ಕೆ ಅಡ್ಡಿ ಮಾಡ್ದೊ. ಆ ಕಾಲಲಿ ಹೆಣ್ಣ್‌ಗ ಉದ್ಯೋಗ ಮಾಡ್ದೂಂತೇಳ್ರೆ ಅವಮಾನ. ನನ್ನ ಮುಂದೆ ಓದುನ ಮುಂದರ್ಸಿಕೂ ಬುಟ್ಟತ್ಲೆ. ಹಾಂಗಾಗಿ ನನ್ನ ವಿದ್ಯೆ ಅರ್ಧಲಿ ತುಂಡಾತ್. ಭಾರೀ ನಿರಾಸೆಂದ ನಾ ಸಂಸಾರದ ಜೀವನನ ಒಪ್ಪಿಕಂಡೆ. ಇದೆಲ್ಲಾ ಗೊಂದಲದ ನೊಡುವೆ ನಾ ಪಾಸಾದೆ. ನನ್ನ ಜೋಸ್ತಿ ಗೂಡೆಗ ಎಂ.ಎ ಕಾವೇರಮ್ಮ, ರಾಧಾ, ಬಿ.ಯಸ್. ಪಾರ್ವತಿ, ಲೀಲಾ ಪಾಸಾದೊ.

ನನ್ನ ಕರ್ಕಂಡ್ ಹೋಕೆ ಕನಕಮಜಲ್ ಭಾವ ಮತ್ತೆ ಅಣ್ಣ ಬಂದಿದ್ದೊ. ಅವು ಇಂದ್ರ ಭವನಲಿ ರೂಂ ಮಾಡಿ, ನನ್ನ ಲಗ್ಗೇಜ್ ಅಲ್ಲಿಗೆ ಸಾಗಿಸಿದೊ. ಚಾಮುಂಡೇಶ್ವರಿ ಬೆಟ್ಟ, ಕನ್ನಂಬಾಡಿ ಅಣೆ ಕಟ್ಟ್ ನೋಡಿ, ಮೊರ್ದಿನ ಸುಳ್ಯಕೆ ಬಂದೊ.

* * * * *

ಚುಕ್ಕೆ–37

“ಸಾಹುಕಾರ್ ಅಪ್ಪಣ್ಣ ಗೌಡರ್.”

ನನ್ನ ಅಪ್ಪ ಸೂಂತೋಡು ಅಪ್ಪಣ್ಣ ಗೌಡ್ರು. ಸಾವಿರದ ಒಂಬೈನೂರ ಮೂವತ್ತೊಂಭತ್ತನೇ ಇಸ್ವಿಯಿಂದ, ಸಾವಿರದೊಂಬೈನೂರ ಅರುವತ್ತ್‌ನೇ ಇಸ್ವಿ ಮುಟ್ಟ, ಸುಳ್ಯಲಿ ಪ್ರಸಿದ್ಧ ವ್ಯಾಪಾರಿಯಾಗಿ, ಸಾಹುಕಾರ್ ಅಪ್ಪಣ್ಣ ಗೌಡರೆಂದೇ ಹೆಸ್ರ್ ಪಡ್ದೊವು. ದಾನ, ಧರ್ಮಲಿ ಎತ್ತಿದ ಕೈ. ಮನೆಗೆ ಊಟದ ಹೊತ್ತಿಗೆ ಯಾರು ಬಂದರೂ, ಒಂದು ಪುಂಡಿ ಗಂಜಿ ಕೊಟ್ಟ್ ಹೊಟ್ಟೆ ತಣ್ಸ್‌ತಿದ್ದೊ. ಮಾಪಿಳ್ಳೆಯವ್ಕೆ ಅಚ್ಚು ಮೆಚ್ಚಿನ ಎಜಮಾನ್ರ್ ಆಗಿದ್ದೊ. ಬಾಳೆ ಮಕ್ಕಿಲಿ ವಾಸ ಮಾಡಿಕಂಡಿದ್ದ ಮಾಪ್ಳಚ್ಚಿಗ ಎಲ್ಲೋವೂ, ಬೊಳ್ಪುಗೆ ಇವರ್‌ಂದ ಭತ್ತ ತಕಂಡೋಗಿ, ಹಿಂಬೊತ್ತ್ ಅಕ್ಕಿ ಮಾಡಿ, ತಂದ್ ಕೊಡ್ತಿದ್ದೊ. ಇದರ್‌ಂದಾಗಿನೇ ಇವರೆಲ್ಲರ ಜೀವನ ಸಾಗ್ತಿತ್ತ್. ವ್ಯಾಪಾರಲಿ ಮೋಸ, ವಂಚನೆ ಮಾಡ್ತಿತ್ಲೆ. ಹಾಂಗಾಗಿ ಹತ್ತ್– ಹದ್ನೈದ್ ವೊರ್ಸ ಸುಳ್ಯಲಿ ಒಬ್ಬನೇ ಜೀನ್ಸ್ ವ್ಯಾಪಾರಿ ಆಗಿದ್ದೊ. ಅಂಗ್ಡಿಲಿ ಗಿರಾಕಿಗ ತುಂಬಿ ಹೋದರ್‌ಂದ, ಸಾಮಾನ್ ಕೊಡಿಕೆ ನಾಕಾರ್ ಜನ ಇದ್ದರೂ ಸಾಕಾಗ್ತಿತ್ಲೆ. ಅಂಗ್ಡಿ ಮೊದ್ದ್, ಗಣಪ್ಪಯ್ಯ&ಸನ್ಸ್‌ನವರ ಆಯುರ್ವೇದ ಔಷಧಿ, ಕಿರಾಣಿ ಸಾಮಾನ್‌ಗ ಯಾಗೋಳೂ ಇವರ ಅಂಗ್ಡಿಲಿ ಸಿಕ್ತಿತ್ತ್. ಒಂದು ರೀತಿಲಿ ಇವು ಅಣಿಲೆ ಕ್ಯಾ ಪಂಡಿತರೇ ಆಗಿದ್ದೊ. ಅದೂ ಅಲ್ಲದೆ ನಾಕಾರ್ ದರ್ಜಿಗಳ ಇಸಿಕಂಡ್, ಬಟ್ಟೆ ಹೊಲ್ಸಿ, ರೆಡಿಮೇಡ್ ಉಡ್ಪುಗಳ

ಕೂಡಾ ಮಾರ್ತಿದ್ದೊ. ದೊಡ್ಡ ಜವುಳಿ ಅಂಗ್ಡಿನೂ ಇತ್ತ್. ಆಗನ ಕಾಲಲೇ ಕೋವಿ ಮೊದ್ದ್ ಲೈಸನ್ಸ್ ಪಡ್ದ್, ಬೊಂಬಾಯಿಂದ, ಅಬ್ದುಲ್ಲಾಲ್ ನೂರ್ ಭಾಯಿಯವರ್‌ಂದ, ತರ್ಸಿ ಮಾರ್ತಿದ್ದೊ. ತೋಟೆ, ಗನ್ ಪೌಡರ್, ಚಿಲ್ಲ್, ಎಲ್ಲಾ ಇವರಲ್ಲಿ ಸಿಕ್ತಿತ್ತ್.

ನಮ್ಮ ಅಪ್ಪಂಗೆ ಕಲೆ, ಸಾಹಿತ್ಯ, ಸಂಗೀತಲಿ ಅಪಾರ ಪ್ರೀತಿ ಇತ್ತ್. ಯಕ್ಷಗಾನ, ತಾಳ ಮದ್ದಳೆ ಪದಗಳ ರಸವತ್ತಾಗಿ ಹಾಡ್ತಿದ್ದೊ. ಮಕ್ಕಳಿಗೆ ಎಲ್ಲಾ ಸಂಗೀತ ಶಿಕ್ಷಣ ಕೊಡ್ಸಿಯೊಳೊ. ಆದರೆ ಅವರ ಆಸೆನ ಯಾರೂ ಪೂರೈಸ್ತಿತ್ಲೆ. ಎಲ್ಲೋವೂ ಅರ್ಧಲೇ ಕೈ ಬುಟ್ಟೊ. ಸಂಘ – ಸಂಸ್ಥೆಗಳಿಗೆ ವಂತಿಗೆ ಕೊಡ್ದರ್ಲಿ ಇವು ಮುಂದೆ ಇದ್ದೊ. ಯಾಗೋಳೂ ಇಸ್ತ್ರಿ ಮಾಡಿದ ಬಿಳಿ ವೇಸ್ಟಿ, ಬಿಳಿ ಮುಕ್ಕಾಲ್ ಕೈ ಜುಬ್ಬಾ, ಅದಕ್ಕೆ ಚಿನ್ನದ ಗುಂಡಿಗ, ತಲೆಗೆ ಬಿಳಿ ಮುಂಡಾಸ್, ಭಸ್ಮದ ಅಡ್ಡ ನಾಮ, ನೊಡುಲಿ ಕುಂಕುಮದ ಬೊಟ್ಟು, ಇವರ ದಿನದ ಉಡ್ಗೆ – ತೊಡ್ಗೆ. ಎಲ್ಲಾದರ್ ಹೋಕಾಕನ ಅದರ ಮೇಲೆ ಒಂದು ಕೋಟು ಹಾಕ್ತಿದ್ದೊ.

ಆ ಕಾಲಲಿ ಚಿಲ್ಲರೆ ನಾಣ್ಯಗಳ ವ್ಯಾಪಾರನೇ ಜಾಸ್ತಿ. ಇರ್ಳ್ ಹತ್ತ್ ಗಂಟೆ ಮುಟ್ಟ ವ್ಯಾಪಾರ ನಡ್ಯತಿತ್ತ್. ಆ ಮೇಲೆ ಅವು ಮಿಂದ್ ಊಟ ಮಾಡಿ ಮೊಲ್ಗಿಕನ ಗಂಟೆ ಹನ್ನೆರ್ಡ್. ಅಪ್ಪ ಮಿಂದ್ ಉಂಡ್ ಆದ ಮೇಲೆ ನಾವ್ಗೆಲ್ಲಾ ಮೊಲ್ಗಿಕನ ಮುಟ್ಟ ಕತೆ ಹೇಳ್ತಿದ್ದೊ. ಅವರ ಕತೆಗಾಗಿ ನಾವು ನಿದ್ದೆನೂ ಮಾಡದೆ ಕಾಯ್ತಿದ್ದೊ. ಅವು ನಮ್ಮಂದ ಪದ್ಯ ಬಾಯಿ ಪಾಠ ಮಾಡ್ಸಿ, ಮಗ್ಗಿ ಹೇಳ್ಸಿ, ರಾಮಾಯಣ ಮಹಾಭಾರತದ ಕತೆಗಳ ಹೇಳ್ತಿದ್ದೊ. ಅದರ ಹೇಳ್ದ ಮೇಲೆ, ಅದರ ಮೇಲೆ ಪ್ರಶ್ನೆ ಕೇಳ್ತಿದ್ದೊ. ನಾವ್ ಇರ್ಳ್ ಹೊತ್ತಾಗಿ ಮೊಲ್ಗಿ, ಬೊಳ್ಪಿಗೆ ಹೊತ್ತಾಗಿ ಎದ್ರ್‌ತಿದ್ದೊ. ಅಪ್ಪ ಮಾತ್ರ ಮೊಲ್ಗಿಕನ ಎಷ್ಟೇ ಹೊತ್ತಾದರೂ, ಬೊಳ್ಪುಗೆ ಐದ್ ಗಂಟೆಗೇ ಎದ್ರ್‌ತಿದ್ದೊ. ದಿನದ ವ್ಯಾಪಾರದ ದುಡ್ಡುನ ಇರ್ಳ್, ಕೋವಿ ಮೊದ್ದ್ ಹಾಕಿಸುವ ಚೀಲಗಳಲಿ ತುಂಬಿಸಿ ಇಸ್ತಿದ್ದೊ. ಆ ಚೀಲಗಳ ನಾವು 'ಮಡ್ಸರ್'ಂತ ಕರ್ಯತಿದ್ದೊ. ವಾರಕ್ಕೊಮ್ಮೆ ಅದರ ನೊಡು ಕೋಣೆಲಿ ರಾಶಿ ಹಾಕಿ, ನಾಕಾಣೆ ಪಾವೆಲಿ, ಎಂಟಾಣೆ, ಒಂದಾಣೆ, ಎರ್ಡಾಣೆ ಪಾವೆಲಿಗಳ ಬೇರೆ ಬೇರೆ ಆಗಿ ಲೆಕ್ಕ ಮಾಡಿ, ಬೇರೆ ಬೇರೆ ಮೊಡ್ಸರಲಿ ತುಂಬ್‌ಸ್ತಿದ್ದೊ. ಆಗ ಅಪ್ಪ ನಮ್ಮೊಟ್ಟಿಗೆ,

"ನೋಡಿ ಮಕ್ಕಳೇ, ಈ ದುಡ್ಡು ನಮ್ಮದಲ್ಲ. ಇದ್ ಸಾವ್ಕಾರ್‌ರ ಗಂಟ್. ಇದರೆಲ್ಲಾ ತಕೊಂಡೋಗಿ ಮಂಗ್ಳೂರ್‌ನ ಸಾವ್ಕಾರ್‌ಗಳಿಗೆ ಕೊಟ್ಟರೆ, ಅವು ನಾವ್ಗೆ ಸಾಮಾನ್ ಕೊಟ್ಟವೆ. ನೀವು ಇದರ್ಲಿ ಒಂದು ಕಾಸ್‌ನೂ ಮುಟ್ಟಿಕೆ ಆಗದ್." ಎಂತ ಹೇಳ್ತಿದ್ದೊ. ಅವು ಹೇಳ್ದಂಗೆ ನಾವು ಅಪ್ಪಂಗೆ ತಕ್ಕ ಮಕ್ಕ ಆಗಿ, ಸತ್ಯ ಸಂಧರಾಗಿ ಲೆಕ್ಕ ಮಾಡಿ ಕೊಡ್ತಿದ್ದೊ. ಅಕೇರಿಗೆ ನಾವ್ಗೆ, ನಾಣ್ಯಗಳ ಲೆಕ್ಕ ಮಾಡಿಕೆ ಸಾಯ ಮಾಡ್ದಕ್ಕಾಗಿ, ನಾಕಾಣೆ – ಎಂಟಾಣೆ ಭಕ್ಷೀಸ್ ಕೊಡ್ತಿದ್ದೊ. ಆಗ ನಾವು ಅದರ ಅಂಗೈಲಿ ಇಸಿ, ಕಣ್ಣ್ ಅರ್ಳಿಸಿ, ಅದರ ನೋಡಿಕಂಡ್, "ನಾಳೆ ಸ್ಯಾಬರ ಅಂಗ್ಡಿಂದ ಯಾವ ಪೆಪ್ರಮಿಂಟ್ ತೆಗ್ಯೊದು?" ಎಂತ ಯೋಚನೆ ಮಾಡಿಕಂಡ್, ಸಂತೋಷ

ಪಡ್ತಿದ್ದೊ. ಮೊರ್ದಿನ ಅಪ್ಪ, ಅಣ್ಣ ಆ ಹಣದ ಗಂಟ್‌ಗಳ ಹಿಡ್ಕಂಡ್ ಶಂಭಟ್ರ ಲಾರಿಲಿ ಮಂಗ್ಳೂರಿಗೆ ಸಾಮಾನ್ ತಾಕೆ ಹೋಗ್ತಿದ್ದೊ. ಒಮ್ಮೊಮ್ಮೆ ಮಕ್ಕ ಆದ ನಮ್ಮೋನೂ ಕರ್ಕಂಡ್ ಹೋಗ್ತಿದ್ದೊ. ಮಂಗ್ಳೂರ್‌ಲಿ ' ಜಯಕೆಫೆ' (ಈಗನ ತಾಜ್‌ಮಹಲ್) ಹೋಟೇಲ್‌ಲಿ ರೂಂ ಮಾಡಿ, ನಮ್ಮ ರೂಂಲಿ ಬುಟ್ಟ್, ಅಪ್ಪ, ಅಣ್ಣ ವ್ಯಾಪಾರ ಮಾಡಿಕೆ ಸಾವ್ಕಾರಲ್ಲಿಗೆ ಹೋಗ್ತಿದ್ದೊ. ಬಾಕನ ನಾವ್ಗೆ ಕಸಿ ಮಾಯ್ನ ಹಣ್ಣ್ ತಕಂಡ್ ಬಾತಿದ್ದೊ. ಒಮ್ಮೊಮ್ಮೆ ನಮ್ಮನನೂ ಒಟ್ಟಿಗೆ ಕರ್ಕಂಡ್ ಹೋಗ್ತಿದ್ದೊ. ಮಂಗ್ಳೂರ್ ಬಂದರ್‌ಲಿ ಅಪ್ಪ ಜೀನ್ಸ್ ಸಾಮಾನ್ ತಾವ "ಸುಬ್ಬಣ್ಣ ಚೂರ್ಯ" ಎಂತ ಒಬ್ಬ ವ್ಯಾಪಾರಸ್ಥರ್ ಇದ್ದೊ. ಅವರ ಅಂಗ್ಡಿಗೆ ಹೋದ ನೆಂಪುಟ್ಟು. ಮತ್ತೂ ಒಂದೆರ್ಡ್ ಸಾವ್ಕಾರರ ಅಂಗ್ಡಿಗೆ ಕರ್ಕಂಡ್ ಹೋಗ್ತಿದ್ದೊ. ಅವರ ಹೆಸ್ರೆಲ್ಲಾ ನೆಂಪಿಲ್ಲೆ. ಎಲ್ಲಾ ಸಾವ್ಕಾರರೂ ಅಪ್ಪಂಗೆ ತುಂಬಾ ಗೌರವ ಕೊಡ್ತಿದ್ದೊ. ಅಲ್ಲಿ ನಾವ್ಗೆಲ್ಲಾ ಕಾಫಿ, ತಿಂಡಿನ ತರ್ಸಿ ಕೊಡ್ತಿದ್ದೊ. ಕೆಲವು ಸಾವ್ಕಾರರ್ ಅಪ್ಪನ ಅವರ ಮನೆಗೆ ಊಟಕ್ಕೆ ಕರ್ಕಂಡ್ ಹೋಗ್ತಿದ್ದೊ. ಅದರ್ಲಿ ಸುಬ್ಬಣ್ಣ ಚೂರ್ಯರ್ ಒಬ್ಬ. ಅಪ್ಪ ಯಾರ ಮನೆಗೆ ಹೋದರೂ ಬರಿ ಕೈಲಿ ಹೋಗ್ತಿತ್ಲೆ. ಹೂ– ಹಣ್ಣ್ ತಕಂಡೋಗಿ ಅವ್ಕೆ ಕೊಡ್ತಿದ್ದೊ. ಅಪ್ಪ ಮತ್ತೆ ಅಣ್ಣ ಮಂಗ್ಳೂರಿಗೆ ಹೋಗಿ ಬಾಕನ ಮಲ್ಲಿಗೆ ಹೂ, ಕಸಿ ಮಾಯ್ನ ಹಣ್ಣ್ ನಾವ್ಗೆ ತಿಂಬಕೆ ತಾತಿದ್ದೊ. ಸಾವ್ಕಾರರ ಮನೆಲಿ ರುಚಿ ರುಚಿಯಾಗಿ ತಿಂದ್ ಬಂದ ಅಪ್ಪ, ಅವರ ಹೆಂಗ್ಸ್‌ರ ಹಕ್ಕಲೆ ಕೇಳಿ, ಅವರ ಅಡ್ಗೆ ವಿಧಾನನ ತಿಳ್ಕಂಡ್ ಬಂದ್, ಅವ್ವಂಗೆ ಹೇಳಿ, ಅದರ ಅವ್ವನ ಕೈಲಿ ಮಾಡ್ಸಿ ತಿನದಿದ್ದರೆ ಅವ್ಕೆ ಸಮಾಧಾನ ಆಗ್ತಿತ್ಲೆ. ಅದರ್‌ಂದಾಗಿ ಅವ್ವನೂ ತರತರದ ಅಡ್ಗೆನ ಕಲ್ತ್‌ಕೊಂಡೊ.

ಮಂಗ್ಳೂರ್‌ಲಿ ಜಯಂತಿಲಾಲ್ ಬ್ರದರ್ಸ್, ಸುಜಿರ್‌ಕಾರ್ಸ್, ಸಹಕಾರಿ ನೇಕಾರರ ಸಂಘ, – ಇದರ್‌ಂದೆಲ್ಲಾ ರಖಂ ಬಟ್ಟೆ ಖರೀದಿ ಮಾಡಿ ತಾತಿದ್ದೊ. ಅವರ ಗೋಡೌನ್‌ಗೆಲ್ಲಾ ಹೋಗಿ ಬಟ್ಟೆ ತಕಂಡ್ ಬಾಕನ ನಾನೂ ಅಪ್ಪನೊಟ್ಟಿಗೆ ಹೋಗ್ತಿದ್ದೆ. ಆಗ ನಂಗೆ ಲಾಯ್ಕ್ ಕಂಡದರ ನಾನೂ, ಅದ್ ಲಾಯ್ಕ್ ಉಟ್ಟು, ಇದ್ ಲಾಯ್ಕ್ ಉಟ್ಟೊಂತ ಹೇಳಿ, ತಾತಿದ್ದೆ. ನಾ ಆಯ್ಕೆ ಮಾಡ್ದ್ ಊರಿಗೆ ಬಾಕನ ಬೇಗ ಖರ್ಚಾಗ್ತಿತ್ತ್. ಹಾಂಗಾಗಿ ಬಟ್ಟೆ ತಾಕಾಕನೆಲ್ಲಾ ಅಪ್ಪ ನನ್ನ ಕರ್ಕಂಡ್ ಹೋಗ್ತಿದ್ದೊ. ನಾನೂ ತಮ್ಮಂದರೂ ತಿಂಗಳ್‌ಗೆ ಎರ್ಡ್ ಸರ್ತಿ ಅಪ್ಪನೊಟ್ಟಿಗೆ ಮಂಗ್ಳೂರ್‌ಗೆ ಹೋಗ್ತಿದ್ದೊ. ಅಲ್ಲಿ, ಹೋಟ್ಲೂಟ, ಐಸ್‌ಕ್ರೀಂ, ಸಿನೆಮಾ ಎಲ್ಲಾ ನಾವ್ಗೆ ತುಂಬಾ ಕುಸಿ ಕೊಡ್ತಿತ್ತ್. ಅಪ್ಪ ಜಯಕೆಫೆಲಿ ರೂಂ ಮಾಡ್ರೆ ಉಂಬಕೆ ಪ್ರಕಾಶ ಭವನಕ್ಕೆ ಹೋಗ್ತಿದ್ದೊ. ಅದರ ಎಜಮಾನ್ರ್ ಅಪ್ಪನ ದೊಡ್ಡ ಜೋಸ್ತಿ ಆದೊ. ಅವರ ಹಿರಿ ಮಗಳ್ ಸರೋಜಿನಿ ನಮ್ಮೂರ್‌ನ ಗ್ರಾಮ ಸೇವಕರಾದ ಮಹಾಬಲ ಶೆಟ್ರ ಮೊದ್ವೆ ಆಗಿ ಬಾಕಾಕನ, ಅವು ನಂಗೆ ದೊಡ್ಡ ಜೋಸ್ತಿ ಆದೊ. ಮಹಾಬಲ ಶೆಟ್ರ್ ಕಡೆಗೆ ಬಿ.ಡಿ.ಓ ಆಗಿ ಕೆಲ್ಸಂದ ನಿವೃತ್ತಿ ಹೊಂದಿದೊ. ಕಾಸ್ರಗೋಡ್‌ಂದಳೂ ಅಪ್ಪ ಕೈ ಮಗ್ಗದ ಬಟ್ಟೆ ತರ್ಸ್‌ತಿದ್ದೊ.

ಕುಂಞರಾಮ ಎಂಬೊವು ವಾರಕ್ಕೊಮ್ಮೆ ಕಾಸರಗೋಡ್‌ಂದ ಕೈ ಮಗ್ಗದ ಬಟ್ಟೆನ ಪಿಂಡಿ ತಂದ್ ಕೊಡ್ತಿದ್ದೊ. ನನ್ನ ಅಣ್ಣನ ಮೊದ್ವೆ ಆದ ಮೇಲೆ ಅಣ್ಣ, ಅತ್ತಿಗೆ, ಅವ್ವನೊಟ್ಟಿಗೆ, ಮೊದುಮಕ್ಕ ಸಮುದ್ರ ಸ್ನಾನಕ್ಕೆ ಹೋಕಾಕನ, ಅವರೊಟ್ಟಿಗೆ ನಾನೂ ಹೋಗಿದ್ದೆ. ಆಗ ಕುಂಞರಾಮನ ಮನೆಲಿ ಒಂದು ದಿನ ಇದ್ದೊ.

ಸುಬ್ಬಣ್ಣ ಚೂರ್ಯರ ದೊಡ್ಡ ಮಗಳ ಗಂಡ ಸುಳ್ಯ ಪೋಲೀಸ್ ಸ್ಟೇಶನ್‌ಗೆ ಸಬ್ ಇನೆಸ್ಪೆಕ್ಟರ್ ಆಗಿ ಬಾಕನ ಅಪ್ಪ ಅವ್ವೆ, ಚೂರ್ಯರ ಅಳಿಯಾಂತೇಳಿ ಬಾಳ ಸಾಯ ಮಾಡ್ಯೊಳೊ. ಅವರ್‌ಂದ ಮುಂದೆ ಇದ್ದ ಸಬ್ ಇನೆಸ್ಪೆಕ್ಟರ್, ವರ್ಗ ಆಗಿ ಹೋಕಾಕನ ಮಕ್ಕಳ ಸಾಲಾ ಜೀವನ ಹಾಳಾದೇಂತ, ಮೂರು ತಿಂಗಳ ಮೇಲೆ ಅವು ಕ್ವಾರ್ಟರ್ಸ್ ಖಾಲಿ ಮಾಡ್ದೊ. ಆ ಸಮಯಲಿ ಚೂರ್ಯರ್ ಅಪ್ಪನಲ್ಲಿ ಹೇಳ್ದ ಕಾರ್‍ಣ, ಸದಾನಂದ ಇನೆಸ್ಪೆಕ್ಟರಿಗೆ ದೊಡ್ಡ ಮನೆನ ಬಾಡಿಗೆಗೆ ಗೊತ್ತ್ ಮಾಡಿ, ಮನೆಗೆ ಬೇಕಾದ ಜೀನಸ್ ಸಾಮಾನ್, ಸೊಯ್ದೆ, ಹಾಲ್ ಎಲ್ಲಾ ನಮ್ಮ ಮನೆಂದ ಕೊಟ್ಟ್ ಕಳ್ಸಿದೊ. ಇದಕ್ಕೆ ಒಂದು ಪೈಸೆನನೂ ಅವರ್‌ಂದ ತಕಂಡತ್ಲೆ. ಸುಳ್ಯ ಪೋಲೀಸ್ ಸ್ಟೇಶನ್‌ನ ಎಲ್ಲಾ ಕಾನೆಸ್ಟೇಬಲ್‌ಗ ನಮ್ಮ ಅಂಗ್ಡಿಂದಳೇ ಸಾಮಾನ್ ಸಾಲ ತಕಂಡೋಗ್ತಿದ್ದೊ. ಸಂಬಳ ಬಾಕಾಕನ ತೀರ್‌ಸ್ತಿದ್ದೊ.

ಮಂಗ್ಳೂರ್‌ಲಿ ಯಾವ ಆಟ, ನಾಟಕ, ಸರ್ಕಸ್ ಬಂದರೂ, ಅಪ್ಪ ನಮ್ಮ ಕರ್ಕಂಡೋಗಿ ತೋರ್‌ಸ್ತಿದ್ದೊ. ಗುಬ್ಬಿ ವೀರಣ್ಣ ಕಂಪೆನಿ ನಾಟಕ ಬಾಕಾಕನ ಅವರ ' ದಶಾವತಾರ' ನಾಟಕ – ನೋಡ್ದ ನೆಂಪು ನಂಗುಟ್ಟು. ವೀರ ಪಾಂಡ್ಯ ಕಟ್ಟೆ ಬೊಮ್ಮನ್, ಚಂದ್ರಲೇಖಾ ಸಿನೆಮಾನ ಮಂಗ್ಳೂರ್‌ನ ಸೆಂಟ್ರಲ್ ಟಾಕೀಸಿಲಿ ನೋಡ್ಯೊಳೆ. ಆಗ ಪುತ್ತೂರ್‌ಲಿ ಸಿನೆಮಾ ಟಾಕೀಸ್ ಇತ್ಲೆ. ಪುತ್ತೂರ್‌ಲಿ ಅರುಣಾ ಥಿಯೇಟರ್ ಸುರಾದ ಮೇಲೆ ನಾವು ಮಂಗ್ಳೂರಿಗೆ ಸಿನೆಮಾ ನೋಡಿಕೆ ಹೋವುದರ ನಿಲ್ಸಿದೊ.

ನಮ್ಮ ಅಪ್ಪ ದಾನ ಧರ್ಮ ಮಾಡ್ದರ್‍ಲಿ ಎತ್ತಿದ ಕೈ. ಯಾರಾದರೂ ಮಕ್ಕಳ ಮೊದ್ವೆಗೆ ಸಾಲ ಕೇಳ್ರೆ, ಅವ್ವೆ ಜೀನ್ಸ್ ಸಾಮಾನ್, ಜವುಳಿ ಸಾಲ ಕೊಡ್ತಿದ್ದೊ. ಎಷ್ಟೋ ಜನ ಸಾಲ ಹಿಂದೆ ಕೊಡದೆ ಅವ್ವೆ ಹಿಡ್ಸ್‌ತಿದ್ದೊ. ಒಮ್ಮೆ ನಮ್ಮ ಅಂಗ್ಡಿ ಎದ್ರ್‌ಗಡೆ ರಾಜ ರಸ್ತೆನ ಇನ್ನೊಂದು ಪುಡೆಲಿದ್ದ, ದೇವದಾರು ಮರದ ಬುಡಲಿ (ಈಗ ಅಲ್ಲಿ ಹೊಸ ಬಸ್ ನಿಲ್ದಾಣ ಆಗುಟ್ಟು) ಯಾರೋ ಒಬ್ಬ ಬಡಪಾಯಿ ಬಿದ್ದ್‌ಕಂಡಿತ್ತ್. ಜನ ಎಲ್ಲಾ ಸುತ್ತೋಳು ನಿಂತ್ ನೋಡಿ ಹೋಗ್ತಿದ್ದೊ. ಕೆಲವು ಜನ ನಮ್ಮ ಅಂಗ್ಡಿಗೆ ಬಂದ್ ಅಪ್ಪನ ಹಕ್ಕಲೆ,

"ಯಾರೋ ದಾರಿ ಹೋಕ ಬಿದ್ದು ಕೊಂಡುಟ್ಟು ಸತ್ತುಟೋ ಏನೋ?" ಎಂತ ಹೇಳ್ದೊ. ಆಗ ಅಪ್ಪ ಕೆಲ್ಸದವರ ಕರ್ಕಂಡ್ ಅಲ್ಲಿಗೆ ಹೋದೊ. ಅಂವನ ಮೂಂಕಿಗೆ ಕೈ ಹಿಡ್ದ್ ನೋಡ್ದೊ.

"ಬೊದ್ಕ್‌ಟ್ಟು. ಹೊಟ್ಟೆಗಿಲ್ಲದೆ ಸಾಯವ ಸ್ಥಿತಿಗೆ ಬಂದುಟು" ಎಂತ ಹೇಳಿ ಕನಿಕರಂದ ಕೆಲ್ಸದವರೊಟ್ಟಿಗೆ ಮನೆಂದ ನೀರ್ ತರ್‍ಸಿ, ಅಂವನ ಬಾಯಿಗೆ ಬುಟ್ಟೊ.

ಸುರು ಸುರುಗೆ ನೀರೆಲ್ಲಾ ಹೊರಗೆ ಬೀತ್. ನೀರ್ ಕುಡ್ಯಕೂ ಅವನಲ್ಲಿ ಶಕ್ತಿ ಇತ್ಲೆ. ಅಕೆರಿಗೆ ಒಂದೊಂದೇ ಗುಟುಕು ನೀರ್ ಕುಡ್ತ್. ಆ ಮೇಲೆ ಮನೆಂದ ಗಂಜಿ ತೆಳಿ ತರ್ಸಿ, ಕುಡ್ಸಿದೊ. ಎರ್ಡ್ ಮೂರು ಸರ್ತಿ ಗಂಜಿ ನೀರ್ ಕುಡ್ಯಕಾಕನ, ಅಂವ ಕಣ್ಣ್ ಬುಟ್ಟತ್. ಎರ್ಡ್ ದಿನ ಅಂವಂಗೆ ಹೊತ್ತ್ ಹೊತ್ತುಗೆ ಗಂಜಿ ಕೊಟ್ಟ್, ಆಕನ ಅಂವ ಉಸಾರಾತ್. ಅಂವನ ದಿಕ್ಕ್, ದೆಸೆ ವಿಚಾರ್ಸಿ, ಅಂವಂಗೆ ಹೊಸ ಬಟ್ಟೆ ಕೊಟ್ಟ್, ಬಸ್ಸ್ ಚಾರ್ಜ್ ಕೊಟ್ಟ್, ಅಂವನ ಬಸ್ಸ್ ಹತ್ತಿಸಿ ಊರಿಗೆ ಕಳ್ಸಿದೊ.

ಎಷ್ಟೋ ಜನ ಬಡವ್ಕೆ ಮೊದ್ವೆಗೆ, ಕಾಯ್ಲೆ ಬಂದರೆ, ದುಡ್ಡು ಕೊಟ್ಟ್ ಕಳ್ಸಿದರ ನಾ ನೋಡ್ಯಳೆ. ಎಷ್ಟೋ ಜನಕ್ಕೆ ಅಂಗ್ಡಿ ಜೀನಸಿ, ಬಟ್ಟೆ ಸಾಲ ಕೊಡ್ತಿದ್ದೊ. ವೊರ್ಸ ಗಟ್ಲೆ ಸಾಮಾನ್ ತಕಂಡೋಗಿ, ಸಾಲ ಕೊಡದೆ ಎಷ್ಟೋ ಜನ ಅವ್ಕೆ ಹಿಡ್ಸ್ಯೋಳೊ.

ಆಗ ಮಡಿಕೇರಿಂದ ಮಂಗ್ಳೂರಿಗೆ ಕೂರ್ಗ್ ಬಸ್ ಇತ್ತ್. ಅದರ ಡ್ರೈವರ್ ಕೋಳಿ ಬೈಲ್ ಪೂವಯ್ಯಣ್ಣ, ಅಪ್ಪನ ದೊಡ್ಡ ಜೋಸ್ತಿ. ಸೂಂತೋಡು ಕುಟುಂಬನೇ ಕೊಡಗ್‌ಲಿ ಕೋಳಿ ಬೈಲ್ ಕುಟುಂಬ ಗಡ. ಅಪ್ಪ ಹೇಳ್ತಿದ್ದೊ. ಪೂವಯ್ಯಣ್ಣ ಹಿಂಬೊತ್ತು ಹೆಚ್ಚಾಗಿ, ನಮ್ಮ ಅಂಗ್ಡಿ ಎದ್ರ್ ಬಸ್ ನಿಲ್ಸ್‌ತಿದ್ದೊ. ಆಗ ಬಸ್ ಸ್ಟೇಂಡ್‌ಂತ ಇತ್ಲೆ. ಅಪ್ಪ ಅವ್ಕೆ ನಮ್ಮ ಕನ್ನಡ ಜಿಲ್ಲೆನ ಗೇರು ಬೀಜ, ತೆಂಗಿನಕಾಯೆ, ಎಷ್ಟೋ ಸಲ ಅವರ ಬಸ್ಸ್‌ಲಿ ಹಾಕಿ ಕಳ್ಸುದರ ನಾ ನೋಡ್ಯಳೆ. ಅವುನೂ ಆಗಾಗ ಕೊಡ್ಗ್‌ನ ಚಿತ್ತೂಳಿ (ಕಿತ್ತಳೆ ಹಣ್ಣ್) ಏಲಕ್ಕಿ ತಂದ್ ಕೊಡ್ತಿದ್ದೊ. ಒಮ್ಮೆ ಪೂವಯ್ಯಣ್ಣ ಸುಬ್ರಹ್ಮಣ್ಯ, ಧರ್ಮಸ್ಥಳಕ್ಕೆ ಯಾತ್ರೆ ಹೋಕೆ, ಒಂದ್ ಬಸ್ಸ್ ಜನ (ಸುಮಾರು 30–40 ಜನ ಇದ್ದೊ) ನ ಕರ್ಕಂಡ್ ಬಂದ್ ಇರ್‍ಳ್ ನಮ್ಮಲ್ಲಿ ನಿಂತ್, ಬೊಳ್ಪುಗೆ 5 ಗಂಟೆಗೆ ಎದ್ದ್ ಹೋದೊ. ಅವ್ಕೆಲ್ಲಾ ಇರ್‍ಳ್ ಮಿಾಯಕೆ ನೀರ್ ಕಾಸಿ ಕೊಟ್ಟ್, ಪಾಯಸದ ಊಟ ಹಾಕಿ, ಬೊಳ್ಪುಗೆ ಇಡ್ಲಿ – ಸಾಂಬಾರ್ ಕೊಟ್ಟ್, ಸತ್ಕಾರ ಮಾಡಿ ಕಳ್ಸ್ಯೊಳೊ. ಹೆಂಗ್‌ಸರ್, ಮಕ್ಕ ನಮ್ಮಲ್ಲಿ ಮೊಲ್ಗಿದೊ. ಗಂಡ್‌ಸರ್ ಬಸ್ಸ್‌ಲೇ ಮೊಲ್ಗಿದೊ. ಮನೆಗೆ ಎಷ್ಟ್ ಜನ ನೆಂಟ್ರ್ ಬಂದರೂ ಕುಸಿಂದ ಸತ್ಕಾರ ಮಾಡಿ ಕಳ್ಸ್‌ತಿದ್ದೊ. ಹಳ್ಳಿಂದ ಬರುವ ಎಷ್ಟೋ ಜನ ಇರ್‍ಳ್ ನಮ್ಮಲ್ಲಿ ನಿತ್ತ್ ಬೊಳ್ಪುಗೆ ಬಸ್‌ಲಿ ಪುತ್ತೂರು, ಮಂಗ್ಳೂರು, ಕಾಸ್ರ್‌ಗೋಡಿಗೆ ಹೋಗ್ತಿದ್ದೊ. ಆಸ್ಪತ್ರೆಲಿ ಮೊದ್ದ್ ಮಾಡ್ಸೋವು ವಾರ ಗಟ್ಲೆ ನಮ್ಮ ಮನೆಲಿ ನಿತ್ತ್ ಗುಣಾದ ಮೇಲೆ ಹೋಗ್ತಿದ್ದೊ. ಅವ್ಕೆಲ್ಲಾ ಊಟ ಉಪಚಾರ ಅವ್ವ ಮಾಡ್ತಿದ್ದೊ. ಪಡ್ಡಂಬೈಲ್ ವೆಂಕಟ್ರಮಣ ಅಣ್ಣ ಒಮ್ಮೆ ಮೊದ್ದ್ ಮಾಡ್ಸಿಕೆ, ನಮ್ಮ ಮನೆಲಿ ವಾರಗಟ್ಲೆ ನಿಂತದ್ ನಂಗೆ ನೆಂಪುಟ್ಟು. ಕುಂಜರ್ಜ ವೆಂಕಟ್ರಮಣ ಅಣ್ಣ ಮತ್ತೆ ಅವರ ಹೆಣ್ಣ್ ಜಾನಕಿ ಅತ್ತಿಗೆ ಮಡಿಕೇರಿಗೆ ಅವರ ತವರು ಮನೆಗೆ ಹೋಕಾಕನೆಲ್ಲಾ ಬೊಳ್ಪುಗೆ ಬಂದ್, ನಮ್ಮಲ್ಲಿ ತಿಂಡಿ ತಿಂದ್, ಬಸ್ ಹತ್ತ್‌ತಿದ್ದೊ. ಮಡಿಕೇರಿಂದ ಹಿಂದೆ ಬಾಕಾಕನನೂ, ನಮ್ಮಲ್ಲಿ ಉಂಡ್, ತಿಂದ್ ಕುಂಜರ್ಜಗೆ ಹೋಗ್ತಿದ್ದೊ. ಆಗ ಸುಳ್ಯ ಪೇಟೆಂದ ಕುಂಜರ್ಜಗೆ ನಡ್ಕಂಡ್ ಹೋಕು. ಕಾಡ್ ದಾರಿ. ಜಾನಕಿ ಅತ್ತಿಗೆನ

ಅಪ್ಪ, ಅವ್ವ ಅವರ ಕಡೆ ನೆಂಟ್ರ್‌ಗ ಎಲ್ಲಾ ಕುಂರ್ಜಿಗೆ ಹೋಕನ ನಮ್ಮ ಮನೆಗೆ ಬಂದೇ ಹೋಗ್ತಿದ್ದೊ.

ಒಮ್ಮೆ ನಮ್ಮ ಮನೆನ ಕೊಟಗೆಲಿ ಒಂದು ಪಂಚಾತಿಕೆ ಆತ್. ಅವು ಯಾರ್‌ಂತ ನಂಗೆ ನೆಂಪಿಲ್ಲೆ. ನಡ್ದ ಘಟನೆ ಮಾತ್ರಾ ಪೊರ್ಲುಲಿ ನೆಂಪುಟ್ಟು. ಗಂಡ – ಹೆಣ್ಣ್‌ನ ಜಗಳ. ಗಂಡನ ಮನೆವೂ, ಹೆಣ್ಣ್‌ನ ಮನೆವೂ ಇದ್ದೊ. ಹೆಣ್ಣ್ ಗಂಡನ ಮನೆಗೆ ಹೋಕೆ ಏನ್ ಮಾಡ್ರೂ, ಒಪ್ಪ್‌ತಿಲ್ಲೆ. ಅದರ ಅಪ್ಪ, ಅವ್ವ ಅದರ ಗಂಡನೊಟ್ಟಿಗೆ ಹೋಕೆ ಒತ್ತಾಯ ಮಾಡ್ತಿದ್ದೊ. ಮೊದ್ವೆ ಆಗಿ ಆರ್ ತಿಂಗ ಆಗಿತ್ತಷ್ಟೆ. ಅದ್ ಮೊರ್ಟ್‌ಕಂಡೇ ಇತ್ತ್. ಸುತಾರಾಂ ಗಂಡನ ಮನೆಗೆ ಹೋಕೆ ಒಪ್ಪ್‌ತಿಲ್ಲೆ. ಕಡೆಗೆ ನಮ್ಮ ಅಪ್ಪ, ಅದರ ಅಪ್ಪ–ಅವ್ವಂಗೆ ಜೋರ್ ಮಾಡಿ,

"ಅದ್ಕೆ ಇಷ್ಟ ಇತ್ಲರೆ ಅದರ ಯಾಕೆ ಒತ್ತಾಯಲಿ ಗಂಡನಲ್ಲಿಗೆ ಕಳ್ಸಿರೆ? ಅದೆಲ್ಲಾದರ್ ಅದರ ಜೀವಕ್ಕೆ ಅಪಾಯ ತಂದ್ ಕಂಡರೆ? ಹೆತ್ತೋವೇ ಹೀಂಗೆ ಮಾಡ್ರೆ ಅದೇನ್ ಮಾಡ್ದು?" –ಎಂತ ಬುದ್ಧಿವಾದ ಹೇಳ್ದೊ. ಕಡೆಗೆ ಅದರ ಗಂಡಂದ ಅದ್ಕೆ ಬುಡ್ಗಡೆ ಸಿಕ್ತಿತ್. ಅದ್ ಕುಸಿಂದ ತಾಳಿ ತೆಗ್ದ್ ಕೊಟ್ಟ್, ಅಪ್ಪ– ಅವ್ವನೊಟ್ಟಿಗೆ ಅದರ ತವರು ಮನೆಗೆ ಹೋತ್. ಒಂದು ವೊರ್ಸದೊಳಗೆ ಅದರ ಬೇರೆ ಕಡೆಗೆ ಮೊದ್ವೆ ಮಾಡಿ ಕೊಟ್ಟೊ.

ಅಪ್ಪ ನಾಕ್‌ನೇ ಕ್ಲಾಸ್‌ನ ಮುಟ್ಟ ಸುಳ್ಯ ಹಾಯರ್ ಎಲಿಮೆಂಟರಿ ಸಾಲೆಲಿ ಓದ್ಯೊಳೊ ಗಡ. ಅವರ ಬರವಣಿಗೆ ಬಳ್ಳಿ ಅಕ್ಷರಗಳ್‌ಂದ ಕೂಡಿತ್ತ್. ಇಂಗ್ಲಿಷ್‌ಲಿ ಖ. ಂಠಿಠಿಚಿಟಿಟಚಿ ಉಂತಿಜಚಿ ಎಂತ ದಸ್ಕತ್ತ್ ಹಾಕ್ತಿದ್ದೊ. ಚುರುಕು ಬುದ್ಧಿ. ಆದರೆ ಬೇಗ ಮೋಸ ಹೋಗ್ತಿದ್ದೊ. ಎಲ್ಲೋವರ್ನೂ ಬಾಳ ಬೇಗ ನಂಬುತಿದ್ದೊ. ಒಮ್ಮೆ ಅವು ಚಿನ್ನದ ನಿಬ್ಬು ಇರುವ ಪಾರ್ಕರ್ ಪೆನ್ನ್ ತೆಗ್ದೊ ಗಡ. ಆಗ ಅದ್ಕೆ ನೂರು ರೂಪ್ಯಾ ಕೊಟ್ಟಿದ್ದೊ ಗಡ. ಅವರ ಸ್ನೇಹಿತ ಒಬ್ಬ ಡಾಕ್ಟರ್‌ಗೆ ಅದರ ತೋರ್ಸಿದೊ ಗಡ. ಅವರ ಆ ಸ್ನೇಹಿತ,

"ಗೌಡ್ರೇ, ಈ ಪೆನ್ನ್ ನಂಗಾತ್. ನೀವ್ಗೇನ್? ನೀವು ಸಾವ್ಕಾರ್‌ರ್. ನೀವು ಹೊಸ್ತ್ ತಕಣಿ" –ಎಂತ ಹೇಳಿ ಅದರ ತಮ್ಮ ಜೋಬುಗೆ ಹಾಕಂಡ ಗಡ. ಪಾಪ! ದಾಕ್ಷಿಣ್ಯಕ್ಕೆ ಒಳಗಾದ ಅಪ್ಪ ಅದರ ಅವ್ಕೆ ಕೊಟ್ಟ್, ಮನೆಗೆ ಬಂದ್, ಅವ್ವನೊಟ್ಟಿಗೆ,

"ಅಂವ ಅದರ ಹಟ ಹಿಡ್ದ್ ತಕಂಡತ್" – ಎಂತ ಪೇಚಾಡಿಕೊಂಡೊ. ಅವ್ವ,

"ನೀವು ಬಿರ್ಸತ್ತಿಗೆಗೆ ಅವ್ಕೆ ತೋರ್ಸಿದರಿ. ಹಾಂಗೇ ಆಕು ನೀವ್ಗೆ" – ಎಂತ ರೇಗಾಡ್ದೊ.

ಅಪ್ಪ ಧೈರ್ಯಶಾಲಿ. ಆದರೆ ಬೇಗ ದಾಕ್ಷಿಣ್ಯಕ್ಕೆ ಒಳಗಾಗ್ತಿದ್ದೊ. ಯಾರಿಗೂ ಹೆದ್ರ್‌ತಿಲ್ಲೆ. ಪಾಪ– ಪುಣ್ಯ ಜಾಸ್ತಿ. ಬಡವರ ಕಷ್ಟಕ್ಕೆ ಬೇಗ ಕರ್ಗಿ ಹೋಗ್ತಿದ್ದೊ. " ಎಜಮಾನ್ರೇ, ನನ್ನ ಮಕ್ಕ ಇಂದ್ ಉಪಾಸ" ಎಂತ ಯಾರಾದ್ರ್ ಹೇಳ್ರೆ, ಹಿಂದೆ

ಮುಂದೆ ನೋಡದೆ ಒಂದ್ಸೇರಕ್ಕಿ ಅಳ್ದ್ ಕೊಡ್ತಿದ್ದೊ. ಅವರ ವೈಭವದ ಕಾಲಲಿ ಅವರ ಜೋಸ್ತಿಗೆಲ್ಲಾ ಸಮಾಜಲಿ ದೊಡ್ಡ ದೊಡ್ಡವೇ ಆಗಿದ್ದೊ. ಸಂಪಾಜೆ ಸಣ್ಣಯ್ಯ ಪಟೇಲರ್, ಕೂಜುಗೋಡು ವೆಂಕಟ್ರಮಣ ಗೌಡ್ರ್, ನೆಡ್ಚಿಲ್ ಕೇಶವ ಭಟ್, ಕುಂಭಕೋಡು ಅಚ್ಚುತ ಭಟ್, ಮಾವಾಜಿ ಐತಪ್ಪ ಗೌಡ್ರು, ಮಾವಾಜಿ ರಾಮಣ್ಣ ಗೌಡ್ರು, ಪಳಂಗಾಯ ಗುಡ್ಡಪ್ಪ ಗೌಡ್ರು, ಪಡ್ಡಂಬೈಲ್ ಐತಪ್ಪ ಗೌಡ್ರು, ದೇವರಗುಂಡ ಸುಬ್ಬಣ್ಣ ಗೌಡ್ರು, ಕುಕ್ಕೇಟಿ ಮ್ಯಾಲಪ್ಪ ಗೌಡ್ರು, ಪಿಂಡಿಬನ ಕೇಪು ಗೌಡ್ರು, ಕ್ಯೊಂಗಾಜೆ ದೇವಯ್ಯ ಗೌಡ್ರು, ಹೀಂಗೆ ಬಾಳ ಜನ ದೊಡ್ಡ ದೊಡ್ಡ ತಲೆಗ ಅಪ್ಪನ ಜೋಸ್ತಿಗ ಆಗಿದ್ದೊ. ಅವೆಲ್ಲಾ ನಮ್ಮ ಮನೆಲಿ ತಿಂದುಂಡುದಕ್ಕೆ ಲೆಕ್ಕ ಇಲ್ಲೆ. ಅಪ್ಪಂಗೆ ಒಬ್ಬನೇ ಉಂಡ್‌ದ್, ಗೊತ್ತಿಲ್ಲೆ. ಮನೆಲಿ ಏನಾದರ್ ಹೆಚ್ಚ್‌ಗಟ್ಲೆ ಅಡ್ಗೆ ಮಾಡ್ರೆ, ಸುಬ್ಬಣ್ಣ ಗೌಡ್ರ್ ಮತ್ತೆ ಮ್ಯಾಲಪ್ಪ ಗೌಡ್ರ ಉಂಬಕೆ ಕರ್ಯತಿದ್ದೊ. ಅವರಿಬ್ಬರ ಎಡ, ಬಲ ಕುದ್ರಿಸಿಕಂಡ್, ಅಪ್ಪ ಉಂಬೋದರ ನಾ ಎಷ್ಟೋ ಸರ್ತಿ ನೋಡ್ಯಳೆ.

ಅಪ್ಪಂದ್ ಶಿಸ್ತ್‌ನ ಜೀವನ. ಬೊಳ್ಪುಗೆ 5 ಗಂಟೆಗೆ ಎದ್ರ್‌ತಿದ್ದೊ. ಮರದ ಹಾವುಗೆಗಳ ಮೆಟ್ಟಿಕಂಡ್, ಪಯಶ್ವಿನಿ ಹಳ್ಳಕ್ಕೆ, ಮೊಡ್ಯಾಳರ ಮೂಲೆಗೆ ಮಿಾಯಕೆ ಹೋಗ್ತಿದ್ದೊ. ಅಲ್ಲಿ ಮಿಂದ್, ಒಂದು ಪಾರೆ ಕಲ್ಲ್‌ನ ಮೇಲೆ ಕುದ್ದ್‌ಕಂಡ್, ಅರ್ಧ ಗಂಟೆ ಧ್ಯಾನ ಮಾಡ್ತಿದ್ದೊ. ನೀರ್‌ಲಿ ಮುಣ್‌ಂಗಿ, ತುಂಬಾ ಹೊತ್ತು ಇರ್ತಿದ್ದೊ. ಅವು,

'ನಾ ಜಲಸ್ತಂಭನ ವಿದ್ಯೆ ಕಲ್ತಳೆ"– ಎಂತ ಹೇಳ್ತಿದ್ದೊ. ಲಾಯ್ಕ್‌ಲಿ ಈಜ್‌ತಿದ್ದೊ. ನಂಗೂ ತಮ್ಮಂದರಿಗೂ ಈಜಿಕೆ ಕಲ್ಸಿದೊ. ಆದರೆ ನಾ ಅರ್ಧಲೇ ಕೈ ಬುಟ್ಟೆ. ಅಕ್ಕಂದರ್ ಮತ್ತೆ ತಮ್ಮಂದರ್ ಲಾಯ್ಕ್‌ಲಿ ಈಜ್‌ತಿದ್ದೊ. ಹಳ್ಳಂದ ಮಿಂದ್ ಬಾಕಾಕನ, ಯಾರೊಟ್ಟಿಗೂ ಮಾತಾಡದೆ ಆಚೆ, ಈಚೆ ನೋಡದೆ ಭರಭರನೆ ನಡ್ದ್ ಬಾತಿದ್ದೊ. ಮನೆಗೆ ಬಂದ್ ಬಾಮಿಂದ ಒಂದು ಕೊಡ್ಪಾಣ ನೀರ್ ಎಳ್ದ್, ಒಂದು ಕಂಚಿನ ಚೊಂಬುಗೆ ಹಾಕಿ, ಇಜ್ಜೆಲಿಲಿ ಇದ್ದ ತೊಳ್ಸಿ ದೈಗೆ ಆ ನೀರ್‌ನ ಹಾಕಿ, ಒಳಗೆ ಬಂದ್ ದೇವ್ರಿಗೆ ದೀಪ ಹೋಸಿ, ಊದುಬತ್ತಿ ಹಚ್ಚಿ, ಗಂಟೆ ಆಡ್ಸಿಕಂಡ್, ಗಟ್ಟಿಲಿ ದೇವರ ನಾಮ ಹಾಡಿಕಂಡ್, ಮಂಗಳಾರತಿ ಮಾಡ್ತಿದ್ದೊ.

ಅಪ್ಪ ನಾವ್ಗೆ ಮೊಲ್ಗಿಕೆ ಮುಂದೆ, ನೀತಿಬೋಧೆ ಕತೆಗಳ ಹೇಳ್ತಿದ್ದೊ. ನಮ್ಮ ಮನೆಲಿ ಒಂದೇ ಒಂದು ಕೆಟ್ಟ ಬೊಯ್ಗಳ್ ಯಾರ ಬಾಯಿಲೂ ಬಾತಿತ್ಲೆ. ಹೀಂಗೆ ಒಳ್ಳೆ ಸಂಸ್ಕಾರಲಿ ಬೆಳ್ದ ನಂಗೆ, ಮೇಲು– ಕೀಳು, ಬಡವ – ಬಲ್ಲಿದ, ಎಲ್ಲೋವು ಒಂದೇ ತರ ಕಾಂಬತಿದ್ದೊ. ನಮ್ಮ ಅಪ್ಪ ಕೈ ಬುಟ್ಟ್ ದಾನ ಕೊಡ್ತಿದ್ದೊ. ದಿನಾಲೂ ಐದಾರ್ ಜನ ಅತಿಥಿಗ ಉಂಬಕಾಕನ ಇದ್ದೇ ಇರ್ತಿದ್ದೊ. ನಾ ಸಣ್ಣದಿರಿಕನ ನಮ್ಮ ಮನೆಲಿ ಶ್ರೀಮಂತಿಕೆ ತುಂಬಿ ತುಳ್ಕ್‌ತಿತ್ತ್. ಕೆಲ್ಸಕ್ಕೆ ಆಳ್ ಕಾಳ್‌ಗ ಇದ್ದೊ. ಹಾಂಗಾಗಿ ನಾನೂ, ನನ್ನ ತಮ್ಮಂದರೂ, ಬೊಂಬೆಗಳ ಮಾಡಿಕಂಡ್, ಅದರ್ಲಿ ಆಟ ಆಡಿಕಂಡ್, ಕತೆ ಪುಸ್ತಕಗಳ ಓದಿಕಂಡ್ ಕಾಲ ಕಳ್ಯತಿದ್ದೊ. ನಂಗೆ ಬಂಗಾಳಿ ಕಾದಂಬರಿಂತೇಳ್ರೆ

ಬಾಳ ಇಷ್ಟ. ಶರಶ್ಚಂದ್ರ, ರವೀಂದ್ರನಾಥ ಟಾಗೋರ್, ಬಂಕಿಮ ಚಂದ್ರ ಚಟರ್ಜಿ ಇವರ ಕಾದಂಬರಿಗಳ ಕನ್ನಡ ಅನುವಾದನ ನಾ ತುಂಬಾ ಓದ್‌ತಿದ್ದೆ. ನಾ ಸಣ್ಣದಿರಿಕನ ನಮ್ಮ ಮನೆ ಪಕ್ಕಲಿದ್ದ ಕ್ಲಬ್ ಕಟ್ಟೋಣಲಿ ಪಂಚ್ಯಾತ್ ಆಫೀಸ್ ಇದ್ದ ಕಾರ್ಣ, ಅಲ್ಲಿದ್ದ ಲೈಬ್ರರಿ ಪುಸ್ತಕನೆಲ್ಲಾ ಓದಿ ಮುಗ್ಸಿದ್ದೆ. ಆಗ ನನ್ನ ಎಳೆ ಮನಸ್ಸ್ ಬಾಳ ಶುದ್ಧ ಇತ್ತ್. ಮನೆಗೆ ಬಾತಿದ್ದ ನೆಂಟ್ರ ಚಾಕ್ರಿ ಎಲ್ಲಾ ನಾ ಮಾಡ್ತಿದ್ದೆ. ಸಣ್ಣದರ್‌ಂದಳೂ ನಂಗೆ ವಯಸ್ಸಾದೊವು ಮತ್ತೆ ಮಕ್ಕಾಂತೇಳ್ರೆ ಬಾಳ ಪ್ರೀತಿ.

ನನ್ನ ದೊಡ್ಡ ತಮ್ಮ ನಾರಾಯಣ, ಸಣ್ಣಕ್ಕ ದಮಯಂತಿ, ಮತ್ತೆ ಅಣ್ಣ ರಾಮಣ್ಣ, ನಮ್ಮ ಪೈಕಿ ಬಾಳ ಸುಖೀ ಜೀವಿಗ. ಅಪ್ಪನ ಶ್ರೀಮಂತಿಕೆನ ಅರಿವು ಅವ್ಕೆ ತುಂಬಾ ಗೊತ್ತಿತ್ತ್. ಅವು ಮೂರು ಜನ ಶ್ರೀಮಂತರ ಮಕ್ಕಳಾಂಗೇ ಬೆಳ್ದೊ. ಒಮ್ಮೆ ಅವ್ವ ನಾಣಿನ ಕನಕಮಜಲಿಗೆ ದೊಡ್ಡಕ್ಕನಲ್ಲಿಗೆ ಕಳ್ಸಿದೊ. ಆಗ ಅಂವ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕಟ್ಟಿತ್ತ್. ರಿಸಲ್ಟ್ ಬಾತಿಲ್ಲೆ. ಅವ್ವನ ಎರ್ಡ್ ಚಿನ್ನದ ಚೈನ್‌ಗ ಅಕ್ಕನ ಮನೆಲಿದ್ದೊ. ಅದರ ಬಾಕನ ಹಿಡ್ಕಂಡ್ ಬಾಕೆ ಅವ್ವ ನಾಣಿನಲ್ಲಿ ಹೇಳಿದೊ. ಎರ್ಡ್ ಮೂರು ದಿನ ಕಳ್ದರೂ ಅಂವ ಬಾತೇ ಇಲ್ಲೆ. ಅವ್ವಂಗೆ ಗಾಬರಿ ಆಗಿ, ಅಣ್ಣನ ಕಳ್ಸಿದೊ. ಅಣ್ಣ ಬೊಳ್ಪಿಗೆ ಹೋಗಿ ಹಿಂಬೊತ್ ಬಂದಂವ,

“ ಅಂವ ಮೊನ್ನೆನೇ ಚಿನ್ನದ ಚೈನ್‌ಗಳ ತಕಂಡ್ ಸುಳ್ಯಕ್ಕೆ ಬಂದುಟು ಗಡ.”– ಎಂತ ಅವ್ವನಲ್ಲಿ ಹೇಳ್ತ್. ಮನೆಲಿ ಎಲ್ಲೋವ್ಕೂ ಗಾಬ್ರಿ ಆತ್. ಅವ್ವ ಒಂದು ವಾರ ಅನ್ನ, ನೀರ್ ಬುಟ್ಟ್ ಮೊಲ್ಗಿದೊ. ನಾರಾಯಣ ಅಪ್ಪನ ಮುದ್ದ್‌ನ ಮಂಙ. ಸಣ್ಣದಿರಿಕನ ಅಂವನ ಯಾಗೋಳೂ ತೊಡೆ ಮೇಲೆ ಕುದ್ರಿಸಿಕಂಡ್, ಅಪ್ಪ ಮಂಡಲಿ ಕುದ್ದ್ ವ್ಯಾಪಾರ ಮಾಡ್ತಿದ್ದೊ. ಅವನ ಕೈಂದಳೇ ಗಿರಾಕಿಗಳ್‌ಂದ ದುಡ್ಡು ತಕಂಡ್, ಮಂಡದ ದುಡ್ಡುನ ಪೆಟ್ಟಿಗೆಗೆ ಹಾಕ್ಸ್‌ತಿದ್ದೊ. ಅಂವ ಭಾಗ್ಯವಂತ ಎಂತ ಹೇಳ್ತಿದ್ದೊ. ಅಂವ ಹುಟ್ಟಿದ ಮೇಲೆ ಅವರ ಶ್ರೀಮಂತಿಕೆ ಹೆಚ್ಚಿತ್ ಗಡ. ನಾಣಿ ಊರ್ ಬುಟ್ಟ್ ಒಂದು ವಾರದ ಮೇಲೆ ಊರಿಗೆ ಬಾತ್. ಅಪ್ಪ ಮತ್ತೆ ಅವ್ವ ಅಂವನ ತೊಬ್ಬಿಕಂಡ್ ಗೋಳೋಂತ ಮೊರ್ಲ್ಡೊ. ಅಂವ ಬೊಂಬಾಯಿಗೆ ಹೋಗಿತ್ತ್ ಗಡ. ರೇಲ್ವೇ ನಿಲ್ದಾಣಲಿ ಇಳ್ದ ಕೂಡ್ಲೇ, ಅಂವನ ಹಣ, ಚಿನ್ನ, ಬಟ್ಟೆಗಳ ಯಾರೊ ಲಪ್ಟಾಯಿಸಿದೊ ಗಡ. ಆ ಮೇಲೆ ಯಾರೋ ಪುಣ್ಯಾತ್ಮರ್ ಇಂವಂಗೆ ಊರಿಗೆ ಬಾಕೆ ಸಾಯ ಮಾಡ್ದೊ ಗಡ. ಅವ್ವ, “ ನಿನ್ನ ಚಿನ್ನ, ದುಡ್ಡು ಹೋದರೆ ಅಷ್ಟೇ ಹೋತ್. ಜೀವ ಮುಟ್ಟ ಬಂದಲೇ? ಅದೇ ದೊಡ್ಡದ್” – ಎಂತ ಹೇಳ್ದೊ. ಅಪ್ಪ, “ನಿಂಗೆ ಬೊಂಬಾಯಿ ನೋಡೊಕೂಂತಿದ್ರೆ ನನ್ನಲ್ಲಿ ಹೇಳಕಾಗಿತ್ತ್. ನಾ ನಿನ್ನ ಕಳ್ಸ್‌ತಿದ್ದೆ. ಹೀಂಗೆ ಹೇಳದೆ ಕೇಳದೆ ಹೋದ್ದೋ? – ಎಂತ ಹೇಳ್ದೊ.

ಆ ಮೇಲೆ ಅಪ್ಪ, ಅವು ಬೊಂಬಾಯಿಂದ ಕೋವಿ ಮೊದ್ದು ತರ್ಸ್‌ತಿದ್ದ, ಅಬ್ದುಲಾಲ್ ನೂರ್ ಭಾಯಿಯೊವ್ಕೆ ಕಾಗ್ದ ಬರ್ಸಿ ಹಾಕಿ, “ ನನ್ನ ಮಕ್ಕಳ ಕಳ್ಸಿನೆ. ಅವ್ಕೆ ಬೊಂಬಾಯಿ ಎಲ್ಲಾ ತಿರ್ಗಿಸಿ ಕಳ್ಸಿ” ಎಂತ ಕೇಳಿಕೊಂಡೊ. ಒಂದು ವಾರಲಿ

ಅಲ್ಲಿಂದ ಉತ್ತರ ಬಾತ್. ಮಕ್ಕಳ ಕಳ್ಸೀಂತ. ಅದರಾಂಗೆ ಅಣ್ಣ ಮತ್ತೆ ತಮ್ಮ ನಾಣಿನ ಜೊತೆ ಮಾಡಿ, ಮಂಗ್ಳೂರ್‌ಗೆ ಹೋಗಿ, ರೈಲ್ ಹತ್ತಿಸಿ ಕಳ್ಸಿದೊ. ಒಂದು ವಾರ ಬೊಂಬಾಯಿ ಸುತ್ತಿ ಅವಿಬ್ರೊರು ಬಂದೊ. ಅಬ್ದುಲಾಲ್ ನೂರ್ ಭಾಯಿಯೊವು ಅವರ ಕಡೆ ಜನ ಕಳ್ಸಿ, ಇವರಿಬ್ಬರ ರೇಲ್ವೇ ನಿಲ್ದಾಣಂದ ಅವರ ಮನೆಗೆ ಬರ ಮಾಡಿಕೊಂಡೊ ಗಡ. ಬಾಳ ಲಾಯ್ಕ್‌ಲಿ ನೋಡಿಕೊಂಡೊ ಗಡ. ಅವರ ಮಕ್ಕಳ ಜೊತೆ ಮಾಡಿ ಊರೆಲ್ಲಾ ತೋರ್ಸಿದೊ ಗಡ. ಅಂತೂ ಅಣ್ಣ ಮತ್ತೆ ತಮ್ಮ ಬೊಂಬಾಯಿ ಸುತ್ತಿ, ಬಾಳ ಸಂತೋಷಂದ ಊರಿಗೆ ಬಂದೊ.

ನಾ ಸಣ್ಣದಿರಿಕನ ನಮ್ಮ ಅಪ್ಪ ಮಾಸ ತಿಂಬತಿತ್ಲೆ. ಅವರ ನೋಡಿ ನಾನೂ ಸಣ್ಣಕ್ಕನೂ ಅವರಾಂಗೆ ನೆಟ್ಟಿ ಕ್ಯಾ ತಿಂಬತಿದ್ದೊ. ನಮ್ಮ ಮನೆಲಿ ಯಾರಿಗೂ ಆಗ ಕಳ್ಳ್, ಸರಾಯಿಂತೇಳ್ರೆ ಗೊತ್ತಿತ್ಲೆ. ಸೊತಂತ್ರ ಸಿಕ್ಕಿದ ಮೇಲೆ ಗಾಂಧೀಜಿಯೊವು ಮದ್ಯಪಾನ ವಿರೋಧ ಚಳವಳಿ ಮಾಡ್ದೊ. ಮದ್ಯಪಾನ ನಿಷೇಧ ಜ್ಯಾರಿಗೆ ಬಾತ್. ಕುಡ್ಕರೆಲ್ಲಾ ಕಂಗಾಲಾಗಿ, ಕುದ್ದ್ ಮುಚ್ಚಿ ಕುಡ್ಯತಿದ್ದೊ. ಕಳ್ಳ ಬಟ್ಟಿ ಸರಾಯಿ ಮಾಡುವವರ ಹಿಡ್ದ್ ಕೇಸ್ ಮಾಡ್ತಿದ್ದೊ. ಹಳ್ಳಿ ಹಳ್ಳಿಲಿನೂ ಕುಡ್ಯಕಾಗದ್‌ಂತ ಕಾಂಗ್ರೆಸ್‌ನೊವು ಪ್ರಚಾರ ಮಾಡ್ದೊ. ಅಲ್ಲಲ್ಲಿ ಭಾಷಣ, ಬಯಸ್ಕೋಪು (ಮೂಕ ಚಲನ ಚಿತ್ರ) ತೋರ್ಸಿ, ' ಕುಡ್ಯಕಾಗದ್, ಕುಡ್ದರೆ ಅದರ್‌ಂದ ಸಂಸಾರ ಹಾಳಾದೆ, ಕಾಯ್ಲೆ ಬಂದ್ ಬೇಗ ಸತ್ತವೆ'ಂತ ಜನಕ್ಕೆ ಎಚ್ಚರ ಕೊಡ್ತಿದ್ದೊ. ಸುಳ್ಯಲಿ ಕೆಲ್ಸಿ ಕಟ್ಟೆ ಹಕ್ಕಲೆ, ಗಾರ್ಡ್ ಶೆಡ್‌ಲಿ, ಬಂಗ್ಲೆ ಗುಡ್ಡೆಲಿ ಬಯಸ್ಕೋಪು ಪ್ರದರ್ಶನ ಮಾಡ್ತಿದ್ದೊ. ನಾನೂ, ತಮ್ಮಂದರೂ ಅದಕ್ಕೆಲ್ಲಾ ಹೋಗಿ, ನೋಡಿ ಬರ್ತಿದ್ದೊ. ಕುಡ್ಯೋದು ದೊಡ್ಡ ಪಾಪದ ಕೆಲ್ಸಾಂತ ನನ್ನ ಮನ್ಸ್‌ಲಿ ಆಗ ಗಟ್ಟಿಲಿ ಅಚ್ಚೊತ್ತಿತ್ತ್. ನಮ್ಮ ಮನನೆಲಿ ಅದರ ತಾತಿತ್ಲೆ.

ಇಷ್ಟೊಂದು ನಿಯತ್ತಿಲಿ ಇದ್ದ ನಮ್ಮ ಅಪ್ಪ ಯಾಗ ಕುಡ್ಯಕೆ ಸುರು ಮಾಡ್ದನೋ, ಆಗ ನಂಗೆ ತುಂಬಾ ಬೇಜಾರಾತ್. ಅದರ್‌ಂದ ಮೇಲೆ ಅಪ್ಪನ ಅವನತಿ ಸುರಾತ್. ಒಮ್ಮೆ ಅಪ್ಪ ಕುಡ್ದ್ ಬಂದ್ ಗೋಳೋಂತ ಮೊರ್ಡ್, ಅವ್ವನೊಟ್ಟಿಗೆ ಏನೋ ಹೇಳ್ತಿದ್ದೊ. ನಡಿರ್‌ಳ್ ಸಮಯ. ನಂಗೆ ಫಕ್ಕನೆ ಎಚ್ಚರ ಆತ್. ಅಪ್ಪ ಮಂಚಲಿ ಕುದ್ದ್‌ಕಂಡಿದ್ದೊ. ನಾನೂ ತಮ್ಮಂದರೂ, ನೊಡು ಕೋಣೆಲಿ ಹಾಸಿಗೆ ಹಾಸಿ, ಅಪ್ಪನ ಮಂಚದ ಕೆಳಗಡೆ ಅವ್ವನೊಟ್ಟಿಗೆ ಮೊಲ್ಗಿದ್ದೊ. ತಮ್ಮಂದರಿಗೆ ಗಾಢ ನಿದ್ದೆ ಬಂದಿತ್ತ್. ಅಪ್ಪ ಬುಡದೆ ಮೊರ್ಡ್ತಿದ್ದೊ. ಅವ್ವ, ಅಪ್ಪನ ಸಮಾಧಾನ ಮಾಡ್ತಿದ್ದೊ. ಅವರಿಬ್ರೊರ ಮಾತ್ ಕತೆಂದ ನಂಗೆ ತಿಳ್ದ್ ಬಂದ ಸಂಗತಿ ಏನ್‌ಂತೇಳ್ರೆ, ಆಗ ಮದ್ಯಪಾನ ನಿಷೇಧ ಕಾನೂನು ಜ್ಯಾರಿಲಿ ಇದ್ದ ಕಾರ್ಣ, ಅಪ್ಪ ಕುಡ್ಯಕೆ ಐದ್ ಮೈಲ್ ದೂರಲಿರುವ ಪೆರಾಜೆಗೆ ಹೋಗಿದ್ದೊ. ಪೆರಾಜೆ ಕೊಡಗ್ ಜಿಲ್ಲೆಗೆ ಸೇರಿತ್ತ್.

ಕೊಡಗ್ ಜಿಲ್ಲೆಲಿ ಮದ್ಯಪಾನ ನಿಷೇಧ ಇತ್ಲೆ. ಹಾಂಗಾಗಿ ದಕ್ಷಿಣ ಕನ್ನಡದ ಸುಳ್ಯ, ಪೆರಾಜೆಗೆ ಹಕ್ಕಲೆ ಇದ್ದದರ್‌ಂದ, ಇಲ್ಲಿನ ಕುಡುಕರೆಲ್ಲಾ ಪೆರಾಜೆಗೆ ಹೋಗಿ, ಕುಡ್ದ್ ಬಾತಿದ್ದೊ. ಅಪ್ಪ ಹಾಂಗೆ ಕುಡ್ಕಂಡ್ ಬಾಕಾಕನ, ಪರಿವಾರಕಾನಲಿ ಒಬ್ಬ

ಪೋಲೀಸ್ ಪೇದೆ ಎದ್ರಾಗಿ, ಅಪ್ಪ ಕುಡ್ದ ಕಾರ್ಣ, ಅವರ ಹೆದ್ರಿಸಿ, ಅವರ ಜೋಬುಲಿದ್ದ ಪರ್ಸ್‌ನ ಎಳ್ಕಂಡ್ ಕಳ್ಸಿತ್‌ಗಡ. ಒಂದು ಕಾಲಲಿ ಸುಳ್ಯದ ಸಬ್ ಇನೆಸ್ಪೆಕ್ಟರ್‌ಂದ ಹಿಡ್ದ್ ಪೋಲೀಸ್‌ಗ ಎಲ್ಲಾ ಅಪ್ಪಂಗೆ 'ಸಲಾಮು' ಹಾಕ್ತಿದ್ದೊ. ಅಂಥಾ ಪೋಲೀಸ್‌ನೊವು ಅಪ್ಪನ ಹೆದ್ರಿಸಿ, ಪರ್ಸ್ ಎಳ್ಕಂಡತ್‌ಂತೇಳಿರೆ, ಅಪ್ಪನ ಸ್ಥಿತಿ ಎಷ್ಟ್ ಕೆಳ ಮಟ್ಟಕ್ಕೆ ಇಳ್ತ್? ಇದೆಲ್ಲಾ ಕುಡುಕತನಂದ ಅಲ್ಲನೋ? ನಂಗೆ ಆಗ ಹನ್ನೆರ್ಡ್ ವೊರ್ಸ. ಇದರೆಲ್ಲಾ ಕೇಳಿ ನಂಗೆ ಮೊರ್ಢಿಕೆ ಬಾತ್. ಅಷ್ಟರವರೆಗೆ ಅಪ್ಪ ಕುಡ್ದವೇಂತ ನಂಗೆ ಗೊತ್ತಿತ್ಲೆ. ಅವು ಕುಡ್ದವೇಂತ ಗೊತ್ತಾಕನ ನಂಗೆ ತುಂಬಾ ಆಶ್ಚರ್ಯ ಆತ್. ನಾವ್ಗೆಲ್ಲಾ ಉತ್ತಮ ಸಂಸ್ಕಾರ ಹೇಳಿಕೊಟ್ಟ್, ಬುದ್ಧಿವಾದ ಹೇಳ್ತಿದ್ದ ಅಪ್ಪ ಈಗ ಮಾಡ್ದೇನ್? ನಂಗೆ ಏನಾತೋ ಗೊತ್ತಿಲ್ಲೆ. ನಾ ಸೀದಾ ಎದ್ದ್ ಅಪ್ಪನ ಹಕ್ಕಲೆ ಹೋಗಿ, ಗೋಳೋಂತ ಮೊರ್ತೆ. ಅವರೊಟ್ಟಿಗೆ,

" ಅಪ್ಪಾ ನೀವು ಕುಡ್ಯಬೊಡಿ, ನೀವು ಕುಡ್ದ್ ಹಾಳಾದರೆ, ನಮ್ಮೆಲ್ಲಾ ಸಾಂಕೋವು ಯಾರ್?" –ಎಂತ ಕೇಳ್ದೆ. ಪಕ್ಕನೆ ಅಪ್ಪಂಗೆ ತಲೆಗೆ ಹತ್ತಿದ್ ಇಳ್ತ್‌ಂತ ಕಂಡದೆ, ಅವು ನನ್ನ ತಲೆ ಪೂಜಿ,

" ಇಲ್ಲೆ, ಇಲ್ಲೆ. ಇನ್ನ್ ಕುಡ್ಯೋದುಲ್ಲೆ. ನೀ ಹೋಗಿ ಮೊಲ್ಗ್." – ಎಂತ ಹೇಳ್ದೊ. ಬೋದಾಳ್ತಿ ನಾ. ಅದರ ಸತ್ಯ ನಂಬಿದೆ. ಅಷ್ಟರವರೆಗೆ ಅಪ್ಪನ ಎದ್ರ್ ನಿಲ್ಲಿಕೆ ಹೆದ್ರ್‌ತಿದ್ದ ನಾ, ಅಂದ್ ಅದ್ ಹೇಂಗೆ ಅಷ್ಟ್ ಧೈರ್ಯಂದ ಮಾತಾಡ್ದೆನೋ? ನಂಗೇ ಆಶ್ಚರ್ಯ. ಮನೆಲಿ ನಾ ಹತ್ತರ್ಲಿ ಒಬ್ಬ ಆಗಿ ಬೆಳ್ದವು. ಯಾರೂ ನನ್ನ ಲೆಕ್ಕಕ್ಕೆ ತಕಂಬತಿತ್ಲೆ. ಎಲ್ಲೋವೂ ಅವರವರ ಬಿಟ್ಟಿ ಕೆಲ್ಸ ಮಾಡ್ಸಿಕಂಬಕ್ಕಾಗಿ, ನನ್ನ ಉಪಯೋಗಿಸಿಕಂಬೊತಿದ್ದೊ. ನನ್ನ ಮನ್ಸ್‌ನೊಳಗೆ ಏನೆಲ್ಲಾ ನಡ್ದದೇಂತ ಯಾರಿಗೂ ಗೊತ್ತಿತ್ಲೆ. ನಾ ಒಬ್ಬ ಕೆಲ್ಸಕ್ಕೆ ಬಾರದ ಏನೇನೂ ತಿಳ್ಯದ ಪೆದ್ದ್‌ಂತ ಎಲ್ಲೋವೂ ತಿಳ್ದಿದ್ದೊ. ಅವ್ವ ಎಷ್ಟೋ ಸಲ ನಂಗೆ ಹೇಳ್ತಿದ್ದೊ,

" ನೀ ಎಲ್ಲರ ಬಿಟ್ಟಿ ಮಾಡ್, ಕಕ್ಕೆ ಹೇಳ್ದೆ ಗಡ. ನಾ ಎಲ್ಲರ ಹೇಲ್ ತಿಂದನೆ, ನನ್ನ ಹೇಲ್ ಯಾರ್ ತಿಂದವೆ? ಹಾಂಗಾಂತ್ ನಿನ್ನ ಕತೆ. ನೀ ಸೋತರೆ ಯಾರ್ ನಿಂಗೆ ಇಲ್ಲೆ." –ಎಂತ ಹೇಳ್ತಿದ್ದೊ. ಅವರ ಈ ಮಾತ್‌ಲಿ ಎಷ್ಟ್ ಅರ್ಥ ಉಟ್ಟೋಂತ ಆಗ ನಂಗೆ ತಿಳ್ದತ್ಲೆ. ಆದರೆ ಈಗ ನಂಗೆ ತಿಳುವಳಿಕೆ ಬಂದ ಮೇಲೆ ಆ ಮಾತ್‌ನ ಅರ್ಥ ಲಾಯ್ಕ್‌ಲಿ ಆಗುಟ್ಟು.

ಮೊರ್ದಿನ ಸಣ್ಣಕ್ಕನ ಹಕ್ಕಲೆ ಇರ್ಕ್ ನಡ್ದ ಘಟನೆ ಎಲ್ಲಾ ಹೇಳಿ ವರದಿ ಒಪ್ಪಿಸಿದೆ. ಅದ್ಕೆ, ಈ ವಿಷಯ ಎಲ್ಲಾ ಮುಂದೆನೇ ಗೊತ್ತಿತ್ತ್ ಗಡ. ಅದರ್‌ಂದ ನಂಗೆ ತಿಳ್ದ ವಿಷಯ ಹೀಂಗುಟ್ಟು. ಅಪ್ಪ ದಿನಾ ಹಳ್ಳಕ್ಕೆ ಹೋಗಿ ಮಿಂದ್, ತುಂಬಾ ಹೊತ್ತ್ ನೀರ್‌ಲಿ ಮುಣ್‌ಂಗಿ ಕುದ್ರ್‌ತಿದ್ದೊ. ಒಮ್ಮೆ ಅವು ಹೀಂಗೆ ನೀರ್‌ಲಿ ಮುಣ್‌ಂಗಿ ಕುದ್ರಿಕಾಕನ, ಅವರ ಶ್ವಾಸಕೋಶಕ್ಕೆ ನೀರ್ ಹೋಗಿ, ಮನೆಗೆ ಬಂದ್ ತುಂಬಾ ಕಷ್ಟ ಪಟ್ಟೊ ಗಡ. ಶ್ವಾಸ ತೆಗ್ಯಕೆ ತುಂಬಾ ಕಷ್ಟ ಆಗ್ತಿತ್ತ್ ಗಡ. ಆಗ ಅವರ ಸ್ನೇಹಿತ,

ಆಗನ ಧರ್ಮಾಸ್ಪತ್ರೆನ ಡಾಕ್ಟ್ರ ಆನಂದ ಎಂಬೊವು ಅಪ್ಪನ ಹಕ್ಕಲೆ ಇದಕ್ಕೆ ಮೊದ್ದ್, ಹಂಞಿ ಬ್ರಾಂಡಿಗೆ ಜೇನ್ ಹಾಕಿ ಕುಡ್ದರೆ, ಒಳ್ಳೆದ್‌ಂತ ಹೇಳ್ದೊ ಗಡ. ಅಲ್ಲಿಗೆ ಮುಟ್ಟ ಮದ್ಯ– ಮಾಸ ಮುಟ್ಟದ ಅಪ್ಪ, ಕಡೆಗೆ ಬ್ರಾಂಡಿನ ಮೊದ್ದ್‌ನ ರೂಪಲಿ ತಕಂಬಕೆ ಸುರು ಮಾಡ್ದೊ. ಕ್ರಮೇಣ ಅದರ ದಾಸ ಆದೊ.

ಇದರೆಲ್ಲಾ ಸಣ್ಣಕ್ಕ ನಂಗೆ ಹೇಳ್ತ್. ಅಕೆರಿಗೆ ಅಪ್ಪ, ಸರಾಯಿನೊಟ್ಟಿಗೆ, ಮಾಸನನೂ ತಿಂಬಕೆ ಸುರು ಮಾಡ್ದೊ. ಅವರ ನೋಡಿ, ಅಣ್ಣನೂ ಕುಡ್ಯಕೆ ಸುರು ಮಾಡ್ತ್. ಅಪ್ಪ –ಮಂಜ ಇಬ್ರೊಬ್ರೂ ಅದರ ದಾಸ ಆದೊ. ಇದರ್‌ಂದಾಗಿ ವ್ಯಾಪಾರಲಿ ಏರು ಪೇರಾತ್. ಮಿತಿ ಮಿರಿದ ದಾನ– ಧರ್ಮ, ದರ್ಬಾರ್‌ನ ಜೀವನ ಮಾಡ್ದರ್‌ಂದ, ಮಂಗ್ಳೂರ್‌ನ ಸಾವ್ಕಾರರ ಸಾಲನ ಸಮಯಕ್ಕೆ ಸರಿಯಾಗಿ ತೀರ್ಸಿಕೆ ಆತ್ಲೆ. ಅವು ಒಬ್ರೊಬ್ಬನೇ ಇವ್ಕೆ ಸಾಮಾನ್ ಕೊಡ್ದರ ನಿಲ್ಸಿದೊ. ಆಗ ಸುಳ್ಯಲಿ ಬೇರೆ ಜೀನ್ಸ್ ಅಂಗ್ಡಿಗ ಸುರಾದೊ. ಅಪ್ಪನ ಅವನತಿನೂ ಸುರಾತ್. ಅಪ್ಪಂಗೆ ಒಡಹುಟ್ಟಿದೊವು ಇತ್ಲರೂ, ಕುಟುಂಬದ ಅಕ್ಕ, ತಂಗೆಕಳ ಸ್ವಂತದವರಾಂಗೆ ನೋಡಿಕಂಬತಿದ್ದೊ. ಅವ್ಕೆಲ್ಲಾ ನಮ್ಮ ಮನೆನೇ ತೌರು ಮನೆ. ಅವು ಬಂದ್ ಹೋಕಾಕನೆಲ್ಲಾ, ನಮ್ಮ ಜವುಳಿ ಮಳಿಗೆಂದ ಹೊಸ ಸೀರೆಗಳ ಕೊಡ್ತಿದ್ದೊ. ಕುಟುಂಬದವ್ಕೆಲ್ಲಾ ತುಂಬಾ ಸಾಯ ಮಾಡ್ತಿದ್ದೊ.

ನನ್ನ ಎರ್ಡ್‌ನೇ ಅಕ್ಕ (ಸಣ್ಣಕ್ಕ) ದಮಯಂತಿನ ಮೊದ್ವೆನ ಬಾಳ ವೈಭವಂದ ಮಾಡ್ದೊ. ಭಾವ ಧಾರವಾಡದ ಕೃಷಿ ಕೋಲೇಜಿಲಿ ಕಲ್ಯಕಾಕನ ಎರ್ಡ್ ವೊರ್ಸ. ತಿಂಗ ತಿಂಗ ಅಪ್ಪನೇ ಅವ್ಕೆ ಖರ್ಚಿಗೆ ಹಣ ಕಳ್ಸ್‌ತಿದ್ದೊ. ಹಳ್ಳಿನ ತುಂಬಾ ಶ್ರೀಮಂತ ಹೈದಂಗ, ಅಕ್ಕನ ಮೊದ್ವೆ ಆಕೆ ತುದಿಗಾಲ್‌ಲಿ ನಿಂತಿದ್ದೊ. ಆದರೆ ಅದ್ ಯಾರ್ನನೂ ಒಪ್ಪಿತ್ಲೆ. ವಿದ್ಯೆ ಕಲ್ತ, ಸರ್ಕಾರೀ ಉದ್ಯೋಗಲೇ ಇದ್ದ ಹೈದನನೇ ಮೊದ್ವೆ ಆದೂಂತ ಅದ್ ಹಟ ಹಿಡ್ತ್. ಅದ್ ರೂಪಕ್ಕೆ, ಹಣಕ್ಕೆ ಬೆಲೆ ಕೊಡ್ತಿತ್ಲೆ. ವಿದ್ಯೆಗೆ ತುಂಬಾ ಬೆಲೆ ಕೊಡ್ತಿತ್ತ್. ಹಾಂಗಾಗಿ ಧಾರವಾಡಲಿ ಕೃಷಿ ಕೋಲೇಜಿಲಿ ಓದ್‌ತಿದ್ದ ಭಾವಂಗೆ, ಕೋಲೇಜ್ ಶಿಕ್ಷಣಕ್ಕೆ ಹಣ ಕಳ್ಸಿಕೆ ಒಪ್ಪಿದೊ. ಮೊದ್ವೆ ಆದ ಮೇಲೆ ಉದ್ಯೋಗನ ಸಾ ಮಾಡ್ಸಿಕೊಟ್ಟೊ. ಸೋಮವಾರ ಪೇಟೆಲಿ ಮನೆ ಮಾಡಿ ಕೊಟ್ಟ್, ಅಕ್ಕನ ಒಂದ್ ದಡ ಸೇರ್ಸಿದೊ. ಸಣ್ಣಕ್ಕಂಗಾಗಿ ಅಪ್ಪ ತುಂಬಾ ದುಡ್ಡು ಖರ್ಚ್ ಮಾಡ್ದೊ.

ದಿನಂದ ದಿನಕ್ಕೆ ವ್ಯಾಪಾರಲಿ ಕೆಳಗೆ ಕೆಳಗೆ ಇಳ್ಯಕಾಕನ, ಅಣ್ಣಂಗೆ ಇದರೆಲ್ಲಾ ಸಹಿಸಿಕ್ಕೆ ಆತ್ಲೆ. ಅಂವ ಬಾಳ ಸುಕಲಿ ಬೆಳ್ದಂವ. ಅಕೆರಿಗೆ ಅಂವ ಆತ್ಮಹತ್ಯೆ ಮಾಡಿಕಂಡತ್. ಆ ಅಘಾತಂದ ಅಪ್ಪ ಕಂಗಾಲಾದೊ. ಸಾಲಗಾರರ ಕಾಟ ತಡ್ಯಕಾಗದೆ ಕೂಟೇಲ್ ಆಸ್ತಿನ ಮಾರಾಟ ಮಾಡಿ, ಸಾಲ ತೀರ್ಸಿದೊ. ಬಳ್ಳಡ್ಕ ಆಸ್ತಿ ಒಕ್ಕಲ್‌ನವರ ಪಾಲಾತ್. ಪಾಲಡ್ಕಲಿ ಇದ್ದ ಜಾಗೆನ ಕೊರಗಪ್ಪ ದೊಡವಂಗೆ ದಾನ ಮಾಡ್ದೊ. ದೊಡಪ ಕೂಟೇಲ್ ಆಸ್ತಿನ ನೋಡಿಕಂಡಿದ್ದೊ. ಕೂಟೇಲ್‌ನ ಮಾರಿಕಾಕನ, ದೊಡಪನ ಪಾಲಡ್ಕಲಿ ಕುದ್ರಿಸಿ, ಆ ಆಸ್ತಿನ ಅವರ ಹೆಸ್ರಿಗೆ ಮಾಡ್ದೊ. ಅವುನೂ ಅದರ

ಇಸಿಕಂಡತ್ಲೆ. ಅದರ ಮಾರಿ ಮಂಞನಲ್ಲಿಗೆ ಹೋದ್ಯೊ.

ಅಣ್ಣ ತೀರಿ ಹೋಕನ ಅತ್ತಿಗೆಗೆ ಮೂವತ್ತ ಮೂರು ವೊರ್ಸ. ಎಂಟ್ ಮಕ್ಕ ಇದ್ದೊ. ಮೂರು ಗಂಡ್, ಐದ್ ಹೆಣ್ಣ್. ದೊಡ್ಡ ಮಂಜ ಹೂವಯ್ಯ ಆಗ ಹೈಸ್ಕೂಲ್‌ಲಿ ಥರ್ಡ್ ಪೊರ್ಮ್ ಓದಿತ್ತ್. ಉಳ್ದೋವೆಲ್ಲಾ ಸಣ್ಣೋವು. ಅತ್ತಿಗೆ ಸಣ್ಣ ಐದ್ ಮಕ್ಕಳ ಕರ್ಕಂಡ್ ಅವರ ತಮ್ಮನ ಮನೆಗೆ ಹೋದ್ಯೊ. ಅವ್ಕೆ ಒಬ್ಬನೇ ತಮ್ಮ. ಅವರ ತಮ್ಮ ಬಳ್ಳಡ್ಕ ನಾರಾಯಣ ಆಗ ನಡ್ಗಲ್‌ನ ಮಾಣಿ ಬೈಲ್‌ಲಿ ಆಸ್ತಿ ಮಾಡಿಕಂಡಿತ್ತ್. ಮೊದ್ವೆ ಆಗಿ ಸಂಸಾರಸ್ಥ ಆಗಿತ್ತ್. ಸುಬ್ರಹ್ಮಣ್ಯ ಹೈಸ್ಕೂಲ್‌ಲಿ ಗುಮಾಸ್ತ ಕೆಲ್ಸನೂ ಇತ್ತ್. ಆ ಸಮಯಲಿ ಅವನ ಹೆಣ್ಣ್ ಸುರುನ ಹೆರ್ಗೆಲಿ ತೀರಿ ಹೋಗಿತ್ತ್. ಆಗ ಅಂವ ಒಂಟಿ ಆಗಿದ್ದ ಕಾರ್‍ಣ, ಅಂವಂಗೆ ಎರಡ್ನೇ ಮೊದ್ವೆ ಆಕನ ಮುಟ್ಟ, ಅಂವಂಗೆ ಆಸರೆ ಆಗಿ, ಅಂವನ ಮನೆ ನೋಡಿಕಂಡ್, ಅತ್ತಿಗೆ ಮಕ್ಕ ಅವನೊಟ್ಟಿಗೆ ಇದ್ದೊ. ಹೂವಯ್ಯ ಅತ್ತಿಗೆನ ಸಣ್ಣ ಸೋದರ ಮಾಂವ ಮಾಣಿಬೆಟ್ಟ್ ವೆಂಕಪ್ಪ ಮಾಸ್ಟ್ರಲ್ಲಿ, ಇದ್ದ್‌ಕಂಡ್ ಸುಳ್ಯ ಬೋರ್ಡ್ ಹೈಸ್ಕೂಲ್‌ಲಿ ಎಸ್.ಎಸ್.ಎಲ್.ಸಿ ಮಾಡಿ, ಪ್ರಥಮ ದರ್ಜೆಲಿ ಪಾಸಾತ್. ಅಂವಂಗೆ ಮಂಗ್ಳೂರ್ ಸೇಂಟ್ ಎಲೋಶಿಯಸ್ ಕೋಲೇಜಿಲಿ ಪಿ.ಯು.ಸಿಗೆ ಸೇರಿಕೆ ಸೀಟ್ ಸಿಕ್ಕಿತ್. ಆದರೆ ದುಡ್ಡು ಹೊಂದಿಸಿಕಾಗದೆ, ಅಂವ ವಿದ್ಯೆನ ಅರ್ಧಕ್ಕೆ ನಿಲ್ಲಿಸಿತ್. ಅಪ್ಪ ಅಂವನ ಸಹಕಾರಿ ಸಂಘಗಳ ತರಬೇತಿ ಶಾಲೆಗೆ ಮಡಿಕೇರಿಗೆ ಸೇರ್ಸಿದ್ಯೊ. ಅಲ್ಲೂ ಪ್ರಥಮ ಶ್ರೇಣಿಲಿ ಪಾಸಾಗಿ, ಐವರ್ನಾಡ್ ಸೊಸ್ಯಾಟಿಲಿ ಕೆಲ್ಸಕ್ಕೆ ಸೇರ್ತ್. ಆಗ ನಾ ತಾಲೂಕು ಬೋರ್ಡ್ ಮೆಂಬರಾಗಿದ್ದೆ. ಎನ್.ಎಂ. ಬಾಲಕೃಷ್ಣರ್ ಐವರ್ನಾಡ್‌ಲಿ ಆಗ ಹೆಸ್ರ್‌ವಾಸಿ ಆಗಿದ್ದೊ. ಅವುಕೆ ಹೇಳಿ, ಅವನ ಐವರ್ನಾಡ್ ಸೊಸ್ಯಾಟಿಲಿ ಕೆಲ್ಸಕ್ಕೆ ಸೇರ್ಸಿದೆ. ಅದರ್ಲಿದ್ದ್‌ಕಂಡೇ ಅಂವ ಖಾಸಗಿ ಪರೀಕ್ಷೆಗೆ ಕುದ್ದ್ ಬಿ.ಎ ಪಾಸ್ ಮಾಡ್ತ್. ಆ ಮೇಲೆ ಸಿಂಡಿಕೇಟ್ ಬ್ಯಾಂಕಿಗೆ ಸೇರ್ತ್.

ಅಣ್ಣನ ಮಗಳ್ ಶೀಲ, ಹೂವಯ್ಯನ ನಂತರ ಹುಟ್ಟಿದವ್ಳು. ಅದ್ ಅಜ್ಜಪ್ಪ, ದೊಡವ (ಅಜ್ಜಿ) ನೊಟ್ಟಿಗೆ ಸುಳ್ಯಲಿ ಇದ್ದ್‌ಕಂಡ್ ಎಸ್.ಎಸ್.ಎಲ್.ಸಿ ಮುಟ್ಟ ಓದಿ ಪಾಸಾಗಿ, ಅದ್ ಕೂಡಾ ಹೂವಯ್ಯನಾಂಗೆ ಸಹಕಾರಿ ಸಂಘಗಳ ತರಬೇತಿ ಶಿಕ್ಷಣ ಮಾಡಿ, ಪಾಸಾಗಿ, ಸುಳ್ಯ ಮಹಿಳಾ ಸಮಾಜಲಿ ನಡ್ಯತಿದ್ದ ಲೇಡೀಸ್ ಹಾಸ್ಟೆಲಿಗೆ ವಾರ್ಡನ್ ಆಗಿ, ಮೊದ್ವೆ ಆಕನ ಮುಟ್ಟ ಅಲ್ಲೆ ಇತ್ತ್.

ಅಪ್ಪ, ಅತ್ತಿಗೆನನೂ, ಮಕ್ಕಳನೂ ತುಂಬಾ ಪ್ರೀತಿ ವಿಶ್ವಾಸಂದ ಸಾಕಿದ್ಯೊ. ಅವರ ಏಳಿಗೆಗಾಗಿ, ಬಾಳ ಕಷ್ಟ ಪಟ್ಟೊ. ನಮ್ಮ ಅಂಗ್ಡಿಲಿ ಸಾಲ ಮಾಡಿ, ಬಾಕಿ ಮಾಡಿದ ಶ್ರೀಮಂತ ಮನೆಗಳಿಗೆಲ್ಲಾ ಹೋಗಿ, ಸಾಧ್ಯ ಇದ್ದಷ್ಟ್ ಸಾಲ ವಸೂಲಿ ಮಾಡಿಕಂಡ್, ಮಕ್ಕಳ ಓದಿಸಿದ್ಯೊ. ಎರ್ಡ್ ವೊರ್ಸ ತಮ್ಮನ ಮನೆಲಿ ಅತ್ತಿಗೆ ಐದ್ ಮಕ್ಕಳ ಸಾಕಿಕೊಂಡಿದ್ದೊ. ಒಮ್ಮೆ ಅಪ್ಪ, ಮೊಮ್ಮಕ್ಕಳ ನೋಡಿ ಬಾಕೆ ಅತ್ತಿಗೆನ ತಮ್ಮನ ಮನೆಗೆ ಹೋಕನ, ಅಣ್ಣನ ಎರಡ್ನೇ ಮಂಜ ಸೂರಯ್ಯ, ಅಜ್ಜಪ್ಪನ ನೋಡಿ

'ಗೋಳೋ'ಂತ ಮೊರ್ಪತ್ ಗಡ. ಅಲ್ಲಿ ಅಂವ ಹಳ್ಳಿ ಕೆಲ್ಸ ಮಾಡಿ ಸಾಲೆಗೆ ಹೋಕಾಗಿತ್ತ್. ಇಲ್ಲಿ ಅಣ್ಣ ಇರಿಕನ ರಾಜಕುಮಾರರ ಹಾಂಗೆ ಬೆಳ್ದ ಮಕ್ಕ, ಅಂವ ತೀರಿ ಹೋದ ಮೇಲೆ ತುಂಬಾ ಕಷ್ಟ ಪಟ್ರೊ. ಅಪ್ಪಂಗೆ ಮೊಮ್ಮಕ್ಕಳ ಪರಿಸ್ಥಿತಿ ನೋಡಿ ತುಂಬಾ ಬೇಜಾರಾತ್. ಅವು ಅತ್ತಿಗೆನನೂ, ಮಕ್ಕಳನೂ ಸುಳ್ಯಕ್ಕೆ ಕರ್ಕಂಡ್ ಬಂದ್, ಜೀವನ ಸಾಗ್ಸಿಕೆ ಹೋಟೇಲ್ ಸುರು ಮಾಡ್ದೊ. ತಕ್ಕ ಮಟ್ಟಿಗೆ ವ್ಯಾಪಾರ ಆಗಿ ಸುದಾರ್ಸಿಕೊಂಡೊ.

ಹೂವಯ್ಯ, ಶೀಲನ ಮೇಲೆ ಹುಟ್ಟಿದೋಳು, ಸತ್ಯವತಿ. ನಾವೆಲ್ಲಾ ಅದರ 'ಸಕಿ'ಂತ ಕರ್ಯತಿದ್ದೊ. ಅದ್ ಎಸ್.ಎಸ್.ಎಲ್.ಸಿ. ಪಾಸಾಕನ ಮುಟ್ಟ ನನ್ನ ಹಕ್ಕಲೆ ಇತ್ತ್. ಶೀಲನ ಮೊದ್ವೆ ಆಗಿ ಹೋದ ಮೇಲೆ ಸಕಿನ ಹಾಸ್ಟೆಲ್ ವಾರ್ಡನ್ ಮಾಡ್ದೆ. ಸಕಿ ಮೊದ್ವೆ ಆಕನ ಮುಟ್ಟ ವಾರ್ಡನ್ ಆಗಿ ಕೆಲ್ಸ ಮಾಡ್ತ್. ಶೀಲ ಮತ್ತೆ ಸಕಿನ ಹೂವಯ್ಯ ಮೊದ್ವೆ ಮಾಡಿ ದಡ ಸೇರ್ಸಿತ್. ಶೀಲ ಬೆಂಗ್ಳೂರ್‌ಲಿ, ಸಕಿ ತಮಿಳ್ನಾಡ್‌ನ ಧರ್ಮಪುರಿಲಿ ನೆಲ್ಸಿದೊ.

ಅಣ್ಣನ ಎರಡ್ನೇ ಮಂಜ, ಶೀಲ, ಸತ್ಯರ ನಂತರ ಹುಟ್ಟಿದಂವ ಶೂರಯ್ಯ. ಅಂವ ಎಸ್.ಎಸ್.ಎಲ್.ಸಿ ಪಾಸಾದ ಸಮಯಲಿ ಸುಳ್ಯಲಿ ಕುರುಂಜಿ ವೆಂಕಟ್ರಮಣ ಗೌಡರ್ ಸುಳ್ಯಲಿ ಕೋಲೇಜ್ ಸುರುಮಾಡ್ದೊ. ಅಂವ ಕೋಲೇಜ್ ಸೇರಿ ಪದವಿ ಮುಗ್ಸಿ, ನಮ್ಮ ಅಪ್ಪನ ವ್ಯಾಪಾರ ಮುಂದುವರ್ಸಿತ್. ಅಪ್ಪ ಆ ಸಮಯಲಿ ಅವು ಮಾಡ್ತಿದ್ದ ಹೋಟೇಲ್‌ನ, ಪ್ರಾಯ ಹೋದ ಕಾರ್ಣ ಬೇರೆಯವ್ಕೆ ಒಪ್ಪಿಸಿದ್ದೊ. ಹೋಟೇಲ್‌ನ ನಡ್ಸ್‌ತಿದ್ದೊವ್ಕೆ ಅದರ್ಲಿ ನಷ್ಟ ಬಂದ್, ಹೋಟೇಲ್ ಸಾಮಾನ್‌ಗಳ ಬೇರೆಯವ್ಕೆ ಮಾರಿ, ಅವು ಹೊರ್ಟ್ಹೋದೊ. ಆ ಸಮಯಲಿ ಶೂರಯ್ಯ ಅಪ್ಪನ ಕಿರಾಣಿ ಅಂಗ್ಡಿ ಮತ್ತೆ ಕೋಪಿ ಮೊದ್ದ್ ಲೈಸನ್ಸ್‌ನ ಅಪ್ಪನ ಹೆಸ್ರ್‌ಂದ ಅಂವ ಪಡ್ಕಂಡ್, ಅದರ್ಲಿ ಮುಂದೆ ಬಾತ್. ಶೂರಯ್ಯ ಅವನ ಅಜ್ಜನ ಪ್ರಾಮಾಣಿಕತನ, ಪರೋಪಕಾರ ಬುದ್ಧಿ ಅವನ ಜೀವನಲಿ ತುಂಬಿತ್ತ್. ಅದರ್‌ಂದಾಗಿ ಅಂವ ವ್ಯಾಪಾರಲಿ ಮುಂದೆ ಬಾತ್. ಬಳ್ಳಡ್ಕಲಿ ಒಕ್ಕಲ್‌ನವ್ಕೆ ಬೇಸಾಯ ಮಾಡುವ ಗದ್ದೆಗ ಹೋದರೂ, ಕಾನ, ಬಾಣೆ ಖಾಲಿ ಇತ್ತ್. ಅದರ ದರ್ಖಾಸ್ ರೂಪಲಿ ಪಡ್ದ್, ಶೂರಯ್ಯ ಅಲ್ಲಿ ಮನೆ ಕಟ್ಟಿಸಿತ್. ಹೂವಯ್ಯ ಜ್ಯೂನಿಯರ್ ಕೋಲೇಜಿನ ಹಕ್ಕಲೆ ಮನೆ ಕಟ್ಟಿಸಿತ್.

ಶೂರಯ್ಯನ ನಂತರದೊವು, ಚಂದ್ರಮತಿ, ಜಯಶ್ರೀ, ವಜ್ರೇಶ್ವರಿ, ಮತ್ತೆ ಸಂತೋಷ್. ಅವ್ಕೆ ಅಣ್ಣಂದರಿಬ್ರೊಬರು ಸಂಪಾದನೆಗೆ ಸುರು ಮಾಡ್ದ ಕಾರ್ಣ, ವಿದ್ಯಾಭ್ಯಾಸಕ್ಕೆ ತೊಂದರೆ ಆತ್ಲೆ. ಚಂದ್ರಮತಿ ಸುಳ್ಯ ಭೂಅಭಿವೃದ್ಧಿ ಬೇಂಕ್‌ಲಿ ಉದ್ಯೋಗಕ್ಕೆ ಸೇರ್ತ್. ಜಯಶ್ರೀ, ದಕ್ಷಿಣ ಕನ್ನಡ ಗೌಡ ವಿದ್ಯಾ ಸಂಘದೊವು ನಡ್ಸ್‌ತಿದ್ದ, ಶಾರದಾ ಹೆಣ್ಮಕ್ಕಳ ಸಾಲೆಲಿ ಕ್ಲರ್ಕ್ ಆಗಿ ಕೆಲ್ಸಕ್ಕೆ ಸೇರ್ತ್. ಚಂದ್ರಮತಿ, ಜಯಶ್ರೀ ಇಬ್ರೊರಿಗೆ ಅಣ್ಣಂದರಿಬ್ರೊರು ಸೇರಿ ಮೊದ್ವೆ ಮಾಡ್ಸಿದೊ. ಆ ಮೇಲೆ ಹೂವಯ್ಯ, ಶೂರಯ್ಯ, ಸಂತೋಷ್‌ನವ್ಕೆ ಮೊದ್ವೆ ಆತ್.

ನನ್ನ ಸಣ್ಣ ತಮ್ಮ ಚಂದ್ರಶೇಖರ ಸಣ್ಣದಿರಿಕನನೇ ಬಾಳ ಪಿಟ್ಪಾಶಿ. ಸಾಲೆಗೆ

ಹೋಕನ ಅಪ್ಪ ದಿನಾ ನಾಣಿಗೆ ಎರ್ಡಾಣೆ, ಚಂದ್ರಂಗೆ ಒಂದಾಣೆ ಖರ್ಚಿಗೆ ಕೊಡ್ತಿದ್ದೊ. ಆಗವು ಎಲಿಮೆಂಟ್ರಿ ಸಾಲೆಲಿ ಸಣ್ಣ ಕ್ಲಾಸ್‌ಲಿ ಓದ್ತಿದ್ದೊ. ನಾಣಿ ಅದರ, ಅಬ್ದುಲ್ ಖಾದರ್ ಸಾಹೇಬರ ಅಂಗ್ಡಿಂದ ಪೆಪ್ರ್‌ಮಿಠಾಯಿ ತೆಗ್ಯಕೆ ನನ್ನಲ್ಲಿ ಕೊಡ್ತಿತ್ತ್. ಆಗ ಒಂದಾಣೆಗೆ ನಾಲ್ಕರ ಹಾಂಗೆ ಎಂಟ್ ಉಂಡೆ ಪೆಪ್ರ್‌ಮಿಠಾಯಿ ಸಿಕ್ತಿತ್ತ್. ಅದರ್ಲಿ ಒಂದು ನಂಗೆ, ಒಂದು ಚಂದ್ರಂಗೆ ಕೊಟ್ಟ್, ಉಳ್ದ ಆರರ ಅಂವ ತಿಂಬತಿತ್ತ್. ಚಂದ್ರ ಅಪ್ಪ ಕೊಟ್ಟ ಒಂದಾಣೆನ ಒಂದು ಡೊಬ್ಬಿಲಿ ಹಾಕಿಸ್ತಿತ್ತ್. ದಿನಾ ಅದರ ಲೆಕ್ಕ ಮಾಡಿ ಕುಸಿ ಪಡ್ತಿತ್ತ್. ಅದರ ಜೋಪಾನಲಿ ಇಸಿಕೆ ಅವ್ವನಲ್ಲಿ ಕೊಡ್ತಿತ್ತ್. ಚಂದ್ರ ಅವ್ವನ ಮುದ್ದುನ ಕೂಸು. ಹಾಂಗಾಗಿ ಅಂವಂಗೆ ಅವ್ವನ ಹಾಂಗೆ ದುಡ್ಡು ಕೂಡಿಸುವ ಬುದ್ಧಿ ಬಾತ್.

ಅಪ್ಪಂಗೆ ನಾಣಿನ ಡಾಕ್ಟರ್ ಮಾಡೊಕೂಂತ ತುಂಬಾ ಆಸೆ ಇತ್ತ್. ಅಂವನ ಕಾರ್ಕಳ ಭುವನೇಂದ್ರ ಕೋಲೇಜಿಗೆ ಸೇರ್ಸಿದೊ. ಅಲ್ಲಿ ಅಂವ ಫೇಲಾತ್. ಆ ಮೇಲೆ ಮೈಸೂರ್ಲಿ ನಾ ಕಲ್ತ ಸೈಂಟ್ ಫಿಲೋಮಿನಾ ಕೊಲೇಜಿಗೆ ಸೇರ್ಸಿದೊ. ಅಂವ ಪಿ.ಯು.ಸಿ ಪಾಸಾದ ಮೇಲೆ ಗ್ರಾಮ ಕರಣಿಕರ (ಗಿ.ಂ)ಕೆಲ್ಸಕ್ಕೆ ಸೇರ್ತ್. ಒಂದೆರ್ಡ್ ವೊರ್ಸಲಿ ಆ ಕೆಲ್ಸನ ಬುಟ್ಟ್, ಮನೆಲಿ ಹೇಳದೆ ಮಿಲಿಟ್ರಿಗೆ ಸೇರ್ತ್. ಅಲ್ಲಿ ನಾಕೈದ್ ವೊರ್ಸ ಇದ್ದ್, ಅಲ್ಲಿಂದ ಓಡಿ ಬಾತ್. ಮನೆಲಿರಿಕಾಕನ ಖಾಸಗಿ ಪರೀಕ್ಷೆಗೆ ಕುದ್ದ್ ಬಿ.ಎ ಮಾಡ್ತ್. ಆ ಮೇಲೆ ಎಂ.ಎ ಮಾಡ್ತ್. ಮಿಲಿಟ್ರಿ ಸರ್ವಿಸ್‌ನ ಆಧಾರಂದ ಅಂವಂಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ– ಇದರ್ಲಿ ಅಂವಂಗೆ ಮಂಗ್ಳೂರ್‌ಲಿ ಕೆಲ್ಸ ಸಿಕ್ಕಿತ್. ಅದರ ಬುಟ್ಟ್ ಹೆಲ್ತ್ ಇನೆಸ್ಪೆಕ್ಟರ್ ಕೆಲ್ಸಕ್ಕೆ ಸೇರ್ತ್. ಅದರ ಬುಟ್ಟ್ ಕಮರ್ಷಿಯಲ್ ಟೇಕ್ಸ್ ಆಫೀಸ್‌ಲಿ ಎ.ಸಿ.ಟಿ.ಓ. ಆಗಿ ಸೇರ್ತ್ [ಅಸಿಸ್ಟೆಂಟ್ ಕಮರ್ಷಿಯಲ್ ಟೇಕ್ಸ್ ಆಫೀಸರ್]. ಅಂವ ನಿಂತಲ್ಲಿ ನಿಲ್ಲ್‌ತಿತ್ಲೆ. ಅಪ್ಪ ಹೇಳ್ತಿದ್ದೊ. 'ಏಕ ಚಕ್ರೇ ಸದಾ ಭೋಗಿ'– ಎಂತ. ಅವನ ಹತ್ತ್ ಬೆರ್‌ಳ್‌ಲಿ ಒಂದರ್ಲಿ ಮಾತ್ರಾ ಚಕ್ರ ಇತ್ತ್ ಗಡ.

ಚಂದ್ರ ಎಸ್.ಎಸ್.ಎಲ್.ಸಿ. ಪಾಸಾದ ಮೇಲೆ ಮಂಗ್ಳೂರ್‌ಲಿ ಪೊಲಿಟೆಕ್ನಿಕ್ ಕೋಲೇಜಿಲಿ ಡಿಪ್ಲೊಮಾ ಇಂಜಿನಿಯರಿಂಗ್ ಕೋರ್ಸ್ ಮಾಡಿ, ದಕ್ಷಿಣ ಭಾರತ ರೇಲ್ವೇ ಇಲಾಖೆಲಿ ಕೆಲ್ಸಕ್ಕೆ ಸೇರ್ತ್.

* * * * *

ಚುಕ್ಕೆ – 38

"ಅಪ್ಪ ಮತ್ತೆ ಅವ್ವನ ಕಡೆನ ದಿನಗ"

ನನ್ನ ಮೊದ್ವೆ 1960ರ್ಲಿ ಆತ್. ಅದರ್ಂದ ಮೇಲೆ ಅಪ್ಪನ ಇಳಿವಯಸ್ಸ್‌ಲಿ ಶಕ್ತಿ ಇಲ್ಲದೆ ನಡ್ಯಕೆ ಆಗ್‌ತಿತ್ಲೆ. ಅವರ ಆರೋಗ್ಯ ಯಾಗೋಳೂ ಲಾಯ್ಕಾಗಿತ್ತ್. ಕಾಯ್ಲೆ, ಕಸಾಲೆ ಕಮ್ಮಿ. ಯೋಗಾಸನ ಮಾಡ್ತಿದ್ದೊ. ಹಾಂಗಾಗಿ ಅಜ್ಜ ಆಕನ ಮುಟ್ಟ ಅಪ್ಪ ಆರೋಗ್ಯಲಿ ಇದ್ದೊ. ಅವು ನಿಶ್ಯಕ್ತಿಂದ ಮನೆಲೇ ಇರಿಕಾಕನ ನಾ ಅವರ ನಾಕ್ ದಿನ ನನ್ನ ಮನೆಗೆ ಕರ್ಕಂಡ್ ಬಂದೆ. ಅವು ಬಾಳ ಸ್ವಾಭಿಮಾನಿ. ಹೆಣ್ಣ್ ಮಕ್ಕಳ ಮನೆಲಿ ನಿಲ್ತಿತ್ಲೆ. ದೊಡ್ಡಕ್ಕನ ಮನೆಲಿ ಅವು ನಿತ್ತದ್ ನಾ ನೋಡ್ತಿಲ್ಲೆ. ಸಣ್ಣಕ್ಕನ ಮನೆಗೆ ಒಂದು ದಿನಲಿ ಹೋಗಿ ಬಾಕೆ ಆದುಲ್ಲೆ. ಹಾಂಗಾಗಿ ಒಂದೆರ್ಡ್ ಸಲ ಅವು ಅಲ್ಲಿ ನಿಂತಿರ್‍ವೊ. ಅವು ನೆಂಟ್ರ ಮನೆಗೆ ಹೋದು ಬಾಳ ಕಮ್ಮಿ. ನಾ ಒತ್ತಾಯ ಮಾಡಿ, ನನ್ನ ಮನೆಗೆ ಕರ್ಕಂಡ್ ಬಂದ್, ಅವರ ಸೇವೆ ಮಾಡಿ ಕಳ್ಸಿದೆ. ಆಗ ಅವ್ಕೆ ಕಕ್ಕಸಿಗೆ ಹೋದರೆ ಕುಂಡೆ ತೊಳ್ಯಕೆ ಕೈ ನಡ್ಗ್‌ತಿತ್ತ್. ಆಗ್‌ತಿತ್ಲೆ. ಆಗ ನಾ ಅವರ ಕುಂಡೆ ತೊಳ್ಸಿ, ತಂದ್ ಹಾಸಿಗೆಲಿ ಮೊಲ್ಗ್‌ಸ್‌ತಿದ್ದೆ. ಆಗ ಅವು,

"ನಿಂಗೆ ನನ್ನ ಹಕ್ಕಲೆ ಇಷ್ಟ್ ಪ್ರೀತಿ ಉಟ್ಟುಂತ ನಂಗೆ ಗೊತ್ತಿತ್ಲೆ"–ಎಂತ ಹೇಳ್ದೊ. ಆಗ ನಾ,

"ಎಷ್ಟ್ ಹೇಳ್ರೊ ನೀವು ನನ್ನ ಜನ್ಮಕೊಟ್ಟ ಅಪ್ಪ ಅಲ್ಲನೋ? ನಿಮ್ಮ ಸೇವೆ ನಾ ಮಾಡದೆ ಮತ್ಯಾರ್ ಮಾಡ್ದು? ಅದ್ ನನ್ನ ಕರ್ತವ್ಯ. ಅಂದ್ ನೀವು ನನ್ನ

ಡಾಕ್ಟ್ರ ಓದ್‌ಸ್‌ತಿದ್ದರೆ, ನಿಮ್ಮ ಎಲ್ಲಾ ಚಾಕ್ರಿ ಮಾಡಿ, ನಾ ಇಂದ್ ನಿಮ್ಮ ಋಣ ತೀರ್‌ಸ್ತಿದ್ದೆ".- ಎಂತ ಹೇಳ್ದೆ. ಅಪ್ಪನ ಕಣ್ಣ್‌ಂದ ದಳದಳನೆ ನೀರ್ ಬಾತ್. ನಂಗೂ ದುಃಖ ಆತ್. ನಾ ಯಾಕೆ ಈ ಗಳ್ಗ್‌ಲಿ ಈ ಮಾತ್ ಹೇಳಿ, ಅವರ ಮನ್ಸ್‌ಗೆ ಬೇನೆ ಮಾಡ್ದೆ ? ಎಂತ ನಂಗೆ ಪಶ್ಚಾತ್ತಾಪ ಆತ್. ನಾ ಹೇಳೊಕೂಂತ ಹೇಳ್ತಿಲ್ಲೆ. ನಾ ಡಾಕ್ಟರ್ ಆತ್‌ಲ್ಲೇಂತ ಇದ್ದ ಬೇನೆ, ನನ್ನ ಬಾಯಿಂದ ನಂಗೊತ್ತಿಲ್ಲದೇನೇ ಈ ಮಾತ್ ಹೊರ್ಟತ್. ಅವು ನಮ್ಮಲ್ಲಿದ್ದಷ್ಟ್ ದಿನ, ದಿನಾ ಮಿಾಸಿ ನಾಕೈದ್ ಕುಡ್ತೆ ಹಾಲ್ ಕಾಸಿ, ಕುಡ್ಯಕೆ ಕೊಡ್ತಿದ್ದೆ. ಅವು ಅವರ ಯೌವನಲಿ ಹಾಲ್ ತುಪ್ಪಲಿ ಕೈ ತೊಳ್ದ್, ಬೆಳ್ದೊವು. ಸಾಯಕಾಕನ ಹಣದ ಅಡ್ಚಣೆಲಿ ಕಷ್ಟ ಪಟ್ರೊ. ಆದರೂ ಅಣ್ಣನ ಮಂಜ ಶೂರಯ್ಯ ಅವರ ಬಾಳ ಪೊರ್ಲ್‌ಲಿ ಸಾಂಕಿತ್. ಅವರ ಆರೈಕೆ ಅವನೇ ಮಾಡ್ತ್. ದಿನಾ ಬಿಸಿ ಬಿಸಿ ಆಗಿ ನೀರ್ ಕಾಸಿ, ಮಿಾಸ್ತಿತ್ತ್. ಮಿಾಸಿಕಾಕನ ಡಾ। ರಾಜಕುಮಾರ್‌ರ ಹಾಡ್‌ನ ಹಾಡಿ, ಅವರ ಕುಸಿ ಪಡ್ಸ್‌ತಿತ್ತ್. ಅತ್ತಿಗೆನೂ ಸೊಂತ ಮಕ್ಕಳ್‌ಂದ ಹೆಚ್ಚಿಗೆ ಸೇವೆ ಮಾಡ್ದೊ. ಅಪ್ಪಂಗೆ ದುಡ್ಡಿಗೆ ಕೊರ್ತೆ ಇದ್ದರೂ ಪ್ರೀತಿಗೆ ಕೊರ್ತೆ ಇತ್ಲೆ. ಅವ್ವಂಗೂ ವ್ಯದ್ಧಾಪ್ಯ. ಅವ್ವ ಹೆಚ್ಚಾಗಿ ನನ್ನಲ್ಲಿಯೇ ಇರ್ತಿದ್ದೊ. ಅವರ ಸೇವೆ ನನ್ನ ದೊಡ್ಡ ಮಗ್ಳ್ ನಿಮ್ಮಿ (ಅನುರಾಧ) ಮಾಡ್ತಿತ್ತ್. ಅವರ ಮಿಾಸುದು, ತಲೆ ಬಾಚುದು, ಸೀರೆ ಉಡ್ಸುದು -ಎಲ್ಲಾನೂ ಅದೇ ಮಾಡ್ತಿತ್ತ್. ನಂಗೆ ಮನೆ ಕೆಲ್ಸಕ್ಕೆ ಜನ ಇದ್ದ ಕಾರ್ಣ, ಅವರ ಕೆಲ್ಸ ನಾವ್ಗೆ ಕಷ್ಟ ಆಗ್ತಿತ್ಲೆ. ನಮ್ಮ ಅಪ್ಪನ ಮನೆ ಹಕ್ಕಲೆನೇ ನನ್ನ ಮನೆ ಇತ್ತ್. ನೊಡುಲಿ ಶೆಟ್ರ ಮನೆ. ಸಣ್ಣಕ್ಕನ ಜೋಸ್ತಿ ಗೂಡೆ ಭಾಗೀರಥಿ ಇದ್ದ ಜಾಗೆನ ಅವು ಮಾರಿ ಒಕ್ಕಲ್ ಹೋದೊ. ಅದರ ಜೋನಿ ಪುರ್ಭು ಕ್ರಯಕ್ಕೆ ತಕಂಡತ್. ಅಂವನ ಕೈಯಿಂದ ಈ ಜಾಗೆನ ನಾವು ತಕಂಡ್ ಮನೆ ಕಟ್ಟಿಸಿದ್ದೊ. ಈ ಜಾಗೆನ ತೆಗ್ಯಕೆ ನಂಗೆ ಅವ್ವ ದುಡ್ಡು ಕೊಟ್ಟಿದ್ದೊ. ಅದರ್‌ಂದಾಗಿ ನಾ ಅಪ್ಪ- ಅವ್ವಂಗೆ ಹಕ್ಕಲೆ ಆದೆ. ನನ್ನ ಮಕ್ಕಳೂ, ಅಣ್ಣನ ಮಕ್ಕಳೂ ಕೂಡಿ ಆಡಿ ಒಟ್ಟಿಗೆ ಬೆಳ್ದೊವು. ಈಗಳೂ ಅಣ್ಣನ ಮಕ್ಕಳ ನನ್ನ ಮಕ್ಕ, ಅಣ್ಣ, ಅಕ್ಕಂತಳೇ ಕರ್ದವೆ. ನೇರಲಿ ಅವು ಅತ್ತಿಗೆ ಭಾವಂದರ್ ಆಕು. ನಮ್ಮಲ್ಲಿ ಕೋಳಿ ಗೈಪು ಮಾಡ್ರೆ ಅಪ್ಪ, ಅವ್ವಂಗೆ ಪಾಲ್ ಇರ್ತಿತ್ತ್. ನಂಗೆ ನೆಂಪಿದ್ದ ಹಾಂಗೆ ಅಪ್ಪ ಮತ್ತೆ ಅವ್ವ ಅವರ ವೈಭವದ ದಿನಲಿ ಸಣ್ಣಕ್ಕಿ ಅನ್ನ, ಗಟ್ಟಿ ತುಪ್ಪ, ತರತರದ ಆರ್ಸಿದ ಗೈಪುಗ, ಸಾಂಬಾರ್ ಹಪ್ಪಳ, ಸಂಡಿಗೆಲಿ ದಿನಾ ಊಟ ಮಾಡ್ತಿದ್ದೊ. ಅವ್ವಂಗೆ ಮಿಾನ್ ಮಾಸ, ಮೊಟ್ಟೆಂತೇಳ್ರೆ ಪ್ರಾಣ. ಅಪ್ಪ ಸುರುಲಿ ಸಸ್ಯಹಾರಿ ಆದರೂ, ಅಕೆರಿಗೆ ಕುಡ್ಯಕೆ ಕಲ್ತ ಮೇಲೆ ದಿನಾ ಮಾಸ ಮಿಾನ್ ತಿಂಬತಿದ್ದೊ.

ದಿನಾ ನಾನೂ, ನನ್ನ ಗಂಡನೂ, ಅಪ್ಪನ ಮನೆಗೆ ಹೋಗಿ, ಅವರ ಮಾತಾಡ್ಸಿ ಬಾತಿದ್ದೊ. ದಿನದಾಂಗೆ ಅಂದುನೂ ಅವರ ಮನೆಗೆ ಬಂದೊ. ಆಗ ಸುಳ್ಯ ಜಾತ್ರೆ ಸಮಯ. ಮಾ। ಹಿರಣ್ಯಯ್ಯನವರ ನಾಟಕ ಕಂಪೆನಿ, ಜ್ಯೂನಿಯರ್ ಕಾಲೇಜಿಲಿ ' ಲಂಚಾವತಾರ' ನಾಟಕ ಪ್ರದರ್ಶನ ಮಾಡ್ತಿತ್ತ್. ನಂಗೆ ಆಟ, ನಾಟಕಾಂತೇಳ್ರೆ ಪ್ರಾಣ. ಊರಿಗೇ ಬಾಕಾಕನ ಅದರ ನೋಡ್‌ತ್ಲರೆ ಹೇಂಗೆ?

ಲಂಚಾವತಾರದ ಬಗ್ಗೆ ಪೇಪರ್ಲಿ ಓದಿದ್ದೆ. ನೋಡೊಕೂಂತ ನಂಗೆ ತುಂಬಾ ಆಸೆ. ಹಾಂಗಾಗಿ ಅಕೆರಿನ ದಿನ ನಾನೂ, ನನ್ನ ಗಂಡನೂ ನಾಟಕ ನೋಡಿಕೆ ಹೋದೊ. ತಿರ್ಗಿ ಮನೆಗೆ ಬಂದ್ ನೋಡಿವೆ ಮನೆಗೆ ಬೀಗ. ಮಕ್ಕ ಎಲ್ಲಾ ಅಪ್ಪನ ಮನೆಲಿರುವೋಂತ ಅಲ್ಲಿಗೆ ಹೋದೊ. ನೋಡಿಕಾಕನ ಅಪ್ಪ ತೀರಿ ಹೋಗೊಳೊ. ಇಷ್ಟ್ ಬೇಗ ಸತ್ತವೇಂತ ನಂಗೆ ಗೊತ್ತಿತ್ಲೆ. ಹಿಂಬೊತ್ತ್ ನೋಡ್ದ ಜೀವ ಕತ್ತಲಾಕನ ಇಲ್ಲದಾಗಿತ್ತ್. ಅಪ್ಪ 12–01–1982ರ್ಲಿ ತೀರಿ ಹೋದೊ.

ಅಪ್ಪ ತೀರಿ ಹೋಗಿ, ಎರ್ಡ್ ವೊರ್ಸದ ಮೇಲೆ ಅವ್ವ ತೀರಿ ಹೋದೊ. ಅಪ್ಪನ ಆರೋಗ್ಯ ಒಳ್ಳೆದಿತ್ತ್. ಅವ್ಕೆ ಯಾವ ಕಾಯ್ಲೆನೂ ಇತ್ಲೆ. ಆದರೆ ಅವ್ವಂಗೆ ರಕ್ತದ ಒತ್ತಡ ಇತ್ತ್. ಅವ್ವ ದಿನಾ ಬೊಳ್ಪುಗೆ ನಮ್ಮಲ್ಲಿಗೆ ಬಂದ್ ಮಿಂದ್, ಮಧ್ಯಾಹ್ನ ಊಟ ಮಾಡಿ, ಹಿಂಬೊತ್ತ್ ಅವರ ಮನೆಗೆ ಮೊಲ್ಗಿಕೆ ಹೋಗ್ತಿದ್ದೊ. ನನ್ನ ಸಣ್ಣ ಮಗಳ್ ಅಮ್ಮಿ ಅವರ ಎಲ್ಲಾ ಬಿಟ್ಟಿ ಕೆಲ್ಸ ಮಾಡ್ತಿತ್. ಅವ್ಕೆ ಬಾಯಿ ಸೊಗಸ್ ಜಾಸ್ತಿ. ನಮ್ಮ ತರ್ಕಾರಿ ಸಾರ್ ಅವ್ಕೆ ಬಾಯಿಗೆ ಹಿಡ್ಸ್‌ತಿತ್ಲೆ. ನಾವು ಯಾರಾದರ್ ನೆಂಟ್ರ ಬಂದರೆ ಮಾತ್ರಾ ಮಾಸದ ಗೈಪು ಮಾಡ್ತಿದ್ದೊ. ದಿನಾ ಅನ್ನ, ಸಾರ್, ಪಲ್ಯ, ಹಪ್ಪಳ, ಸಂಡಿಗೆ, ಇತ್ಲರೆ ಏನಾದರ್ ಕಾಸಿದ ಬಜ್ಜಿ ಮಾಡ್ತಿದ್ದೊ. ದನ ಸಾಕ್ತಿದ್ದದ್ರಂದ ಹಾಲ್ ಮೊಜ್ಜಿಗೆಗೆ ತೊಂದ್ರೆ ಇರ್ತಿತ್ಲೆ. ಆದರೆ ಅವ್ವಂಗೆ ದಿನಾ ಮಾಸದ ಗೈಪು ಬೇಕ್. ಅದಕ್ಕಾಗಿ, ಅಮ್ಮಿನ ಹೋಟ್ಲ್‌ಗೆ ಕಳ್ಸಿ, ತರ್ಸಿ ತಿಂಬತಿದ್ದೊ. ಅಮ್ಮಿಗೂ ಮೀನ್, ಮಾಸ, ಮೊಟ್ಟೆಂತೇಳ್ರೆ ಬಾಳ ಇಷ್ಟ. ಅಜ್ಜಿ ಮಳ್ಳಿ ಹೋಟ್ಲ್‌ಂದ ಮಾಸದ ಸಾರ್ ತಂದ್ ತಿಂಬತಿದ್ದೊ. ಅವಿಬ್ಬೊರು ಕೂಡಿಕಂಡ್ ಅವರ ಮನೆಲಿ ಒಮ್ಮೊಮ್ಮೆ ಅಡಿಗೆ ಮಾಡ್ತಿದ್ದೊ. ಅಜ್ಜಿನೊಟ್ಟಿಗೆ ಸೇರಿ, ಅಮ್ಮಿ ಅವರ ಎಲ್ಲಾ ತರದ ಅಡ್ಗೆನನೂ ಕಲ್ತ್‌ಕಂಡತ್. ನನ್ನ ಮಕ್ಕ ಮತ್ತೆ ಅಣ್ಣನ ಮಕ್ಕ ಅವ್ವನ 'ದೊಡ್ಡವ್ವ'ಂತ ಕರ್ಯತಿದ್ದೊ. ಅವ್ಕೆ 'ಉಗ್ಗವ'ಂತ ಕರ್ಸಿಕಂಬಕೆ ಇಷ್ಟ ಇರ್ತಿತ್ಲೆ. ಅಪ್ಪನ 'ಅಜ್ಜಪ್ಪ'ಂತ ಕರ್ಯತಿದ್ದೊ. ನನ್ನ ದೊಡ್ಡ ಮಗಳ್ ನಿಮ್ಮಿಗೆ ಮೊದ್ವೆ ನಿಶ್ಚಯ ಆಕನ ಅವ್ವ ಕಂಗಾಲಾದೊ. ನಿಮ್ಮಿ ಅವ್ವನ ಎಲ್ಲಾ ಚಾಕ್ರಿ ಮಾಡ್ತಿದ್ದ ಕಾರ್ಣ ಇಷ್ಟ್ ಬೇಗ ಅದರ ಕೊಡ್ದು ಅವ್ಕೆ ಇಷ್ಟ ಇರ್ತಿತ್ಲೆ. ಅದರ್‌ಂದ ಮೇಲೆ ಅವು ತುಂಬಾ ಚಿಂತೆಲಿ ಇದ್ದೊ. ಅವಳ ಮೊದ್ವೆ ಆಗಿ ಎರ್ಡ್ ತಿಂಗಳ ಮೇಲೆ ಅವು ತೀರಿ ಹೋದೊ.

ಅವ್ವ ಅವ್ಕೆ ಎಷ್ಟೇ ಕಷ್ಟ ಆಗಲಿ ಅವರ ಬೇನೆನ ಇನ್ನೊಬ್ಬರೊಟ್ಟಿಗೆ ಹೇಳ್ತಿತ್ಲೆ. ಎಂಥಾ ಸಂದರ್ಭಲೂ ಮೊರ್ಡ್‌ತಿತ್ಲೆ. ದುಃಖನ ಮನ್ಸ್‌ಲೇ ಕರ್ಗ್‌ಸ್‌ತಿದ್ದೊ. ಅಪ್ಪ ಸಾಯಕನನೂ ಅವ್ವ ಮೊರ್ಟ್ತ್ಲೆ. ಅದರ ನೋಡಿ ಯಾರೋ ಒಬ್ಬ,

" ಈ ಅಜ್ಜಿನನೂ ಬೊಡ್ಡ್, ಅಜ್ಜನೊಟ್ಟಿಗೆ ಕಾಟಕ್ಕೆ ಹಾಕಕಾಗಿತ್ತ್." – ಎಂತ ಹೇಳ್ತ್ ಗಡ. ಇದರ ಕೇಳ್ದ ನನ್ನ ಗಂಡ, ಈ ವಿಷಯನ ನನ್ನೊಟ್ಟಿಗೆ ಹೇಳ್ದೊ. ಆದರೆ ಅವ್ವನ ಗುಣ ದೋಸ ತಿಳ್ದ ನಂಗೆ ಅವ್ವ ಮೊರ್ಟತಿಲ್ಲೇಂತ ಏನೂ ಬೇಜಾರ ಆತ್ಲೆ. ಯಾಕೇಂತೇಳ್ರೆ ಅವು ತುಂಬಾ ಕಷ್ಟ, ನಷ್ಟಗಳ ಗೆದ್ದ್ ಬಂದೊವು. ಹೆತ್ತ ಹದ್ನಾರ್ ಮಕ್ಕಳ್ಲಿ ಹತ್ತರ ಕಳ್ದ್‌ಕೊಂಡವು. ಅವರ ಕಣ್ಣ ನೀರ್ ಆಗಳೇ

ಬತ್ತಿತ್ತ್. ಅಪ್ಪ ಸುಳ್ಯಲಿ ಹೊಸ ಮನೆ ಕಟ್ಟಿಕಾಕನ 2000.00 ರೂಪ್ಯಾ ಬೆಳ್ಳಿ ನಾಣ್ಯಗಳ ಅವು ಅಪ್ಪಂಗೆ ಕೊಟ್ಟಿದ್ದೊ ಗಡ. ಗಟ್ಟಕ್ಕೆ ಜನ ತಕೊಂಡೋಗುವವ್ಕೆ, ಇರ್ಳ್ ಇಡೀ ಎಚ್ಚರಿದ್ದ್ ರೊಟ್ಟಿ, ಗೈಪು ಮಾಡಿ ಕೊಟ್ಟ್ ದುಡ್ಡು ಮಾಡ್ದೋವು ಗಡ. ಆಗ ಗಾಡಿ ಎತ್ತ್‌ಲಿ ಜನಗಳ ಸಂಚಾರ. ಒಮ್ಮೊಮ್ಮೆ ಸಾಲಾಗಿ ಹತ್ತ್ ಹದ್ನೈದ್ ಗಾಡಿ ಎತ್ತ್‌ಲಿ ಗಟ್ಟಕ್ಕೆ ಜನ ಹೋಗ್ತಿದ್ದೊ ಗಡ. ಆಗ ಅಪ್ಪನೊವು ಕಟ್ಟೆ ಹಕ್ಕಲೆ, ಈಗ ಕಟ್ಟೆಕಾರ್ಸ್ ಇದ್ದಲ್ಲಿ ಒಂದು ಮನೆ ಇತ್ತ್. ಅದರ್‌ಲ್ಲಿ ಬಾಡಿಗೆಗೆ ಇದ್ದೊ ಗಡ. ದುಡ್ಡು ಮಾಡ್ದರ್‌ಲ್ಲಿ ಅವ್ವ ಬಾಳ ಉಸಾರ್. ಅವ್ವ ಜೀವನದ ಸಾರ ತಿಳ್ದೊವು. ಅವ್ಕೆ ಎಷ್ಟೇ ಸಂತೋಷ ಆದರೂ ಹಿಗ್ಗ್‌ತಿತ್ಲೆ. ಎಷ್ಟ್ ದುಃಖ ಆದರೂ ಕುಗ್ಗ್‌ತಿತ್ಲೆ. ಅವರ ಎಷ್ಟೋ ಗಾದೆ ಮಾತ್‌ಗ ನಂಗೆ ಆಗಾಗ ನೆಂಪಾಗಿ, ನನ್ನ ಕಷ್ಟ ಕಾಲಲಿ ಎಚ್ಚರಿಸುಟ್ಟು.

ಆ ದಿನ ನಂಗೆ ಈಗಳೂ ಪೊರ್ಲುಲಿ ನೆಂಪುಟ್ಟು. ಬೊಳ್ಪುನ ಕಾಫಿಗೆ ನಾ ದೋಸೆ ಹೊಯ್ಯತಿದ್ದೆ ಗಂಟೆ ಏಳಾಗಿರ್ದು. ಅಷ್ಟರ್‌ಲ್ಲಿ ಶೂರಯ್ಯನ ಅಂಗ್ಡಿ ಕೆಲ್ಸದ ಹೈದ ಓಡಿ ಬಂದ್, ಅಡ್ಗೆ ಕೋಣೆ ಕಿಡ್ಕೆ ಹಕ್ಕಲೆ ನಿಂತ್,

“ ನೀವು ಬೇಗ ಬರಕಡ. ದೊಡ್ಡವ್ವ ಬಿದ್ದೊಳೊ” ಎಂತ ಹೇಳ್ತ್. ನಾ ಕೂಡ್ಲೆ ದೊಡ್ಡ ಮಗಳ್ ನಿಮ್ಮಿನ ಕರ್ದ್, ಅದರಕ್ಕಲೆ ದೋಸೆ ಹೊಯ್ಯಕೆ ಹೇಳಿ ಅವ್ವನಲ್ಲಿಗೆ ಓಡಿದೆ. ನೋಡಿಕಾಕನ ಅವರ ನುಡು ಕೋಣೆ ಎದ್ರ್‌ನ ಜಗ್‌ಲಿಲಿ ಮೊಲ್ಗಿಸ್ಯೋಳೊ, ಮೊತಿ ತೊಪ್ಪಿಟು. ಅಷ್ಟರ್‌ಲ್ಲಿ ಶೂರಯ್ಯ ರಥ ಬೀದಿಲಿದ್ದ ಶೆಣೈ ಡಾಕ್ಟ್ರ ಕರ್ಕಂಡ್ ಬಾತ್. ಅವು ಪರೀಕ್ಷಿಸಿ ಇನ್ನ್ ಪ್ರಯೋಜನ ಇಲ್ಲೇಂತ ಹೇಳ್ದೊ. ಅವ್ವನ ಡಾಕ್ಟ್ರ ಡಾ। ಸುಗುಣ ಗೌಡ. ಅದರ ಶೂರಯ್ಯನಲ್ಲಿ ಹೇಳ್ದೆ. ಅಂವ ಸುಗುಣ ಡಾಕ್ಟ್ರ ಕರ್ಕಂಡ್ ಬಾತ್. ಅವು ಹೇಳ್ದೊ,

‘ಮತಿ ಬಂದರೆ ಪುಣ್ಯ. ಬಾತ್ಲರೆ ಮೊಲ್ಗಿದಲ್ಲೇ ಇರೊಕಾದು” ಎಂತ. ಕರ್ದರೆ, ಓಂಕಬತಿತ್ಲೆ. ಆಗ ಈಗನಾಂಗೆ ಪ್ರಾಯ ಹೋದವರ ಆಸ್ಪತ್ರೆಗೆ ಸೇರ್ಸ್‌ತಿತ್ಲೆ. ಇರುವೊಸ್ಟ್ ದಿನ ಮನೆವೇ ನೋಡಿಕಂಬೊತಿದ್ದೊ. ಹಂಞ ಹೊತ್ತ್‌ಲಿ ಕನಕಮಜಲ್‌ಂದ ದೊಡ್ಡಕ್ಕ ಬಾತ್. ಸಣ್ಣಕ್ಕಂಗೂ ಮಡಿಕೇರಿನ, ಮರಗೋಡು ಗ್ರಾಮಲಿದ್ದ ಪಾಂಡನ ಮನೆಗೆ ಕಳ್ಸಿದೊ. ಸಣ್ಣ ತಮ್ಮ ಚಂದ್ರ ತಮಿಳ್ನಾಡ್‌ನ ಧರ್ಮಪುರಿಲಿ ಇತ್ತ್. ಅಂವ ರೇಲ್ವೇ ಇಲಾಖೆಲಿ ಕೆಲ್ಸಲಿತ್ತ್. ಅವ್ವ ತುಂಬಾ ಸಮಯ ಅಂವನಲ್ಲಿದ್ದೊ. ಮತ್ತೊಬ್ಬ ದೊಡ್ಡ ತಮ್ಮ ನಾರಾಯಣ ಬೆಂಗಳೂರ್‌ಲ್ಲಿ ಎ.ಸಿ.ಟಿ.ಓ ಆಗಿತ್ತ್. ಹಂಞ ಸಮಯ ಅವ್ವ ಅಂವನ ಮನೆಲಿನೂ ಇದ್ದೊ. ಸಾಯಕಾಕನ ಸುಳ್ಯಕ್ಕೆ ಬಂದ್ ನನ್ನ ಹಕ್ಕಲೆ ದೊಡ್ಡ ತಮ್ಮ ಬುಟ್ಟ್ ಹೋತ್. ಚಂದ್ರ, ನಾಣಿ ಇಬ್ಬೊರೂ ಅವ್ವ ಬಿದ್ದ ಸುದ್ದಿ ತಿಳ್ದ್ ಬಂದೊ. ಸಣ್ಣಕ್ಕನೂ ಬಾತ್. ಅದ್ ಮೊರ್ಟ್, ಬೊಬ್ಬೆ ಹೊಡ್ದ್ ರಂಪ ಮಾಡ್ತ್. ಅವ್ವನ ಆಸ್ಪತ್ರೆಗೆ ಸೇರ್ಸೊಕೂಂತ ಹೇಳ್ತ್. ಚಂದ್ರ ಒಪ್ಪಿತ್ಲೆ. “ನೀವೆಲ್ಲವೂ ಹೋಗಿ ನಾ ನೋಡಿ ಕಂಡನೆ. ಇದ್ ಪ್ರಾಯ ಹೋಕನ ಇದ್ದದೇ ಇದಕ್ಕೆಲ್ಲಾ ಆಸ್ಪತ್ರೆ ಯಾಕೆ? ಅವ್ವನ ಸೇವೆ ನಾ ಮಾಡ್ನೇ.”–ಎಂತ ಹೇಳ್ತ್. ಅಂವ ಯಾರನೂ ಕಾದತ್ಲೆ. ಬಟ್ಟೆ ಒಗ್ಯೊದರ್‌ಂದ ಹಿಡ್ದ್‌ದ್, ಅವರ ಎಲ್ಲಾ ಚಾಕ್ರಿ

ಅಂವನೇ ಮಾಡ್ತ್. ಎಲ್ಲೋವ್ಕೂ ಅದೇ ಬೇಕಾಗಿತ್ತ್. ಎಲ್ಲೋವೂ ಜಾಗೆ ಖಾಲಿ ಮಾಡ್ದೊ. ನನ್ನ ದೊಡ್ಡ ಮಗ್ಳ್ ನಿಮ್ಮಿಗೆ ಆಗ ಮೊದ್ವೆ ಆಗಿ ಒಂದು ತಿಂಗ ಆಗಿತ್ತ್. ಅದರ ಗಂಡ ಬೆಂಗ್ಳೂರ್‌ಲಿ ಎ.ಪಿ.ಯಂ.ಸಿ.ಲಿ ಕೆಲ್ಸಲಿದ್ದೊ. ನಂಗೆ ಅವಳ ಮನೆ ಮಾಡುವ ಸಡಗರ.

ಅವ್ವಂಗೆ ವಿದ್ಯೆ ಇತ್ಲರೂ, ಆಗನ ಕಾಲಲಿ ಚಂದ್ರನ ಹೆಸ್ರ್‌ಲಿ ಕರ್ನಾಟಕ ಬ್ಯಾಂಕ್‌ನ ಎರ್ಡ್ ಬಾಂಡ್, ಒಂದು 2000/– ರೂಪ್ಯಾ, ಇನ್ನೊಂದು 3000/– ರೂಪ್ಯಾದ್ 5 ವೊರ್ಸದ ಅವಧಿಗೆ ಮಾಡಿದ್ದೊ. ಅದ್ ಅವರ ಬೊಜ್ಜದ ಖರ್ಚಿಗೇಂತ ಅವ್ವ ಹೇಳ್ತಿದ್ದೊ. ಅದರ ಅವಧಿ ತೀರಿಗೆ 2 ತಿಂಗ ಇತ್ತ್. ಆ ಎರ್ಡ್ ಬಾಂಡ್‌ಗ ನನ್ನಲ್ಲಿದ್ದೊ. ಅದರ ಚಂದ್ರಂಗೆ ಕೊಟ್ಟೆ ಅವರ ಒಂದು ಜೊತೆ ಕೆಂಪು ಕಲ್ಲ್‌ನ ಬೆಂಡೋಲೆ ನನ್ನಲ್ಲಿ ತೆಗ್ದ್ ಇಸಿಕೆ ಕೊಟ್ಟಿದ್ದೊ. ಅದರ ತಂದ್ ಅತ್ತಿಗೆನ ಕೈಲಿ ಕೊಟ್ಟೆ. ಅವರ ಉಳ್ದ ಚಿನ್ನಾಭರಣಗಳ ಎಲ್ಲಾ ದೊಡ್ಡ ತಮ್ಮ ನಾಣಿ ಬೇಂಕ್‌ಲಿ ಅಡವು ಇಸಿತ್ತ್. ಒಂದ್ ವೊರ್ಸ ಕಳ್ದ ಮೇಲೆ ನಾಣಿ ಅದರ ಬುಡ್ಸಿ ತಂದ್ ಅದರ್ಲಿ ಅವ್ವನ ಮೂರ್ ಹೆಣ್ಣ್ ಮಕ್ಕ ಆದ ನಾವ್ಗೆ ಒಬ್ಬೊಬ್ಬಂಗೆ ಹತ್ತ್ ಗ್ರಾಂ ಚಿನ್ನ ಹಂಚಿತ್ತ್. ನಂಗೆ ಒಂದು ಚಿನ್ನದ ಬಳೆ ಸಿಕ್ಕಿತ್. ಅವ್ವನಲ್ಲಿ ತುಂಬಾ ಚಿನ್ನ ಇತ್ತ್. ನಾಣಿ, ಚಂದ್ರರ ಮೊದ್ವೆಗೆ ಗೂಡೆಗಳಿಗೆ ತಾಳಿ ಚೈನ್, ಬೆಂಡೋಲೆ ಎಲ್ಲಾ ಅವ್ವನಕ್ಕಲೆ ಇದ್ದ ಚಿನ್ನಂದಳೇ ಮಾಡ್ಸಿದೊ. ಅವರ ಚಾಕ್ರಿ ಮಾಡ್ದಕ್ಕೆ ನನ್ನ ದೊಡ್ಡ ಮಗಳ್ ನಿಮ್ಮಿಗೆ ಒಂದು ಚಿನ್ನದ ತಲೆ ಹೂ ಕೊಟ್ಟೊಳೊ. ಅವರ ಕೆಲವು ಸೊತ್ತ್‌ಗ ಕಳವಾಗಿ ಹೋತೂಂತ ಅವ್ವ ಹೇಳ್ತಿದ್ದೊ. ಅವ್ವ ನಲ್ವತ್ತೈದ್ ದಿನ ಕೋಮಾವಸ್ಥೆಲಿ ಇದ್ದೊ. ಆ ಮೇಲೆ ತೀರಿ ಹೋದೊ. ಅವ್ವ ತೀರಿ ಹೋಕನ ಮುಟ್ಟ ಚಂದ್ರ ರಜೆ ಹಾಕಿ, ಅಂವನ ಹೆಣ್ಣ್‌ನೊಟ್ಟಿಗೆ, ಅವ್ವನ ಸೇವೆ ಮಾಡ್ತ್.

ಅಂತೂ ದಾನ ಶೂರ ಕರ್ಣನಾಂಗೆ ಇದ್ದ ಅಪ್ಪ, ಜೀವನದ ಎಲ್ಲಾ ಕಷ್ಟಗಳ ಎದ್ರಿಸಿ, ಗೆದ್ದ್, ಎದೆಗುಂದದೆ ಬಾಳಿ, ಮಕ್ಕಳ ಎಲ್ಲಾ ದಡ ಸೇರ್ಸಿದ ಛಲಗಾತಿ ಅವ್ವ, ಅವರ ವೃದ್ಧಾಪ್ಯನ ಹೀಂಗೆ ಮುಗ್ಸಿದೊ. ಒಂದು ರೀತಿಲಿ ಅವು ಪುಣ್ಯಾತ್ಮರ್. ತುಂಬು ಸಂಸಾರದ ಪ್ರೀತಿ, ವಾತ್ಸಲ್ಯ, ಅವ್ಕೆ ದಕ್ಕಿತ್. ಅಪ್ಪ, ಅವ್ವ ಸಾಯಕನ, ಅವ್ಕೆ 6 ಮಕ್ಕಳ್‌ಂದ 27 ಮೊಮ್ಮಕ್ಕ ಇದ್ದೊ. ಮೊಮ್ಮಗ್ಳ್ ಮಹಾದೇವಿ, ಶೀಲ ಇವರ್‌ಂದ ಎರ್ಡೆರ್ಡ್, ಒಟ್ಟ್ ನಾಕ್ ಮರಿ ಮಕಳ್ನೂ ನೋಡಿ, ಅವು ಅವರ ಜೀವನ ಸಾರ್ಥಕಗೊಳಿಸಿದೊ.

14–12–2002

ಎಂ.ಜಿ ಕಾವೇರಮ್ಮ
"ನಿಸರ್ಗ" ಮಾವಾಜಿ
ಸುಳ್ಯ ದ.ಕ.



ಎಂ.ಜಿ. ಕಾವೇರಮ್ಮ

ಸೂಂತೋಡು ಮನೆತನದ ಅಪ್ಪಣ್ಣ ಗೌಡ ಮತ್ತೆ ಮುದ್ದಮ್ಮ ದಂಪತಿಗಳ ಮಗಳಾಗಿ **14-7-1949** ರಲ್ಲಿ ಹುಟ್ಟಿದ ಕಾವೇರಮ್ಮ ಸುಳ್ಯ ಹೈಯರ್ ಎಲಿಮೆಂಟರಿ ಶಾಲೆ, ಬೋರ್ಡ್ ಹೈಸ್ಕೂಲ್ ಸುಳ್ಯ, ಮೈಸೂರು ಸೆಂಟ್ ಫಿಲೋಮಿನಾಸ್ ಕಾಲೇಜ್‌ಲ್ ಪದವಿಪೂರ್ವ ಶಿಕ್ಷಣ ಪಡೆದವು. ಹೈಸ್ಕೂಲ್‌ನ ಮುಖ್ಯೋಪಾದ್ಯಾಯ ಆಗಿದ್ದ ಮಾವ್ರೋಜಿ ಮನೆತನದ ದಿ. ಐತಪ್ಪ ಗೌಡರ ಮಗ ಮಾವ್ರೋಜಿ ಗೋಪಾಲಕೃಷ್ಣರ ಜತೆಲಿ ಮದುವೆ ಆಗಿ ಸಂಸಾರಕೆ ಕಾಲಿರಿಸಿದ ಕಾವೇರಮ್ಮ ಒಬ್ಬ ಮಂಙ, ಮೂರು ಜನ ಗೂಡೆಗಳ ಅಯ್ಯೆ, **8** ಮೊಮ್ಮಕ್ಕಳ ಅಜ್ಜಿ, ಒಬ್ಬ ಮರಿಮಗನ ಮುತ್ತಜ್ಜಿ ಆಗಿ ಈ 77 ರ ವಯಸ್ಸಲೂ ಜೀವನದ ಉತ್ಸಾಹನ ಸಾಹಿತ್ಯ ಕೃಷಿಲಿ ಕಂಡುಕೊಂಡ ಆದರ್ಶ ಗೃಹಿಣಿ ಆಗೊಳೊ.

ಹಗಲ್ ಇರ್‌ಳ್ ಬರ್ದ್ ಒಳ ಹರಿವು ಕವನ ಸಂಕಲನ ಪ್ರಕಟಿಸಿದೊ. ಈಗ ಮಕ್ಕಳ ಸಾಹಿತ್ಯದ **30** ಕವನಗಳ ಬರ್ದ್ ಪ್ರಕಟಣೆಗೆ ತಯಾರಿಸೊಳೊ. ಅರೆಬಾಸೆ ಅಕಾಡೆಮಿಂದ 'ಅಜ್ಜಪ್ಪನ ಕಥಾ ಸಂಕಲನಂದ ಹೆರ್ಕಿದ ಕಥೆಗ' ಮತ್ತೆ 'ಸರ್ಮಾಲೆ' ಕವನ ಸಂಕಲನ ಈಗಾಗಲೆ ಬಿಡುಗಡೆ ಕಂಡದೆ. 'ನೆಪ್ಪುಗಳ ರಂಗೋಲಿ' ಅಕಾಡೆಮಿ ಪ್ರಕಟಿಸ್‌ತ ಇರೊ ಇವ್ರ 3ನೇ ಪುಸ್ತಕ.

ಇವರ ವಿಳಾಸ :
ಎಂ.ಜಿ. ಕಾವೇರಮ್ಮ
"ನಿಸರ್ಗ" ಮಾವಾಜಿ, ಸುಳ್ಯ ದ.ಕ.